# ಬೆಳೆಯುವ ಬೆಳಕು

## ೧

"ಶ್ರೀಶೈಲದಿಂದ ಗುರುಗಳು ಬಂದಿದ್ದಾರೆ" ಎಂಬ ಮಾತು ಮಹಾದೇವಿಯ ಕಿವಿಗೆ ಅಮೃತವನ್ನೂಡಿಸಿದಂತಾಯಿತು. ಅದನ್ನೇ ಮತ್ತೆ ಮತ್ತೆ ಜಪಿಸುತ್ತಾ ಮನೆಯ ಕಡೆಗೆ ಓಡಿದಳು, ಗೆಳೆಯರು ಕರೆಯುತ್ತಿರುವುದನ್ನೂ ಲೆಕ್ಕಿಸದೆ.

ತನ್ನ ಗೆಳತಿಯರೊಡನೆ ಊರ ಮುಂದಿರುವ ಉದ್ಯಾನಕ್ಕೆ ಹೋಗಿದ್ದ ಮಹಾದೇವಿ, ಅಲ್ಲಿಂದ ಬರುವಾಗ ಹೂವುಗಳ ಜೊತೆಯಲ್ಲಿ ಅವುಗಳಿಗಿಂತಲೂ ಮಿಗಿಲಾಗಿ ಪರಿಮಳದ ಆನಂದವನ್ನು ಬೀರಬಲ್ಲ ಈ ವಾರ್ತೆಯನ್ನು ತಂದಿದ್ದಳು.

ಮನೆಯೊಳಗೆ ಕಾಲಿಡುತ್ತಿದ್ದಂತೆಯೇ ಹೇಳಿದಳು:

"ಅವ್ವಾ ಶ್ರೀಶೈಲದಿಂದ ಗುರುಗಳು ಬಂದಿದ್ದಾರಂತೆ!" –ಧ್ವನಿಯಲ್ಲಿ ಉತ್ಸಾಹ ಉಕ್ಕುತ್ತಿತ್ತು.

"ಆ್ಞಂ! ಗುರುಗಳು ಬಂದಿದ್ದಾರೆಯೇ? ಯಾರು ಹೇಳಿದರು, ಮಹಾದೇವಿ?" ಎಂದು ಕೇಳುತ್ತಾ ಲಿಂಗಮ್ಮ ಪೂಜೆಯ ತಟ್ಟೆಯನ್ನು ಹಿಡಿಕೊಂಡೇ ಪೂಜೆಯ ಕೋಣೆಯಿಂದ ಹೊರಗೆ ಬಂದಳು.

ಬೆಳಗಿನ ಸ್ನಾನವನ್ನು ಮುಗಿಸಿ, ಪೂಜೆಯ ಕೋಣೆಯ ಕಡೆಗೆ ಬರುತ್ತಿದ್ದ ಓಂಕಾರಶೆಟ್ಟಿಯ ಕಿವಿಯ ಮೇಲೂ ಈ ಮಾತು ಬಿದ್ದಿತು.

"ಹೌದೇನು ಮಹಾದೇವಿ. ಯಾರು ಹೇಳಿದರು?"–ಅವನಿಗೂ ತಡೆಯಲಿಲ್ಲ ಕುತೂಹಲ. ಶಿವನ ಸ್ತುತಿರೂಪವಾದ ಗೀತೆಯನ್ನು ಹೇಳುತ್ತಿದ್ದ ನಾಲಿಗೆ ಕ್ಷಣಕಾಲ ಅದನ್ನು ನಿಲ್ಲಿಸಿ ಕೇಳಿತು ಈ ಪ್ರಶ್ನೆಯನ್ನು.

ಹೇಳಿದಳು ಮಹಾದೇವಿ:

"ಉದ್ಯಾನದಲ್ಲಿ ಹೂವುಗಳನ್ನು ಎತ್ತುತ್ತಿದ್ದೆ. ಮಠದ ಕಡೆಯಿಂದ ಗುರುಪಾದಪ್ಪ ಬರುತ್ತಿದ್ದ. ಅವನೇ ಹೇಳಿದ: 'ಶ್ರೀಶೈಲದಿಂದ ಗುರುಗಳು ಬಂದಿದ್ದಾರೆ, ಮನೆಯಲ್ಲಿ ಹೇಳಮ್ಮ' ಎಂದು. ಹಾಗೆಯೇ ಓಡಿಬಂದೆ. ನಿನ್ನೆ ರಾತ್ರಿಯೇ ಬಂದರಂತೆ.

'ಶ್ರೀಶೈಲದಿಂದ ಗುರುಗಳು ಬಂದಿದ್ದಾರೆ' ಎಂಬ ಮಾತು, ಈ ಚಿಕ್ಕಸಂಸಾರದಲ್ಲಿ ಆನಂದದ ತೆರೆಗಳನ್ನು ಎಬ್ಬಿಸಿತ್ತು. ಈಗ ಐದಾರು ತಿಂಗಳುಗಳ

ಹಿಂದೆ ಗುರುಗಳು ಶ್ರೀಶೈಲಯಾತ್ರೆಗೆಂದು ಉಡುತಡಿಯನ್ನು ಬಿಟ್ಟು ಹೋದಂದಿನಿಂದ, ಏನನ್ನೋ ಕಳೆದುಕೊಂಡಿದ್ದ ಮನಸ್ಸಿಗೆ ಅಮಿತವಾದ ಸಂತೋಷವನ್ನು ತಂದಿತ್ತು. ಆ ಆನಂದದ ಭಾವದಲ್ಲಿಯೇ ತಮ್ಮ ಕೆಲಸಗಳಲ್ಲಿ ಮಗ್ನರಾಗಿದ್ದರು.

ಓಂಕಾರಶೆಟ್ಟಿ ಪೂಜೆಯನ್ನು ಮುಗಿಸಿಕೊಂಡು ಹೊರಗೆ ಬಂದ. ಲಿಂಗಮ್ಮ ಒಂದು ತಟ್ಟೆಯಲ್ಲಿ ಹಣ್ಣುಗಳನ್ನು ತಂದು ಅವನ ಮುಂದಿಟ್ಟಳು.

"ತಿನ್ನುತ್ತಿರಿ. ಹಾಲು ಇನ್ನೂ ಸ್ವಲ್ಪ ಕಾಯಬೇಕು. ಈಗ ತಂದುಕೊಡುತ್ತೇನೆ" ಎಂದು ಒಳಗೆ ಹೋಗುತ್ತಾ,

"ಮಹಾದೇವಿ ಬಾ, ನಿನಗೂ ಹಣ್ಣು, ಹಾಲು ಕೊಡುತ್ತೇನೆ." ಕರೆದಳು ಮಹಾದೇವಿಯನ್ನು ಲಿಂಗಮ್ಮ.

"ತಾಳವ್ವ, ಪೂಜೆ ಮಾಡಿ ಬಂದುಬಿಡುತ್ತೇನೆ."

ಪೂಜೆಯ ಕೋಣೆಯಿಂದ ಹೊರಬಿತ್ತು ಮಹಾದೇವಿಯ ಧ್ವನಿ.

"ಬೆಳಿಗ್ಗೆ ಆಗಲೇ ಪೂಜೆಯನ್ನು ಮಾಡಲಿಲ್ಲವೇ? ನನಗಿಂತ ಮೊದಲೇ ಸ್ನಾನ, ಪೂಜೆ ಮಾಡಿದ್ದೀಯ!" ತಾಯಿ ಜ್ಞಾಪಿಸಿಕೊಟ್ಟಳು.

ಮಹಾದೇವಿ ಅದನ್ನೇನೂ ಮರೆತಿರಲಿಲ್ಲ; ಹೇಳಿದಳು:

"ಹೌದು, ಬೆಳಿಗ್ಗೆ ಮಾಡಿದ್ದೆ. ಈಗ ಬಹಳ ಸುಂದರವಾದ ಹೂವುಗಳು ಸಿಕ್ಕಿವೆ. ಮತ್ತೊಮ್ಮೆ ಪೂಜೆ ಮಾಡಿ ಬರುತ್ತೇನೆ, ಸ್ವಲ್ಪ ತಾಳು."

ಲಿಂಗಮ್ಮ ಓಂಕಾರಶೆಟ್ಟಿಯನ್ನು ನೋಡಿದಳು. ಅವನೂ ಆಕೆಯನ್ನು ಅದೇ ಅರ್ಥದ ದೃಷ್ಟಿಯಿಂದ ವೀಕ್ಷಿಸಿದ. ಹತ್ತು ಹನ್ನೆರಡು ವರ್ಷದ ತಮ್ಮ ಮಗಳು ಮಹಾದೇವಿಯ ಭಕ್ತಿ, ಸಹಜವಾಗಿಯೇ ದೈವಭಕ್ತರಾದ ಆ ದಂಪತಿಗಳನ್ನೂ ಒಮ್ಮೊಮ್ಮೆ ಆಶ್ಚರ್ಯಗೊಳಿಸುತ್ತಿತ್ತು. ವಯಸ್ಸಿಗೆ ಮೀರಿದ ಅವಳ ಮನಸ್ಸಿನ ಹಂಬಲವನ್ನು ಕಂಡು ದಿಗ್ಭ್ರಮೆಗೊಳ್ಳುತ್ತಿದ್ದರು.

ಅಂದು ಗುರುಗಳು ಶ್ರೀಶೈಲಯಾತ್ರೆಗೆ ಹೊರಟಿದ್ದ ದಿನ, ಮಹಾದೇವಿಯ ವರ್ತನೆ ಓಂಕಾರನ ಮನಸ್ಸಿನ ಮುಂದೆ ಸುಳಿಯಿತು.

ಅಂದು ರಾತ್ರಿಯೆಲ್ಲಾ ಆಕೆ ಚೆನ್ನಾಗಿ ನಿದ್ದೆಯನ್ನೇ ಮಾಡಿರಲಿಲ್ಲ. ಏನೇನೋ ಕನವರಿಸುತ್ತಿದ್ದಳು. "ಮಲ್ಲಿಕಾರ್ಜುನಾ, ಮಲ್ಲಿಕಾರ್ಜುನಾ" ಎಂದು ನಿದ್ದೆಯಲ್ಲಿಯೇ ಕೂಗಿದುದನ್ನು ಕೇಳಿ ಲಿಂಗಮ್ಮ ತಟ್ಟಿ ಎಚ್ಚರಿಸಿದ್ದಳು. ಆಗಲೇ ಹೇಳತೊಡಗಿದ್ದಳು ಮಹಾದೇವಿ:

"ನಾನೂ ಗುರುಗಳ ಜೊತೆಯಲ್ಲಿ ಹೋಗುತ್ತೇನೆ. ಶ್ರೀಶೈಲಕ್ಕೆ ನನ್ನನ್ನು ಕಳುಹಿಸಿಕೊಡಿ. ಮಲ್ಲಿಕಾರ್ಜುನ ನನ್ನನ್ನು ಕೈಬೀಸಿ ಕರೆದಂತಾಯ್ತು."

"ಹುಚ್ಚು ಹುಡುಗಿ! ಅದನ್ನೇ ಆಲೋಚಿಸುತ್ತಾ ಮಲಗಿದ್ದೆಯೇನೋ, ಅದೇ ಕನಸು ಬಿದ್ದಿದೆ. ಸುಮ್ಮನೆ ಮಲಗು" ಎಂದು ಸಮಾಧಾನಪಡಿಸಲು ಯತ್ನಿಸಿದ ಓಂಕಾರ.

"ಅವ್ವಾ, ನೀನಾದರೂ ಹೇಳವ್ವ ಅಪ್ಪನಿಗೆ, ನನ್ನನ್ನು ಕಳುಹಿಸಿಕೊಡಲಿ." ತಾಯಿಯನ್ನು ಬೇಡಿದಳು.

"ನಾವಾರೂ ಇಲ್ಲದೆ ನೀನೊಬ್ಬಳೇ ಹೇಗೆ ಹೋಗುತ್ತೀಯ, ಮಹಾದೇವಿ. ಹಾಗೆಲ್ಲ ನಮ್ಮನ್ನು ಬಿಟ್ಟು ಹೋಗಬಾರದು. ಇನ್ನೊಂದು ಸಾರಿ ನಾವೆಲ್ಲಾ ಹೋಗೋಣ." ತಾಯಿ ಸಂತೈಕೆಯ ಮಾತುಗಳನ್ನಾಡಿದಳು.

ಆದರೆ ಅವಳ ಹಂಬಲ ಅಷ್ಟಕ್ಕೇ ಅಡಗಲಿಲ್ಲ. ಬೆಳಿಗ್ಗೆ ಗುರುಗಳನ್ನು ಬೀಳ್ಕೊಡಲು ಮಠಕ್ಕೆ ಹೋದಾಗ ಅಲ್ಲಿಯೂ ಗುರುಗಳ ಎದುರಿನಲ್ಲಿಯೇ ತನ್ನ ಬಯಕೆಯನ್ನು ಹೇಳಿದಳು:

"ಗುರುಗಳೇ, ನನ್ನನ್ನು ಕರೆದುಕೊಂಡು ಹೋಗಿ ಗುರುಗಳೇ ಶ್ರೀಶೈಲಕ್ಕೆ."

ಗುರುಗಳು ಅವಾಕ್ಕಾಗಿ ಓಂಕಾರನ ಮುಖ ನೋಡಿದರು.

"ನೋಡಿ, ಬೆಳಗಿನಿಂದ ಹಾಗೆ ಹಟ ಹಿಡಿದಿದ್ದಾಳೆ, ತಾನೂ ಹೋಗುತ್ತೇನೆಂದು. ನೀವೇ ಸರಿಯಾಗಿ ಹೇಳಿ, ಗುರುಗಳೇ." ಓಂಕಾರ ಹೇಳಿದ.

ಅವಳ ತಲೆದಡವಿ ಮುಂಗುರುಳನ್ನು ತಿದ್ದುತ್ತಾ ಹೇಳಿದರು ಗುರುಗಳು:

"ನೀನೂ ಬರುತ್ತೀಯ ಮಗೂ ಶ್ರೀಶೈಲಕ್ಕೆ? ಆದರೆ ನಿನಗದು ಸಾಧ್ಯವಿಲ್ಲ."

"ಏಕೆ ಗುರುಗಳೇ, ನನಗೇಕೆ ಸಾಧ್ಯವಿಲ್ಲ?" ತಲೆಯೆತ್ತಿ ಕೇಳಿದಳು ಗುರುಗಳನ್ನು ನೋಡುತ್ತಾ ಮಹಾದೇವಿ.

"ನೀನು ಹೆಣ್ಣುಮಗಳು... ಅಲ್ಲದೆ...."

ಗುರುಗಳು ಆ ಮಾತನ್ನು ಪೂರ್ಣಗೊಳಿಸುವುದಕ್ಕೆ ಮುನ್ನವೇ ಕೇಳಿದಳು ಮಹಾದೇವಿ: "ಆದರೇನು? ಹೆಣ್ಣುಮಕ್ಕಳು ಶ್ರೀಶೈಲಕ್ಕೆ ಹೋಗಬಾರದೇ? ಮಲ್ಲಿಕಾರ್ಜುನ ದರ್ಶನ ಗಂಡಸರಿಗೆ ಮಾತ್ರವೋ?" ದಿಟ್ಟತನವಿತ್ತು ಪ್ರಶ್ನೆಯಲ್ಲಿ.

"ಮಹಾದೇವಿ, ಏನದು ಗುರುಗಳೆದುರಿನಲ್ಲಿ ನಿನ್ನ ಅಧಿಕಪ್ರಸಂಗ?" ಓಂಕಾರ ಸ್ವಲ್ಪ ಕೋಪದಿಂದಲೆಂಬಂತೆ ಗದರಿಸಿದ. ಆದರೆ ಮುಗುಳುನಗುತ್ತಾ ಹೇಳಿದರು ಗುರುಗಳು: "ಗದರಿಸಬೇಡ, ಓಂಕಾರ. ಈ ಪುಟ್ಟ ದೇಹದಲ್ಲಿರುವ ದಿಟ್ಟತನವನ್ನು ಕಂಡು ಮೆಚ್ಚು" ಎಂದು ನುಡಿದು ಮತ್ತೆ ಮಹಾದೇವಿಗೆ:

"ಇಲ್ಲ ಮಗಳೇ, ಮಲ್ಲಿಕಾರ್ಜುನನ ದೃಷ್ಟಿಯಲ್ಲಿ ಹೆಂಗಸರು ಗಂಡಸರು ಎಂಬ ತಾರತಮ್ಯವಿಲ್ಲ. ಆದರೆ ನೀನಿನ್ನೂ ಚಿಕ್ಕವಳು ಎಂದು ಹೇಳಿದೆ ಅಷ್ಟೆ. ನಾನುಹೋಗಿ ಬಂದು ಅದರ ಮಾರ್ಗವನ್ನೆಲ್ಲಾ ನಿನಗೆ ತಿಳಿಸುತ್ತೇನೆ. ಆಮೇಲೆ ನೀವೆಲ್ಲರೂ ಹೋಗಿಬರುವಿರಂತೆ. ನಾನು ಬರುವುದರೊಳಗೆ, ನಾನು ಹೇಳಿಕೊಟ್ಟ ಆ ವಚನಗಳನ್ನೆಲ್ಲಾ ಕಲಿತಿರಬೇಕು. ಜಾಣೆ, ನಮ್ಮ ಮಹಾದೇವಿ!" ಎಂದು ತಲೆದಡವಿ ಸಂತೈಸಿದ್ದರು.

ಅಂದಿನಿಂದ ಮಹಾದೇವಿಗೆ ಶ್ರೀಶೈಲದ ಹಂಬಲವೇ ಹಂಬಲ. ದಿನಕ್ಕೊಮ್ಮೆ ಯಾದರೂ ಅದರ ಪ್ರಸ್ತಾಪ ಬಂದೇ ಬರುತ್ತಿತ್ತು.

"ಅವ್ವಾ, ಶ್ರೀಶೈಲ ಬಹಳ ದೊಡ್ಡ ಪರ್ವತವಂತೆ, ಹೌದೇನವ್ವಾ?"

"ಏನೋಮ್ಮ, ಹಾಗೆ ಹೇಳುತ್ತಾರೆ, ನಾನೇನು ನೋಡಿದ್ದೇನೆಯೇ?" ಲಿಂಗಮ್ಮ ಹೇಳುವಳು.

"ತಾಯಿಯ ಮಾತಿನಿಂದ ತೃಪ್ತಳಾಗದೆ ತಂದೆಯ ಬಳಿಗೆ ಬರುವಳು:

"ಅಪ್ಪಾ, ಮಲ್ಲಿಕಾರ್ಜುನನ ದೇವಸ್ಥಾನ ಆ ಬೆಟ್ಟದಲ್ಲಿ ಹೇಗಿದೆಯಪ್ಪಾ! ಆ ಭಯಂಕರ ಕಾಡಿನಲ್ಲಿ ಅವನೊಬ್ಬನೇ ಹೇಗಿರುತ್ತಾನಪ್ಪಾ?"

"ಅವನಿಗೇನು ಹೆದರಿಕೆ, ಮಹಾದೇವಿ? ಜಗತ್ತನ್ನೆಲ್ಲಾ ಆಡಿಸುತ್ತಿರುವ ಪ್ರಭುವಲ್ಲವೇ ಅವನು!"

"ನಾವೂ ಶ್ರೀಶೈಲಕ್ಕೆ ಹೋಗೋಣ, ಅಪ್ಪ." ಬೇಡುವಳು.

"ಆಗಲಿ, ಗುರುಗಳು ಬರಲಿ, ಅವರಿಂದ ಎಲ್ಲವನ್ನೂ ಕೇಳಿಕೊಳ್ಳೋಣ. ಆಮೇಲೆ ನಾವು ಹೋಗೋಣ." ಸಮಾಧಾನ ಮಾಡುವನು.

ಹೀಗೆ ದಿನಗಳು ಉರುಳಿದ್ದುವು. ಇಂದು ಶ್ರೀಶೈಲದಿಂದ ಗುರುಗಳು ಹಿಂದಿರುಗಿದ್ದಾರೆ. ಓಂಕಾರ, ಲಿಂಗಮ್ಮರಿಗೆ ಅವರ ಆಗಮನದ ವಾರ್ತೆಯಿಂದ ಆನಂದ ತುಂಬಿ ಬಂದಿದೆ. ಮಹಾದೇವಿಯ ಆನಂದವಂತೂ ಅದಕ್ಕಿಂತ ಮಿಗಿಲಾಗಿದ್ದಿತು.

ಆ ಎಳೆಯ ಹೃದಯದಲ್ಲಿ ಉಕ್ಕಿಬರುತ್ತಿದ್ದ ಭಾವನೆಗಳಿಗೆ ಕೊನೆಮೊದಲೇ ಇರಲಿಲ್ಲ. ಶ್ರೀಶೈಲದ ಮಲ್ಲಿಕಾರ್ಜುನನಿಂದ ತನಗಾಗಿಯೇ ಏನೋ ಒಂದು ದಿವ್ಯ ಸಂದೇಶವನ್ನು ತಂದಿರುವಂತೆ ಆಕೆಗೆ ಅನಿಸುತ್ತಿತ್ತು. ಅದಕ್ಕಾಗಿಯೇ ಗುರುಗಳು ಶ್ರೀಶೈಲಕ್ಕೆ ಹೋಗಿ ಬಂದಿರಬೇಕೆಂಬುದಾಗಿ ಊಹಿಸುವುದು ಆ ಹುಡುಗಿಯ ಮುಗ್ಧ ಮನಸ್ಸು.

"ಆ ಸಂದೇಶವೇನಿರಬಹುದು! ಶ್ರೀಶೈಲ ಹೇಗಿದ್ದಿರಬಹುದು! ಅಲ್ಲಿ ಮಲ್ಲಿಕಾರ್ಜುನ ಎಂತಿರುವನೋ! ಆತನನ್ನು ಕಂಡು ಬಂದ ಗುರುಗಳನ್ನು ಯಾವಾಗ ನೋಡಿಯೇನು!'– ಈ ಭಾವನೆಗಳಿಂದ ಅವಳ ಉದ್ವೇಗ ಉಕ್ಕೇರುತ್ತಿತ್ತು.

ಅಷ್ಟರಲ್ಲಿ "ಓಂಕಾರಶೆಟ್ಟರೇ" ಎಂದು ಕೂಗುತ್ತಾ ಗುರುಪಾದಪ್ಪನೇ ಒಳಗೆ ಬಂದ. ಗುರುಗಳನ್ನೇ ಕಂಡಷ್ಟು ಸಂತೋಷವಾಯಿತು ಮಹಾದೇವಿಗೆ, ಅವರ ಬಳಿಯಿಂದ ಬಂದಿರುವ ಗುರುಪಾದಪ್ಪನನ್ನು ಕಂಡು.

ಅಷ್ಟರಲ್ಲಿ ಮಹಡಿಯ ಮೇಲಿಂದ ಓಂಕಾರಶೆಟ್ಟಿ ಕೆಳಗೆ ಬರುತ್ತಾ, "ಬಾ ಗುರುಪಾದಪ್ಪ" ಎಂದು ಸ್ವಾಗತಿಸಿದ. ಮತ್ತು ಕೇಳಿದ: "ಗುರುಗಳು ಬಂದರಂತೆ?"

ಆ ವೇಳೆಗೆ ಲಿಂಗಮ್ಮ ಮಹಾದೇವಿಯರೂ ಬಂದು ನಿಂತಿದ್ದರು.

"ಹೌದು, ನಿನ್ನೆ ರಾತ್ರಿ ಬಂದರು" ಹೇಳತೊಡಗಿದ ಗುರುಪಾದಪ್ಪ, "ನಾನು ಮಠದ ಕೆಲಸವನ್ನೆಲ್ಲಾ ಮುಗಿಸಿ ನಿತ್ಯದಂತೆ ದಾಸೋಹದ ವಿಭಾಗ, ಶಾಲೆಯ ವಿಭಾಗ ಎಲ್ಲವನ್ನೂ ನೋಡಿಕೊಂಡು ಇನ್ನೇನು ಮಲಗುವುದರಲ್ಲಿದ್ದೆ. ಆಗ ಇದ್ದಕ್ಕಿದ್ದಂತೆಯೇ ಪ್ರತ್ಯಕ್ಷವಾದರು ಗುರುಗಳು. ಮಠದಲ್ಲೆಲ್ಲ ಸುದ್ದಿ ಹರಡಿತು. ಸಂತೋಷ ಸಂಭ್ರಮಗಳ ಕೋಲಾಹಲದಿಂದ ತುಂಬಿಹೋಯಿತು ಮಠ, ರಾತ್ರಿಯೆಲ್ಲಾ ಕೀರ್ತನೆ ಭಜನೆ ಇವುಗಳಲ್ಲಿಯೇ ಬಹುಕಾಲ ಕಳೆದುಹೋಯಿತು."

ಕೇಳುತ್ತಾ ನಿಂತಿದ್ದ ಮಹಾದೇವಿಯ ಮೈ ಪುಲಕಿತವಾದಂತಾಯಿತು. ಆ ದೃಶ್ಯವನ್ನೂಹಿಸಿಕೊಂಡು ತಡೆಯಲಾರದೆ ಕೇಳಿದಳು:

"ಆಗಲೇ ನಮಗೇಕೆ ಬಂದು ಹೇಳಲಿಲ್ಲ ಅದನ್ನು?" ಗುರುಪಾದಪ್ಪನನ್ನು ಆಕ್ಷೇಪಿಸುವ ಧ್ವನಿಯಿತ್ತು ಅದರಲ್ಲಿ.

"ನೋಡಿದಿರಾ ನಿಮ್ಮ ಮಗಳ ಆಕ್ಷೇಪಣೆ. ನೀನು ನಿಜವಾಗಿಯೂ ಮಹಾದೇವಿಯೇ ಕಣಮ್ಮ" ಎಂದು ನಕ್ಕ ಗುರುಪಾದಪ್ಪ.

"ಅಷ್ಟು ಹೊತ್ತಿನಲ್ಲಿ ಹೇಳಿದ್ದರೂ ನೀನೇನು ಹೋಗುತ್ತಿದ್ದೆಯಾ? ಈಗ ಹೋಗೋಣಂತೆ, ಸುಮ್ಮನಿರು."

ತಾಯಿ ಗುರುಪಾದಪ್ಪನ ಪರವಹಿಸಿದಳು.

ಅಷ್ಟರಲ್ಲಿ ಗುರುಪಾದಪ್ಪನೇ ಹೇಳಿದ:

"ಇಲ್ಲಮ್ಮಾ, ಈ ಮಹಾದೇವಿಯನ್ನು ನೋಡುವುದಕ್ಕಾಗಿ ಈಗ ಗುರುಗಳೇ ಇಲ್ಲಿಗೆ ಬರುತ್ತಾರೆ. ಶೆಟ್ಟರೇ, ಆ ಮುಖ್ಯ ವಿಷಯವನ್ನು ಹೇಳುವುದಕ್ಕೇ ನಾನು ಈಗ ಇಲ್ಲಿಗೆ ಬಂದದ್ದು. ಗುರುಗಳು ಹೇಳಿ ಕಳುಹಿಸಿದ್ದಾರೆ. ಈ ದಿನ ಪ್ರಸಾದವನ್ನು ಸ್ವೀಕರಿಸಲು ನಿಮ್ಮಲ್ಲಿಗೆ ಬರುತ್ತಾರಂತೆ ಗುರುಗಳು.

"ಆಂ! ಏನು ಗುರುಪಾದಪ್ಪ!" ನಂಬಲಾಗದ ಆಶ್ಚರ್ಯದಿಂದ ಕೇಳಿದರು ಲಿಂಗಮ್ಮ-ಓಂಕಾರ.

"ಹೌದು ತಾಯಿ, ಈ ಮಾತು ನಿಜ. ಸ್ವತಃ ಗುರುಗಳೇ ನನ್ನೊಡನೆ ಹೇಳಿ ಕಳುಹಿಸಿದರು. ಇನ್ನೇನು ಸ್ವಲ್ಪ ಹೊತ್ತಿನಲ್ಲಿಯೇ ಬರುತ್ತಾರೆ. ನಿಜವಾಗಿಯೂ ನೀವು ಭಾಗ್ಯಶಾಲಿಗಳು.

ಗುರುಲಿಂಗದೇವರ ಸ್ವಭಾವವನ್ನು ಬಲ್ಲವರೆಲ್ಲರು ಗುರುಪಾದಪ್ಪನ ಮಾತನ್ನು ಒಪ್ಪುತ್ತಿದ್ದರು. ಉಡುತಡಿಯ ಮಠಕ್ಕೆ ಅವರು ಬಂದಂದಿನಿಂದ ಆ ಮಠದ ಸ್ವರೂಪವೇ ಬದಲಾಗಿ ಹೋಗಿತ್ತು. ನಾಲ್ಕಾರು ಜನ ಶಿಕ್ಷಕರನ್ನಿಟ್ಟು ಮಠದ ಅವರಣದಲ್ಲಿಯೇ ಒಂದು 'ಅಯ್ಯಗಳ ಶಾಲೆ'ಯನ್ನು ಪ್ರಾರಂಭಿಸಿದ್ದರು. ಅನೇಕ ವಿದ್ಯಾರ್ಥಿಗಳಿಗೆ ಅಲ್ಲಿ ವಿದ್ಯಾಭ್ಯಾಸ ನಡೆಯುತ್ತಿತ್ತು. ಇದರ ಜೊತೆಗೆ ಪ್ರಸಾದ ಮಂದಿರದ ದಾಸೋಹವಂತೂ ಏಕಪ್ರಕಾರವಾಗಿ ನಡೆದೇ ಇತ್ತು.

ಸ್ವಾಮಿಗಳು ಆಗಾಧವಾದ ಪಂಡಿತರೂ ಆಗಿದ್ದರು. ಸಂಸ್ಕೃತ, ಕನ್ನಡಗಳಲ್ಲಿ ಅವರಿಗಿರುವ ವಿದ್ವತ್ತನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇರಲಿಲ್ಲ. ವಿದ್ವತ್ತಿನ ಜೊತೆಗೆ ಆಧ್ಯಾತ್ಮಿಕ ಜೀವನದ ಮಹಾಸಾಧನೆ ಅವರ ತೇಜಸ್ಸನ್ನು ಉಜ್ವಲಗೊಳಿಸಿತ್ತು; ಉಡುತಡಿಯ ಭಕ್ತಜನರ ವಿಶ್ವಾಸಗೌರವಗಳ ಕೇಂದ್ರವ್ಯಕ್ತಿಯಾಗಿ ಪರಿಣಮಿಸಿದ್ದರು.

ಆದರೆ ಮಠದ ಆವರಣದಿಂದ ಅವರು ಸಾಮಾನ್ಯವಾಗಿ ಹೊರಗೆ ಹೊರಡುತ್ತಿದ್ದುದೇ ಇಲ್ಲವೆನ್ನಬಹುದು. ಅನೇಕ ಭಕ್ತರಿಗೆ ಅವರನ್ನು ತಮ್ಮ ಮನೆಗೆ ಬರಮಾಡಿಕೊಂಡು ಪ್ರಸಾದವನ್ನಿತ್ತು ಸತ್ಕರಿಸಿ ಪುನೀತರಾಗಬೇಕೆಂಬ ಆಕಾಂಕ್ಷೆ. ಆದರೆ ಈ ಒಂದು ವಿಷಯದಲ್ಲಿ ಮಾತ್ರ ಯಾವ ಭಕ್ತರ ಮಾತನ್ನೂ ಅವರು ಕೇಳುತ್ತಿರಲಿಲ್ಲ. ಯಾರಾದರೂ ಬಂದು ತೀರಾ ಒತ್ತಾಯಮಾಡಿ ಕರೆದರೆ:

"ಒಮ್ಮೆ ಇದನ್ನು ಒಪ್ಪಿದೆನೆಂದರೆ, ಭಕ್ತರ ಮನೆಯಲ್ಲಿ ಪ್ರಸಾದವನ್ನು ಸ್ವೀಕರಿಸುತ್ತಾ ಕುಳಿತುಕೊಳ್ಳುವುದೇ ನನ್ನಕೆಲಸವಾದೀತು" ಎಂದು ನಕ್ಕು ಆ ಮಾತನ್ನು ಹಾರಿಸಿಬಿಡುತ್ತಿದ್ದರು. ಮತ್ತು "ಪ್ರಸಾದವೆಂದರೆ ಏನು? ನೀವು ಭಕ್ತಿಯಿಂದ ಇಲ್ಲಿಗೆ ಬಂದು ನಮಸ್ಕರಿಸಿದಾಗಲೇ ಎಲ್ಲ ಪ್ರಸಾದವೂ ನನಗೆ ಅರ್ಪಿತವಾದಂತೆಯೇ ಆಯಿತು. ಇಷ್ಟರಿಂದಲೇ ನಿಮಗೆ ತೃಪ್ತಿಯಾಗದಿದ್ದರೆ ನೀವು ಮಾಡಿರುವುದರಲ್ಲಿ ಏನನ್ನಾದರೂ ತಂದು ಅರ್ಪಿಸಿರಿ; ಗುರುಲಿಂಗ ತೃಪ್ತನಾಗುತ್ತಾನೆ" ಎನ್ನುತ್ತಿದ್ದರು. ಹಾಗೆ ಭಕ್ತರು ವಿಶೇಷ ಸಂದರ್ಭಗಳಲ್ಲಿ ಉತ್ಸಾಹದಿಂದ ಏನನ್ನಾದರೂ ತಂದಾಗ ಅವರ ತೃಪ್ತಿಗಾಗಿ ಅದರಲ್ಲಿ ಒಂದು ಸ್ವಲ್ಪವನ್ನು ತೆಗೆದುಕೊಳ್ಳುತ್ತಿದ್ದುದೂ ಉಂಟು.

ಅಂತಹ ಗುರುಲಿಂಗದೇವರು ಇಂದು ತಾವಾಗಿಯೇ ಹೇಳಿಕಳುಹಿಸಿ ತಮ್ಮ ಮನೆಗೆ ಬರುತ್ತಿರುವರೆಂಬುದನ್ನು ಕೇಳಿದಾಗ, ಓಂಕಾರಶೆಟ್ಟಿ ಲಿಂಗಮ್ಮ ನಂಬಲಾರದವರಾದರು. ಆದರೂ ಗುರುಪಾದಪ್ಪ ಅದನ್ನು ಹೇಳಿಹೋಗುವುದಕ್ಕಾಗಿಯೇ ಬಂದಿದ್ದಾನೆಂದ ಮೇಲೆ ನಂಬದಿರುವುದು ಹೇಗೆ? "ನಿಜವಾಗಿಯೂ ನೀವು ಭಾಗ್ಯಶಾಲಿಗಳು" ಎಂದು ಅವನು ಹೇಳಿದ ಮಾತು, ಅದಕ್ಕೆ ಬಹುಪಾಲು ಮಿಗಿಲಾದ ಅರ್ಥವನ್ನು ಅವರಿಗೆ ತಂದುಕೊಟ್ಟಿತು.

ಮಹಾದೇವಿಯ ಉತ್ಸಾಹಕ್ಕಂತೂ ಸಂಭ್ರಮ ಸಂತೋಷದ ಗರಿಗಳು ಮೂಡಿದ್ದುವು. ಆನಂದದ ಆಕಾಶದಲ್ಲಿ ಹಾರಿ, ಮನೆತುಂಬ ಕುಣಿದಾಡಿದಳು. ಗುರುಗಳ ಸ್ವಾಗತಕ್ಕೆ ಮತ್ತು ಸತ್ಕಾರಕ್ಕೆ ಯೋಗ್ಯವಾದ ರೀತಿಯಲ್ಲಿ ಸಿದ್ಧತೆಯನ್ನು ಮಾಡಲುದ್ಯುಕ್ತರಾದ ತಂದೆತಾಯಿಗಳಿಗೆ ನೆರವಾಗತೊಡಗಿದಳು.

ಸಿದ್ಧತೆಯೆಲ್ಲಾ ಮುಗಿಯಿತು. ಲಿಂಗಮ್ಮನ ಅಡುಗೆಯ ಕೆಲಸವೂ ಕೊನೆಗೊಂಡಿತು. ಓಂಕಾರ, ಮಠಕ್ಕೆ ಹೋಗಿ ಸ್ವಾಮಿಗಳನ್ನು ಅಲ್ಲಿಂದಲೇ ಒಡಗೊಂಡು ಬರುವುದಾಗಿ ಹೇಳಿ ಹೊರಟ. ಆದರೆ ಮೆಟ್ಟಲನ್ನಿಳಿದು ಒಂದೆರಡು ಹೆಜ್ಜೆ ಇಡುತ್ತಿರವಷ್ಟರಲ್ಲಿ ಗುರುಗಳು ಬರುತ್ತಿರುವುದು ಆ ದೂರದಿಂದಲೇ ಕಣ್ಣಿಗೆ ಬಿದ್ದಿತು. ಹಾಗೆಯೇ ಹಿಂದಕ್ಕೆ ತಿರುಗಿದ.

"ಮಹಾದೇವಿ, ಗುರುಗಳು ಬರುತ್ತಿದ್ದಾರೆ."

ಇಬ್ಬರೂ ಹೊರಗೆ ಬಂದು ನೋಡಿದರು. ಮೂರುನಾಲ್ಕು ಜನ ಶಿಷ್ಯರ ಮಧ್ಯದಲ್ಲಿ ಗುರುಗಳು ಬರುತ್ತಿದ್ದರು. ಕಾಷಾಯ ವಸ್ತ್ರಧಾರಿಗಳಾದ ಅವರ ದಿವ್ಯವಿಗ್ರಹ ಪ್ರಧಾನವಾಗಿ ಕಾಣುತ್ತಿತ್ತು.

ತುಂಬಿದ ತಂಬಿಗೆಗಳನ್ನು ಹಿಡಿದುಕೊಂಡು ಹೊರಗೆ ಬರುವ ವೇಳೆಗೆ ಗುರುಗಳು ಮನೆಯ ಹತ್ತಿರ ಬರುತ್ತಿದ್ದರು. ಮಹಾದೇವಿಯಂತೂ ಗುರುಗಳನ್ನು ಕುತೂಹಲ ಸಂಭ್ರಮಗಳಿಂದ ನೋಡುತ್ತಿದ್ದಳು.

ಅವರ ದೀರ್ಘದೇಹ, ಉದ್ದವಾದ ಕಾವಿಯ ಕಫನಿಯಿಂದ ಆಚ್ಛಾದಿತವಾಗಿತ್ತು. ಅದರ ಮೇಲೊಂದು ಕಾವಿಯದೇ ದೊಡ್ಡ ಮೇಲು ಹೊದಿಕೆ. ತಲೆಯ ಮೇಲಿಂದಲೂ ಮುಚ್ಚಿಬರುವಂತೆ ಅದನ್ನು ಹೊದೆದಿದ್ದರು. ಶುಭ್ರವಾದ ಪವಿತ್ರತೆಯ ಸಂಕೇತವೆಂಬಂತೆ ಮೇಲೆದ್ದು ತೋರುತ್ತಿರುವ ತ್ರಿಪುಂಡ್ರದಿಂದ ಭೂಷಿತವಾದ ಹಣೆ. ಹತ್ತಿರಕ್ಕೆ ಬಂದಂತೆಲ್ಲಾ ಕಾಲಲ್ಲಿ ಮೆಟ್ಟಿದ ಮರದ ಹಾವುಗೆಯ ಶಬ್ದ ಕೇಳಿಬರುತ್ತಿತ್ತು.

ಮಹಾದೇವಿ ನೋಡಿದಳು. ಸಾಕ್ಷಾತ್ ಮಹಾದೇವನ ಕರುಣೆಯೇ ಗುರುರೂಪದಿಂದ ಮೂಡಿಬರುತ್ತಿರುವಂತೆ ತೋರಿತು. ತನಗೆ ಅನುಗ್ರಹಿಸುವುದಕ್ಕಾಗಿ ಶ್ರೀಶೈಲಪರ್ವತವೇ ನಡೆದುಬರುತ್ತಿದೆಯೆಂದು ಅನಿಸಿತು ಆಕೆಗೆ.

"ನಾನೇ ಮಠಕ್ಕೆ ಬರಬೇಕೆಂದು ಹೊರಟಿದ್ದೆ. ಅಷ್ಟರಲ್ಲಿ ತಾವು ದಯಮಾಡಿಸುತ್ತಿರುವುದು ಕಾಣಿಸಿತು."

ಓಂಕಾರನ ಮಾತು ಮುಗಿಯುವುದಕ್ಕೆ ಮುನ್ನವೇ ಲಿಂಗಮ್ಮ ಗುರುಪಾದವನ್ನು ತೊಳೆದಳು. ಗುರುಗಳು ಅಲ್ಲಿ ಬಿಟ್ಟ ಹಾವುಗೆಗಳನ್ನು ಶಿಷ್ಯನೊಬ್ಬನು ಎತ್ತಿಕೊಂಡು ಒಳಗೆ ನಡೆದ.

ಅವರಿಗೆ ಸಿದ್ಧವಾಗಿದ್ದ ಮಂಚದ ಮೇಲೆ ಸ್ವಾಮಿಗಳನ್ನು ಬಿಜಯ ಮಾಡಿಸುತ್ತಾ:

"ನೆನ್ನೆ ರಾತ್ರಿ ದಯಮಾಡಿಸಿದರಂತೆ!" ಓಂಕಾರನೆಂದ.

ಸ್ವಾಮಿಗಳು ಕುಳಿತುಕೊಳ್ಳುತ್ತಾ ಹೇಳಿದರು: "ಹೌದು, ಓಂಕಾರ."

"ಪ್ರವಾಸವೆಲ್ಲಾ ಸುಖಕರವಾಗಿ ಆಯಿತೆ, ಸ್ವಾಮಿ?" ಮತ್ತೆ ಓಂಕಾರನ ಪ್ರಶ್ನೆ.

"ಎಲ್ಲಾ ಮಲ್ಲಿಕಾರ್ಜುನನ ಕೃಪೆ" ಎಂದು ಅತ್ತಿತ್ತನೋಡುತ್ತಾ,

"ಎಲ್ಲಿ ಮಹಾದೇವಿ! ಕಾಣಿಸುವುದಿಲ್ಲವಲ್ಲ.... ಮಹಾದೇವೀ" ಬಾಗಿಲಿನ ಮರೆಯಿಂದ ಮಹಾದೇವಿ ಹೊರಬಿದ್ದುದು ಕಾಣಿಸಿತು.

"ಅದನ್ನೇನು ಹೇಳುತ್ತೀರಿ, ಗುರುಗಳೇ! ಇವತ್ತು ಬೆಳಗಿನಿಂದ ಇವಳನ್ನು ಹಿಡಿಯುವುದೇ ಕಷ್ಟವಾಗಿಬಿಟ್ಟಿದೆ. ಶ್ರೀಶೈಲವೇ ಇಲ್ಲಿಗೆ ಬಂದಿರುವಷ್ಟು ಸಂಭ್ರಮ ಅವಳಿಗೆ!" ಹೇಳಿದ ಓಂಕಾರ.

"ಹೌದೇನಮ್ಮಾ ಮಹಾದೇವಿ.... ಬಾ."

ಗುರುಗಳ ಕರೆಯಿಂದ ಮಹಾದೇವಿ ಧೈರ್ಯಗೊಂಡು ಹತ್ತಿರಹತ್ತಿರ ಬರುತ್ತಿದ್ದಳು. ಕೈಹಿಡಿದು ಗುರುಗಳು ಮಂಚದ ಮೇಲೆ ಕುಳ್ಳಿರಿಸಿಕೊಳ್ಳಲು ಯತ್ನಿಸಿದರು. ಆದರೆ ಮಹಾದೇವಿ ಕೆಳಗೆ ಕುಳಿತಳು ಅವರ ಪಾದಗಳ ಬಳಿ.

ಅವಳ ತಲೆಯನ್ನು ನೇವರಿಸುತ್ತಾ ಕೇಳಿದರು ಗುರುಗಳು:

"ಏನಮ್ಮಾ ಮಹಾದೇವಿ, ಈ ಐದಾರು ತಿಂಗಳುಗಳಲ್ಲಿ ಏನೇನು ಕಲಿತಿದ್ದೀ? ಹೊಸದಾಗಿ ಎಷ್ಟು ವಚನಗಳನ್ನು ಗಟ್ಟಿಮಾಡಿದ್ದೀಯ?"

"ಅದಕ್ಕಿಂತ ಹೆಚ್ಚಾಗಿ ಶ್ರೀಶೈಲದ ಜಪ ಮಾಡಿದ್ದಾಳೆ ಗುರುಗಳೇ" ಎಂದು ನಗುತ್ತಾ ಹೇಳಿದ ಓಂಕಾರ.

"ಇಲ್ಲ ಗುರುಗಳೇ. ನೀವು ಕೊಟ್ಟು ಹೋದ ಓಲೆಗರಿಯಲ್ಲಿದ್ದ ವಚನಗಳನ್ನೆಲ್ಲಾ ಕಲಿತಿದ್ದೇನೆ. ಬೇಕಾದರೆ ಹೇಳಲೇ...." ಎಂದು ತನ್ನ ಮುಗ್ಧ ಕಣ್ಣುಗಳನ್ನು ತಂದೆಯ ಕಡೆಗೆ ಬೀರುತ್ತಾ,

"ಇವರು ಯಾವಾಗಲೂ ಹೀಗೆ.... ಏನಾದರೂ ಹೇಳೋದು...."

ಎಲ್ಲರೂ ನಕ್ಕರು ಓಂಕಾರನೂ ಸೇರಿಕೊಂಡು. ಗುರುಗಳೂ ಅದಕ್ಕೆ ಹೊರತಾಗಿರಲಿಲ್ಲ. ಮತ್ತೆ ಮಹಾದೇವಿ ಕೇಳಿದಳು:

"ಹೇಳುತ್ತೇನವ್ಮಾ" ಎನ್ನುತ್ತಿದ್ದಂತೆಯೇ ಗುರುಗಳ ಮುಖ ಗಂಭೀರವಾಯಿತು. "ಅದಕ್ಕಾಗಿಯೇ ನಿನ್ನನ್ನು ಹುಡುಕಿಕೊಂಡು ಇಲ್ಲಿಗೆ ಬಂದಿದ್ದೇನೆ. ಎಲ್ಲವನ್ನೂ ವಿವರವಾಗಿ ನಿರೂಪಿಸುತ್ತೇನೆ."

ಎಲ್ಲರೂ ಕುತೂಹಲದಿಂದ ಗುರುಗಳನ್ನೇ ನೋಡುತ್ತಿದ್ದರು. ಲಿಂಗಮ್ಮ ಬಂದು ಗುರುಗಳ ಪಾದಗಳಿಗೆ ನಮಸ್ಕರಿಸಿದಳು. ಎಲ್ಲರಿಗೂ ಅರ್ಥವಾಯಿತು, ಪ್ರಸಾದದ ಸಮಯವೆಂದು.

ಮಹಾದೇವಿಯನ್ನು ಕುರಿತು ಮುಗುಳನಗುತ್ತಾ ಹೇಳಿದಳು ಲಿಂಗಮ್ಮ.

"ಆಗಲೇ ಶ್ರೀಶೈಲದ ಕಥೆ ತೆಗೆದಿದ್ದಾಳೆ! ಏನು ಮಹಾದೇವಿ, ಹೀಗೇ ಏನು ನೀನು ಗುರುಗಳನ್ನು ಉಪಚರಿಸುವುದು?"

ಮಹಾದೇವಿಗೂ ಅರ್ಥವಾಯಿತು. ಥಟ್ಟನೆ ಎದ್ದು ಒಳಗೆ ನಡೆದಳು. ಅಲ್ಲಿ ಇದ್ದವರನ್ನು ಉದ್ದೇಶಿಸಿ ಗುರುಗಳು ಹೇಳಿದರು:

"ಈ ಮಹಾದೇವಿಯ ಆತ್ಮಸಂಸ್ಕಾರ ಬಹಳ ದೊಡ್ಡದು. ಶ್ರೀಶೈಲದ ಮಲ್ಲಿಕಾರ್ಜುನನೊಡನೆ ಈ ಎಳೆಯ ಚೇತನದ ಸಂಬಂಧ ಬಹಳ ಗಾಢವಾದುದು. ಇದನ್ನು ನಾನು ಶ್ರೀಶೈಲದಲ್ಲಿ ಕಂಡುಕೊಂಡೆ."

ಎಲ್ಲರೂ ತಬ್ಬಿಬ್ಬಾದರು. ಸಾವಿರಾರು ಮೈಲುಗಳ ದೂರದಲ್ಲಿರುವ ಶ್ರೀಶೈಲದಲ್ಲಿ ಇವರು ಅದನ್ನು ಕಂಡುಕೊಂಡುದು ಹೇಗೆ? ಗುರುಗಳ ಮಾತು ಅವರಿಗೆ ಒಗಟಿನಂತೆ ತೋರಿತು. ಅದನ್ನು ಅರಿತ ಗುರುಗಳು:

"ಅದೊಂದು ಅಲೌಕಿಕವಾದ ಅನುಭವ; ಓಂಕಾರ, ಇಂತಹ ಮಗಳನ್ನು ಪಡೆದ ನೀನು ಧನ್ಯನೆಂದು ತಿಳಿ. ಸದ್ಯಕ್ಕೆ ಅಷ್ಟು ಸಾಕು, ಏಳಿರಿ."

ಎನ್ನುತ್ತಾ ಮೇಲೆದ್ದರು. ಎಲ್ಲರೂ ಗುರುಗಳನ್ನು ಹಿಂಬಾಲಿಸಿದರು. ಪ್ರಸಾದವನ್ನು ಸ್ವೀಕರಿಸುವುದಕ್ಕಾಗಿ.

೨

ಪ್ರಸಾದದ ನಂತರ ಗುರುಲಿಂಗದೇವರು ಮಂಚದ ಮೇಲೆ ಒರಗಿಕೊಂಡರು. ಶಿಷ್ಯರೂ ಬಂದು ಕುಳಿತರು. ಮಹಾದೇವಿ ತಾಂಬೂಲದ ತಟ್ಟೆಯನ್ನು ತಂದು ಶಿಷ್ಯರ ಮಧ್ಯದಲ್ಲಿಟ್ಟಳು. ಗುರುಗಳು ತಾಂಬೂಲವನ್ನು ಹಾಕಿಕೊಳ್ಳುವುದಿಲ್ಲವೆನ್ನುವುದು ಈಕೆಗೆ ತಿಳಿದಿತ್ತು. ಓಂಕಾರನೂ ಬಂದು ಕುಳಿತುಕೊಳ್ಳುತ್ತಾ ಹೇಳಿದ:

"ಅಂತೂ ಇಂದಿನ ನಮ್ಮ ಭಾಗ್ಯ ಬಹಳ ದೊಡ್ಡದು. ಗುರುಗಳೇ."

"ಅದನ್ನು ತಂದುಕೊಟ್ಟವಳು ನಿಮ್ಮ ಮಹಾದೇವಿ" ಎನ್ನುತ್ತಾ ಗುರುಗಳು ಎದ್ದು ನೆಟ್ಟಗೆ ಕುಳಿತುಕೊಂಡರು ಮತ್ತು ಕೇಳಿದರು:

"ಈ ದಿನ ನಾನಾಗಿಯೇ ಹೇಳಿ ಕಳುಹಿಸಿ ಇಲ್ಲಿಗೆ ಬಂದಿರುವುದೇಕೆಂಬುದನ್ನು ಬಲ್ಲೆಯೇನು, ಓಂಕಾರ?"

ಎಲ್ಲರೂ ನೆಟ್ಟಗೆ ಕುಳಿತರು. ಓಂಕಾರ ಮಾತನಾಡುವುದನ್ನೇ ಮರೆತು ಗುರುಗಳನ್ನು ನೋಡುತ್ತಾ ಮುಂದಿನ ಮಾತುಗಳನ್ನು ನಿರೀಕ್ಷಿಸುತ್ತಿದ್ದ. ಲಿಂಗಮ್ಮನೂ ಬಾಗಿಲ ಹಿಂದೆ ಬಂದು ನಿಂತಳು. ಗುರುಗಳ ವಾಣಿ ಮುಂದುವರಿಯಿತು:

"ಮಲ್ಲಿಕಾರ್ಜುನನ ಸಂಕಲ್ಪದಂತೆ ಅವನ ಪ್ರಸಾದರೂಪವಾದ ಇಷ್ಟಲಿಂಗವನ್ನು ಮಹಾದೇವಿಗೆ ಅನುಗ್ರಹಿಸುವುದಕ್ಕಾಗಿ ನಾನು ಬಂದಿದ್ದೇನೆ. ಇಂದುರಾತ್ರಿ ಮೊದಲನೆ ಪ್ರಹರದ ಅಮೃತಘಳಿಗೆಯಲ್ಲಿ ಆ ದೀಕ್ಷಾಸಂಸ್ಕಾರ ನೆರವೇರಬೇಕಾಗಿದೆ. ಏನು ಓಂಕಾರ? ಲಿಂಗಮ್ಮ, ನಾನು ಹೇಳಿದ ಮಾತು ಕೇಳಿಸಿತೇನಮ್ಮ?"

ನಮ್ಮ ಮಗಳು ಇಷ್ಟೊಂದು ಭಾಗ್ಯಶಾಲಿಯೆಂದು ನಾನು ಭಾವಿಸಿರಲಿಲ್ಲ. ಗುರುದೇವ." ಲಿಂಗಮ್ಮ ಹೇಳಿದಳು ಸ್ವಲ್ಪ ಮುಂದೆ ಬರುತ್ತಾ.

"ನಿಮ್ಮ ಮಗಳಲ್ಲ ಭಾಗ್ಯಶಾಲಿ...." ಎಂದು ಪ್ರಾರಂಭಿಸಿದ ಗುರುಗಳು. ತಾಯ ಪಕ್ಕದಲ್ಲಿಯೇ ಪುಳಕಿತಗಾತ್ರಳಾಗಿ ನಿಂತಿರುವ ಮಹಾದೇವಿಯನ್ನು ಕಂಡು ಅಷ್ಟಕ್ಕೇ ನಿಲ್ಲಿಸಿ "ಆ ಮಾತು ಹಾಗಿರಲಿ.... ಇಂದು ರಾತ್ರಿ ದೀಕ್ಷಾ ಸಂಸ್ಕಾರ ನಡೆಸಬಹುದು ತಾನೆ? ಏನು ಓಂಕಾರ?"

"ನಾನು ಹೇಗೆ ಮಾತನಾಡಲಿ, ಗುರುಗಳೇ! ಮಾತಿಗೂ ಮೀರಿದ ನಿಮ್ಮ ಕರುಣೆಯ ಪ್ರವಾಹದಲ್ಲಿ ಮಿಂದು ನಾವು ಮೌನವಾಗಿದ್ದೇವೆ. ನಮ್ಮ ಮಗಳ ಜನ್ಮ ಸಾರ್ಥಕವಾಯಿತು. ನಾವು ಧನ್ಯರಾದೆವು!"

ಗುರುಗಳು ಸಂತೃಪ್ತರಾಗಿ ಹೇಳಿದರು:

"ಸರಿ ಹಾಗಾದರೆ" ಎಂದು ಲಿಂಗಮ್ಮನನ್ನು ಕುರಿತು "ಅದಕ್ಕಾಗಿ ಅತಿ ಹೆಚ್ಚಿನ ಸಿದ್ಧತೆಯೇನೂ ಬೇಡ, ತಾಯಿ. ನಿಮ್ಮೆಲ್ಲರ ಮನಸ್ಸಿನ ಪರಿಶುದ್ಧತೆಗಿಂತ ಹೆಚ್ಚಿನ ಸಿದ್ಧತೆ ಯಾವುದಿದೆ....? ಹೋಗು ಮಹಾದೇವಿ, ಪ್ರಸಾದವನ್ನು ಸ್ವೀಕರಿಸಿ ಬಾ. ಆನಂತರ ಶ್ರೀಶೈಲದ ಕಥೆ ಹೇಳುತ್ತೇನೆ."

ಮಹಾದೇವಿ, ಲಿಂಗಮ್ಮ ಅಡುಗೆ ಮನೆಗೆ ಹೋದರು. ಸ್ವಲ್ಪ ಕಾಲ ಮೌನ ಆವರಿಸಿತು. ಗುರುಗಳ ಮಾತನ್ನೇ ಎಲ್ಲರೂ ಮೆಲುಕು ಹಾಕುತ್ತಿರುವಂತೆ ತೋರುತ್ತಿತ್ತು. ಗುರುಪಾದಪ್ಪನೇ ಮೌನವನ್ನು ಮುರಿದ:

"ಶ್ರೀಶೈಲ ಇಲ್ಲಿಗೆ ಬಹಳ ದೂರ ಅಲ್ಲವೇ, ಗುರುಗಳೇ?"

"ಹೌದು ಬಹಳ ದೂರ ಇಲ್ಲಿಗೆ. ಕನ್ನಡನಾಡನ್ನು ದಾಟಿ ಆಚೆ ಹೋಗಬೇಕು, ಬಹಳ ದೂರ.... ಬಹಳ ದೂರ...." ತಾವು ಹೋಗಿ ಬಂದ ದೂರದ ಕಲ್ಪನೆಯನ್ನು ಮಾಡಿಕೊಳ್ಳುತ್ತಾ ಹೇಳಿದರು ಗುರುಗಳು.

"ಬಹು ದೊಡ್ಡ ಯಾತ್ರೆಯನ್ನು ಕೈಕೊಂಡು ಅದನ್ನು ಯಶಸ್ವಿಯಾಗಿ ನಿರ್ವಹಿಸಿದಿರಿ, ಗುರುದೇವಾ" ಓಂಕಾರ ಮೆಚ್ಚಿ ನುಡಿದ.

"ಮಲ್ಲಿಕಾರ್ಜುನನ ಸಂಕಲ್ಪ, ಎಲ್ಲಾ ನಡೆಯಿತು. ನಮಗೇನೂ ಅಷ್ಟು ಕಷ್ಟವಾಗಲಿಲ್ಲ ಪ್ರಯಾಣ. ಸೊನ್ನಲಿಗೆ ಪ್ರಾಂತದಿಂದ ಬಂದ ಶ್ರೀಶೈಲ ಯಾತ್ರೆಯ ಪರಿಷೆ ಸಿಕ್ಕ ಮೇಲಂತೂ ನಮ್ಮ ಪ್ರಯಾಣ ಇನ್ನೂ ಸುಗಮವಾಯಿತು."

"ಸೊನ್ನಲಿಗೆಯಿಂದ ಪರಿಷೆ?" ಓಂಕಾರ ಕೇಳಿದ.

"ಹೌದು. ಪ್ರತಿವರ್ಷವೂ ಆ ಭಾಗದಿಂದಶ್ರೀಶೈಲದವರೆಗೆ ಒಂದು ದೊಡ್ಡ ಗುಂಪೇ ಹೊರಡುತ್ತದಂತೆ. ಸೊನ್ನಲಿಗೆಯ ಸಿದ್ಧರಾಮ, ಶ್ರೀಶೈಲಕ್ಕೆ ಹೋಗಿ ಬಂದಮೇಲಂತೂ ಶ್ರೀಶೈಲ ಸೋನ್ನಲಿಗೆಗೆ ಬಹಳ ಹತ್ತಿರವಾಗಿದೆ. ನಮಗೆ ಸಿಕ್ಕಿದ ಆ ಪರಿಷೆಯಲ್ಲಿ ಒಳ್ಳೇ ಸಾಧಕರು ಕೆಲವರಿದ್ದರು. ಅನೇಕರು ಭಾವುಕ ಭಕ್ತರು. ನಮ್ಮನ್ನಂತೂ ಬಹಳ ಆದರದಿಂದ ನೋಡಿಕೊಂಡರು" ಎಂದು ಪ್ರಾರಂಭಿಸಿ ಮಾರ್ಗದಲ್ಲಿ ಉಂಟಾದ ಅನುಭವಗಳನ್ನು ಹೇಳತೊಡಗಿದರು. ಆಂಧ್ರದ ಅತಿ ತೀವ್ರವಾದ ಬಿಸಿಲಿನ ತಾಪವನ್ನು ವರ್ಣಿಸಿದರು. ಹೀಗೆ ಅದು ಇದು ಮಾತು ನಡೆಯುತ್ತಿರುವಷ್ಟರಲ್ಲಿ ಮಹಾದೇವಿ ಬಂದಳು. ಮೊದಲಿನಂತೆ ಗುರುಗಳಿಗೆ ಸಮೀಪದಲ್ಲಿ ಮಂಚದ ಕೆಳಗೆ ಕುಳಿತಳು. ಲಿಂಗಮ್ಮನೂ ಬಂದು ಸಮೀಪದಲ್ಲಿ ಕುಳಿತುಕೊಂಡುದು ಕಾಣಿಸಿತು ಗುರುಗಳಿಗೆ.

ಗುರುಗಳು ನೆಟ್ಟಗೆ ಕುಳಿತುಕೊಂಡು ಮಾತನ್ನು ಮುಂದುವರಿಸಿದರು. ಅವರ ಮುಖದ ಮೇಲೆ ಉತ್ಸಾಹ ಮಿಂಚುತ್ತಿತ್ತು. ಸಂತೋಷಕರವಾದ ಆ ಯಾತ್ರೆಯ ಸ್ಮರಣೆಯಿಂದ.

"ಶ್ರೀಶೈಲಪರ್ವತ ಸಮೀಪಿಸುತ್ತಿದ್ದಂತೆಯೇ ಬಿಸಿಲ ತಾಪ, ಆಯಾಸ ಎಲ್ಲಾ ಮರೆತು ಹೋಗುತ್ತದೆ. ಅಂತಹುದೇನೋ ಅವ್ಯಕ್ತ ಶಕ್ತಿ ಅಲ್ಲಿನ ಕಲ್ಲು ಗುಡ್ಡಗಳಲ್ಲಿರುವಂತಿದೆ. ಶ್ರೀಶೈಲವನ್ನು ದೇಹಕ್ಕೆ ಹೋಲಿಸಿಕೊಂಡು ಹಾಡಿರುವ ಯೋಗಿಗಳ ಪರಿಭಾಷೆಯನ್ನು ಕೇಳಿದ್ದೆ. ಆಗ ನನಗೆ ಅದು ಅಷ್ಟು ಸ್ಪಷ್ಟವಾಗಿ ಅರ್ಥವಾಗಿರಲಿಲ್ಲ. ಆದರೆ ಶ್ರೀಶೈಲದ ಒಂದೊಂದು ಶೈಲವನ್ನೂ ಹತ್ತಿ ಇಳಿದು ದಾಟುತ್ತಾ ನಡೆದಂತೆ ಆ ಸತ್ಯವು ಅನುಭವಗೋಚರವಾಗುತ್ತದೆ. ಈ ಪ್ರಪಂಚವನ್ನು ದಾಟಿ ಯಾವುದೋ ಲೋಕಕ್ಕೆ ಹೋದಂತೆ ಅನಿಸುತ್ತದೆ. ಮರ್ತ್ಯಜಗತ್ತನ್ನು ಹಿಂದೆ ಬಿಟ್ಟು ಮಲ್ಲಿಕಾರ್ಜುನನ ಮುಕ್ತಿ ಮನೆಯನ್ನು ಹೊಕ್ಕಂತೆ ಭಾಸವಾಗುತ್ತದೆ. ಶ್ರೀಶೈಲ ಪರ್ವತಗಳ ಸೆರಗು ಆತ್ಮಕೂರನ್ನು ಬಿಟ್ಟೊಡನೆಯೇ ಪ್ರಾರಂಭವಾಗುತ್ತದೆ."

ಇಲ್ಲಿ ಗುರುಗಳ ಮಾತನ್ನು ತಡೆದಳು ಮಹಾದೇವಿ, ತನ್ನ ಪ್ರಶ್ನೆಯಿಂದ.

"ಎಂಥದು ಗುರುಗಳೇ? ಎಂಥ ಊರು ಅದು?"

"ಆತ್ಮಕೂರು. ಏಕೆ? ಹೆಸರು ಆಶ್ಚರ್ಯಕರವಾಗಿದೆಯಲ್ಲವೆ? ನನಗೂ ಹಾಗೆಯೇ ತೋರಿತು. ಅದು ಹೇಗೆ ಆ ಹೆಸರು ಬಂದಿತೋ ಆ ಊರಿಗೆ. ಅಲ್ಲೊಂದು ಮಠವಿದೆ, ಮಲ್ಲಿಕಾರ್ಜುನನ ದೇವಾಲಯವಿದೆ. ಶ್ರೀಶೈಲಕ್ಕೆ ನಡೆದು ಹೋಗಲಾರದವರು ಆತ್ಮಕೂರಿಗೆ ಹೋಗಿ ಅಲ್ಲಿರುವ ಮಲ್ಲಿಕಾರ್ಜುನನಿಗೆ ನಮಸ್ಕಾರ ಮಾಡಬಹುದು.

"ಆತ್ಮಕೂರಿನಿಂದ ನಮ್ಮ ಪರಿಷೆ ಹೊರಟಿತು. ಸ್ವಲ್ಪದೂರ ಹೋಗುವುದರೊಳಗೆ ಯಾರೋ ತೋರಿಸಿ ಹೇಳಿದರು, 'ಅದೋ ಶ್ರೀಶೈಲಪರ್ವತ' ಎಂದು. ತಲೆಯನ್ನು ಎತ್ತಿ ನಿಂತಿತ್ತು ಅನತಿದೂರದಲ್ಲಿಯೇ ಒಂದು ಪರ್ವತ. 'ಇಷ್ಟು ಹತ್ತಿರವೇ ಶ್ರೀಶೈಲ'ಎನಿಸಿತು. ಏಕೆಂದರೆ ಇದೆಲ್ಲಾ ನನಗೆ ಮೊದಲು ಗೊತ್ತಿರಲಿಲ್ಲ. ಅದನ್ನು ಏರತೊಡಗಿದೆವು.

"ಕಡಿದಾದ ಆ ಕಣಿವೆಯ ದಾರಿ, ಹೆಜ್ಜೆಹೆಜ್ಜೆಗೂ ನಮ್ಮನ್ನು ಮೇಲಕ್ಕೆ ಕೊಂಡೊಯ್ಯುತ್ತಿತ್ತು. ಪರಿಷೆಯ ಕೀರ್ತನೆಭಜನೆಗಳೆಲ್ಲಾ ಏರುವ ಆಯಾಸದಿಂದ ತಾವಾಗಿಯೇ ನಿಂತುಹೋಗಿದ್ದವು. ಆಗಾಗ 'ಮಹಾಂತ ಮಲ್ಲಯ್ಯಾ ಉಘೇ....ಉಘೇ..' ಎಂದು ಎಲ್ಲರೂ ಉದ್ಘೋಷಿಸುವ ಜಯಘೋಷ, ಬೆಟ್ಟವನ್ನೇರುವುದಕ್ಕೆ ಪ್ರೋತ್ಸಾಹವನ್ನು ಕೊಡುವಂತಿತ್ತು. ಆ ಪರ್ವತವನ್ನೇರಿ

ಅದರ ನೆತ್ತಿಯ ಮೇಲೆ ಬರುವ ವೇಳೆಗೆ ಎಲ್ಲರೂ ದಣಿದಿದ್ದರು.

"ಪರಿಷೆಯ ನಾಯಕನೊಬ್ಬ ಬಂದು ನನಗೆ ಹೇಳಿದ:

'ಸ್ವಾಮಿಗಳೇ, ಇಲ್ಲಿ ಸ್ವಲ್ಪ ವಿಶ್ರಮಿಸಿಕೊಳ್ಳೋಣ. ಇನ್ನು ಈ ಪರ್ವತವನ್ನು ಇಳಿದು, ಅದೋ, ಆ ಎದುರಿಗೆ ಕಾಣುವ 'ಪರ್ವತವನ್ನು ಹತ್ತಬೇಕು. ಅಲ್ಲಿಯೇ ಇಂದು ರಾತ್ರಿ ನಮ್ಮ ವಸತಿ.'

'ಅಂದರೆ! ಇದು ಶ್ರೀಶೈಲ ಅಲ್ಲ? ಇದೇ ಶ್ರೀಶೈಲಪರ್ವತ ಅಂದರಲ್ಲ ಯಾರೋ?" ನಾನು ಕೇಳಿದೆ.

'ಇಲ್ಲಿಂದ ಶ್ರೀಶೈಲಪರ್ವತ ಪ್ರಾರಂಭ. ಮಲ್ಲಿಕಾರ್ಜುನನ ದೇವಾಲಯಕ್ಕೆ ಹೋಗಬೇಕಾದರೆ ಇಂತಹ ಐದಾರು ಬೆಟ್ಟಗಳನ್ನು ಹತ್ತಿಳಿದು ಹೋಗಬೇಕು. ಎರಡು ಮೂರು ದಿನಗಳ ಪ್ರಯಾಣ ಅಲ್ಲಿಗೆ ಹೋಗುವುದಕ್ಕೆ' ಎಂದ ಆತ.

"ಇದೇ ಶ್ರೀಶೈಲವೆಂದು ಭಾವಿಸಿದುದಕ್ಕೆ ನನಗೆ ನಗು ಬಂದು ಶ್ರೀಶೈಲ ಇಷ್ಟು ಸುಲಭವೇ ಎಂದು ನನ್ನ ಮನಸ್ಸಿನ ಒಂದು ಮೂಲೆಯಲ್ಲಿ ಮೂಡಿದ್ದ ಅತೃಪ್ತಿ ಮಾಯವಾಯಿತು. ಸಾಹಸ ಹೆಚ್ಚಿದಷ್ಟೂ ಅದರಿಂದ ಬರುವ ಸಂತೋಷವೂ ಹೆಚ್ಚಲ್ಲವೇ! ಮುಂದಿನ ಕಷ್ಟಕರವಾದ ಮಾರ್ಗವನ್ನು ಎದುರಿಸಲು ನನ್ನ ಮನಸ್ಸು ಸಿದ್ಧವಾಯಿತು.

"ಸುತ್ತಲೂ ನೋಡಿದೆ. ನಾವು ರಾತ್ರಿ ತಂಗಬೇಕಾಗಿದ್ದ ಪರ್ವತಶಿಖರ ನಮ್ಮನ್ನು ಆದರಪೂರ್ವಕವಾಗಿ ಆಹ್ವಾನಿಸುವಂತಿತ್ತು. ಚಿಗುರಿನಿಂದ ಅಲಂಕೃತವಾಗಿ ನಿಂತಿದ್ದ ಮರಗಿಡಗಳೆಲ್ಲಾ ಸೂರ್‍ಯನ ಪ್ರಖರವಾದ ಬಿಸಿಲನ್ನು ತಾಳಲಾರದೆ ತಮ್ಮ ಹಸಿರು ತಲೆಯನ್ನು ಬಾಗಿಸಿ ಮೌನದಿಂದಿದ್ದುವು. ಪರಿಷೆಯ ಜನರೆಲ್ಲಾ ಚದುರಿ ಸಣ್ಣ ಗುಂಪುಗಳಾಗಿ ಒಂದೊಂದು ಮರದ ಕೆಳಗೆ ವಿಶ್ರಾಂತಿಯನ್ನು ಪಡೆಯುತ್ತಿದ್ದರು.

"ಆಯಾಸ ಸ್ವಲ್ಪ ಕಡಿಮೆಯಾದ ಮೇಲೆ ಮತ್ತೆ ಎಲ್ಲರೂ ಒಟ್ಟಾದರು. ಈ ವೇಳೆಗೆ ಹೊತ್ತು ಸ್ವಲ್ಪ ಇಳಿಮುಖವಾಗಿತ್ತು. ಮುಂದಿನ ಬೆಟ್ಟದ ಕಡೆಗೆ ಇಳಿಯತೊಡಗಿದವು.

"ಹೀಗೆ ಒಂದಾದಮೇಲೊಂದರಂತೆ ಐದಾರು ಬೆಟ್ಟಗಳನ್ನು ದಾಟಿಕೊಂಡು ಹೋಗಬೇಕು. ನನಗಂತೂ ಒಂದೊಂದು ಬೆಟ್ಟವನ್ನು ಹತ್ತಿ ಇಳಿದು ದಾಟಿದಾಗಲೂ ವಿಚಿತ್ರ ಅನುಭವವಾಗುತ್ತಿತ್ತು. ಯೋಗಿಗಳು ಇದನ್ನು ತಮ್ಮ ದೇಹಕ್ಕೆ ಹೋಲಿಸುವುದರ ಔಚಿತ್ಯ ಕ್ಷಣಕ್ಷಣಕ್ಕೂ ಹೆಚ್ಚುಹೆಚ್ಚಾಗಿ ಮನವರಿಕೆಯಾಗಿ ರೋಮಾಂಚನವನ್ನು ತರುತ್ತಿತ್ತು.

"ಹೀಗೆ ದೇಹದ ಪಂಚಕೋಶಗಳನ್ನು ದಾಟಿಕೊಂಡು ಮುನ್ನಡೆಯುವ ಸಾಧಕನಂತೆ, ಐದು ಬೆಟ್ಟಗಳನ್ನು ಏರಿ ಇಳಿದು, ಮುಂದೆ ನಡೆಯುತ್ತಿರುವಾಗ ಕಣ್ಣಿಗೆ ಬಿದ್ದಿತು ಶಿಖರೇಶ್ವರ. ಮಲ್ಲಿಕಾರ್ಜುನನಿಗೆ ಅದು ಇನ್ನೊಂದು ಹೆಸರೇನೋ ಎಂದು ತಿಳಿದಿದ್ದೆ. ಆದರೆ ಅದಲ್ಲ, ಮಲ್ಲಿಕಾರ್ಜುನ ಶಿಖರದ ಮೇಲಿಲ್ಲ. ಶಿಖರೇಶ್ವರದಿಂದ ಮತ್ತೆ ಇಳಿಯಬೇಕು. ಹಾಗೆ ಸ್ವಲ್ಪ ದೂರ ಇಳಿದು ಹೋದಮೇಲೆ ಮಟ್ಟಸವಾದ ಒಂದು ಬಟ್ಟಬಯಲಿನ ಪ್ರದೇಶ ಸಿಕ್ಕುತ್ತದೆ. ಶ್ರೀಶೈಲ ವಿರಾಟ್ ಪುರುಷನಿಗೆ ಹೃದಯಗಹ್ವರದಂತಿರುವ ಈ ಪ್ರದೇಶದ ಕೊನೆಯಲ್ಲಿದೆ ಮಲ್ಲಿಕಾರ್ಜುನನ ದೇವಾಲಯ. ಅದರ ಸುತ್ತಲೂ ಪರ್ವತಗಳು ತಲೆಯೆತ್ತಿ ಗಿರಿಮಲ್ಲಯ್ಯನಿಗೆ ಭವ್ಯತೆಯ ತೋರಣವನ್ನು ಕಟ್ಟಿನಿಂತಿವೆ. ಅಲ್ಲಿ ಹೋಗಿ ನಿಂತರೆ ಸಾಕು, ಇಷ್ಟೆಲ್ಲಾ ನಾವು ಪಟ್ಟ ಶ್ರಮ ಸಾರ್ಥಕವೆನಿಸುತ್ತದೆ.

"ದೇವಾಲಯದ ಮಹಾದ್ವಾರದಿಂದ ನೇರವಾಗಿ ಸ್ವಲ್ಪ ದೂರ ಹೋಗಿ ಎಡಕ್ಕೆ ತಿರುಗಿದರೆ ಪಾತಾಳಗಂಗೆಗೆ ಹೋಗುವ ದಾರಿ ಸಿಕ್ಕುತ್ತದೆ."

ತದೇಕಚಿತ್ತಳಾಗಿ ಶ್ರೀಶೈಲದ ಚಿತ್ರವನ್ನು ಕಣ್ಣಿನ ಮುಂದೆ ಚಿತ್ರಿಸಿಕೊಳ್ಳುತ್ತಾ ಕೇಳುತ್ತಿದ್ದ ಮಹಾದೇವಿ ಇಲ್ಲಿ ಗುರುಗಳನ್ನು ತಡೆದಳು.

"ಪಾತಾಳಗಂಗೆ! ಹಾಗೆಂದರೇನು ಗುರುಗಳೇ?"

"ಅದೇ? ಎರಡು ಪರ್ವತಗಳ ಆಳವಾದ ಕಂದರದಲ್ಲಿ ಕೃಷ್ಣಾನದಿ ಹರಿದು ಬರುತ್ತದೆ. ತನ್ನ ಸಲಿಲದೇಹದಿಂದ ಕನ್ನಡನಾಡಿನಲ್ಲಿ ಜಲಜಲನೆ ಉಕ್ಕಿಬಂದ ಕೃಷ್ಣೆ, ಶ್ರೀಶೈಲಪರ್ವತಗಳ ಆಳವಾದ ಕಣಿವೆಯನ್ನು ಹೊಕ್ಕು ಮಲ್ಲಿಕಾರ್ಜುನನ ಪಾದವನ್ನು ತೊಳೆಯುವ ಪಾತಾಳಗಂಗೆಯಾಗಿ ಪರಿಣಮಿಸಿದ್ದಾಳೆ. ದೇವಾಲಯದ ಬಳಿಯಿಂದ ಪರ್ವತವನ್ನಿಳಿಯುವಾಗ ಅದನ್ನು ನೋಡಿದರೆ, ಎಲ್ಲಿಯೋ ಪಾತಾಳದಲ್ಲಿ ಹರಿಯುತ್ತಿರುವಂತೆ ತೋರುತ್ತದೆ. ಇಳಿಯುತ್ತಾ ಹೋದಂತೆಲ್ಲಾ ಶಿವನ ಪಾದವನ್ನು ಅರಸಲು ವಿಷ್ಣು ಪಾತಾಳವನ್ನು ಹೊಕ್ಕನಂತಲ್ಲ, ಹಾಗಾಗುತ್ತದೆ ನಮ್ಮ ಸ್ಥಿತಿಯೂ, ಅಲ್ಲಿ ಮಲ್ಲಿಕಾರ್ಜುನನ ಪಾದಗಳನ್ನು ಬಿಟ್ಟು ಅಗಲಲಾರೆನೆಂಬಂತೆ ಗಂಭೀರಳಾಗಿ ನಿಂತುಬಿಟ್ಟಿದ್ದಾಳೆ ಕೃಷ್ಣೆ.

"ಆಹಾ! ಎಷ್ಟು ಸುಂದರವಾದ ಪ್ರದೇಶ ಅದು ! ಸುತ್ತಲೂ ಎತ್ತರವಾಗಿ ನಿಂತಿರುವ ಪರ್ವತದ ಬೃಹದ್ದೇಹಗಳು ನಮ್ಮ ಆತ್ಮಕ್ಕೆ ವಜ್ರರಕ್ಷಣೆಯನ್ನಿತ್ತಂತೆ ಕಂಗೊಳಿಸುತ್ತವೆ. ಸುಪ್ರಭಾತವನ್ನೆದುರುಗೊಳ್ಳಲು ಸಂಭ್ರಮದಿಂದ ಕುಕಿಲಿರಿಯುತ್ತಿರುವ ಬಗೆಬಗೆಯ ಹಕ್ಕಿಗಳ ಮಧುರಗಾನ, ಮಂಗಳದ ಒಸಗೆಯನ್ನು ಕಿವಿಯಲ್ಲಿ ಬೀರುತ್ತದೆ. ಪಾತಾಳಗಂಗೆಯಲ್ಲಿ ಮಿಂದು, ಎತ್ತರವಾದ

ಶಿಲಾಪೀಠದ ಮೇಲೆ ಧ್ಯಾನಸ್ಥನಾಗಿದ್ದು, ಬೆಟ್ಟಗಳ ಮರೆಯಲ್ಲಿ ಮೇಲೇರಿ ಬರುತ್ತಿರುವ ಬಾಲಸೂರ್ಯನ ಕಿರಣಗಳ ಹಿತಕರವಾದ ಬಿಸಿಯನ್ನು ಅನುಭವಿಸಿ, ಕ್ರಮೇಣ ಧ್ಯಾನದಿಂದ ಕಣ್ದೆರೆದು ಲಿಂಗಪೂಜೆಯನ್ನು ಮಾಡುವ ಸುಖದ ಮುಂದೆ ಪ್ರಪಂಚದ ಸುಖವೆಲ್ಲಾ ತೃಣವಾಗಿ ಕಾಣಿಸುತ್ತದೆ.

"ಅಲ್ಲಿಂದ ಮೇಲೇರತೊಡಗಿದರೆ, ಅನುಭವಿಗಳ ಅನುಸಂಧಾನದಿಂದ ಆತ್ಮಸಾಕ್ಷಾತ್ಕಾರದ ಕೈಲಾಸವನ್ನೇರುತ್ತಿರುವಂತೆ ಭಾಸವಾಗುತ್ತದೆ. ಅದು ಕಷ್ಟಕರವಾದುದೂ ಹೌದು. ಆದರೂ ಆ ಶ್ರಮದ ಗರ್ಭದಲ್ಲಿಯೇ ಸಂತೋಷದ ಸಂಜೀವಿನಿ ಹುದುಗಿ, ಬೆವರು ಸುರಿಯುತ್ತದೆ. ಜೊತೆಗೆ ತಂಗಾಳಿಯೂ ಬೀಸುತ್ತದೆ. ಹೀಗೆ ಮೇಲೇರಿ ಬರುವಾಗ ದೂರದಲ್ಲಿ ಶಿಖರೇಶ್ವರನ ದರ್ಶನ ಮೊಟ್ಟಮೊದಲು ನಮಗಾಗುತ್ತದೆ. ಶಿಖರೇಶ್ವರನಿಗೆರಗಿ, ಅದರಿಂದ ಉತ್ಸಾಹಿತರಾಗಿ ಮತ್ತೆ ಮೇಲೇರತೊಡಗುತ್ತೇವೆ. ಇನ್ನೇನು ಹೆಜ್ಜೆಯನ್ನಿಡುವುದೇ ಸಾಧ್ಯವಿಲ್ಲ ಎನ್ನುವ ವೇಳೆಗೆ ಮಲ್ಲಿಕಾರ್ಜುನನ ಮಹಾದ್ವಾರ ಗೋಚರಿಸುತ್ತದೆ. ಜ್ಯೋತಿರ್ಲಿಂಗಕ್ಕೆ ದೃಷ್ಟಿಯನ್ನಿಡುತ್ತೇವೆ. ನಿತ್ಯವೂ ಹೀಗೆ ಪಾತಾಳಗಂಗೆಯಲ್ಲಿ ಮಿಂದು, ಪ್ರೀತಿಯಿಂದ ಶಿಖರೇಶ್ವರನಿಗೆರಗಿ, ಜ್ಯೋತಿರ್ಲಿಂಗಕ್ಕೆ ದೃಷ್ಟಿಯನ್ನಿಟ್ಟರೆ ಅದಕ್ಕೆ ಎಣೆ ಯಾವುದು? ಅವನ ದೇಹ ವಜ್ರದೇಹವಾಗುತ್ತದೆ; ಮನಸ್ಸು ಮಹಾದೇವನಾಗುತ್ತದೆ."

ತಾವೀಗ ಶ್ರೀಶೈಲದಲ್ಲಿಯೇ ಇದ್ದು ಅನುಭವಿಸುತ್ತಿರುವಂತಹ ತಲ್ಲೀನತೆಯಿಂದ ಹೇಳುತ್ತಿದ್ದರು ಗುರುಗಳು. ಕೇಳುತ್ತಿದ್ದವರು ಕೂಡ ನಾಲ್ಕು ಗೋಡೆಗಳ ಮರೆಯಿಂದ ಹಾರಿಹೋಗಿ ಪಾತಾಳಗಂಗೆಯಲ್ಲಿ ಮಿಂದು ಮೇಲೇರುತ್ತಿದ್ದರು. ಕ್ಷಣಕಾಲ ಮಲ್ಲಿಕಾರ್ಜುನನ ಚೈತನ್ಯವೇ ಮನೆಯನ್ನೆಲ್ಲಾ ಆವರಿಸಿದಂತೆ ಮೌನವಾಗಿತ್ತು. ಮತ್ತೆ ಗುರುಗಳೇ ಮೌನವನ್ನು ಮುರಿದರು:

"ಎಷ್ಟು ದಿನಗಳಿದ್ದರೂ ಅಲ್ಲಿಂದ ಬಿಟ್ಟು ಬರುವುದಕ್ಕೇ ಮನಸ್ಸಾಗುವುದಿಲ್ಲ."

"ನೀವು ಅಲ್ಲಿ ಎಷ್ಟು ದಿನಗಳು ಇದ್ದಿರಿ, ಗುರುಗಳೇ?" ಓಂಕಾರ ಕೇಳಿದ.

"ನಾನು ಅಲ್ಲಿ ಸುಮಾರು ಒಂದು ತಿಂಗಳಿದ್ದೆ. ಸುತ್ತಲಿನ ಸ್ಥಳಗಳನ್ನೆಲ್ಲಾ ಪರಿಶೀಲಿಸಿದೆವು. ಅದರಲ್ಲಿ ಮುಖ್ಯವಾಗಿ ನನ್ನ ಗಮನ ಸೆಳೆದ ಇನ್ನೊಂದು ದೃಶ್ಯವೆಂದರೆ ಅರ್ಕೇಶ್ವರನ ಹಿಂದೆ ಪಂಚಧಾರೆ ಸುರಿಯುತ್ತದೆ. ಅಂದರೆ ಆ ಕಲ್ಲುಗುಡ್ಡದಿಂದ ನೀರು ಚಿಮ್ಮಿ ಹರಿಯುತ್ತದೆ. ಐದು ಕಡೆಗಳಲ್ಲಿ ಹೀಗೆ ನೀರು ಉಕ್ಕುತ್ತದೆ. ಅಲ್ಲಿನ ಪದರಪದರಗಳಲ್ಲಿ ಶೋಧಿಸಿಬಂದ ತಿಳಿನೀರು ಅಮೃತಧಾರೆಯಂತೆ ಕಾಣುತ್ತದೆ. ಅದರ ಮುಂದೆ ಆಳವಾದ ಕಣಿವೆ. ಅಲ್ಲೆಲ್ಲಾ ಬಹುದೀರ್ಘವಾದ ಮತ್ತು ದಟ್ಟವಾದ ಹಸುರಿನಿಂದ ಕಂಗೊಳಿಸುವ ಮರಗಿಡಗಳು.

ಮಾವಿನಹಣ್ಣಿನ ಮರಗಳೂ ಅಲ್ಲಿ ಯಥೇಚ್ಛವಾಗಿವೆ. ಇತರ ಹಣ್ಣಿನ ಗಿಡಗಳೂ ಇವೆ. ಈ ಸಂದರ್ಭದಲ್ಲಿ ನಡೆದ ಒಂದು ಸಣ್ಣ ಘಟನೆ ನೆನಪಿಗೆ ಬರುತ್ತದೆ."

ಗುರುಗಳು ಗಂಭೀರಭಾವವನ್ನು ಬಿಟ್ಟು ಮುಗುಳುನಗುತ್ತಾ ಹೇಳಿದರು:

"ನಾವೆಲ್ಲಾ ಅದನ್ನು ನೋಡುವುದಕ್ಕೆ ಹೋದಾಗ ಒಂದು ತಮಾಷೆ ನಡೆಯಿತು. ಪರಿಷೆಯಲ್ಲಿ ಕೆಲವು ಉತ್ಸಾಹಿಗಳು ಹಣ್ಣಿನ ರುಚಿ ನೋಡತೊಡಗಿದರು. ಅತ್ತಿಯ ಹಣ್ಣಿನಂತೆಯೇ ಇರುವ ಒಂದು ಬಗೆಯ ಹಣ್ಣುಗಳನ್ನುಳ್ಳ ಮರಗಳು ಅಲ್ಲಿ ವಿಶೇಷವಾಗಿದ್ದುವು. ಒಬ್ಬ ಸ್ವಲ್ಪ ತಿಂದು ನೋಡಿದ, ರುಚಿಯಾಗಿದ್ದವು. 'ಅಂಜೂರದ ಹಣ್ಣು, ಅಂಜೂರದ ಹಣ್ಣು, ಎಂದು ಕರೆಯುತ್ತಾ ಎಲ್ಲರಿಗೂ ಹಂಚಿದ. ಕೆಲವರು ತಿನ್ನಲು ಹಿಂದೆಮುಂದೆ ನೋಡಿದರು. ಇನ್ನು ಕೆಲವರು ಕೊಯ್ದುಕೊಯ್ದು ತಿಂದೇತಿಂದರು. ಆದರೆ ಸ್ವಲ್ಪ ಕಾಲದಲ್ಲಿಯೇ ಪ್ರಾರಂಭವಾಯಿತು, ತಿಂದವರೆಲ್ಲರಿಗೂ ವಾಂತಿ. ಸಧ್ಯ ನಾಲ್ಕಾರು ಸಾರಿ ವಾಂತಿಯಾಗಿ ಎಲ್ಲಾ ಸರಿಹೋಯಿತು. ಏನನ್ನಾದರೂ ಅರಿತು ಸೇವಿಸಬೇಕು, ಅರಿಯದೆ ಸೇವಿಸಿದರೆ ಅನರ್ಥ ತಪ್ಪಿದ್ದಲ್ಲ–ಎಂಬ ಸತ್ಯ ಅವರೆಲ್ಲರಿಗೂ ಮನವರಿಕೆಯಾಯಿತು."

ಮತ್ತೆ ಗಂಭೀರವಾಗುತ್ತಾ ಹೇಳಿದರು ಗುರುಗಳು:

"ಇಲ್ಲಿ ನಮ್ಮ ಗಮನ ಸೆಳೆಯುವ ಅಂಶವೆಂದರೆ ಪ್ರಕೃತಿ ಸೌಂದರ್ಯ ಮತ್ತು ಸೃಷ್ಟಿ ವೈಚಿತ್ರ್ಯ. ಆ ಕಲ್ಲುಬೆಟ್ಟದ ಮಧ್ಯದಲ್ಲಿ ಇದ್ದಕ್ಕಿದ್ದಂತೆಯೇ ನೀರು ಸಿಡಿದು ಚಿಮ್ಮುತ್ತಿರುವುದು ಆಶ್ಚರ್ಯಕರವಾಗಿ ಕಾಣುತ್ತದೆ. ಅಲ್ಲಿ ಇದಕ್ಕಿಂತಲೂ ಆಶ್ಚರ್ಯಕರವಾದ ಕದಳಿಯ ಬನ ಎಂಬುದೊಂದಿದೆಯಂತೆ!"

"ಕದಳಿಯ ಬನ! ಹಾಗೆಂದರೇನು ಗುರುಗಳೇ!" ಮಹಾದೇವಿಯ ಪ್ರಶ್ನೆ.

"ನನಗೆ ಅಲ್ಲಿಗೆ ಹೋಗುವುದಕ್ಕೆ ಆಗಲಿಲ್ಲ, ಮಹಾದೇವಿ. ಆತ್ಮಕೂರಿನಿಂದ ಶ್ರೀಶೈಲದೇವಸ್ಥಾನಕ್ಕೆ ಎಷ್ಟು ದೂರವನ್ನು ನಡೆಯಬೇಕೋ, ಸ್ವಲ್ಪ ಹೆಚ್ಚುಕಡಿಮೆ ದೇವಸ್ಥಾನದಿಂದ ಕದಳಿಯ ಬನಕ್ಕೆ ಮತ್ತೆ ಅಷ್ಟು ದೂರವನ್ನು ನಡೆಯಬೇಕಂತೆ. ಮಧ್ಯದಲ್ಲಿ ಕೃಷ್ಣಾನದಿಯನ್ನು ದಾಟಬೇಕಾಗುತ್ತದೆ. ಬಹಳ ಪ್ರಯಾಸಕರವಾದ ದಾರಿ ಎಂದರು. ನನಗಿನ್ನೂ ಹೋಗುವ ಯೋಗವಿರಲಿಲ್ಲವೆಂದು ತೋರುತ್ತದೆ. ಎಷ್ಟೋ ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ." ಅತೃಪ್ತಿಯ ಧ್ವನಿಯಿತ್ತು ಗುರುಲಿಂಗದೇವರ ಮಾತಿನಲ್ಲಿ.

"ಅಲ್ಲಿ ಏನಿದೆಯಂತೆ, ಗುರುಗಳೇ!" ಕುತೂಹಲದಿಂದ ಮತ್ತೆ ಕೇಳಿದಳು ಮಹಾದೇವಿ.

"ಕದಳಿಯ ವನ ಎಂದರೆ ಬಾಳೆಯ ವನ. ಅಲ್ಲಿ ಬಾಳೆಯ ಗಿಡಗಳು ಇರುವುದಂತೂ ನಿಶ್ಚಯ. ಅರ್ಕೇಶ್ವರನ ಹಿಂದೆ ಕಲ್ಲಿನಿಂದ ನೀರು ಚಿಮ್ಮಿ ಹರಿಯುವಂತೆ ಅಲ್ಲಿಯೂ ನೀರು ಜಿನುಗಿ ಬಾಳೆಯ ಗಿಡಗಳನ್ನು ಪೋಷಿಸುತ್ತಿದೆಯಂತೆ. ಧ್ಯಾನಕ್ಕೆ ಬಹಳ ಪ್ರಶಸ್ತವಾದ ಗುಹೆಯಂತೆ! ತುಂಬಾ ಪ್ರಶಾಂತವಾದ ವಾತಾವರಣವಂತೆ. ಮಹಾಮಹಾ ಯೋಗಿಗಳೆಲ್ಲಾ ತಪಸ್ಸುಮಾಡಿದ ಸ್ಥಳ ಎನ್ನುತ್ತಾರೆ. ಇದು ಪರಂಪರೆಯಾಗಿ ಬಂದ ಅವರ ವರ್ಣನೆ."

'ಕದಳಿಯ ಬನ' ಎಂಬ ಮಾತು ಮಹಾದೇವಿಯ ಎಳೆಯ ಹೃದಯದ ಮೇಲೆ ಅಚ್ಚೊತ್ತಿದಂತೆ ಮೂಡಿತು. ಶ್ರೀಶೈಲದ ವರ್ಣನೆಯನ್ನೆಲ್ಲಾ ತಲ್ಲೀನತೆಯಿಂದ ಕೇಳಿದಳು. ಆ ವರ್ಣನೆಯ ಮಹಾಮನೆಗೆ ಕದಳಿಯ ವನ, ಕಳಶವನ್ನಿಟ್ಟಂತಾಯಿತು. ಆ ಕಳಶ ಅಸ್ಪಷ್ಟ ನಿಜ; ಗುರುಗಳೇ ಅದನ್ನು ನೋಡಿಲ್ಲ. ಆದರೆ ಆ ಅಸ್ಪಷ್ಟತೆಯೇ ಅದರ ಹೊಳಪನ್ನು ಹೆಚ್ಚಿಸುವುದಕ್ಕೆ ಕಾರಣವಾಯಿತು.

ಗುರುಗಳನ್ನು ಮಧ್ಯಾಹ್ನದ ವಿಶ್ರಾಂತಿಗೆ ಬಿಟ್ಟು ಓಂಕಾರ ಮತ್ತು ಇತರ ಶಿಷ್ಯರು, ಅವರ ಬಳಿಯಿಂದ ಎದ್ದರು. ಲಿಂಗಮ್ಮ ರಾತ್ರಿಯ ಮಂಗಳ ಕಾರ್ಯದ ಸಿದ್ಧತೆಯನ್ನು ಮಾಡತೊಡಗಿದಳು. ಅಕ್ಕಪಕ್ಕದ ಮನೆಯ ಐದು ಜನ ಮುತ್ತೈದೆಯರಿಗೆ ಹೇಳಿಬಂದಳು. ಬೇಕಾದ ಸಾಮಗ್ರಿಗಳನ್ನು ಸಿದ್ಧಗೊಳಿಸತೊಡಗಿದಳು.

"ಮಹಾದೇವಿ ಇನ್ನೂ ಶ್ರೀಶೈಲ ಕ್ಷೇತ್ರದಲ್ಲಿಯೇ ಸಂಚರಿಸುತ್ತಾ, ಗುರುಗಳಿಗೂ ದುರ್ಗಮವಾದ ಕದಳಿಯ ಬನವನ್ನು ಊಹಿಸಿಕೊಳ್ಳುತ್ತಾ ತಾಯಿಯ ಬಳಿಯಲ್ಲಿ ಕುಳಿತಿದ್ದಳು.

೩

ಸಾಯಂಕಾಲವಾಗುತ್ತಿದ್ದ ಹಾಗೆ ಓಂಕಾರ ಶೆಟ್ಟಿಯ ಮನೆಯಲ್ಲಿ ಗುರುಲಿಂಗಸ್ವಾಮಿಗಳ ಭಕ್ತಜನ ಸೇರತೊಡಗಿತು. ಗುರುಗಳು ಶ್ರೀಶೈಲದಿಂದ ಹಿಂದಿರುಗಿರುವರೆಂಬುದನ್ನು ತಿಳಿದು ಮಠಕ್ಕೆ ಅವರನ್ನು ಕಾಣಲು ಹೋದವರು, ಅವರು ಓಂಕಾರನ ಮನೆಯಲ್ಲಿರುವುದನ್ನು ತಿಳಿದು ಅಲ್ಲಿಗೇ ಬರುತ್ತಿದ್ದರು.

ಬಂದವರೆಲ್ಲರೊಡನೆ ಗುರುಗಳು ಪ್ರೀತಿಯಿಂದ ಮಾತನಾಡಿದರು. ಎಲ್ಲರೂ ಅವರ ಯಾತ್ರೆಯ ವಿಷಯವನ್ನು ಕೇಳುವವರೇ. ಅವರೆಲ್ಲರಿಗೂ ಸೂಕ್ತವಾದ

ಮತ್ತು ಸಂಕ್ಷಿಪ್ತವಾದ ಉತ್ತರವನ್ನು ಕೊಡುತ್ತಿದ್ದರು ಗುರುಲಿಂಗರು. ಕೇಳುತ್ತಿದ್ದವರಿಗೂ ಅದು ತೃಪ್ತಿಯನ್ನುಂಟುಮಾಡುತ್ತಿತ್ತು.

ಎಷ್ಟೋ ಹೊತ್ತಿನವರೆಗೆ ಹೀಗೆ ಬರುವ ಹೋಗುವ ಭಕ್ತರ ಸಂಭ್ರಮದಿಂದ ಓಂಕಾರನ ಮನೆಯು ಮಠವೇ ಆಗಿ ಪರಿಣಮಿಸಿತ್ತು.

ಮನೆಯ ಒಳಗೂ ಸ್ತ್ರೀಯರ ಸಂಭ್ರಮ ಪ್ರಾರಂಭವಾಗಿತ್ತು.

ಲಿಂಗಮ್ಮನು ಕರೆದುಬಂದ ಅಕ್ಕಪಕ್ಕದ ಮನೆಯ ಮುತ್ತೈದೆಯರು ಬಂದು ಕೆಲಸದಲ್ಲಿ ಅವಳಿಗೆ ನೆರವಾಗತೊಡಗಿದ್ದರು. ಮನೆ ಸಂಭ್ರಮ ಸಂತೋಷಗಳಿಂದ ನಗುತ್ತಿತ್ತು.

ಇದಕ್ಕೆಲ್ಲ ಕಾರಣಳಾದ ಮಹಾದೇವಿ ಒಳಗೂ ಹೊರಗೂ ನಲಿದಾಡುತ್ತಿದ್ದಳು. ನಾಲ್ಕಾರು ಜನ ಗೆಳತಿಯರನ್ನೂ ಕರೆದುಕೊಂಡು ಬಂದಿದ್ದಳು. ಅವರನ್ನು ಕುಳ್ಳಿರಿಸಿಕೊಂಡು ತಾನು ಕೇಳಿದ್ದ ಶ್ರೀಶೈಲದ ಕಥೆಯನ್ನು ಅವರಿಗೆ ಹೇಳುತ್ತಿದ್ದಳು.

ಓಂಕಾರ ಮಗಳನ್ನು ನೋಡಿದ. ಇಂದಿನ ಸಂತೋಷದಿಂದ ಅವನ ಮನಸ್ಸು ತುಂಬಿಬಂದಿತ್ತು. ಹಿಂದೊಮ್ಮೆ ಇಂಥದೇ ಸಂತೋಷವನ್ನು ಈ ಮಗಳಿಂದಲೇ ತಾನು ಕಂಡುದನ್ನು ನೆನಸಿಕೊಂಡ. ಅದು ಮಹಾದೇವಿ ಹುಟ್ಟಿದ ದಿನ. ಮಕ್ಕಳಿಲ್ಲದ ತಮ್ಮ ಜೀವನದ ಕೊರಗು ತುಂಬಿ ಬಂದ ಸಂತೋಷ ಮತ್ತು ಅನಿರೀಕ್ಷಿತವಾಗಿ ಮಹಾಮಹಿಮ ಮರುಳು ಸಿದ್ಧೇಶ್ವರರು ಆಗಮಿಸಿ ಅವಳಿಗೆ ದೀಕ್ಷೆಯನ್ನು ಮಾಡಿದ ಮಹತ್ವಪೂರ್ಣವಾದ ಸನ್ನಿವೇಶ–ಇವುಗಳನ್ನು ತಿರುವಿಹಾಕತೊಡಗಿತು ಅವನ ಮನಸ್ಸು.

ಅದು ಓಂಕಾರ ಎಂದೆಂದೂ ಮರೆಯಲಾಗದಂತಹ ಘಟನೆ. ಚೊಚ್ಚಲು ಹೆರಿಗೆ; ಅದು ಮದುವೆಯಾದ ಬಹಳ ವರ್ಷಗಳ ಮೇಲೆ. ಅದಕ್ಕಾಗಿ ಓಂಕಾರ ಎಲ್ಲ ಎಚ್ಚರಿಕೆಯ ಕ್ರಮಗಳನ್ನು ಕೈಗೊಂಡಿದ್ದ. ಆದರೆ ಕಣ್ಣುಮುಚ್ಚಿ ತೆರೆಯುವುದರೊಳಗಾಗಿ ಎನ್ನುವಂತೆ ಎಲ್ಲಾ ಸುಗಮವಾಗಿ ನೆರವೇರಿತ್ತು. ಲಿಂಗಮ್ಮ ಹೆಣ್ಣು ಕೂಸಿಗೆ ಜನ್ಮವಿತ್ತಿದ್ದಳು.

ಅನುಭವಿಕರಾದ ತನ್ನ ಹತ್ತಿರದ ಸಂಬಂಧಿ ಮಹಿಳೆಯರನ್ನು ಈ ಮೊದಲೇ ಬರಮಾಡಿಕೊಂಡಿದ್ದ ಮತ್ತು ಇತರ ಕೆಲಸಗಾರರನ್ನು ಯಾವುದಕ್ಕೂ ಕೊರತೆಯಾಗದಂತೆ ನೇಮಿಸಿಕೊಂಡಿದ್ದ. ಅವರೆಲ್ಲಾ ಸಂಭ್ರಮದಿಂದ ಮುಂದಿನ ಸಿದ್ಧತೆಯಲ್ಲಿ ತೊಡಗಿದ್ದರು. ನೆರೆಹೊರೆಯ ಹಿರಿಯ ಮಹಿಳೆಯರೂ ಸಹಾಯವನ್ನಿತ್ತು ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು.

ಓಂಕಾರನಿಗೆ ಗುರುಗಳ ನೆನಪಾಯಿತು. ತನ್ನ ವ್ಯವಹಾರವೋ, ವೇದಾಂತವೋ, ಸುಖವೋ, ದುಃಖವೋ, ಏನನ್ನೇ ಆಗಲಿ ಗುರುಗಳ ಮುಂದೆ ತೋಡಿಕೊಂಡು ಅವರ ಅಭಿಪ್ರಾಯವನ್ನು ಪಡೆದುದಲ್ಲದೆ ಓಂಕಾರನಿಗೆ ಸಮಾಧಾನವಾಗುತ್ತಿರಲಿಲ್ಲ. ಮಗುವಿಲ್ಲದ ಕೊರತೆಯಿಂದ ಕೊರಗುತ್ತಿದ್ದಾಗಲೂ ಮಾರ್ಗದರ್ಶನ ಮಾಡಿದವರು ಅವರು. ಈ ಸಂತೋಷ ಸಮಾಚಾರವನ್ನು ಅವರಿಗೆ ಮೊಟ್ಟಮೊದಲು ತಿಳಿಸಬೇಕಾದುದು ತನ್ನ ಕರ್ತವ್ಯವೆಂದೆನ್ನಿಸಿತು ಈ ಓಂಕಾರನಿಗೆ. ಅಲ್ಲದೆ ಗುರುವಿನ ಪಾದೋದಕವನ್ನು ತಂದು ಸಿಂಪಡಿಸಿ ತಾಯಿ ಮತ್ತು ಮಗುವನ್ನು ಅವರ ಅನುಗ್ರಹದಿಂದ ಪವಿತ್ರರನ್ನಾಗಿ ಮಾಡಬೇಕಾಗಿತ್ತು. ಅದಕ್ಕಾಗಿ ಮಠದ ಕಡೆ ಓಡಿದ ಓಂಕಾರ.

ಗುರುಗಳ ಕೋಣೆಯನ್ನು ಪ್ರವೇಶಿಸಿದ ಓಂಕಾರ ಆಶ್ಚರ್ಯಚಕಿತನಾಗಿ ನಿಂತ. ಗುರುಗಳು ನಿತ್ಯವೂ ಮಂಡಿಸುತ್ತಿದ್ದ ಚಿರಪರಿಚಿತವಾದ ಮಂಚದ ಮೇಲೆ ತೇಜಸ್ವಿಯಾದ ಜಂಗಮಮೂರ್ತಿಯೊಂದು ವಿರಾಜಿಸಿದೆ. ಗುರುಗಳು ಇನ್ನೊಂದು ಪೀಠದ ಮೇಲೆ ಕುಳಿತಿದ್ದಾರೆ. ತಕ್ಷಣವೇ ಏನು ಮಾಡಬೇಕೆಂಬುದೇ ತಿಳಿಯದಂತಾಯಿತು. ಇಬ್ಬರಿಗೂ ನಮಸ್ಕರಿಸಿದ. ಅಷ್ಟರಲ್ಲಿ ಗುರುಗಳು ಅರ್ಥಗರ್ಭಿತವಾದ ದೃಷ್ಟಿಯಿಂದ ಮಂಚದ ಮೇಲಿರುವ ಜಂಗಮಮೂರ್ತಿಯತ್ತ ನೋಡಿ ಹೇಳಿದರು:

"ಇವನೇ ನಾನು ಹೇಳಿದ ಓಂಕಾರಶೆಟ್ಟಿ" ಎಂದು ಅವನನ್ನು ಪರಿಚಯ ಮಾಡಿಕೊಟ್ಟರು ಮತ್ತು ಓಂಕಾರನನ್ನು ಕುರಿತು ಹೇಳಿದರು:

"ಈ ಮಹಾತ್ಮರ ದರ್ಶನವನ್ನು ಪಡೆದು ಧನ್ಯನಾಗು, ಓಂಕಾರ."

ಓಂಕಾರ ಇವರು ಯಾರೆಂಬುದನ್ನು ತಿಳಿದುಕೊಳ್ಳುವ ಕುತೂಹಲವನ್ನು ಸೂಚಿಸುವಂತೆ ಗುರುಗಳನ್ನೇ ನೋಡುತ್ತಿದ್ದ. ಅದನ್ನು ಅರಿತು, ಅವರೇ ಮುಂದು ವರಿಸಿದರು:

"ಇವರು ಮೆಟ್ಟಿದ ಧರೆ ಪಾವನ; ಇವರು ಮುಟ್ಟಿದ ಮನುಜ ಮಹಾದೇವ. ಜನತೆಯ ಆಧ್ಯಾತ್ಮಿಕ ಉದ್ಧಾರಕ್ಕಾಗಿಯೇ ಬದ್ಧಕಂಕಣರಾಗಿ ಹೊರಟಿರುವ ಮಹಾತ್ಮ ಮರುಳುಸಿದ್ದೇಶ್ವರರು ಇವರು."

ಓಂಕಾರನ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಮರುಳುಸಿದ್ಧರ ಮಹತ್ವವನ್ನೂ, ಅವರ ಕರ್ಮಯೋಗದ ರಹಸ್ಯವನ್ನೂ, ಗುರುಲಿಂಗದೇವರ ಬಾಯಿಂದಲೇ ಎಷ್ಟೋ ಸಾರಿ ಕೇಳಿದ್ದ ಓಂಕಾರ. ತನ್ನತನವನ್ನು ಇಲ್ಲಗೈದು ಜನತೆಯ ಉದ್ಧಾರಕ್ಕಾಗಿಯೇ ಅದನ್ನು ಸಂಪೂರ್ಣವಾಗಿ ನಿವೇದಿಸಿರುವ ಅಂತಹ

ಮಹಾಮಹಿಮರ ಅನಿರೀಕ್ಷಿತ ದರ್ಶನದಿಂದ ಏನನ್ನೂ ಮಾತನಾಡಲಾರದವನಾಗಿ ಮತ್ತೊಮ್ಮೆ ಅವರಿಗೆ ನಮಸ್ಕರಿಸಿದ. ಮತ್ತೆ ಗುರುಗಳೇ ಹೇಳಿದರು:

"ನಿನಗೆ ಹೆಣ್ಣುಮಗುವೇ ಆಗುತ್ತದೆಂದು ಅವರು ಮುನ್ಸೂಚನೆಯನ್ನು ನುಡಿಯುತ್ತಿದ್ದಾರೆ. ಈಗ ತಾನೇ ಆ ವಿಷಯವನ್ನು ಮಾತನಾಡುತ್ತಿದ್ದೆವು.

ಆಶ್ಚರ್ಯದಿಂದ ದಿಗ್ಭ್ರಮೆಗೊಂಡು ಮೂಕನಂತಾದರೂ ಹೇಳಿದ ಓಂಕಾರ:

"ಈ ಮಹಾತ್ಮರ ಮಂಗಳಕರವಾದ ಮುನ್ಸೂಚನೆ ಆಗಲೇ ಸತ್ಯವಾಗಿ ಪರಿಣಮಿಸಿದೆ. ಅದನ್ನು ಹೇಳುವುದಕ್ಕಾಗಿಯೇ ತಮ್ಮ ಬಳಿ ಬಂದೆ."

"ಏನು! ಲಿಂಗಮ್ಮ ಹೆಣ್ಣು ಮಗುವನ್ನು ಹೆತ್ತಳೆ?" ಗುರುಗಳು ಕೇಳಿದರು.

"ಹೌದು ಸ್ವಾಮಿ, ಹೆಣ್ಣು ಶಿಶು ಜನಿಸಿತು...."

ಗುರುಗಳು ಮರುಳುಸಿದ್ಧರ ಕಡೆ ಅರ್ಥಗರ್ಭಿತವಾಗಿ ನೋಡಿದರು. ಮರುಳುಸಿದ್ಧರ ಮುಖದ ಮೇಲೆ, ತಮ್ಮ ನಿರೀಕ್ಷೆಯು ಕೈಗೂಡಿದ ವಿಜಯದ ಮಂದಹಾಸ ಮಿನುಗುತ್ತಿತ್ತು.

"....ಅದಕ್ಕಾಗಿ ತಮ್ಮ ಪಾದೋದಕವನ್ನು ತೆಗೆದುಕೊಂಡು ಹೋಗುವುದಕ್ಕಾಗಿ ಬಂದೆ" ಮಾತನ್ನು ಪೂರೈಸಿದ ಓಂಕಾರ,

"ನೀನು ನಿಜವಾಗಿಯೂ ಧನ್ಯ, ಓಂಕಾರ. ಪಾದೋದಕವೇಕೆ? ಮರುಳು ಸಿದ್ಧೇಶ್ವರರೇ ನಿನ್ನ ಮನೆಗೆ ಪಾದವಿಡುವರು. ನಿನ್ನ ಮಗಳಿಗೆ ಲಿಂಗದೀಕ್ಷೆಯನ್ನೀಯುವರು" ಎನ್ನುತ್ತಾ ಮರುಳುಸಿದ್ಧೇಶ್ವರರ ಕಡೆಗೆ ನೋಡಿದರು ಗುರುಲಿಂಗರು.

"ಹೌದು, ಆ ಕಾರಣಿಕ ಶಿಶುವಿಗೆ ದೀಕ್ಷೆಯನ್ನೀಯುವ ಅವಕಾಶ ನನಗೆ ಬಂದದ್ದು ನನ್ನ ಭಾಗ್ಯ."

ಮರುಳುಸಿದ್ಧರಿಂದ ಇಂತಹ ಮಾತುಗಳನ್ನು ಕೇಳಿ ಓಂಕಾರ ತನ್ನ ಕಿವಿಯನ್ನು ತಾನು ನಂಬಲಾರದೇ ಹೋದ. ಅಷ್ಟರಲ್ಲಿ ಮತ್ತೆ ಮರುಳುಸಿದ್ಧರೇ ಕೇಳಿದರು:

"ಇಂದು ಮಧ್ಯಾಹ್ನವೇ ಕಾರ್ಯ ನೆರವೇರಬಹುದಷ್ಟೇ?"

"ಆಗಬಹುದು ಸ್ವಾಮಿ. ನಾನೇ ಬಂದು ತಮ್ಮನ್ನು ಕರೆದೊಯ್ಯುತ್ತೇನೆ" ಎಂದು ಗುರುಲಿಂಗರತ್ತ ನೋಡುತ್ತಾ "ಗುರುಗಳೇ, ತಾವು...." ಎಂದ.

"ಹೌದು, ನಾನೂ ಇವರ ಜೊತೆ ಬರುತ್ತೇನೆ" ಗುರುಗಳು ಹೇಳಿದರು.

"ಇಂದು ನನ್ನ ಭಾಗ್ಯಕ್ಕೆ ಎಣೆಯೇ ಇಲ್ಲ' ಸಂತೋಷದಿಂದ ಉದ್ಗರಿಸಿದ ಓಂಕಾರ.

"ನಿಜ, ಅಂತಹ ಮಗಳನ್ನು ಪಡೆದ ನೀನು ಆ ಮಾತನ್ನು ಹೇಳಿಕೋಳ್ಳುವುದು ಯುಕ್ತವೇ ಆಗಿದೆ" ಮರುಳುಸಿದ್ಧರು ಓಂಕಾರನ ಮಾತನ್ನು ಸಮರ್ಥಿಸಿದರು. ಬೇರೊಂದು ಕಾರಣಕ್ಕಾಗಿ.

ಓಂಕಾರ ಮನೆಗೆ ಓಡಿದ. ಆ ವೇಳೆಗೆ ಮನೆಯ ಕೆಲಸವೆಲ್ಲಾ ಮುಗಿಯುತ್ತಾ ಬಂದಿತ್ತು. ಬಾಣಂತಿಗೆ ನೀರನ್ನು ಹಾಕಿ ಕೋಣೆಯಲ್ಲಿ ಮಲಗಿಸಿದ್ದರು. ಮಗುವಿಗೂ ಎರೆದು ಲಿಂಗಮ್ಮನ ಪಕ್ಕದಲ್ಲಿ, ಹೊರೆಸಿನ ಮೇಲಿಟ್ಟ ಮರದಲ್ಲಿ ಮಲಗಿಸಿದ್ದರು.

ಓಂಕಾರ ವಿಷಯವೆಲ್ಲವನ್ನೂ ಲಿಂಗಮ್ಮನಿಗೆ ತಿಳಿಸಿದ. ಆಕೆಗೆ ತನ್ನ ಆಯಾಸವೆಲ್ಲಾ ಮರೆತುಹೋದಂತಾಯಿತು. ಮುಖ ಸಂತೋಷ ತೃಪ್ತಿಗಳ ಮುಗುಳುನಗೆಯಿಂದ ಮಿಂಚಿತು.

ಮನೆಯಲ್ಲಿ ಎಲ್ಲವೂ ಸಿದ್ಧವಾದೊಡನೆಯೇ ಮಠಕ್ಕೆ ತೆರಳಿದ. ಗುರುಲಿಂಗ ದೇವರು ಮರುಳುಸಿದ್ದೇಶ್ವರರನ್ನು ಮುಂದಿಟ್ಟುಕೊಂಡು ಓಂಕಾರನ ಮನೆಯತ್ತ ನಡೆಯತೊಡಗಿದರು.

ಊರಿನ ಗಣ್ಯವರ್ತಕರಲ್ಲಿ ಕೆಲವರು ಓಂಕಾರನ ಮನೆಯ ಮುಂದೆ ಸೇರಿದ್ದರು. ಎಲ್ಲರ ಸ್ನೇಹ ವಿಶ್ವಾಸ, ಗೌರವಗಳಿಗೆ ಪಾತ್ರನಾಗಿ ಬಾಳಿದವನಲ್ಲವೇ ಓಂಕಾರ ! ಗುರುಗಳಿಬ್ಬರಿಗೂ ಸಂಭ್ರಮದ ಸ್ವಾಗತ ಲಭಿಸಿತು ಆತನ ಮನೆಯ ಮುಂದೆ.

ಅದಕ್ಕಿಂತ ಮಿಗಿಲಾದ ಸಂಭ್ರಮದ ಸನ್ನಿವೇಶ ಒಳಗೆ ಕಾದಿತ್ತು. ವಿಧ್ಯುಕ್ತವಾದ ಕ್ರಿಯೆಗಳೆಲ್ಲಾ ಮುಗಿದ ಮೇಲೆ ರೇಷ್ಮೆ ಬಟ್ಟೆಯ ಮೇಲೆ ಹಾಸಿದ ಮೊರದಲ್ಲಿ ಮಗುವನ್ನು ಮಲಗಿಸಿ ಮರುಳುಸಿದ್ಧರ ಮುಂದೆ ತಂದಿಟ್ಟರು ಮುತ್ತೈದೆಯರು. ಮಗುವಿಗೆ ಮೇಲೊಂದು ರೇಷ್ಮೆಯ ವಸ್ತ್ರ ಹೊದಿಸಿತ್ತು. ಪುಣ್ಯದ ಪುಂಜವೇ ಮೂರ್ತಿಗೊಂಡು ಕಾಂತಿಯಿಂದ ಕಂಗೊಳಿಸುವಂತಿತ್ತು ಮಗು. ಅದಾವ ಜನ್ಮ ಜನ್ಮಾಂತರದ ಸಂಸ್ಕಾರವನ್ನು ನೆನೆದು ಅಂತರ್ಮುಖವಾಗಿದೆಯೋ ಎನ್ನುವಂತೆ ಶಿಶು ಕಣ್ಣುಮುಚ್ಚಿ ಮುಷ್ಟಿಯನ್ನು ಬಿಗಿಯಾಗಿ ಹಿಡಿದು ಮಲಗಿತ್ತು.

ಮರುಳುಸಿದ್ದರು ಎವೆಯಿಕ್ಕದೆ ಮಗುವನ್ನು ದಿಟ್ಟಿಸಿ ನೋಡಿದರು. ಮುಷ್ಟಿ ಹಿಡಿದ ಕೈಗಳನ್ನು ಬಿಚ್ಚಿ ನೋಡಿದರು. ಹಣೆ, ಮುಖ, ಕಾಲು ಎಲ್ಲವನ್ನೂ ಪರೀಕ್ಷಿಸಿದರು. ಅಣುವಿನಲ್ಲಿಯ ರಹಸ್ಯವನ್ನು ಭೇದಿಸುವುದರಲ್ಲಿ ಜಯಶಾಲಿಯಾದ ವಿಜ್ಞಾನಿಯ ಉತ್ಸಾಹದಂತೆ, ಅವರ ಮುಖದಲ್ಲಿ ಕಾಂತಿ ಮಿಂಚಿತು. ಮಗುವಿನ ಮುಚ್ಚಿದ ಕಣ್ಣು ರೆಪ್ಪೆಗಳನ್ನು ಕೈಗಳಿಂದ ಬಿಡಿಸಲು ಯತ್ನಿಸಿದರು. ಮಗು ಅಳಲಾ ರಂಭಿಸಿತು.

"ಅಳಬೇಡ ತಾಯಿ, ಅಳಬೇಡ. ನಿನ್ನ ಲೀಲೆಯನ್ನು ತೋರುವುದಕ್ಕಾಗಿ ಜನ್ಮವೆತ್ತಿದ್ದೀಯ. ಇದೋ ನೋಡು" ಎಂದು ಹೇಳುತ್ತಾ ವಿಭೂತಿಯನ್ನು ಮಗುವಿನ ಪುಟ್ಟ ಹಣೆ, ಕೈ ಲಾಲುಗಳಿಗೆಲ್ಲಾ ಧರಿಸತೊಡಗಿದರು. ಮಗು ಅಳುವುದನ್ನು ನಿಲ್ಲಿಸಿ ಮಂತ್ರ ಮುಗ್ಧವಾದಂತೆ ಮರುಳುಸಿದ್ಧರನ್ನೇ ನೋಡುತ್ತಿತ್ತು. ಬಟ್ಟೆಯಲ್ಲಿ ಕಟ್ಟಿ ಮೊದಲೇ ಸಿದ್ಧಪಡಿಸಿ ಇಟ್ಟುಕೊಂಡಿದ್ದ ಮಗುವಿನ ಇಷ್ಟಲಿಂಗವನ್ನು ಅವಳ ಹಣೆಗೆ ಮುಟ್ಟಿಸಿದರು. ಅದನ್ನು ಮಗುವಿಗೆ ಧರಿಸಿ ಕಿವಿಯಲ್ಲಿ ಮಂತ್ರೋಚ್ಚಾರಮಾಡಿದರು.

ಎಲ್ಲರೂ ಈ ದೃಶ್ಯವನ್ನು ಎವೆಯಿಕ್ಕದೇ ನೋಡುತ್ತಿದ್ದರು.

ಅನಂತರ ಮರುಳುಸಿದ್ದರು ತಲೆಯೆತ್ತಿ ಓಂಕಾರನತ್ತ ತಿರುಗಿ:

"ಮಗಳಿಗೆ ಏನು ಹೆಸರಿಡಬೇಕೆಂದು ಆಲೋಚಿಸಿದ್ದೀರಿ?"

ಓಂಕಾರ ಅದನ್ನೇನೂ ಆಲೋಚನೆ ಮಾಡಿರಲಿಲ್ಲ. ಏನ್ನನ್ನೂ ಹೇಳಲಾರದೆ ಒಮ್ಮೆ ಗುರುಲಿಂಗರತ್ತ, ಒಮ್ಮೆ ಅತ್ತಿತ್ತ ನೋಡತೊಡಗಿದ. ಎಲ್ಲರ ಆಲೋಚನೆಯೂ ಆ ದಿಕ್ಕಿಗೇ ತಿರುಗಿತು. ಆದರೆ ಮರುಳುಸಿದ್ದರೇ ಆ ಸಮಸ್ಯೆಯನ್ನು ಪರಿಹರಿಸಿದರು.

"ಸಾಕ್ಷಾತ್ ಮಹಾದೇವಿಯ ಸಾತ್ವಿಕ ಕಳೆಯೇ ಈ ರೂಪದಿಂದ ಜನ್ಮವೆತ್ತಿದೆಯೆಂದು ಭಾವಿಸಿರಿ. ಆದ್ದರಿಂದ ಈ ಶಿಶುವಿಗೆ ಮಹಾದೇವಿ ಎಂದೇ ನಾಮಕರಣ ಮಾಡಬಹುದು. ಅಥವಾ ನಿಮ್ಮದೇನಾದರೂ ಬೇರೆ..."

"ಇಲ್ಲ... ಇಲ್ಲ ಗುರುಗಳೇ..." ಮಧ್ಯದಲ್ಲಿಯೇ ಹೇಳಿದ ಓಂಕಾರ: "ತಮ್ಮ ವಾಕ್ಯವೇ ಮಹಾಪ್ರಸಾದ. ಅದೇ ಆ ಮಗುವಿಗೆ ಆಶೀರ್ವಾದವಾಗಿ ಪರಿಣಮಿಸಲಿ. ನಾಮಕರಣದ ಶುಭಕಾರ್ಯವನ್ನು ತಾವೇ ಮುಗಿಸಿಬಿಡಿ."

ಮರುಳುಸಿದ್ಧರು 'ಮಹಾದೇವಿ' ಎಂಬ ಹೆಸರನ್ನು ಅಧಿಕೃತವಾಗಿ ಕರೆದು, ಅವಳ ಕಿವಿಯಲ್ಲಿ ಅದನ್ನು ಉದ್ಘೋಷಿಸಿದರು.

ಮಗುವನ್ನೆತ್ತಿ ತಾಯಿಯ ಬಳಿಗೆ ಒಯ್ಯಲಾಯಿತು. ಮರುಳುಸಿದ್ಧರೂ ಎದ್ದು ಲಿಂಗಮ್ಮನ ಹೊರಸಿನ ಬಳಿಗೆ ಬಂದರು. ಲಿಂಗಮ್ಮ ತಟ್ಟನೆ ಏಳಲು ಪ್ರಯತ್ನಿಸಿದಳು.

"ಬೇಡ ತಾಯಿ, ಬೇಡ, ಆಯಾಸಪಟ್ಟುಕೊಳ್ಳಬೇಡ." ಅವಳನ್ನು ಸಂತೈಸುತ್ತಾ ಹೇಳಿದರು ಮರುಳುಸಿದ್ಧರು. "ಅಮೂಲ್ಯವಾದ ಪುತ್ರೀರತ್ನವನ್ನು ಪಡೆದಿದ್ದೀಯ, ತಾಯಿ. ಅದನ್ನು ಯೋಗ್ಯವಾದ ರೀತಿಯಲ್ಲಿ ಬೆಳೆಸು. ಮಹಾದೇವಿ, ಹೆಣ್ಣುತನದ ಮಹಾಸಾಧನೆಯ ಸಂಕೇತಮೂರ್ತಿಯಾಗಿ ಉಳಿಯುವಂತಾಗಲಿ. ಅಂತಹ ಮಗಳನ್ನು ಪಡೆದ ಭಾಗ್ಯ ನಿನ್ನದಾಗಲಿ" ಎಂದು ಆಶೀರ್ವದಿಸಿ ಮತ್ತೊಮ್ಮೆ

ಶಿಶುವನ್ನು ಕಣ್ಣು ತುಂಬಾ ನೋಡಿ ಅಲ್ಲಿಂದ ಹೊರಟರು.

ಈ ಹಿಂದಿನ ಚಿತ್ರವೆಲ್ಲವೂ ಇಂದು ಓಂಕಾರನ ಮನಸ್ಸಿನ ಮುಂದೆ ಸುಳಿಯಿತು.

'ಅಂದು ಹೇಗೆ ಮರುಳುಸಿದ್ಧೇಶ್ವರರು ಅನಿರೀಕ್ಷಿತವಾಗಿ, ಆದರೂ ಇದೇ ಉದ್ದೇಶಕ್ಕಾಗಿಯೇ ಎಂಬಂತೆ, ಬಂದು ಅನುಗ್ರಹಿಸಿದ್ದರೋ ಅಂತೆಯೇ ಇಂದು ಗುರುಲಿಂಗದೇವರು ಶ್ರೀಶೈಲದಿಂದ ಬಂದೊಡನೆಯೇ ತಾವಾಗಿಯೇ ಬಂದು ಇಷ್ಟಲಿಂಗ ಸಂಬಂಧನ್ನೀಯಲು ಉದ್ಯುಕ್ತರಾಗಿದ್ದಾರೆ. ನನ್ನ ಮಗಳ ಭಾಗ್ಯ ಬಹಳ ದೊಡ್ಡದು'. ಯೋಚಿಸುತ್ತಿದ್ದಂತೆಯೇ ಅಂದು ಮರುಳುಸಿದ್ಧರು ಹೇಳಿದ ಮಾತು, ಮತ್ತೆ ಮತ್ತೆ ಕಿವಿಯಲ್ಲಿ ಮೊರೆಯಿತು:

"ಹೆಣ್ಣುತನದ ಮಹಾಸಾಧನೆಯ ಸಂಕೇತ ಈಕೆ."

'ಆದಾವ ಮಹಾಸಾಧನೆಯನ್ನು ದೈವಶಕ್ತಿ ಇವಳ ಮೂಲಕ ನೆರವೇರಿಸಿ ಕೊಳ್ಳುತ್ತದೆಯೋ'–ಎಂದು ಆಲೋಚಿಸುತ್ತಾ, ತನ್ನ ಗೆಳತಿಯರಿಗೆ ಶ್ರೀಶೈಲವನ್ನು ವರ್ಣಿಸುವುದರಲ್ಲಿ ತನ್ಮಯಳಾಗಿದ್ದ ಮಹಾದೇವಿಯನ್ನು ನೋಡಿದ ಓಂಕಾರ.

ತನ್ನ ಹಾಗೆಯೇ ಗುರುಗಳಿಗೂ ಆ ದಿನದ ಘಟನೆ ಮನಸ್ಸಿನಲ್ಲಿ ಸುಳಿದಿದ್ದಿ ತೆಂಬುದು ಸಂಜೆ ಅವರು ಮಾತನಾಡುವಾಗ ತಿಳಿಯಿತು.

"ಆ ದಿನದ ಜ್ಞಾಪಕವಿದೆಯೇ ಓಂಕಾರ, ಮರುಳುಸಿದ್ಧರು ಬಂದು ಹೋದ ದಿನ?" ಕೇಳಿದರು ಗುರುಗಳು.

"ಅದನ್ನು ಮರೆಯುವೆನೇ, ಗುರುಗಳೇ!" ಎಂದು ಓಂಕಾರ ಕ್ಷಣಕಾಲ ಬಿಟ್ಟು ಮತ್ತೆ ಹೇಳಿದ: "ಆ ದಿನದಷ್ಟೇ ಅಚ್ಚರಿ ಸಂತೋಷಗಳು ಈ ದಿನವೂ ನನಗೆ ಉಂಟಾಗಿವೆ. ಶ್ರೀಶೈಲದಿಂದ ಬಂದೊಡನೆ ತಾವು ಅನಿರೀಕ್ಷಿತವಾಗಿ ದೀಕ್ಷಾಕಾರ್ಯವನ್ನು ಕೈಕೊಂಡಿದ್ದು..."

"ಇದಕ್ಕೂ ಮರುಳುಸಿದ್ಧರೇ ಕಾರಣರು ಅಥವಾ ಮಲ್ಲಿಕಾರ್ಜುನನೇ ಆ ರೂಪಿನಲ್ಲಿ ಬಂದು ನುಡಿದನೋ ತಿಳಿಯದು. ಶ್ರೀಶೈಲದಲ್ಲಿರುವಾಗ ಒಂದು ಅಲೌಕಿಕವಾದ ಅನುಭವ ನನಗೆ ಉಂಟಾಯಿತು...."

ಕುತೂಹಲವೇ ಮೈಯಾಗಿ ಕುಳಿತ ಓಂಕಾರ. ಮತ್ತೆ ಗುರುಗಳೇ ಮುಂದು ವರಿಸಿದರು:

"ಒಂದು ದಿನ ಮಧ್ಯಾಹ್ನ ಶ್ರೀಶೈಲದಲ್ಲಿ, ದೇವಾಲಯದ ಆವರಣದ ನೆರಳಿನಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿದ್ದೆ. ಹಾಗೇ ಜೊಂಪುಹತ್ತಿತೋ ಏನೋ, ಇದ್ದಕ್ಕಿದ್ದಂತೆಯೇ ಮರುಳುಸಿದ್ಧರು ದೇವಾಲಯದ ಮಹಾದ್ವಾರವನ್ನು ಪ್ರವೇಶಿಸಿ

ಒಳಗೆ ಬರುತ್ತಿರುವುದು ಕಾಣಿಸಿತು. ಅನಿರೀಕ್ಷಿತವಾದ ಅವರ ಆಗಮನದಿಂದ ಆಶ್ಚರ್ಯಗೊಂಡು ಸ್ವಾಗತಿಸುತ್ತಿರುವಷ್ಟರಲ್ಲಿ, ಅವರೇ ಒಳಗೆ ಅಂದು ಕುಳಿತುಕೊಳ್ಳುತ್ತಾ ಹೇಳಿದರು:

'ಶ್ರೀಶೈಲಕ್ಷೇತ್ರ ದರ್ಶನವೆಲ್ಲಾ ಆದಂತಾಯಿತಲ್ಲವೇ?'

'ಹೌದು ಸ್ವಾಮಿ, ಆದರೆ ತಾವು ಇಲ್ಲಿಗೆ ಬಂದುದು....'

'ನಮ್ಮದೇನು?.... ಹೀಗೇ ನಡೆದಿರುತ್ತದೆ.... ಈಗ ಇಲ್ಲಿಗೆ ಬಂದುದೇಕೆ ಎಂಬುದು ಗೊತ್ತೇ?'

ಅರಿಯೆನೆಂಬಂತೆ ತಲೆಯಾಡಿಸಿದೆ. ಅವರೇ ಮತ್ತೆ ಹೇಳತೊಡಗಿದರು:

'ಅಂದು ನಾನು ದೀಕ್ಷೆಯನ್ನಿತ್ತ ಶಿಶು ಮಹಾದೇವಿ....'

'ಹೌದು.... ಆ ಪುಣ್ಯದ ಪ್ರಭಾವದಿಂದ ಆಕೆ ಪ್ರವರ್ಧಮಾನಳಾಗುತ್ತಿದ್ದಾಳೆ.' ನಾನು ಹೇಳಿದೆ.

'ಈಗ ಆಕೆಗೆ ಜ್ಞಾನದೀಕ್ಷೆಯಾಗಬೇಕು. ಮಲ್ಲಿಕಾರ್ಜುನನ ಅರುಹಿನ ಕುರುಹನ್ನು ಅವಳ ಕರಸ್ಥಲಕ್ಕೆ ಕೊಡಿ. ಅವಳನ್ನು ಶರಣ ಸತಿಯನ್ನಾಗಿ ಮಾಡಿರಿ. ಮಲ್ಲಿಕಾರ್ಜುನನಿಗೆ ಮಾತ್ರ ಮೀಸಲಾದ ಆಧ್ಯಾತ್ಮಿಕ ವಧು, ಆ ಮಹಾದೇವಿ.... ಏಳಿರಿ.... ನೀವು ಹೋದೊಡನೆಯೇ ಆ ಕರ್ತವ್ಯವನ್ನು ನಿರ್ವಹಿಸಬೇಕು. ಇನ್ನೊಂದು ಮಾತು. ಬಸವಣ್ಣನ ಕಲ್ಯಾಣ ಪಟ್ಟಣದ ಮೂಲಕ ಉಡುತಡಿಯನ್ನು ಸೇರಿರಿ. ಕಲ್ಯಾಣದಲ್ಲಿ ನೀವು ಕಾಣುವ ಶರಣಮಾರ್ಗದ ರಹಸ್ಯವನ್ನು ಮಹಾದೇವಿಗೂ ನಿರೂಪಿಸಿರಿ.'

ಈ ಮಾತುಗಳನ್ನು ಅರಗಿಸಿಕೊಂಡು ನಾನೇನನ್ನೋ ಕೇಳಬೇಕೆನ್ನುತ್ತಿರುವಷ್ಟರಲ್ಲಿ, ಹಾಗಾದರೆ ನಾನು ಬರುತ್ತೇನೆ.... ಮರೆಯಬೇಡಿ....' ಎಂದು ಹೇಳುತ್ತಾ ಎದ್ದು ಮಲ್ಲಿಕಾರ್ಜುನನ ಗರ್ಭಗೃಹದತ್ತ ನಡೆಯತೊಡಗಿದರು, ಗರ್ಭಗೃಹವನ್ನು ಹೋಗುತ್ತಿದ್ದಂತೆಯೇ ಅವರ ದಿವ್ಯವಿಗ್ರಹ ಕರಗಿ ಮರೆಯಾದಂತಾಯಿತು. ತಟಕ್ಕನೆ ಕಣ್ಣುಬಿಟ್ಟೆ, ಕಂಡುದು ಕನಸಲ್ಲ; ಕನಸಿನಾಚೆಯ ದಿವ್ಯ ಮನಸ್ಸಿನ ನುಡಿ ಎಂದೆನಿಸಿ ಮೈ ಪುಳಕಿತವಾಯಿತು. ಅದಾದ ಒಂದೆರಡು ದಿನಗಳಲ್ಲೇ ಶ್ರೀಶೈಲವನ್ನು ಬಿಟ್ಟೆ.

"ಗುರುಗಳ ಮಾತಿನಂತೆ ಕಲ್ಯಾಣಕ್ಕೆ ಹೋಗಿ, ಅಲ್ಲಿ ಕೆಲವು ದಿನಗಳಿದ್ದು ಇಲ್ಲಿಗೆ ಬಂದಿದ್ದೇನೆ. ಅವರು ಕಲ್ಯಾಣದತ್ತ ನನ್ನನ್ನು ಏಕೆ ನಿರ್ದೇಶಿಸಿದರೆಂಬುದು ಅಲ್ಲಿಗೆ ಕಾಲಿಟ್ಟ ಕ್ಷಣದಿಂದಲೇ ಅನುಭವಕ್ಕೆ ಬರತೊಡಗಿತು. ಅದನ್ನು ಹೇಳುವುದಕ್ಕೆ ಈಗ ನಾನು ತೊಡಗುವುದಿಲ್ಲ. ಅಂತೂ ಮಹಾದೇವಿ ಕಾರಣಿಕ ಕನ್ಯೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡಿರು."

ಇದನ್ನೇ ಮನಸ್ಸಿನಲ್ಲಿ ತಿರುವಿ ಹಾಕುತ್ತಾ ಓಂಕಾರ ಮುಂದಿನ ಕೆಲಸದಲ್ಲಿ ನಿರತನಾದ.

೪

ಸಂಜೆ ಕಳೆದು ರಾತ್ರಿಯಾಗತೊಡಗಿತ್ತು. ಸಿದ್ಧತೆಯೆಲ್ಲಾ ಆಗಲೇ ಬಹುಪಾಲು ಮುಗಿದಿತ್ತು. ಗುರುಪಾದಪ್ಪನೇ ಮುಂದೆ ನಿಂತು ಎಲ್ಲ ಸಿದ್ಧತೆಗಳನ್ನು ಹೇಳಿ ಹೇಳಿ ಮಾಡಿಸುತ್ತಿದ್ದ. ಪೂಜಾಗೃಹ ಅಲಂಕಾರಗೊಂಡು ಅಪೂರ್ವವಾದ ಶೋಭೆಯನ್ನು ಬೀರುತ್ತಿತ್ತು. ಪೂಜಾಸಾಮಗ್ರಿಗಳೆಲ್ಲಾ ಸಿದ್ಧವಾಗಿದ್ದುವು. ದೀಕ್ಷೆಗೂ ಎಲ್ಲ ಅಣಿಯಾಗಿತ್ತು.

ಅಡುಗೆಮನೆಯಿಂದಲೂ ಬಾಯಲ್ಲಿ ನೀರೂರುವಂತಹ ರುಚಿಕರವಾದ ಕಂಪು ಹೊರಸೂಸುತ್ತಿತ್ತು. ಇಲ್ಲಿ ಮಾತ್ರ ಗುರುಪಾದಪ್ಪನ ಆಜ್ಞೆ ನಡೆಯುವಂತಿರಲಿಲ್ಲ. ಅವನ ಆಜ್ಞೆಗೆ ಹೊರತಾಗಿದ್ದ ವಲಯ ಅದು. ಅಲ್ಲಿ ಮಹಿಳೆಯರ ಮಾತಿಗೆ ಕೊನೆಯಿಲ್ಲ. ಅವರ ಇಷ್ಟವೇ ಅಲ್ಲಿ ನಡೆಯುವುದು.

ಗುರುಗಳು ಸ್ನಾನವನ್ನು ಮಾಡಿ ಪೂಜಾಗೃಹವನ್ನು ಸೇರಿದರು. ಅವರ ಪೂಜೆ ಮುಗಿಯುವ ವೇಳೆಗೆ ಪಂಚ ಮುತ್ತೈದೆಯರು ಮಹಾದೇವಿಗೂ ಮಂಗಳ ಸ್ನಾನವನ್ನು ಮಾಡಿಸಿದ್ದರು. ವಿಧ್ಯುಕ್ತವಾಗಿ ಕಾರ್ಯಗಳೆಲ್ಲಾ ನೆರವೇರಿದುವು. ಅದರಲ್ಲಿ ಕೊನೆಯದು ಮತ್ತು ಬಹಳ ಪ್ರಮುಖವಾದ ಅಂಶವೆಂದರೆ, ಮಂತ್ರೋಪದೇಶವನ್ನು ಮಾಡಿ ಇಷ್ಟಲಿಂಗವನ್ನು ಅನುಗ್ರಹಿಸುವುದು.

ಕಾವಿಯ ವಸ್ತ್ರದಲ್ಲಿ ಕಟ್ಟಿದ್ದ ಇಷ್ಟಲಿಂಗವನ್ನು ಗುರುಗಳು ಬಿಚ್ಚಿದರು. ಲಿಂಗದ ಮೇಲೆ ಹಾಕಿದ್ದ ಗೋಳಾಕಾರವಾದ ಕಪ್ಪು ಕಂಥೆ, ನಂದಾದೀಪಗಳ ಬೆಳಕಿನಲ್ಲಿ ಥಳಥಳನೆ ಹೊಳೆಯುತ್ತಿತ್ತು. ಅದನ್ನು ತೋರಿಸುತ್ತಾ ಹೇಳಿದರು ಗುರುಗಳು:

"ನೋಡು ಮಹಾದೇವಿ, ಇದು ಭಕ್ತನ ಸರ್ವ ಇಷ್ಟಾರ್ಥಗಳನ್ನು ನೆರವೇರಿಸುವ ಇಷ್ಟಲಿಂಗ. ಉಪಾಸನೆಯ ಅತ್ಯುನ್ನತವಾದ ಕಲ್ಪನೆ ಈ ಇಷ್ಟಲಿಂಗದಲ್ಲಿ ಕಾಣುತ್ತದೆ. ಈ ಕಪ್ಪು ಕಂಥೆ ಹೇಗೆ ಹೊಳೆಯುತ್ತಿದೆ ನೋಡು. ಇದರಲ್ಲಿ ನಿನ್ನ ಪ್ರತಿಬಿಂಬವೇ ಕಾಣುತ್ತಿದೆ. ನಮ್ಮತನದ ನಿಜಸ್ವರೂಪವನ್ನು ಕಾಣುವ ಕನ್ನಡಿಯಂತೆ ಈ ಲಿಂಗ. ಈ ಹೊರಗಡೆಯ ಕಂಥೆ ವಿಶ್ವದಾಕಾರವಾಗಿದೆ. ಇದರ ಒಳಗಡೆ ನಿನ್ನ ಹುಟ್ಟು ಲಿಂಗವಿದೆ. ಆ ಹುಟ್ಟು ಲಿಂಗ ಜೀವಾತ್ಮ ಸ್ವರೂಪ; ಈ ಕಂಥೆ ವಿಶ್ವಾತ್ಮರೂಪ. ವಿಶ್ವಾತ್ಮನಲ್ಲಿ ಜೀವಾತ್ಮನು ಅಡಗಿದ್ದಾನೆನ್ನುವ ಸತ್ಯದರ್ಶನಕ್ಕೆ ಈ

ಲಿಂಗ ಒಂದು ಕುರುಹು. ಇದನ್ನು ಪೂಜಿಸುವುದೆಂದರೆ ವಿಶ್ವಾತ್ಮನ ಒಳಗಿರುವ ಜೀವಾತ್ಮ, ತನ್ನ ಸ್ವರೂಪವನ್ನರಿತು ವಿಶ್ವಾತ್ಮನಾಗುವ ಹಂಬಲಿಕೆ. ಇದನ್ನು ಗುರು ಚಿತ್ಕಳೆಯಿಂದ ತುಂಬಿ ಚೈತನ್ಯದಾಯಕವಾದ ದಿವ್ಯಶಕ್ತಿಯನ್ನಾಗಿ ಮಾಡಿ ಶಿಷ್ಯನ ಕರಸ್ಥಳಕ್ಕೆ ನೀಡುತ್ತಾನೆ. ಆದುದರಿಂದಲೇ ಇದು ಮೂರ್ತಿಪೂಜೆಯಲ್ಲ; ಸ್ವಾತ್ಮಸ್ವರೂಪ ಪೂಜೆ. ಈ ಕುರುಹನ್ನು ಹಿಡಿದು ಅರುಹನ್ನು ಅರಿಯಬೇಕು. ಈ ಮಾರ್ಗದಲ್ಲಿ ಮುಂದುವರಿದಂತೆ ಈ ತತ್ತ್ವದ ರಹಸ್ಯವನ್ನು ನೀನೇ ಅರಿತುಕೊಳ್ಳುತ್ತೀಯ ಏಕೈಕನಿಷ್ಠೆಯಿಂದ ಇದನ್ನು ನೀನು ಪೂಜಿಸು' ಎಂದು ಅದನ್ನು ಮಹಾದೇವಿಯ ಕರಸ್ಥಲದಲ್ಲಿಟ್ಟು, ಪೂಜೆ ಮಾಡುವ ವಿಧಾನವನ್ನು ತೋರಿಸಿದರು. ಲಿಂಗದಲ್ಲಿಯೆ ನೆಟ್ಟದೃಷ್ಟಿಯನ್ನಿಟ್ಟು ಮಾಡುವ ಶಿವಯೋಗವನ್ನು ಬೋಧಿಸಿದರು. ಪಂಚಾಕ್ಷರೀ ಮಂತ್ರ ರಹಸ್ಯವನ್ನು ಅರುಹಿದರು.

ಎಲ್ಲವನ್ನೂ ಮಹಾದೇವಿ ಏಕಾಗ್ರಚಿತ್ತದಿಂದ ಕೇಳುತ್ತಿದ್ದಳು. ಅವರ ಒಂದೊಂದು ಮಾತೂ ಬಿಂಬಗ್ರಾಹಕದಂತೆ ಅವಳ ಅಂತರಗದಲ್ಲಿ ಅಚ್ಚೊತ್ತಿದಂತಾಗುತ್ತಿತ್ತು. ಕೊನೆಯಲ್ಲಿ ಗುರುಗಳು ಹೇಳಿದರು:

"ಇನ್ನು ನೀನು ಪುನರ್ಜಾತಳಾದೆ. ನರಜನ್ಮವನ್ನು ದಾಟಿ, ಹರಜನ್ಮವನ್ನು ಪಡೆದೆ. ಮರವೆಯ ಜನ್ಮದಿಂದ ಎಚ್ಚತ್ತು. ಹರನ ಸ್ವರೂಪವನ್ನರಿತು ಹರನೇತಾನಾಗಿ ಪರಿಣಮಿಸುವುದೇ ಈ ಪೂಜೆಯು ತಂದುಕೊಡುವ ಪರಮ ಸಿದ್ಧಿ. ಶ್ರೀಶೈಲದ ಮಲ್ಲಿಕಾರ್ಜುನನೇ ನಿನ್ನ ಪತಿಯಾಗಿ ನಿನ್ನ ಕರಸ್ಥಲಕ್ಕೆ ಬಂದಿದ್ದಾನೆ. ಮಲ್ಲಿಕಾರ್ಜುನ ಎಲ್ಲರ ಪತಿ. ಭಕ್ತರೆಲ್ಲರೂ ಆತನ ಸತಿಯರು. ಶರಣ ಸತಿ, ಲಿಂಗಪತಿ–ಎಂಬ ಭಾವವೇ ಶರಣಮಾರ್ಗದ ರಹಸ್ಯ. ಶ್ರೀಶೈಲದ ಮಲ್ಲಿಕಾರ್ಜುನ ನಿನ್ನ ಹೃದಯಪ್ರಿಯನಾದ ಚೆನ್ನಮಲ್ಲಿಕಾರ್ಜುನನಾಗಲಿ. ಚೆನ್ನಮಲ್ಲಿಕಾರ್ಜುನನ ಚೆನ್ನಸತಿಯಾಗಿ ಅವನಲ್ಲಿ ಸಾಮರಸ್ಯಸುಖವನ್ನು ಪಡೆಯುವ ಮಾರ್ಗಕ್ಕೆ ಇದು ನಿನ್ನನ್ನು ಕೊಂಡೊಯ್ಯಲಿ."

ಈ ಮಾತುಗಳಿಂದ ಮಹಾದೇವಿಯ ಎಳೆಯ ಚೈತನ್ಯದಲ್ಲಿ ಮಿಂಚಿನ ಹೊಳೆ ತುಳುಕಾಡಿದಂತಾಯಿತು. ಅವಳ ಆನಂದಬಾಷ್ಪಗಳೇ ಅವಳ ಮಂಗಳಕರವಾದ ಈ ಮದುವೆಗೆ ಧಾರೋಧಕವಾಗಿ ಪರಿಣಮಿಸಿದುವು.

ಬಂದ ಅತಿಥಿಗಳಿಗೆ ದೀಕ್ಷೆಯ ನಂತರ ಊಟ–ಉಪಚಾರಗಳು ಸಂಭ್ರಮದಿಂದ ನಡೆದುವು. ಕೇವಲ ಕೆಲವು ಪ್ರಮುಖರಿಗೆ ಮಾತ್ರ ಓಂಕಾರ ಆಹ್ವಾನವನ್ನು ಕೊಟ್ಟಿದ್ದ. ಊರಿನ ಪ್ರಮುಖ ರತ್ನಪಡಿ ವ್ಯಾಪಾರಿಗಳಾದ ಮಹಾದೇವ ಶೆಟ್ಟರೂ ಬಂದಿದ್ದರು. ನಾಗಭೂಷಣಶರ್ಮ, ಶಂಕರ ಆರಾಧ್ಯ, ಶಂಭು ಶಾಸ್ತ್ರಿ

ಮೊದಲಾದವರಲ್ಲದೆ, ಮಠದಿಂದ ಶಾಲೆಯ ಗುರುಗಳಾದ ಶಿವಯ್ಯ, ಮಲ್ಲಯ್ಯನವರೂ ಬಂದಿದ್ದರು. ಗುರುಪಾದಪ್ಪನಂತೂ ಇಲ್ಲಿಯ ವ್ಯವಸ್ಥೆಗೆ ತಾನೇ ನಿಂತಿದ್ದ.

ಊಟ ಮಾಡುತ್ತಿರುವಾಗ ನಾಗಭೂಷಣಶರ್ಮನಿಗೆ ಸ್ವಲ್ಪತಮಾಷೆ ಮಾಡಬೇಕೆನ್ನಿಸಿತು. ವೃತ್ತಿಯಲ್ಲಿ ಆತ ಪುರೋಹಿತ. ಸ್ವಲ್ಪ ಜಮೀನನ್ನು ಸಾಗುವಳಿ ಮಾಡಿಸಿಕೊಂಡು ನೆಮ್ಮದಿಯಾಗಿದ್ದ. ಓಂಕಾರನ ಪಕ್ಕದ ಮನೆಯೇ ಆತನದು. ಎಷ್ಟೋ ಸಾರಿ ಮಹಾದೇವಿಯನ್ನು ಎತ್ತಿ ಆಡಿಸಿದವನು, ಹೀಗಾಗಿ ಆಕೆಯೊಡನೆ ಆತನ ಸಲಿಗೆ ಹೆಚ್ಚು. ಆದುದರಿಂದ ತುಪ್ಪ ನೀಡಲು ಬಂದ ಮಹಾದೇವಿಯನ್ನು ಕುರಿತು:

"ತುಪ್ಪ ಸ್ವಲ್ಪ ಹೆಚ್ಚಾಗಿ ಹಾಕಮ್ಮ. ಇನ್ನೇನು ಅಬ್ಬಾ ಎಂದರೆ ನಿನ್ನಿಂದ ಇಂತಹ ಊಟ ಇನ್ನೊಂದು ಸಿಕ್ಕಬಹುದು ಅಷ್ಟೆ" ಎಂದ.

"ಅದ್ಯಾವುದು ಶರ್ಮರೇ ಆಗಲೇ ಇನ್ನೊಂದು ಊಟಕ್ಕೆ ಪೀಠಿಕೆ ಹಾಕುತ್ತಿದ್ದೀರಿ?" ಕೇಳಿದನು ಶಂಕರ ಆರಾಧ್ಯ. ಊರಿಗೆ ಪ್ರಮುಖವಾದ ಆತನ ದಿನಸಿ ಅಂಗಡಿಯಿದ್ದುದು ಪೇಟೆಯ ಬೀದಿಯಲ್ಲಾದರೂ ಅವನ ಮನೆಯು ಓಂಕಾರನ ಮನೆಯ ಸಮೀಪದಲ್ಲಿಯೇ.

"ಇನ್ನೇನು! ಶರ್ಮರು ಪುರೋಹಿತರಲ್ಲವೇ?" ವಿಷಯವೇನಿರಬಹುದೆಂದು ಸೂಚಿಸಿದರು ಶಂಭುಶಾಸ್ತ್ರಿಗಳು. ಊರಲ್ಲೆಲ್ಲಾ ಒಳ್ಳೇ ಶಿವಕಥಾ ಪ್ರವೀಣರೆಂದೂ, ವಿದ್ವಾಂಸರೆಂದೂ ಹೆಸರಾದವರು ಅವರು.

"ಓಹೋ? ಹಾಗಾದರೆ ಮಹಾದೇವಿಯ ಮದುವೆಯ ಊಟವನ್ನು ನಿರೀಕ್ಷಿಸುತ್ತಿದ್ದಾರೋ ಶರ್ಮರು! ಆ ಊಟ ಯಾವಾಗ ಬರುತ್ತದೋ?" ಕೇಳಿದರು ನಗುತ್ತಾ ರತ್ನಪಡಿ ವ್ಯಾಪಾರಿ ಮಹಾದೇವಶೆಟ್ಟರು. ಆ ನಗುವಿನಲ್ಲಿ ಎಲ್ಲರೂ ಒಡಗೂಡಿದರು. ಮತ್ತೆ ಶರ್ಮರೇ.

"ನೋಡಿದೇನಮ್ಮ, ನಿನ್ನ ಮದುವೆಯ ಊಟ ಯಾವಾಗ ಎನ್ನುತ್ತಿದ್ದಾರೆ ಶೆಟ್ಟರು. ಹೇಳಮ್ಮ ಹೇಳು. ಯಾವಾಗ ನಿನ್ನ ಮದುವೆಯ ಊಟ?" ಸ್ವಲ್ಪ ಕೀಟಲೆ ಮಾಡಬೇಕೆಂದೇ ಕೇಳಿದರು.

ಈ ವೇಳೆಗೆ ಮಹಾದೇವಿ ಎಲ್ಲರಿಗೂ ತುಪ್ಪ ಬಡಿಸಿ ಮುಗಿದಿತ್ತು. ಒಳಗೆ ಹೋಗುತ್ತಿದ್ದವಳು ಗಕ್ಕನೆ ನಿಂತಳು.

"ಏನಂದಿರಿ? ಮದುವೆಯ ಊಟವೇ? ಈಗ ಆಗುತ್ತಿರುವುದೇ ನನ್ನ ಮದುವೆಯ ಊಟ. ಗುರುಗಳು ಹೇಳಿದುದು ಕೇಳಲಿಲ್ಲವೇ! ಚೆನ್ನಮಲ್ಲಿಕಾರ್ಜುನನೇ

ಪತಿ, ನಾನೇ ಸತಿ. ಇದೇ ಮದುವೆ. ಇದಲ್ಲದೆ ಇನ್ನೆಂತಹ ಮದುವೆ?" ದಿಟ್ಟತನವಿತ್ತು ಮಹಾದೇವಿಯ ಮಾತಿನಲ್ಲಿ. ಮುಂಬರುವ ಗಂಡವನ್ನು ನೆನೆದು ನಾಚಿಕೆಯಿಂದ ಮುಖ ತಿರುಗಿಸಿ 'ಹೋಗಿ' ಎನ್ನುವಳೆಂದು ಭಾವಿಸಿದ್ದ ಶರ್ಮರಿಗೆ ಆಶ್ಚರ್ಯವಾಯಿತು. ಎಲ್ಲರೂ ಅವಕ್ಕಾದರು. ಹೋಳಿಗೆ ತುಪ್ಪ ಕಲೆಸುತ್ತಿದ್ದ ಕೈಗಳು ನಿಂತವು. ಮತ್ತೆ ಮಹಾದೇವಿ ನಗುತ್ತಾ:

"ಆದ್ದರಿಂದ ಈಗಲೇ ಎರಡೂ ಊಟ ಉಂಡುಬಿಡಿ. ಇನ್ನೊಂದು ಊಟ ಸಿಗಲಿಕ್ಕಿಲ್ಲ" ಎನ್ನುತ್ತಾ ಒಳಗೆ ಹೋದಳು.

"ನೋಡಿದಿರಾ ಗುರುಗಳೇ, ನಮ್ಮ ಮಹಾದೇವಿಯ ಬುದ್ಧಿವಂತಿಕೆಯನ್ನು" ಎಂದು ನಗುತ್ತಾ ಶರ್ಮ ನುಡಿದ ಗುರುಗಳತ್ತ ತಿರುಗಿ.

ಮಂಚದ ಮೇಲೆ ಕುಳಿತು ಈ ದಾಸೋಹದ ಪಂಕ್ತಿಯ ಸಂತೋಷವನ್ನು ನೋಡುತ್ತಾ ಅದರಲ್ಲಿ ಭಾಗಿಗಳಾಗಿದ್ದರು ಗುರುಲಿಂಗರು. ಅವರು ರಾತ್ರಿ ಪ್ರಸಾದವನ್ನು ಸ್ವೀಕರಿಸುತ್ತಿರಲಿಲ್ಲ. ಲಘುವಾಗಿ ಹಾಲು ಹಣ್ಣುಗಳನ್ನು ಸ್ವೀಕರಿಸುತ್ತಿದ್ದರು. ಮಹಾದೇವಿಯ ಮಾತನ್ನು ಕೇಳಿ ಅವರೂ ನಕ್ಕರು. ಆದರೆ ನಗುವಿಗಿಂತ ಮೀರಿದ ಭಾವವೊಂದು ಅವರ ಮುಖದಲ್ಲಿ ಗೋಚರವಾಗುವಂತಿತ್ತು.

ಊಟ ಮುಗಿದ ನಂತರ ಸಂತೋಷದ ಮಾತುಗಳಲ್ಲಿ ತೊಡಗಿದ್ದು, ಬಂದ ಅತಿಥಿಗಳು ತಮ್ಮ ಮನೆಯ ಕಡೆಗೆ ಹೊರಟಾಗ ರಾತ್ರಿ ಬಹಳ ಹೊತ್ತಾಗಿತ್ತು.

ಎಲ್ಲರಿಂದಲೂ ನಮಸ್ಕಾರವನ್ನು ಪಡೆದ ಗುರುಲಿಂಗದೇವರು, ಗುರುಪಾದಪ್ಪ ಮತ್ತು ಇತರ ಶಿಷ್ಯರೊಡನೆ ಮಠದತ್ತ ಹೊರಟರು. ಮಹಾಕಾರ್ಯವನ್ನು ಮಾಡಿದ ಅಪೂರ್ವ ತೃಪ್ತಿ ಅವರ ಮುಖದ ಮೇಲೆ ಮಿನುಗುತ್ತಿತ್ತು.

ಙ

ರಾತ್ರಿಯೆಲ್ಲ ಮಹಾದೇವಿ ಗುರುವಿನ ಕರುಣೆಯಲ್ಲೇ ಓಲಾಡಿದಳು. ನರಜನ್ಮವನ್ನು ತೊಡೆದು ಹರಜನ್ಮಕ್ಕೆ ಮಾರ್ಗವನ್ನಿತ್ತ ಅವರ ಒಂದೊಂದು ಮಾತೂ ಅವಳ ಕಿವಿಯಲ್ಲಿ ರಿಂಗಣಗುಣಿಯುತ್ತಿತ್ತು. ಬೆಳಗಿನ ಜಾವ ಎಂದಿಗಿಂತ ಬಹಳ ಮೊದಲೇ ಎದ್ದು ಸ್ನಾನಾದಿಗಳನ್ನು ಮುಗಿಸಿ ಪೂಜೆಯಲ್ಲಿ ತೊಡಗಿದ್ದಳು.

ತದೇಕಚಿತ್ತಳಾಗಿ ಪೂಜೆಯಲ್ಲಿ ಮುಳುಗಿ ಮೈಮರೆತಿರುವ ಮಹಾದೇವಿಯನ್ನು ಲಿಂಗಮ್ಮ ನೋಡಿದಳು. ಗುರುಗಳು ಹೇಳಿದ ಮಾತುಗಳು ಅವಳ ಮುಂದೆ ಸುಳಿದವು ಮತ್ತು ಅಂದು ಮರುಳುಸಿದ್ಧರು ಮಾಡಿದ ಆಶೀರ್ವಾದದ ಉಜ್ವಲವಾದ ಮಾತುಗಳು ಎದುರು ನಿಂತಂತಾದವು. ಅಷ್ಟೇ ಅಲ್ಲದೆ ಅವಳ

ಮನಸ್ಸು ಇದಕ್ಕಿಂತ ಹಿಂದೆ ನೆಗೆಯಿತು. ತನ್ನ ನೆನಪಿನ ಆಳದಲ್ಲಿ ಅಡಗಿದ್ದ ಹಳೆಯ ಚಿತ್ತಗಳನ್ನು ಚಿತ್ತಭಿತ್ತಿಯ ಮೇಲೆ ಚಿತ್ರಿಸಿಕೊಳ್ಳತೊಡಗಿದಳು. ತನ್ನ ಮಾತುಗಳನ್ನು ತಾನೇ ಆಡಿ ತೋರಿಸುವವಳಂತೆ ಅವಳ ನೆನಪಿನ ಸುರುಳಿ ಬಿಚ್ಚತೊಡಗಿತ್ತು.

* * *

ಅಂದು ನಾನು ಮಕ್ಕಳಿಲ್ಲದೆ ಕೊರಗುತ್ತಿದ್ದ ಕಾಲ. ಇನ್ನೆಲ್ಲಾ ಸಂಪತ್ತು ನಮಗೆ ಸಮೃದ್ಧವಾಗಿತ್ತು. ನಾಲ್ಕು ಜನರಿಗೆ ಕೈಯೆತ್ತಿ ನೀಡಬಹುದಾದಂತಹ ಅನುಕೂಲ ಮನೆಯಲ್ಲಿ. ನಾವಿದ್ದವರು ಇಬ್ಬರೇ. ಆದರೂ ಮನೆ ದಾಸೋಹದಂತೆ ನಡೆಯುತ್ತಿತ್ತು. ಮಠಕ್ಕೆ ಹೋದಾಗಲೆಲ್ಲಾ ನಮಗೆ ಧರ್ಮದ ವಿಷಯದಲ್ಲಿ ಬೋಧಿಸುತ್ತಿದ್ದರು ಗುರುಲಿಂಗರು. ಹೀಗೆ ಎಲ್ಲ ರೀತಿಯ ಅನುಕೂಲಗಳಿದ್ದರೂ ನಮ್ಮ ಜೀವನದಲ್ಲಿ ಒಂದೇ ಕೊರತೆಯಿತ್ತು. ನಮಗೆ ಮಕ್ಕಳಿರಲಿಲ್ಲ ಎಂದೂ ಅದನ್ನು ನಾವು ಆಡಿ ತೋರಿಸದಿದ್ದರೂ ನಮ್ಮಿಬ್ಬರಿಗೂ ಆ ದುಃಖದ ಅರಿವಿತ್ತು.

ಒಮ್ಮೆ ಮಠಕ್ಕೆ ಹೋದಾಗ ಗುರುಗಳು ಇದರ ಪ್ರಸ್ತಾಪಮಾಡಿದರು. ಅವರಿಗೇ ಅದು ಮನಸ್ಸಿಗೆ ಬಂದಿತ್ತೋ ಅಥವಾ ನನ್ನ ಪತಿ ಹೇಳಿದ್ದರೋ ತಿಳಿಯದು. ಅಂತೂ ಅವರು ಈ ವಿಷಯವನ್ನು ಎತ್ತಿದಾಗ ನನಗೆ ಆಶ್ಚರ್ಯವಾಯಿತು. ಅಷ್ಟರಲ್ಲಿ ಅವರೇ ಹೇಳಿದರು:

"ಯೋಚಿಸಬೇಡ, ತಾಯಿ; ಏಕೈಕನಿಷ್ಠೆಯಿಂದ ನಿನ್ನ ಭಕ್ತಿಯನ್ನು ಮುಂದುವರಿಸು. ಶಿವನ ಸಂಕಲ್ಪವಿಲ್ಲದೆ ಯಾವುದೂ ನಡೆಯಲಾರದು. ಅವನು ಕಣ್ಣು ಬಿಟ್ಟರೆ ನಿನಗೂ ಒಂದು ಮಗುವಾದೀತು"

"ಅಷ್ಟಾದರೆ ಸಾಕು, ಗುರುಗಳೇ. ಹೆಣ್ಣೋ ಗಂಡೋ ಯಾವುದೋ, ನಮ್ಮ ಮನೆಯನ್ನು ಬೆಳಗಿದರೆ ಸಾಕು."

"ಆದೀತು.... ನಿಮ್ಮ ಮನೆಯನ್ನು ಮಾತ್ರವಲ್ಲದೆ ಮನವನ್ನೂ, ಮನುಕುಲವನ್ನೂ ಬೆಳಗುವ ಮಗುವಾದೀತು" ಎಂದರು.

'ಅವರ ಈ ಮಾತೇ ವರವಾಗಲಿ' ಎಂದು ಹಾರೈಸಿ ಮನೆಗೆ ಮರಳಿದೆ.

ಅಂದು ರಾತ್ರಿ ಏನೇನೋ ಅಲೌಕಿಕ ಅನುಭವಗಳು. ಈ ಒಂದು ಚಿತ್ರ ಮಾತ್ರ ಅಚ್ಚೊತ್ತಿದಂತೆ ಮನಸ್ಸಿನಲ್ಲಿ ಉಳಿದಿದೆ.

ಹಾಲಿನಂತಹ ಅಚ್ಚಬಿಳಿಯ ಬಣ್ಣದ ಪತ್ತಲವನ್ನುಟ್ಟು ಮುತ್ತೈದೆಯೊಬ್ಬಳು ನಮ್ಮ ಮನೆಯನ್ನು ಪ್ರವೇಶಿಸಿದಳು. ದಟ್ಟವಾಗಿ ವಿಭೂತಿಯನ್ನು ಧರಿಸಿದ ಅವಳ ಹಣೆಯ ಮೇಲೆ, ಕುಂಕುಮದ ಕೆಂಪು ಅದೇತಾನೆ ಮೂಡುತ್ತಿರುವ ಹುಣ್ಣಿಮೆಯ

ಚಂದ್ರನಂತೆ ಕಂಗೊಳಿಸುತ್ತಿತ್ತು. ಅವಳ ಕೊರಳನ್ನು ಅಲಂಕರಿಸಿದ್ದು ರತ್ನದ ಹಾರವಲ್ಲ; ರುದ್ರಾಕ್ಷಿಯ ಸರ. ಮುಂಗೈಗಳೆರಡರಲ್ಲೂ ಬಳೆಗಳ ಜೊತೆಗೆ ರುದ್ರಾಕ್ಷಿಯ ಕಂಕಣ ಕಟ್ಟಿತ್ತು. ನೀಳವಾದ ಅವಳ ಕೇಶರಾಶಿಗಳು ಬೆನ್ನಮೇಲೆಲ್ಲಾ ಹರಡಿದ್ದುವು. ಮುಖ ಉಜ್ಜ್ವಲವಾದ ತೇಜಸ್ಸನ್ನು ಹೊರಸೂಸುತ್ತಿತ್ತು. ಕಣ್ಣುಗಳು ನಕ್ಷತ್ರಗಳಂತೆ ಹೊಳೆಯುತ್ತಿದ್ದುವು.

ಆಕೆ ತೀರಾ ನನ್ನ ಸಮೀಪಕ್ಕೆ ಬಂದಳು. ನನ್ನ ಕಣ್ಣುಗಳಲ್ಲಿ ತನ್ನ ಕಣ್ಣುಗಳನ್ನಿಟ್ಟಂತೆ ನನ್ನನ್ನು ದಿಟ್ಟಿಸಿದಳು. ನನ್ನ ದೇಹವೆಲ್ಲಾ ರೋಮಾಂಚನವಾದಂತಾಯಿತು. ಯಾವುದೋ ಲೋಕದತ್ತ ಜಾರಿಕೊಂಡು ಅಥವಾ ಏರಿಕೊಂಡು ಹೋಗುತ್ತಿರುವಂತೆ ಅನಿಸಿತು. ಈ ಮನೆ, ಮಠ, ಜಗತ್ತು ಎಲ್ಲವೂ ದೂರ ದೂರ ಹೋದಂತೆ ಭಾಸವಾಯಿತು. ಭೀತಿಯೋ, ಕುತೂಹಲವೋ, ಸಂತೋಷವೋ, ಯಾವುದೂ ಅರಿಯದ ಭಾವವೊಂದು ನನ್ನನ್ನಾಕ್ರಮಿಸಿ ಬೆಳೆಯಿತು. ಅದನ್ನು ತಡೆಯಲಾರದೆ ನಾನು ಕೂಗಿಕೊಂಡೆ;

"ನನಗೇನಾಗುತ್ತಿದೆ.... ! ನಾನೆಲ್ಲಿಗೆ ಹೋಗುತ್ತಿದ್ದೇನೆ...."

ಆಕೆ ಇನ್ನೂ ಹತ್ತಿರಕ್ಕೆ ಬಂದು ನನ್ನನ್ನು ಮುಟ್ಟಿದಂತಾಯಿತು. ಅಬ್ಬಾ! ಅದೊಂದು ಮಿಂಚಿನ ಶಕ್ತಿಯ ಸ್ಪರ್ಶ. ಶೀತಲ ಮಿಂಚು. ಪ್ರಕ್ಷುಬ್ಧವಾದ ನನ್ನ ಭಾವನೆಗಳ ತಳಮಳವೆಲ್ಲಾ, ಆ ಮಾಂತ್ರಿಕ ಸ್ಪರ್ಶದಿಂದ ಶಾಂತವಾಗಿ, ಪ್ರಶಾಂತವಾದ ಕ್ಷೀರಸಾಗರದ ಮುಂದೆ ನಿಂತಂತಾಯಿತು. ಮರುಕ್ಷಣದಲ್ಲಿಯೇ ಕಣ್ಣನ್ನು ಕೋರೈಸುವಂತಹ ಬೆಳಕಿನ ಮೊತ್ತ ಮೂಡಿದಂತಾಯಿತು. ಕ್ಷೀರಸಾಗರದಿಂದ ಮೂಡಿಬಂದ ಚಂದ್ರನಂತೆ, ಆ ಬೆಳಕಿನ ರಾಶಿಯೆಲ್ಲಾ ಮೂರ್ತಿಗೊಂಡು ಆಕೆಯ ಕೈಯನ್ನು ಸೇರಿತು. ಮಧುರವಾದ ಮಂದಹಾಸವನ್ನು ಬೀರುತ್ತಾ ಆ ಮೂರ್ತಿಯನ್ನು ನನ್ನತ್ತ ನೀಡಿದಳು. ನಾನು ದಿಗ್ಭ್ರಮೆಗೊಂಡಂತವಳಾಗಿ ಅದನ್ನೇ ದಿಟ್ಟಿಸುತ್ತಿದ್ದೆ ಕೊನೆಗೆ ಕೇಳಿದೆ:

"ನೀನಾರು ಮಹಾತಾಯಿ?"

"ನೀನಂದಂತೆ ನಾನು ಮಹಾತಾಯಿ. ಸಕಲ ಲೋಕಗಳನ್ನು ಹೆತ್ತ ಮುತ್ತೈದೆ.... ಇದನ್ನು ತೆಗೆದುಕೋ" ಎಂದು ಬೆಣ್ಣೆಯ ಮುದ್ದೆಯಂತಿದ್ದ ಬೆಳಕಿನ ಮೂರ್ತಿಯನ್ನು ನನ್ನ ಕೈಯಲ್ಲಿ ಇಟ್ಟಳು. ಮತ್ತೆ ಹೇಳಿದಳು:

"ಇದು ನನ್ನ ಶಕ್ತಿಯ ಒಂದು ಮುಖ; ಹೆಣ್ಣುತನದ ಸಾರ್ಥಕತೆಯನ್ನು ಸಾರುವ ಸಾತ್ವಿಕಶಕ್ತಿ ನನ್ನ ಮಾಯಾಶಕ್ತಿಯ ಮುಖದಲ್ಲಿಯೇ ಮಗ್ನವಾದ ಜಗತ್ತಿಗೆ ಇದೊಂದು ಉಜ್ಜ್ವಲ ಸೂರ್ಯನಂತೆ ಕಂಗೊಳಿಸಿ, ನನ್ನ ಶಕ್ತಿಯ ಸಾರ್ಥಕತೆಯನ್ನು

ಮಾಡಿಕೊಡಲಿ. ಅದಕ್ಕೆ ನೀನು ನಿಮಿತ್ತ ಕಾರಣಳಾಗು."

"ಈ ಬಂಜೆಗೆ ಅಂತಹ ಭಾಗ್ಯವುಂಟೆ, ತಾಯಿ?" ಆಗಲೂ ಮಕ್ಕಳಿಲ್ಲದ ಕೊರಗೇ ಮುಂದಾಗಿ ನನ್ನಿಂದ ಈ ಮಾತನ್ನು ಆಡಿಸಿತು.

"ಆ ನಿಂದೆಯಿಂದಲೂ ನೀನು ದೂರವಾಗುತ್ತೀಯ, 'ಬಂಜೆ' ಎಂಬ ಕಳಂಕದಿಂದ ದೂರವಾಗಿ, ಜಗತ್ತಿಗೆ ವಂದ್ಯಳಾದ ಮಗಳನ್ನು ಕಾಣುವ ಭಾಗ್ಯ ನಿನ್ನದಾಗುತ್ತದೆ. ನೀನಿನ್ನು ಬಂಜೆಯಲ್ಲ."

ಎನ್ನುತ್ತಿದ್ದಂತೆಯೇ ನನ್ನ ಕೈಲಿದ್ದ ಬೆಳಕಿನ ಮೂರ್ತಿ ಪುಟಿದೆದ್ದು ನನ್ನ ದೇಹವನ್ನೆಲ್ಲಾ ವ್ಯಾಪಿಸಿದಂತಾಯಿತು. ಮುಂದಿನ ಮೂರ್ತಿಯೂ ಅದೃಶ್ಯವಾಗಿತ್ತು.

ಎಚ್ಚರಾದ ಮೇಲೂ ದೇಹ ಭಾವಾವೇಗದಿಂದ ಕಂಪಿಸುತ್ತಿತ್ತು. ಆ ದೃಶ್ಯ, ಆ ಮಾತು, ಆ ಘಟನೆ–ನನಸಿಗಿಂತಲೂ ಹೆಚ್ಚು ಸ್ಪಷ್ಟತರವಾಗಿ ಕಾಣುತ್ತಿತ್ತು. 'ನೀನಿನ್ನು ಬಂಜೆಯಲ್ಲ' ಎಂಬ ಮಾತು ಕಿವಿಯಲ್ಲಿ ಮೊಳಗಿತು. ಭಾವಾವೇಗವನ್ನು ತಾಳಲಾರದೆ 'ಅವರಿಗೆ' ಅದನ್ನು ತಿಳಿಸಿದೆ. ಅವರು ಮೊದಲು ನಕ್ಕರೂ ಕ್ರಮೇಣ ಕೇಳುತ್ತಾ ಕೇಳುತ್ತಾ ಹೋದಂತೆ ಗಂಭೀರರಾದರು.

ಇದಾದ ಕೆಲವು ದಿನಗಳಲ್ಲಿಯೇ ತಿಳಿಯಿತು 'ನೀನಿನ್ನು ಬಂಜೆಯಲ್ಲ' ಎಂಬ ಮಾತಿನ ಸತ್ಯ. ನಾನು ಗರ್ಭವತಿಯಾಗಿದ್ದೆ.

* * *

ಹೀಗೆ ಲಿಂಗಮ್ಮನ ಮನಸ್ಸಿನ ಮುಂದೆ ಹಿಂದಿನ ಸ್ಮರಣೆಯ ಮೆರವಣಿಗೆ ನಡೆದಿತ್ತು. ಶಿಶು ಗರ್ಭಕ್ಕೆ ಬಂದಂದಿನಿಂದ ತಾನು ಕಂಡ ಅನುಭವಗಳು, ತನ್ನಲ್ಲಿ ತಲೆದೋರುತ್ತಿದ್ದ ದೈವಿಕ ಬಯಕೆಗಳು, ಜನನದ ಸನ್ನಿವೇಶ, ಮರುಳುಸಿದ್ಧರು ನುಡಿದ ಮಂಗಳಕರವಾದ ಮುನ್ಸೂಚನೆ, ಗುರುಲಿಂಗದೇವರ ಅಪಾರವಾದ ಅನುಗ್ರಹ ಎಲ್ಲವೂ ಅವಳ ಮನಸ್ಸನ್ನು ತುಂಬಿದುವು. ಈ ಎಲ್ಲ ಘಟನೆಗಳ ಮುನ್ಸೂಚನೆಯ ನಿರೀಕ್ಷೆಗನುಗುಣವಾಗಿಯೇ ಮಹಾದೇವಿಯ ಜೀವನ ರೂಪುಗೊಳ್ಳುತ್ತಿತ್ತು. ಬಾಲ್ಯದಿಂದಲೂ ಅವಳಲ್ಲಿ ಕಾಣುತ್ತಿರುವ ದೈವಿಕವಾದ ಹಂಬಲ, ವಯಸ್ಸಿಗೆ ಮೀರಿದ ಮಾನಸಿಕ ಪರಿಪಕ್ವತೆ, ಆತ್ಮವೀಕ್ಷಣೆಯ ಅಂತರ್ದೃಷ್ಟಿ– ಇವೆಲ್ಲವುಗಳನ್ನು ನೆನೆದಳು ಲಿಂಗಮ್ಮ.

ಆಕೆಯ ದೃಷ್ಟಿ ಪೂಜೆಯ ಕೋಣೆಯತ್ತ ತಿರುಗಿತು. ಲಿಂಗಮ್ಮನ ಬೆಳಗಿನ ಕೆಲಸವೆಲ್ಲಾ ಮುಗಿಯುತ್ತಾ ಬಂದಿದ್ದರೂ, ಮಹಾದೇವಿಯ ಪೂಜೆ ಇನ್ನೂ ಮುಗಿದಿರಲಿಲ್ಲ.

ಈ ವೇಳೆಗೆ "ಮಹಾದೇವಿ.... ಮಹಾದೇವಿ" ಎಂದು ಕೂಗುತ್ತ ಒಳಗೋಡಿ ಬಂದಳು ಶಂಕರಿ. ಶಂಕರಿ ಪಕ್ಕದ ಮನೆಯ ನಾಗಭೂಷಣ ಶರ್ಮರ ಮಗಳು; ಮಹಾದೇವಿಯ ಗೆಳತಿ. ಸ್ವಲ್ಪ ಹೆಚ್ಚುಕಡಿಮೆ ಇಬ್ಬರಿಗೂ ಒಂದೇ ವಯಸ್ಸು, ಎಳೆಯತನದಿಂದಲೂ ಇಬ್ಬರೂ ಒಟ್ಟಿಗೇ ಬೆಳೆದವರು. ಅವರಿಬ್ಬರಿಗೂ ಅವೆರಡು ಮನೆಗಳು ತಮ್ಮ ಮನೆಗಳಂತೆಯೇ ಇದ್ದುವು.

"ಮಹಾದೇವಿ, ಇವತ್ತು ಹೂವನ್ನು ತರುವುದಕ್ಕೆ ಬರುವುದಿಲ್ಲವೇನೇ?" ಎನ್ನುತ್ತಾ ಒಳಗೆ ಬಂದಳು. ಸಾಮಾನ್ಯವಾಗಿ ದಿನವೂ ಮುಂಜಾನೆ ಊರಮುಂದಿರುವ ಉದ್ಯಾನ್ಯಕ್ಕೆ ಹೋಗಿ ಅಲ್ಲಿಂದ ಹೂವುಗಳನ್ನು ತರುವುದು ಅವರ ರೂಢಿಯಾಗಿತ್ತು.

"ಬಾ, ಶಂಕರಿ", ಕರೆಯುತ್ತಾ ಹೇಳಿದಳು ಲಿಂಗಮ್ಮ : "ಮಹಾದೇವಿಯ ಪೂಜೆ ಇನ್ನೂ ಮುಗಿದಿಲ್ಲ"

"ಶಂಕರಿ! ಬಂದೆ ತಾಳೆ." ಪೂಜೆಯ ಕೋಣೆಯಿಂದಲೇ ಹೇಳಿದಳು.

ಅತ್ತ ನಡೆಯುತ್ತಾ ಶಂಕರಿ: "ಓ! ಏನು ಶರಣಮ್ಮ! ಇನ್ನೇನು ಹಾಗಾದರೆ ನಿನ್ನ ಜೊತೆ ನಮಗೆಲ್ಲ ತಪ್ಪಿದಂತೆಯೇ" ಹಾಸ್ಯ ಮಾಡಿ ನಕ್ಕಳು.

ಈ ವೇಳೆಗೆ ಮಹಾದೇವಿ ಹೊರಗೆ ಬಂದಿದ್ದಳು. ರಾಜಬೀದಿಯಲ್ಲಿ ನಡೆಯ ತೊಡಗಿದರು.

ಉಡುತಡಿಯ ಪ್ರಮುಖ ಬೀದಿಯೆಂದರೆ ಇದೇ. ಪೂರ್ವಾಭಿಮುಖವಾದ ಅರಮನೆಯ ಮಹಾದ್ವಾರದಿಂದ ನೇರವಾಗಿ ಹೊರಟ ಈ ರಸ್ತೆ, ಊರಿನ ಮಧ್ಯದಲ್ಲಿ ನಡೆದು ಊರಿನ ರಾಜೋದ್ಯಾನವನ್ನು ತಲುಪುತ್ತಿತ್ತು. ಅರಮನೆಯ ಮಹಾದ್ವಾರದಿಂದ ನಾಲ್ಕಾರು ಹೆಜ್ಜೆಗಳು ಈ ರಸ್ತೆಯಲ್ಲಿ ಬಂದೊಡನೆಯೇ, ಉತ್ತರ–ದಕ್ಷಿಣವಾಗಿ ಹಬ್ಬಿದ ಎರಡೆರಡು ಸಾಲು ಪೇಟೆಯ ಬೀದಿಗಳು ಇದಕ್ಕೆ ಬಂದು ಸೇರುತ್ತಿದ್ದವು. ಆ ಪೇಟೆಬೀದಿಗಳು ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದುವು.

ರಾಜಬೀದಿಯಲ್ಲಿ ಇಕ್ಕೆಲಗಳಲ್ಲಿಯೂ ಶ್ರೀಮಂತ ಹರ್ಮ್ಯಗಳು ತಲೆಯೆತ್ತಿದ್ದುವು. ಊರಿನ ಪ್ರಮುಖ ವ್ಯಾಪಾರಿಗಳು, ಅಧಿಕಾರಿಗಳು, ಶ್ರೀಮಂತರು, ಧೀಮಂತರು ಎಲ್ಲರೂ ವಾಸಿಸುತ್ತಿದ್ದುದು ಸಾಮಾನ್ಯವಾಗಿ ಇಲ್ಲಿಯೇ. ಈ ರಸ್ತೆಯ ಎರಡು ಕಡೆಗಳಲ್ಲಿಯೂ ಊರು ಹಬ್ಬಿ ಹರಡಿತ್ತು. ಅರಮನೆಗೂ ರಾಜೋದ್ಯಾನಕ್ಕೂ ಸರಿಸಮನಾಗಿ, ಮಧ್ಯದಲ್ಲಿ ಓಂಕಾರನ ಮನೆಯಿತ್ತು ಈ ರಾಜಬೀದಿಯಲ್ಲಿ.

ಮಹಾದೇವಿ ಮತ್ತು ಶಂಕರಿ ರಾಜಬೀದಿಯಲ್ಲಿ ಸ್ವಲ್ಪ ದೂರ ನಡೆಯುತ್ತಿದ್ದಂತೆಯೇ ಇನ್ನೊಬ್ಬಳು ಗೆಳತಿ ಇವಳಿಗಾಗಿ ಕಾಯುತ್ತಿದ್ದುದು ಕಾಣಿಸಿತು.

"ಏನೇ, ಎಷ್ಟು ಹೊತ್ತು ಬರುವುದು? ಕಾದು ಕಾದು ಸಾಕಾಯಿತು." ಕೇಳಿದಳು ಕಾಯುತ್ತಿದ್ದ ಗೆಳತಿ ಕಾತ್ಯಾಯಿನಿ.

"ನಾನೇನು ಮಾಡಲೇ, ಕಾತ್ಯಾಯಿನಿ? ಎಲ್ಲ ಈ ಮಹಾದೇವಿಯ ಆಟ. ಇವಳು ಬರುತ್ತಾಳೆಂದು ಕಾದು ಸಾಕಾಗಿ ಕೊನೆಗೆ ನಾನೇ ಹೋಗಿ ಎಬ್ಬಿಸಿಕೊಂಡು ಬಂದೆ." ಹೇಳಿದಳು ಶಂಕರಿ.

"ಹೌದೇನೇ, ಮಹಾದೇವಿ! ಇಷ್ಟು ಹೊತ್ತು ಮಲಗಿದ್ದಿಯೇನೇ?"

"ಮಲಗಿರಲಿಲ್ಲ ಕಣೆ." ಮಹಾದೇವಿಗೆ ಮಾತನಾಡಲು ಅವಕಾಶ ಕೊಡದೆ ತಾನೇ ಹೇಳಿದಳು ಶಂಕರಿ: "ನಿನ್ನೆ ಅವಳ ಮದುವೆಯಾಯಿತು. ಗಂಡನ ಪೂಜೆ ಮಾಡುತ್ತಿದ್ದಳು." ನಗುತ್ತಿದ್ದಳು ಶಂಕರಿ.

"ಏನೇ ಅದು ಹುಡುಗಾಟ?" ಸಲುಗೆಯಿಂದ ಗದರಿದಳು ಮಹಾದೇವಿ.

"ಹುಡುಗಾಟವೇನು? ನೀನೇ ಹೇಳಲಿಲ್ಲವೇ?" ಎಂದು ಕಾತ್ಯಾಯಿನಿಯ ಕಡೆ ತಿರುಗಿ: "ನೋಡೇ ಕಾತ್ಯಾಯಿನಿ, ನಿನ್ನೆ ಇವಳಿಗೆ ದೀಕ್ಷೆ ಆಯ್ತಲ್ಲ, ಆಗ ನಿನ್ನ ಮದುವೆಯ ಊಟ ಯಾವಾಗಮ್ಮ ಅಂತ ನಮ್ಮಪ್ಪ ಕೇಳಿದರೆ, ಈಕೆ ಏನು ಹೇಳಿದಳು ಗೊತ್ತೆ? 'ಇದೇ ನನ್ ಮದುವೆ, ಮಲ್ಲಿಕಾರ್ಜುನನೇ ನನ್ನ ಗಂಡ. ಎರಡೂ ಊಟವನ್ನು ಈಗಲೇ ಮಾಡಿಬಿಡಿ!' ಅನ್ನಬೇಕೇ :ಅದಕ್ಕೇ ಹೇಳಿದ್ದು, ನಿನ್ನೆ ಇವಳಿಗೆ ಮದುವೆಯಾಯ್ತು ಅಂಥ."

ಈ ವೇಳೆಗೆ ಇನ್ನೊಬ್ಬ ಗೆಳತಿ ಬರುತ್ತಿರುವುದನ್ನು ನೋಡಿ ಕಾತ್ಯಾಯಿನಿಂದ ದೃಷ್ಟಿ ಅತ್ತ ತಿರುಗಿತು:

"ಅಲ್ಲಿ ನೋಡ್ರೇ, ದಾಕ್ಷಾಯಿಣಿ ಬರುತ್ತಿದ್ದಾಳೆ. ಅವಳಿಗೆ ನಿಜವಾಗಿಯೂ ಮದುವೆ, ಗೊತ್ತೇ?"

"ಹೌದೇನೇ?" ಶಂಕರಿ ಕೇಳಿದಳು.

ಆ ವೇಳೆಗೆ ದಾಕ್ಷಾಯಿಣಿ ಹತ್ತಿರ ಬಂದಿದ್ದಳು. ಇವರ ಹಿರಿಯ ಗೆಳತಿ ಆಕೆ. ಕೌಮಾರ್ಯವನ್ನು ದಾಟಿ ಯೌವನದಲ್ಲಿ ಪಾದಾರ್ಪಣೆ ಮಾಡುತ್ತಿರುವ ಎಳೆಯ ತರುಣಿ. ಅವಳು ಸಮೀಪಿಸುತ್ತಿದ್ದಂತೆಯೇ ಶಂಕರಿ ತುಂಟು ಧ್ವನಿಯಿಂದ ಕೇಳಿದಳು:

"ನಿನಗೆ ಮದುವೆಯಂತೆ, ಹೌದೇ ದಾಕ್ಷಾಯಿಣಿ?"

"ಯಾರೇ! ಹೇಳಿದವರು?" ದಾಕ್ಷಾಯಿಣಿಯ ಧ್ವನಿಯಲ್ಲಿ ಹುಸಿಮುನಿಸಿತ್ತು. "ಯಾರೋ ! ಹೌದೋ ಅಲ್ಲವೋ ಅದು ಹೇಳು." ಕಾತ್ಯಾಯಿನಿ ಧ್ವನಿಗೂಡಿಸಿದಳು.

"ನಿನ್ನದೇ ಇದೆಲ್ಲಾ ಚೇಷ್ಟೆ, ನಿನ್ನ ಹತ್ತಿರ ಹೇಳಲೇಬಾರದಾಗಿತ್ತು" ಎಂದು ಹೇಳಿದರೂ ಆ ವಿಷಯವನ್ನೆತ್ತಿದುದು ದಾಕ್ಷಾಯಿಣಿಗೆ ಸಂತೋಷಜನಕವಾಗಿಯೇ ಇತ್ತೆಂಬುದನ್ನು ಅವಳ ಮುಖಭಾವ ಹೇಳುವಂತಿತ್ತು.

"ಇರಲಿ, ಹುಡುಗ ಒಪ್ಪಿದನೇ ಹೇಗೆ? ಹೇಗಿದ್ದಾನೆ ವರ?" ಮತ್ತೆ ಹೇಳಿದಳು ಕಾತ್ಯಾಯಿನಿ.

"ಹೋಗೇ.... ನೀನಂತೂ...." ದಾಕ್ಷಾಯಿಣಿಯ ಮುಖ ಅರಕ್ತವಾಯಿತು.

"ಏನೇ ಅದು ಕಾತ್ಯಾಯಿನಿ? ಯಾವ ಹುಡುಗ? ಏನನ್ನು ಒಪ್ಪುವುದು?" ಏನನ್ನೂ ಅರಿಯದವಳಾಗಿ ಮಹಾದೇವಿ ಕೇಳಿದಳು.

"ನೆನ್ನೆ ಇವರ ಮನೆಗೆ ಹುಡುಗ ಬಂದಿದ್ದನಂತೆ" ಕಾತ್ಯಾಯಿನಿ ಹೇಳಿದಳು.

"ಏಕೆ?" ಮತ್ತೆ ಮಹಾದೇವಿಯ ಪ್ರಶ್ನೆ.

"ನೋಡೋದಕ್ಕೆ"

"ನೋಡೋದಕ್ಕೆ! ಏನನ್ನು ನೋಡೋದಕ್ಕೆ?" ಮುಗ್ಧತೆ ತುಂಬಿತ್ತು ಮಹಾದೇವಿಯ ಪ್ರಶ್ನೆಯಲ್ಲಿ.

"ಅಯ್ಯೋ ಈ ಮಹಾದೇವಿಗಂತೂ ವ್ಯವಹಾರಜ್ಞಾನವೇ ಇಲ್ಲ" ಎಂದು ಕಾತ್ಯಾಯಿನಿ ಹೇಳುವಷ್ಟರಲ್ಲಿ ಶಂಕರಿ ವಿವರಿಸತೊಡಗಿದಳು.

"ಹುಡುಗ ಬಂದು, ಹುಡುಗಿಯನ್ನು ನೋಡಿ, ಅವಳನ್ನು ಒಪ್ಪಿದರೆ ತಾನೇ ಮದುವೆ, ಮಹಾದೇವಿ?"

"ನಿನಗೂ ಆ ಕಾಲ ಬಂದಾಗ ಗೊತ್ತಾಗುತ್ತದೆ. ಹುಡುಗನ ಮುಂದೆ ಕುಳಿತುಕೊಳ್ಳುವುದು." ಕಾತ್ಯಾಯಿನಿ ನಕ್ಕಳು.

"ಅವಳಿಗೇನಮ್ಮಾ, ಕಂಡೊಡನೆ ಎಂತಹವನಾದರೂ ಇವಳ ರೂಪದ ಬಲೆಯಲ್ಲಿ ಬಿದ್ದಾನು. ಅಂತಹ ಸೌಂದರ್ಯದ ಪುತ್ಥಳಿಯಾಗುತ್ತಾಳೆ ನಮ್ಮ ಮಹಾದೇವಿ." ಅಷ್ಟೇನೂ ಕುರೂಪಿಯಲ್ಲದಿದ್ದರೂ ತನ್ನ ಸೌಂದರ್ಯದ ಪರಿಮಿತಿಯನ್ನು ತಿಳಿಯ ತೊಡಗಿದ್ದ ದಾಕ್ಷಾಯಿಣಿ ಹೇಳಿದಳು.

"ಓ! ಯಾರೋ ಬಂದು, ನೋಡಿ, ಮೆಚ್ಚುವುದು ಬೇರೆ ಆಗಬೇಕೇನು?" ಆಶ್ಚರ್ಯದ ಉದ್ಗಾರ ಮಹಾದೇವಿಯದು.

"ಹೋಗು ಹೋಗೆ; ಬರಿ ಪೂಜೆ ಮಾಡಿಕೊಂಡು ಇರಲಿಕ್ಕೆ ಲಾಯಕ್ಕು ನೀನು." ಹೇಳಿದಳು ಕಾತ್ಯಾಯಿನಿ.

ಈ ವೇಳೆಗೆ ರಾಜಬೀದಿಯನ್ನು ದಾಟಿ ಉದ್ಯಾನವನ್ನು ಸಮೀಪಿಸಿದ್ದರು. ಮೇಲೇಳುತ್ತಿರುವ ಬೆಳಗಿನ ಬಾಲಸೂರ್ಯನ ಎಳೆಯ ಬಿಸಿಲಿನಲ್ಲಿ ಉದ್ಯಾನವನ

ಸುಂದರವಾಗಿ ಕಂಗೊಳಿಸುತ್ತಿತ್ತು. ವಿಸ್ತಾರವಾದ ಆ ಉದ್ಯಾನದ ಒಂದು ಭಾಗ ರಾಜನಿಗಾಗಿ, ರಾಜಪರಿವಾರಕ್ಕಾಗಿ ಮಾತ್ರ ಮೀಸಲಾಗಿತ್ತು. ಇನ್ನುಳಿದ ಭಾಗವೆಲ್ಲಾ ಸಾರ್ವಜನಿಕ ವಿಶ್ರಾಂತಿ ಮತ್ತು ವಿಹಾರಸ್ಥಳವಾಗಿತ್ತು. ಉದ್ಯಾನದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕಾಗಿಯೇ ವಿಶೇಷವಾದ ರಾಜಸಿಬ್ಬಂದಿ ನೇಮಕವಾಗಿತ್ತು.

ಈಚೆಗೆ ಕೌಶಿಕರಾಜನು ಪಟ್ಟಾಭಿಷಿಕ್ತನಾದ ಮೇಲಂತೂ ಉದ್ಯಾನವನಕ್ಕೆ ಒಂದು ಹೊಸ ಕಾಂತಿ ಬಂದಿತ್ತು. ಅರಮನೆಯ ರಾಜೋದ್ಯಾನಕ್ಕೆ ಕೊಡುವಷ್ಟೇ ಗಮನವನ್ನು ಇದಕ್ಕೂ ಕೊಟ್ಟಿದ್ದ ಕೌಶಿಕ. ಸೌಂದರ್ಯೋಪಾಸಕನಾಗಿದ್ದ ಆ ತರುಣ ರಾಜ, ತಾನೇ ನಿಂತು ಅತ್ಯಾಸಕ್ತಿಯಿಂದ ಇದನ್ನು ಇಂದ್ರನ ನಂದನವನವನ್ನಾಗಿ ಮಾರ್ಪಡಿಸಿದ್ದ.

ಅಪೂರ್ವವಾದ ತರುಲತಾದಿಸಮೂಹಗಳಿಂದ, ನಯನಮನೋಹರವಾದ ನೂರಾರು ಬಗೆಯ ಪುಷ್ಪಸಂಚಯಗಳಿಂದ, ನೋಡಿದವರ ಕಣ್ಮನಗಳನ್ನು ಅದು ಅಪಹರಿಸುವಂತಿತ್ತು. ಮಲ್ಲಿಕಾಕುಂಜಗಳು, ಮಾಧವೀಲತಾಗೃಹಗಳೂ, ಸುರಗಿಯ ಪರಿಮಳ ಮಂಟಪಗಳು, ಮಾವಿನ ತೋಪುಗಳು, ಮಂದಾರದ ಮಂಗಳಮಂದಿರಗಳು ಒಂದೊಂದೂ ಕೌಶಿಕರಾಜನ ಸೌಂದರ್ಯೋಪಾಸನೆಗೆ ಸಾಕ್ಷಿಯನ್ನು ನುಡಿಯುವಂತಿದ್ದವು. ರಾಜಧಾನಿಯ ಹೆಮ್ಮೆಯ ಆಸ್ತಿಯಾಗಿತ್ತು ಆ ಉದ್ಯಾನವನ.

ಗಿಡಗಳ ಮೇಲೆ, ಲತೆಗಳ ಮೇಲೆ ತಲೆಯೆತ್ತಿ ನಿಂತಿರುವ ನಾನಾ ವರ್ಣದ ಹೂವುಗಳು, ಬೆಳಗಿನ ಶೀತಲ ಮಂದಮಾರುತನ ವಿನ್ಯಾಸಕ್ಕೆ ಅನುಗುಣವಾಗಿ ಲಾಸ್ಯವಾಡುತ್ತಾ ಆಹ್ವಾನವೀಯುವಂತಿದ್ದುವು. ಅವುಗಳ ನಾನಾ ಬಗೆಯ ಒಟ್ಟು ಪರಿಮಳದಿಂದ ಸುಗಂಧಿತನಾದ ವಾಯುದೇವ, ಬಹುದೂರದಿದಲೇ ಅತಿಥಿಗಳಿಗೆ ಸ್ವಾಗತವೀಯುತ್ತಾ, ಸೌಂದರ್ಯದ ಸನ್ನಿಧಿಯ ಕಡೆಗೆ ಕರೆದೊಯ್ಯುತ್ತಿದ್ದ. ಅದನ್ನು ಸಮೀಪಿಸುತ್ತಿದ್ದಂತೆಯೇ ಉಳಿದೆಲ್ಲ ಮಾತುಗಳು ಮರೆತುಹೋಗಿ, ಅದರ ಸೌಂದರ್ಯವೇ ಮನಸ್ಸನ್ನು ತುಂಬುತ್ತಿತ್ತು. ಈಗಲೂ ಹಾಗೆಯೇ ಆಯಿತು, ಮಹಾದೇವಿ ಮತ್ತು ಗೆಳತಿಯರಿಗೆ. ಉದ್ಯಾನವನ್ನು ಪ್ರವೇಶಿಸುತ್ತಿದ್ದಂತೆಯೇ ಎಲ್ಲವನ್ನು ಮರೆತರು.

ಹೂವುಗಳ ಮಧ್ಯದಲ್ಲಿ ಹೂವುಗಳಾಗಿ ಇವರೂ ಸುತ್ತಿದರು. ಆವಶ್ಯಕವಾದಷ್ಟು ಹೂವುಗಳನ್ನು ಎತ್ತಿಕೊಂಡರು. ಈ ವೇಳೆಗೆ ಸೂರ್ಯ ಮೇಲೆ ಬರುತ್ತಿದ್ದ. ಎಳೆಯ

ಬಿಸಿಲಿನ ಬಿಸಿ ಸ್ವಲ್ಪ ಸ್ವಲ್ಪ ಹೆಚ್ಚಾಗತೊಡಗಿತ್ತು. ಮೇಲೆ ನೋಡುತ್ತಾ ಮಹಾದೇವಿ ಹೇಳಿದಳು:

"ಆಗಲೇ ಬಿಸಿಲೇರುತ್ತಾ ಬಂತು. ಇವತ್ತು ಮಠಕ್ಕೆ ಬೇರೆ ಹೋಗಬೇಕು. ಸಾಕು, ಹೋಗೋಣ ಬನ್ನಿರೆ."

"ನಿನ್ನೆ ಗುರುಗಳು ಬಂದರಂತೆ, ಇನ್ನು ಶಾಲೆಯೊಂದಲ್ಲದೆ ಮತ್ತೆ ಮಠದ ಯಾತ್ರೆ ಬೇರೆ ಪ್ರಾರಂಭವಾಯಿತಲ್ಲವೇ ನಿನಗೆ?" ದಾಕ್ಷಾಯಿಣಿ ಕೇಳಿದಳು.

"ಹೌದು, ನಾನು ಕಲಿತಿರುವ ವಚನಗಳನ್ನೆಲ್ಲಾ ಅವರಿಗೆ ಒಪ್ಪಿಸಬೇಕು. ಹೊಸ ವಚನಗಳನ್ನು ಕಲಿಯಬೇಕು. ಶಂಕರೀ, ನೀನೂ ಬರುತ್ತೀಯಾ ಶಾಲೆಗೆ?" ಉತ್ಸಾಹ ತುಂಬಿತ್ತು ಮಹಾದೇವಿಯ ಮಾತಿನಲ್ಲಿ.

"ನೀವೇ ಸರಿಯಮ್ಮ. ನಾನೂ ಶಾಲೆಗೆ ಹೋಗುತ್ತೇನೆ ಅಂತ ಕೇಳಿದರೆ ಮನೆಯಲ್ಲಿ ಹೇಳುತ್ತಾರೆ: 'ನಿನಗೇತಕ್ಕೆ ಅದೆಲ್ಲಾ, ಓದು ಕಲಿತು ನೀನೇನು ಮಾಡುತ್ತೀ? ಹೆಣ್ಣು ಮಕ್ಕಳಿಗೆ ಅದೆಲ್ಲಾ ಬೇಕಾಗಿಲ್ಲ' ಅಂತ" ಎಂದು ತನ್ನ ಅತೃಪ್ತ ಬಯಕೆಯನ್ನು ವ್ಯಕ್ತಪಡಿಸಿದಳು ಕಾತ್ಯಾಯಿನಿ.

"ಅವರೆಲ್ಲಾ ಹಾಗೇ. ಹೆಣ್ಣು ಮಕ್ಕಳು ಅಂದರೆ ಏನೋ ಅಸಡ್ಡೆ. ಯಾವಾಗಲೂ ಅಷ್ಟೆ. ಹೆಂಗಸರಿಗೆ ಇದೇಕೆ? ಹೆಂಗಸರಿಗೆ ಅದೇಕೆ? ಎನ್ನುತ್ತಾರೆ." ಸಿಡುಕಿದಳು ಮಹಾದೇವಿ.

"ನಮ್ಮ ತಂದೆಯಂತೂ ಸರಿ. ತಾಯಿಯೂ ಹಾಗೆ ಹೇಳುತ್ತಾರೆ. ಅವರೂ ಹೆಂಗಸರೇ ಅಲ್ಲವೇ? ಅವರೇ ಹಾಗೆ ಹೇಳುತ್ತಾರಲ್ಲ?" ತನ್ನ ಸಂಶಯವನ್ನು ವ್ಯಕ್ತಪಡಿಸಿದಳು ಕಾತ್ಯಾಯಿನಿ.

"ಪಾಪ! ಅದೇ ರೀತಿಯಲ್ಲಿ ಬೆಳೆದಿದ್ದಾರೆ; ಹಾಗೆ ಹೇಳುತ್ತಾರೆ. ಅದನ್ನೆಲ್ಲಾ ಬದಲಾಯಿಸಿಬಿಡಬೇಕು." ದಿಟ್ಟತನವಿತ್ತು ಮಹಾದೇವಿಯ ಮಾತಿನಲ್ಲಿ.

"ಓಹೋಹೋ, ಬಹಳ ಗಟ್ಟಿಗಳು! ಇನ್ನೊಂದು ವರ್ಷ ಹೋಗಲಿ, ನೀನು ಬದಲಾಯಿಸುವುದು ಗೊತ್ತಾಗುತ್ತೆ. ಈಗೇನೋ ಇನ್ನೂ ಚಿಕ್ಕವಳು. ಸ್ವಲ್ಪ ಅವಕಾಶ ಕೊಟ್ಟಿದ್ದಾರೆ, ಅಷ್ಟೆ. ಆಗ ನೋಡು, ಇನ್ನೊಬ್ಬನ ಕೈಗೆ ಕೊಟ್ಟರೆ ಗೊತ್ತಾಗುತ್ತೆ ಬದಲಾಯಿಸೋದು" ಎಂದು ನಕ್ಕಳು ದಾಕ್ಷಾಯಿಣಿ.

"ನಿನ್ನನ್ನು ಈಗ ಕೊಡುತ್ತಿರುವ ಹಾಗೆ; ಅಲ್ಲವೇನೇ?" ನಗುವನ್ನು ಉಕ್ಕಿಸಿದಳು ಶಂಕರಿ.

ಹೀಗೆ ಅವರ ಪ್ರಯಾಣ ಹಿಂದಕ್ಕೆ ಮನೆಯ ಕಡೆಗೆ ಸಾಗಿತು.

೬

ಮಹಾದೇವಿ ಮನೆಗೆ ಬಂದು ತನ್ನ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು ಊಟ ಮಾಡಿ ಸಿದ್ಧಳಾಗುವ ವೇಳೆಗೆ ಶಂಕರಿಯು ಬಂದಳು. ಇಬ್ಬರೂ ಶಾಲೆಗಾಗಿ ಮಠದ ಕಡೆಗೆ ನಡೆಯತೊಡಗಿದರು.

ಹೆಣ್ಣು ಮಕ್ಕಳು ಶಾಲೆಗೆ ಹೋಗವುದೆಂದರೆ ಜನಗಳಿಗೆ ಅದೊಂದು ಟೀಕೆಗೆ ಗುರಿಯಾಗುವ ಆಶ್ಚರ್ಯದ ವಿಷಯವೇ ಆಗಿತ್ತು. ಗುರುಲಿಂಗದೇವರು ತಮ್ಮ ಮಠದಲ್ಲಿ ಶಾಲೆಯನ್ನು ಪ್ರಾರಂಭಿಸಿದಾಗ ಹೆಣ್ಣು ಮಕ್ಕಳನ್ನೂ ಅಲ್ಲಿಗೆ ಕಳುಹಿಸಿ ಕೊಡುವಂತೆ ಜನರಿಗೆ ಹೇಳಿದ್ದರು. ಇದರಿಂದ ಎಲ್ಲರಿಗೂ ಆಶ್ಚರ್ಯವೇ ಆಗಿತ್ತು. ಅವರ ಭಕ್ತರಲ್ಲಿ ಕೂಡ ಅನೇಕರು ಅದಕ್ಕೆ ಸಮ್ಮತಿಸಿರಲಿಲ್ಲ.

"ಎಲ್ಲಿಯಾದರೂ ಉಂಟೇ, ಗುರುಗಳೇ? ಹೆಣ್ಣು ಮಕ್ಕಳಿಗೇಕೆ ಈ ವಿದ್ಯೆ? ಅದರಲ್ಲೂ ಹುಡುಗರ ಜೊತೆಗೆ" ಎಂದಿದ್ದರು.

"ವಿದ್ಯೆಗೆ ಹೆಣ್ಣು ಗಂಡು ಎಂಬ ಭೇದವಿಲ್ಲ. ಧರ್ಮದ ಮುಂದೆ, ವಿದ್ಯೆಯ ಮುಂದೆ ಎಲ್ಲರೂ ಸಮಾನರು. ಆ ಎಳೆಯ ಮಕ್ಕಳಲ್ಲಿ ಹೆಣ್ಣು ಗಂಡು ಎಂಬ ಭೇದಗಳನ್ನೇಕೆ ಕಲ್ಪಿಸುತ್ತೀರಿ. ಬೆಳೆದು ಪ್ರೌಢವಯಸ್ಸಿನವರಾದಾಗ ಆ ಮಾತು ಬೇರೆ. ಅವರವರ ಕರ್ತವ್ಯ ನಿರ್ವಹಣೆಗೆ ಮತ್ತು ಮನೋಧರ್ಮಕ್ಕೆ ಅನುಗುಣವಾದ ವಿದ್ಯೆ ಆಗ ಅವಶ್ಯಕ. ಆದರೆ ಪ್ರಾರಂಭದಲ್ಲಿ ಹೆಣ್ಣುಗಂಡೆಂಬ ಭೇದವಿಲ್ಲದೆ, ಎಲ್ಲರಿಗೂ ಅವಶ್ಯಕವಾದ ಮೂಲಭೂತವಾದ ಅಂಶಗಳನ್ನು ಅರಿಯಲು ಈ ಭೇದವೇ?"

ಎಂದು ಮುಂತಾಗಿ ಹೇಳಿದ್ದರು ಗುರುಲಿಂಗರು. ಅದು ಎಲ್ಲರಿಗೂ ಅಷ್ಟಾಗಿ ಹಿಡಿಯದಿದ್ದರೂ ಕೆಲವರು ಮಾತ್ರ ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವ ಮನಸ್ಸು ಮಾಡಿದ್ದರು. ಅದು ಊರಿನ ಜನರ ಕುತೂಹಲಕರವಾದ ಚರ್ಚೆಯ ವಿಷಯವೂ ಆಗಿತ್ತು ಕೆಲವು ದಿನ.

ಓಂಕಾರನೇ ಒತ್ತಾಯಪೂರ್ವಕವಗಿ ಹೇಳಿ ನಾಗಭೂಷಣ ಶರ್ಮರನ್ನು ಒಪ್ಪಿಸಬೇಕಾಗಿ ಬಂದಿತ್ತು, ಅವರ ಮಗಳನ್ನು ಶಾಲೆಗೆ ಕಳುಹಿಸಲು. ಹೀಗಾಗಿ ಮಹಾದೇವಿಗೆ ಶಂಕರಿಯ ಜೊತೆ ದೊರೆತಿತ್ತು.

ಆದರೆ ಮಹಾದೇವಿಯ ಶಿಕ್ಷಣವು ಶಾಲೆಯ ಪಾಠದಿಂದ ಮಾತ್ರವೇ ಮುಕ್ತಾಯವಾಗಿರಲಿಲ್ಲ. ಗುರುಲಿಂಗರ ಸಾಕ್ಷಾತ್ ಶಿಕ್ಷಣಕ್ಕೆ ಆಕೆ ಒಳಪಟ್ಟಿದ್ದಳು. ಶಲೆಯಲ್ಲಿ ಪಾಠ ಮುಗಿದ ಮೇಲೆ ಗುರುಗಳ ಬಳಿಗೆ ಹೋಗುತ್ತಿದ್ದಳು. ಶಾಲೆಯಲ್ಲಿ ಕಲಿತುದನ್ನೆಲ್ಲಾ ಅಲ್ಲಿ ಹೇಳುತ್ತಿದ್ದಳು. ಅದಕ್ಕಿಂತ ಹೆಚ್ಚಾಗಿ ಆಕೆಯ ಅಂತರಂಗದ

ವಿದ್ಯೆಯ ಸಹಜ ಶಕ್ತಿಯನ್ನು ಬಲ್ಲ ಗುರುಲಿಂಗರು, ಆಧ್ಯಾತ್ಮದ ರಹಸ್ಯವನ್ನು ಕ್ರಮೇಣ ಹೇಳತೊಡಗಿದ್ದರು. ವಯಸ್ಸಿಗೆ ಮೀರಿದ ಅವಳ ಆಕಾಂಕ್ಷೆಯನ್ನೂ ಕುತೂಹಲವನ್ನೂ ಕುಶಾಗ್ರಮತಿಯನ್ನೂ ಕಂಡು ಸಂತೋಷಗೊಳ್ಳುವರು. ಸಾಮಾನ್ಯರಿಗೆ ಅಗೋಚರವಾದ ಶಕ್ತಿಯೊಂದು ಅವಳಲ್ಲಿ ವಿಕಾಸಗೊಳ್ಳುತ್ತಿದ್ದುದನ್ನು ಕಾಣುತ್ತಿದ್ದರು ಗುರುಲಿಂಗರು.

ಆದ್ಯರ ವಚನಗಳನ್ನು ಮಹಾದೇವಿಗೆ ಹೇಳಿಕೊಡುವರು. ಅವರ ಪರಂಪರೆಯನ್ನು ಉಜ್ವಲವಾದ ರೀತಿಯಲ್ಲಿ ಬೆಳೆಸಿಕೊಂಡು ಹೋಗಲು ಸಾಹಸಪಡುತ್ತಿದ್ದ ಬಸವೇಶ್ವರನ ಕೀರ್ತಿಯೂ, ಅಲ್ಲದೆ ಜಂಗಮರ ಮೂಲಕ ಕೆಲವು ವಚನಗಳೂ ಬರತೊಡಗಿದ್ದವು. ಅವುಗಳನ್ನೆಲ್ಲಾ ಮಹಾದೇವಿಗೆ ಹೇಳಿಕೊಡುತ್ತಿದ್ದರು. ತಮ್ಮದೇ ಆದ ಒಂದು' ಬಗೆಯಲ್ಲಿ ಹಾಡುವುದನ್ನು ಕಲಿಸುತ್ತಿದ್ದರು. ಅದೆಲ್ಲವನ್ನೂ ಮಹಾದೇವಿ ಗ್ರಹಿಸುತ್ತಿದ್ದ ರೀತಿ, ಒಮ್ಮೊಮ್ಮೆ ಅವರಿಗೆ ಅಚ್ಚರಿಯನ್ನುಂಟು ಮಾಡುತ್ತಿತ್ತು.

ಶ್ರೀಶೈಲಯಾತ್ರೆಗೆ ಹೊರಡುವ ಮುನ್ನ ಕೆಲವು ಹೊಸ ವಚನಗಳನ್ನು ಶ್ಲೋಕಗಳನ್ನೂ ಆಕೆಗೆ ಕೊಟ್ಟು ಹೋಗಿದ್ದರು. ಐದಾರು ತಿಂಗಳ ಯಾತ್ರೆಯ ನಂತರ ಈಗ ಕುತೂಹಲದಿಂದ ಅವಳ ಬರವನ್ನು ಕಾದು ಕುಳಿತಿದ್ದರು.

ಆಕೆ ಶಂಕರಿಯೊಡನೆ ಮಠದ ಆವರಣವನ್ನು ಪ್ರವೇಶಿಸಿ ಶಾಲೆಗೆ ಹೋದುದನ್ನು ನೋಡಿದರು.ಅದು ಮುಗಿದೊಡನೆ ನೇರವಾಗಿ ಇಲ್ಲಿಗೆ ಬರುತ್ತಾಳೆಂದು ಹೊಸ ವಚನಗಳ ಓಲೆಗರಿಗಳನ್ನು ಆರಿಸಿ ಸಿದ್ಧಗೊಳಿಸತೊಡಗಿದರು. ನಿರೀಕ್ಷೆಗಿಂತ ಮೊದಲೇ ಮಹಾದೇವಿ ಬಂದು ನಮಸ್ಕರಿಸಿದಳು.

"ಬಾ ಮಹಾದೇವಿ, ಶಾಲೆ ಮುಗಿಯಿತೇ?"

"ಮುಗಿಯಿತು ಗುರುಗಳೇ, ಪಾಠ ಬರೆಯಲು ಕೊಟ್ಟಿದ್ದರು. ಇನ್ನೂ ಹುಡುಗರು ಬರೆಯುತ್ತಿದ್ದರು. ನಾನು ಜಾಗ್ರತೆ ಬರೆದು ತೋರಿಸಿ, ತಮ್ಮ ಬಳಿಗೆ ಹೋಗುಬೇಕೆಂದು. ಅಪ್ಪಣೆ ಪಡೆದು ಓಡಿ ಬಂದೆ.... ಎಷ್ಟು ದಿವಸವಾಯಿತು ಗುರುಗಳೇ ನಿಮ್ಮ ಪಾಠವಿಲ್ಲದೆ!" ಉತ್ಸಾಹದಿಂದ ಹೇಳಿದಳು.

"ನಿಜ ಮಹಾದೇವಿ.... ನಾನು ಕೊಟ್ಟ ವಚನಗಳನ್ನೆಲ್ಲಾ...." ಮಾತಿನ ಮಧ್ಯದಲ್ಲಿಯೇ ಮಹಾದೇವಿಯ ಉತ್ತರ ಸಿದ್ಧವಾಗಿತ್ತು:

"ಓ! ಎಲ್ಲವನ್ನೂ ಕಲಿತಿದ್ದೇನೆ ಗುರುಗಳೇ...."

"ಎಲ್ಲ ಯಾವುದಾದರೂ ಒಂದನ್ನು ಹೇಳಮ್ಮ ನೋಡೋಣ."

ಮಹಾದೇವಿ ಕ್ಷಣಕಾಲ ಆಲೋಚಿಸಿದಳು. ಇನ್ನೇನು ಪ್ರಾರಂಭಿಸಬೇಕು, ಅಷ್ಟರಲ್ಲಿ ಮತ್ತೆ ಗುರುಗಳು ಹೇಳಿದರು:

"ಆ ಮೂಲೆಯಲ್ಲಿರುವ ಏಕನಾದವನ್ನು ತೆಗೆದುಕೋ ಬೇಕಾದರೆ."

"ಬೇಡ ಗುರುಗಳೆ. ಈಗ ನಾನು ಹಾಡುವುದಿಲ್ಲ. ಹಾಗೇ ಹೇಳುತ್ತೇನೆ. ಇನ್ನೂ ಕೆಲವು ವಚನಗಳನ್ನು ಹೇಳಿಕೊಡಿ. ಇನ್ನೊಂದು ದಿನ ಹಾಡುತ್ತೇನೆ."

"ಹಾಗೆಯೇ ಆಗಲಿ. ಈಗ ಬೇಕಾದಷ್ಟು ಹೊಸ ವಚನಗಳನ್ನು ತಂದಿದ್ದೇನೆ." ಓಲೆಗರಿಗಳ ಕಡೆ ನೋಡುತ್ತಾ ಹೇಳಿದರು ಗುರುಗಳು.

"ಹೌದೇ, ಗುರುಗಳೇ?" ಉತ್ಸಾಹದಿಂದ ಕೇಳಿದಳು ಮಹಾದೇವಿ.

"ಅದರ ಕಥೆ ಆಮೇಲೆ ಹೇಳುತ್ತೇನೆ. ಎಲ್ಲಿ ಈಗ ಒಂದೆರಡು ವಚನಗಳನ್ನು ಹೇಳು." ಆಗ ಮಹಾದೇವಿ ಪ್ರಾರಂಭಿಸಿದಳು:

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ;
ಸುಳಿದು ಬೀಸುವ ವಾಯು ನಿಮ್ಮ ದಾನ;
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ರಾಮನಾಥ
ಎಡರಡಸಿದಲ್ಲಿ ಮೃಡ ನಿಮ್ಮ ನೆನೆವರು;
ಎಡರಡಸಿದ ವಿಪತ್ತು ಕಡೆಯಾಗಲೊಡನೆ,
ಮೃಡ, ನಿಮ್ಮನೆಡಹಿಯೂ, ಕಾಣರು ರಾಮನಾಥ

ಗದ್ಯಕ್ಕಿಂತ ಬೇರೆಯಾದ ಸ್ವಲ್ಪ ಲಯಬದ್ಧವಾದ ರೀತಿಯಲ್ಲಿ ಹೇಳಿದಳು ದೇವರ ದಾಸಿಮಯ್ಯನ ಈ ವಚನಗಳನ್ನು. ಗುರುಗಳು ಕಣ್ಣು ಮುಚ್ಚಿ ಕೇಳುತ್ತಿದ್ದರು:

"ಆಹಾ! ಎಷ್ಟುಸಾರಿ ಕೇಳಿದರೂ ಹಳತಾಗದ ಮಾತುಗಳಮ್ಮಾ ಇವು. ಬಸವಣ್ಣನವರ ಒಂದೆರಡು ವಚನಗಳನ್ನು ಕೊಟ್ಟಿದ್ದೆನಲ್ಲ. ಬರುತ್ತವೆಯೇ?"

"ಓಹೋ ಬರುತ್ತವೆ" ಎಂದು ಹೇಳತೊಡಗಿದಳು:

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ
ಕೂಡಲಸಂಗಮದೇವಾ, ನಿಮ್ಮ ಶರಣರ ಪಾದವಲ್ಲದೆ,
ಅನ್ಯ ವಿಷಯಕ್ಕೆಳಸದಂತೆ ಇರಿಸು ನಿಮ್ಮ ಧರ್ಮ.

ಮುಗ್ಧವಾದ ಎಳೆಯ ಹೃದಯದ ತನ್ಮಯತೆಯಲ್ಲಿ ಜೀವಂತವಾಗಿ ಮೂಡಿ ಬರುತ್ತಿದ್ದ ಅಣ್ಣನವರ ಮಾತುಗಳು ಗುರುಲಿಂಗದೇವರ ಕಣ್ಣುಗಳಲ್ಲಿ ಆನಂದಬಾಷ್ಪಗಳನ್ನು ತರಿಸಿದುವು.

"ತುಂಬಾ ಸುಂದರವಾಗಿ ಹೇಳುತ್ತಿದ್ದೀಯಮ್ಮ!" ಉದ್ಗರಿಸಿದರು.

"ವಚನವೇ ಹಾಗಿದೆ ಅಲ್ಲವೇ ಗುರುಗಳೇ?" ಕೇಳಿದಳು ಮಹಾದೇವಿ.

"ಹೌದು, ಬಸವಣ್ಣನವರ ವ್ಯಕ್ತಿತ್ವವನ್ನು ಪ್ರತ್ಯಕ್ಷವಾಗಿ ಕಂಡುಬಂದ ನನಗೆ, ಅದರ ಅರ್ಥ ಇನ್ನೂ ಅಗಾಧವಾಗಿ ತೋರುತ್ತಿದೆ. ಇಡೀ ಅವರ ಸಾಧನೆಯೇ ನನ್ನ ಮುಂದೆ ನಿಂತಂತಾಗುತ್ತದೆ."–ಕಣ್ಣುಮುಚ್ಚಿ ಹೇಳಿದರು ಗುರುಲಿಂಗರು.

"ಅಣ್ಣನವರನ್ನು ಪ್ರತ್ಯಕ್ಷವಾಗಿ ಕಂಡು ಬಂದಿರಾ, ಗುರುಗಳೇ! ಅವರೂ ಶ್ರೀಶೈಲಕ್ಕೆ ಬಂದಿದ್ದರೆ?"

"ಇಲ್ಲಮ್ಮಾ, ಅವರೇಕೆ ಶ್ರೀಶೈಲಕ್ಕೆ ಬರಬೇಕು! ಶ್ರೀಶೈಲವೇ ಅವರಿರುವೆಡೆಗೆ ನಡೆದುಬರುತ್ತದೆ. ಅಂತಹ ಅಗಾಧವಾದ ಕಾರ್ಯವನ್ನು ಕೈಕೊಂಡಿದ್ದಾನೆ ಅಣ್ಣ. ಶ್ರೀಶೈಲದಿಂದ ಬರುವಾಗ ನಾನು ಕಲ್ಯಾಣಕ್ಕೆ ಹೋಗಿಬಂದೆ."

"ಹೌದೇ ಗುರುಗಳೇ? ಮತ್ತೆ ಹೇಳಲೇ ಇಲ್ಲವಲ್ಲ ಗುರುಗಳೇ ಅದನ್ನು. ಕಲ್ಯಾಣ ಹೇಗಿತ್ತು ಗುರುಗಳೇ?" ಮಹಾದೇವಿಯ ಕುತೂಹಲಕ್ಕೆ ಕೋಡುಗಳೆರಡು ಮೂಡಿದ್ದುವು.

"ಅದನ್ನೇನು ಹೇಳಲಿ, ತಾಯಿ? ಶ್ರೀಶೈಲವನ್ನೇನೋ ವರ್ಣಿಸಿದೆ. ಆದರೆ ಕಲ್ಯಾಣವನ್ನು ಹೇಗೆ ವರ್ಣಿಸಲಿ. ಮುಂದಿನ ಮಾನವ ಜನಾಂಗಕ್ಕೆ ಆದರ್ಶಪ್ರಾಯವಾಗಿ ನಿಲ್ಲಬಲ್ಲ ಮಹಾಪ್ರಯೋಗವೊಂದು ಅಣ್ಣನವರ ನೇತೃತ್ವದಲ್ಲಿ ರೂಪುಗೊಳ್ಳುತ್ತಿದೆ. ಈಗ ಅದನ್ನು ವರ್ಣಿಸಲಾರೆ. ಕ್ರಮೇಣ ಅದನ್ನು ತಿಳಿಸಿ ಕೊಡುತ್ತೇನೆ."

"ಅಣ್ಣನವರನ್ನು ನೀವು ನೋಡಿದಿರಾ?" ಮತ್ತೆ ಪ್ರಶ್ನೆ ಮಹಾದೇವಿಯದು.

"ಹೌದು! ಬಂದವರಿಗೆಲ್ಲಾ ಅದೇನು ಉಪಚಾರ, ಆ ಅಣ್ಣನವರದು! ಅಂತಹ ದೊಡ್ಡ ಅಧಿಕಾರದಲ್ಲಿದ್ದರೂ ಅದೇನು ವಿನಯವಮ್ಮ. ಅದು ಹೇಳಿದರೆ ನಂಬುವುದು ಕಷ್ಟ. ನನಗಂತೂ ಅವರ ಉಪಚಾರವನ್ನು ಕಂಡು ಸಂಕೋಚವಾಯಿತು." ಅದನ್ನು ಸ್ಮರಿಸಿಕೊಳ್ಳುತ್ತಾ ಹೇಳಿದರು ಗುರುಲಿಂಗರು.

"ಅವರ ಬಳಿ ಏನನ್ನಾದರೂ ಮಾತನಾಡಿದಿರಾ ಗುರುಗಳೇ?" ಮಹಾದೇವಿಯ ಕುತೂಹಲ ಇನ್ನೂ ತೃಪ್ತಿಯಾಗಿರಲಿಲ್ಲ.

"ಹೌದಮ್ಮ, ಬಹಳ ಮಾತನಾಡಿದೆವು. ಈ ಭಾಗದ ವಿಚಾರವನ್ನೆಲ್ಲಾ ಮತ್ತೆಮತ್ತೆ ವಿವರವಾಗಿ ಕೇಳಿದರು. ನಾನು ಎಲ್ಲವನ್ನೂ ಹೇಳಿದೆ. ಇಂದು ನಮ್ಮ ಧರ್ಮ ಪಡೆದಿರುವ ಸಂಕುಚಿತ ಸ್ವರೂಪವನ್ನು ವಿವರಿಸಿದೆ. ಕೇಳಿ ಮರುಗಿದರು. ಅದರ ಉದ್ಧಾರಕ್ಕಾಗಿಯೇ ಕಂಕಣ ಕಟ್ಟಿದವರು ಅವರು.... ನಿನ್ನ ವಿಷಯವನ್ನೂ ಹೇಳಿದೆ."

"ನನ್ನ ವಿಷಯ! ನನ್ನ ವಿಷಯವೇನು ಹೇಳಿದಿರಿ, ಗುರುಗಳೇ?" ಚಕಿತಳಾಗಿ ಕೇಳಿದಳು ಮಹಾದೇವಿ.

"ಧರ್ಮದಲ್ಲಿ ನಿನಗಿರುವ ಅಪಾರವಾದ ಆಸಕ್ತಿಯನ್ನು ಹೇಳಿದೆ. ಅಣ್ಣನವರು ತುಂಬಾ ಮೆಚ್ಚಿದರು. ಧರ್ಮದಲ್ಲಿ ಹೆಣ್ಣು–ಗಂಡು ಎಂಬ ಭೇದವಿಲ್ಲ ಎಂಬುದು ಅವರ ದೃಢವಾದ ನಿರ್ಧಾರ. ಇಂದು ಎಷ್ಟೋಂದು ಜನ ಶಿವಶರಣೆಯರು ಕಲ್ಯಾಣದಲ್ಲಿ ತಮ್ಮ ಸಾಧನೆಗೆ ತೊಡಗಿದ್ದಾರೆ, ಬಲ್ಲೆಯಾ? ಅವರೆಲ್ಲರಿಗೂ ಬಸವಣ್ಣನವರೇ ಪ್ರೇರಕರು. ನಿನ್ನ ವಿಚಾರವನ್ನು ನಾನು ಹೇಳಿದಾಗ ತುಂಬಾ ಸಂತೋಷಪಟ್ಟರು. ಆ ಶಕ್ತಿ ಹಾಗೆಯೇ ಬೆಳೆಯಲಿ ಎಂದು ಆಶಿಸಿದರು. ನಿನಗಾಗಿ ಈ ವಚನಗಳ ಕಟ್ಟನ್ನು ಕೊಟ್ಟರು" ಎಂದು ವಚನಗಳುಳ್ಳ ಓಲೆಗರಿಗಳ ಕಟ್ಟನ್ನು ಮಹಾದೇವಿಗೆ ಕೊಡುತ್ತಾ:

"ಇವುಗಳನ್ನು ಚೆನ್ನಾಗಿ ಕಲಿಯಮ್ಮ. ಅಣ್ಣನ ಆಸೆ ನೆರವೇರುವಂತೆ ಮಾಡು. ನಿನ್ನ ಹೃದಯದ ಭಕ್ತಿರಸವೂ ವಚನಗಳ ರೂಪದಲ್ಲಿ ಉಕ್ಕಿ ಅದರೊಡನೆ ಸೇರಲಿ. ಇನ್ನೂ ಶ್ರೀಮಂತಗೊಳ್ಳಲಿ."

ಮಹಾದೇವಿ ಮೇಲೆದ್ದು ಅದನ್ನು ಸ್ವೀಕರಿಸಿ ಗುರುಗಳಿಗೆ ನಮಸ್ಕರಿಸಿದಳು. 'ಕಲ್ಯಾಣ' ಎಂಬ ಮಾತು ಮಂತ್ರ ಸದೃಶವಾಯಿತು ಅವಳಿಗೆ. ಶ್ರೀಶೈಲದ ವರ್ಣನೆಯ ಕೊನೆಯಲ್ಲಿ 'ಕದಳಿ' ಎಂಬ ಮಾತು ಅಣ್ಣನ ಕಾರ್ಯಕ್ಷೇತ್ರವಾದ 'ಕಲ್ಯಾಣ' ಎಂಬ ಮಂತ್ರದೊಡನೆ ಸೇರಿತು. 'ಕದಳಿ', 'ಕಲ್ಯಾಣ' ಮಹಾದೇವಿಯ ಸಾಧನೆಯ ಎರಡು ಕಣ್ಣುಗಳಾಗಿ ಪರಿಣಮಿಸಿದುವು. ಜಗತ್ತಿನ ದೃಷ್ಟಿಯಿಂದ ಇನ್ನೂ ಚಿಕ್ಕವಳಾಗಿದ್ದ ಮಹಾದೇವಿಯಲ್ಲಿ ಎಲ್ಲರಿಗೂ ಅಕ್ಕನಾಗುವ ಮಹಾ ಚೈತನ್ಯದ ದಿವ್ಯಶಕ್ತಿ ರೂಪುಗೊಳ್ಳತೊಡಗಿತು.

## ೭

ಬೀಜದಲ್ಲಿರುವ ಸಂಕಲ್ಪಶಕ್ತಿ ಅನುಕೂಲಕರವಾದ ವಾತಾವರಣದಿಂದ ಮೊಳಕೆಯೊಡೆದು ನಳನಳಿಸಿ ಬೆಳೆದು ಹೆಮ್ಮರವಾಗಿ ಪರಿಣಮಿಸುವಂತೆ, ಮಹಾದೇವಿಯ ಚೇತನದ ಆಧ್ಯಾತ್ಮಿಕ ಸಸಿ, ಸುಂದರವಾಗಿ ಬೆಳೆಯತೊಡಗಿತ್ತು. ತನ್ನ ಎಳೆಯತನವನ್ನು ಕಳೆದುಕೊಂಡು ಉಜ್ವಲವಾದ ಹೊಳಪನ್ನು ಬೀರುತ್ತಾ ವಿಕಾಸಗೊಳ್ಳುತ್ತಿತ್ತು.

ಇಂದು ಮಹಾದೇವಿ ಕೌಮಾರ್ಯವನ್ನು ದಾಟಿ ನವಯೌವನದ ಹೊಸಲಲ್ಲಿ ನಿಂತಿರುವ ಸುಂದರತರುಣಿ. ಅವಳ ಅಂಗಸೌಷ್ಠವ, ಲಾವಣ್ಯರಸದಿಂದ ಆರ್ದ್ರವಾದ ಮೋಹಕವಾದ ಕಾಂತಿಯನ್ನು ಹೊರಹೊಮ್ಮಿಸುತ್ತಿತ್ತು. ಆದರೆ ಆಕರ್ಷಕವಾದ ದೇಹಸೌಂದರ್ಯದ ಆ ತೆರೆಯ ಹಿಂದೆ, ಸೌಂದರ್ಯರೂಪಿಣಿಯಾದ ಜಗಜ್ಜನನಿಯ ಅಪಾರವಾದ ಕಾರುಣ್ಯವೇ ಮೂರ್ತಿವೆತ್ತಂತೆ ಮಹಾದೇವಿಯ ಮಧುರಭಕ್ತಿ ರೂಪುಗೊಂಡಿತ್ತು. ಸೌಂದರ್ಯಕ್ಕೆ ಪವಿತ್ರತೆಯನ್ನು ತಂದುಕೊಟ್ಟಿತ್ತು.

ಗುರುಲಿಂಗದೇವರ ನಿರೀಕ್ಷಣೆಗಿಂತಲೂ ಅಧಿಕವಾಗಿ ಅವಳ ಆಧ್ಯಾತ್ಮಿಕ ಸಾಧನೆ ಮುಂದುವರಿದಿತ್ತು. ಕಲ್ಯಾಣದಲ್ಲಿ ತಾವು ಕಂಡ ಬಸವಣ್ಣನವರ ವ್ಯಕ್ತಿತ್ವವನ್ನೂ ಅವರ ಕಾರ್ಯಕ್ಷೇತ್ರದ ಮಹಿಮೆಯನ್ನೂ ಶರಣಮಾರ್ಗದ ರಹಸ್ಯವನ್ನೂ ತಾವು ತಿಳಿದಷ್ಟರಮಟ್ಟಿಗೆ ವಿವರಿಸುತ್ತಿದ್ದರು. ಅವರು ತಂದುಕೊಟ್ಟ ಅಣ್ಣನವರ ವಚನಗಳಂತೂ ಮಹಾದೇವಿಯ ಕಣ್ಣುಮುಂದೆ ಹೊಸದೊಂದು ಸಾಧನೆಯ ಪ್ರಪಂಚವನ್ನೇ ತೆರೆದು ತೋರಿಸಿದ್ದುವು. ದಿನಗಳು ಕಳೆದಂತೆಲ್ಲಾ ಹೊಸ ಹೊಸ ಅರ್ಥ, ಅಣ್ಣನವರ ಮಾತುಗಳಲ್ಲಿ ವ್ಯಕ್ತವಾಗುತ್ತಿತ್ತು.

ಬಸವಣ್ಣನವರ ಭಕ್ತಿಹೃದಯದ ತಳಮಳ, ಮಹಾದೇವಿಯ ಅಂತರಂಗದಲ್ಲಿ ತಾದಾತ್ಮ್ಯವನ್ನು ಪಡೆದಿತ್ತು. ತನ್ನ ಹೃದಯದ ಭಾವನೆಗಳಿಗೇ ಅಣ್ಣ ವ್ಯಕ್ತಸ್ವರೂಪವನ್ನು ಕೊಟ್ಟಂತೆ ಅನಿಸುತ್ತಿತ್ತು. ತಾನೂ ಅದರಲ್ಲಿ ದನಿಗೂಡುತ್ತಿದ್ದಳು.

ಎನ್ನ ಕಾಯವ ದಂಡಿಗೆಯ ಮಾಡಯ್ಯ;
ಎನ್ನ ಶಿರವ ಸೋರೆಯ ಮಾಡಯ್ಯ;
ಎನ್ನ ನರವ ತಂತಿಯ ಮಾಡಯ್ಯ;
ಬತ್ತೀಸರಾಗವ ಹಾಡಯ್ಯ; ಉರದಲೊತ್ತಿ ಬಾರಿಸು
ಕೂಡಲ ಸಂಗಮದೇವಾ

ಈ ವಚನವನ್ನು ಅದೆಷ್ಟು ಬಾರಿ ಹೇಳಿಕೊಂಡಿದ್ದಳೋ! ಅಲ್ಲದೆ:

ಅರಿಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟ,

ಪುರುಷನ ಒಲವಿಲ್ಲದ ಲಲನೆಯಂತಾಗಿದ್ದೆನಯ್ಯಾ!
ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ,
ಶಿವ, ನಿಮ್ಮೊಲವಿಲ್ಲದಂತೆ ಆಗಿರ್ದೆನಯ್ಯಾ!
ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ
ನೀನೊಲಿದಂತೆ ಸಲಹಯ್ಯ ಕೂಡಲಸಂಗಮದೇವಾ

ಎಂಬ ವಚನವಂತೂ ಅವಳಿಗೆ ಮಂತ್ರದಂತಾಗಿತ್ತು. ಬಸವಣ್ಣನವರು ತಾವು ಸತಿಯ ಭಾವನೆಯನ್ನು ಕಲ್ಪಿಸಿಕೊಂಡು ಹಾಡಿದ್ದರೆ, ಮಹಾದೇವಿಯದು ಮಲ್ಲಿಕಾರ್ಜುನನಿಗೆ ಮೀಸಲಾದ ಹೆಣ್ಣುಹೃದಯ. ಆ ಮಧುರಭಕ್ತಿಯ ಮಧು, ಅವಳ ಅಂತರಂಗದಲ್ಲಿ ಅತಿ ಸಹಜವಾಗಿ ಮಡುಗಟ್ಟಿನಿಂತಿತ್ತು. ಅದಕ್ಕೆ ತಾನೂ ವಚನಗಳ ರೂಪದಲ್ಲಿ ವ್ಯಕ್ತಸ್ವರೂಪವನ್ನು ಕೊಡಬೇಕೆಂದು ಹಂಬಲಿಸುವಳು. ಅದಕ್ಕೆ ಗುರುಲಿಂಗದೇವರ ಪ್ರೋತ್ಸಾಹವೂ ಇತ್ತು.

"ನಿನ್ನ ಹೃದಯದ ಭಕ್ತಿರಸ, ವಚನಗಳ ರೂಪದಲ್ಲಿ ಉಕ್ಕಿ ಈ ವಚನ ಸಾಹಿತ್ಯದೊಡನೆ ಸೇರಬೇಕು."

ಎಂದು ಹಿಂದೆ ಅವರು ಹೇಳಿದ ಮಾತು ಅಚ್ಚೊತ್ತಿದಂತಿತ್ತು. ಇನ್ನೂ ಅನೇಕ ಸಂದರ್ಭಗಳಲ್ಲಿ ತಮ್ಮ ಆಸೆಯನ್ನು ಆಡಿಯೂ ತೋರಿಸಿದ್ದರು, ಅವಳ ಆಕಾಂಕ್ಷೆಗೆ ಪ್ರಚೋದನೆಯನ್ನಿತ್ತಿದ್ದರು.

ಮಹಾದೇವಿಯಲ್ಲಿ ಆ ಶಕ್ತಿ ಆಗಾಗ ಮಿಂಚುತ್ತಲೂ ಇತ್ತು. ಒಮ್ಮೆ ಪೂಜೆಯಲ್ಲಿ ತೊಡಗಿದ್ದಾಗ, ಇದ್ದಕ್ಕಿದಂತೆಯೇ ಒಂದು ವಚನ ಹೊಳೆದಿತ್ತು:

'ನರಜನ್ಮವನ್ನು ಕಳೆದು, ಹರಜನ್ಮವನ್ನು ಪಡೆದು, ಹರನನ್ನು ನಾನು ಪೂಜಿಸುತ್ತಿದ್ದೇನೆ. ಇಂದಲ್ಲ ನಾಳೆ ಹರನನ್ನು ಪಡೆದೇ ಪಡೆಯುತ್ತೇನೆ' ಎಂಬ ಭಾವನೆ ಪೂಜಾಸಮಯದಲ್ಲಿ ಸುಳಿಯಿತು. ಆ ಭಾವನೆಯಿಂದ ಅವಳಲ್ಲಿ ಒಂದು ಅಪೂರ್ವವಾದ ಆನಂದದ ಅನುಭವ ಸಂಚಾರವಾದಂತಾಯಿತು.

'ನರಜನ್ಮವನ್ನು ಕಳೆದು, ಹರಜನ್ಮವನ್ನು ಕೊಟ್ಟಿದ್ದಾನೆ ಗುರು. ಅವನ ಕರುಣೆಯ ಫಲದಿಂದ ನಾನು ಭವಿ ಎಂಬುದನ್ನು ಕಳೆದು ಭಕ್ತೆಯೆಂದೆನಿಸಿದ್ದೇನೆ. ಭವಬಂಧನವನ್ನು ದಾಟಿ ಪರಮಸುಖವನ್ನು ಕಂಡುಕೊಳ್ಳುವ ಮಾರ್ಗದಲ್ಲಿದ್ದೇನೆ'– ಎಂದು ಮುಂತಾದ ಭಾವಗಳು ಸುಳಿದವು. ಅದೊಂದು ವಚನರೂಪದಲ್ಲಿ ಹೊರಬಿತ್ತು ಹಾಡಿದಳು:

ನರಜನ್ಮವ ತೊಡೆದು, ಹರಜನ್ಮವ ಮಾಡಿದ ಗುರುವೇ,
ಭವಬಂಧನವ ಬಿಡಿಸಿ, ಪರಮಸುಖವ ತೋರಿದ ಗುರುವೇ,

ಭವಿ ಎಂಬುದ ತೊಡೆದು, ಭಕ್ತೆಯೆಂದೆನಿಸಿದೆ ಗುರುವೆ,
ಚೆನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ
ಗುರುವೇ ಶರಣು, ಶರಣು.

ಆನಂದ ಉಕ್ಕಿಹರಿಯಿತು. ಅದನ್ನು ಮತ್ತೆಮತ್ತೆ ಹೇಳಿಕೊಂಡಳು. ಪೂಜೆಯ ನಂತರ ಅದನ್ನು ಓಲೆಗರಿಯ ಮೇಲೆ ಬರೆದಿಟ್ಟಳು.

ಸಂಜೆ ಮಠದಲ್ಲಿ ಅದನ್ನು ಗುರುಗಳ ಮುಂದೆ ಹೇಳಿದಳು. ಗುರುಲಿಂಗರು ಸಂತೋಷಪರವಶರಾದರು. ತಮ್ಮ ನಿರೀಕ್ಷೆ ಸಫಲವಾಗುತ್ತದೆಂಬ ನಂಬಿಕೆ ದೃಢವಾಯಿತು ಹೇಳಿದರು:

"ನಿಜ, ಮಗಳೇ, ನಾನು ಅಂದು ಮಾಡಿದ ದೀಕ್ಷೆಯ ಅರ್ಥವನ್ನು ಸುಂದರವಾಗಿ ಹೊರಹೊಮ್ಮಿಸಿದ್ದೀಯ.... ಅಲ್ಲದೆ ನಿನ್ನ ವಚನಕ್ಕೆ ಆ ಅಂಕಿತ ತುಂಬಾ ಚೆನ್ನಾಗಿ ಒಪ್ಪುತ್ತದೆ."

"ನೀವೇ ಅದನ್ನು ಸೂಚಿಸಿದ್ದಿರಿ, ಗುರುಗಳೇ, ಚೆನ್ನಮಲ್ಲಿಕಾರ್ಜುನನ ಚೆನ್ನಸತಿಯಾಗೆಂದು. ಆ ಮಾತು ನನ್ನ ಮನಸ್ಸಿನಲ್ಲಿ ಉಳಿದಿತ್ತು. ಇಂದು ಅದು ಈ ವಚನದ ಅಂಕಿತವಾಗಿ ಪರಿಣಮಿಸಿತು."

"ಈ ಅಂಕಿತದಿಂದ ನೂರಾರು ವಚನಗಳನ್ನು ಬರೆದು ನಿನ್ನ ಭಕ್ತಿ ಹೃದಯದ ಅನುಭವವನ್ನು ಕನ್ನಡ ಮಾತುಗಳಲ್ಲಿ ಒಡಮೂಡಿಸು, ತಾಯಿ."

"ತಮ್ಮ ಆಶೀರ್ವಾದದಿಂದ ಆ ನಮ್ರ ಪ್ರಯತ್ನವನ್ನು ಮಾಡುತ್ತೇನೆ, ಗುರುಗಳೇ." ವಿನೀತಳಾಗಿ ಹೇಳಿದಳು.

ಆಗಲೇ ಸಂಧ್ಯಾಕಾಲ ಮೀರಿ ಕತ್ತಲು ಆವರಿಸತೊಡಗಿತ್ತು. ಮಠದ ಆವರಣದಲ್ಲಿರುವ ತಪೋವನದ ಶಿಲಾಪೀಠದ ಮೇಲೆ ಕುಳಿತಿದ್ದರು ಗುರುಲಿಂಗರು ಮತ್ತು ಮಹಾದೇವಿ. ಅನೇಕ ದಿನಗಳಿಂದ ಹಿಡಿದಿದ್ದ ಮಳೆ ಇಂದು ಬಿಡುವು ಕೊಟ್ಟು ಆಕಾಶ ತಿಳಿಯಾಗಿತ್ತು. ತೋಟದ ಮರಗಳ ಮರೆಯಲ್ಲಿ ಸೂರ್ಯ ಮರೆಯಾಗಿ, ಪಡುವಣ ದಿಗಂತದ ಕೆಂಪು ಬಣ್ಣವು ಆಕಾಶದಲ್ಲಿ ಚದುರಿದ್ದ ಮೋಡಗಳಿಗೆಲ್ಲಾ ತನ್ನ ಕ್ರಾಂತಿಯನ್ನಿತ್ತು ಮತ್ತೆ ಅದನ್ನು ಹಿಂದಕ್ಕೆ ಪಡೆಯುತ್ತಿತ್ತು. ಕ್ರಮೇಣ ಕತ್ತಲೆ ಆಕ್ರಮಿಸಿಕೊಳ್ಳುತ್ತಿತ್ತು.

ಹಕ್ಕಿಗಳು ಚಿಲಿಪಿಲಿಗುಟ್ಟುತ್ತಾ ತಮ್ಮ ಮನೆಗೆ ಹಿಂದಿರುಗುತ್ತಿದ್ದುವು. ಭೋರೆಂದು ಬೀಸುವ ಆಷಾಢದ ಶೀತಲವಾದ ಗಾಳಿ ಇಂದು ಮಂದಮಾರುತವಾಗಿತ್ತು. ಮಹಾದೇವಿಯ ಮನಸ್ಸಿನಂತೆಯೇ ಪ್ರಕೃತಿಯೂ ಪ್ರಸನ್ನವಾಗಿ ನಗುತ್ತಿತ್ತು.

ಕ್ಷಣಕಾಲ ನೀರವವಾಗಿದ್ದ ಗುರುಗಳು ಎಚ್ಚತ್ತವರಂತೆ ಸುತ್ತಲೂ ನೋಡುತ್ತ: "ಓ! ಕತ್ತಲಾಗುತ್ತ ಬಂದಿತಲ್ಲಮ್ಮ ಮಹಾದೇವಿ. ಒಬ್ಬಳೇ ಮನೆಗೆ ಹೇಗೆ ಹೋಗುತ್ತೀಯಾ? ತಾಳು ಗುರುಪಾದಪ್ಪನನ್ನು ಕರೆಯುತ್ತೇನೆ" ಎನ್ನುತ್ತಾ ಎದ್ದರು.

"ಏನು ಬೇಡಿ ಗುರುಗಳೇ, ಇನ್ನೂ ಸ್ವಲ್ಪ ಬೆಳಕಿದೆ, ಅಲ್ಲದೆ ಅದೆಷ್ಟು ದೂರ ಮಹಾ, ಈಗ ಹೋಗಿಬಿಡುತ್ತೇನೆ."

"ಹಾಗಲ್ಲಮ್ಮಾ.... ಈಗ ಒಬ್ಬಳೇ ಹೋಗಬಾರದು" ಎನ್ನುತ್ತಾ ಹೋಗಿ ಗುರುಪಾದಪ್ಪನನ್ನು ಕರೆದರು. ಆತನನ್ನು ಜೊತೆಮಾಡಿ ಕಳುಹಿಸಿಕೊಟ್ಟರು.

ಆಕೆ ಚಿಕ್ಕವಳಿರುವಾಗ ಅನೇಕ ಸಾರಿ, ಇದಕ್ಕಿಂತ ಕತ್ತಲಾದಮೇಲೂ ಒಬ್ಬಳೇ ಹೋಗುತ್ತಿದ್ದಳು. ಆಗ ಅದನ್ನು ಗುರುಗಳು ಅಷ್ಟಾಗಿ ಲಕ್ಷಿಸುತ್ತಿರಲಿಲ್ಲ. ಆದರೆ ಈಗ ಒಮ್ಮೊಮ್ಮೆ ಹೀಗೇನಾದರೂ ಹೊತ್ತಾದರೆ ಅವಳೊಬ್ಬಳನ್ನೇ ಎಂದೂ ಕಳುಹಿಸಿಕೊಡುತ್ತಿರಲಿಲ್ಲ. ತಮಗೆ ತೀರಾ ಆಪ್ತರಾದವರು ಯಾರನ್ನಾದರೂ ಕರೆದು ಜೊತೆಗೆ ಕಳುಹಿಸುತ್ತಿದ್ದರು–ಇದನ್ನು ಕುರಿತು ಆಲೋಚಿಸುತ್ತಾ ಮಹಾದೇವಿ, ಗುರುಪಾದಪ್ಪನ ಜೊತೆಯಲ್ಲಿ ನಡೆಯುತ್ತಿದ್ದಳು.

ಗುರುಲಿಂಗದೇವರ ಮಠ ಇದ್ದುದು ಊರ ಮುಂದಿರುವ ರಾಜ್ಯೋದ್ಯಾನದಿಂದ ಆಚೆ ಸ್ವಲ್ಪ ದೂರದಲ್ಲಿ. ಅಲ್ಲಿಂದ ನಡೆದು ರಾಜೋದ್ಯಾನವನ್ನು ದಾಟಿ ರಾಜಬೀದಿಗೆ ಬಂದು ಸೇರಿದರೆ ಸಾಕು, ಅಲ್ಲಿಂದ ಊರು ಪ್ರಾರಂಭವಾಗುತ್ತಿತ್ತು. ಅಲ್ಲಿಯವರೆಗೂ ಬಂದಿದ್ದರು, ಓಂಕಾರನೇ ಅಲ್ಲಿ ಬಂದು ನಿಂತಿದ್ದ ರಾಜಬೀದಿಯ ಕೊನೆಯಲ್ಲಿ.

"ಇದೇನು ಓಂಕಾರಶೆಟ್ಟರೇ, ಇಲ್ಲಿಯೇ ನಿಂತುಬಿಟ್ಟಿರಿ?" ಗುರುಪಾದಪ್ಪ ಕೇಳಿದ.

"ಮಹಾದೇವಿ ಏಕೋ ಇನ್ನೂ ಬರಲಿಲ್ಲವೆಂದು ನಾನೇ ಮಠದ ಕಡೆಗೆ ಬರುತ್ತಿದ್ದೆ. ನೀವು ಬರುತ್ತಿರುವುದು ಕಾಣಿಸಿತು. ಇಲ್ಲೇ ನಿಂತುಕೊಂಡೆ" ಎಂದು ಮಗಳತ್ತ ತಿರುಗಿ, "ಇಷ್ಟು ಹೊತ್ತು ಏನು ಮಾಡುತ್ತಿದ್ದೆಯಮ್ಮ, ಮಹಾದೇವಿ?" ಎಂದ.

"ಗುರುಗಳ ಹತ್ತಿರ ಮಾತನಾಡುತ್ತಾ ಕುಳಿತುಬಿಟ್ಟೆ, ಹೊತ್ತಾಗಿಹೋಯಿತಪ್ಪ" ಎಂದು ಗುರುಪಾದಪ್ಪನ ಕಡೆಗೆ ತಿರುಗಿ:" ಇನ್ನು ನೀವು ಹೋಗಬಹುದಲ್ಲ? ಮತ್ತೇಕೆ ಅಲ್ಲಿಯವರೆಗೆ?" ಎಂದಳು.

"ಹೌದಮ್ಮ.... ನಾನು ಬರಲೇ, ಶೆಟ್ಟರೇ...ನನಗೂ ಮಠದಲ್ಲಿ ಸ್ವಲ್ಪ ಕೆಲಸವಿತ್ತು" ಎಂದು ಮಠದ ಕಡೆಗೆ ಹಿಂತಿರುಗಿದ ಗುರುಪಾದಪ್ಪ.

ಓಂಕಾರ ಮಹಾದೇವಿಯರು ನಾಲ್ಕು ಹೆಜ್ಜೆ ಮುಂದೆ ಹೋಗಿದ್ದರು. ಅಷ್ಟರಲ್ಲಿ ಎದುರಿನಿಂದ ಬಂದ ಮಾರ್ತಾಂಡಪ್ಪ. ಮಾಡಲು ಕೆಲಸವಿಲ್ಲದೆ, ಹಿರಿಯರ ಆಸ್ತಿಯನ್ನು ತಿಂದು ತಿರುಗುತ್ತಿದ್ದವನು ಅವನು. ಊರಿನ ಅಂಥದೇ ಒಂದು ಸಣ್ಣ ಗುಂಪಿಗೆ ಮುಖಂಡನಾಗಿದ್ದ. ಓಂಕಾರನನ್ನೂ ಮಹಾದೇವಿಯನ್ನೂ ಕಂಡು ಕೇಳಿದ :

"ಏನು ಓಂಕಾರ ಶೆಟ್ಟರೇ, ಈಗ ಮಗಳನ್ನು ಮನೆಗೆ ಕರೆದುಕೊಂಡು ಹೋಗುತ್ತಿದ್ದೀರೋ ? ನಿಮಗೆ ಇದೊಂದು ಕೆಲಸವೇ ಆಗಿಹೋಯಿತಲ್ಲವೇ?" ಎಂದು ವ್ಯಂಗ್ಯವಾಗಿ ನಗುತ್ತಾ ಮಹಾದೇವಿಯತ್ತ ನೋಡಿ ಮುಂದೆ ನಡೆದ.

ಸ್ವಲ್ಪ ದೂರ ಮೌನವಾಗಿ ನಡೆದರು ತಂದೆ ಮಕ್ಕಳು. ನಂತರ ಓಂಕಾರ ಹೇಳಿದ :

"ಮಠದಲ್ಲಿ ನೀನು ಇಷ್ಟುಹೊತ್ತು ಇರಬಾರದಮ್ಮಾ. ನೀನೇನು ಹಿಂದಿನ ಹಾಗೆ ಚಿಕ್ಕವಳಲ್ಲ. ಅನ್ನುವವರಿಗೆ ಆಡಿಕೊಳ್ಳುವವರಿಗೆ ಒಂದು ಅವಕಾಶವಾಗುತ್ತದೆ."

ಈ ಮಾತು ಮಹಾದೇವಿಯನ್ನು ಮೌನವನ್ನಾಗಿ ಮಾಡಿತು. ಈ ಮಾತಿನ ಸತ್ಯ ಈಗ ಹೆಜ್ಜೆ ಹೆಜ್ಜೆಗೂ ಅನುಭವಕ್ಕೆ ಬರತೊಡಗಿತ್ತು ಮಹಾದೇವಿಗೆ.

"ಇನ್ನೂ ಚಿಕ್ಕ ಹುಡುಗಿಯಂತೆ ಆಡುತ್ತಾಳೆ. ಮದುವೆಯಾಗಿದ್ದರೆ ಮೂರು ಮಕ್ಕಳಾಗುತ್ತಿದ್ದುವು."

"ಇನ್ನೂ ಮಠಕ್ಕೆ ಹೋಗುತ್ತಾಳೆ ? ಹೆಂಗಸರಿಗೇಕಮ್ಮ ಅದೆಲ್ಲಾ ?"

"ಅವಳದೇನು ತಪ್ಪು, ಇನ್ನೂ ಮದುವೆ ಮಾಡದೆ ಹಾಗೆ ಬಿಟ್ಟಿದ್ದಾರಲ್ಲ, ಅವರಿಗೇನು ಹೇಳಬೇಕು ?" – ಇಂತಹ ಅನೇಕ ಮಾತುಗಳು ಆಗಾಗ ಅವಳ ಕಿವಿಯ ಮೇಲೆ ಬೀಳುತ್ತಿದ್ದುವು.

ನಿಜ, ಮಹಾದೇವಿಯ ಗೆಳತಿಯರೆಲ್ಲರಿಗೂ ಆಗಲೇ ಮದುವೆಯಾಗಿದೆ. ಶಂಕರಿಗೆ ಈ ವರ್ಷ ಮದುವೆಯಾಯಿತು. ಆದರೆ ಇನ್ನೂ ತವರು ಮನೆಯನ್ನು ಬಿಟ್ಟಿಲ್ಲ. ಆಷಾಡಮಾಸ ಕಳೆಯುವುದನ್ನೇ ಕಾಯುತ್ತಿದ್ದಾನೆ. ಕಾತ್ಯಾಯಿನಿ ಹೋದ ವರ್ಷವೇ ಗಂಡನ ಮನೆಗೆ ಹೋದವಳು ಈ ವರ್ಷ ತಾಯಾಗುವ ಸಂತೋಷದಿಂದ ಬಂದಿದ್ದಾಳೆ ತವರೂರಿಗೆ. ದಾಕ್ಷಾಯಿಣಿಯಂತೂ ಈಗಾಗಲೇ ಒಂದು ಮಗುವಿನ ತಾಯಿ.

ಮೊನ್ನೆಯ ದಿನ ಆಕೆ ಮಹಾದೇವಿಯನ್ನು ನೋಡಲು ಬಂದಾಗ ಮಗುವನ್ನೆತ್ತಿಕೊಂಡೇ ಬಂದಿದ್ದಳು. ಅವಳ ಮಗುವನ್ನೆತ್ತಿಕೊಂಡು ಆಟವಾಡುತ್ತಿರುವಾಗ ದಾಕ್ಷಾಯಿಣಿ ಕೇಳಿದ್ದಳು :

"ಏನು ಮಹಾದೇವಿ, ನೀನಾವಾಗ ಇಂತಹ ಮಗುವನ್ನು ಪಡೆಯುವುದು?"

ಅದನ್ನು ನೆನೆಸಿಕೊಂಡು ಮಹಾದೇವಿ ಯಾರು ಏನನ್ನು ಮಾತನಾಡಿದರೂ ಕೊನೆಗೆ ಅದು ಅಲ್ಲಿಗೆ ಬಂದು ನಿಲ್ಲುವುದು. 'ಮದುವೆ, ಮಗು, ಗಂಡ, ಹೆಂಡತಿ.' – ಇದಲ್ಲಿಯೇ ಪರಿಸಮಾಪ್ತಿ. ಇದನ್ನು ಬಿಟ್ಟು ಬಾಳುವುದು ಸಾಧ್ಯವೇ ಇಲ್ಲವೇ? ಇದೇ ಜೀವನದ ಗುರಿಯೇ? 'ಎಷ್ಟೊಂದು ಸಹಜವಾಗಿ ಈ ಜೀವನಪ್ರವಾದಲ್ಲಿ ಎಲ್ಲರೂ ತೇಲಿಹೋಗುತ್ತಿದ್ದಾರೆ....' ಎಂದು ಆಲೋಚಿಸುತ್ತಿದ್ದಂತೆಯೇ ತನ್ನ ಗೆಳತಿಯರ ನೆನಪು ಅವಳ ಕಣ್ಣೆದುರು ಸುಳಿಯಿತು :

'ನಾವೆಲ್ಲಾ ಜೊತೆಯಲ್ಲಿ ಆಟವಾಡುತ್ತಿದ್ದವರು. ಇಂದು ಅವರಲ್ಲಿ ಎಷ್ಟೊಂದು ಬದಲಾವಣೆ ? ದಾಕ್ಷಾಯಿಣಿ ಹೆಮ್ಮೆಯಿಂದ ತನ್ನ ಮಗುವನ್ನು ಮುದ್ದಿಸುತ್ತಿದ್ದಾಳೆ. ತಾಯಾಗಲಿರುವ ಕಾತ್ಯಾಯಿನಿಯ ಸಂಭ್ರಮವಂತೂ ಹೇಳತೀರದು. ಇನ್ನು ಶಂಕರಿ ;– ನಾವು ಎಷ್ಟೊಂದು ಆತ್ಮೀಯ ಗೆಳತಿಯರಾಗಿದ್ದೆವು ! ಆದರೆ ಇಂದು ನನ್ನನ್ನಿರಲಿ, ತಾನು ಹುಟ್ಟಿ ಬೆಳೆದ ಮನೆಯನ್ನೇ ಬಿಟ್ಟುಹೋಗಲು ಎಷ್ಟು ಸಂಭ್ರಮ! ಇಷ್ಟೊಂದು ಪ್ರಬಲವಾದ ಆಕರ್ಷಣೆಯನ್ನುಂಟುಮಾಡುತ್ತಿರುವ ಆ ಶಕ್ತಿ ಯಾವುದು ? ಜೀವನಕ್ಕೆ ಅತ್ಯನಿವಾರ್ಯವಾದ ಶಕ್ತಿಯಾಗಿರಬಹುದೇ ಅದು? ಹಾಗಾದರೆ ನನ್ನದು ಅಸಹಜವಾದ ಪ್ರವೃತ್ತಿಯೇ?... ಆದರೆ ಇವುಗಳನ್ನೆಲ್ಲಾ ನನಗೇಕೆ ಸಂತೋಷ ತೋರುವುದಿಲ್ಲ ? 'ಇದೆಲ್ಲಾ ನಿನ್ನ ಗುರಿಯಲ್ಲ ! ನಿನ್ನ ಮಾರ್ಗವಲ್ಲ' ಎಂದು ಯಾರೋ ಹೇಳಿದಂತಾಗುತ್ತಿದೆಯಲ್ಲ. ಮದುವೆಯೆಂದರೆ ಚೆನ್ನಮಲ್ಲಿಕಾರ್ಜುನನಲ್ಲದೆ, ಇನ್ನಾವ ರೂಪೂ ನನ್ನ ಕಣ್ಣುಮುಂದೆ ಬರುವುದೇ ಇಲ್ಲ. ಇಹಕ್ಕೊಬ್ಬ ಗಂಡ, ಪರಕೊಬ್ಬ ಗಂಡನೇ ? ಅವನೊಬ್ಬನನ್ನೇ ಪತಿಯನ್ನಾಗಿ ಪಡೆಯುವುದು ಸಾಧ್ಯವೇ ಇಲ್ಲವೇ ? ಅಥವಾ ಅದು 'ಸಾಧು'ವಲ್ಲವೆ ? 'ಸಾಧು' ಎಂದೇನೋ ಗುರುಗಳು ಹೇಳುತ್ತಾರೆ. ಆದರೆ ಅದು ಎಲ್ಲರಿಗೂ ಸಾಧ್ಯವಿಲ್ಲವೆಂದು ಎಚ್ಚರಿಸುತ್ತಾರೆ. ನಾನದನ್ನು ಸಾಧ್ಯವನ್ನಾಗಿ ಮಾಡಿತೋರಿಸುತ್ತೇನೆ. ನನಗೆ ಒಬ್ಬನೇ ಗಂಡ. ಅವನು ಚೆನ್ನಮಲ್ಲಿಕಾರ್ಜುನ. ಅವನು ಮಕ್ಕಳನ್ನು ಕೊಡುವ ಗಂಡನಲ್ಲ ; ಮೋಕ್ಷವನ್ನು ಕೊಡುವ ಗಂಡ. ಅವನನ್ನು ಪಡೆಯುವುದೇ ನನ್ನ ಜೀವನದ ಗುರಿ.'

ಇದು ಮಹಾದೇವಿಯ ಮನಸ್ಸಿನಲ್ಲಿ ಅನೇಕ ರೀತಿಯಲ್ಲಿ ಸುಳಿದಾಡುತ್ತಿದ್ದ ಆಲೋಚನಾ ತರಂಗಗಳ ಒಂದು ತೆರೆ.

ಕೆಲವು ದಿನಗಳ ಹಿಂದೆ ಗೆಳತಿಯರೆಲ್ಲಾ ಸೇರಿ ಹಾಸ್ಯ ಮಾಡುತ್ತಾ :

"ಯಾವಾಗಮ್ಮ ನಿನ್ನ ಮದುವೆ ?... ಇವಳು ಕೈ ಹಿಡಿಯುವ ಗಂಡ

ಎಂತಹವನು ಬರುತ್ತಾನೋ ಭಾಗ್ಯಶಾಲಿ...' ಎಂದು ನಕ್ಕಿದ್ದರು. ಆಗ ಅವರಿಗೆ ಹೇಳಿದ್ದಳು ಮಹಾದೇವಿ :

ಗಿರಿಯಲ್ಲಲ್ಲದೆ ಹುಲ್ಲುಮೊರಡಿಯಲ್ಲಾಡುವುದೇ ನವಿಲು ?
ಕೊಳನಲ್ಲದೆ ಕಿರಿವಳ್ಳ ಕಾಳಸುವುದೇ ಹಂಸೆ ?
ಮಾಮರ ತಳಿತಲ್ಲದೆ ಸ್ವರಗೈವುದೇ ಕೋಗಿಲೆ ?
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೇ ಭ್ರಮರ ?
ಎನ್ನ ದೇವ ಚೆನ್ನಮಲ್ಲಿಕಾರ್ಜುನನಲ್ಲದೇ ಅನ್ಯಕ್ಕೆಳಸುವುದೇ,
ಎನ್ನ ಮನ ? ಕೇಳಿರೇ ಕೆಳದಿಯರಿರಾ.

ಆದರೆ ಇದನ್ನು ಹಿಂಬಾಲಿಸಿ ಇನ್ನೊಂದು ತೆರೆ ಮೇಲೇಳುವುದು :

"ಅವಳದೇನು ತಪ್ಪು, ಮದುವೆ ಮಾಡದೆ ಹಾಗೇ ಬಿಟ್ಟಿದ್ದಾರಲ್ಲ, ಅವರಿಗೇನು ಹೇಳಬೇಕು !" ಎಂಬ ಜನರ ನಿಂದೆಯ ನುಡಿ ಸುಳಿಯುವುದು.

'ನಿಜ, ನನ್ನಿಂದ ನನ್ನ ತಂದೆತಾಯಿಗಳು ಕೊರಗುವಂತಾಗಿದೆ. ನನ್ನನ್ನು ಜನ ಆಡಿಕೊಂಡರೆ ಅದನ್ನು ಕಸಕ್ಕಿಂತ ಕಡೆಯಾಗಿ ನಾನು ಕಾಣಬಲ್ಲೆ. ಆದರೆ ತಂದೆತಾಯಿಗಳ ಮೂಕವೇದನೆಯನ್ನು ಎಂತು ಸಹಿಸಲಿ. ಜನರು ಇಷ್ಟೊಂದು ಆಡಿಕೊಳ್ಳುತ್ತಿದ್ದರೂ ಇದುವರೆಗೂ ಅವರು ಅದನ್ನು ಸಹಿಸಿಕೊಂಡಿದ್ದಾರೆ. ಇನ್ನೂ ಎಷ್ಟು ಕಾಲ ಅವರಿಗೆ ಆ ಕೊರಗನ್ನು ಕೊಡಲಿ... ಹಾಗೆಂದು ಯಾರನ್ನಾದರೂ ಮದುವೆ ಮಾಡಿಕೊಂಡು.... 'ಛೇ, ಅದನ್ನು ನನ್ನ ಮನಸ್ಸು ಊಹಿಸಲು ಸಮರ್ಥವಾಗದು. 'ಹೀಗೆ ಅವಳ ಮನಸ್ಸು ಮತ್ತೆ ಹೊರಟಲ್ಲಿಗೇ ಬರುತ್ತಿತ್ತು. ಮತ್ತೆ ಮತ್ತೆ ಒಳತೋಟಿಗೆ ಗುರಿಯಾಗುತ್ತಿತ್ತು.

'ಹಾಗಾದರೆ ಈ ಉಭಯ ಸಂಕಟದಿಂದ ಹೇಗೆ ಪಾರಾಗಬಲ್ಲೆ ?' ಎಂದು ಯಾರೋ ಕೇಳಿದಂತಾಗುತ್ತಿತ್ತು.

'ನೋಡೋಣ. ತಂದೆತಾಯಿಗಳು ಇನ್ನೂ ಮದುವೆ ಒತ್ತಾಯವನ್ನು ತಂದಿಲ್ಲ. ನನ್ನ ಇಷ್ಟದಂತೆಯೇ ಅನುಸರಿಸಿಕೊಂಡು ಹೋಗುತ್ತಿದ್ದಾರೆ. ಅದು ಹಾಗೆಯೇ ಮುಂದುವರಿಯಲಿ ಎಂದು ಮಲ್ಲಿಕಾರ್ಜುನನ್ನು ಪ್ರಾರ್ಥಿಸುತ್ತೇನೆ' ಎಂದು ಅವನ ಮೊರೆಹೋಗುತ್ತಿದ್ದಳು.

ಆದರೆ ತನ್ನ ಮೀಸಲುವಧು ತನ್ನ ಮೇಲಿಟ್ಟಿರುವ ಪ್ರೇಮದ ಉತ್ಕಟತೆಯನ್ನು ಪರೀಕ್ಷಿಸಲೋಸ್ಕರವೋ ಎಂಬಂತೆ ಮಲ್ಲಿಕಾರ್ಜುನ ಅವಳ ಪರೀಕ್ಷೆಯನ್ನು ಕಠಿಣತರಗೊಳಿಸುತ್ತಿದ್ದ.

## ೮

ಅಂದು ರಾತ್ರಿಯೇ ಲಿಂಗಮ್ಮ ಮೆಲ್ಲಗೆ ಪ್ರಾರಂಭಿಸಿದಳು.

"ಗುರುಗಳು ಏನು ಹೇಳಿದರು ಮಹಾದೇವಿ, ಇಷ್ಟು ಹೊತ್ತು ಅಲ್ಲಿ ಕುಳಿತಿದ್ದಿಯಲ್ಲ?"

"ಏನೂ ಅಲ್ಲ ಅವ್ವಾ, ನಾನೊಂದು ವಚನ ಬರೆದುಕೊಂಡು ಹೋಗಿದ್ದೆ. ಅವರ ಎದುರು ಓದಿದೆ, ಕೇಳಿ ಮೆಚ್ಚಿದರು."

"ನೀನೂ ವಚನಗಳನ್ನು ಬರೆಯುತ್ತೀಯ?" ಆಶ್ಚರ್ಯವಿತ್ತು ಲಿಂಗಮ್ಮನ ಧ್ವನಿಯಲ್ಲಿ.

"ಒಂದೇ ಒಂದು ಬರೆದಿದ್ದೆ. ಗುರುಗಳು ಅಂದು ದೀಕ್ಷೆಯನ್ನು ಕೊಟ್ಟು ಕೆಲವು ಮಾತುಗಳನ್ನು ಹೇಳಿದ್ದರಲ್ಲ. ಅದನ್ನು ಪೂಜೆಯ ಸಮಯದಲ್ಲಿ ನೆನಸಿಕೊಂಡೆ. ಒಂದು ಸಣ್ಣ ವಚನ ಬರೆದೆ."

"ಅದೆಲ್ಲವನ್ನೂ ಮಾಡು, ಮಹಾದೇವಿ. ಆದರೆ ಈ ಒಂದು ವಿಚಾರದಲ್ಲಿ ನಿನ್ನ ಅಭಿಪ್ರಾಯವನ್ನು ಈಗ ತಿಳಿಸಬೇಕು." ಮುಖ್ಯ ವಿಷಯಕ್ಕೆ ಬಂದಳು ಲಿಂಗಮ್ಮ. "ನಿನ್ನ ಮದುವೆ ಏರ್ಪಾಟನ್ನು ನಿನ್ನ ತಂದೆ ಮಾಡುತ್ತಿದ್ದಾರೆ. ಈ ಸಾರಿ ಅದಕ್ಕೆ ನೀನು ಒಪ್ಪಿಕೊಳ್ಳಲೇಬೇಕು."

"ಇರಲಿ ಬಿಡವ್ವ, ಈಗಲೇ ಏನವಸರ ?" ಎಂದಿನಂತೆ ಸುಲಭವಾಗಿ ಇದರಿಂದ ಪಾರಾಗಲು ಯತ್ನಿಸಿದಳು ಮಹಾದೇವಿ.

ಹಿಂದೆಯೂ ಇಂತಹ ಮಾತು ಎಷ್ಟೋ ಸಾರಿ ಬಂದಿತ್ತು. 'ಈಗಲೇ ಬೇಡ' 'ಅಷ್ಟೇನು ಅವಸರ?' 'ಆಲೋಚಿಸಿ ಹೇಳುತ್ತೇನೆ' ಎಂದು ಮುಂತಾಗಿ ತೇಲಿಸಿ ನುಡಿಯುತ್ತಿದ್ದಳು. ಮಗಳ ಮೇಲಿನ ಮಮತೆಯಿಂದ ಲಿಂಗಮ್ಮನಾಗಲೀ ಓಂಕಾರನಾಗಲೀ ಹೆಚ್ಚು ಒತ್ತಾಯ ಮಾಡಿ ಅವಳ ಮನಸ್ಸನ್ನು ನೋಯಿಸಲು ಇಚ್ಛಿಸಿರಲಿಲ್ಲ.

ಆದರೆ ಅವರ ಮನಸ್ಸಿನ ಕಾತರತೆ ಅವರಿಗೇ ಗೊತ್ತು. ಮಹಾದೇವಿಯ ರೂಪಸಂಪತ್ತು ದಿನದಿನಕ್ಕೆ ಹೊಸಲಾವಣ್ಯವನ್ನು ಪಡೆಯುತ್ತ ಕಾಂತಿಯುಕ್ತವಾಗುತ್ತಿತ್ತು. ಅದು ತಂದೆತಾಯಿಗಳಿಗೆ ಹೆಮ್ಮೆಯ ವಿಚಾರವೇ ಆದರೂ, ಆತಂಕಕಾರಿಯೂ ಆಗಿತ್ತು. ಲಿಂಗಮ್ಮ ಅವಳ ಸೌಂದರ್ಯಕ್ಕೆ ದೃಷ್ಟಿಯನ್ನು ತೆಗೆದು ಕಾಹನ್ನು ಕಟ್ಟುತ್ತಿದ್ದಳು.

'ಜಗಜ್ಜನನೀ' ಈ ಸೌಂದರ್ಯವು ಪವಿತ್ರವಾಗಿ ಉಳಿಯುವಂತೆ ಅನುಗ್ರಹಿಸು. ಇವಳಿಗೆ ಯೋಗ್ಯನಾದ ವರನನ್ನು ನೀನೇ ಕರುಣಿಸು. ಇವಳ

ಸೌಂದರ್ಯಕ್ಕೆ ಸಾರ್ಥಕತೆಯನ್ನೂ ರಕ್ಷಣೆಯನ್ನೂ ದಯಪಾಲಿಸು' ಎಂದು ಮನಸ್ಸಿನಲ್ಲಿಯೇ ಬೇಡುತ್ತಿದ್ದಳು.

ಆದರೆ ಮಗಳ ಮನೋಧರ್ಮ ಮದುವೆಯೆಂದರೆ ವಿಮುಖವಾಗುತ್ತಿತ್ತು. ಹಾಗೆಂದು ಅವರು ತಮ್ಮ ಕರ್ತವ್ಯವನ್ನು ಬಿಡುವಂತಿರಲಿಲ್ಲ. ಈಗ ಯಾವುದೋ ವರನನ್ನು ನೋಡಿ ನಿರ್ಧರಿಸಿದಂತಿತ್ತು. ಆದುದರಿಂದ ಲಿಂಗಮ್ಮ ಇಂದು ಅಷ್ಟು ಸುಲಭವಾಗಿ ಬಿಡುವ ಹಾಗಿರಲಿಲ್ಲ.

"ಇಲ್ಲ ಮಹಾದೇವಿ, ಈಗ ಹಾಗಾಗುವ ಹಾಗಿಲ್ಲ. ನೀನೇನೂ ಇನ್ನೂ ಸಣ್ಣವಳಲ್ಲ. ನಿನಗೇ ಗೊತ್ತಿದೆ. ನಾಲ್ಕು ಜನರಲ್ಲಿ ನಾವೀಗ ತಲೆಯೆತ್ತಿ ನಿಲ್ಲುವಂತಿಲ್ಲ. ಯಾವಾಗ ಕೇಳಿದರೂ ನೀನು ಹೀಗೇ ಹೇಳುತ್ತೀ. ಇಂದು ಸರಿಯಾದ ಉತ್ತರವನ್ನು ನೀನು ಕೊಡಲೇಬೇಕು" ನಿರ್ಧಾರದ ಧ್ವನಿಯಿತ್ತು ಲಿಂಗಮ್ಮನ ಮಾತಿನಲ್ಲಿ.

"ಅವ್ವಾ, ನಿಜ ಹೇಳಬೇಕೆಂದರೆ ನಾನು ಮದುವೆಯನ್ನೇ ಆಗುವುದಿಲ್ಲ. ಗುರುಗಳೇ ನನ್ನ ಮದುವೆಯನ್ನು ಮಾಡಿಬಿಟ್ಟಿದ್ದಾರೆ. ನನ್ನ ಪತಿ ಚೆನ್ನಮಲ್ಲಿಕಾರ್ಜುನನೊಬ್ಬನೇ. ಇನ್ನಾರನ್ನೂ ನಾನು ಕಣ್ಣೆತ್ತಿಯೂ ನೋಡಲಾರೆ." ನಮ್ರವಾದರೂ ನಿರ್ಧಾರದ ಧ್ವನಿಯಲ್ಲಿ ಹೇಳಿದಳು ಮಹಾದೇವಿ.

ಲಿಂಗಮ್ಮ ಅವಾಕ್ಕಾದಳು. ಆದರೂ ಅದನ್ನು ತೋರ್ಪಡಿಸಕೊಳ್ಳದೆ :

"ಈ ಮಾತನ್ನು ಯಾರಾದರೂ ಕೇಳಿದರೆ ಹುಚ್ಚಿ ಎಂದಾರು. ಚೆನ್ನಮಲ್ಲಿಕಾರ್ಜುನ ಪತಿ ಎಂಬುದು ತತ್ತ್ವದೃಷ್ಟಿಯಲ್ಲಿ. ಅವನು ಎಲ್ಲರ ಪತಿಯೆಂದು ಗುರುಗಳು ಹೇಳುವುದಿಲ್ಲವೇ ? ಅವನ ಒಡೆತನದ ಸಾನಿಧ್ಯದಲ್ಲಿ, ನಮ್ಮ ಲೌಕಿಕ ವ್ಯವಹಾರವನ್ನು ಅವನಿಗೇ ಅರ್ಪಿಸಿ, ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕು ಅಲ್ಲವೇ ಮಗಳೇ ! ಆ ದೃಷ್ಟಿಯಿಂದ ನೀನು ಮದುವೆಯಾಗಲೇಬೇಕು. ನಿನಗೆ ಯೋಗ್ಯವಾದ ಕಡೆಯಲ್ಲಿಯೇ ನೋಡುತ್ತೇವೆ. ನಿನ್ನ ಮನೋಧರ್ಮಕ್ಕೆ ಹೊಂದುವಂತಹ ಭಕ್ತನಿಗೇ ಕೊಟ್ಟು ನಿನ್ನನ್ನು ಮದುವೆಮಾಡುತ್ತೇನೆ. ಬನವಾಸಿಯಲ್ಲಿ ಒಂದು ಒಳ್ಳೆಯ ಮನೆತನದಲ್ಲಿಯೇ ನೋಡಿದ್ದಾರೆ. ಹುಡುಗ ತುಂಬಾ ಗುಣಾಢ್ಯನಂತೆ, ರೂಪವಂತನಂತೆ !... ಇನ್ನು ನಾಲ್ಕಾರು ದಿನಗಳಲ್ಲಿ ಆಷಾಢಮಾಸ ಮುಗಿಯುತ್ತದೆ. ಆಮೇಲೆ ನಿನ್ನನ್ನು ನೋಡಲು ಬರುತ್ತಾರೆ."

ತಾವು ಮಾಡಿರುವ ಏರ್ಪಾಡೆಲ್ಲವನ್ನೂ ತಡಬಡಿ ಇಲ್ಲದೆ ಹೇಳಿದಳು ಲಿಂಗಮ್ಮ. ಅಷ್ಟೇ ಅಸಹನೆಯಿಂದ ಹೇಳಿದಳು ಮಹಾದೇವಿ :

"ಇಲ್ಲ... ಲೌಕಿಕಕ್ಕೆ ಒಬ್ಬ ಪತಿ, ಪಾರಮಾರ್ಥಕ್ಕೆ ಒಬ್ಬ ಪತಿ – ಇದು ನನ್ನ ಮನಸ್ಸಿಗೆ ಹಿಡಿಸದು. ನನ್ನ ಎಲ್ಲ ಪ್ರೇಮವನ್ನೂ ಒಬ್ಬ ಪತಿಗೇ ಧಾರೆಯೆರೆದಿದ್ದೇನೆ. ಇನ್ನಾರನ್ನೂ ನಾನು ಮದುವೆಯಾಗಲಾರೆ."

"ಹಾಗೆಲ್ಲ ಹೇಳಬೇಡ. ನಿನ್ನ ಒಳ್ಳೆಯದಕ್ಕೆ ನಾವು ಹೇಳುವುದು. ನೀನಿನ್ನೂ ಲೋಕಾನುಭವವಿಲ್ಲದವಳು. ಈ ಭಾವನೆಯ ಆವೇಶದಿಂದಲೇ ಇಡೀ ಜೀವಮಾನವನ್ನೆಲ್ಲಾ ಸಾಗಿಸುವುದು ಸಾಧ್ಯವೇ ? ಹೆಣ್ಣು ಮದುವೆಯಾಗದೇ ಇರುವುದುಂಟೇ ? ಮದುವೆಯಾಗಿಯೂ ಸ್ತ್ರೀಯರು ಆದರ್ಶ ಭಕ್ತೆಯರಾಗಿ ಜೀವನದ ಸಾರ್ಥಕತೆಯನ್ನು ಪಡೆದಿಲ್ಲವೇ ? ಗುರುಗಳನ್ನು ಬೇಕಾದರೆ ಕೇಳು."

ಮಾತನ್ನೇನೂ ಆಡದೆ ಮಹಾದೇವಿ ತನ್ನ ಕೋಣೆಯತ್ತ ನಡೆದಳು.

ಆತಂಕ ಉದ್ವೇಗಗಳಿಂದ ಅವಳ ಮನಸ್ಸು ತಳಮಳಗೊಂಡಿತ್ತು. ಒಂದಲ್ಲ ಒಂದು ದಿನ ಇಂತಹ ಸನ್ನಿವೇಶವನ್ನು ಎದುರಿಸಬೇಕಾಗಬಹುದೆಂದು ಆಕೆ ನಿರೀಕ್ಷಿಸಿಯೇ ಇದ್ದಳು. ಅದನ್ನು ಸಾಧ್ಯವಾದಷ್ಟು ಮುಂದೆ ತಳ್ಳುತ್ತಾ ಬಂದಿದ್ದಳು. ಅದರಿಂದ ಪಾರಾಗುವುದು ಹೇಗೆಂಬುದು ಮಾತ್ರ ಆಕೆಗೆ ಬಗೆಹರಿಯದ ಸಮಸ್ಯೆಯಾಗಿತ್ತು. ಇಂದು ಆ ಸಮಸ್ಯೆ ಉತ್ಕಟ ಸ್ವರೂಪವನ್ನು ತಳೆದು ನಿಂತಿತ್ತು.

'ಈಗ ತಂದೆತಾಯಿಗಳು ದೃಢನಿರ್ಧಾರದಿಂದ ಹೊರಟಿದ್ದಾರೆ. ಅವರ ದೃಷ್ಟಿಯಿಂದ ಅದು ಸಹಜವಾದುದೂ ಹೌದು. ಜನಾಪವಾದವನ್ನು ಸಹಿಸಿಕೊಂಡು ಇಷ್ಟು ದಿನಗಳವರೆಗೂ ಅವರು ಸುಮ್ಮನಿದ್ದುದೇ ಹೆಚ್ಚು. ನನ್ನ ಮೇಲಿನ ಮಮತೆ ಅವರನ್ನು ಹಾಗೇ ನಿಲ್ಲಿಸಿತು. ಆದರೆ ಇಂದು ಮಮತೆಯನ್ನು ಮೀರಿದ ಕರ್ತವ್ಯದ ಕರೆ ಅವರಲ್ಲಿ ಜಾಗೃತವಾಗಿದೆ. ಅದರಲ್ಲಿ ನಾನು ತಪ್ಪನ್ನು ಎಣಿಸಲಾರೆ... ಆದರೆ ಅದನ್ನು ಒಪ್ಪಿಕೊಳ್ಳುವುದು ಸಾಧ್ಯವೇ ?'

'ಗುರುಗಳನ್ನು ಕೇಳಿಯೇ ತಂದೆ ಈ ಏರ್ಪಾಡನ್ನು ಮಾಡಿದರಂತೆ ! ಗುರುಗಳು ಏನು ಹೇಳಿರಬಹುದು. ಈ ಮದುವೆಯ ಪ್ರಯತ್ನವನ್ನು ಕೈಬಿಡಿ ಎಂದು ಹೇಳಬಾರದಿತ್ತೇ...' ಹೀಗೆ ಹರಿಯುವುದು ಮಹಾದೇವಿಯ ಮನಸ್ಸು.

ವಾಸ್ತವವಾಗಿ ಓಂಕಾರ ಗುರುಗಳ ಬಳಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದಾಗ ಅವರೆಂದಿದ್ದರು :

"ನಿಜ, ಓಂಕಾರ. ನಿಮ್ಮ ಆತಂಕ ಸಹಜವಾದುದು. ಇಷ್ಟು ದಿನ ನೀನು ತಡೆದುದೇ ಹೆಚ್ಚೆಂದು ಹೇಳಬೇಕು. ಹೆಣ್ಣುಮಕ್ಕಳೆಂದರೆ ಮದುವೆಗಾಗಿಯೇ ಹುಟ್ಟಿದವರೆಂದು ಭಾವಿಸಿ ಅತಿ ಚಿಕ್ಕ ವಯಸ್ಸಿನಲ್ಲಿಯೇ ಮದುವೆಯನ್ನು ಮಾಡಿಬಿಡುವ ಈ ರೂಢಿಯಲ್ಲಿ, ನೀನು ಇದುವರೆಗೂ ಮಗಳ

ಮನೋಧರ್ಮವನ್ನು ಅನುಸರಿಸಿದುದೇ ಹೆಚ್ಚೆಂದು ಹೇಳಬೇಕು. ಆದರೆ ನನಗೇನೋ ಅನ್ನಿಸುತ್ತದೆ, ಮಹಾದೇವಿ ಎಲ್ಲರಂತೆ ಮದುವೆಯಾಗಿ ಸಂಸಾರವನ್ನು ಮಾಡಲು ಬಂದವಳಲ್ಲ ಎಂಬುದಾಗಿ.

"ಹಾಗೆಂದು ಲೌಕಿಕವಾದ ಪ್ರಯತ್ನವನ್ನು ನೀವು ಬಿಡಿ ಎನ್ನಲಾರೆ. ಆ ಶಕ್ತಿ ಅದಾವ ರೂಪದಲ್ಲಿ ಈಕೆಯನ್ನು ತನ್ನ ಉದ್ದೇಶಸಾಧನೆಯ ಕೈದುವನ್ನಾಗಿ ಮಾಡಿಕೊಳ್ಳುತ್ತದೊ ಬಲ್ಲವರಾರು ? ನೀವು ಮಾಡುವ ಪ್ರಯತ್ನ ಮಾಡಿರಿ." ಮಹಾದೇವಿಯು ಕೂಡ ಒಂದೆರಡು ಸಂದರ್ಭಗಳಲ್ಲಿ ಈ ವಿಚಾರವನ್ನು ಗುರುಗಳ ಬಳಿಯಲ್ಲಿ ಎತ್ತಿದ್ದಳು.

"ಗುರುಗಳೇ, ತಂದೆತಾಯಿಗಳು ನನ್ನ ಮದುವೆಯ ಪ್ರಯತ್ನದಲ್ಲಿದ್ದಾರೆ."

"ಹೌದಮ್ಮ. ಅದು ಅವರು ಮಾಡಬೇಕಾದ ಕರ್ತವ್ಯ. ಅದರಲ್ಲಿಯೂ ಹೆಣ್ಣುಮಕ್ಕಳ ಮದುವೆಯನ್ನು ಆದಷ್ಟು ಜಾಗ್ರತೆ ಮುಗಿಸಿಬಿಡಬೇಕೆಂದು ತಂದೆ ತಾಯಿಗಳು ಕಾತುರರಾಗಿರುವುದು ಸಹಜ." ಲೌಕಿಕ ದೃಷ್ಟಿಯಿಂದ ಹೇಳಿದ್ದರು ಗುರುಲಿಂಗರು.

"ಅದೇಕೆ ಗುರುಗಳೇ, ಹೆಣ್ಣನ್ನು ಆ ಕಣ್ಣಿನಿಂದಲೇ ನೋಡುತ್ತದೆ ಈ ಜಗತ್ತು ?" ಅಸಹನೆಯಿಂದ ಕೇಳಿದಳು ಮಹಾದೇವಿ.

"ಅದು ಗಂಡಿನ ಸಂಕುಚಿತ ದೃಷ್ಟಿಯಿದ್ದರೂ ಇರಬಹುದು. ಅಲ್ಲದೆ ಹೆಣ್ಣಿನ ದೌರ್ಬಲ್ಯವೂ ಕಾರಣವೆಂದು ನನಗನ್ನಿಸುತ್ತದೆ. ತನ್ನ ಅಲಂಕಾರ ಒನಪು ಒಯ್ಯಾರಗಳಿಂದ ಗಂಡಿನ ಮನವನ್ನು ಸೆಳೆಯುವುದೇ ತನ್ನ ಸೌಂದರ್ಯದ ಸಾರ್ಥಕತೆ ಎಂದು ಹೆಣ್ಣು ತಿಳಿದಿರುವವರೆಗೂ ಅವಳಿಗೆ ಇದೇ ಸ್ಥಾನವೆಂದೇ ನನ್ನ ಭಾವನೆ."

"ಆ ಸೌಂದರ್ಯವೆಲ್ಲವನ್ನೂ ಮಲ್ಲಿಕಾರ್ಜುನನಿಗೆ ಮೀಸಲಾಗಿಟ್ಟು ನಡೆಯುವ ಬ್ರಹ್ಮಚರ್ಯದ ಸಾಧನೆ ಹೆಣ್ಣಿಗೆ ಸಾಧ್ಯವಿಲ್ಲವೇ ಗುರುಗಳೇ ?" ತನ್ನ ಬಯಕೆಯನ್ನೇ ಪ್ರಶ್ನೆಯಾಗಿ ಕೇಳಿದಳು ಮಹಾದೇವಿ.

"ಸಾಧ್ಯ !" ಗುರುಗಳು ಗಂಭೀರವಾಗಿ ಹೇಳಿದರು. "ಆದರೆ ಅಂತಹ ಸ್ತ್ರೀ ಇನ್ನೂ ಹುಟ್ಟಿಬರಬೇಕಾಗಿದೆ ತಾಯಿ. ಅದು ಬಹಳ ಕಠಿಣವಾದ ಮಾರ್ಗ. ಕೂದಲಿನ ಸೇತುವೆಯ ಮೇಲೆ ನಡೆದು ಬೆಂಕಿಯ ಪ್ರವಾಹವನ್ನು ದಾಟುವಂತಹ ಸಾಹಸಮಾರ್ಗ. ಆದರೆ ವಿವಾಹಿತ ಜೀವನದಲ್ಲಿದ್ದೂ ವಿಲಾಸಕ್ಕೆ ಒಳಗಾಗದೆ ಭಕ್ತಿಯನ್ನು ಸಾಧಿಸುವುದು, ಮನಸ್ಸು ಮಾಡಿದರೆ, ಸಾಮಾನ್ಯ ಚೇತನಗಳಿಗೂ ನಿಲುಕಬಹುದಾದ ಮಾರ್ಗ."

"ಆದರೆ ನನ್ನ ಮಾರ್ಗ ಅದಲ್ಲವೆಂದೆನಿಸುತ್ತಿದೆ, ಗುರುಗಳೇ. ನನ್ನ ಅಂತರಂಗದಲ್ಲಿ ಯಾವುದೋ ಒಂದು ಕರೆ ಸದಾ ಮೊರೆಯುತ್ತಿದೆ. ನಾನು ಕಾಣದಿದ್ದರೂ ನಿಮ್ಮಿಂದ ಕೇಳಿ ಕಂಡಿರುವ ಶ್ರೀಶೈಲದ ಗಿರಿಶಿಖರಗಳು ಕೈಬೀಸಿ ಕರೆಯುತ್ತಿರುವಂತೆ ಭಾಸವಾಗುತ್ತಿದೆ. ಕಲ್ಯಾಣದಿಂದ ಸುತ್ತುತ್ತಾ ಬಂದ ಬೆಳಕೊಂದು ನನ್ನ ಹೃದಯದಲ್ಲಿ ಲೀನವಾಗಿ ಅತ್ತ ನನ್ನನ್ನು ಎಳೆದೊಯ್ಯುತ್ತಿರುವಂತೆ ತೋರುತ್ತದೆ. ಕಣ್ಣುಮುಚ್ಚಿದರೆ ಸಾಕು, ಈ ಪ್ರಪಂಚವೆಲ್ಲಾ ಎತ್ತಲೋ ಜಾರಿ ನನಗೇನೋ ಹುಚ್ಚು ಹಿಡಿದಿದೆಯೋ ಅನ್ನಿಸುತ್ತದೆ ಒಮ್ಮೊಮ್ಮೆ." – ತನ್ನ ಅಲೌಕಿಕ ಅನುಭವಗಳನ್ನು ಭಾವಾವೇಶದಿಂದ ಹೇಳಿದಳು ಮಹಾದೇವಿ.

"ನಿಜ ಮಗಳೇ ; ಇದು ಒಂದು ಹುಚ್ಚೇ. ಎಲ್ಲರೂ ಹುಚ್ಚರಾಗಿರುವಾಗ ಎಚ್ಚರವಾಗಿರುವುದೇ ಒಂದು ಹುಚ್ಚಾಗಿ ತೋರುತ್ತದೆ. ಆದರೆ ಆ ಎಚ್ಚರದ ಕರೆಯನ್ನು ಮರೆಯಬೇಡ. ಅದಕ್ಕೆ 'ಓ'ಗೊಡು. ನಿನ್ನ ಮನೋಧರ್ಮವನ್ನು ನೀನು ಬಿಡಬೇಡ. ಸ್ವಧರ್ಮವೇ ಶ್ರೇಯಸ್ಕರ" ಎಂದು ಗುರುಲಿಂಗರು ಅವಳ ಆಕಾಂಕ್ಷೆಗೆ ಪ್ರಚೋದನೆಯನ್ನಿತ್ತಿದ್ದರು.

ಮಹಾದೇವಿಯ ಮನಸ್ಸಿಗೆ ಈಗ ಗುರುಗಳ ಆ ಮಾತು ಸುಳಿಯಿತು. ಅವಳ ಆಲೋಚನೆ ಮುಂದುವರೆಯಿತು :

"ನಿಜ, ಅದೇ ನನ್ನ ಸ್ವಧರ್ಮ. ಆದರೆ ಅದನ್ನು ಲೋಕಕ್ಕೆ ತಿಳಿಸುವುದು ಹೇಗೆ ? ಲೋಕದ ಮಾತು ಹಾಗಿರಲಿ, ತಂದೆತಾಯಿಗಳಿಗೆ ಮನದಟ್ಟು ಮಾಡಿ ಕೊಡುವುದು ಹೇಗೆ ? ಇರುವ ಒಬ್ಬಳೇ ಒಬ್ಬಳು ಮಗಳಿಂದ ಅವರು ಬಯಸಬಹುದಾದ ಸುಖದ ಕಲ್ಪನೆಯನ್ನು ನಾನು ಊಹಿಸಬಲ್ಲೆ. ಸಾಮಾನ್ಯಮಟ್ಟದ ಲೌಕಿಕ ವ್ಯವಹಾರಕ್ಕಿಂತ ಸ್ವಲ್ಪ ಹೆಚ್ಚಿನ ಎತ್ತರಕ್ಕೆ ಏರಬಲ್ಲ ಸಾಧನೆ ಅವರಿಗಿದೆ. ಆದರೆ ಈ ತ್ಯಾಗಕ್ಕೆ ಅವರು ಸಿದ್ಧರಾಗುವರೆ ?

"ಏನು ಹೇಳಿದಳು ತಾಯಿ ? ಹುಡುಗ ಗುಣಾಢ್ಯನಂತೆ ! ರೂಪವಂತನಂತೆ! ಹುಂ... ನನ್ನ ಹೃದಯದಲ್ಲಿ ಅಚ್ಚೊತ್ತಿರುವ ಅನಂತರೂಪವಂತನನ್ನು, ಅಪಾರವಾದ ಗುಣಸಾಗರನನ್ನು ನಮ್ಮವ್ವ ಹೇಗೆ ಅರಿಯಬಲ್ಲಳು. ರೂಪಿಲ್ಲದ ರೂಪದವನು ನನ್ನ ಪತಿ. ಎಡೆಯಿಲ್ಲದ, ಕಡೆಯಿಲ್ಲದ ಚೆಲುವ ಆತ"

ಎಂದು ತನ್ನ ಪತಿ ಚೆನ್ನಮಲ್ಲಿಕಾರ್ಜುನ ಸ್ವರೂಪವನ್ನು ಕುರಿತು ಅವಳ ಆಲೋಚನೆ ಹರಿಯಿತು. ಅವನ ಸ್ಪಷ್ಟ ರೂಪ ಎದುರಲ್ಲಿ ಕಟ್ಟಿ ನಿಂತಂತಾಗಿ ಒಂದು ವಚನ ಹೊರಬಿತ್ತು :

ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚೆಲುವಂಗಾನೊಲಿದೆನವ್ವ ।
ಎಡೆಯಿಲ್ಲದ ಕಡೆಯಿಲ್ಲದ, ತೆರಹಿಲ್ಲದ, ಕುರುಹಿಲ್ಲದ
ಚೆಲುವಂಗಾನೊಲಿದೆ ಎಲೆ ಅವ್ವ ; ನೀನು ಕೇಳಾ ತಾಯೇ !
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು
ಕುಲ ಸೀಮೆಯಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ,
ಇದು ಕಾರಣ ಚೆನ್ನ ಮಲ್ಲಿಕಾರ್ಜುನ ಚೆಲುವ ಗಂಡನೆನಗೆ ;
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು.

ಮತ್ತೆ ಮತ್ತೆ ಈ ವಚನವನ್ನು ಹೇಳಿಕೊಂಡಳು. ಓಲೆಗರಿಯಲ್ಲಿ ಇದನ್ನು ಬರೆದಳು. ಮತ್ತೆಮತ್ತೆ ಓದಿದಳು. ತನ್ನ ಪತಿಯ ಸಾಕ್ಷಾತ್ ಸ್ವರೂಪವೇ ಅಲ್ಲಿ ಒಡಮೂಡಿದಂತೆ ತೋರಿತು. 'ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು' ಎಂಬಮಾತು ಆ ಸ್ಥಿತಿಯಲ್ಲಿಯೂ ಅವಳಿಗೆ ಸ್ವಲ್ಪ ನಗುವನ್ನು ತಂದಿತು. ತನ್ನ ಹೃದಯದ ಭಾವನೆಗಳನ್ನು ಈ ಮಾತು ಚೆನ್ನಾಗಿ ಅಭಿವ್ಯಕ್ತಗೊಳಿಸುತ್ತದೆಯೆಂಬ ತೃಪ್ತಿಯೂ ಮೂಡಿತು.

'ಹೌದು, ಈ ಸಾವ ಕೆಡುವ ಗಂಡರನ್ನೊಯ್ದು ಒಲೆಯೊಳಕ್ಕೆ ಇಕ್ಕಬೇಕು. ನನ್ನ ಅಂತರಂಗದಲ್ಲಿಯೇ ಇರುವ ಗಂಡ, ನನ್ನ ಮನವನ್ನು ಮಾರುಗೊಂಡಿದ್ದಾನೆ. ನನ್ನ ತನುವನ್ನು ಸೂರೆಗೊಂಡಿದ್ದಾನೆ. ಎನ್ನ ಸುಖವನೊಪ್ಪುಗೊಂಡಿದ್ದಾನೆ. ಎನ್ನಿರವನಿಂಬುಗೊಂಡಿದ್ದಾನೆ...' ಎಂದು ಮುಂತಾಗಿ ಆಲೋಚಿಸುತ್ತಿದ್ದಂತೆಯೇ ಮತ್ತೆ ಓಲೆಗರಿಯ ಮೇಲೆ ಕೈ ಓಡಿತು. ವಚನ ಸಿದ್ಧವಾಗಿತ್ತು.

ಎನ್ನ ಮನ ಮಾರುಗೊಂಡನವ್ವ !
ಎನ್ನ ತನುವ ಸೂರೆಗೊಂಡನವ್ವ !
ಎನ್ನ ಸುಖವನೊಪ್ಪುಗೊಂಡನವ್ವ !
ಎನ್ನಿರವನಿಂಬುಗೊಂಡನವ್ವ !
ಚೆನ್ನಮಲ್ಲಿಕಾರ್ಜುನನ ಒಲುಮೆಯವಳಾನು !

'ಚೆನ್ನಮಲ್ಲಿಕಾರ್ಜುನನನ್ನು ಒಲಿದ ದೇಹ ಪರಗಂಡರನ್ನು ಸ್ಮರಿಸಿಕೊಳ್ಳಲಾರದು. ಅವರನ್ನು ಸೋಂಕಲಾರದು. ಅವರ ಬಳಿ ಸುಳಿಯಲಾರದು. ನನ್ನ ಪಾಲಿಗೆ ಚೆನ್ನಮಲ್ಲಿಕಾರ್ಜುನನಲ್ಲದವರ ಎದೆಯಲ್ಲಿ ಮುಳ್ಳುಂಟೆಂದು ಭಾವಿಸುತ್ತೇನೆ :

ಎರದ ಮುಳ್ಳಿನಂತೆ ಪರಗಂಡರೆನಗವ್ವ !
ಸೋಂಕಲಮ್ಮೆ ಸುಳಿಯಲಮ್ಮೆ ;

ನಂಬಿ ನಚ್ಚಿ ಮಾತಾಡಲಮ್ಮೆನವ್ವಾ.
ಚೆನ್ನ ಮಲ್ಲಿಕಾರ್ಜುನನಲ್ಲದ ಗಂಡನ ಉರದಲ್ಲಿ
ಮುಳ್ಳುಂಟೆಂದು ನಾನಪ್ಪಲಮ್ಮೆನವ್ವ.

ಹಿಂದೆ ಅನೇಕಸಾರಿ ಗುರುಲಿಂಗದೇವರ ಮಾತಿನಿಂದ ಪ್ರಚೋದನೆಗೊಂಡು ವಚನಗಳನ್ನು ಬರೆಯಲು ಪ್ರಯತ್ನಿಸಿದ್ದಳು. ಪ್ರಯತ್ನಪೂರ್ವಕವಾಗಿ ಕೆಲವನ್ನು ಬರೆದೂ ಇದ್ದಳು. ಆದರೆ ಅವು ಅಷ್ಟು ಶಕ್ತಿಯುತವಾಗಿರಲಿಲ್ಲ ; ಅವಳಿಗೇ ತೃಪ್ತಿಯನ್ನು ತಂದಿರಲಿಲ್ಲ. ಅಂತರಂಗದ ತಳಮಳದಿಂದ ಮೂಡಿಬರುತ್ತಿರುವ ಭಾವಗಳು ಭಾಷೆಯಲ್ಲಿ ಮೂಡಿಬರಬೇಕಾದರೆ ಅತಿ ತೀವ್ರತರವಾದ ಅನುಭವವದಿಂದ ಅಂತರಂಗ ಮಿಡಿಯಬೇಕೆಂಬುದನ್ನು ಕಂಡುಕೊಂಡಳು. ಅನುಭವದ ಆ ವೇಗ ಅತಿಶಯವಾಗಿ ಅದು ಅಂತರಂಗದಲ್ಲಿ ಮಥಿತವಾದಾಗ ಜೀವಂತ ಮಾತುಗಳು ನವನೀತದಂತೆ ಮೂಡಿಬರುತ್ತವೆ. ಹಾಗೆ ಮೂಡಿಬಂದಿದ್ದವು ಮಹಾದೇವಿಯ ವಚನಗಳು. ಅವುಗಳನ್ನು ಮತ್ತೆ ಮತ್ತೆ ಹೇಳಿದಂತೆಲ್ಲಾ ಅವಳ ಹೃದಯಲ್ಲೊಂದು ಹೊಸ ಕೆಚ್ಚು ಮೂಡಿದಂತಾಯಿತು. ಅವಳ ಆಧ್ಯಾತ್ಮಿಕ ಸಾಧನೆಗೊಂದು ಅವಲಂಬನೆ ಸಿಕ್ಕಂತಾಯಿತು. ತಾತ್ಕಾಲಿಕವಾಗಿ ಮನಸ್ಸು ಶಾಂತವಾಗಿ ನಿದ್ದೆಗೆ ಎಡೆಮಾಡಿಕೊಟ್ಟಿತು.

## ೬

ಮಾರನೆಯ ದಿನವೆಲ್ಲಾ ಮಹಾದೇವಿ ಅನ್ಯಮನಸ್ಕಳಾಗಿಯೇ ಇದ್ದಳು. ಲಿಂಗಮ್ಮನೂ ಅವಳನ್ನು ಮಾತನಾಡಿಸುವುದಕ್ಕೆ ಹೋಗಲಿಲ್ಲ. ತನ್ನ ಮಾತು ಅವಳ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಮಾಡಿದೆ ಎಂಬುದನ್ನು ಮಾತ್ರ ಗಮನಿಸಿದಳು ಲಿಂಗಮ್ಮ.

ಇಂದು ಮಹಾದೇವಿಯ ಪೂಜೆ ಎಂದಿಗಿಂತ ದೀರ್ಘವಾಗಿತ್ತು. ತನ್ನ ದುಃಖವನ್ನೆಲ್ಲಾ ಚೆನ್ನಮಲ್ಲಿಕಾರ್ಜುನನ ಎದುರಿನಲ್ಲಿ ತೋಡಿಕೊಂಡಳು 'ನಿನಗೊಲಿದ ನನ್ನನ್ನು ಇನ್ನೊಬ್ಬನಿಗೆ ಕೊಡಲು ತಂದೆತಾಯಿಗಳು ಹವಣಿಸುತ್ತಿದ್ದಾರೆ. ನನ್ನ ಅಂತರಂಗವನ್ನು ನೀನೇ ಬಲ್ಲೆ. ಈ ಸಂಕಟದಿಂದ ನನ್ನನ್ನು ಪಾರುಮಾಡಿ, ನಿನ್ನತ್ತ ಕರೆದುಕೊಳ್ಳುವ ಭಾರ ನಿನಗೇ ಸೇರಿದ್ದು' ಎಂಬ ಅವಳ ಮೊರೆ ಹೀಗೆ ಹೊರಹೊಮ್ಮಿತು :

ನಾನು ನಿನಗೊಲಿದೆ, ನೀನು ನನಗೊಲಿದೆ !
ನೀನೆನ್ನನಗಲದಿಪ್ಪೆ, ನಾನು ನಿನ್ನನಗಲದಿಪ್ಪೆನಯ್ಯ !

ನಿನಗೆ ನನಗೆ ಬೇರೊಂದು ಠಾವುಂಟೇ?
ನೀನು ಕುರಣಿಯೆಂಬುದ ನಾನು ಬಲ್ಲೆನು
ನೀನಿರಿಸಿದ ಗತಿಯೊಳಗೆ ಇಪ್ಪೆಳಾನಯ್ಯ
ನೀನೇ ಬಲ್ಲೆ ಚೆನ್ನಮಲ್ಲಿಕಾರ್ಜುನಾ.

ನಟ್ಟದೃಷ್ಟಿಯಿಂದ ನೋಡುತ್ತಿದ್ದ ಇಷ್ಟಲಿಂಗದ ರೂಪಿನಲ್ಲಿ ಮಿಂಚು ಹೊಳೆದು ಅದು ಕಣ್ಣಿನಲ್ಲಿ ಬಂದು ಅಡಗಿದಂತಾಯಿತು. ಮತ್ತೆ ನೋಡಿದಳು : ತನ್ನ ಚೈತನ್ಯದ ಬೆಳಗೆಲ್ಲವೂ ಸಿಡಿದು ಹೋಗಿ ಕರಸ್ಥಲದ ಕುರುಹಿನಲ್ಲಿ ಲೀನವಾದಂತಾಯಿತು. ಮಲ್ಲಿಕಾರ್ಜುನನೇ ಅದರಿಂದ ಮೇಲೆದ್ದು ಬಂದು ತನ್ನ ಚೈತನ್ಯದ ಕೈಯನ್ನು ಚಾಚಿ, ಅವಳನ್ನು ಸ್ವೀಕರಿಸಿದಂತಾಯಿತು :

'ಇದೇ ನನ್ನ ನಿಜವಾದ ಮದುವೆ. ದೀಕ್ಷೆಯೆಂಬ ಮದುವೆಯಲ್ಲಿ ಗುರು ನನ್ನನ್ನು ಧಾರೆಯೆರೆದು ಕೊಟ್ಟಿದ್ದಾನೆ ಲಿಂಗವೆಂಬ ಪತಿಗೆ. ಹೀಗಿರುವಾಗ ಇನ್ನೆಂತಹ ಮದುವೆ ; ಹೌದು ಹಾಡಿದಳು :

ಗುರುವೆ ತೆತ್ತಿಗನಾದ, ಲಿಂಗವೇ ಮದುವಣಿಗನಾದ ;
ಆನು ಮದುವಣಗಿತ್ತಿಯಾದೆ....

ವಚನ ಅಷ್ಟಕ್ಕೇ ನಿಂತಿತು. ಆ ಮಾತಿನ ಆನಂದದ ಅನುಭವದಲ್ಲಿ ಮನಸ್ಸು ಪರವಶವಾಯಿತು. ತನ್ನ ಮುಂದಿದ್ದ ಸಮಸ್ಯೆಯೆಲ್ಲಾ ಕರಗಿಹೋದಂತಾಗಿ, ತಾನು ವಿಶ್ವಚೈತನ್ಯದ ಮಹಾವಧುವೆಂಬ ಭಾವನೆಯಿಂದ ಪುಳಕಿತಗೊಂಡಳು.

ಪೂಜೆಯ ನಂತರ ಇದುವರೆಗಿನ ತನ್ನ ವಚನಗಳನ್ನೆಲ್ಲಾ ನೋಡಿದಳು. ಅವುಗಳನ್ನು ಗುರುಗಳಿಗೆ ತೋರಿಸಬೇಕೆಂಬ ಕುತೂಹಲ ಆಕೆಗೆ. ಮಧ್ಯಾಹ್ನ ಕಳೆದು ಹೊತ್ತು ಇಳಿಮುಖವಾಗುವುದನ್ನೇ ನೋಡುತ್ತಿದ್ದಳು. ಲಿಂಗಮ್ಮನ ಒಪ್ಪಿಗೆಯನ್ನು ಪಡೆದು ಹೊರಟಳು ಮಠದ ಕಡೆಗೆ.

ಮನೆಯನ್ನು ಬಿಟ್ಟು ನಾಲ್ಕಾರು ಹೆಜ್ಜೆ ನಡೆಯುವಷ್ಟರಲ್ಲಿ ದೂರದಲ್ಲಿದ್ದ ಸಿಹಿನೀರಿನ ಬಾವಿಯ ಕಟ್ಟೆಯ ಬಳಿ ನಾಲ್ಕಾರು ಹೆಂಗಸರು ನಿಂತು ಮಾತನಾಡುತ್ತಿರುವುದು ಕಣ್ಣಿಗೆ ಬಿದ್ದಿತು. ಅವರಲ್ಲಿ ಒಬ್ಬಳು ತನ್ನತ್ತ ಕೈ ತೋರಿಸಿ ಏನನ್ನೋ ಇನ್ನೊಬ್ಬಳಿಗೆ ಹೇಳುತ್ತಿರುವಂತೆ ತೋರಿತು.

ಊರಿನ ಪ್ರಮುಖವಾದ ಸಿಹಿನೀರಿನ ಬಾವಿಗಳಲ್ಲಿ ಅದೊಂದು. ಆ ಬಾವಿಯ ಬಳಿಯಲ್ಲಿ ಹೆಂಗಸರ ಕಾಡುಹರಟೆ ನಡೆಯುತ್ತಿದ್ದುದೇನೂ ಆಕೆಗೆ ಹೊಸದಲ್ಲ. ವ್ಯರ್ಥವಾಗಿ ಇನ್ನೊಬ್ಬರ ನಿಂದೆಯಲ್ಲಿ ತೊಡಗಿರುತ್ತಿದ್ದ ಆ ಹೆಂಗಸರ ಗುಂಪನ್ನು ಕಂಡು ಮಹಾದೇವಿ ಎಷ್ಟೋ ಸಾರಿ ಮರುಗಿದ್ದಳು. ಮುಖ್ಯ ರಸ್ತೆಯ

ಪಕ್ಕದಿಂದ ನಾಲ್ಕಾರು ಮಾರು ಆಚೆಯ ಬಯಲಿನಲ್ಲಿತ್ತು ಬಾವಿ. ರಸ್ತೆಯ ಇನ್ನೊಂದು ಪಕ್ಕದಲ್ಲಿ ವೇಗವಾಗಿ ನಡೆದು, ಅವರತ್ತ ದೃಷ್ಟಿಯನ್ನು ಹರಿಸದೆ, ದಾಟಿಹೋಗಬೇಕೆಂದು ಮಹಾದೇವಿ ಮುಂದುವರೆದಳು.

ಆದರೆ ಬಾವಿಕಟ್ಟೆಯ ಗುಂಪಿನಲ್ಲಿದ್ದ ಕೆಲವರು, ಮಹಾದೇವಿ ಮನೆಯಿಂದ ಹೊರಟಾಗಲೇ ಅವಳನ್ನು ಕಂಡಿದ್ದರು.

"ಅಲ್ಲಿ ನೋಡ್ರೀ ಬಂಗಾರಮ್ಮನವರೇ, ಮಹಾದೇವಿ !" ತೋರಿಸಿ ಹೇಳಿದಳು ಚೆಲುವಮ್ಮ. ಅವಳು ತೋರಿಸಿದ ರೀತಿ, ಹೇಳಿದ ಮಾತಿನಲ್ಲಿ ಇರುವ ಧ್ವನಿ ಅರ್ಥಗರ್ಭಿತವಾಗಿತ್ತು.

"ಎಲ್ಲಿಗೆ ಹೊರಟಳೋ !" ಕೇಳಿದಳು ಬಂಗಾರಮ್ಮ ಅತ್ತ ನೋಡುತ್ತ. ಹೆಸರು ಬಂಗಾರಮ್ಮನಾದರು ಅವಳ ಬಾಯಿ ಮತ್ತು ಕಿವಿ ಹಿತ್ತಾಳೆಯದಾಗಿತ್ತು.

"ಇನ್ನೆಲ್ಲಿಗೆ ? ಇರಬೇಕು ಮಠಕ್ಕೆ. ಅದೊಂದಿದೆಯಲ್ಲ ಅವಳಿಗೆ. ತಾನೇನು, ತನ್ನ ವಯಸ್ಸೇನು ! ಮಠವಂತೆ, ಮಠ !" ಮೊದಲೇ ಇದ್ದ ವ್ಯಂಗ್ಯದ ಜೊತೆಗೆ ತನ್ನ ನಂಜನ್ನು ಸೇರಿಸಿದಳು ನಂಜಮ್ಮ.

"ಯಾಕ್ರೀ ನಂಜಮ್ಮನವರೇ, ಮಹಾದೇವಿ ಮಠಕ್ಕೆ ಹೋದ್ರೆ ನಿಮಗ್ಯಾಕ್ರಿ ಇಷ್ಟು ಕೋಪ? ಏನೋ ಮೊದಲಿನಿಂದ ಅಲ್ಲಿಗೆ ಒಗ್ಗಿಕೊಂಡಿದ್ದಾಳೆ. ಇನ್ನೂ ಕಲಿಯಬೇಕು ಅಂತ ಆಸೆ." ಮಹಾದೇವಿಯನ್ನು ಕುರಿತ ತಿರಸ್ಕಾರವನ್ನು ಕೇಳಲಾರದೆ ಹೇಳಿದಳು ಕಲ್ಯಾಣಮ್ಮ. ಮಹಾದೇವಿಯ ಮೇಲೆ ಆಕೆಗೆ ಅಭಿಮಾನ ಹೆಚ್ಚು.

"ಏನು ಕಲೀತಾಳೆ ? ಬೆಳೆದುನಿಂತ ಹೆಣ್ಣು, ಏನೋ ಕಲೀತಾಳಂತೆ, ಒಬ್ಬಳೇ ಮಠಕ್ಕೆ ಹೋಗಿ ! ಸಾಕು ಸುಮ್ಮನಿರ್ರೀ, ಕಲ್ಯಾಣಮ್ಮ. ಊರಿನ ಹುಡುಗೀರಲ್ಲಾ ಇದನ್ನೇ ಕಲ್ತಾರು." ಸಿಡುಕಿದರು ನಂಜಮ್ಮ.

ಅಷ್ಟರಲ್ಲಿ ಬಂಗಾರಮ್ಮ ಹೇಳಿದಳು :

"ಅಲ್ಲಿ ನೋಡ್ರಿ, ತಲೆ ತಗ್ಗಿಸಿಕೊಂಡು, ರಸ್ತೆಯ ಆ ಪಕ್ಕದಲ್ಲಿ ಹೋಗುತ್ತಿದ್ದಾಳೆ ಇತ್ತ ನೋಡದೆ. ತಾಳಿ ಒಂದು ತಮಾಷೆ ಮಾಡೋಣ" ಎನ್ನುತ್ತಾ ಮಹಾದೇವಿಯನ್ನು ಕೂಗಿ ಕರೆದಳು.

"ಮಹಾದೇವಮ್ಮ... ಮಹಾದೇವಮ್ಮ.... ಏನಮ್ಮ ಕಾಣದ ಹಾಗೆ ಹೋಗುತ್ತಿದ್ದೀಯೆ? ಬಾ... ಚೆನ್ನಾಗಿದ್ದೀಯ ?"

ಅನಿವಾರ್ಯವಾಗಿ ಮಹಾದೇವಿ ತಲೆಯೆತ್ತಿ ಇತ್ತ ತಿರುಗಲೇಬೇಕಾಯಿತು. ತನ್ನ ಕ್ಷೇಮದ ವಿಚಾರವಾಗಿ ಅವಳಿಗೆ ಆಸಕ್ತಿ ಎಷ್ಟೆಂಬುದು ಮಹಾದೇವಿಗೆ

ಗೊತ್ತಿತ್ತು. ಅಲ್ಲಿದ್ದವರೆಲ್ಲೆಲ್ಲಾ ಕಲ್ಯಾಣಮ್ಮನನ್ನು ಕಂಡರೆ ಆಕೆಗೆ ಅಭಿಮಾನ. ಕಲ್ಯಾಣಮ್ಮ ಕಷ್ಟದ ಜೀವನವನ್ನು ಮಾಡಿ ಬಾಳು ಸಾಗಿಸುತ್ತಿದ್ದಳು. ಆದರೂ ತಾನಾಯಿತು, ತನ್ನ ಕೆಲಸವಾಯಿತು ಎನ್ನುವಂತಹ ಸ್ವಭಾವ. ಎಷ್ಟೋ ಸಾರಿ ಮಹಾದೇವಿಯ ಬಳಿಯಲ್ಲಿ ಚರ್ಚಿಸುತ್ತಿದ್ದಳು. ಅವಳು ಹೇಳುವ ಮಾತುಗಳನ್ನು ಆಸಕ್ತಿಯಿಂದ ಕೇಳುತ್ತಿದ್ದಳು. ತನ್ನ ಲೋಕಾನುಭವವನ್ನು ಆಗಾಗ ಹೇಳುತ್ತಿದ್ದುದೂ ಉಂಟು.

ಕಲ್ಯಾಣಮ್ಮನನ್ನು ನೋಡಿ ಮಹಾದೇವಿಗೆ ಧೈರ್ಯ ಬಂದಿತು. ಕರೆದವಳು ಬಂಗಾರಮ್ಮನಾದರೂ ಆಕೆ ಮಾತನಾಡಿಸಿದುದು ಕಲ್ಯಾಣಮ್ಮನನ್ನು.

"ಏನು ಕಲ್ಯಾಣಮ್ಮನವರೇ... ನೀರಿಗೆ ಬಂದಿದ್ದೀರಾ ? ನೀರು ಸಾಕಾಯಿತೆ?" ಎನ್ನುತ್ತಾ ಬಾವಿಯ ಕಟ್ಟೆಯನ್ನು ಸಮೀಪಿಸಿದಳು.

ಬಂಗಾರಮ್ಮನಿಗೆ ಅಷ್ಟೇ ಸಾಕಾಯಿತು. ಕಲ್ಯಾಣಮ್ಮನ ಉತ್ತರ ಇನ್ನೂ ಬಾಯಲ್ಲಿದ್ದಂತೆಯೇ ಹೇಳಿದಳು :

"ಏನಮ್ಮಾ ಮಹಾದೇವಿ ! ನಮ್ಮನ್ನೆಲ್ಲಾ ಈಚೆಗೆ ಮರೆತೇಬಿಟ್ಟಿದ್ದೀ. ಕಂಡರೂ ಹಾಗೇ ಹೋಗುತ್ತೀಯಲ್ಲ. ಏನಮ್ಮ ಅಂತಹ ಕೆಲಸ ? ಎಲ್ಲಿಗೆ ಹೊರಟಿದ್ದೀ ?" ಮುಖ್ಯ ವಿಷಯದ ಕಡೆಗೆ ಪ್ರಶ್ನೆಯನ್ನು ಎಳೆಯಲು ಯತ್ನಿಸುತ್ತಾ ಕೇಳಿದಳು.

"ಎಲ್ಲೂ ಇಲ್ಲ. ಗುರುಗಳ ದರ್ಶನಕ್ಕಾಗಿ ಮಠಕ್ಕೆ ಹೋಗುತ್ತಿದ್ದೆ." ಅವಳ ಪ್ರಶ್ನೆಗೆ ಉತ್ತರಿಸದೆ ಉಪಾಯವಿಲ್ಲವಾಯಿತು.

"ಏನಮ್ಮಾ, ಇನ್ನೂ ಮಠ ಮಠ ಅಂತ ಕಾಲ ಹಾಕುತ್ತಿದ್ದೀಯಲ್ಲ ! ಇನ್ನೂ ನೀನು ಕಲಿಯುವುದು ಮುಗಿಯಲಿಲ್ಲವೇ ?"

ಚೆಲುವಮ್ಮ ತಾನು ಸೇರಿದಳು. ಮಹಾದೇವಿಯ ಕೊರಳಿಗೆ ಪ್ರಶ್ನೆಮಾಲಿಕೆಯನ್ನು ಜೋಡಿಸುವುದರಲ್ಲಿ. ಆದರೆ ಮಹಾದೇವಿ ಅದಕ್ಕೆ ಉತ್ತರಿಸದೆ ನಿರ್ಲಕ್ಷ್ಯತೆಯ ಮೌನವನ್ನೆಸೆದು ಕಲ್ಯಾಣಮ್ಮನ ಕಡೆ ತಿರುಗಿ : "ಬರುತ್ತೀರಾ ಕಲ್ಯಾಣಮ್ಮನವರೇ ? ನೀರು ಸೇದಿದ್ದು ಆಯಿತೇ?" ಎಂದಳು.

ಮಹಾದೇವಿ ಮಠಕ್ಕೆ ನಡೆಯುವ ದಾರಿಯಲ್ಲಿಯೇ ಕಲ್ಯಾಣಮ್ಮ ಸ್ವಲ್ಪ ದೂರ ಹೋಗಿ ಪಕ್ಕಕ್ಕೆ ತಿರುಗಬೇಕಾಗುತ್ತಿತ್ತು ತನ್ನ ಮನೆಯನ್ನು ಸೇರಲು. ಆದುದರಿಂದ ಒಟ್ಟಿಗೆ ಹೋಗಬಹುದೆಂದು ಮಹಾದೇವಿ ಕರೆದಳು.

ಮಹಾದೇವಿಯ ಈ ಉದಾಸೀನದ ತಿರಸ್ಕಾರ ಚೆಲುವಮ್ಮನನ್ನು ಚುಚ್ಚಿದಂತಾಯಿತು. ಅವಳ ದೇಹವಾಗಲೀ ಮನಸ್ಸಾಗಲೀ ಅಷ್ಟೇನೂ

ಚೆಲುವಾಗಿರಲಿಲ್ಲ. ಬಂಗಾರಮ್ಮನತ್ತ ನೋಡಿ, ಮಹಾದೇವಿಯನ್ನು ಕುರಿತು ಮತ್ತೆ ಚೆಲುವಮ್ಮನೇ ಮಾತನ್ನು ಎತ್ತಿಕೊಂಡಳು.

"ಏನೋಮ್ಮ ನೀನಿನ್ನೂ ಚಿಕ್ಕವಳು ಅಂತ ತಿಳಿದಿದ್ದಿಯೇನೊ. ಈ ವಯಸ್ಸಿನಲ್ಲಿ ಹೀಗೆ ಬೀದಿ ಬೀದಿ ತಿರುಗುವುದು...."

ಬಂಗಾರಮ್ಮ ಮಾತನ್ನು ಮುಂದುವರಿಸಿದಳು :

"ಹೌದು, ಹೌದು ಅದೇನೋ ಸರಿ ಕಾಣುವುದಿಲ್ಲ. ಇಷ್ಟು ವಯಸ್ಸಾದರೂ ಮದುವೆಯಾಗದೆ ಇರುವುದು ಅಂದ್ರೇನ್ರೀ?"

ಮತ್ತೆ ಚೆಲುವಮ್ಮನೇ ಮಾತನ್ನು ಎತ್ತಿಕೊಂಡಳು :

"ಏನು ರೂಪಿಲ್ವೆ, ಲಾವಣ್ಯವಿಲ್ವೆ ? ಆದರೂ ಹೀಗೆ ಇರುವುದು ಅಂದ್ರೆ ಆಶ್ಚರ್ಯವೆ!"

"ಹೌದು, ಹೌದು.... ಈ ವಯಸ್ಸಿಗೆ ನನಗಾಗಲೇ ಎರಡು ಮಕ್ಕಳಿದ್ದವು" ಬಂಗಾರಮ್ಮನೇ ಮತ್ತೆ ದನಿಗೂಡಿಸಿದಳು.

ಮಹಾದೇವಿಗೆ ಮೈಯೆಲ್ಲಾ ಉರಿದೆದ್ದಿತು :

"ಈಗ ಇರುವ ಎಂಟೋ ಹತ್ತೋ ಮಕ್ಕಳ ಜೊತೆಗೆ ಇನ್ನೂ ನಾಲ್ಕೋ ಆರೋ ಧಾರಳವಾಗಿ ಸೇರಿಸಿಕೊಳ್ಳಿ, ಬೇಡವೆನ್ನುವವರಾರು ? ಆದರೆ ಇನ್ನೊಬ್ಬರ ಮನೆ ವಿಚಾರದಲ್ಲಿ ತಲೆಹಾಕಬೇಡಿ. ನೀವು ಹಡೆದ ಮಕ್ಕಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಯೋಗ್ಯತೆ ಪಡೆಯಿರಿ, ಸಾಕು."

ಮೆಲ್ಲಗೆ ಆದರೂ ಕಟುವಾಗಿ ಹೇಳಿದಳು ಮಹಾದೇವಿ. ಸುತ್ತಲೂ ಇದ್ದ ಹೆಂಗಸರಿಂದ ನಗುವಿನ ಬುಗ್ಗೆ ಚಿಮ್ಮಿತು. ಇವರಿಬ್ಬರಿಗೂ ಇರುವ ಮಕ್ಕಳ ತಂಡವೂ ಅವರಿಗೆ ಗೊತ್ತಿತ್ತು. ಅವರ ಪುಂಡುತನವನ್ನು ಬಲ್ಲವರಾಗಿದ್ದರು.

ಬಂಗಾರಮ್ಮನ ಮುಖ ಇದ್ದಲಿಗಿಂತ ಕಡೆಯಾಯಿತು. ಚೆಲುವಮ್ಮನ ಮುಖದ ಚೆಲುವನ್ನಂತೂ ಆಗ ನೋಡಬೇಕಾಗಿತ್ತು. ಅವರ ಮನಸ್ಸಿನ ಕ್ಷುದ್ರತೆಯ ಕೆಸರೇ ಮೇಲೆದ್ದು ಬಂದು ಅವರ ಮುಖವನ್ನು ಮೆತ್ತಿದಂತಾಯಿತು. ಆದರೂ ಅದನ್ನು ಅಡಗಿಸಿಕೊಂಡು ಚೆಲುವಮ್ಮ ಹೇಳಿದಳು :

"ನೋಡಿದಿರಾ ಬಂಗಾರಮ್ಮನವರೇ, ನಾವೇನೋ ಅವಳ ಒಳ್ಳೆಯದಕ್ಕೆ ಹೇಳಿದರೆ ನಮಗೇ ಹಾಸ್ಯ ಮಾಡುತ್ತಾಳೆ ಮಹಾದೇವಿ ?"

ಅಷ್ಟರಲ್ಲಿ ನಂಜಮ್ಮ ಹೇಳತೊಡಗಿದಳು. ಎಲ್ಲರಿಗಿಂತ ಸ್ವಲ್ಪ ಹೆಚ್ಚು ವಯಸ್ಸಾದವಳು ಆಕೆ:

"ಇರಲಿ ಬಿಡಿ, ಬಂಗಾರಮ್ಮನವರೇ ; ಅವರಿಗೆ ಏನು ಸಮಸ್ಯೆಯೋ ಏನೋ. ಇಂದಲ್ಲ ನಾಳೆ ಮದುವೆ ಮಾಡಿಯಾರು. ಹೇಗೋ ಸಹಿಸಿಕೊಳ್ಳಬೇಕು... ಎಲ್ಲರ ಮನೆಯ ದೋಸೆಯೂ ತೂತೇ..."

ಇಲ್ಲದ ಯಾವುದೋ ಅರ್ಥವನ್ನು ಮಹಾದೇವಿಯ ಮದುವೆಯ ವಿಚಾರದಲ್ಲಿ ಕಲ್ಪಿಸಲು ಪ್ರಯತ್ನಿಸಿದಳು. ಇದನ್ನು ಕೇಳಿ ಮಹಾದೇವಿ ಜುಗುಪ್ಸೆಯಿಂದ :

"ನೀವು ದೊಡ್ಡವರು, ನಂಜಮ್ಮ. ಇನ್ನೊಬ್ಬರ ಮನೆಯ ದೋಸೆಯ ತೂತುಗಳನ್ನು ಎಣಿಸುವುದಕ್ಕೆ ಮೊದಲು, ನಿಮ್ಮ ಮನೆಯ ದೋಸೆಯ ಹೆಂಚೇ ತೂತು ಬಿದ್ದಿರುವುದನ್ನು ಮುಚ್ಚಲು ಪ್ರಯತ್ನಿಸಿ."

ಮಹಾದೇವಿಯ ಸಾತ್ವಿಕ ದಿಟ್ಟತನದ ಮುಂದೆ, ಕುಹಕಹೃದಯಿಗಳ ಬಾಯಿ ಕಟ್ಟಿಹೋಗಿತ್ತು. ಅಷ್ಟರಲ್ಲಿ ಕಲ್ಯಾಣಮ್ಮನೇ ಅವರ ಸಹಾಯಕ್ಕೆ ಬಂದಳು.

'ಬಾ ಮಹಾದೇವಮ್ಮ, ಹೋಗಲಿ ಬಾ, ಈಗ ಹೋಗೋಣ..." ಎಂದು ಮಹಾದೇವಿಯನ್ನೊಳಗೊಂಡು ರಸ್ತೆಯನ್ನು ಸೇರಿದಳು. ನೊಂದ ಮನಸ್ಸಿನಿಂದ ಮಹಾದೇವಿ ನಡೆಯತೊಡಗಿದ್ದಳು. ಹೆಣ್ಣುಜಾತಿಯ ದೌರ್ಬಲ್ಯವೇ ಹೆಣ್ಣಿನ ಅಧೋಗತಿಗೆ ಕಾರಣವೆಂಬ ಗುರುಗಳ ಮಾತು ಅವಳ ಮನಸ್ಸಿನ ಮುಂದೆ ಸುಳಿಯಿತು. ಆದರೂ ಅಲ್ಲಲ್ಲಿ ಕಾಣುವ ಕಲ್ಯಾಣಮ್ಮನಂತಹವರಿಂದ ಹೆಣ್ಣಿನ ಗೌರವ ಉಳಿಯಬೇಕಾಗಿದೆಯೆಂದೆನಿಸಿತು ಆಕೆಗೆ.

ಇದೇ ಆಲೋಚನೆಯಲ್ಲಿಯೇ ನಡೆದಿದ್ದಳು. ಅಷ್ಟರಲ್ಲಿ ಹಿಂದಿನಿಂದ ಕುದುರೆಗಳ ಖುರಪುಟ ಧ್ವನಿ ಕೇಳಿಸಿತು. ತಿರುಗಿ ನೋಡಿದಳು. ನಾಲ್ಕಾರು ಜನ ರಾಜ ಸವಾರರು ಕುದುರೆಗಳನ್ನೇರಿ ಬರುತ್ತಿದ್ದುದು ಕಣ್ಣಿಗೆ ಬಿತ್ತು. ಇಬ್ಬರೂ ರಸ್ತೆಯ ಪಕ್ಕಕ್ಕೆ ಬಂತು ನಿಂತರು. ಕುದುರೆಗಳು ಅವರನ್ನು ದಾಟಿ ಮುಂದೆ ಹೋದವು.

"ಇದೇನೋ ಅಮ್ಮ. ಈಗೊಂದೆರೆಡು ದಿನಗಳಿಂದ ಹೀಗೆ ರಾಜಸೈನಿಕರ ಓಡಾಟ ಹೆಚ್ಚಿದೆಯಲ್ಲ. ಮತ್ತೇನು ಯುದ್ಧವೋ ಏನೋ !" ತನ್ನ ಕುತೂಹಲವನ್ನು ವ್ಯಕ್ತಪಡಿಸಿದಳು ಕಲ್ಯಾಣಮ್ಮ.

"ಇಲ್ಲ ಕಲ್ಯಾಣಮ್ಮ, ನಾನು ಕುತೂಹಲದಿಂದ ಅಪ್ಪನನ್ನು ಕೇಳಿದೆ. ಇನ್ನೊಂದೆರಡು ದಿನಗಳಲ್ಲಿ ಅದೇನೋ ವೈಹಾಳಿಯಂತೆ ರಾಜನದು. ಅದರ ಸಿದ್ಧತೆಯಲ್ಲಿ ತೊಡಗಿದ್ದಾರೆ."

"ವೈಹಾಳಿ ! ಹಾಗೆಂದರೇನು ಮಹಾದೇವಿ?" ಕಲ್ಯಾಣಮ್ಮ ಕೇಳಿದಳು.

"ಊರ ಮುಂದೆ ವಿಸ್ತಾರವಾದ ಬಯಲಿದೆಯಲ್ಲ, ಮಠದಿಂದಲೂ ಆಚೆ ; ಅಲ್ಲಿ ರಾಜನ ಕುದುರೆ ಸವಾರಿಯಂತೆ ! ಹೊಸ ಕುದುರೆಗಳು ಬಂದಿವೆಯಂತೆ. ಅವುಗಳನ್ನೇರಿ ಸವಾರಿ ಮಾಡುವುದು. ಆ ವಿನೋದಕ್ಕೆ ವೈಹಾಳಿ ಎಂದು ಕರೆಯುತ್ತಾರಂತೆ." ಮಹಾದೇವಿ ತನಗೆ ತಿಳಿದುದನ್ನು ಹೇಳಿದಳು.

ಹೀಗೆ ಮಾತನಾಡುತ್ತಾ ನಡೆಯುತ್ತಿರುವಷ್ಟರಲ್ಲಿ ಕಲ್ಯಾಣಮ್ಮ ತನ್ನ ಮನೆಯ ಕಡೆ ತಿರುಗುವ ರಸ್ತೆ ಬಂದಿತು. ಮಹಾದೇವಿಯಿಂದ ಬೀಳ್ಕೊಳ್ಳುವ ಮುನ್ನ ಕಲ್ಯಾಣಮ್ಮ ಹೇಳಿದಳು :

"ಮಹಾದೇವಮ್ಮ, ಬಾವಿಯ ಕಟ್ಟೆಯ ಬಳಿ ನಡೆದುದನ್ನು ಮರೆತು ಬಿಡಮ್ಮ. ಆ ಜನಗಳೇ ಹಾಗೆ. ಬಾಯಿ ಹಿಡಿತವಿಲ್ಲದ ಜನ..."

"ಇರಲಿ ಬಿಡಿ, ಕಲ್ಯಾಣಮ್ಮನವರೇ. ಅದಕ್ಕೆಲ್ಲಾ ನಾನು ಅಂಜುವವಳಲ್ಲ. ಜಗತ್ತಿನಲ್ಲಿ ಬರೀ ಅಂತಹವರೇ ಇಲ್ಲವಲ್ಲ. ನಿಮ್ಮಂತಹವರೂ ಇದ್ದಾರೆ. ಅದನ್ನೇನೂ ಯೋಚಿಸಬೇಡಿ. ನಾನದೆಲ್ಲವನ್ನೂ ಸಹಿಸಿಕೊಳ್ಳಬಲ್ಲೆ" ಎಂದು ಸಮಾಧಾನಪಡಿಸಿ ಮುಂದೆ ನಡೆದಳು. ಅದೇ ಆಲೋಚನೆ ಮನಸ್ಸಿನಲ್ಲಿ ಸುತ್ತುತ್ತಿತ್ತು.

"ಅವರ ಮನಸ್ಸಿನ ಮಟ್ಟವೇ ಅಷ್ಟು. ಅದಕ್ಕಿಂತ ಹೆಚ್ಚು ಅವರು ಆಲೋಚಿಸಲಾರರು. ಅವರ ಮೇಲೇಕೆ ಕೋಪ !" ಎಂದು ಮನಸ್ಸು ಒಂದು ಕಡೆ ಸಹಾನುಭೂತಿಯನ್ನು ಮಿಡಿಯುತ್ತಿತ್ತು.

'ತಮ್ಮ ಮನಸ್ಸಿನ ಅಷ್ಟೇ ಮಟ್ಟವನ್ನಿಟ್ಟುಕೊಂಡು, ತಮ್ಮ ಪಾಡಿಗೆ ತಾವು ಇರಬಾರದೇ ! ಹೋಗುತ್ತಿರುವವರನ್ನು ಕರೆದು ಅವಮಾನಿಸಬೇಕೆ ! ನಾನು ಮದುವೆಯಾಗದಿದ್ದರೆ ಅವರಿಗೇನು? ಎಷ್ಟು ಸೊಕ್ಕು ಅವರಿಗೆ ?' ಎಂದು ತನ್ನ ಕೋಪವನ್ನು ಸಮರ್ಥಿಸುವುದು ಇನ್ನೊಂದು ಮನಸ್ಸು.

'ಲೋಕಕ್ಕೆ ಬಂದನಂತರ ಇಂತಹವುಗಳನ್ನೆಲ್ಲಾ ಎದುರಿಸಲೇಬೇಕಾಗುತ್ತದೆ. ಸಾಧನೆಯ ಮಾರ್ಗದಲ್ಲಿ ಸದಾ ಜಾಗೃತವಾಗಿರುವುದಕ್ಕೆ ಇಂತಹ ನಿಂದೆಯ ಮಾತುಗಳು ಸಹಾಯಕವಾಗುವುದಿಲ್ಲವೇ ? ಹೊಗಳಿಕೆಗಿಂತಲೂ ಇವುಗಳಿಂದಲೇ ಹೆಚ್ಚು ಪ್ರಯೋಜನವಾದೀತು.'

ಈ ದಿಕ್ಕಿಗೆ ಆಲೋಚನೆ ಹರಿಯುತ್ತಿದ್ದಂತೆಯೇ ಮಹಾದೇವಿಗೆ ಬಸವಣ್ಣನವರ ಒಂದು ವಚನ ನೆನಪಿಗೆ ಬಂದಿತು :

ಹೊಯಿದವರೆನ್ನ ಹೊರೆದವರೆಂಬೆನು,
ಬೈದವರೆನ್ನ ಬಂಧುಗಳೆಂಬೆನು ;

ನಿಂದಿಸಿದವರೆನ್ನ ತಂದೆತಾಯಿಗಳೆಂಬೆ,
ಅಳಿಗೊಂಡವರು ಆಳ್ದರೆಂಬೆ,
ಜರಿದವರೆನ್ನ ಜನ್ಮಬಂಧುಗಳೆಂಬೆ,
ಕೊಂಡಾಡಿದವರೆನ್ನ ಹೊನ್ನ ಶೂಲದಲಿಕ್ಕಿದವರು
ಕೂಡಲ ಸಂಗಮದೇವ.

ಈ ಅರ್ಥದಲ್ಲಿ ನೋಡಿದಾಗ ಕೋಪಕ್ಕೆ ಅವಕಾಶವೇ ಇಲ್ಲ. ಇದೆಲ್ಲಾ ಸಹಜವಾದುದು ಮಾತ್ರವಲ್ಲ ಅವಶ್ಯಕವಾದುದೂ ಹೌದು. ನಮ್ಮನ್ನು ಸದಾ ಎಚ್ಚರದಿಂದಿಡುವ ಅವರ ಈ ಪ್ರಯತ್ನಕ್ಕೆ ನಾವೇ ಕೃತಜ್ಞರಾಗಿರಬೇಕು.

ಕಾಣದ ಠಾವಿಯಲ್ಲಿ ಜರಿದರೆ ಕೇಳಿ ಪರಿಣಾಮಿಸಬೇಕು.
ಅದೇನು ಕಾರಣ? ಕೊಳ್ಳದೆ ಕೊಡದೆ
ಅವರಿಗೆ ಸಂತೋಷವಹುದಾಗಿ ;
ಎನ್ನ ಮನದ ತದ್ವೇಷವಳಿದು, ನಿಮ್ಮ ಶರಣರಿಗೆ ಶರಣೆಂಬುದ
ಕರುಣಿಸು ಕೂಡಲಸಂಗಮದೇವ.

'ಎಂತಹ ಮಾತನ್ನು ಹೇಳಿದ್ದಾರೆ ಅಣ್ಣನವರು. ನಾವೇನೂ ಕೊಡದೆ, ಕೊಳ್ಳದೆ, ನಿಂದಕರು ನಮ್ಮಿಂದ ಸಂತೋಷಪಡುತ್ತಾರೆ. ಅದಕ್ಕೆ ನಾವು ಅವರನ್ನು ದ್ವೇಷಿಸುವುದೇಕೆ ?'

ಈ ನಿಲುವಿನಲ್ಲಿ ನಿಂತು ನೋಡಿದಾಗ ಬಾವಿಕಟ್ಟೆಯ ಹೆಂಗಸರ ಕುಹಕದ ಮಾತುಗಳು ಅವಳಿಗೆ ವಿನೋದವಾಗಿ ಕಂಡವು :

'ಛೆ ! ನಾನೇಕೆ ಅವರಿಗೆ ಹಾಗೆ ಕಠಿಣವಾದ ಮಾತನ್ನಾಡಿದೆ ! ಅವರ ಮನಸ್ಸು ನೊಂದಿತೋ ಏನೋ' ಎಂದುಕೊಂಡಳು.

## ೧೦

ಮಠವನ್ನು ಪ್ರವೇಶಿಸಿದಾಗ ಗುರುಗಳು ಗದ್ದುಗೆಯ ಪಕ್ಕದಲ್ಲಿದ್ದ ತಮ್ಮ ವಸತಿಸ್ಥಾನದ, ಹೊಸ ಆವರಣದ ಜಗುಲಿಯ ಮೇಲೆ ಕುಳಿತಿದ್ದರು. ಕೈಯಲ್ಲಿ ಒಂದು ಓಲೆಗರಿಯ ಕಟ್ಟಿತ್ತು. ಮಹಾದೇವಿಯನ್ನು ಕಂಡು :

"ಬಾರಮ್ಮ... ಬಾ" ಎನ್ನುತ್ತಾ ಓಲೆಗರಿಯ ಕಟ್ಟನ್ನು ಪಕ್ಕಕ್ಕೆ ಇಟ್ಟರು. ಮಹಾದೇವಿ ನಮಸ್ಕರಿಸಿ ಕುಳಿತುಕೊಂಡಳು. ಓಲೆಗರಿಯತ್ತ ನೋಡುತ್ತ :

"ಅದಾವುದು ಗುರುಗಳೇ, ಆ ಹೊತ್ತಗೆ ?"

"ಅದೇ ಮೊನ್ನೆ ಹೇಳಿದೆನಲ್ಲಮ್ಮಾ, ಕಲ್ಯಾಣದ ಕಡೆಯಿಂದ ಜಂಗಮರು ಬಂದ ವಿಚಾರ. ಅವರು ಅಲ್ಲಿಂದ ತಂದ ವಚನಗಳ ಕಟ್ಟು ಇದು. ಬಸವಣ್ಣನವರ ವಚನಗಳಲ್ಲದೆ ಇತರ ವಚನಕಾರರ ವಚನಗಳೂ ಇವೆ. ಅಲ್ಲಮಪ್ರಭು ದೇವರ ವಚನಗಳು ಕೆಲವಿವೆ. ಅಬ್ಬಾ ! ಏನು ಅನುಭವಿಗಳಮ್ಮಾ ಅವರು ! ನನ್ನ ಅನುಭವ ಆ ಮಟ್ಟಕ್ಕೆ ಏರಲಾರದೆ ತಲ್ಲಣಿಸುತ್ತಿದೆ ತಾಯಿ. ಆದುದರಿಂದಲೇ ಬಸವೇಶ್ವರ ಅವರನ್ನು ಶೂನ್ಯಸಿಂಹಾಸನಕ್ಕೆ ಅಧಿಪತಿಗಳನ್ನಾಗಿ ಮಾಡಿದ್ದಾನೆ."

"ಶೂನ್ಯ ಸಿಂಹಾಸನ ! ಅದಾವುದು ಗುರುಗಳೆ ?" ಹೆಸರಿನಿಂದ ಆಕರ್ಷಿತಳಾಗಿ ಕೇಳಿದಳು ಮಹಾದೇವಿ.

"ಈಗ ಕಲ್ಯಾಣದ ಮಹಾಕ್ಷೇತ್ರ ಬಹಳ ವಿಸ್ತಾರವಾಗಿದೆ, ಮಹಾದೇವಿ. ನಾನು ಹಿಂದೆ ಶ್ರೀಶೈಲದಿಂದ ಅಲ್ಲಿಗೆ ಹೋಗಿ ಬಂದಾಗ ಅದೇ ತಾನೆ ಅಣ್ಣನವರ ಕಾರ್ಯ ಪ್ರಾರಂಭವಾಗಿತ್ತು. ಇಂದದು ಬೆಳೆದು ಮಹಾವೃಕ್ಷವಾಗಿ ಬೇರು ಬಿಟ್ಟಿದೆ. ನೂರಾರಲ್ಲ, ಸಾವಿರಾರು ಸಾಧಕರು ಅದರ ನೆರಳಿನಲ್ಲಿ ಬಂದು ಸೇರಿದ್ದಾರಂತೆ! ಅಣ್ಣನವರು ಅಲ್ಲೊಂದು ಅನುಭವಮಂಟಪವನ್ನು ನಿರ್ಮಿಸಿದ್ದಾರೆ. ಅದರ ಅಧಿಪತಿಯಾಗಿ ಅಲ್ಲಮಪ್ರಭುಗಳು, ಅವರು ಕುಳಿತುಕೊಳ್ಳುವ ಅಧ್ಯಕ್ಷ ಪೀಠಕ್ಕೆ ಬಸವಣ್ಣ ಇಟ್ಟಿರುವ ಸಾಂಕೇತಿಕವಾದ ಹೆಸರು ಶೂನ್ಯ ಸಿಂಹಾಸನ ಎಂದು. ಅದನ್ನು ಏರಿದ ಆ ಮೂರ್ತಿ, ಶೂನ್ಯ ಮೂರ್ತಿಯೇ ! ಏನು ಅನುಭಾವ ಆತನದು ! ಏನು ವಚನಗಳಮ್ಮಾ ಆತನವು ! ನೋಡು ಒಂದೆರಡು ಮಾತ್ರ ಓದುತ್ತೇನೆ"

ಎಂದು ಓಲೆಗರಿ ಕಟ್ಟನ್ನು ಕೈಗೆತ್ತಿಕೊಂಡರು. ಮಹಾದೇವಿ ಮೈಯೆಲ್ಲಾ ಕಿವಿಯಾಗಿ ಕುಳಿತಳು. ನಿಧಾನವಾಗಿ ಓದಿದರು ಗುರುಗಳು :

ಪ್ರಾಣಲಿಂಗಕ್ಕೆ ಕಾಯವೇ ಸಜ್ಜೆ,
ಆಕಾಶಗಂಗೆಯಲ್ಲಿ ಮಜ್ಜನ,
ಹೂವಿಲ್ಲದ ಪರಿಮಳದ ಪೂಜೆ
ಹೃದಯಕಮಲದಲ್ಲಿ ಶಿವಶಿವ ಎಂಬ ಶಬ್ದ
ಇದು ಅದ್ವೈತ ಕಾಣಾ ಗುಹೇಶ್ವರಾ.

ಮಹಾದೇವಿ ಕಣ್ಣುಮುಚ್ಚಿ ಆಲಿಸುತ್ತಿದ್ದಳು. ಶಬ್ದದ ಹಿಂದಿರುವ ಅರ್ಥದ ನಿಲವಿಗೆ ಏರುವ ಸಾಹಸ ಮುಖದಲ್ಲಿ ಕಾಣುತ್ತಿತ್ತು. ವಚನದ ವಾಚನ ಮುಗಿದ ಮೇಲೂ ಕ್ಷಣಕಾಲ ಹಾಗೇ ಇದ್ದಳು. ಅನಂತರ :

"ಹೂವಿಲ್ಲದ ಪರಿಮಳದ ಪೂಜೆ – ಎಂತಹ ಸುಂದರವಾದ ಮಾತು !" ಎಂಬ ಉದ್ಗಾರ ಹೊರಬಿತ್ತು ಅವಳಿಂದ.

"ಇದನ್ನು ಕೇಳಮ್ಮ" ಗುರುಗಳು ಮತ್ತೆ ಪ್ರಾರಂಭಿಸಿದರು :

ಅರಗಿನ ದೇಗುಲದಲ್ಲಿ ಒಂದು ಉರಿಯ ಲಿಂಗವ ಕಂಡೆ,
ಮತ್ತೆ ದೇವರ ಪೂಜಿಸುವವರಾರೂ ಇಲ್ಲ ;
ಉತ್ತರಪಥದ ದರ್ಶನಾದಿಗಳಿಗೆ ಸುತ್ತಿದ ಮಾಯೆ,
ಎತ್ತಲಿಕೆ ಹೋಯಿತ್ತು ;
ಮರದೊಳಗಣ ಕಿಚ್ಚು ಮರನ ಸುಟ್ಟುದ ಕಂಡೆ ;
ಗುಹೇಶ್ವರನೆಂಬ ಲಿಂಗವಲ್ಲಿಯೇ ನಿಂದಿತ್ತು.

"ಅಬ್ಬಾ ! ಏನು ಮಾತುಗಳು ಗುರುಗಳೇ. ನನ್ನ ಕಣ್ಣು ಕೋರೈಸುತ್ತಿದೆ. ಅರ್ಥವನ್ನು ಕಾಣಲಾರದೆ ಕಣ್ಣು ಮುಚ್ಚುತ್ತಿದೆ."

"ನನ್ನದೂ ಅದೇ ಗತಿಯಾಗಿದೆಯಮ್ಮಾ...." ಎಂದು ಇನ್ನೊಂದು ಓಲೆಗರಿಯನ್ನು ನೋಡುತ್ತಾ : "ಆ ನಿಲುವು ಹಾಗಿರಲಿ, ಇಲ್ಲಿ ನೋಡು, ಈ ಮಾತುಗಳನ್ನು ಎಷ್ಟು ಸುಂದರವಾಗಿ, ನೇರವಾಗಿ ಅಂತರಂಗಕ್ಕೆ ಇಳಿಯುವಂತೆ ಹೇಳಿದ್ದಾರೆ.

ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ !
ಗಳಿಗೆಯ ಬೇಟವ ಮಾಡಿಹೆನೆಂಬ ಪರಿಯ ನೋಡಾ !
ತನ್ನನಿಕ್ಕಿ ನಿಧಾನವ ಸಾಧಿಸಿಹೆನೆಂದಡೆ
ಬಿನ್ನಾಣ ತಪ್ಪಿತ್ತು ಗುಹೇಶ್ವರಾ.
ಆಶೆಗೆ ಸತ್ತುದು ಕೋಟಿ ಕೋಟಿ.
ಆಮಿಷಕ್ಕೆ ಸತ್ತುದು ಕೋಟಿ ಕೋಟಿ.
ಹೊನ್ನಿಂಗೆ ಹೆಣ್ಣಿಂಗೆ ಮಣ್ಣಿಂಗೆ ಸತ್ತುದು ಕೋಟಿ ಕೋಟಿ,
ಗುಹೇಶ್ವರಾ ನಿನಗಾಗಿ ಸತ್ತವರನಾರನೂ ಕಾಣೆ.

ಇವುಗಳನ್ನು ಕೇಳುತ್ತಾ ಮಹಾದೇವಿಯ ಮನಸ್ಸು ಅಂತರ್ಮುಖವಾದಂತೆ ತೋರಿತು. ತನ್ನ ಸಮಸ್ಯೆಗಳ ಮೇಲೆ ಅಲ್ಲಮ ಬೆಳಕನ್ನು ಬೀರುತ್ತಿರುವಂತೆ ತೋರಿತು ಅವಳಿಗೆ.

"ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ – ಇದೇ ನನ್ನ ಮನಸ್ಸಿನಲ್ಲಿ ವೇದನೆಗೊಳಿಸುತ್ತಿದ್ದ ಭಾವ, ಗುರುಗಳೇ. ಅಲ್ಪಸುಖಕ್ಕಾಗಿ ಎಷ್ಟೊಂದು ಕಷ್ಟವನ್ನು ಎದುರಿಸುವುದಕ್ಕೆ ಸಿದ್ಧರಾಗುತ್ತೇವೆ. ಆ ಸುಖವೋ ಹೀಗೆ

ಬಂದು, ಹಾಗೆ ಹೋಗುತ್ತದೆ. ನಾನು ಹೇಳಲಾಗದ ಆ ಭಾವಕ್ಕೆ ಪ್ರಭುದೇವರು ಸುಂದರವಾದ ವ್ಯಕ್ತರೂಪವನ್ನು ಕೊಟ್ಟಿದ್ದಾರೆ. 'ನಿನಗಾಗಿ ಸತ್ತವರನಾರನೂ ಕಾಣೆ' ಎಂಬ ಮಾತಿನಲ್ಲಿಯೂ ಅಷ್ಟೆ. ಅವನನ್ನು ನಂಬಿದವರಿಗೆ ಸಾವಿಲ್ಲ. ಆದರೂ ಈ ಸಾವ ಕೆಡುವ ಗಂಡರೆನೇಕೆ ನಂಬಬೇಕೆಂಬುದೇ ನನ್ನ ಹಂಬಲ."

ಮಾತಿನ ದಿಕ್ಕು ತಾನರಿಯದಂತೆಯೇ ತನ್ನ ವಿಷಯದ ಕಡೆಗೆ ತಿರುಗಿತ್ತು. ಅದನ್ನು ಗುರುಗಳ ಮುಂದೆ ಹೇಳಿ ಹೃದಯವನ್ನು ಹಗುರ ಮಾಡಿಕೊಳ್ಳುವ ಉದ್ದೇಶದಿಂದಲೇ ಬಂದಿದ್ದಳು. ಹೇಳಿದಳು :

"ಆದರೂ ನನ್ನ ತಂದೆತಾಯಿಗಳು ನನ್ನ ಹಂಬಲವನ್ನು ಕೇಳುವಂತಿಲ್ಲ, ಗುರುಗಳೆ... ನಿಮಗೂ ಎಲ್ಲಾ ತಿಳಿದಿರಬೇಕು..."

"ಹೌದಮ್ಮಾ, ಗೊತ್ತು. ಈ ಬೆಳಗ್ಗೆಯೂ ಬಂದಿದ್ದ ಓಂಕಾರ. ಎಲ್ಲವನ್ನೂ ಹೇಳಿದ."

"ನಿನ್ನೆ ರಾತ್ರಿ ಅವ್ವ ಹೇಳಿದಳು : ಇನ್ನು ನಾಲ್ಕಾರು ದಿನಗಳಲ್ಲಿ ನನ್ನನ್ನು ನೋಡುವುದಕ್ಕೆ ಬರುತ್ತಾರಂತೆ. ಆಗಲೇ ಎಲ್ಲವನ್ನೂ ಸಿದ್ಧಗೊಳಿಸಿರುವ ಹಾಗೆ ಕಾಣುತ್ತದೆ ಗುರುಗಳೆ. ಅದನ್ನು ಕೇಳಿ ರಾತ್ರಿಯ ನನ್ನ ತಳಮಳ ನನಗೇ ಗೊತ್ತು. ಅಲ್ಲದೆ..." ಅನುಮಾನಿಸುತ್ತಾ ಹೇಳಿದಳು. "ಆ ತಳಮಳದ ಸಂಕಟದಲ್ಲಿ ಒಂದೆರಡು ವಚನಗಳನ್ನು ಬರೆದಿದ್ದೇನೆ, ಗುರುಗಳೇ."

"ಹೌದೇ ! ಎಲ್ಲಿ ನೋಡೋಣ !" ಕುತೂಹಲಗೊಂಡರು ಗುರುಗಳು.

"ಅಲ್ಲಮ ಪ್ರಭುದೇವರ ವಚನಗಳನ್ನು ಕೇಳಿದ ಮೇಲೆ, ನನಗೆ ಅವುಗಳನ್ನು ತೆಗೆಯುವುದಕ್ಕೇ ಮನಸ್ಸು ಬಾರದಂತಾಗಿದೆ."

"ಹಿಮಾಲಯದ ಉತ್ತುಂಗ ಶಿಖರದಲ್ಲಿ ನಿಂತವರನ್ನು ಕಂಡು, ಅದರ ಬುಡದ ತಪ್ಪಲಿನಲ್ಲಿದ್ದು ಏರಲು ಸಾಹಸಪಡುತ್ತಿರುವವರು ಅಳುಕಬೇಕಾಗಿಲ್ಲ. ನಮಗೆ ಮಾರ್ಗ ತೋರಿಸುವ ಒಂದು ಶಕ್ತಿ ಮೇಲೇರಿ ಹೋಗಿದೆಯೆಂದು ಧೈರ್ಯಪಡಬೇಕು. ಆ ಮಹಾಸಿದ್ಧಿಪುರುಷನ ನೆರಳಿನಲ್ಲಿ ನಿನ್ನ ಚೈತನ್ಯ ರೂಪುಗೊಳ್ಳುತ್ತದೆ. ಎಲ್ಲಿ ಹೇಳು ನೋಡೋಣ, ನಿನ್ನ ವಚನಗಳನ್ನು."

ಮಹಾದೇವಿ ಮೊದಲು 'ನಾನು ನಿನಗೊಲಿದೆ, ನೀನು ಎನಗೊಲಿದೆ' ಎಂಬ ವಚನಗಳನ್ನು ಹೇಳಿದಳು. ಗುರುಗಳು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅನಂತರ : 'ಎನ್ನ ಮನವ ಮಾರುಗೊಂಡನವ್ವಾ' ಮತ್ತು 'ಎರದ ಮುಳ್ಳಿನಂತೆ ಪರಗಂಡರೆನಗವ್ವಾ' ಎಂಬ ವಚನಗಳನ್ನು ವಾಚಿಸಿದಳು. ಕೇಳುತ್ತಾ ತಲೆದೂಗಿದರು ಗುರುಲಿಂಗರು :

"ನಿನ್ನ ಭಾವನೆಗಳು ಎಷ್ಟು ಉದಾತ್ತವಾದವುಗಳು, ಮಗಳೇ." ಅಷ್ಟರಲ್ಲಿ ಮಹಾದೇವಿ ಈ ವಚನವನ್ನು ಹೇಳಲು ತೊಡಗಿದಳು :

"ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವಾ..."

ಇದನ್ನು ಹೆಜ್ಜೆ ಹೆಜ್ಜೆಯಾಗಿ ಕೇಳುತ್ತಾ ಗುರುಗಳ ಸಂತೋಷ ಉಕ್ಕಿ ಹರಿಯಿತು. "ಸಾವ ಕೆಡುವ, ಗಂಡರನೊಯ್ದು ಒಲೆಯೊಳಗೆ ಇಕ್ಕು" ಈ ಮಾತನ್ನು ಕೇಳಿ ಮುಗುಳುನಗೆ ಸುಳಿಯಿತು ಅವರ ಮುಖದ ಮೇಲೆ :

"ಎಷ್ಟು ದಿಟ್ಟತನವಮ್ಮಾ ನಿನ್ನದು. ಆದರೆ ನಿನ್ನ ತಂದೆ ತಾಯಿಗಳು ಈ ಮಾತನ್ನು ಕೇಳಬೇಕಲ್ಲ, ಮಗಳೆ..." ಎನ್ನುತ್ತಾ ವಿಚಾರಪರರಾದರು.

"ನನಗೂ ಅದೇ ಯೋಚನೆ, ಗುರುಗಳೇ. ನಿಮ್ಮ ಮಾತನ್ನೂ ಅವರು ಕೇಳಲಾರರೇ ?" ಬೇಡಿಕೆಯ ಧ್ವನಿಯಿತ್ತು.

"ಅದು ಅಷ್ಟು ಸುಲಭವಲ್ಲಮ್ಮ. ಪ್ರಪಂಚದ ದೃಷ್ಟಿಯಲ್ಲಿ ನೀನು ಹೆಣ್ಣು. ಗಂಡಿನ ಆಶ್ರಯವನ್ನು ಪಡೆದೇ ಬಾಳಬೇಕಾದವಳು. ಸನ್ಯಾಸಿಯಾದ ನಾನು ಅದಕ್ಕೆ ವಿರುದ್ಧವಾಗಿ ಹೇಳುವಂತಿಲ್ಲ. ಇಂದಿನ ಸಮಾಜದ ಸಂಪ್ರದಾಯಗಳು ಹಾಗಿವೆ. ಆದರೂ ನಿರಾಶಳಾಗಬೇಡ. ಅತ್ಯುತ್ಕಟವಾದ ಸತ್‌ಸಂಕಲ್ಪಕ್ಕೆ ಮಲ್ಲಿಕಾರ್ಜುನನ ಕೃಪೆ ಸದಾ ಇದ್ದೇ ಇರುತ್ತದೆ." ಧೈರ್ಯವಿತ್ತರು ಗುರುಲಿಂಗರು.

"ಆ ಶ್ರದ್ಧೆಯೇ ನನಗೆ ಸ್ಫೂರ್ತಿದಾಯಕ. ಅವರ ಕರುಣೆಯೇ ನನ್ನನ್ನು ಉಳಿಸಬೇಕು. ನಿಮ್ಮ ಹರಕೆಯೇ ನನಗೆ ಧೈರ್ಯವನ್ನು ಕೊಡಬೇಕು."

"ನಿನ್ನ ನಿಷ್ಠೆಯೇ ನಿನಗೆ ಎಲ್ಲಕ್ಕೂ ಮಿಗಿಲಾದ ಹರಕೆ, ತಾಯಿ" ಎಂಬ ಮಾತೇ ಅವರ ಆಶೀರ್ವಾದವಾಗಿ ಪರಿಣಮಿಸಿತು.

ಗುರುಗಳಿಂದ ಬೀಳ್ಕೊಂಡ ಮಹಾದೇವಿ ಮಠದಿಂದ ಹೊರಟಾಗ ಅವಳ ಮನಸ್ಸಿನಲ್ಲೇನೋ ಒಂದು ನೆಮ್ಮದಿ ಮೂಡಿತ್ತು. ಅಲ್ಲಮನ ವಚನಗಳ ವ್ಯಕ್ತಿತ್ವ ಅವಳ ಮುಂದೆ ನಿಲ್ಲುತ್ತಿತ್ತು. 'ನಿನಗಾಗಿ ಸತ್ತವರನಾರನೂ ಕಾಣೆ' ಎಂಬ ಮಾತನ್ನು ಮತ್ತೆ ಮತ್ತೆ ಹೇಳಿಕೊಂಡಳು. ಗುರುಗಳು ಹೇಳಿದ ಮಾತು ಸುಳಿಯಿತು.

'ನಿಜ, ದೈವಕೃಪೆ ಯಾವ ರೂಪದಿಂದಲೋ ಬರುತ್ತದೆ. ಬಂದೇ ಬರುತ್ತದೆ. ಚೆನ್ನಮಲ್ಲಿಕಾರ್ಜುನ ನನ್ನ ಕೈಬಿಡಲಾರ' ಎಂಬ ಆಲೋಚನೆ ಅವಳಿಗೆ ಧೈರ್ಯವನ್ನಿತ್ತಿತ್ತು.

ದೂರದ ದಿಗಂತದಲ್ಲಿ ಶುಭೋದಯವನ್ನು ಸಾರುವಂತೆ ಸೂರ್ಯ ತನ್ನ ಹೊಂಗಿರಣವನ್ನು ಮೇಲಕ್ಕೆ ಚಿಮ್ಮುತ್ತಿದ್ದ. ಆದರೆ ನಾಳೆಯ ಶುಭೋದಯಕ್ಕಾಗಿ ಇಂದು ಬರುವ ಕತ್ತಲನ್ನು ಎದುರಿಸಲೇಬೇಕೆಂಬುದನ್ನು ಸೂಚಿಸುವಂತೆ ಅವನ ಉಜ್ವಲವಾದ ಕಾಂತಿಬಿಂಬ, ಪಡುವಣ ಪರ್ವತದ ಅಂಚಿನಲ್ಲಿ ಮರೆಯಾಗುತ್ತಿತ್ತು.

ಕತ್ತಲಿನ ಮುನ್ಸೂಚನೆಯನ್ನು ಸಾರಿ ಎಚ್ಚರಿಸುವ ದೇವದೂತನಂತೆ, ಉದ್ಯಾನದತ್ತಲಿನ ತಂಗಾಳಿ ತೀಡುತ್ತಿತ್ತು. ಹಸುರು ಬಯಲಿನಲ್ಲಿ ಮೇಯುತ್ತಿದ್ದ ದನಕರುಗಳು ಉಡುತಡಿಯತ್ತ ನಡೆಯುತ್ತಿದ್ದುವು. ಹಕ್ಕಿಪಕ್ಕಿಗಳು ಕುಕಿಲಿರಿಯುತ್ತಾ ತಮ್ಮ ಗೂಡನ್ನು ಹುಡುಕುತ್ತಿದ್ದವು. ದಿನವಿಡೀ ದುಡಿದ ರೈತರು ತಮ್ಮ ಗೂಡುಗಳತ್ತ ಹೊರಟಿದ್ದರು, ದಣಿದ ಜೀವಕ್ಕೆ ವಿಶ್ರಾಂತಿಯನ್ನು ಕೊಡಲು.

ಉದ್ಯಾನವನದ ಹತ್ತಿರ ನಿಂತು ಮಹಾದೇವಿ, ಸುತ್ತಲೂ ನೋಡಿದಳು. ಮುಳುಗುತ್ತಿರುವ ಸೂರ್ಯನನ್ನು ವೀಕ್ಷಿಸಿದಳು. ಕಣ್ಣುಕೋರೈಸುವ ತನ್ನ ಕಾಂತಿಯನ್ನು ಕಳೆದುಕೊಂಡು ಮಂದವಾದ ಹೊಂಬೆಳಗಿನಿಂದ ಕೂಡಿದ್ದ ಸೂರ್ಯ, ಆಗಲೇ ಅರ್ಧದೇಹವನ್ನು ಪಶ್ಚಿಮಸಮುದ್ರದಲ್ಲಿ ಅದ್ದಿ ಮರೆಯಾಗುತ್ತಿದ್ದ. ಅಣುಅಣುವಾಗಿ ಕೆಳಗೆ ಇಳಿಯುತ್ತಿರುವ ಅವನ ಚಲನೆಯನ್ನು ಗುರುತಿಸಬಹುದಾಗಿತ್ತು. ಕ್ರಮೇಣ ಜಾರಿ ಮರೆಯಾದಂತೆ ಅವನ ದೇಹ ಸಂಪೂರ್ಣವಾಗಿ ಕಾಣದಂತಾಯಿತು.

'ಲೋಕದ ಚಲನವಲನಕ್ಕೆಲ್ಲಾ ರವಿಯೇ ಬೀಜ'ವೆಂದೆನಿಸಿತು ಮಹಾದೇವಿಗೆ. ಈ ಪ್ರಕೃತಿ ವ್ಯಾಪಾರವನ್ನು ತನ್ನ ಮಾನಸಿಕವಾದ ಕ್ರಿಯೆಗೂ ಅನ್ವಯಿಸಿಕೊಂಡಳು:

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ –

ಕರಣಂಗಳ ಚೇಷ್ಟೆಗೆ ಮನವೇ ಬೀಜ
ಎನಗುಳ್ಳದೊಂದು ಮನ,
ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನ.

'ನನ್ನ ಮನ ನಿಮ್ಮಲ್ಲಿ ಸೇರಿದಮೇಲೆ, ನನಗೆ ಬೇರೆ ಚಲನೆಯಿಲ್ಲ. ರವಿ ಪಶ್ಚಿಮ ಸಮುದ್ರದಲ್ಲಿ ಐಕ್ಯವಾದಂತೆ, ನಾನು ನಿಮ್ಮಲ್ಲಿ ಐಕ್ಯಳಾಗುವವಳು. ನನ್ನ ಜೀವನವೆಲ್ಲಾ ಆ ಚೆನ್ನಮಲ್ಲಿಕಾರ್ಜುನನೆಂಬ ಸಮುದ್ರದತ್ತ ಕೈಕೊಂಡ ಪ್ರಯಾಣ' ಎಂದುಕೊಂಡಳು.

ಆ ಸಂಜೆ, ಇಂತಹ ಅಪೂರ್ವವಾದ ಸಂದೇಶವನ್ನು ಕೊಟ್ಟಂತೆ ಅನಿಸಿತು ಆಕೆಗೆ. ಅದನ್ನೇ ಮತ್ತೆ ಮತ್ತೆ ನೆನೆಯುತ್ತಾ ಮನೆಯನ್ನು ಸೇರಿದಳು.

●

# ದಿಗಂಬರದ ದಿವ್ಯಾಂಬರೆ

## ೧

ಈ ದಿನ ಉಡುತಡಿ ಅತ್ಯಂತ ಕೋಲಾಹಲ ಸಂಭ್ರಮಗಳಿಂದ ಕೂಡಿತ್ತು. ಇಂದು ಕೌಶಿಕನ ವೈಹಾಳಿಯ ವಿನೋದವು ನಡೆಯಲು ಗೊತ್ತಾಗಿದ್ದ ದಿನ. ಅದರ ಸಿದ್ಧತೆಯ ಕೊನೆಯ ಘಟ್ಟದಲ್ಲಿತ್ತು ಪ್ರಜಾಸಮುದಾಯ.

ಮಧ್ಯಾಹ್ನದ ಮೇಲೆ ಕೌಶಿಕ, ವೈಹಾಳಿಯ ವಿಶಾಲವಾದ ಬಯಲಿನ ಕಡೆಗೆ ತೆರಳಬೇಕಾಗಿತ್ತು. ಬೆಳಗಿನಿಂದಲೇ ಅದರ ಸಿದ್ಧತೆಗೆ ಪ್ರಾರಂಭವಾಗಿತ್ತು. ರಾಜಬೀದಿಯಲ್ಲಿ ಅರಸನ ಕುದುರೆಯ ಸೈನ್ಯವೆಲ್ಲಾ ಸಾಲುಸಾಲಾಗಿ ನಡೆದು ಹೋಯಿತು. ಅನಂತರ ಕಾಲಾಳಿನ ಸೈನ್ಯ ಅದನ್ನು ಹಿಂಬಾಲಿಸಿತು. ಕೌಶಿಕನ ಬಳಿ ಆನೆಯ ಸೈನ್ಯವಿದ್ದರೂ ಅದನ್ನು ಈ ಉತ್ಸವಕ್ಕೆ ತಂದಿರಲಿಲ್ಲ.

ಆದರೆ ಪರ್ವತೋಪಮವಾದ ಪಟ್ಟದ ಆನೆಯೊಂದು ಮಾತ್ರ ನಡೆದಿತ್ತು ರಾಜಬೀದಿಯಲ್ಲಿ. ರಾಜ ವೈಹಾಳಿಯಿಂದ ಹಿಂತಿರುಗಿ ಪುರಪ್ರವೇಶ ಮಾಡುವಾಗ ಈ ಪಟ್ಟದ ಆನೆಯನ್ನೇರಿ ಪಟ್ಟಣಿಗರಿಗೆಲ್ಲಾ ದರ್ಶನವನ್ನು ಕೊಡುತ್ತಾ ಉತ್ಸವದಿಂದ ಹಿಂತಿರುಗಬೇಕೆಂಬುದು ಅಂದು ಏರ್ಪಾಡಾಗಿದ್ದ ಕಾರ್ಯಕ್ರಮ. ಪಟ್ಟದ ಆನೆಯನ್ನು ಹಿಂಬಾಲಿಸಿ ಇನ್ನೊಂದು ಆನೆ ನಡೆದಿತ್ತು.

ಅದರ ಹಿಂದೆ ನಾಲ್ಕು ಜನ ಸಹಣಿಗಳು ಒಂದು ಕುದುರೆಯನ್ನು ಹಿಡಿದುಕೊಂಡು ಹೋಗುತ್ತಿದ್ದರು. ಅಚ್ಚಕಪ್ಪು ಬಣ್ಣದ ಆ ಕುದುರೆಯ ಮೈಕಾಂತಿ ಥಳಥಳನೆ ಹೊಳೆಯುತ್ತಿತ್ತು. ನೆಲದಮೇಲೆ ನಿಂತೂ ನಿಲ್ಲದಂತೆ ಕುಣಿಯುತ್ತಾ, ರಸ್ತೆಯ ಆ ಕೊನೆಯಿಂದ ಈ ಕೊನೆಯ ನೆಗೆದಾಡುತ್ತಾ ತನ್ನನ್ನು ಹಿಡಿದಿರುವ ಸವಾರರನ್ನು ಸಾಕು ಮಾಡುತ್ತಿತ್ತು. ಅದೇ ಹೊಸದಾಗಿ ಬಂದ ಕುದುರೆ, ಇಂದು ರಾಜನು ಪಳಗಿಸಬೇಕಾದದ್ದು ವೈಹಾಳಿಯಲ್ಲಿ.

ಈ ಕುತೂಹಲಕರವಾದ ದೃಶ್ಯವನ್ನು ನೋಡುವುದಕ್ಕಾಗಿಯೇ ನೂರಾರು ಜನ ಆಗಲೇ ವೈಹಾಳಿಯ ಬಯಲತ್ತ ನಡೆಯುತ್ತಿದ್ದರು. ಶಂಕರಿಗೆ ತಾನೂ ಹೋಗಬೇಕೆಂಬ ಕುತೂಹಲ. ಆದರೆ ಮಹಾದೇವಿಯಿಂದ ಅದಕ್ಕೆ ಯಾವ ಪ್ರೋತ್ಸಾಹವೂ ದೊರೆಯಲಿಲ್ಲ.

ಅಷ್ಟರಲ್ಲಿ ದಾಕ್ಷಾಯಿಣಿ, ಕಾತ್ಯಾಯಿನಿಯರೂ ಅಲ್ಲಿಗೆ ಬಂದರು. ಚರ್ಚಿಸಿ ಕೊನೆಗೆ : "ರಾಜರು ಆನೆಯ ಮೇಲೆ ಕುಳಿತು ಉತ್ಸವದಿಂದ ಅರಮನೆಯತ್ತ ತೆರಳುವಾಗ ಇಲ್ಲೇ ನಿಂತು ಅವರನ್ನು ನೋಡಿದರೆ ಸಾಕು" ಎಂಬ ನಿರ್ಧಾರಕ್ಕೆ ಬಂದರು.

ಈ ವೇಳೆಗೆ ಮುಚ್ಚಿದ ಕುದುರೆಗಾಡಿಯಲ್ಲಿ ರಾಜರ ಸವಾರಿ ರಸ್ತೆಯ ಮೇಲೆ ಹೊರಟಿತ್ತು. ಹಿಂದೆ ಮುಂದೆ ಕುದುರೆ ಸವಾರರ ತಂಡ ; ಮಧ್ಯದಲ್ಲಿ ಬೃಹದ್ದೇಹದ ನಾಲ್ಕು ಕುದುರೆಗಳನ್ನು ಕಟ್ಟಿದ ಗಾಡಿ ವೇಗವಾಗಿ ಸಾಗುತ್ತಿತ್ತು. ಗಾಡಿಯಲ್ಲಿರುವ ಕಿಟಕಿಗಳ ಮೂಲಕ ರಾಜನನ್ನು ಸ್ವಲ್ಪಮಟ್ಟಿಗೆ ಕಾಣಬಹುದಾಗಿತ್ತು. ರಸ್ತೆಯ ಇಕ್ಕೆಲಗಳಲ್ಲಿಯೂ ನಿಂತು ಜನ ರಾಜನನ್ನು ನೋಡುವ ಕುತೂಹಲವನ್ನು ತೀರಿಸಿಕೊಳ್ಳುತ್ತಿದ್ದರು.

ಓಂಕಾರನ ಮನೆಯ ಮುಂದೆ ಹಾದುಹೋಯಿತು ಗಾಡಿ.

"ಸರಿಯಾಗಿ ಕಾಣಲೇ ಇಲ್ಲ, ಕಣೆ." ದಾಕ್ಷಾಯಿಣಿ ಹೇಳಿದಳು.

"ನಾನೇನೋ ನೋಡಿದೆನಮ್ಮ" ಅವಳಿಗಿಲ್ಲದ ಭಾಗ್ಯ ತನಗೆ ಸಿಕ್ಕಿತೆಂಬ ಸಂತೋಷವಿತ್ತು ಕಾತ್ಯಾಯಿನಿಯ ಧ್ವನಿಯಲ್ಲಿ.

"ಧನ್ಯಳಾದೆ ಬಿಡು" ನಕ್ಕಳು ಮಹಾದೇವಿ. ಅವಳಿಗೇನೂ ಕುತೂಹಲ ಇರಲಿಲ್ಲ.

"ಹೋಗಲಿ ಬಿಡು, ಹಿಂದಿರುಗಿ ಬರುವಾಗ ಚೆನ್ನಾಗಿ ನೋಡಿದರಾಯಿತು. ಆಗ ಆನೆಯ ಮೇಲೆ ಬರುತ್ತಾರೆ. ಎಲ್ಲರೂ ಬೇಕಾದಷ್ಟು ಹೊತ್ತು ನೋಡಬಹುದು." ಸಮಾಧಾನ ಮಾಡಿದಳು ಕಾತ್ಯಾಯಿನಿ.

"ನೋಡಿ, ನೋಡಿ... ಚೆನ್ನಾಗಿ ನೋಡಿ ; ಏನು ಹುಚ್ಚೋ ನಿಮಗೆ" ನಗುತ್ತಾ ಹೇಳಿದಳು ಮಹಾದೇವಿ.

"ಸಾಕು ಬಿಡೇ, ಮಹಾದೇವಿ. ರಾಜರನ್ನು ನೋಡುವುದೆಂದರೆ ಕುತೂಹಲವಲ್ಲವೇ ? ನಿನಗಂತೂ ಏನೂ ಬೇಡ." ಹೇಳಿದಳು ಕಾತ್ಯಾಯಿನಿ.

ಉತ್ಸವವನ್ನು ನೋಡುವುದಕ್ಕೆ ಮಹಾದೇವಿಯ ಮನೆಯೇ ಪ್ರಶಸ್ತವಾದ ಸ್ಥಳವೆಂದು ನಿರ್ಧರಿಸಿದ್ದರು. ಓಂಕಾರನ ಮನೆಯ ಮುಂದೆ ಚಾಚಿದ್ದ ಬಿಸಿಲು ಮಚ್ಚು, ರಸ್ತೆಯಲ್ಲಿ ಹೋಗುವ ಉತ್ಸವವನ್ನು ನೋಡುವುದಕ್ಕೆ ತುಂಬಾ ಅನುಕೂಲಕರವಾಗಿತ್ತು. ಅಲ್ಲದೆ ಊರಿನ ಶ್ರೀಮಂತ ವರ್ತಕರೆಲ್ಲ ರಾಜನಿಗೆ ಗೌರವ ಕಾಣಿಕೆಯನ್ನು ಅರ್ಪಿಸುವ ಏರ್ಪಾಡು ಅಲ್ಲಿದ್ದುದರಿಂದ ಉತ್ಸವ ಸ್ವಲ್ಪ ಹೊತ್ತು ಅಲ್ಲಿ ನಿಲ್ಲುವ ನಿರೀಕ್ಷೆಯಿತ್ತು. ಗೆಳತಿಯರೆಲ್ಲಾ ಸಂಜೆಯ ವೇಳೆಗೆ ಅಲ್ಲಿ

ಬಂದು ಸೇರಿವವುದೆಂದು ನಿಶ್ಚಯವಾಯಿತು.

ಇತ್ತ ಕೌಶಿಕನ ವೈಹಾಳಿ ತುಂಬಾ ಯಶಸ್ವಿಯಾಗಿ ನಡೆಯಿತು. ನಾಲ್ಕು ಜನರಿಗೂ ಬಗ್ಗದ ಆ ಕುದುರೆಯ ದೇಹದಿಂದ ಬೆವರು ಕೀಳುವಂತೆ ಹತ್ತಾರು ಸುತ್ತುಗಳನ್ನು ಕೌಶಿಕ ಓಡಿಸಿದ. ಕುದುರೆ ಸವಾರಿಯಲ್ಲಿ ಅತಿಬಲ್ಲಿದನಾದ ಬಲಿಷ್ಠ ತರುಣರಾಜ ಕೌಶಿಕನ ಮುಂದೆ, ಕುದುರೆಯ ಆಟ ನಡೆಯದೆ ಅವನು ಹೇಳಿದಂತೆ ಕೇಳಬೇಕಾಯಿತು. ಒಂದೆರಡು ಸುತ್ತು ಬರುವುದರೊಳಗೆ, ಅದರ ನಗೆದಾಟ ಕಡಿಮೆಯಾಯಿತು, ಸಂಪೂರ್ಣವಾಗಿ ಅವನ ವಶವಾಯಿತು. ಅವನ ವಿಚಕ್ಷಣತೆಯನ್ನೂ, ಬಲ್ಮೆಯನ್ನೂ ಕಂಡು ಜನ ಸಂತೋಷದಿಂದ ಜಯಘೋಷ ಮಾಡಿದರು.

ಅನಂತರ ರಾಜ ತನಗಾಗಿ ಏರ್ಪಡಿಸಿದ್ದ ವಿಶೇಷ ಗುಡಾರದಲ್ಲಿ ವಿಶ್ರಾಂತಿಯನ್ನು ಪಡೆದ. ಉತ್ಸವದ ಸಿದ್ಧತೆ ಭರದಿಂದ ಸಾಗತೊಡಗಿತ್ತು.

ಆನೆಯನ್ನು ಆಲಂಕರಿಸಿದರು. ಅದರ ಮೇಲೆ ಥಳಥಳನೆ ಹೊಳೆಯುತ್ತಿರುವ ಅಂಬಾರಿಯನ್ನು ಏರಿಸಿ ಕಟ್ಟಲಾಯಿತು. ಸೈನ್ಯವು ರಾಜಬೀದಿಯಲ್ಲಿ ನಡೆಯಬೇಕಾದ ಕ್ರಮದಲ್ಲಿ ಸಜ್ಜುಗೊಂಡು ನಿಂತಿತು.

ಮೊಟ್ಟಮೊದಲ ಕುದುರೆಯ ಸೈನ್ಯ. ಅದರ ಹಿಂದೆ ಇಡೀ ಉತ್ಸವವನ್ನೇ ನಡೆಸಿಕೊಂಡು ಹೋಗುವ ನಾಯಕನ ಗಾಂಭೀರ್ಯದಿಂದ ನಡೆಯುತ್ತಿರುವ ಒಂದು ಆನೆ, ಅದರ ಮೇಲೆ ಎತ್ತರವಾಗಿ ಹಾರಾಡುತ್ತಿರುವ ಕೌಶಿಕನ ವಿಜಯ ಧ್ವಜವನ್ನು ಹಿಡಿದ ರಾಜಸಿಪಾಯಿಗಳು.

ಅದರ ಹಿಂದೆ ಕುದುರೆ ಸೈನ್ಯ ನಂತರ ಸಮವಸ್ತ್ರಧಾರಿಗಳಾದ ಕಾಲಾಳುಗಳು. ನಡುವಿಗೆ ಕಟ್ಟಿದ ಒರೆಯಲ್ಲಿ ಕತ್ತಿ ; ಕೈಯಲ್ಲಿ ಈಟಿ ; ಸಾಲು ಸಾಲಾಗಿ ಶಿಸ್ತಿನಿಂದ ನಡೆಯುತ್ತಿದ್ದರು.

ಇದಾದ ಕೂಡಲೇ ರಾಜನು ಕುಳಿತಿರುವ ಆನೆ. ಆನೆಯ ಮುಂದೆ ರಾಜವಾದ್ಯಗಳ ಸಮೂಹ. ರಾಜನ ಕೀರ್ತಿಯನ್ನು ಮುಗಿಲು ಮುಟ್ಟಿಸುವಂತೆ ಭೋರ್ಗರೆಯುತ್ತಿದ್ದುವು. ಆನೆ ಗಂಭೀರವಾದ ಗತಿಯಿಂದ ವಾದ್ಯಗಾರರನ್ನು ಹಿಂಬಾಲಿಸುತ್ತಿತ್ತು. ತನ್ನ ಮೈಯೇ ಕಾಣದಷ್ಟು ಅಲಂಕಾರಗಳನ್ನು ಅದು ಹೊತ್ತಿತ್ತು. ಎಲ್ಲಕ್ಕಿಂತ ಹೆಚ್ಚಿನ ಅಲಂಕಾರವೆಂದರೆ ಕೌಶಿಕರಾಜ, ಅದರ ಬೆನ್ನ ಮೇಲೆ ಅಂಬಾರಿಯಲ್ಲಿ ವಿರಾಜಮಾನನಾಗಿದ್ದುದು. ಅಂಬಾರಿಯ ಮುಂದೆ ಮಾವುತ ; ಅಂಬಾರಿಯಲ್ಲಿ ರಾಜನಿಗೆ ಸ್ವಲ್ಪ ಹಿಂದೆ ವಸಂತಕ ಕುಳಿತಿದ್ದರು.

ವಸಂತಕ ಕೌಶಿಕನ ನೆಚ್ಚಿನ ಗೆಳೆಯ. ಬಾಲ್ಯದಿಂದಲೂ ಜೊತೆಯಲ್ಲಿಯೇ ಬೆಳೆದವರು. ರಾಜಪರಿವಾರದಲ್ಲೆಲ್ಲಾ ಹೆಚ್ಚು ಪ್ರಿಯನಾದವನು. ಆತ್ಮೀಯನಾದವನು. ರಾಜನೊಡನೆ ವಿಶೇಷ ಸಲುಗೆಯುಳ್ಳವನು. ಆನೆಯ ಮೇಲೆ ಒಬ್ಬನೇ ಕುಳಿತುಕೊಂಡು ಹೋಗುವ ಬೇಸರವನ್ನು ಪರಿಹರಿಸಿಕೊಳ್ಳುವುದಕ್ಕಾಗಿ, ತನ್ನ ಗೆಳೆಯ ವಸಂತಕನನ್ನು ಕೌಶಿಕ ಮೇಲೆ ಕುಳ್ಳಿರಿಸಿಕೊಳ್ಳುತ್ತಿದ್ದ.

ಪಟ್ಟದ ಆನೆಯ ಹಿಂದೆ ಮತ್ತೆ ಕಾಲಾಳುಗಳ ಸೈನ್ಯ. ಅದರ ಹಿಂದೆ ಅಶ್ವಾರೋಹಿಗಳು. ಹೀಗೆ ಉತ್ಸವದ ಕ್ರಮ ನಡೆದಿತ್ತು. ರಾಜಬೀದಿಯೆಲ್ಲಾ ತಳಿರು ತೋರಣಗಳಿಂದ ಅಲಂಕೃತವಾಗಿ ರಾಜನನ್ನು ಸ್ವಾಗತಿಸಲು ಸಿದ್ಧವಾಗಿತ್ತು. ಉತ್ಸವ ಬರುವುದಕ್ಕೆ ಎಷ್ಟೋ ಹೊತ್ತಿಗೆ ಮುಂಚಿನಿಂದಲೂ ರಸ್ತೆಯ ಇಕ್ಕೆಲಗಳಲ್ಲಿ ಜನಜಂಗುಳಿ ನಿಂತು ರಾಜನ ಬರವನ್ನು ಕಾಯುತ್ತಿದ್ದರು. ತರತರದ ಅಲಂಕಾರಗಳಿಂದ ಶೃಂಗರಿಸಿಕೊಂಡು ನಿಂತ ಹೆಂಗಸರ ಗುಂಪೇ ಅಧಿಕವಾಗಿತ್ತು. ಶ್ರೀಮಂತ ಹರ್ಮ್ಯಗಳ ಮಹಡಿಯ ಮೇಲೂ ಜನ ಸೇರಿದ್ದರು. ಉತ್ಸವದ ಆಗಮವನ್ನೇ ಎಲ್ಲರೂ ಕುತೂಹಲದಿಂದ ಕಾಯುತ್ತಿದ್ದರು.

ಓಂಕಾರರ ಮನೆಯ ಮಹಡಿ ಮೇಲಿನ ಬಿಸಿಲುಮಚ್ಚಿನಲ್ಲಿ ಕಾತ್ಯಾಯಿನಿ ದಾಕ್ಷಾಯಿಣಿ ಮತ್ತು ಶಂಕರಿ ಸೇರಿದ್ದರು. ಇವರೊಡನೆ ಮಹಾದೇವಿಯೂ ಇದ್ದಳು. ಉತ್ಸವವನ್ನು ನೋಡಿಯೇ ತೀರಬೇಕೆಂಬ ಕುತೂಹಲವೇನೂ ಮಹಾದೇವಿಗೆ ಅಷ್ಟಾಗಿ ಇರಲಿಲ್ಲ. ಆದರೆ ಗೆಳತಿಯರೆಲ್ಲಾ ಬಹುಸಂಭ್ರಮದಿಂದ ಸೇರಿರುವಾಗ ಅವರ ಜೊತೆಯಲ್ಲಿದ್ದು ಉತ್ಸವವನ್ನು ನೋಡುವುದಕ್ಕೆ ಆಗದೇ ಇರುವಂತಹ ಆತಂಕವೇನೂ ಆಕೆಗೆ ಇರಲಿಲ್ಲ. ಅವರೊಡನೆ ನಿಂತು ಅವರ ಸಂತೋಷದಲ್ಲಿ ತಾನೂ ಭಾಗಿಯಾಗಿದ್ದಳು.

ಓಂಕಾರ – ಲಿಂಗಮ್ಮ ಕೆಳಗಡೆ ಜಗುಲಿಯ ಮೇಲೆ ನಿಂತು ಉತ್ಸವವನ್ನು ಕಾಯುತ್ತಿದ್ದರು.

ರಸ್ತೆಯ ಎರಡು ಪಕ್ಕಗಳಲ್ಲಿಯೂ ಸಿಪಾಯಿಗಳು ನಿಂತು, ರಸ್ತೆಯ ಮೇಲೆ ಜನರನ್ನು ಹಿಂದಕ್ಕೆ ತಳ್ಳುತ್ತಿದ್ದರು. ಉತ್ಸವ ಹತ್ತಿರ ಹತ್ತಿರಕ್ಕೆ ಬಂದಂತೆಲ್ಲಾ ನೂಕುನುಗ್ಗಲು ಹೇಳತೀರದಂತಾಯಿತು. ದೂರದಲ್ಲಿ ಕಣ್ಣಿಗೆ ಬಿದ್ದಿತು ಬಾವುಟವನ್ನು ಹೊತ್ತ ಮೊಟ್ಟಮೊದಲನೆಯ ಆನೆ. "ಉತ್ಸವ ಬಂತು, ಉತ್ಸವ ಬಂತು !" ಎನ್ನುತ್ತಾ ಜನಗಳೆಲ್ಲಾ ನುಗ್ಗುತ್ತಿದ್ದರು.

ಕುದುರೆಯ ಸೈನ್ಯ ಹಾದುಹೋಯಿತು, ಅನಂತರ ಕಾಲಾಳುಗಳು ತಮ್ಮ ಆಯುಧಗಳನ್ನು ಝಳಪಿಸುತ್ತಾ ಶಿಸ್ತಿನಿಂದ ಮುಂದೆ ನಡೆಯುತ್ತಿದ್ದರು. ಅಷ್ಟರಲ್ಲಿ

ಕಣ್ಣಿಗೆ ಬಿದ್ದಿತು ರಾಜನನ್ನು ಕುಳ್ಳಿರಿಸಿಕೊಂಡು ಬರುತ್ತಿದ್ದ ಭದ್ರಗಜ. ಒಂದೇ ವಿನ್ಯಾಸಕ್ಕೆ ಅನುಗುಣವಾಗಿ ಅಂಬಾರಿಯು ಹಿಂದೆ ಮುಂದೆ ಓಲಾಡುತ್ತಿತ್ತು. ಸಂಭ್ರಮದಿಂದ ಜನಸಮುದ್ರದಲ್ಲಿ ತೆರೆಗಳೇಳುತ್ತಿದ್ದುವು.

ಆ ಜನಸಮುದ್ರದ ತೆರೆಗಳ ಮೇಲೆ ತೇಲುತ್ತಾ ಬರುತ್ತಿರುವಂತೆ ಕೌಶಿಕನ ಸಮಷ್ಟಿಮೂರ್ತಿ ಅಂಬಾರಿಯಂತೆಯೇ ಹಿಂದೆ ಮುಂದೆ ಓಲಾಡುತ್ತಾ ಬರುತ್ತಿತ್ತು. ಕಾವ್ಯಕ್ಕನುಗುಣವಾಗಿ ಮೂಡಿಬಂದ ಲಯಬದ್ಧವಾದ ಛಂದಸ್ಸಿನನಂತೆ, ರಾಜನ ಮತ್ತು ಅಂಬಾರಿಯ ಆ ಒಲೆದಾಟವು ಸುಂದರವಾಗಿ ಕಾಣುತ್ತಿತ್ತು.

ಗಂಭೀರವಾದ ರಾಜನ ಧೀರ ವ್ಯಕ್ತಿತ್ವ, ಅಂಬಾರಿಯಲ್ಲಿ ತುಂಬಿ ತುಳುಕುತ್ತಿತ್ತು. ರಾಜೋಚಿತವಾದ ಆಭರಣಗಳು ಜಾಜ್ವಲ್ಯಮಾನವಾಗಿ ಹೊಳೆಯುತ್ತಿದ್ದವು. ಯೌವನದ ಕ್ಷಾತ್ರ ತೇಜಸ್ಸು ಮುಖದಲ್ಲಿ ಹೊರಹೊಮ್ಮುತ್ತಾ ಜನಗಳಲ್ಲಿ ಗೌರವವನ್ನು ಹುಟ್ಟಿಸುವಂತಿತ್ತು.

ರಾಜ ತನ್ನ ಸಮೀಪಕ್ಕೆ ಬಂದಂತೆಲ್ಲಾ ಜನ ಚಪ್ಪಾಳೆ ತಟ್ಟುವರು. ನಮಸ್ಕರಿಸುವರು. ಜಯಘೋಷ ಮಾಡುವರು. ರಾಜನು ಅವುಗಳನ್ನು ಮುಗುಳುನಗೆಯಿಂದ ಸ್ವೀಕರಿಸುತ್ತಿದ್ದನು. ತಾನೂ ಪ್ರತಿಯಾಗಿ ನಮಸ್ಕರಿಸುತ್ತಿದ್ದನು. ಮಹಡಿಯ ಮೇಲೆ ನಿಂತ ಜನರನ್ನು ಸ್ವಲ್ಪ ತಲೆಯೆತ್ತಿ ನೋಡುವನು. ರಸ್ತೆಯ ಪಕ್ಕದಲ್ಲಿ ನಿಂತವರನ್ನು ತಲೆಬಾಗಿಸಿ ನೋಡುವನು. ತನ್ನ ಪ್ರಜೆಗಳ ವಿಶ್ವಾಸವನ್ನು ಸಾಧ್ಯವಾದಷ್ಟು ಮಟ್ಟಿಗೂ ಅವರಿಗೆ ತೃಪ್ತಿಯಾಗುವ ರೀತಿಯಲ್ಲಿ ಸ್ವೀಕರಿಸಲು ಪ್ರಯತ್ನಿಸುತ್ತಿದ್ದ.

ಮಹಾದೇವಿಯ ಮನೆಯ ಹತ್ತಿರ ಹತ್ತಿರ ಬರುತ್ತಿತ್ತು ರಾಜನೇರಿದ ಆನೆ. ಗೆಳತಿಯರೆಲ್ಲರೂ ಸಂಭ್ರಮದಿಂದ ಕುಣಿಯುತ್ತಿದ್ದರು.

"ಹಾ ! ಎಷ್ಟು ಚೆನ್ನಾಗಿದೆ ನೋಡೆ ಆ ಅಂಬಾರಿ ! ಹೇಗೆ ಥಳಥಳ ಹೊಳೆಯುತ್ತಿದೆ !"

"ಅಷ್ಟೊ ಚಿನ್ನದ್ದೇ ಏನೋ, ಅಮ್ಮಾ."

"ಕಿರೀಟವನ್ನು ನೋಡೇ, ರತ್ನಗಳು ಹೇಗೆ ಹೊಳೆಯುತ್ತಿದೆ !"

– ಇವೇ ಮುಂತಾದ ಉದ್ಗಾರಗಳು ಹೊರಬೀಳುತ್ತಿದ್ದವು.

ಮಹಾದೇವಿಯ ಕುತೂಹಲವು ಜಾಗ್ರತಗೊಂಡಿತ್ತು. ಕೌಶಿಕನ ಹೆಸರನ್ನು ಆಕೆ ಕೇಳಿದ್ದಳೇ ಹೊರತು ಇದುವರೆಗೂ ಅವನನ್ನು ಸರಿಯಾಗಿ ನೋಡಿರಲಿಲ್ಲ. ಹತ್ತಿರ ಹತ್ತಿರ ಬರುತ್ತಿದ್ದ ಆತನನ್ನೇ ತನ್ನ ಮುಗ್ಧನಯನಗಳಿಂದ ನೋಡುತ್ತಿದ್ದಳು.

ಕೌಶಿಕನ ಆನೆ ಈ ವೇಳೆಗೆ ತೀರಾ ಸಮೀಪಕ್ಕೆ ಬಂದಿತ್ತು. ಮಹಾದೇವಿಯ ಮನೆಯ ಮುಂದೇ ಬರತೊಡಗಿತ್ತು. ಅಲ್ಲಿ ನಗರದ ಪ್ರಮುಖ ವರ್ತಕರೆಲ್ಲರೂ ಸೇರಿ, ರಾಜನಿಗೆ ಭಕ್ತಿಪೂರ್ವಕವಾದ ಗೌರವವನ್ನು ಅರ್ಪಿಸಲು ಏರ್ಪಡಿಸಿಕೊಂಡಿದ್ದರು. ಆದ್ದರಿಂದ ಅಲ್ಲಿ ಆನೆ ನಿಂತಿತು.

ಕೌಶಿಕ ಮಹಡಿಯ ಮೇಲೆ ನಿಂತವರ ವಂದನೆಗಳನ್ನೆಲ್ಲಾ ಸ್ವೀಕರಿಸಲು ತಲೆಯೆತ್ತಿ ಅತ್ತ ನೋಡಿದ. ಅಲ್ಲಿದ್ದ ಅಪೂರ್ವ ಸೌಂದರ್ಯರಾಶಿ ಕೌಶಿಕನ ಗಮನವನ್ನು ಸೆಳೆಯಿತು. ಅಲಂಕಾರಹೀನತೆಯು ಮಹಾದೇವಿಯ ಸೌಂದರ್ಯವನ್ನು ಮುಚ್ಚಲು ಪ್ರಯತ್ನಿಸುತ್ತಿದ್ದರೂ ಸೌಂದರ್ಯೋಪಾಸಕನಾದ ಕೌಶಿಕನ ಕಣ್ಣು ಆ ರೂಪಸಂಪತ್ತನ್ನು ಕ್ಷಣಮಾತ್ರದಲ್ಲಿ ಗುರುತಿಸಿತು.

ಆವುದೀ ಸ್ತ್ರೀರತ್ನ ! ಮುದ್ದಾದ ದುಂಡುಮುಖದಲ್ಲಿ ಮಿನುಗುತ್ತಿರುವ ಕಾಂತಿಯುಕ್ತವಾದ ಆ ಕಣ್ಣುಗಳು ಅವನ ಮನಸ್ಸನ್ನು ಮೊಟ್ಟಮೊದಲು ಸೆಳೆದುವು. ತಲೆಯ ತುಂಬಾ ಸೆರಗನ್ನು ಹೊದೆದಿದ್ದರೂ ಅದರ ಹಿಡಿತವನ್ನು ಮೀರಿ ಮುಂಗುರುಳುಗಳು ಮುಖದ ಮೇಲೆ ಹಾರಾಡುತ್ತಾ ಅಪೂರ್ವವಾದ ಶೋಭೆಯನ್ನುಂಟು ಮಾಡಿದ್ದವು. ಮುಖದ ಮನೋಹರತೆಯನ್ನು ಮುಮ್ಮಡಿಗೊಳಿಸುತ್ತಿರುವ ಅವಳ ಮೂಗಿನ ಮಾಟ, ಅವಳ ಚೆಂದುಟಿಯ ಚೆಲುವು ಅವನನ್ನು ಆಕರ್ಷಿಸಿತು.

ಕೌಶಿಕ ನೋಡಿದ. ಆ ಎರಡು ಕಣ್ಣುಗಳು ತನ್ನನ್ನೇ ದಿಟ್ಟಿಸುತ್ತಿದ್ದುವು. ಆ ನೋಟ ವಿದ್ಯುತ್ ಸ್ಪರ್ಶವಾದಂತಾಯಿತು ಆತನಿಗೆ. ಆ ಮುಗ್ಧನಯನಗಳ ಮನೋಹರತೆ ಅವನಲ್ಲಿ ತದ್ವಿರುದ್ಧವಾದ ಭಾವನೆಯನ್ನು ಕೆರಳಿಸುವುದಕ್ಕೆ ಕಾರಣವಾಯಿತು. ಅವಳನ್ನೇ ದಿಟ್ಟಿಸಿ ನೋಡತೊಡಗಿದನು.

ರಾಜ ತನ್ನನ್ನೇ ದಿಟ್ಟಿಸಿ ನೋಡುತ್ತಿರುವುದನ್ನು ಕಂಡು, ತಪ್ತಕಾಂಚನವರ್ಣದಂತಹ ಮಹಾದೇವಿಯ ಮುಖಕಮಲವು ಇನ್ನೂ ಕೆಂಪಾಯಿತು. ಸರಕ್ಕನೆ ಕಣ್ಣುಗಳನ್ನು ಕೆಳಕ್ಕಿಳಿಸಿದಳು. ಕತ್ತೂ ಬಾಗಿತು.

ಈ ಕಂಬುಗ್ರೀವೆಯ ಅಪೂರ್ವವಾದ ಈ ವಿನ್ಯಾಸವನ್ನು ಕಂಡ ಕೌಶಿಕನ ಕಣ್ಣುಗಳು ಇನ್ನೂ ಅಗಲವಾದವು. ಅವನ ದೃಷ್ಟಿ ಅಲ್ಲಿಂದ ಕೆಳಗೂ ಇಳಿದು ಅವಳ ಅಂಗಾಂಗಗಳ ಸೌಂದರ್ಯವನ್ನು ಕಾಣಲು ಸಾಹಸಪಡುತ್ತಿತ್ತು. ಇದನ್ನು ಕಂಡ ಮಹಾದೇವಿ ಸರಕ್ಕನೆ ತಿರುಗಿ, ಒಳಗೆ ನಡೆಯತೊಡಗಿದಳು. ಅವಳು ತಿರುಗಿದ ರೀತಿ, ಹಂಸಗಮನದಂತಹ ಅವಳ ನಡಿಗೆ, ಹೊದೆದ ಸೆರಗಿನ ಅಂಚನ್ನೂ ದಾಟಿಕೊಂಡು, ಅತಿನೀಳವಾಗಿ ಕೆಳಗಿಳಿದು ಓಲಾಡುತ್ತಿರುವ ಕೇಳರಾಶಿ

– ಒಂದೊಂದೂ ಕೌಶಿಕನ ಮನಸ್ಸನ್ನು ಕೊರೆದು ಒಳಹೊಕ್ಕವು. ಮಿಂಚಿನ ವೇಗದಿಂದ ಆಕೆ ಒಳಗೆ ಹೋಗಿ ಮರೆಯಾಗಿದ್ದಳು. ಆದರೆ ಕೌಶಿಕ ತನ್ನ ಸ್ಥಾನದ ಗಾಂಭೀರ್ಯವನ್ನು ಮರೆತು, ಬಿಟ್ಟ ಕಣ್ಣುಗಳಿಂದ ಅತ್ತಲೇ ನೋಡುತ್ತಿದ್ದ.

ಕೆಳಗೆ ಸೇರಿದ್ದ ಪುರಪ್ರಮುಖರು ರಾಜನ ದೃಷ್ಟಿಗಾಗಿ ಕಾಯುತ್ತಿದ್ದರು. ಆದರೆ ಅದು ಎತ್ತಲೋ ತಿರುಗಿಬಿಟ್ಟಿದೆ ! ಅವರು ಕೊಟ್ಟ ಭಾರವಾದ ಹೂವಿನ ಹಾರವನ್ನು ಆನೆ ಮೇಲಕ್ಕೆತ್ತಿದೆ. ಕೆಳಗಿನವರು ಕೊಟ್ಟ ಹಾರವನ್ನು ತನ್ನ ಸೊಂಡಿಲಿನಿಂದ ಮೇಲೆತ್ತಿ ರಾಜನಿಗೆ ಒಪ್ಪಿಸುವಂತಹ ಶಿಕ್ಷಣವನ್ನು ಆನೆಗೆ ಕೊಡಲಾಗಿತ್ತು. ತನ್ನ ಸಮೀಪಕ್ಕೆ ಬಂದೊಡನೆಯೇ ಹೂವಿನ ಹಾರವನ್ನು ರಾಜ ತೆಗೆದುಕೊಳ್ಳುವುದನ್ನೇ ನಿರೀಕ್ಷಿಸುತ್ತಾ ಕಾಯುತ್ತಿದೆ. ನೆರೆದ ಪ್ರಮುಖರೆಲ್ಲಾ ರಾಜನನ್ನೇ ನೋಡುತ್ತಿದ್ದಾರೆ. ಆದರೆ ರಾಜನ ನೋಟ ಮಾತ್ರ ಬೇರೆ ಕಡೆಗಿದೆ!

ಮಹಾದೇವಿ ಸರಕ್ಕನೆ ಒಳಗೆ ಹೋದುದನ್ನು ಕೆಲವರು ನೋಡಿದರು. ಅವಳನ್ನು ಬೆನ್ನಟ್ಟಿಹೋಗಿರುವ ರಾಜದೃಷ್ಟಿ ಇನ್ನೂ ಅತ್ತಲೇ ನೆಟ್ಟಿರುವುದನ್ನು ಗಮನಿಸಿದರು. ವಿಷಯದ ಸುಳುಹು ಸಿಕ್ಕದಂತಾಯಿತು. ಅಷ್ಟರಲ್ಲಿ ವಸಂತಕ ರಾಜನ ಈ ಅನಿರೀಕ್ಷಿತ ಪರಿವರ್ತನೆಯನ್ನು ಕಂಡು ಸ್ವಲ್ಪ ಮುಂದೆ ಸರಿದು ಎಚ್ಚರಿಸಿದ.

ಬೆಚ್ಚಿ ಬಿದ್ದವನಂತೆ ರಾಜ ಎಚ್ಚತ್ತು ಕೆಳಗೆ ನೋಡುತ್ತಾ ಊರಿನ ಪ್ರಮುಖರ ವಂದನೆಗಳನ್ನು ಸ್ವೀಕರಿಸಿದ. ಆನೆಯ ಸೊಂಡಿಲಿನ ಹಾರವನ್ನು ತೆಗೆದುಕೊಂಡ. ಎಲ್ಲರೂ ಹಿಂದೆ ಸರಿದರು. ಆನೆ ಮುಂದೆ ಹೊರಟಿತು. ಕೌಶಿಕನ ದೃಷ್ಟಿ ಮತ್ತೆ ಮಹಾದೇವಿಯ ಮಹಡಿಯ ಕಡೆ ತಿರುಗಿತ್ತು. ಆನೆ ಮುಂದೆ ಹೋದಂತೆಲ್ಲಾ ಕೌಶಿಕ ಹಿಂದೆ ಹಿಂದೆ ತಿರುಗಿ ಒಂದೆರಡು ಬಾರಿ ಮಹಡಿಯ ಕಡೆಗೆ ನೋಡಿದ. ಗಾಳಿ ಬೀಸಿದರೆ ಹಿಂದಕ್ಕೆ ಹಾರುವ ಧ್ವಜಪಟದಂತೆ ಅವನ ಮನಸ್ಸು ಹಿಂದೆ ಹಿಂದೆ ಚಲಿಸುತ್ತಿತ್ತು.

ವಸಂತಕನತ್ತ ತಿರುಗಿ ಕೇಳಿದ :

"ಆ ಮನೆ ಯಾರದು, ವಸಂತಕ ?"

"ಏಕೆ, ಮಹಾಪ್ರಭುಗಳ ಕಣ್ಣು ಅತ್ತ ಬಹಳವಾಗಿ ತಿರುಗುತ್ತಿದೆಯಲ್ಲ?" ಹಾಸ್ಯದ ಧ್ವನಿಯಿತ್ತು ವಸಂತಕನ ಪ್ರಶ್ನೆಯಲ್ಲಿ. ಕೆಳಗಿರುವವರಿಗೆ ಇವರ ಮಾತುಗಳು ಕೇಳುವಂತಿರಲಿಲ್ಲ. ವಾದ್ಯಗಳು ಭೋರ್ಗರೆಯುತ್ತಿದ್ದುವು.

"ಅದು ಹಾಗಿರಲಿ ವಸಂತಕ, ನೀನು ಎಲ್ಲವನ್ನೂ ನೋಡಿದೆಯಲ್ಲವೇ ? ಅಲ್ಲಿ ನಿಂತಿದ್ದು ಥಟ್ಟನೆ ಒಳಗೆ ಹೋದಳಲ್ಲ ಆ ಸುಂದರಿ ಯಾರು ಗೊತ್ತೇ ?" ಕಾತುರದಿಂದ ಕೇಳಿದ ಕೌಶಿಕ.

"ಗೊತ್ತು, ಆಕೆ ಓಂಕಾರಶೆಟ್ಟರ ಮಗಳು."

"ಓ! ಅದು ಓಂಕಾರಶೆಟ್ಟರ ಮನೆಯೋ?" ಕೌಶಿಕನ ಉದ್ಗಾರ.

"ನೋಡು, ಸಾವಿರಾರು ಕಣ್ಣುಗಳು ನಿನ್ನತ್ತಲೇ ತಿರುಗಿ, ನಿನ್ನ ದರ್ಶನಕ್ಕಾಗಿ ಹಾರೈಸುತ್ತಿವೆ. ಮೊದಲು ಅದನ್ನು ಮುಗಿಸು. ಆಮೇಲೆ ಮಾತನಾಡೋಣ" ವಸಂತಕನು ಕರ್ತವ್ಯವನ್ನು ಎಚ್ಚರಿಸಿದ.

ಕೌಶಿಕ ಎಚ್ಚತ್ತು ಕರ್ತವ್ಯಮುಖನಾದ. ಪ್ರಜೆಗಳತ್ತ ದೃಷ್ಟಿಯನ್ನು ಹರಿಸಿದ. ಆದರೆ ಅಲ್ಲಿ ಕಾಣುತ್ತಿದ್ದುದು ಜನಸಮೂಹವಲ್ಲ ; ಮಹಾದೇವಿಯ ನೂರಾರು ಪ್ರತಿಬಿಂಬಗಳು. ಕಾಂತಿಯುಕ್ತವಾದ ಅವಳ ಕಣ್ಣುಗಳು, ಸರಕ್ಕನೆ ಅವಳು ತಲೆ ತಗ್ಗಿಸಿದುದು, ತನ್ನತ್ತ ಬೆನ್ನು ತಿರುಗಿಸಿ ನಡೆದ ಅವಳ ನಡಿಗೆಯ ಮೋಹಕತೆ – ಒಂದೊಂದೂ ಅವನ ಮುಂದೆ ಸುಳಿಯುತ್ತಿದ್ದವು. ಅವುಗಳನ್ನೇ ಚಿತ್ರಿಸಿಕೊಳ್ಳುತ್ತಾ ಯಾಂತ್ರಿಕವಾಗಿ ಕೈಮುಗಿಯುತ್ತಿದ್ದ.

ಚಂಚಲಗೊಂಡ ಮನಸ್ಸು, ಪ್ರಕ್ಷುಬ್ಧ ಸಾಗರದಂತೆ ತಳಮಳಿಸುತ್ತಿತ್ತು. ಮಧ್ಯದಲ್ಲಿ ನಿಲ್ಲಿಸಬೇಕಾಗಿದ್ದ ಸ್ಥಳಗಳನ್ನೆಲ್ಲಾ ರದ್ದುಗೊಳಿಸಿ ನೇರವಾಗಿ ಹೊರಟಿತು ಉತ್ಸವ ಅರಮನೆಯನ್ನು ಸೇರುವ ಆತುರದಿಂದ.

## ೨

ಆನೆಯಿಂದ ಇಳಿದ ಕೂಡಲೇ ರಾಜ, ಅರಮನೆಯನ್ನು ಪ್ರವೇಶಿಸಿ ದರ್ಬಾರು ಮಂದಿರದ ಪಕ್ಕದಲ್ಲಿದ್ದ ವಿಲಾಸಗೃಹದತ್ತ ನಡೆದ. ಸೇವಕರು ಬಂದು ಉಡಿಗೆ ತೊಡಿಗೆಗಳನ್ನು ಬಿಚ್ಚ ತೊಡಗಿದರು. ತಲೆಯ ಮೇಲಿನ ಕಿರೀಟವನ್ನು ತಾನೇ ತೆಗೆದುಕೊಟ್ಟ. ರತ್ನಹಾರಗಳನ್ನೊಳಗೊಂಡ ಅಲಂಕಾರದ ಹೊರೆಯನ್ನು ಇಳುಹಿದರು ಸೇವಕರು.

ಸರಳವಾದ ಪೋಷಾಕನ್ನು ಧರಿಸಿಕೊಳ್ಳುತ್ತಾ ವಸಂತಕನನ್ನು ಕರೆಯ ಕಳುಹಿಸಿದ. ವಸಂತಕ ಬರುವ ವೇಳೆಗೆ ರಾಜ ಸಿದ್ಧನಾಗಿ ಹೊರಗೆ ಹೊರಟಿದ್ದ.

ಇಬ್ಬರೂ ಅರಮನೆಯ ತೊಟ್ಟಿಗಳನ್ನು ದಾಟಿಕೊಂಡು ಬಂದು ಉದ್ಯಾನವನವನ್ನು ಪ್ರವೇಶಿಸಿದರು. ಉದ್ಯಾನವನದ ಪ್ರಾರಂಭದಲ್ಲಿಯೇ, ಅರಮನೆಗೆ ಸೇರಿದಂತೆ, ಒಂದು ಸುಂದರವಾದ ಮಂಟಪ. ದಟ್ಟವಾಗಿ ಬೆಳೆದ ಬಳ್ಳಿಗಳೇ

ಅದರ ಸುತ್ತುಗೋಡೆ ಮತ್ತು ಮೇಲ್ಛಾವಣಿಯಾಗಿತ್ತು. ಅದರಲ್ಲಿ ಸುಂದರವಾದ ಹೂವುಗಳು ಅರಳಿ ಅದೊಂದು ಪರಿಮಳದ ಮಂಟಪದಂತೆ ತೋರುತ್ತಿತ್ತು.

ರಾಜನು ಅತ್ತ ಹೊರಡುವ ನಿರೀಕ್ಷೆ ತಿಳಿದು, ಅವನ ಆಗಮನಕ್ಕೆ ಎಲ್ಲಾ ಸಿದ್ಧತೆಯೂ ಆಗಿತ್ತು. ಕೌಶಿಕ ಮತ್ತು ವಸಂತಕ ಪ್ರವೇಶಿಸಿದರು. ಅಲ್ಲಿದ್ದ ಪೀಠಗಳ ಮೇಲೆ ಕುಳಿತುಕೊಂಡರು.

"ವಸಂತಕ, ತನ್ನ ಮನಸ್ಸು ನಿನಗಾಗಲೇ ಗೊತ್ತಿದೆ" ಕೌಶಿಕ ಆರಂಭಿಸಿದ.

"ಏನು ರಾಜೇಂದ್ರ ಅದು ? ನನಗೇನೂ ಗೊತ್ತಿಲ್ಲವಲ್ಲ !" ಬೇಕಂತಲೇ ಹೇಳಿದ ವಸಂತಕ.

"ನಿನ್ನ ವಿನೋದ ಹಾಗಿರಲಿ; ಒಂದು ಪ್ರಶ್ನೆ ಕೇಳುತ್ತೇನೆ. ಆ ಓಂಕಾರ ಶೆಟ್ಟಿಯ ಮಗಳಿಗೆ ಮದುವೆ ಆಗಿದೆಯೇ ? ನಿನಗೇನಾದರೂ ಅದು ಗೊತ್ತೇ?"

ವಸಂತಕ ಪುರಪ್ರಮುಖರ ಸಂಪರ್ಕವನ್ನು ಇಟ್ಟುಕೊಂಡಿದ್ದ. ಓಂಕಾರ ಶೆಟ್ಟಿಯ ವಿಚಾರವು ಆತನಿಗೆ ತಿಳಿದಿತ್ತು. ಹೇಳಿದ :

"ಓ ! ಅದೋ ನಿನ್ನ ಮನಸ್ಸು ! ಗೊತ್ತು.... ಮಹಾದೇವಿಗೆ ಇನ್ನೂ ಮದುವೆಯಾಗಿಲ್ಲ." "ಮಹಾದೇವಿ !"

"ಹೌದು, ಅದು ಆಕೆಯ ಹೆಸರು."

"ಇನ್ನೂ ಮದುವೆಯಾಗಿಲ್ಲವೇ ! ಸದ್ಯ ಬದುಕಿದೆ !" ಸಮಾಧಾನದ ನಿಟ್ಟುಸಿರು ಬಿಟ್ಟ ಕೌಶಿಕ.

"ಇದೇನು ಮಹಾರಾಜ ! ಅವಳಿಗೆ ಮದುವೆಯಾಗದಿದ್ದರೆ ನೀನೇಕಯ್ಯ ಬದುಕಿದೆ?" ಅರ್ಥವಾಗದವನಂತೆ ಕೇಳಿದ ವಸಂತಕ.

"ಇನ್ನು ಅದನ್ನೆಲ್ಲ ಬಿಟ್ಟುಬಿಡು, ವಸಂತಕ. ಸುಮ್ಮನೆ ಮುಚ್ಚುಮರೆಯಿಂದ ಏನು ಪ್ರಯೋಜನ ? ಅವಳಿಗೆ ಸಂಪೂರ್ಣವಾಗಿ ನಾನು ಮನಸೋತಿದ್ದೇನೆ. ಒಂದು ವೇಳೆ ಅವಳಿಗೆ ಮದುವೆಯಾಗಿದ್ದರೆ... ಎಂಬ ಚಿಂತೆಯೇ ನನ್ನನ್ನು ಬಾಧಿಸುತ್ತಿತ್ತು. ಅದೃಷ್ಟವಶಾತ್ ಅವಳಿಗೆ ಮದುವೆಯಾಗಿಲ್ಲ. ಇನ್ನು ಅವಳು ನನ್ನವಳಾದಂತೆಯೇ ಸರಿ."

ಅವಳ ಸೌಂದರ್ಯ ರಾಜನನ್ನು ಆಕರ್ಷಿಸಿದೆಯೆಂಬುದನ್ನು ವಸಂತಕ ತಿಳಿದಿದ್ದ. ಆದರೆ ಅದು ಇಂತಹ ದೃಢನಿರ್ಧಾರದ ಮಟ್ಟವನ್ನು ಮುಟ್ಟಿದೆಯಂದು ಆತ ಭಾವಿಸಿರಲಿಲ್ಲ.

"ರಾಜೇಂದ್ರ, ಅವಳೊಬ್ಬ ಸಾಮಾನ್ಯ ಶೆಟ್ಟಿಯ ಮಗಳು..."

ಮಧ್ಯದಲ್ಲಿ, ಅವನ ಮಾತನ್ನು ತಡೆದು ಹೇಳಿದ ಕೌಶಿಕ.

"ಆಹಾ ! ಎಂತಹ ಅಪೂರ್ವ ಸೌಂದರ್ಯದ ಸಾಗರ ಅವಳು ! ಏನು ರೂಪು ! ಏನು ಲಾವಣ್ಯ ! ಬಟ್ಟ ದಾವರೆಯಂತಹ ಮುಖ ! ತುಂಬಿದ ಕೆನ್ನೆಗಳು ! ಕುಡಿಹುಬ್ಬು ! ಕಾಂತಿಯುಕ್ತವಾದ ವಿಶಾಲವಾದ ಕಣ್ಣುಗಳು, ತಿದ್ದಿ ಮಾಡಿದಂತಹ ನಾಸಿಕ, ಚಿಗುರಿನಂತಹ ಚೆಂದುಟಿಗಳು...."

"ಓ ! ಓ ! ನಿಲ್ಲಿಸು... ಸಾಕು... ಸಾಕು.... ಪರಸ್ತ್ರೀಯರನ್ನು, ಅದರಲ್ಲೂ ಸಭ್ಯಗೃಹಸ್ಥನೊಬ್ಬನ ಮಗಳನ್ನು, ಹೀಗೆಲ್ಲಾ ವರ್ಣಿಸುವುದು ಕುಲೀನವಾದ ನಿನಗೆ ತರವಲ್ಲ." ನಗುತ್ತಾ ಹೇಳಿದ ವಸಂತಕ.

"ಆಕೆ ಪರಸ್ತ್ರೀಯಲ್ಲ ; ಪರಸ್ತ್ರೀಯಾಗಲು ನಾನು ಬಿಡುವುದಿಲ್ಲ. ಅವಳು ನನ್ನವಳಾಗುತ್ತಾಳೆ. ಧರ್ಮಸಮ್ಮತವಾಗಿ ವಿವಾಹವಾಗುತ್ತೇನೆ. ಪಟ್ಟ ಮಹಿಷಿಯನ್ನಾಗಿ ಮಾಡುತ್ತೇನೆ."

"ಇದೇನು ರಾಜೇಂದ್ರ ! ಇದು ಎಲ್ಲಿಯಾದರೂ ಸಾಧ್ಯವೇ ! ಅವರು ಶಿವ ಭಕ್ತರು, ಅದರಲ್ಲೂ ಮಹಾನಿಷ್ಠಾವಂತರು. ನಿನಗೆ ತಮ್ಮ ಮಗಳನ್ನು ಕೊಡುತ್ತಾರೆಯೇ ? ಹೀಗೆ ದುಡುಕಬೇಡ." ಎಚ್ಚರಿಸಿದ ವಸಂತಕ.

"ಅದೆಲ್ಲ ನನಗೆ ಬೇಕಿಲ್ಲ; ಅವಳು ನನ್ನವಳಾಗಲೇಬೇಕು. ಅದನ್ನು ಸಾಧಿಸಿ ಕೊಡುವ ಭಾರ ನನ್ನ ಸ್ನೇಹಿತನಾದ ನಿನಗೆ ಸೇರಿದ್ದು. ಅದಕ್ಕಾಗಿ ಯಾವ ತ್ಯಾಗಕ್ಕೂ ಬೇಕಾದರೂ ನಾನು ಸಿದ್ಧನಾಗಿದ್ದೇನೆ." – ನಿರ್ಧಾರದ ಧ್ವನಿಯಲ್ಲಿ ನುಡಿದ ಕೌಶಿಕ.

"ಒಳ್ಳೇ ಕೆಲಸವನ್ನೇ ಕೊಟ್ಟೆ." ನಗುತ್ತಾ ನುಡಿದರೂ ಮನಸ್ಸು ವಿಚಾರ ಪರವಾಗಿತ್ತು.

ಓಂಕಾರಶೆಟ್ಟಿಯನ್ನು ಸ್ವಲ್ಪ ಮಟ್ಟಿಗೆ ಬಲ್ಲ ವಸಂತಕನಿಗೆ ಈ ಸಮಸ್ಯೆಯ ಅರಿವಾಗಿತ್ತು. ಆತ ಸುಲಭವಾಗಿ ಈ ಸಂಬಂಧವನ್ನು ಒಪ್ಪಿಕೊಳ್ಳುವವನಲ್ಲ ಎಂಬುದನ್ನು ಬಲ್ಲ. ಅದನ್ನು ಕೌಶಿಕನಿಗೂ ಹೇಳಿದ. ಈ ಪ್ರಶ್ನೆ ಅಷ್ಟು ಸುಲಭವಾಗಿ ಬಗೆಹರಿಯುವುದಿಲ್ಲವೆಂದು ತಿಳಿಯಪಡಿಸಿ, ಇದನ್ನು ಅಷ್ಟಕ್ಕೇ ಬಿಟ್ಟು ಬಿಡುವಂತೆ ಮಾಡಲು ಪ್ರಯತ್ನಿಸಿದ. ಆದರೆ ಅದಾವುದಕ್ಕೂ ಕೌಶಿಕ ಕಿವಿಗೊಡುವಂತಿರಲಿಲ್ಲ.

"ಅದನ್ನೆಲ್ಲಾ ನನಗೆ ಹೇಳಬೇಡ. ಅಂತೂ ಅವರನ್ನು ಒಪ್ಪಿಸುವ ಭಾರ ನಿನಗೆ ಸೇರಿದ್ದು. ನಾಳೆಯೇ ಆಗಬೇಕು. ಅವರನ್ನೇ ಬರಮಾಡಿಕೋ. ಅಥವಾ ಪರಿವಾರದೊಡನೆ ನೀನೇ ಅವರ ಮನೆಗೆ ಹೋಗು. ದುಡ್ಡಿನ ಆಶೆ, ರಾಜ್ಯದ ಆಶೆ, ಅದಾವುದೂ ಅಸಾಧ್ಯವಾದರೆ ಕೊನೆಗೆ ದಂಡನೆಯ ಬೆದರಿಕೆ, ಯಾವುದೋ – ಅಂತೂ ನನ್ನ ಕೆಲಸ ನೆರವೇರಬೇಕು."

"ಇದಾವುದಕ್ಕೂ ಅವರು ಮಣಿಯಲಾರರು. ಏಕೈಕ ನಿಷ್ಠಾವಂತರೆಂದು ಹೆಸರಾಂತವರು ಆ ದಂಪತಿಗಳು. ಅವರಿಗೆ ತಕ್ಕ ಮಗಳು ಆಕೆ. ಆದುದರಿಂದ ಬಹಳ ಉಪಾಯವಾಗಿ ಕೆಲಸ ಸಾಧಿಸಬೇಕು."

"ಅದಕ್ಕೇ ಆ ಭಾರವನ್ನೆಲ್ಲಾ ನಿನಗೆ ವಹಿಸುವುದು. ನಾಳೆಯೇ ಇದರ ಇತ್ಯರ್ಥವಾಗಬೇಕು. ಅದಕ್ಕೆ ಅಗತ್ಯವಾದ ಎಲ್ಲ ಅಧಿಕಾರವನ್ನೂ ನೀನು ಬಳಸಿಕೊಳ್ಳಬಹುದು. ಈ ವಿಚಾರವನ್ನು ಮಂತ್ರಿಗಳಿಗೂ ತಿಳಿಸು. ನಾನೂ ಕರೆಸಿ ಹೇಳುತ್ತೇನೆ."

"ಇದರಲ್ಲಿ ಅಧಿಕಾರವೇನು ಬಂತು ? ಬಹಳ ದೊಡ್ಡ ಜವಾಬ್ದಾರಿಯನ್ನೇ ನನ್ನ ತಲೆಯ ಮೇಲೆ ಹಾಕಿದ್ದೀಯ. ಭಕ್ತರನ್ನು ಕೆಣಕುವ ಮಹಾಸಾಹಸಕ್ಕೆ ನನ್ನನ್ನು ತಳ್ಳುತ್ತಿದ್ದೀಯ." – ಈ ಕಾರ್ಯದ ಆಗುಹೋಗುಗಳನ್ನು ಆಲೋಚಿಸುತ್ತಾ ಹೇಳಿದ ವಸಂತಕ.

"ನನಗಾಗಿ ಅದನ್ನು ನೀನು ಮಾಡಲೇಬೇಕು ವಸಂತಕ." ಬೇಡಿಕೆಯ ಧ್ವನಿಯಿತ್ತು ಕೌಶಿಕನ ಮಾತಿನಲ್ಲಿ.

"ಆಗಲಿ, ನನ್ನ ಸರ್ವಪ್ರಯತ್ನವನ್ನೂ ಅದಕ್ಕಾಗಿ ಮಾಡುತ್ತೇನೆ. ಮಂತ್ರಿಗಳೊಡನೆಯೂ ಆಲೋಚಿಸಿ ಕಾರ್ಯಕ್ಕೆ ತೊಡಗುತ್ತೇನೆ. ನೀನು ನಿಶ್ಚಿಂತೆಯಿಂದ ಇರು."

"ನಿಶ್ಚಿಂತೆ ! ಅದು ನಿನ್ನ ಕಾರ್ಯಸಂಧಾನದ ಸಫಲತೆಯನಂತರ ಮಾತ್ರವೇ ಲಭಿಸಬಲ್ಲದು. ಅದಾವ ಬಂಧನವೋ, ಅವಳ ದರ್ಶನಮಾತ್ರದಿಂದ ನನ್ನ ಮನಸ್ಸು ಅಷ್ಟು ಕಲಕಿಹೋಗಿದೆ."

ಇಬ್ಬರೂ ಎದ್ದು ಅರಮನೆಯನ್ನು ಹೊಕ್ಕರು. ನಾಳಿನ ಕಾರ್ಯಭಾರದ ಹೊರೆಯನ್ನೇ ಚಿಂತಿಸುತ್ತಾ ವಸಂತಕ ಬೀಳ್ಕೊಂಡ.

೩

ಇತ್ತ ಮಹಾದೇವಿ ಕೌಶಿಕನ ನೆಟ್ಟನೋಟವನ್ನು ಕಿತ್ತೆಸೆದು ಒಳ ಹೊಕ್ಕ ಮೇಲೆ ಅವನ ಭಾವನೆಗಳ ಓಟ ಅನೇಕ ಬಗೆಯಾಗಿ ಓಡುತ್ತಿತ್ತು.

'ರಾಜ, ತನ್ನ ಪ್ರಜೆಗಳನ್ನು ನೋಡಿದರೆ ತಪ್ಪೆ ? ನಾನೇಕೆ ಹಾಗೆ ಒಳಗೆ ಓಡಿ ಬಂದೆ ?' ಎಂದುಕೊಳ್ಳುವಳು ಒಮ್ಮೆ. ಆದರೆ ಮತ್ತೊಮ್ಮೆ :

'ಇಲ್ಲ... ಆ ನೋಟದ ಹಿಂದೆ ಪ್ರಜಾವಾತ್ಸಲ್ಯದ ರಾಜದೃಷ್ಟಿಗಿಂತ ಬೇರೆಯಾದ ಭಾವನೆಯೊಂದು ಉಕ್ಕಿ ಹರಿದು ನನ್ನನ್ನು ಇರಿಯುವಂತಿರಲಿಲ್ಲವೇ ? ಅದನ್ನು

ಸಹಿಸಿಕೊಂಡು ಅಲ್ಲಿ ನಿಲ್ಲುವುದು ಸಾಧ್ಯವಿತ್ತೇ ?' ಎಂಬ ಭಾವ ಸುಳಿಯುವುದು.

ಉತ್ಸವ ಮುಂದೆ ಹೋದ ಮೇಲೆ ಗೆಳತಿಯರು ಬಂದು :

'ಏನಮ್ಮಾ ! ರಾಜದೃಷ್ಟಿ ನಿನ್ನ ಮೇಲೆ ಬಿತ್ತು !' ಎಂದು ಹಾಸ್ಯ ಮಾಡಿದರೂ ನಡೆದ ಘಟನೆಯ ಕಹಿ ಅವರ ಮನಸ್ಸಿಗೂ ನಾಟಿತ್ತು. ಅದಕ್ಕಾಗಿ ಅವಳನ್ನು ಸಮಾಧಾನಪಡಿಸಿ ನಡೆದರು.

ಓಂಕಾರ – ಲಿಂಗಮ್ಮರಿಗೂ ವಿಷಯ ತಿಳಿದಿತ್ತು. ಅವರು ಕೆಳಗೆ ನಿಂತು ಉತ್ಸವವನ್ನು ನೋಡುತ್ತಿದ್ದರು. ಓಂಕಾರ ಪುರಪ್ರಮುಖರೊಡನೆ ರಾಜನಿಗೆ ಕಾಣಿಕೆಯ ಗೌರವವನ್ನು ಅರ್ಪಿಸುವುದರಲ್ಲಿ ಭಾಗಿಯಾಗಿದ್ದ. ರಾಜದೃಷ್ಟಿ ಹರಿದಿರುವ ದಿಕ್ಕನ್ನು ನೋಡಿದ್ದ. ಮಹಾದೇವಿ ಸರಕ್ಕನೆ ಒಳಗೆ ನಡೆದುದನ್ನೂ ಗಮನಿಸಿದ್ದ. ಅಕ್ಕಪಕ್ಕದ ಪಿಸುಮಾತುಗಳೂ ಕಿವಿಗೆ ಬಿದ್ದಿದ್ದುವು.

ರಾಜನ ಸ್ವಭಾವವನ್ನು ಬಲ್ಲ ಓಂಕಾರನಿಗೆ ಇದಾವುದೋ ಒಂದು ಹೊಸ ವಿಪತ್ತಿನ ನಾಂದಿಯೇನೋ ಅನಿಸಿತು. ಅದನ್ನು ಲಿಂಗಮ್ಮನಿಗಾಗಲೀ ಮಹಾ ದೇವಿಗಾಗಲೀ ಆಡಿ ತೋರಿಸದಿದ್ದರೂ ಒಬ್ಬೊಬ್ಬರ ಮನಸ್ಸೂ ಅದನ್ನೇ ಊಹಿಸಿಕೊಳ್ಳುತ್ತಿತ್ತು.

ಬೆಳಗ್ಗೆ ಮಹಾದೇವಿ ಎಂದಿನಂತೆ ಸ್ನಾನಪೂಜೆಗಳನ್ನು ಮುಗಿಸಿದಳು. ಇಂದು ಅವಳ ಮನಸ್ಸು ಅಶಾಂತಿಯಿಂದ ತುಯ್ದಾಡುತ್ತಿತ್ತು. ಆವುದೋ ಕಾಣದ ಕರೆಯೊಂದು, ಒಂದೇ ಸಮನೆ ಹೃದಯದಲ್ಲಿ ಮೊರೆದಂತೆ ಆಗುತ್ತಿತ್ತು. ಏನೋ ಹೇಳಲಾಗದ ಒಂದು ಅತೃಪ್ತಿ ; ತಿಳಿಯಲಾಗದ ಒಂದು ತಳಮಳ. ವಚನಗಳ ಕಟ್ಟನ್ನು ತೆಗೆದುಕೊಂಡು ಕುಳಿತಳು. ಅವುಗಳಲ್ಲಾದರೂ ಶಾಂತಿಯನ್ನು ಅರಸಬೇಕೆಂದು ಬಯಸಿತ್ತು ಅವಳ ಮನಸ್ಸು.

ಓಂಕಾರ ಮಹಡಿಯ ಮೇಲಿನ ತನ್ನ ಕೋಣೆಯಲ್ಲಿ ಕುಳಿತು ಯಾವುದೋ ಲೆಕ್ಕದಲ್ಲಿ ತೊಡಗಿದ್ದ. ಲಿಂಗಮ್ಮ ಒಳಗೆ ತನ್ನ ಕೆಲಸದಲ್ಲಿ ನಿರತಳಾಗಿದ್ದಳು. ಆಳು ಕಾಳುಗಳೂ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು. ಅಷ್ಟರಲ್ಲಿ :

"ಓಂಕಾರಶೆಟ್ಟರೆ... ಓಂಕಾರಶೆಟ್ಟರೇ..........."

– ಬಾಗಿಲಲ್ಲಿ ಯಾರೋ ಕರೆದಂತಾಯಿತು.

ರಾಜಗೆಳೆಯನಿಗೆ ಯೋಗ್ಯವಾದ ಉಡುಗೆಯ ಠೀವಿಯಿಂದ ವಸಂತಕ ಬಾಗಿಲಲ್ಲಿ ನಿಂತಿದ್ದನು. ಅವನ ಹಿಂದೆ ರಸ್ತೆಯ ಮೇಲೆ ನಾಲ್ಕಾರು ಜನ ಸಿಪಾಯಿಗಳು ಬೇರೆ ನಿಂತಂತೆ ತೋರಿತು ಲಿಂಗಮ್ಮನಿಗೆ.

ಹಾವನ್ನು ಮೆಟ್ಟಿದವರಂತೆ ಹೌಹಾರಿದರು ಲಿಂಗಮ್ಮ – ಮಹಾದೇವಿಯರು. ಯಾರಿವನು? ಅನಿಷ್ಟಕರವಾದ ನಮ್ಮ ಸಂಶಯವೇ ನಿಜವಾಯಿತೇ?' ಮಾತನಾಡದವಳಾಗಿ ನಿಂತಿದ್ದಳು ಲಿಂಗಮ್ಮ. ತಾಯಿಯ ಹಿಂದೆ ನಿಂತು ಮಹಾದೇವಿ ಚಕಿತಳಾಗಿ ನೋಡುತ್ತಿದ್ದಳು.

ಅಷ್ಟರಲ್ಲಿ ಓಂಕಾರ ಇಳಿದು ಬಂದ. ರಾಜನ ಆಪ್ತಗೆಳೆಯ ವಸಂತಕನನ್ನು ಆತ ಬಲ್ಲ. ಆದರೆ ಅವನು ಇಲ್ಲಿ ! ಕ್ಷಣಕಾಲ ದಿಗ್ಭ್ರಮೆಯಾಯಿತು. ಅದನ್ನು ತೋರ್ಪಡಿಸಿಕೊಳ್ಳದೆ ಹೇಳಿದ :

"ಓ ! ತಾವು !! ದಯಮಾಡಿಸಬೇಕು...."

ವಸಂತಕ ಒಳಗೆ ಪ್ರವೇಶಿಸಿದ. ಅವನ ಪರಿವಾರವೂ ಒಳಗೆ ಹೊಕ್ಕಿತು. ಅವನ ಜೊತೆಗೆ ಒಂದಿಬ್ಬರು ಅವನ ಗೌರವರಕ್ಷೆಯ ಸಹಾಯಕರಿದ್ದರು. ಅಲ್ಲದೆ ಅರಮನೆಯ ಅಂತಃಪುರದ ಐವರು ಸ್ತ್ರೀಯರು, ರೇಶ್ಮೆಬಟ್ಟೆಯಿಂದ ಮುಚ್ಚಿದ ಹರಿವಾಣಗಳನ್ನು ಹಿಡಿದು ಒಳಗೆ ಪ್ರವೇಶಿಸಿದರು. ನಾಲ್ಕಾರು ಜನ ಸಿಪಾಯಿಗಳು ಬಾಗಿಲಲ್ಲೇ ನಿಂತರು ಕಾವಲಿಗೆಂಬಂತೆ.

ಓಂಕಾರನ ಮನಸ್ಸಿನಲ್ಲಿ ನಾನಾ ಭಾವನೆಗಳು ಮಿಂಚಿನಂತೆ ಓಡಿದುವು. ನೆನ್ನೆಯ ರಾಜದೃಷ್ಟಿಯಿಂದಾದ ಫಲವೆಂದು ಊಹಿಸಲು ಅವನಿಗೆ ಹೆಚ್ಚು ಕಷ್ಟವಾಗಲಿಲ್ಲ. ಆದರೂ ಅದನ್ನು ತೋರ್ಪಡಿಸಿಕೊಳ್ಳದೆ, ವಸಂತಕನಿಗೆ ಕುಳಿತುಕೊಳ್ಳಲು ಹಾಸಿ, ಒರಗುದಿಂಬನ್ನಿಡುತ್ತಾ ಹೇಳಿದ.

"ಕುಳಿತುಕೊಳ್ಳಬೇಕು.... ಏನು ಸ್ವಾಮಿ, ಬಹಳ ಅನಿರೀಕ್ಷಿತವಾಗಿ ಬಡವರ ಮನೆಗೆ...."

"ಹಾಗೆ ಹೇಳಬೇಡಿ, ಓಂಕಾರಶೆಟ್ಟರೆ..." ಮಧ್ಯದಲ್ಲಿಯೇ ಪ್ರಾರಂಭಿಸಿದ ವಸಂತಕ : "ಯಾರು ಬಡವರು, ಯಾರು ಶ್ರೀಮಂತರು ! ಇದೆಲ್ಲಾ ಒಂದು ಸುತ್ತುತ್ತಿರುವ ಚಕ್ರ. ಅದರ ಸನ್ನಿವೇಶಗಳಿಗೆ ಅನುಗುಣವಾಗಿ ನಾವು ಹೊಂದಿಕೊಳ್ಳಬೇಕಾಗುತ್ತದೆ. ಅದೇತಾನೇ ಜೀವನ ಎನ್ನುವುದು ? ನೋಡಿ, ನಿಮ್ಮ ಮುಂದೆ ಈಗ ಮಹತ್ತರವಾದ ಒಂದು ಅವಕಾಶ ಬಂದು ನಿಂತಿದೆ." ತಾನು ಬಂದ ವಿಷಯಕ್ಕೆ ಪೀಠಿಕೆ ಹಾಕಿದ ವಸಂತಕ.

ಮಾತಿನ ಸುಳುಹು ಓಂಕಾರನಿಗೆ ಸ್ವಲ್ಪಮಟ್ಟಿಗೆ ತಿಳಿಯಿತು. ಆದರೆ ಅದನ್ನು ವ್ಯಕ್ತಪಡಿಸದೆ:

"ಏನು ಸ್ವಾಮಿ, ನೀವು ಹೇಳಿದುದು ತಿಳಿಯಲಿಲ್ಲ" ಎಂದ.

ಓಂಕಾರ ಶೆಟ್ಟರೆ, ನಿಮಗಾಗಲೇ ಎಲ್ಲವೂ ಅರ್ಥವಾಗಿರಬೇಕೆಂದುಕೊಂಡಿದ್ದೆ.

ನೆನ್ನೆಯ ದಿನ ಉತ್ಸವದ ಸಮಯದಲ್ಲಿ ನಿಮ್ಮ ಕುಮಾರಿಯನ್ನು ನೋಡಿ, ಅವಳ ಸೌಂದರ್ಯಕ್ಕೆ ಮನಸೋತಿದ್ದಾರೆ ರಾಜರು. ಅವಳನ್ನು ಮದುವೆಯಾಗಬೇಕೆಂದು ಅಪೇಕ್ಷೆಪಟ್ಟಿದ್ದಾರೆ. ನಿಮ್ಮ ಮಗಳು ಮಹಾರಾಜರ ಪಟ್ಟಮಹಿಷಿಯಾಗಿ...."

"ನಿಲ್ಲಿಸಿರಿ ಸಾಕು, ಮುಂದೆ ಹೇಳಬೇಡಿರಿ," ಅಸಹನೆಯಿಂದ ತಡೆದ ಓಂಕಾರ.

"ಇದೇನು ಓಂಕಾರಶೆಟ್ಟರೇ ?" ಬಹುಶಃ ಇದನ್ನು ಊಹಿಸಿದ್ದರೂ ಆಶ್ಚರ್ಯಗೊಂಡವನಂತೆ ಕೇಳಿದ ವಸಂತಕ.

"ಇನ್ನೇನು ? ಆಗಲೇ ಮದುವೆ ನಿರ್ಧಾರವಾದಂತೆ ದುಡುಕಿ ಮಾತನಾಡುತ್ತಿದ್ದೀರಿ!"

"ಮಹಾರಾಜರೇ ನಿಮ್ಮ ಬಳಿಯಲ್ಲಿ ಕನ್ಯಾರ್ಥಿಯಾಗಿ ಬಂದಿರುವಾಗ ಅದನ್ನು ತಿರಸ್ಕರಿಸುವುದು ಯುಕ್ತವಲ್ಲ, ಶೆಟ್ಟರೇ. ಅವಿವಾಹಿತನಾದ ರಾಜಕುಮಾರ ಧರ್ಮಸಮ್ಮತವಾಗಿ ನಿಮ್ಮ ಮಗಳನ್ನು ಕೈಹಿಡಿಯಬೇಕೆಂದು ಅಪೇಕ್ಷೆಪಟ್ಟರೆ ಅದನ್ನು ನೀವು ತಳ್ಳಿ ಹಾಕುತ್ತೀರೆಂದು ನಾವಾರು ತಿಳಿದಿಲ್ಲ.

"ನೀವು ಏನು ತಿಳಿದಿದ್ದೀರೋ ನನಗೆ ಗೊತ್ತಿಲ್ಲ. ಆದರೆ ಈ ಸಂಬಂಧ ಸಾಧ್ಯವಿಲ್ಲವೆಂದು ಮಾತ್ರ ನಿಮ್ಮ ರಾಜರ ಬಳಿಯಲ್ಲಿ ನಿವೇದಿಸಿಕೊಳ್ಳುತ್ತಿರುವೆನೆಂದು ಹೇಳಿರಿ. ಏಕೈಕನಿಷ್ಠಾವಂತರಾದ ಶಿವಭಕ್ತರ ಮನೆಯ ಹೆಣ್ಣನ್ನು ನಿಮ್ಮ ರಾಜರು ಬಯಸುವುದು ಬೇಡವೆಂದು ತಿಳಿಸಿರಿ." ನಿರ್ಧಾರದಿಂದ ಹೇಳಿದ ಓಂಕಾರ.

ವಸಂತಕ ಇಷ್ಟಕ್ಕೇ ಸುಮ್ಮನಾಗಲು ಬಂದರಲಿಲ್ಲ :

"ನೀವು ಹೇಳುವುದು ಬುದ್ಧಿವಂತಿಕೆಯ ಮಾತಲ್ಲ, ಶೆಟ್ಟರೇ. ನಿಮ್ಮ ಭಕ್ತಿ ನಿಷ್ಠೆಗೆ ಇದರಿಂದ ಕುಂದೇನಾದರೂ ಒದಗುತ್ತದೆಯೇ ಆಲೋಚಿಸಿರಿ. ಅದಕ್ಕೆ ಇನ್ನೂ ಹೆಚ್ಚಿನ ಸಹಾಯವೇ ಆಗಬಹುದು. ಇಡೀ ಒಂದು ರಾಜ್ಯದ ಒಡೆಯನೇ ನಿಮ್ಮವನಾಗುತ್ತಾನೆ. ನಿಮ್ಮ ಘನತೆಗೌರವಗಳು ಹೆಚ್ಚುತ್ತವೆ." 'ಆಮಿಷವನ್ನು ತೋರಿಸಿದ ವಸಂತಕ.

ಆದರೆ ಓಂಕಾರ ಈ ಪ್ರಲೋಭನೆಗಳಿಗೆ ಒಳಗಾಗುವವನಾಗಿರಲಿಲ್ಲ :

"ಇಲ್ಲ ಸ್ವಾಮಿ, ದಯವಿಟ್ಟು ಕ್ಷಮಿಸಿರಿ. ನಮಗೆ ಆ ಘನತೆಯೂ ಬೇಡ, ಗೌರವವೂ ಬೇಡ. ನಮ್ಮ ಪಾಡಿಗೆ ನಮ್ಮನ್ನು ಬಿಟ್ಟುಬಿಡಿ."

"ನಿಮಗೆ ಆ ಗೌರವ ಬೇಡದೆ ಇರಬಹುದು. ನಿಮ್ಮ ಮಗಳ ಸುಖಕ್ಕಾಗಿಯಾದರೂ ಒಪ್ಪಿಕೊಳ್ಳಿ." ಮಹಾದೇವಿಯ ಸುಖವನ್ನೇ ತನ್ನ ಗುರಿಯಾಗಿಟ್ಟುಕೊಂಡವನಂತೆ ಹೇಳಿದ.

"ಸದಾಚಾರಸಂಪನ್ನಳಾದ ಮತ್ತು ಭಕ್ತಿಪರಾಯಣಳಾದ ನನ್ನ ಮಗಳು ಅಂತಹ ಸುಖವನ್ನು ಬಯಸಲಾರಳು."

"ಅದನ್ನು ನೀವು ಹೇಗೆ ಹೇಳುವಿರಿ ? ಇಂತಹ ಒಳ್ಳೆಯ 'ವರ' ಸಿಕ್ಕುತ್ತಿರುವಾಗ ಮದುವೆಯಾಗಲಿರುವ ಯಾವ ಹೆಣ್ಣು ಮಗಳು ತಾನೆ ಬೇಡ ಎಂದಾಳು ?" ವಸಂತಕ ಮಹಾದೇವಿಯ ಮನಸ್ಸನ್ನು ಅರಿತನವನಂತೆ ಹೇಳಿದ.

ತಾಯಿಯ ಹತ್ತಿರ ನಡುಮನೆಯ ಒಳಗೆ ಉದ್ವೇಗ ಕಾತರಗಳ ಮುಳ್ಳಿನ ಮೇಲೆ ನಿಂತು ಇದನ್ನೆಲ್ಲಾ ಕೇಳುತ್ತಿದ್ದ ಮಹಾದೇವಿಗೆ ಈ ಮಾತು ಕೇಳಿಸಿತು. ತನ್ನ ಮನಸ್ಸನ್ನು ಕುರಿತು ನಿರ್ಧಾರದ ಮಾತುಗಳನ್ನು ಆಡುತ್ತಿರುವ ವಸಂತಕನ ನುಡಿ ಅವಳಿಗೆ ಚುಚ್ಚಿ ಎಚ್ಚರಿಸಿದಂತಾಯಿತು. ಏನೋ ಆವೇಶ ಬಂದಂತಾಯಿತು. ತಾಯಿ ತಡೆಯುತ್ತಿದ್ದರೂ ಮುಂದೆ ನುಗ್ಗಿ ಬಂದು ತಂದೆಯ ಹಿಂದೆ ನಿಂತುಕೊಳ್ಳುತ್ತಾ ಹೇಳಿದಳು :

"ಸಾಕು, ನಿಮ್ಮ ವರನನ್ನು ನೀವಲ್ಲದೆ ಇನ್ನಾರು ಹೊಗಳಬೇಕು ?" ಅನಿರೀಕ್ಷಿತವಾದ ಈ ರೂಪರಾಶಿಯ ಮಿಂಚಿನಿಂದ ತಬ್ಬಿಬ್ಬಾದ ವಸಂತಕನಿಗೆ ಅವಳ ಮಾತು ಬೆಚ್ಚಿಬೀಳುವಂತೆ ಮಾಡಿತು. ಮತ್ತೆ ಮುಂದುವರಿಯಿತು ಮಹಾದೇವಿಯ ಮಾತು :

"ಒಳ್ಳೆಯ ವರ ! ಹುಂ. ನಾಚಿಕೆಯಾಗಬೇಕು, ನಿಮಗೂ ಆ ಒಳ್ಳೆಯ ವರನಿಗೂ ರಾಜನೆಂಬ ಗೌರವದಿಂದ ನಿಂತು ಉತ್ಸವವನ್ನು ನೋಡುವ ಊರಿನ ಹೆಣ್ಣು ಮಕ್ಕಳನ್ನು, ನಿಮ್ಮ ರಾಜ ನೋಡುವ ದೃಷ್ಟಿ ಇದೇಯೇನು ? ಹೋಗಿ... ಹೇಳಿ ನಿಮ್ಮ ಆ ಒಳ್ಳೆಯ ವರನಿಗೆ, ಇಲ್ಲಿ 'ವಧು' ಯಾರೂ ಇಲ್ಲವೆಂದು."

"ದುಡುಕಬೇಡ ತಾಯೀ, ನಿನ್ನ ಭವಿಷ್ಯವನ್ನು ನಿರ್ಧರಿಸಲು, ನಿನ್ನ ತಾಯಿ ತಂದೆಗಳಿದ್ದಾರೆ..." ಎಂದು ಓಂಕಾರನತ್ತ ತಿರುಗಿ :

ಶೆಟ್ಟರೇ... ನಿಮ್ಮ ಮಗಳ ಹಾಗೆ ನೀವೂ ದುಡುಕಬೇಡಿ. ನಮ್ಮ ರಾಜರು ಪೂರ್ವಾಪರಗಳನ್ನು ಆಲೋಚಿಸಿಯೇ ಈ ನಿರ್ಧಾರಕ್ಕೆ ಬಂದಿದ್ದಾರೆ. ಕಂಡ ಕಂಡ ಹೆಣ್ಣುಗಳನ್ನು ಅವರು ಬಯುಸುವವರಲ್ಲ. ಮಹಾದೇವಿ ಅವಿವಾಹಿತಳೆಂಬುದನ್ನೂ, ತಮ್ಮ ಮದುವೆಗೆ ಯೋಗ್ಯಳೆಂಬುದನ್ನೂ ಅರಿತೇ ಇದಕ್ಕೆ ಮನಸ್ಸುಮಾಡಿದ್ದಾರೆ. ಇದುವರೆಗೆ ಅವಳು ಅವಿವಾಹಿತಳಾಗಿ ಉಳಿದಿರುವುದೂ ಒಂದು ದೈವಸಂಕೇತವೆಂದೇ ಭಾವಿಸಿಕೊಳ್ಳಿರಿ. ನಮ್ಮ ರಾಜರಿಗಾಗಿಯೇ ಮೀಸಲಾದವಳು ನಿಮ್ಮ ಮಗಳು."

ಓಂಕಾರನಿಗೆ ತಡೆಯಲಾಗಲಿಲ್ಲ :

"ಸಾಕು ಬಾಯಿ ಮುಚ್ಚಿರಿ. ಬಂದ ಅತಿಥಿಗಳೆಂದು ಗೌರವವನ್ನು ಕೊಟ್ಟರೆ ನಿಮ್ಮ ಮಾತು ಹದ್ದನ್ನು ಮೀರುತ್ತಿದೆ." ಧ್ವನಿ ಗಡುಸಾಗಿತ್ತು.

ವಸಂತಕನಿಗೂ ಸ್ವಲ್ಪ ಸಿಟ್ಟು ಬಂದಂತೆ ತೋರಿತು. ಅದಕ್ಕೆ ಸಂವಾದಿಯಾದ ಧ್ವನಿಯಲ್ಲಿಯೇ ಆತನು ಹೇಳಿದ :

"ಇಲ್ಲಿ ಕೇಳಿ, ಶೆಟ್ಟರೇ... ನಾನು ಬಂದದ್ದು ನಿಮ್ಮ ಮನೆಯ ಆತಿಥ್ಯವನ್ನು ಸ್ವೀಕರಿಸಲಿಕ್ಕಲ್ಲ. ರಾಜನ ಪ್ರತಿನಿಧಿಯಾಗಿ ನಿಮ್ಮ ಬಳಿಗೆ ಬಂದಿದ್ದೇನೆ. ಒಳ್ಳೆಯ ಮಾತಿನಿಂದ ನಿಮ್ಮ ಮಗಳನ್ನು ರಾಜರಿಗೆ ಕೊಡಲು ಒಪ್ಪಿದರೆ ಸರಿ... ಇಲ್ಲವಾದರೆ..."

ಓಂಕಾರನಿಗೆ ಮೈಯಲ್ಲಾ ಉರಿದಂತಾಯಿತು. ಅವನ ಸಾತ್ವಿಕ ಸತ್ವಶಕ್ತಿಯ ಹಿಂದಿದ್ದ ಕೋಪ ಸಿಡಿದೆದ್ದಿತು. ಆದರೂ ಅದನ್ನು ಕಷ್ಟದಿಂದ ಸಂಯಮಿಸಿಕೊಂಡು:

"ಇಲ್ಲವಾದರೆ.... ಹೂಂ.... ಅದನ್ನೂ ಹೇಳಿಬಿಡಿ...."

"ರಾಜರು ನಿಮಗೆ ಬುದ್ಧಿ ಕಲಿಸುತ್ತಾರೆ !" ಮಾತನ್ನು ಮುಗಿಸಿದ ವಸಂತಕ.

ಈ ಮಾತನ್ನು ವ್ಯಂಗ್ಯ ತಿರಸ್ಕಾರದಿಂದ ಹೇಳಿದ ಓಂಕಾರ :

"ಕಣ್ಣಿಗೆ ಬಿದ್ದ ಹೆಣ್ಣುಗಳೆಲ್ಲಾ ಬೇಕೆಂಬ ರಾಜ, ಅದಕ್ಕೆ ಮಧ್ಯಸ್ತಿಕೆ ವಹಿಸಿ ಹೊರಡುವ ನಿನ್ನಂತಹ ಗೆಳೆಯ, ಇವರಿಂದ ನಾನು ಬುದ್ಧ ಕಲಿಯಬೇಕಾಗಿಲ್ಲ. ನಿನಗೆ ಬುದ್ಧಿಯೇನಾದರೂ ಇದ್ದರೆ ನಿನ್ನ ರಾಜನಿಗೆ ಹೇಳು ಹೋಗು."

ವಸಂತಕನಿಗೆ ಮುಖದ ಮೇಲೆ ಹೊಡೆದಂತಾಯಿತು. ತಾನು ದುಡುಕಿದುದು ಒಳಿತಾಗಲಿಲ್ಲವೆಂದು ಅನ್ನಿಸಿತು. ಆದರೂ ಆಡಿದ ಮಾತಿನಿಂದ ಹಿಂದೆ ಹೋಗಲು ಇಚ್ಛಿಸದೆ ಮತ್ತೆ ಹೇಳಿದ :

"ನೋಡಿ, ಚೆನ್ನಾಗಿ ಆಲೋಚಿಸಿರಿ. ರಾಜನ ವೈರತ್ವವನ್ನು ಕಟ್ಟಿಕೊಳ್ಳುತ್ತಿದ್ದೀರಿ."

"ಹೇಳುವುದು ಮುಗಿದಿದ್ದರೆ ಹೊರಡಬಹುದು. ಇನ್ನು ಉಳಿದುದನ್ನು ನೀವು ಹೇಳಿದಂತೆ ನಮ್ಮ ಆಲೋಚನೆಗೆ ಬಿಡಿ." ಮಾತು ಬೆಳೆಸಲು ಇಷ್ಟವಿಲ್ಲದೆ ತಿರಸ್ಕಾರದಿಂದ ಹೇಳಿದ ಓಂಕಾರ.

"ಆಗಲಿ... ಹಾಗೆಯೇ ಆಗಲಿ... ಚೆನ್ನಾಗಿ ಆಲೋಚಿಸಿರಿ. ಅದರ ಮುಂಗಾಣಿಕೆಗಳೆಂಬಂತೆ ರಾಜರು ಕಳುಹಿಸಿರುವ ಈ ಉಪಾಯನಗಳನ್ನು ಸ್ವೀಕರಿಸಿ" ಎಂದು ಅಂತಃಪುರದ ಸ್ತ್ರೀಯರತ್ತ ನೋಡಿದ. ಅವರ ಕೈಯಲ್ಲಿದ್ದ ಹರಿವಾಣಗಳನ್ನು ಕೆಳಗಿಡಲು ಬಾಗಿದರು. ಅಷ್ಟರಲ್ಲಿ ಗುಡುಗಿದ :

"ಕೂಡದು, ಅವು ಈ ಮನೆಯ ನೆಲವನ್ನು ಸೋಂಕಕೂಡದು." ಬೆಚ್ಚಿಬಿದ್ದು ಸ್ತ್ರೀಯರು ಹಿಂದಕ್ಕೆ ಸರಿದು ನಿಂತರು. ಮತ್ತೆ ಓಂಕಾರ :

"ನಿಮ್ಮ ಕಾಣಿಕೆ ನಿಮ್ಮ ಬಳಿಯಲ್ಲೇ ಇರಲಿ ; ಅದು ನಮಗೆ ಅಗತ್ಯವಿಲ್ಲ."

"ನಿಮಗೆ ಅದು ಅಗತ್ಯವಿಲ್ಲದಿರಬಹುದು, ಶೆಟ್ಟರೇ... ಆದರೆ ನಮಗೆ ಅಗತ್ಯ, ಅವುಗಳನ್ನು ಕೊಡುವುದು" ಎನ್ನುತ್ತಾ ತಾನೇ ಮೇಲೆದ್ದು ಸ್ತ್ರೀಯರಲ್ಲಿ ತಟ್ಟೆಗಳನ್ನು ತೆಗೆದುಕೊಂಡು ತಾನು ಕುಳಿತಿದ್ದ ದಿಂಬಿನ ಸಮೀಪದಲ್ಲಿಡತೊಡಗಿದ. ಅವನ ಜೊತೆಗೆ ಬಂದಿದ್ದ ಸಹಾಯಕರಿಬ್ಬರು ಈ ಕೆಲಸದಲ್ಲಿ ಆತನಿಗೆ ನೆರವಾದರು. ಅಸಹನೆಯಿಂದ ಓಂಕಾರ ಅದನ್ನು ನೋಡುತ್ತಿದ್ದ. ಕೊನೆಗೆ ವಸಂತಕ ಹೇಳಿದ:

"ಓಂಕಾರಶೆಟ್ಟರೇ... ನೀವು ಲೋಕಾನುಭವವನ್ನು ಬಲ್ಲವರು. ದುಡುಕಬೇಡಿ. ಏನೂ ಅರಿಯದ ನಿಮಗೆ ಮಗಳಿಗೆ ಬುದ್ಧಿ ಹೇಳಿ. ಚೆನ್ನಾಗಿ ಆಲೋಚಿಸಿ ; ನಿಮ್ಮ ಅಭಿಪ್ರಾಯವನ್ನು ಹೇಳಿ. ಆಮೇಲೆ ಮತ್ತೆ ಬರುತ್ತೇನೆ" ಎಂದು ಹೊರಗೆ ಹೊರಟ. ಪರಿವಾರದವರು ಅವನನ್ನು ಹಿಂಬಾಲಿಸಿದರು.

ಓಂಕಾರ ನಿಸ್ಸಹಾಯಕನಾಗಿ ಉಪಾಯನಗಳನ್ನೊಮ್ಮೆ, ವಸಂತಕನನ್ನೊಮ್ಮೆ ನೋಡುತ್ತಿದ್ದ.

ಈ ವೇಳೆಗೆ ಓಂಕಾರನ ಮನೆಯ ಮುಂದೆ ಒಂದು ಸಣ್ಣ ಗುಂಪೇ ಸೇರಿ ಗುಜು ಗುಜು ಪ್ರಾರಂಭಿಸಿತ್ತು. ಆತನಿಗೆ ತೀರಾ ಆಪ್ತರಾದ ಒಬ್ಬಿಬ್ಬರು ಒಳಗೆ ಪ್ರವೇಶಿಸಿದರು. ಅದರಲ್ಲಿ ಪಕ್ಕದ ಮನೆಯ ನಾಗಭೂಷಣಶರ್ಮರು ಇದ್ದರು. ಓಂಕಾರ ಅವರಿಗೆ ವಿಷಯವನ್ನೆಲ್ಲಾ ಹೇಳತೊಡಗಿದ.

## ೪

ಇತ್ತ ಒಳಗೆ ಆಗಲೇ ಶರ್ಮರ ಪತ್ನಿ ಮತ್ತು ಮಗಳು ಶಂಕರಿ, ಹಿತ್ತಲ ಬಾಗಿಲಿನಿಂದ ಬಂದಿದ್ದರು. ಲಿಂಗಮ್ಮ ಅವಳಿಗೆ ನಡೆದ ಕಥೆಯನ್ನೆಲ್ಲಾ ಹೇಳುತ್ತಿದ್ದಳು. ಮಹಾದೇವಿ ಮಾತನಾಡುವುದನ್ನೇ ಮರೆತಂತಹ ಮೌನದಿಂದ ಒಂದು ಕಡೆ ಕುಳಿತಿದ್ದಳು. ಕೊನೆಗೊಮ್ಮೆ ಹೇಳಿದಳು :

"ಅವ್ವಾ, ನಾನು ಗುರುಗಳ ಹತ್ತಿರ ಹೋಗಿಬರುತ್ತೇನೆ."

"ಆಗಲಿ ಮಹಾದೇವಿ, ಈಗ ನಮಗೆ ಅವರೇ ಮಾರ್ಗದರ್ಶಕರು. ಹೋಗಿ ಬಾ" ಎಂದಳು ಲಿಂಗಮ್ಮ. ಓಂಕಾರನೂ ಅದನ್ನು ಅನುಮೋದಿಸಿದ.

"ನಿಜ ಮಗಳೇ, ಈ ಕತ್ತಲೆಯಿಂದ ಅವರೇ ನನ್ನನ್ನು ಪಾರುಮಾಡಬೇಕು. ನಮಗೆ ಏಕೈಕನಿಷ್ಠೆಯನ್ನು ಕೊಡಬೇಕು. ಇನ್ನು ಸ್ವಲ್ಪ ಹೊತ್ತು ಬಿಟ್ಟು ನಾನೂ ಬರುತ್ತೇನೆ ; ನೀನು ಹೋಗು" ಎಂದು ಹೇಳಿದ.

ಸ್ವಲ್ಪ ದೂರದವರೆಗೆ ಮಹಾದೇವಿಯನ್ನು ಶಂಕರಿಯು ಹಿಂಬಾಲಿಸಿದಳು.

"ನನಗೆ ನೆನ್ನೆಯೇ ಅನಿಸಿತು ಮಹಾದೇವಿ. ರಾಜನ ಆ ದೃಷ್ಟಿಯನ್ನು

ಕಂಡಾಗಲೇ" ಹೇಳಿದಳು ಶಂಕರಿ. ಮಹಾದೇವಿ ಮಾತನ್ನೇನೂ ಆಡದೇ ಮೌನವಾಗಿ ನಡೆಯುತ್ತಿದ್ದಳು. ಮತ್ತೆ ಶಂಕರಿಯೇ ಕೇಳಿದಳು :

"ನಿಜ ಹೇಳು, ಮಹಾದೇವಿ, ನಿನ್ನ ಮನಸ್ಸಿಗೆ ಏನು ಅನಿಸುತ್ತದೆ ?"

"ಅಂದರೆ ?... ರಾಜನ ಸಂಬಂಧ ನಿನಗೆ...." ಪೂರ್ಣವಾಗಿ ಹೇಳುವ ಅವಶ್ಯಕತೆ ಉಳಿಯಲಿಲ್ಲ.

"ಇದೇನು ಶಂಕರಿ ಹೀಗೆ ಕೇಳುತ್ತೀ ? ಎಲ್ಲಿಯಾದರೂ ಉಂಟೇನೇ ? ಕನಸಿನಲ್ಲಿಯೂ ನಾನು ಊಹಿಸಲಾರೆ, ಆತನನ್ನು ಮದುವೆಯಾಗುವುದನ್ನು" ನಿರ್ಧಾರದ ಧ್ವನಿಯಿತ್ತು ಮಹಾದೇವಿಯ ಮಾತನಲ್ಲಿ.

"ಆದರೆ... ಮೊದಲೇ ರಾಜ, ಮೇಲಾಗಿ ಯುವಕ. ಹೇಳುವವರು, ಕೇಳುವವರು ಯಾರೂ ಇಲ್ಲ. ಸುಲಭವಾಗಿ ತನ್ನ ನಿರ್ಧಾರವನ್ನು ಬಿಡಲಾರ. ನಿನ್ನ ತಂದೆತಾಯಿಗಳನ್ನು ಹಿಂಸಿಸುತ್ತಾನೋ ಏನೋ."

"ಅದೇ ವ್ಯಥೆಯೇ ನನ್ನನ್ನು ದುಃಖದಿಂದ ಅಲುಗಿಸುತ್ತಿದೆ, ಶಂಕರಿ. ನನಗಾಗಿ ನನ್ನ ತಂದೆತಾಯಿಗಳು ಏನೆಲ್ಲ ಅನುಭವಿಸಬೇಕಾಗಿದೆಯೋ. ಇದರಿಂದ ಅವರನ್ನು ಹೇಗೆ ಪಾರು ಮಾಡಲಿ ಎಂಬುದೇ ನನ್ನ ಯೋಚನೆ. ನನಗೆ ಬರುವಂತಹ ಸಂಕಟಗಳನ್ನು ನಾನು ಎದುರಿಸಬಲ್ಲೆ ; ನನಗಾಗಿ ಅವರು ಸಂಕಟಪಡುವುದನ್ನು ನಾನು ನೋಡಲಾರೆ.... ಆದರೆ ನಾನೇನನ್ನು ತಾನೇ ಮಾಡುವುದಕ್ಕೆ ಸಾಧ್ಯ? ಅದನ್ನೇ ಯೋಚಿಸುತ್ತಿದ್ದೇನೆ. ಗುರುಗಳು ಏನು ಹೇಳುತ್ತಾರೋ ಎಂದು ಮನಸ್ಸು ಹಾತೊರೆಯುತ್ತಿದೆ."

ಮಾತನಾಡುತ್ತಾ ದಾರಿ ನಡೆಯುತ್ತಿದ್ದರು. ನಡೆದ ವಿಷಯ ಮಿಂಚಿನ ವೇಗದಲ್ಲಿ ಊರಿನಲ್ಲಿ ಹಬ್ಬುತ್ತಿತ್ತು. ದಾಕ್ಷಾಯಿಣಿಯ ಕಿವಿಗೂ ಬಿದ್ದಿತು. ಕಾತರಳಾಗಿ ಆಕೆ ಇತ್ತಲೇ ಬರುತ್ತಿದ್ದಳು. ಇನ್ನೂ ಅಷ್ಟು ದೂರದಲ್ಲಿರುವಂತೆಯೇ ; "ಏನೇ ಮಹಾದೇವಿ ! ಏನದು, ರಾಜಪರಿವಾರ ಬಂದಿತ್ತಂತಲ್ಲ. ನಿಮ್ಮ ಮನೆಗೆ ?" ಎಂದು ಏದುತ್ತಾ ಬಳಿಗೆ ಬಂದಳು.

"ಶಂಕರಿ ಎಲ್ಲವನ್ನೂ ಹೇಳುತ್ತಾಳೆ ಕೇಳು. ನಾನೀಗ ಬಂದುಬಿಡುತ್ತೇನೆ. ಗುರುಗಳ ಬಳಿಗೆ ಹೋಗಿ" ಎಂದು ಅವರಿಬ್ಬರನ್ನೂ ಬಿಟ್ಟು ಮುಂದೆ ನಡೆದಳು ಮಹಾದೇವಿ. ಶಂಕರಿ ನಡೆದ ಕಥೆಯನ್ನು ಹೇಳತೊಡಗಿದಳು ದಾಕ್ಷಾಯಿಣಿಗೆ.

ಮಹಾದೇವಿ ಮಠವನ್ನು ತಲುಪಿದಾಗ ಗುರುಗಳು ಅದೇ ತಾನೇ ಪೂಜೆಯನ್ನು ಮುಗಿಸಿ ತಪೋವನದ ತೋಟದಲ್ಲಿ ಹೂವಿನ ಗಿಡಗಳೊಡನೆ ಮಾತನಾಡುತ್ತಿದ್ದರು. ಮಹಾದೇವಿಯನ್ನು ಕಂಡು :

"ಬಾರಮ್ಮಾ.... ಬಾ.... ಇದೇನಮ್ಮ ಈಗ ?"

ಸಾಮಾನ್ಯವಾಗಿ ಇಷ್ಟು ಹೊತ್ತಿನಲ್ಲಿ ಅವಳನ್ನು ಅವರು ನಿರೀಕ್ಷಿಸುತ್ತಿರಲಿಲ್ಲ. ಮಹಾದೇವಿ ಬಳಿಗೆ ಬಂದಳು. ಸದಾ ಪ್ರಶಾಂತವಾಗಿ ಜಗಜ್ಜನನಿಯ ಮಂದಹಾಸವೆಂಬಂತೆ ಮಿನುಗುತ್ತಿದ್ದ ಅವಳ ಮುಖದಲ್ಲಿ ಇಂದು ಉದ್ವೇಗ, ಕಾತರತೆ, ಅಶಾಂತಿ, ತಳಮಳಗಳ ತಾಂಡವವನ್ನು ಕಂಡ ಗುರುಲಿಂಗರು ಚಕಿತರಾದರು.

"ಇದೇನು ಮಗಳೇ ! ಏಕೆ ಹೀಗಿದ್ದೀಯ ? ಏನು ಸಮಾಚಾರ ? ಕುಳಿತುಕೋ."

ಇಬ್ಬರೂ ಕುಳಿತುಕೊಂಡರು. ನೆನ್ನೆಯ ಉತ್ಸವ, ರಾಜನ ನೋಟ, ಅದರ ಫಲವಾಗಿ ಇಂದು ಬಂದ ರಾಜಗೆಳೆಯನ ರಾಯಭಾರ, ಅದಕ್ಕೆ ತಂದೆಯ ಉತ್ತರ, ಎಲ್ಲವನ್ನೂ ಮಹಾದೇವಿ ಸಂಕ್ಷಿಪ್ತವಾಗಿ ಹೇಳಿದಳು. ಮತ್ತು ಕೊನೆಯಲ್ಲಿ:

"ಇದು ನನ್ನ ವಿಷಮಪರೀಕ್ಷೆಯ ಕಾಲವೆಂದೇ ತೋರುತ್ತಿದೆ, ಗುರುಗಳೇ. ಈಗ ನಾನೇನು ಮಾಡಬೇಕೆಂಬುದೇ ತೋಚದಂತಾಗಿದೆ. ರಾಜ ಸುಮ್ಮನೆ ಬಿಡಲಾರ. ನನ್ನ ತಂದೆತಾಯಿಗಳು ಎಂತಹ ವಿಪತ್ತನ್ನು ಎದುರಿಸಬೇಕಾಗಿದೆಯೋ" ಎಂದಳು.

ಗುರುಲಿಂಗರು ಕೇಳುತ್ತಾ ಕೇಳುತ್ತಾ ಗಂಭೀರರಾದರು. ಅವರ ಮನಸ್ಸು ಅಂತರ್ಮುಖವಾಯಿತು. ಕಣ್ಣು ಮುಚ್ಚಿದರು. ಕ್ಷಣಕಾಲ ಮೌನವಾವರಿಸಿತು. ನಿಧಾನವಾಗಿ ಕಣ್ತೆರೆದು ಹೇಳಿದರು :

"ಹೌದು ಮಗಳೇ, ಇದು ನಿನ್ನ ವಿಷಮ ಪರೀಕ್ಷೆಯ ಕಾಲ."

ಕ್ಷಣಕಾಲ ಮೌನ, ಮತ್ತೆ ಮಹಾದೇವಿಯೇ ಹೇಳಿದಳು :

"ನನ್ನ ರೂಪವೇ ನನಗೆ ಶತ್ರುವಾಗಿ ಕಾಡುತ್ತಿದೆಯಲ್ಲ, ಗುರುಗಳೇ."

ಗುರುಗಳು ಆಲೋಚನಾಪರರನಾಗಿ ಹೇಳಿದರು :

"ನಿನ್ನನ್ನು ಅದು ಕಾಡುತ್ತಿದೆ, ನಿಜ. ಆದರೆ ಅದು ನಿನ್ನ ಶತ್ರುವೋ, ಮಿತ್ರನೋ ಹೇಗೆ ಹೇಳಬಲ್ಲೆ, ತಾಯಿ ? ದೈವಕೃಪೆ, ದುಃಖದ ರೂಪದಲ್ಲಿಯೂ ಬರಬಹುದೆಂದು ನಾನು ಹೇಳುತ್ತಿದ್ದುದನ್ನು ನೆನೆಸಿಕೋ." ದೂರಾನ್ವಯವಾದ ಧ್ವನಿಯೊಂದು ಇದ್ದಂತೆ ತೋರಿತು ಗುರುಗಳ ಮಾತಿನಲ್ಲಿ.

"ಅಂದರೆ... ದೈವಕೃಪೆಯೇ ಈ ರೀತಿಯಲ್ಲಿ ಬಂದಿದೆಯೆಂದು ಭಾವಿಸಿಕೊಳ್ಳಬೇಕೆನ್ನುತ್ತೀರಾ ಗುರುಗಳೇ ?" ಅಚ್ಚರಿಯಿಂದ ಕೇಳಿದಳು.

"ಅದನ್ನು ನಿರ್ಧರವಾಗಿ ಹೇಗೆ ಹೇಳಲಮ್ಮ ? ಆದರೆ ಬಂದುದೆಲ್ಲವನ್ನೂ

ಹಾಗೆ ಭಾವಿಸಿ ಎದುರಿಸುವುದೇ ಜೀವನದ ರಹಸ್ಯವೆಂಬುದಂತೂ ಸತ್ಯವಾದ ಮಾತು."

"ಇದನ್ನು ನಾನು ಹೇಗೆ ಎದುರಿಸಬೇಕು, ಗುರುಗಳೇ. ನನಗಂತೂ ಏನೂ ತೋಚದಂತಾಗಿದೆ. ಮತ್ತೆ ಬರುತ್ತೇನೆಂದು ಹೇಳಿ ಹೋಗಿದ್ದಾನೆ ರಾಜನ ಗೆಳೆಯ. ಬಹುಶಃ ಇಂದೇ ಬಂದರೂ ಬರಬಹುದು. ಈಗಲೇನೋ ಅವನಿಗೆ ಛೀಮಾರಿಹಾಗಿ ಕಳುಹಿಸಿದ್ದೇವೆ. ಆದರೆ ಅದು ಅಷ್ಟರಲ್ಲಿಯೇ ಪರ್ಯವಸಾನವಾಗಲಾರದು. ಅದರ ಫಲವನ್ನು ನನ್ನ ತಂದೆ ತಾಯಿಗಳು ಅನುಭವಿಸಬೇಕಾದೀತೆಂಬ ಸ್ಮರಣೆ ಬಂದಾಗಲಂತೂ ನಾನು ಮುಂಗಾಣ ದವಳಾಗುತ್ತೇನೆ. ಈ ಧರ್ಮಸಂಕಟದಿಂದ ನನ್ನನ್ನು ಪಾರುಮಾಡಿ, ಗುರುಗಳೇ."

ದೈನ್ಯತೆಯೇ ಮೂರ್ತಿವೆತ್ತಂತಿತ್ತು ಮಹಾದೇವಿಯ ಸ್ಥಿತಿ.

ಗುರುಗಳು ದೀರ್ಘವಾದ ಆಲೋಚನೆಗೆ ತೊಡಗಿದಂತೆ ತೋರಿತು. ಕಣ್ಣುಮುಚ್ಚಿ ಮೌನವನ್ನು ಧರಿಸಿದರು, ಸ್ವಲ್ಪ ಕಾಲ ಮೌನದಲ್ಲಿಯೇ ಉರುಳಿತು. ನಿಧಾನವಾಗಿ ಕಣ್ದೆರೆದರು. ಮುಖದಲ್ಲಿ ಏನೋ ಹೊಳೆದಂತಾಯಿತು. ಹೇಳಿದರು:

"ಇದೇನು ಮಹಾದೇವಿ, ನೀನು ಇಷ್ಟೊಂದು ದೀನಳಾಗುವುದೇ ! ಬೇಕೆಂತಲೇ ಇಂತಹ ಒಂದು ಸಮಸ್ಯೆ ನಿನ್ನೆದುರು ಬಂದಿದೆ. ಸಾಮಾನ್ಯರಾಗಿದ್ದರೆ ಅವರಿಗೆ ಇದೊಂದು ಸಮಸ್ಯೆಯೇ ಆಗುತ್ತಿರಲಿಲ್ಲ ; ಅದಕ್ಕೆ ಬದಲಾಗಿ ಇದೊಂದು ಸುಯೋಗವಾಗುತ್ತಿತ್ತು. ತರುಣ ರಾಜನ ಕೈಯನ್ನು ಹಿಡಿಯಲು ಬಯಸದ ತರುಣಿ ಯಾರು ? ರಾಜನಿಗೆ ಮಗಳನ್ನು ಕೊಡಲೊಪ್ಪದ ತಂದೆ ತಾಯಿಗಳಾರು ? ಆದರೆ ನಿನ್ನ ತಂದೆತಾಯಿಗಳು ಎಂತಹ ವಿಪತ್ತನ್ನು ಬೇಕಾದರೂ ಎದುರಿಸಿಯಾರು ; ನಿನ್ನನ್ನು ಆತನಿಗೆ ಕೊಡಲು ಒಪ್ಪಲಾರರು. ಆದರೆ ಈಗ ಅಂತಹ ಹಟದಿಂದಲೂ ಫಲವಿಲ್ಲ. ಪಾಶವೀ ಶಕ್ತಿಯ ಬಲ ಆತನಿಗಿದೆ. ಅದರಿಂದ ಆತ ಅವರನ್ನು ಹಿಂಸಿಸಬಲ್ಲ. ಆದರೆ ನಿನ್ನನ್ನು ಆತ ಬಲಾತ್ಕರಿಸಲಾರ. ಬಲಾತ್ಕರಿಸಿದರೂ ನಿನ್ನ ಸತ್ವಶಕ್ತಿ ನಿನ್ನನ್ನು ಕಾಯಬಲ್ಲುದು. ಆ ನಂಬಿಕೆ ನನಗಿದೆ."

"ನಿಜ, ಗುರುಗಳೇ. ನನ್ನ ಯೋಚನೆ ನನಗಿಲ್ಲ ; ತಂದೆತಾಯಿಗಳದೇ ಯೋಚನೆ ನನಗೆ."

"ಹಾಗಾದರೆ ಒಂದು ಕೆಲಸ ಮಾಡು, ನಿನ್ನ ತಂದೆತಾಯಿಗಳ ಜವಾಬ್ದಾರಿಯಿಂದ ನಿನ್ನನ್ನು ತಪ್ಪಿಸಿಕೊಂಡು, ನಿನ್ನ ಹೊಣೆಯನ್ನು ನೀನೇ ಹೊತ್ತುಕೋ"

ಗುರುಗಳ ಈ ಮಾತು ಮಹಾದೇವಿಗೆ ಸ್ಪಷ್ಟವಾಗಲಿಲ್ಲ. ಕೇಳಿದಳು :

"ಅಂದರೆ ?.... ಅರ್ಥವಾಗಲಿಲ್ಲ, ಗುರುಗಳೇ."

"ನಿನ್ನ ಮನಸ್ಸನ್ನು ನಾನು ಚೆನ್ನಾಗಿ ಬಲ್ಲೆ. ಆದುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ...."

"ಹೇಳಿ, ಗುರುಗಳೇ," ಕಾತರತೆಯ ಆತುರ ತುಂಬಿತ್ತು ಮಹಾದೇವಿಯ ಧ್ವನಿಯಲ್ಲಿ.

"ಲೌಕಿಕ ಮದುವೆಯ ಹಂಗೇ ನಿನಗಿಲ್ಲ. ಅದು ನನಗೆ ಗೊತ್ತು. ಆದರೆ ಅದನ್ನು ಈ ಜಗತ್ತು ಸುಲಭವಾಗಿ ಒಪ್ಪಲಾರದು. ಆ ಮಾತು ಹೋಗಲಿ. ಈಗ ಒಂದು ಕೆಲಸವನ್ನು ನೀನು ಮಾಡಬಹುದು. ನಿನ್ನ ಮದುವೆಯ ಜವಾಬ್ದಾರಿಯನ್ನು ನೀನೇ ವಹಿಸಿಕೊಂಡು ಕೌಶಿಕನ ಅರಮನೆಗೆ ಹೋಗು. ಅವನನ್ನು ಗೆಲ್ಲುವುದಕ್ಕೆ ಪ್ರಯತ್ನಿಸು. ಅದು ಒಂದು ವೇಳೆ ಅಸಾಧ್ಯವಾದಾಗ ನಿನ್ನ ಮಾರ್ಗ ನಿನಗೆ ಇದ್ದೇ ಇದೆ. ಆಗ ತಪ್ಪು ನಿನ್ನದಾಗುತ್ತದೆಯೇ ಹೊರತು ನಿನ್ನ ತಂದೆತಾಯಿಗಳದಾಗುವುದಿಲ್ಲ. ಅಲ್ಲಿಗೆ ನಿನ್ನ ಮದುವೆಯ ಪ್ರಯತ್ನ ಸಂಪೂರ್ಣವಾಗಿ ನಿಂತಂತೆ ಆಗುತ್ತದೆ."

ಗುರುಲಿಂಗರ ಮಾತನ್ನು ಕುರಿತು ಸ್ವಲ್ಪ ಕಾಲ ಆಲೋಚಿಸಿದಳು. ಆಲೋಚಿಸಿದಂತೆಲ್ಲಾ ಅವರ ಮಾತಿನ ಅರ್ಥ ಸ್ವಲ್ಪ ಹೆಚ್ಚು ಸ್ಪಷ್ಟವಾದಂತೆ ತೋರಿತು, ಮುಖದಲ್ಲಿ ಕಾಂತಿ ಮಿಂಚಿತು. ಯಾವುದು ತನ್ನ ಜೀವನವನ್ನೇ ಹಿಡಿದೆಳೆದು ನುಂಗಬೇಕೆಂದು ಬಂದ ಮೊಸಳೆಯಂತೆ ಭಯಂಕರವಾಗಿ ಕಂಡಿದ್ದಿತೋ, ಅದೇ ಈಗ ಅವಳನ್ನು ರಕ್ಷಿಸಲು ಬಂದ ತಾರಕನೌಕೆಯಂತೆ ಗೋಚರಿಸಿತು :

"ನಿಜ, ಗುರುಗಳೇ... ನೀವು ಹೇಳಿದಂತೆ, ದೈವಕೃಪೆಯೇ ಈ ರೂಪದಿಂದ ಬಂದಿದೆಯೆಂದು ಭಾವಿಸುತ್ತೇನೆ" ಎಂದವಳು ಮತ್ತೇನನ್ನೋ ಯೋಚಿಸುತ್ತಾ : "ಆದರೆ... ಇದಕ್ಕೆ ನನ್ನ ತಂದೆತಾಯಿಗಳು ಒಪ್ಪುತ್ತಾರೆಯೆ? ಅವರು ಹಿಡಿದ ಹಟವನ್ನೇ ಬಿಡದಿದ್ದರೆ..."

"ನಿಜ, ಅದೂ ಸ್ವಲ್ಪಕಷ್ಟಕರವಾದ ಮಾತೇ...."

ಮಹಾದೇವಿಯೇ ಅದಕ್ಕೆ ಒಂದು ಉಪಾಯವನ್ನು ಕಂಡುಕೊಂಡಳು.

"ನೀವೇ ಅವರಿಗೆ ಇದರ ಆಗುಹೋಗುಗಳನ್ನೆಲ್ಲಾ ಹೇಳಬೇಕು. ಗುರುಗಳೇ, ಇದರ ಹೊರತು ಬೇರೆ ಮಾರ್ಗವೇ ಇಲ್ಲವೆಂದು ತಿಳಿಸಬೇಕು. ನಿಮ್ಮ ಮಾತನ್ನು ಅವರು ಮೀರುವುದಿಲ್ಲ. ಈಗ ತಂದೆಯವರು ಬರುತ್ತೇನೆಂದಿದ್ದರು. ಅವರ ಜೊತೆಯಲ್ಲಿ ತಾಯಿಯನ್ನೂ ಕಳುಹಿಸುತ್ತೇನೆ. ಇಬ್ಬರಿಗೂ ಹೇಳಿರಿ. ಎಲ್ಲ ಭಾರವನ್ನೂ ಅವರು ನನ್ನ ಮೇಲೆ ಹಾಕಿಬಿಡಲಿ. ಉಳಿದುದನ್ನು ನಿಮ್ಮ ಮಾತಿನ

ಬೆಳಕಿನಲ್ಲಿ ನಾನು ನೋಡಿಕೊಳ್ಳುತ್ತೇನೆ."

"ಆಗಲಿ.... ನೀನೀಗ ಹೋಗಿ ಅವರನ್ನು ಕಳುಹಿಸು" ಗುರುಗಳು ಹೇಳಿದರು. ಮಹಾದೇವಿ ಎದ್ದು ನಮಸ್ಕರಿಸುತ್ತಾ ಹೇಳಿದಳು.

"ಬೆಟ್ಟದ ಹಾಗೆ ಬಂದದ್ದು ಮಂಜಿನ ಹಾಗೆ ಕರಗಿಹೋದಂತೆ ಅನ್ನಿಸುತ್ತಿದೆ, ಗುರುಗಳೇ, ನಿಜವಾಗಿಯೂ ಹೇಳಬೇಕೆಂದರೆ... ನಾನಿನ್ನು ಮುಂದೆ ಬರುವುದನ್ನು ಎದುರಿಸಲು ಉತ್ಸಾಹದಿಂದ ಇದ್ದೇನೆ. ಆದರೆ ನನ್ನ ತಂದೆ ತಾಯಿಗಳಿಗೆ ಮಾತ್ರ ಇದನ್ನು ನೀವು ಹೇಳಿ ಅವರನ್ನು ಒಪ್ಪಿಸಬೇಕು."

"ಆ ಶಿವನ ಇಚ್ಛೆಯಂತೆ ಎಲ್ಲವೂ ನಡೆಯುತ್ತಿದೆ, ಮಗಳೇ. ಯೋಚಿಸಬೇಡ, ಹೋಗಿ ಅವರನ್ನು ಕಳುಹಿಸು."

ಅವರ ಆಶೀರ್ವಾದವನ್ನು ಧರಿಸಿ ಹೊರಟಳು ಮಹಾದೇವಿ.

ಓಂಕಾರ – ಲಿಂಗಮ್ಮರನ್ನು, ತಮ್ಮ ಅಭಿಪ್ರಾಯಕ್ಕೆ ಒಪ್ಪಿಸುವುದು ಗುರುಲಿಂಗರಿಗೆ ಕಷ್ಟವೇ ಆಯಿತು. ಅವರು ಹೇಳಿದುದನ್ನು ಕೇಳಿ ಓಂಕಾರ ಆಶ್ಚರ್ಯಗೊಂಡ :

"ಇದೇನು ಗುರುಗಳೇ, ನೀವು ಹೇಳುತ್ತಿರುವುದು ! ಆಕೆಗಂತೂ ಈ ಮದುವೆ ಇಷ್ಟವೇ ಇಲ್ಲ. ನಮ್ಮನ್ನು ಕಷ್ಟದಿಂದ ಪಾರುಮಾಡುವುದಕ್ಕಾಗಿ ಮಾತ್ರ ಆಕೆ ಅರಮನೆಗೆ ಹೋಗಬೇಕೆ ? ಎಲ್ಲಿಯಾದರೂ ಉಂಟೇ? ಸಾಧ್ಯವೇ ಇಲ್ಲ. ಬಂದದ್ದೆಲ್ಲಾ ಬರಲಿ, ಶಿವನ ಕರುಣೆಯೊಂದು ನಮಗಿರಲಿ. ನಮ್ಮ ನಿಷ್ಠೆಯನ್ನು ನಾವು ಬಿಡುವುದಿಲ್ಲ" ಎಂಬುದೇ ಓಂಕಾರನ ನಿರ್ಧಾರದ ಮಾತಾಗಿತ್ತು. ಲಿಂಗಮ್ಮನೂ ಅದಕ್ಕೆ ದನಿಗೂಡಿಸಿದಳು.

ಗುರುಲಿಂಗರು ಅನೇಕ ರೀತಿಯಲ್ಲಿ ಹೇಳಿದರು. ಇದರಿಂದ ಮಹಾದೇವಿಗೇನೂ ಕಷ್ಟವಿಲ್ಲವೆಂಬ ಮಾತನ್ನು ಸ್ಪಷ್ಟಪಡಿಸಿದರು :

"ಆಕೆ ತನ್ನ ಜೀವನವನ್ನು ತಾನು ರೂಪಿಸಿಕೊಳ್ಳಬಲ್ಲಳು. ನೀವೂ, ನಾನೂ ಈ ಘಟನೆಯೂ ಅದಕ್ಕೆ ನಿಮಿತ್ತ ಮಾತ್ರ. ಅಲ್ಲದೆ ಇದರಿಂದ ನೀವು ತಂದೆ ತಾಯಿಗಳಾಗಿ ನಿಮ್ಮ ಕರ್ತವ್ಯದಿಂದ ಚ್ಯುತರಾದಂತೆಯೂ ಆಗುವುದಿಲ್ಲ. ನಿಮ್ಮ ಮಗಳಿಗೆ, ಅವಳ ಜೀವನವನ್ನು ರೂಪಿಸಿಕೊಳ್ಳುವ ಅವಕಾಶವನ್ನು ಕೊಟ್ಟು ಔದಾರ್ಯಕ್ಕೆ ಪಾತ್ರರಾಗುತ್ತೀರಿ. ಇದನ್ನು ಅರಿಯದ ಸಾಮಾನ್ಯ ಜನ ಏನು ಹೇಳಿಕೊಂಡರೇನು ? ಅದನ್ನು ನೀವು ಲಕ್ಷಿಸಬೇಕಾಗಿಲ್ಲ. ಈ ತ್ಯಾಗಕ್ಕೆ ನೀವು ಸಿದ್ಧರಾಗಲೇಬೇಕಾಗುತ್ತದೆ" ಎಂದು ಮುಂತಾಗಿ ಹೇಳಿದ ಗುರುಲಿಂಗರ ಮಾತುಗಳು, ಅವರನ್ನು ಮೂಕರನ್ನಾಗಿ ಮಾಡಿದುವು.

"ನಾವೇನೂ ತಿಳಿಯಲಾರದವರಾಗಿದ್ದೇವೆ, ಗುರುಗಳೇ" ಏನೂ ತೋಚದೆ ಹೇಳಿದರು ಇಬ್ಬರೂ.

"ನಿಜ, ಆ ಶಿವನ ವಿನ್ಯಾಸದ ಹಸ್ತವನ್ನು ನಾವೇನು ತಿಳಿಯಬಲ್ಲೆವು. ಆದುದರಿಂದ ಇನ್ನೊಮ್ಮೆ ಅರಮನೆಯಿಂದ ಕರೆ ಬಂದರೆ ಎಲ್ಲವನ್ನೂ ಮಹಾದೇವಿಯ ಮೇಲೆ ಹಾಕಿಬಿಡಿ. ಶಿವನು ಅವಳ ಮೂಲಕ ಏನನ್ನು ನುಡಿಸುತ್ತಾನೋ ! ನಾವು ಈ ಘಟನಾರಂಗದಲ್ಲಿ ಪ್ರೇಕ್ಷಕರಾಗಿ ನಿಲ್ಲೋಣ. ನೀವು ಈ ಮಾತುಗಳನ್ನು ಅರ್ಥ ಮಾಡಿಕೊಳ್ಳಬಲ್ಲ ದಂಪತಿಗಳೆಂದೇ ಈ ಮಾತುಗಳನ್ನು ಹೇಳುತ್ತಿದ್ದೇನೆ."

ಓಂಕಾರ – ಲಿಂಗಮ್ಮರು ಗುರುಲಿಂಗರ ಮಾತನ್ನು ಮೀರಲಾರದವರಾದರು. ಅವರ ಅಪ್ಪಣೆಯನ್ನು ಪಡೆದು ಮನೆಗೆ ಹಿಂದಿರುಗುವಾಗ ಇದುವರೆಗಿನ ತಮ್ಮ ಮಗಳ ಜೀವನವೆಲ್ಲಾ ಅವರ ಮನಃಪಟಲದ ಮುಂದೆ ಸುಳಿಸುಳಿದು ಮರೆಯಾಗುತ್ತಿತ್ತು.

ಜ

ಸಂಜೆಗೆ ಮುನ್ನವೇ ಮತ್ತೆ ಬಂದಿತು, ವಸಂತಕನ ಸವಾರಿ. ಈ ಬಾರಿ ವಿಶೇಷ ಆಡಂಬರವೇನೂ ಇಲ್ಲದೆ, ಜೊತೆಗೆ ಇನ್ನೊಬ್ಬನನ್ನು ಮಾತ್ರ ಕರೆದುಕೊಂಡು ಬಂದಿಳಿದ ಕುದುರೆಯಿಂದ.

ಬೆಳಿಗ್ಗೆ ತಾನು ಸ್ವಲ್ಪ ದುಡುಕಿದೇನೇನೋ ಎಂದು ಅನಿಸಿತು ಆತನಿಗೆ. ಈ ಬಾರಿ ಇನ್ನೂ ಹೆಚ್ಚು ಚತುರತೆಯಿದ ವರ್ತಿಸಬೇಕೆಂದು ಆಲೋಚಿಸುತ್ತಲೇ ಬಂದಿದ್ದ. ರಾಜನಿಂದ ಇನ್ನೂ ಹೆಚ್ಚಿನ ಅಧಿಕಾರ ಇವನಿಗೆ ಸಿಕ್ಕಿತ್ತು. ನಿಜ. ಯಾವ ಕ್ಷಣ ಬೇಕಾದರೂ ಅವರನ್ನು ಬಂಧಿಸಿ ಕರೆದೊಯ್ಯಬಹುದಾಗಿತ್ತು. ಆದರೆ ಅದರಿಂದ ವಿಶೇಷ ಪ್ರಯೋಜನವಾಗದೆಂದು ಅವನ ಅಭಿಪ್ರಾಯ. ಅದನ್ನು ಕೌಶಿಕನ ಬಳಿಯಲ್ಲಿ ಹೇಳಿಯೂ ಇದ್ದ.

"ಇದು ಮನಸ್ಸನ್ನು ಒಲಿಸಿಕೊಳ್ಳಬೇಕಾದ ಕರ್ತವ್ಯ ರಾಜೇಂದ್ರ. ಅವಳ ತಂದೆತಾಯಿಗಳನ್ನು ಬಂಧಿಸಿದರೆ ಮಹಾದೇವಿಯ ಮನಸ್ಸನ್ನು ಒಲಿಸಿಕೊಂಡಂತಾಯಿತೆ?" ಎಂದು ಕೇಳಿದ್ದ ರಾಜನಿಗೆ.

"ಅದು ನಿಜ, ಆದರೆ ಅವರು ತಮ್ಮ ಹಠವನ್ನೇ ಹಿಡಿದರೆ ಬೇರೆ ಉಪಾಯವೇ ಇಲ್ಲವಲ್ಲ" – ಅಲ್ಲಿ ನಡೆದುದೆಲ್ಲವನ್ನೂ ಕೇಳಿದ ಕೌಶಿಕ ಹೇಳಿದ್ದ.

ನಿರಾಶನಾಗಬೇಡ. ಸಂಜೆ ಮತ್ತೊಮ್ಮೆ ಹೋಗುತ್ತೇನೆ. ಬೆಳಿಗ್ಗೆ ನೀನು ಕಳುಹಿಸಿದ ಕಾಣಿಕೆಗಳನ್ನು ಅಲ್ಲಿಯೇ ಬಿಟ್ಟು ಬಂದಿದ್ದೇನೆ. ಅವೇನೂ ಪರಿಣಾಮ ಮಾಡಲಾರವು. ಸಂಪತ್ತಿನ ಮೇಲಿನ ಆಶೆಯನ್ನು ಮೀರಿನಿಂತ ಭಕ್ತರು ಅವರು. ಈ ಸಂಜೆ ಮತ್ತೆ ಹೋಗಿ ನಿನ್ನ ಪ್ರೇಮದ ಹೃದಯವನ್ನು ವರ್ಣಿಸುತ್ತೇನೆ. ಒಂದು ವೇಳೆ ಅವರು ಏನಾದರೂ ಷರತ್ತುಗಳನ್ನು ಹಾಕಿದರೆ....."

"ಯೋಚಿಸಬೇಡ.... ಅವರು ಏನು ಷರತ್ತು ಹಾಕಿದರೂ ನಾನು ಕೊಡಲು ಸಿದ್ಧನಾಗಿದ್ದೇನೆ. ಬೇಕಾದರೆ ನನ್ನ ರಾಜ್ಯವನ್ನೇ ಅವರಿಗೆ ಧಾರೆ ಎರೆಯುತ್ತೇನೆ."

ರಾಜನ ಆವೇಶದ ಮಾತುಗಳನ್ನು ತಡೆಯುತ್ತಾ ವಸಂತಕ ಹೇಳಿದ :

"ಸಾಕು.... ಸಾಕು. ಅಂತಹ ಸಂದರ್ಭವೇನೂ ಬರಲಾರದು."

"ಒಂದು ವೇಳೆ ಒಳ್ಳೆಯ ಮಾತಿಗೆ ಬಗ್ಗದೇ ಹೋದರೆ ಇದ್ದೇ ಇದೆ, ರಾಜ ದಂಡನೆಯ ಬಲಾತ್ಕಾರ. ಅದಕ್ಕೂ ಸಂಪೂರ್ಣ ಅಧಿಕಾರ ನಿನಗೆ ಕೊಟ್ಟಿದ್ದೇನೆ" ಎಂದಿದ್ದ ಕೌಶಿಕ.

ಎಲ್ಲಕ್ಕಿಂತ ಹೆಚ್ಚಾಗಿ ಕೌಶಿಕ ಪಡುತ್ತಿದ್ದ ಮಾನಸಿಕವಾದ ಸಂಕಟ ವಸಂತಕನನ್ನು ಕಾತರಗೊಳಿಸಿತ್ತು. ಒಂದೇ ಒಂದು ದಿನದ ವಿರಹದುಃಖದ ದುರವಸ್ಥೆಯಿಂದ, ತನ್ನ ಗೆಳೆಯ ಕಾಂತಿಗುಂದಿರುವುದನ್ನು ಕಂಡು ಆ ದುಃಖದಿಂದ ಅವನನ್ನು ಹೇಗಾದರೂ ಉದ್ಧರಿಸಬೇಕೆಂಬ ನಿರ್ಧಾರದಿಂದ ಬಂದಿಳಿದಿದ್ದ ಓಂಕಾರನ ಮನೆಯ ಮುಂದೆ.

ಬಹುಶಃ ಇವನನ್ನು ನಿರೀಕ್ಷಿಸಿಯೇ ಇದ್ದ ಓಂಕಾರನಿಗೆ ಈಗ ಅಂತಹ ಆಶ್ಚರ್ಯವೇನೂ ಆಗಲಿಲ್ಲ. ಅವನನ್ನು ಒಳಗೆ ಸ್ವಾಗತಿಸಿ ಕುಳ್ಳಿರಿಸಿದ.

ವಸಂತಕನಿಗೆ ಆಶ್ಚರ್ಯವೇ ಆಯಿತು; ತಾನು ನಿರೀಕ್ಷಿಸಿದುದಕ್ಕಿಂತ ಹೆಚ್ಚಿನ ಸೌಮ್ಯವಾದ ಸ್ವಾಗತ ದೊರೆಯಿತು. ಬೆಳಿಗ್ಗೆ ಓಂಕಾರನ ಮುಖದ ಮೇಲೆ ಕಂಡ ಕೋಪ ಮತ್ತು ತಿರಸ್ಕಾರಗಳು ಈಗ ಇರಲಿಲ್ಲ. ಸಂತೋಷವೂ ಅಲ್ಲದ ಕೋಪವೂ ಅಲ್ಲದ – ನಿರ್ಲಿಪ್ತ ಭಾವವೊಂದು ಅವನ ಮುಖದ ಮೇಲೆ ಇದ್ದಂತೆ ತೋರಿತು. ಗುರುಗಳು ಹೇಳಿದ ಮಾತು ಅವನ ಕೋಪವನ್ನು ಅದುಮಿಟ್ಟಿದ್ದುವು.

ಹೇಗೆ ಮಾತನ್ನು ಪ್ರಾರಂಭಿಸಬೇಕೆಂದು ವಸಂತಕ ಆಲೋಚಿಸುತ್ತಿದ್ದ. ಓಂಕಾರನೇ ಆ ಕಷ್ಟಗಳನ್ನು ಪರಿಹರಿಸಿದ : "ಏನು ಸ್ವಾಮಿ, ಮತ್ತೆ ದಯಮಾಡಿಸಿದಿರಿ? ರಾಜರು ಏನಾದರೂ ಹೇಳಿದರೋ ?"

"ಆಲೋಚಿಸಿ, ಓಂಕಾರ ಶೆಟ್ಟರೆ ! ನಮ್ಮ ರಾಜರ ಮೇಲೆ ನಿಮ್ಮ ಕರುಣೆಯನ್ನು ಇಂದು ನೀವು ಬೀರಬೇಕಾಗಿದೆ. ರಾಜನೇನಾದರೂ ದುಷ್ಟನೇ? ಕ್ರೂರಿಯೇ?

ಪ್ರಜಾಪೀಡಕನೇ ? ಕ್ಷುದ್ರನೇ ? ಎಂದೂ ಅವನು ತನ್ನ ಪ್ರಜೆಗಳನ್ನು ಹಿಂಸಿಸಿದವನಲ್ಲವೆಂಬುದನ್ನು ನೀವೇ ಬಲ್ಲಿರಿ. ತರುಣನಾದರೂ ವಿವೇಚನಾ ಶಕ್ತಿಯನ್ನುಳ್ಳ ನ್ಯಾಯನಿಷ್ಠುರಪರ. ಅವನೆಂದೂ ಯಾವ ಸ್ತ್ರೀಯನ್ನೂ ಕಾಮುಕ ಕಣ್ಣಿನಿಂದ ನೋಡಿದವನಲ್ಲ. ಇದಾವುದೋ ಬಲವತ್ತರವಾದ ಸಂಬಂಧವೆಂದು ತೋರುತ್ತದೆ. ನೆನ್ನೆಯಿಂದ ಅವನ ಸ್ಥಿತಿ ಹೇಳ ತೀರದಂತಾಗಿದೆ. ಅವನ ಮೇಲಿನ ಕರುಣೆಯಿಂದಲಾದರೂ ನೀವು ಉದಾರವಾಗಿ ವರ್ತಿಸಲಾರಿರಾ ?"

ತಾನು ಆಲೋಚಿಸಿಕೊಂಡು ಬಂದ ಮಾತುಗಳನ್ನೆಲ್ಲಾ ಓಂಕಾರನ ಮುಂದೆ ಹೇಳಿದ. ಓಂಕಾರನೂ ತಾನೇನು ಮಾತನಾಡಬೇಕೆಂಬುದನ್ನು ನಿರ್ಧರಿಯೇ ಇದ್ದ.

"ಸ್ವಾಮಿ, ಈ ವಿಚಾರದಲ್ಲಿ ನಾನು ಸ್ವತಂತ್ರನಲ್ಲ. ಇದು ನನ್ನ ಮಗಳ ಜೀವನವನ್ನು ಕುರಿತ ಪ್ರಶ್ನೆ ; ಈಗ ಆಕೆ ಸ್ವತಂತ್ರವಾಗಿ ಆಲೋಚನೆ ಮಾಡಬಲ್ಲವಳಾಗಿದ್ದಾಳೆ. ಈ ವಿಚಾರದಲ್ಲಿ ನಿರ್ಧಾರವನ್ನು ನಾವು ಮಹಾದೇವಿಗೇ ಬಿಟ್ಟಿದ್ದೇವೆ. ಇದು ನನ್ನ ಹೆಂಡತಿಯ ಅಭಿಪ್ರಾಯವೂ ಹೌದು" ಎನ್ನುತ್ತಾ ಒಳಗೆ ನೋಡಿದ ಓಂಕಾರ.

ಬಾಗಿಲ ಮರೆಯಲ್ಲಿ ನಿಂತಿದ್ದ ಲಿಂಗಮ್ಮ ಮುಂದೆ ಬರುತ್ತಾ, "ಹೌದು ಸ್ವಾಮಿ, ಇದೇ ನನ್ನ ಅಭಿಪ್ರಾಯ. ಮಹಾದೇವಿಯನ್ನೇ ನೀವು ವಿಚಾರಿಸಬಹುದು" ಎನ್ನುತ್ತಾ "ಬಾ ಮಹಾದೇವಿ. ನಿನ್ನ ಅಭಿಪ್ರಾಯವೇನೆಂಬುದನ್ನು ಆಲೋಚನೆ ಮಾಡಿ ಹೇಳು. ಅದರಿಂದ ನಡೆದುಕೊಳ್ಳುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಬಾ ಮುಂದೆ" ಎಂದು ಮಗಳನ್ನು ಕರೆದು ಹೇಳಿದಳು.

ಆ ಮಾತುಗಳನ್ನು ಕೇಳುತ್ತಾ ವಸಂತಕ ತನ್ನ ಕಿವಿಗಳನ್ನು ತಾನೇ ನಂಬಲಾರದವನಂತಾಗಿದ್ದ. ಇಂತಹ ಮಾತುಗಳನ್ನು ಅವನು ಓಂಕಾರನಿಂದ ನಿರೀಕ್ಷಿಸಿರಲಿಲ್ಲ. ಬೆಳಗಿನ ಓಂಕಾರನಿಗೂ ಇವನಿಗೂ ಇರುವ ಅಂತರವನ್ನು ಕಂಡು ಅಚ್ಚರಿಯಿಂದ ಅವನ ಮಾತೇ ಕಟ್ಟಿದಂತಾಯಿತು.

ಲಿಂಗಮ್ಮ ಮಹಾದೇವಿಯನ್ನು ಕರೆದೊಡನೆ, ಬೆಳಗಿನ ಆವೇಶದ ರೂಪರಾಶಿಯಿಂದ ಬಂದ ಚಾವಟಿನಂತಹ ಮಾತುಗಳನ್ನು ನೆನಸಿಕೊಂಡನು. ಈಗೇನು ಕಾದಿದೆಯೋ ತನ್ನ ಪಾಲಿಗೆ ಎಂದು ಯೋಚಿಸುತ್ತಿದ್ದಂತೆಯೇ ಮಹಾದೇವಿ ಹೊರಗೆ ಬಂದಳು.

ಮುಖ ಭಾವಪರವಶವಾದಂತಿತ್ತು. ತಲೆಯ ತುಂಬಾ ಮುಸುಗನ್ನು ಹೊದೆದು ಗಂಭೀರ ಭಾವದಿಂದ ಹೊರಗೆ ಬಂದ ಅವಳ ದಿವ್ಯವಿಗ್ರಹವನ್ನು ಕಂಡು ವಸಂತಕನಿಗೆ ಗೌರವ ಉಕ್ಕಿಬಂತು. ತಾನರಿಯದಂತೆಯೇ ಎದ್ದು ನಿಂತು ನಮಸ್ಕರಿಸಿದ.

''ಕುಳಿತುಕೊಳ್ಳಬೇಕು, ರಾಜಗೆಳೆಯರು. ನಾನೇನು ಆಗಲೇ ಮಹಾರಾಣಿಯಾಗಿ ಹೋದೇನೇ ನೀವು ನಮಸ್ಕರಿಸುವುದಕ್ಕೆ ?''

ಅವಳ ಮಾತನ್ನು ಕೇಳಿ ಆಶ್ಚರ್ಯಗೊಂಡ ; ತಾನು ಬಂದ ಕಾರ್ಯವಾದಂತೆಯೇ ಎಂಬ ಭಾವನೆಯ ಸಂತೋಷದಲ್ಲಿ ಓಲಾಡಿದ.

"ಆ ಪರಮಭಾಗ್ಯವನ್ನು ನೀವು ನಮಗೆ ಕರುಣಿಸಿಕೊಡಬೇಕು ಮಹಾತಾಯಿ. ನಮ್ಮ ರಾಜನನ್ನು ಉಳಿಸಿಕೊಡಬೇಕು. ನೀವು ಒಲಿಯದ ಹೊರತು ಅವರು ಬದುಕಲಾರರೆಂದರೆ ಅದು ಉತ್ಪ್ರೇಕ್ಷೆಯ ಮಾತಲ್ಲ. ಈ ಒಂದೇ ದಿನದಲ್ಲಿ ಅವರ ಸ್ಥಿತಿ ಹಾಗಾಗಿದೆ."

"ರಾಜನೆನಿಸಿಕೊಂಡವರಿಗೆ ಮನಃಸ್ಥೈರ್ಯವಿರಬೇಕಲ್ಲವೇ ? ನಿಮ್ಮ ರಾಜರು ಅಷ್ಟೊಂದು ದುರ್ಬಲಮನಸ್ಸಿನವರೇ ?" ಕೇಳಿದಳು ಮಹಾದೇವಿ.

"ಇಲ್ಲ ತಾಯಿ, ಅವರು ಅಂತಹ ದೌರ್ಬಲ್ಯಕ್ಕೆ ಒಳಗಾಗುವವರಲ್ಲ. ನಾನು ಅವರ ಬಾಲ್ಯಸ್ನೇಹಿತ. ನಾನು ಕಂಡಂತೆ ಇದು ಅವರ ಜೀವನದಲ್ಲಿ ಮೊಟ್ಟ ಮೊದಲನೆಯ ಅನುಭವ" ವಸಂತಕನ ಉತ್ತರ.

"ಹಾಗಾದರೆ ಇದಕ್ಕೆ ನಾನೇ ಕಾರಣವೆಂದು ನೀವು ಹೇಳಿದಂತಾಯಿತಲ್ಲವೆ? ತಪ್ಪೆಲ್ಲಾ ನನ್ನದೇ ಅನ್ನಿ."

ಮಹಾದೇವಿಯ ಪ್ರಶ್ನೆಯಿಂದ ವಸಂತಕ ಕ್ಷಣಕಾಲ ತಬ್ಬಿಬ್ಬಾದ. ಅನಂತರ ಹೇಳಿದ :

"ಹಾಗನ್ನಲಾರೆ. ಇದರಲ್ಲಿ ತಪ್ಪಾರದೂ ಇಲ್ಲ. ಇದಾವುದೋ ಜನ್ಮಾಂತರದ ಸಂಬಂಧವೆಂದು ನನಗೆ ಅನ್ನಿಸುತ್ತದೆ. ಆದುದರಿಂದ ಮಹಾರಾಜರ ಪ್ರೇಮದ ಕೈಯನ್ನು ತಾವು ತಿರಸ್ಕರಿಸಬಾರದು."

"ನಮ್ಮ ಕ್ಷುದ್ರ ಸುಖದ ಆಸೆಯನ್ನು ಜನ್ಮಾಂತರಸಂಬಂಧವೆಂದು ಸಮರ್ಥಿಸಿಕೊಳ್ಳುವುದು ಸುಲಭ. ಒಂದು ವೇಳೆ ಅದೇ ನಿಜವಾಗಿದ್ದರೆ, ನಿಮ್ಮ ರಾಜರು ನನಗೋಸ್ಕರವಾಗಿ ಸ್ವಲ್ಪ ತ್ಯಾಗಮಾಡಲು ಸಿದ್ಧರಾಗಿದ್ದಾರೆಯೇ?" ಮಹಾದೇವಿ ಪ್ರಶ್ನಿಸಿದಳು.

"ಸ್ವಲ್ಪವಲ್ಲ... ಎಂತಹ ಅಪಾರವಾದ ತ್ಯಾಗಕ್ಕೆ ಬೇಕಾದರೂ ಸಿದ್ಧರಾಗಿದ್ದಾರೆ. ತಮಗಾಗಿ ಏನನ್ನು ಬೇಕಾದರೂ ಮಾಡುತ್ತಾರೆ. ರಾಜ್ಯಸಂಪತ್ತನ್ನೆಲ್ಲಾ ಧಾರೆಯೆರೆಯುತ್ತಾರೆ." ಬಂದ ಕಾರ್ಯ ಕೈಗೂಡುತ್ತಿರುವ ಉತ್ಸಾಹದಿಂದ ಹೇಳಿದ ವಸಂತಕ.

"ರಾಜ್ಯದ ಸಂಪತ್ತು ನನಗೆ ಬೇಕಾಗಿಲ್ಲ. ನನ್ನ ತಂದೆತಾಯಿಗಳಿಗಂತೂ ಅದು ಇನ್ನೂ ದೂರ. ಇವರು ಎಂತಹ ಸಂಪತ್ತಿಗೂ ತಮ್ಮ ಮಗಳನ್ನೂ ಮಾರುವವರಲ್ಲ ಎಂಬುದನ್ನು ನೀವು ಅರಿತಿರಬೇಕು. ಆದರೆ ನಾನೇ ಇಂದು ಅವರನ್ನು ಬಿಡುತ್ತಿದ್ದೇನೆ. ನಾನು ಎಂತಹ ತ್ಯಾಗಮಾಡುತ್ತಿದ್ದೇನೆಂಬುದನ್ನು ನೀವು ಅರಿಯಲಾರಿರಿ."

"ಬಲ್ಲೆ ತಾಯಿ." ವಿನಯದಿಂದ ಹೇಳಿದ ವಸಂತಕ.

"ಅದಕ್ಕೆ ಅನುಗುಣವಾದ ತ್ಯಾಗವನ್ನು ನಿಮ್ಮ ರಾಜರೂ ಮಾಡಬೇಕು. ಅವರ ಪ್ರೇಮ ಉದಾತ್ತವಾದುದೇ ಆದರೆ, ನನ್ನ ಮನೋಧರ್ಮಕ್ಕೆ ವಿರುದ್ಧವಾದ ಬಲಾತ್ಕಾರದ ತಪ್ಪುಗಳನ್ನು ಮಾಡವುದಿಲ್ಲವೆಂದು ಭರವಸೆ ಕೊಡಬೇಕು. ನನ್ನ ಸಾಧನೆಗೆ ಅಡ್ಡಿಬರಬಾರದು. ತಾವೂ ಭಕ್ತಿ ಸಾಧನೆಯ ಕಡೆಗೆ ಮನಸ್ಸು ಕೊಡಬೇಕು – ಇದೇ ನನ್ನ ಷರತ್ತು. ಇವುಗಳಿಗೆ ರಾಜರು ಸಮ್ಮತಿಸುವುದಾದರೆ ನಾನು ಅರಮನೆಗೆ ಬರುವುದಕ್ಕೆ ಸಿದ್ಧ." ತನ್ನ ನಿರ್ಧಾರವನ್ನು ಹೇಳಿದಳು.

ಕೊನೆಯ ಮಾತೊಂದು ವಸಂತಕನ ಮನಸ್ಸು ಹೊಕ್ಕು ಉಳಿದುದೆಲ್ಲವನ್ನೂ ಮರೆಸಿತು. ಸಂತೋಷದಿಂದ ಹೇಳಿದ :

"ಧನ್ಯನಾದೆ. ಇದನ್ನೆಲ್ಲಾ ರಾಜರು ಸಂತೋಷದಿಂದ ಒಪ್ಪುತ್ತಾರೆ. ತಮ್ಮ ಔದಾರ್ಯದಿಂದ ನನ್ನನ್ನು ಕೃತಾರ್ಥರನ್ನಾಗಿ ಮಾಡಿದಿರಿ. ರಾಜರನ್ನು ಬದುಕಿಸಿದಿರಿ."

"ಅದಿನ್ನೂ ಮುಂದೆ ನಿರ್ಧಾರವಾಗಬೇಕು. ರಾಜರಿಗೆ ನನ್ನ ಷರತ್ತುಗಳನ್ನು ಹೇಳಿ. ಅದಕ್ಕೆ ಅವರು ಒಪ್ಪುವಂತಿದ್ದರೆ ನನ್ನನ್ನು ಕರೆದೊಯ್ಯಲು ಬರಬಹುದು. ನಾನೂ ಒಮ್ಮೆ ಅದನ್ನು ಅವರ ಬಾಯಿಂದಲೇ ಕೇಳಿ ಸ್ಥಿರಪಡಿಸಿಕೊಳ್ಳುತ್ತೇನೆ."

"ಅಗತ್ಯವಾಗಿ ಆಗಬಹುದು. ಓಂಕಾರ ಶೆಟ್ಟರೇ, ಲಿಂಗಮ್ಮ ತಾಯಿ, ನಿಮ್ಮ ಮಗಳು ನಮ್ಮನ್ನು ಕೃತಾರ್ಥರನ್ನಾಗಿ ಮಾಡಿದ್ದಾರೆ. ಇಂತಹ ಒಡತಿಯನ್ನು ಪಡೆದು ಧನ್ಯರಾಗಿದ್ದೇವೆ" ಎಂದು ಮಹಾದೇವಿಯನ್ನು ಕುರಿತು, "ಹಾಗಾದರೆ ಬೆಳಿಗ್ಗೆ ಬಂದು ತಮ್ಮ ದರ್ಶನವನ್ನು ಪಡೆಯುತ್ತೇನೆ" ಎಂದು ನಮಸ್ಕರಿಸಿ ಬೀಳ್ಕೊಂಡ.

ಓಂಕಾರಶೆಟ್ಟಿ, ಲಿಂಗಮ್ಮ ತಮ್ಮ ಮಗಳ ವರ್ತನೆಯನ್ನೂ ಮಾತುಕತೆಗಳನ್ನೂ ದಿಗ್ಭ್ರಮೆಗೊಂಡು ನೋಡುತ್ತಿದ್ದರು. ವಸಂತಕ ಹೋದಮೇಲೂ ಕ್ಷಣಕಾಲ ಹಾಗೇ ನಿಂತಿದ್ದರು ಮೂಕರಂತೆ. ಮಹಾದೇವಿಗೆ ಅವರ ಮನಸ್ಸು ಅರ್ಥವಾಗಿತ್ತು. ನಿಸ್ಸಹಾಯಕಳೆಂಬಂತೆ ಅವರತ್ತ ನೋಡುತ್ತಿದ್ದಳು.

"ಇದೇನು ಮಗಳೇ !" ಉದ್ಗರಿಸಿದಳು ಲಿಂಗಮ್ಮ.

"ಇನ್ನೇನು ಮಾಡಲವ್ವ ? ಇದೊಂದೇ ನನ್ನ ಮುಂದಿದ್ದ ಮಾರ್ಗ." ಮಹಾದೇವಿ ಹೇಳಿದಳು.

"ನಮಗೆ ಎಂತಹ ಧರ್ಮಸಂಕಟವನ್ನು ತಂದಿಟ್ಟೆ ಮಗಳೇ" ಓಂಕಾರನ ಧ್ವನಿ ದುಃಖದಿಂದ ಕೂಡಿತ್ತು.

"ಇಲ್ಲ, ಅಪ್ಪಾ... ಧರ್ಮಸಂಕಟದಿಂದ ಪಾರುಮಾಡಿದ್ದೇನೆ. ನೀವು ನಿಶ್ಚಿಂತರಾಗಿರಿ. ಇದನ್ನು ಎದುರಿಸುವ ಸಂಪೂರ್ಣ ಸ್ವಾತಂತ್ರ್ಯವನ್ನು ನನಗೆ ಕೊಡಿ."

ರಾತ್ರಿಯೆಲ್ಲಾ ತಂದೆತಾಯಿಗಳನ್ನು ಸಮಾಧಾನಪಡಿಸುವುದರಲ್ಲಿಯೇ ಕಳೆದಳು ಮಹಾದೇವಿ. ಎಷ್ಟು ಹೇಳಿದರೂ ಅವರ ಮನಸ್ಸಿಗೆ ಸಮಾಧಾನವಾಗುತ್ತಿರಲಿಲ್ಲ.

"ನೀನು ಹೀಗೆ ಅರಮನೆಗೆ ಹೋಗುವುದು ಯುಕ್ತವಲ್ಲ, ಮಗಳೇ. ಇದು ವ್ಯವಹಾರವೂ ಅಲ್ಲ. ನೀನು ಮದುವೆಯಾಗದವಳು. ಹೀಗೆ ಒಬ್ಬಳೇ ಅರಮನೆಗೆ ಹೋಗುವುದು ಒಳ್ಳೆಯದೇ? ನಾಳೆ ಪ್ರಪಂಚವೇನೆಂದೀತು ?" ಎನ್ನುವನು ಓಂಕಾರ.

ಲಿಂಗಮ್ಮನೂ ಹಟ ಹಿಡಿದವಳಂತೆ ಅಳಲು ತೊಡಗಿದಳು, ಮಹಾದೇವಿ ಅರಮನೆಗೆ ಹೋಗಕೂಡದೆಂದು. ಮಹಾದೇವಿ ಗುರುಲಿಂಗರು ಹೇಳಿದ ಮಾತುಗಳನ್ನೆಲ್ಲಾ ಮತ್ತೊಮ್ಮೆ ಹೇಳಬೇಕಾಯಿತು. ಕೊನೆಗೆ ನಿಷ್ಠುರವಾಗಿ ಹೇಳಿದಳು:

"ನಿಮಗೆ ನನ್ನ ನಡೆತೆಯ ಮೇಲೆ, ನನ್ನ ನಿಷ್ಠೆಯ ಮೇಲೆ ನಂಬಿಕೆಯಿದ್ದರೆ, ಕೊನೆಗೆ ನನ್ನ ಹಿತದ ಮೇಲೆ ದೃಷ್ಟಿಯಿದ್ದರೆ, ನೀವು ಇದಕ್ಕೆ ಅಡ್ಡಿಬರಕೂಡದು. ನಿಮಗೆ ಕೆಟ್ಟ ಹೆಸರನ್ನು ನಾನು ಖಂಡಿತ ತರುವುದಿಲ್ಲ." ಮಗಳ ದೃಢನಿರ್ಧಾರದ ಮಾತು ಅವರನ್ನು ಮೌನವನ್ನಾಗಿಸಿತು. ಗುರುಲಿಂಗರು ಹೇಳಿದ ಮಾತುಗಳು ಸುಳಿದವು.

'ಈಕೆ ನಮ್ಮ ಮಗಳೆಂಬುದು ನೆಪಮಾತ್ರಕ್ಕೆ. ಅದಾವ ಶಕ್ತಿಯ ಸಾಧನೆಗಾಗಿ ಇವಳ ಜನನವಾಗಿದೆಯೋ....' ಎಂಬ ಭಾವನೆ ಅವರ ಮನಸ್ಸಿನಲಿ ಸುಳಿಯಿತು.

ಓಂಕಾರ ಭಾರವಾದ ಹೃದಯದಿಂದ ಮಹಡಿಯನ್ನೇರಿದ, ಮಲಗುವುದಕ್ಕಾಗಿ. ಲಿಂಗಮ್ಮ – ಮಹಾದೇವಿಯರು ದೇವರ ಮನೆಯ ಪಕ್ಕದಲ್ಲಿದ್ದ ಮಲಗುವ ಕೋಣೆಗೆ ತೆರಳಿದರು. ಮನೆಯ ಕೆಲಸಗಾರರು, ಆಳುಕಾಳುಗಳು ಆಗಲೇ ನಿದ್ರಾಲೋಕದಲ್ಲಿದ್ದರು.

ಮಹಾದೇವಿ ತಂದೆತಾಯಿಗಳನ್ನೇನೋ ಸಮಾಧಾನಗೊಳಿಸಲು ಪ್ರಯತ್ನಿಸಿದಳು. ಆದರೆ ಅವಳ ಮನಸ್ಸಿನ ತಳಮಳ ಅವಳಿಗೇ ಗೊತ್ತು. ನಾಳೆ ನಡೆಯಬಹುದಾದ ಘಟನೆಗಳನ್ನು ಯೋಚಿಸುತ್ತಾ ಅತ್ತ ಇತ್ತ ಹೊರಳಾಡುತ್ತಿದ್ದಳು. ಹಾಸಿಗೆಯ ಮೇಲೆ ಕಣ್ಣು ಮುಚ್ಚಿದರೆ ಸಾಕು, ನೂರಾರು ಆಲೋಚನೆಯ ರೂಪಗಳು ಮುಂದೆ ಬಂದು ನಿಲ್ಲುತ್ತಿದ್ದವು.

'ಕೌಶಿಕನನ್ನು ಹೇಗೆ ಎದುರಿಸುವುದು ? ಮದುವೆಯಾಗದ ನಾನು ಅವನ ಅರಮನೆಯಲ್ಲಿರುವುದು ಸಾಧ್ಯವೇ ? ನನ್ನ ನಿಯಮಗಳಿಗೆ ಅವನು ಒಪ್ಪಬಹುದೇ? ಒಪ್ಪಿದರೆ ಮದುವೆಯಾಗುವುದೇ ಆತನನ್ನು ?' ಎಂದು. ಅವಳ ಆಲೋಚನಾಸರಣಿ ಹರಿಯುವುದು ಮತ್ತೆ :

'ಛೆ... ನನ್ನ ನಿಯಮಗಳಿಗೆ ಅವನು ಒಪ್ಪುವುದಾದರೆ ಮದುವೆಯ ಅವಶ್ಯಕತೆಯೇ ಇಲ್ಲ. ಅಂತಹವು ನನ್ನ ನಿಯಮಗಳು. ಆದರೆ ಭಾವಾವೇಶದ ಆವೇಗದಲ್ಲಿ ಅವುಗಳನ್ನು ಅಷ್ಟಾಗಿ ವಿಚಾರಿಸದೆ, ಒಪ್ಪಿಗೆ ಕೊಡುವ ಸಂಭವವುಂಟು. ಆದರೆ ಮಾತುಕೊಟ್ಟನಂತರ ಅವುಗಳನ್ನು ಕೊನೆಯವರೆಗೂ ಉಳಿಸಿಕೊಳ್ಳುವನೇ? ನನ್ನಿಂದ ದೈಹಿಕ ಸುಖವನ್ನು ಬಯಸುವುದನ್ನೇ ಬಿಡುವನೇ ?... ಅದು ಹೇಗೆ ಸಾಧ್ಯ? ದೈಹಿಕ ಸುಖಕ್ಕಾಗಿಯೇ ಅಲ್ಲವೇ ಆತ ನನ್ನನ್ನು ಬಯಸುತ್ತಿರುವುದು ? ಹಾಗಿದ್ದರೂ ಅವನ ಅರಮನೆಗೆ ಹೋಗಿ ಅದಕ್ಕೆ ಒಳಗಾಗದೆ ಇರಬಲ್ಲೆನೇ?....'

ಯೋಚಿಸುತ್ತಾ ಹೋದಂತೆ ಯೋಚನೆಯ ದಿಕ್ಕು ಕೊನೆಯನ್ನು ಮುಟ್ಟಿ ಮುಂದೆ ಹೋಗಲಾರದೆ ನಿಲ್ಲುತ್ತಿತ್ತು.

'ಹಾಗಾದರೆ ಅರಮನೆಗೆ ಹೋಗುವುದು ಬೇಡವೇ ?' ಎಂದು ಹೊರಟಲ್ಲಿಗೆ ಮತ್ತೆ ಬರುತ್ತಿತ್ತು.

ಕೊನೆಗೆ ಒಂದು ನಿರ್ಧಾರಕ್ಕೆ ಬಂದಳು :

'ಯೋಚಿಸಿದಷ್ಟೂ ಸಮಸ್ಯೆಗಳೇ ಹೆಚ್ಚು. ಆಲೋಚನೆಯಿಂದ ಬಿಡಿಸಲಾಗದ ಸಮಸ್ಯೆಯಿದು. ಎದುರಿಸಿ ಮೆಟ್ಟಿ ಮೇಲೇರಿಯೇ ಬಿಡಿಸಿಕೊಳ್ಳಬೇಕಾದುದು. ಆದುದರಿಂದ ಈಗಂತೂ ಅರಮನೆಗೆ ಹೋಗುತ್ತೇನೆ. ಅಲ್ಲಿಯೂ ಬಹುಕಾಲ ಇರಲಾರೆನೆಂಬಂತೆ ತೋರುತ್ತದೆ. ಮುಂದೆ ನನ್ನ ಪತಿ ಚೆನ್ನಮಲ್ಲಿಕಾರ್ಜುನ

ಹೇಗೆ ನಡೆಸುತ್ತಾನೋ ಹಾಗೆ ನಡೆಯುತ್ತೇನೆ. ನಾನು ಅನಾಥೆಯಲ್ಲ ; ನನ್ನ ಪತಿ ಬಳಿಯಲ್ಲಿಯೇ ಇರುವಾಗ ನನಗಾರ ಹೆದರಿಕೆ ?'

ಈ ಭಾವ ಅವಳಿಗೆ ಧೈರ್ಯವನ್ನು ಕೊಟ್ಟಿತು. ಹಾಸಿಗೆಯಿಂದ ಮೇಲೆ ಎದ್ದು ಕುಳಿತಳು. ಲಿಂಗಮ್ಮ ಮಲಗಿದ್ದು ಕತ್ತಲಲ್ಲಿ ಅಸ್ಪಷ್ಟವಾಗಿ ಕಾಣುತ್ತಿತ್ತು.

'ಈ ಹುಟ್ಟಿದ ಮನೆಯನ್ನೂ, ವಾತ್ಸಲ್ಯಮಯರಾದ ತಂದೆತಾಯಿಗಳನ್ನೂ ಬಿಟ್ಟು ನಾಳೆ ಹೋಗುತ್ತೇನೆ, ಮತ್ತೆ ಬರುತ್ತೇನೋ ಇಲ್ಲವೋ."

ಈ ಆಲೋಚನೆ ಅವಳನ್ನು ಅಲುಗಿಸಿತು.

'ಮತ್ತೇಕೆ ಬರುವುದಿಲ್ಲ ! ಎಲ್ಲಿ ಹೋಗುತ್ತೀ?' ಅದಕ್ಕೆ ಅವಳ ಬಳಿಯಲ್ಲಿ ಉತ್ತರವಿರಲಿಲ್ಲ.

"ಏನೋ ಯಾವುದನ್ನೂ ನಾನು ಅರಿಯೆ. ನೀನೇ ಮಾರ್ಗದರ್ಶಕನಾಗು" ಎಂದು ತನ್ನ ಪತಿಯನ್ನೇ ಮರೆಹೊಕ್ಕು ಧ್ಯಾನಾಸಕ್ತಳಾಗಿ ಕುಳಿತು ಕಣ್ಣು ಮುಚ್ಚಿದಳು.

ಹೊರಗೆ ಕತ್ತಲೆ ಕವಿದಿತ್ತು. ಮಹಾದೇವಿಯ ಅಂತರಂಗವೂ ಬೆಳಕಿಗಾಗಿ ಹಂಬಲಿಸುತ್ತಿತ್ತು. ಅದೆಷ್ಟು ಕಾಲ ಧ್ಯಾನಾಶಕ್ತಳಾಗಿದ್ದಳೋ, ಅದಾವಾಗ ಮಲಗಿದಳೋ ಅವಳಿಗೇ ತಿಳಿಯದಾಗಿತ್ತು.

## ೬

ಬೆಳಿಗ್ಗೆ ವಸಂತಕ ರಾಜಪರಿವಾರದೊಡನೆ ಬಂದಾಗ ಮಹಾದೇವಿ ಇನ್ನೂ ಪೂಜೆಯಲ್ಲಿ ತೊಡಗಿದ್ದಳು. ಓಂಕಾರ ಅವನನ್ನು ಬರಮಾಡಿಕೊಂಡು ಕುಳ್ಳಿರಿಸಿದ. ಅವನ ಜೊತೆಯಲ್ಲಿ ಬಂದ ಅಂತಃಪುರ ಸ್ತ್ರೀಯರನ್ನು ಲಿಂಗಮ್ಮ ಒಳಗೆ ಕರೆಯಲೇ ಬೇಕಾಯಿತು. ಆ ದಂಪತಿಗಳ ಮನಸ್ಸು ಇಂದು ಅನೇಕ ಭಾವಗಳ ತುಮುಲ ರಂಗವಾಗಿತ್ತು. ಯಾಂತ್ರಿಕವಾಗಿ ಕರ್ತವ್ಯವನ್ನು ಮಾಡುತ್ತಿದ್ದಂತೆ ತೋರುತ್ತಿತ್ತು.

ಇತ್ತ ಮಹಾದೇವಿ ಪೂಜೆಯಲ್ಲಿ ನಿರತಳಾಗಿದ್ದರೂ ಅವಳ ಮನಸ್ಸು ಗಾಳಿಗೊಡ್ಡಿದ ದೀಪದಂತೆ ಹರಿದಾಡುತ್ತಿತ್ತು. ಇದು ತಾನು ಕೈಗೊಂಡಿರುವ ನಿರ್ಧಾರದ ಆಗುಹೋಗುಗಳನ್ನು, ಮನಸ್ಸು ಬೇಡವೆಂದರೂ ಮತ್ತೆ ಆಲೋಚಿಸುತ್ತಿತ್ತು.

'ಅರಮನೆಯ ಅಗ್ನಿಪರೀಕ್ಷೆಗೆ ನಾನು ಗುರಿಯಾಗುತ್ತಿದ್ದೇನೆ. ನನ್ನ ಸೌಂದರ್ಯವನ್ನೇ ಬಯಸಿ ಬಂದ ಕೌಶಿಕನ ಬಳಿಗೆ, ಹೀಗೆ ನಾನು ಹೋಗುತ್ತಿರುವುದು ಲೋಕದ ಕಣ್ಣಿಗೆ ಹೇಗೆ ಕಾಣಬಹುದು! ಮದುವೆಯಾಗದ ನಾನು ಅವನ

ಅರಮನೆಗೆ ಹೋಗಿ ಏನು ಮಾಡುವುದು, ಹೇಗೆ ವರ್ತಿಸುವುದು ?'

'ಈ ಸಂಸಾರ ಬೇಡಬೇಡವೆಂದರೂ ಇದು ಮತ್ತೆ ಮತ್ತೆ ನನ್ನನ್ನು ಬೆನ್ನಟ್ಟಿ ಬಂದು ಕಾಡುತ್ತಿದೆ. ನನ್ನ ಒಡೆಯ ಚೆನ್ನಮಲ್ಲಿಕಾರ್ಜುನನನ್ನು ದೂರದೂರ ಮಾಡುತ್ತಿದೆ :

ಸಂಸಾರವೆಂಬ ಹಗೆಯಯ್ಯ ತಂದೆ !
ಎನ್ನ ವಂಶ ವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯ !
ಎನ್ನುವನರಸಿಯಸಿ ಹಿಡಿದು ಕೊಲ್ಲುತ್ತಿದೆಯಯ್ಯ !
ನಿಮ್ಮ ಮರೆವೊಕ್ಕೆ ಕಾಯಯ್ಯ !
ಎನ್ನಬಿನ್ನಪವನವಧಾರು, ಚೆನ್ನಮಲ್ಲಿಕಾರ್ಜುನಾ.

'ನನ್ನನ್ನು ಸಂಪೂರ್ಣವಾಗಿ ನಿನಗೆ ಒಪ್ಪಿಸಿಕೊಂಡಿದ್ದೇನೆ. ನನ್ನನ್ನು ಕೊಲ್ಲು ಅಥವಾ ಕಾಯಿ, ಅದು ನಿನಗೇ ಸೇರಿದ್ದು. ಬಸವಣ್ಣನವರು ಹೇಳುವಂತೆ ನೀನೊಲಿದರೆ ಕೊರಡು ಕೊನರುತ್ತದೆ. ನೀನೊಲಿದರೆ ಬರಡು ಹಯನಾಗುತ್ತದೆ. ನೀನೊಲಿದರೆ ವಿಷವೆಲ್ಲ ಅಮೃತತ್ವದ ಕಡೆಗೆ ಕೊಂಡೊಯ್ಯುವ ಹೊಣೆ ನನ್ನ ಪತಿಯಾದ ನಿನ್ನದು. ಅದನ್ನು ನಂಬಿ ಲೋಕ ವಿರುದ್ಧವಾದ ಈ ವರ್ತನೆಯಲ್ಲಿ ತೊಡಗಿದ್ದೇನೆ. ಇದರಿಂದ ನನ್ನನ್ನು ಪಾರುಮಾಡು, ದೇವ' ಎಂದು ತನ್ನ ಪತಿಗೆ ಸಂಪೂರ್ಣವಾಗಿ ಶರಣಾಗತಳಾದಳು ಶರಣಸತಿ ಮಹಾದೇವಿ.

ತಂದೆತಾಯಿಗಳಿಂದ ಬೀಳ್ಕೊಂಡು ಮೇನೆಯಲ್ಲಿ ಕುಳಿತು ಕೊಳ್ಳುವಾಗಲಂತೂ, ಅದುವರೆಗೆ ತಡೆದಿದ್ದ ದುಃಖ ಉಕ್ಕಿಬಂತು. ಓಂಕಾರ ತನ್ನ ಹೃದಯದ ತಳಮಳವನ್ನು ಅಡಗಿಸಿಕೊಂಡು ಗಂಭೀರನಾಗಿ ನಿಂತಿದ್ದ. ಆದರೆ ಲಿಂಗಮ್ಮನ ದುಃಖ ತಡೆಯಲಾರದುದಾಗಿತ್ತು. ಮಹಾದೇವಿ ತನ್ನ ದುಃಖವನ್ನು ಅಡಗಿಸಿಕೊಂಡು ತಾಯಿಯನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದಳು.

"ಸಮಾಧಾನ ಮಾಡಿಕೋ ಅವ್ವಾ, ನಾನೆಲ್ಲಿ ಹೋಗುತ್ತೇನೆ. ಒಂದಲ್ಲ ಒಂದು ದಿನ ನನ್ನನ್ನು ಹೀಗೆ ಗಂಡನ ಮನೆಗೆ ಕಳುಹಿಸಿಕೊಡಲೇಬೇಕಾಗಿತ್ತು ತಾನೇ. ಹಾಗೇ ಎಂದು ಭಾವಿಸಿ ಸಮಾಧಾನ ಮಾಡಿಕೊಳ್ಳಿ."

"ಹಾಗಲ್ಲ ಮಗಳೇ... ನೀನು ಗಂಡನ ಮನೆಗೆ ಹೋಗುತ್ತಿದ್ದರೆ, ಆ ದುಃಖದಲ್ಲಿ ಒಂದು ಸಮಾಧಾನವಾದರೂ ಇರುತ್ತಿತ್ತು. ಆದರೆ... ಆ ಅರಮನೆಯಲ್ಲಿ ನಿನ್ನ ಗತಿಯೇನು ? ನೋಡಿದ ಜನರೇನೆಂದಾರು ? ಇದು ಲೋಕವಿರುದ್ಧವಾದ ನಡೆಯಲ್ಲವೇ?" ಲಿಂಗಮ್ಮನ ದುಃಖದಲ್ಲಿ ಮಗಳ ಗೌರವದ ರಕ್ಷಣೆಯ ವೇದನೆಯಿತ್ತು.

ಮಹಾದೇವಿಗೆ ಮಾತು ಚುಚ್ಚಿತು.

"ನಿಮ್ಮ ಮಗಳು ಲೋಕಕ್ಕೆ ವಿರುದ್ಧವಾದ ಮನೋಧರ್ಮವನ್ನುಳ್ಳವಳು ಎಂದು ಲೋಕ ಇಂದಲ್ಲದಿದ್ದರೆ ನಾಳೆ ಕಂಡುಕೊಂಡೀತು. ಅದಕ್ಕಾಗಿ ದುಃಕಿಸಬೇಡ, ಅಪ್ಪಾ. ನಿಮ್ಮ ಗೌರವಕ್ಕೆ ಕುಂದು ಬರದ ಹಾಗೆ ವರ್ತಿಸುತ್ತೇನೆ. ಇನ್ನು ನಾನು ಬರುತ್ತೇನೆ" ಎಂದು ತಂದೆತಾಯಿಗಳಿಬ್ಬರಿಗೂ ನಮಸ್ಕರಿಸಿದಳು. ಮತ್ತೆ ಹೇಳಿದಳು:

"ನನ್ನನ್ನು ನೋಡಲು ಅರಮನೆಗೆ ಬನ್ನಿ ಎಂದು ಹೇಗೆ ನಿಮ್ಮನ್ನು ಕರೆಯಲಿ ? ನಿಮಗೆ ತಕ್ಕ ಮಗಳಾಗುವಂತೆ ಆಶೀರ್ವದಿಸಿ" ಎನ್ನುತ್ತಿದ್ದಂತೆಯೇ ಅವಳ ಕಣ್ಣಿನಿಂದ ನೀರು ಉಕ್ಕಿಬಂದಿತು. ತನಗಾಗಿ ಕಾಯುತ್ತಿದ್ದ ಮೇನೆಯನ್ನು ಪ್ರವೇಶಿಸಿ ಕುಳಿತಳು. ಮೇನೆಯ ಬಾಗಿಲು ಮುಚ್ಚಿತು. ಬೋಯಿಗಳು ಹೊತ್ತರು ಮೇನೆಯನ್ನು.

ತಮ್ಮ ಕರುಳಿನ ಕುಡಿಯೇ ಕಿತ್ತು ಹೋಗುತ್ತಿರುವಂತೆ ಅಶ್ರು ತುಂಬಿದ ಕಣ್ಣುಗಳಿಂದ ಓಂಕಾರ–ಲಿಂಗಮ್ಮ ನಿಸ್ಸಹಾಯಕರಾಗಿ ಅತ್ತಲೇ ನೋಡುತ್ತಿದ್ದರು.

ಓಂಕಾರನ ಮನೆಯ ಮುಂದೆ ಸೇರಿದ ನೆರವಿಯೂ ಈ ದುಃಖದಲ್ಲಿ ಭಾಗಿಯಾಗಿತ್ತು.

ಈ ಸಾತ್ವಿಕ ದಂಪತಿಗಳಿಗೆ ಬಂದ ಅನಿರೀಕ್ಷಿತ ದುಃಖವನ್ನು ಕಂಡು ಕೆಲವರಿಗೆ ನಿಜವಾಗಿಯೂ ಸಂತಾಪವಾಗಿದ್ದರೆ, ಇನ್ನು ಕೆಲವರಿಗೆ ಈ ತಮಾಷೆಯನ್ನು ನೋಡುವುದರಲ್ಲಿ ಸಂತೋಷವೇ ಇತ್ತು. ಅವರಿಗೆ ಅನುಕಂಪವನ್ನು ತೋರಿಸುವ ನೆವದಿಂದ ಸಮಾಧಾನವನ್ನು ಪಡೆಯುತ್ತಿದ್ದರು.

ಬಂಗಾರಮ್ಮ – ನಂಜಮ್ಮ ಇವರು ಲಿಂಗಮ್ಮನ ಬಳಿಗೆ ಬಂದಿದ್ದ ಉದ್ದೇಶವಾದರೂ ಅದೇ. ವಿಷಯ ತಿಳಿದೊಡನೆ ತಮ್ಮ ಮನೆಯ ಕೆಲಸವನ್ನೆಲ್ಲಾ ಬಿಟ್ಟು ಬಂದಿದ್ದರು ಬಾಯಿಚಪಲ ತೀರಿಸಿಕೊಳ್ಳುವುದಕ್ಕಾಗಿ. ಮನೆಗೆ ಬಂದವರೆಂಬ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಲಿಂಗಮ್ಮ ಅವರೊಡನೆ ಮಾತನಾಡಿ ಕಳುಹಿಸದೇ ವಿಧಿಯಿಲ್ಲವಾಗಿತ್ತು.

"ನೀ ಏನೇ ಹೇಳು ಲಿಂಗಮ್ಮ, ಮಹಾದೇವಿಯನ್ನು ಹಾಗೆ ಕಳುಹಿಸಬಾರದಾಗಿತ್ತು." ಉಪದೇಶ ಮಾಡಿದಳು ಬಂಗಾರಮ್ಮ.

'ಮಗಳಿಗೆ ನೀವು ಕೊಟ್ಟ ಸ್ವಾತಂತ್ರ್ಯ ಅತಿಯಾಯಿತು. ಅದೇ ಇದಕ್ಕೆಲ್ಲಾ ಕಾರಣ. ಈ ಮೊದಲೇ ಮದುವೆ ಅಂತ ಒಂದು ಮಾಡಿಬಿಟ್ಟಿದ್ದರೆ, ಇದಕ್ಕೆಲ್ಲಾ ಆಸ್ಪದವೇ ಇರಲಿಲ್ಲ.' ಇವರನ್ನೇ ಅಪರಾಧಿಗಳನ್ನಾಗಿ ಮಾಡಿ ಚುಚ್ಚಿದಳು ನಂಜಮ್ಮ.

ಇವರು ಈ ವಿಷಯವನ್ನೆತ್ತಿ ತಮ್ಮನ್ನು ಹಂಗಿಸುವುದಕ್ಕಾಗಿಯೇ ಬಂದವರೆಂದು ಲಿಂಗಮ್ಮನಿಗೆ ತಿಳಿಯದೇ ಇರಲಿಲ್ಲ. ಆದರೆ ಅದನ್ನು ತಪ್ಪಿಸಲು ಆ ಸಾತ್ವಿಕ ಗೃಹಿಣಿ ಅಶಕ್ತಳಾಗಿದ್ದಳು.

ಮತ್ತೆ ಹೇಳಿದರು ಬಂಗಾರಮ್ಮ : "ಆದರೂ.... ಆ ಮದುವೆಯಾಗದ ಮಗಳನ್ನು ಹೀಗೆ ರಾಜನಿಗೆ ಒಪ್ಪಿಸಲು ನಿಮಗೆ ಮನಸ್ಸು ಹೇಗೆ ಬಂತಮ್ಮ ! ರಾಜನಿಗೆ ಅಷ್ಟೊಂದು ಹೆದರಿಬಿಟ್ಟಿರಾ?"

ಲಿಂಗಮ್ಮನ ರಕ್ತ ಕುದಿಯಿತು ಕೋಪದಿಂದ. ಆದರೆ ಕೋಪಿಸಿಕೊಳ್ಳುವುದು ವ್ಯರ್ಥವೆಂಬುದನ್ನು ಮರುಕ್ಷಣವೇ ಅರಿತಳು. ಅನ್ನುವವರಿಗೆ ಆಡಿಕೊಳ್ಳುವವರಿಗೆ ಇಂತಹ ಒಂದು ಅವಕಾಶ ಸಿಕ್ಕಿದಂತಾಗಿತ್ತು. ಈ ಘಟನೆಯಿಂದ.

ಪಕ್ಕದಲ್ಲಿದ್ದ ಕಲ್ಯಾಣಮ್ಮನಿಗೆ ಇದನ್ನು ಸಹಿಸಲು ಆಗಲಿಲ್ಲ. ಅಸಹನೆಯಿಂದ ಕೇಳಿದಳು :

"ಬಂಗಾರಮ್ಮನವರೇ, ನಂಜಮ್ಮನವರೇ, ಈಗ ಅವರು ಪಡುತ್ತಿರುವ ದುಃಖವೇ ಸಾಕಾಗಿದೆ. ನೀವು ಅದರ ಮೇಲೆ ಮತ್ತೆ ಮತ್ತೆ ಮೆಣಸು ಅರೆಯುವುದು ಬೇಕಾಗಿಲ್ಲ. ಈಗ ನಾವು ಏನು ಹೇಳಿದರೂ ಅವರ ದುಃಖವೇ ಹೆಚ್ಚುತ್ತದೆ. ಏಳಿ ಹೋಗೋಣ" ಎಂದು ತನ್ನನ್ನೂ ಜೊತೆಯಲ್ಲಿ ಸೇರಿಸಿಕೊಂಡಳು ಕಲ್ಯಾಣಮ್ಮ.

ಅನ್ಯರ ನಿಂದೆಯೇ ಅನ್ನಾಹಾರಗಳಂತೆ ಇದ್ದ ಅವರಿಗೆ ಈಗಾಗಲೇ ಸ್ವಲ್ಪ ಆಹಾರ ಸಿಕ್ಕಿದುದರಿಂದ ಕಲ್ಯಾಣಮ್ಮನ ಮಾತಿಗೆ ಬೆಲೆಕೊಟ್ಟು ಎದ್ದರು.

"ಇನ್ನೂ ಎಂತೆಂತಹ ಮಾತುಗಳನ್ನು ಕೇಳಬೇಕಾಗಿದೆಯೋ ಈ ಘಟನೆಯಿಂದ" ಎಂದುಕೊಂಡಳು ಲಿಂಗಮ್ಮ.

ಇತ್ತ ಮಹಾದೇವಿಯು ಕುಳಿತ ಮೇನೆ ಅರಮನೆಯನ್ನು ಸಮೀಪಿಸುತ್ತಿತ್ತು. ವಸಂತಕನಾಗಲೇ ಕುದುರೆಯನ್ನು ಮುಂದೆ ಓಡಿಸಿ, ಅರಮನೆಯ ಮುಂದೆ ಮಹಾದೇವಿಯನ್ನು ಎದುರುಗೊಳ್ಳಲು ಸಿದ್ಧನಾಗಿದ್ದ. ಮಂತ್ರಿಗಳೇ ಮೊದಲಾದ ಪ್ರಮುಖರೆಲ್ಲರೂ ತಮ್ಮ ಭಾವೀ ಮಹಾರಾಣಿಯನ್ನು ಸ್ವಾಗತಿಸಲು ಕಾದು ನಿಂತಿದ್ದರು.

ಮೇನೆ ನಿಂತಿತು ; ಕೆಳಗಿಳಿಯಿತು. ಜೊತೆಯಲ್ಲಿಯೇ ನಡೆದು ಬರುತ್ತಿದ್ದ ಅಂತಃಪುರದ ಸ್ತ್ರೀಯರಲ್ಲಿ ಇಬ್ಬರು ಬಂದು ಮೇನೆಯ ಬಾಗಿಲನ್ನು ತೆರೆದರು. ಮಹಾದೇವಿ ಹೊರಗೆ ಬಂದಳು.

ಅವಳು ಹೊರಗೆ ಕಾಲಿಡುತ್ತಿದ್ದಂತೆಯೇ, ನಡೆಮಡಿಯನ್ನು ಹಾಸಿಕೊಂಡು ಹೋಗುವುದಕ್ಕಾಗಿ ನೇಮಕವಾಗಿದ್ದ ಸೇವಕರು ಸಿದ್ಧವಾಗಿದ್ದರು. ಅವರು ತಮ್ಮ

ಕಾರ್ಯದಲ್ಲಿ ತತ್ಪರರಾಗಿದ್ದರು. ಕೆಂಪು ನಡೆಮಡಿ, ಮೆಟ್ಟಲುಗಳನ್ನು ಏರಿ ಅರಮನೆಯನ್ನು ಪ್ರವೇಶಿಸಿತ್ತು. ಇಕ್ಕೆಲಗಳಲ್ಲೂ ನಿಂತ ದಾಸಿಯರು ಹೂವುಗಳನ್ನು ಎರಚುತ್ತಾ ಮಹಾದೇವಿಯನ್ನು ಸ್ವಾಗತಿಸುತ್ತಿದ್ದರು. ಮಂತ್ರಿ ಮೊದಲಾದ ಅಧಿಕಾರಿಗಳೆಲ್ಲಾ ವಿನಯಪೂರ್ವಕವಾಗಿ ಬಾಗಿ ನಮಸ್ಕರಿಸುತ್ತಿದ್ದರು. ಅತಿ ಸಾಮಾನ್ಯವಾದ ಉಡುಗೆಯುನ್ನು ಉಟ್ಟಿದ್ದರೂ ಅದರ ಹಿಂದಿರುವ ಅಸಾಮಾನ್ಯವಾದ ಸೌಂದರ್ಯಸಂಪತ್ತನ್ನು ಕಂಡು, ಗೌರವದಿಂದ ತಲೆಬಾಗಿದ್ದರು.

ಮಹಾದೇವಿ ದಿಗ್ಭ್ರಮೆಗೊಂಡು ಇದನ್ನೆಲ್ಲಾ ನೋಡುತ್ತಿದ್ದಳು. ವಸಂತಕ ಮುಂದೆ ಬರುತ್ತಾ:

"ದಯಮಾಡಿಸಬೇಕು ತಾಯಿ, ದಯಮಾಡಿಸಬೇಕು."

ಎಂದು ತಾನು ಮುಂದೆ ನಡೆಯತೊಡಗಿದ., ನಡೆಮಡಿಯ ಪಕ್ಕದಲ್ಲಿ. ಮಹಾದೇವಿ ನಡೆಮಡಿಯ ಮೇಲೆ ನಡೆಯತೊಡಗಿದಳು. ದಾಸಿಯರು ಹೆಜ್ಜೆ ಹೆಜ್ಜೆಗೂ ಹೂವುಗಳನ್ನು ಎರಚುತ್ತಿದ್ದರು.

ಅರಮನೆಯನ್ನು ಪ್ರವೇಶಿಸಿದರು. ವಿಶಾಲವಾದ ತೊಟ್ಟಿಯನ್ನು ದಾಟಿ ಒಳಗೆ ನಡೆದರು. ಅಲ್ಲಿ ಪಕ್ಕಕ್ಕೆ ತಿರುಗಿದರು. ಅರಮನೆಯ ವೈಭವ ವಿಲಾಸಗಳನ್ನೆಲ್ಲಾ ನೋಡುತ್ತಾ ಮಹಾದೇವಿ ಗಂಭೀರವಾಗಿ ಮೆಲ್ಲನೆ ಮೆಲ್ಲನೆ ನಡೆಯುತ್ತಿದ್ದಳು.

ಎಲ್ಲರೂ ತನಗೆ ತೋರಿಸುತ್ತಿದ್ದ ಗೌರವ ವಿನಯಗಳು ಆಕೆಗೆ ಸಂಕೋಚವನ್ನುಂಟು ಮಾಡಿದ್ದುವು. ಆದರೆ ಅದರ ಹಿಂದಿರಬಹುದಾದ ಕಾರಣವನ್ನು ಊಹಿಸಿದಾಗ ಅವಳಿಗೆ ಸಮಸ್ಯೆಯ ಗಂಭೀರ ಸ್ವರೂಪ ಕಣ್ಣ ಮುಂದೆ ಸುಳಿಯಿತು. ಇದರಿಂದ ಪಾರಾಗುವುದು ಹೇಗೆಂಬ ಆಲೋಚನೆ ಮಿಂಚಿನಂತೆ ಸುತ್ತಿತು.

ಈಗ ಮಹಾದೇವಿ ಒಂದು ಕೋಣೆಯನ್ನು ಪ್ರವೇಶಿಸುತ್ತಿದ್ದಳು. ಅಲ್ಲಿಯವರೆಗೂ ಬಂದ ನಡೆಮಡಿ ಅಲ್ಲಿ ನಿಂತಿತ್ತು. ಸೇವಕರೆಲ್ಲಾ ಹಿಂದೆ ಉಳಿದರು. ವಸಂತಕನು ಮಾತ್ರ ಒಳಗೆ ಪ್ರವೇಶಿಸಿದ.

"ಒಳಗೆ ದಯಮಾಡಿಸಬೇಕು" ಎಂದು ಮಹಾದೇವಿಯನ್ನು ಕರೆದ. ಅನುಮಾನಿಸುತ್ತಲೇ ಮಹಾದೇವಿ ಒಳಗೆ ಕಾಲಿಟ್ಟಳು.

ಅವಳ ಅನುಮಾನ ನಿಜವೇ ಆಗಿತ್ತು. ಅಲ್ಲಿಯೇ ಕುಳಿತಿದ್ದ ಕೌಶಿಕ. ಮಹಾದೇವಿಯನ್ನು ಕಾಣುತ್ತಲೇ ಥಟ್ಟನೆ ಎದ್ದು ನಿಂತ.

ಮಹಾದೇವಿಯ ಮನಸ್ಸನ್ನು ಅರಿತವನೋ ಎಂಬಂತೆ ಕೌಶಿಕ ಆಡಂಬರವಿಲ್ಲದೆ ಅತಿ ಸರಳವಾದ ರೀತಿಯಲ್ಲಿ ಅಲಂಕರಿಸಿಕೊಂಡಿದ್ದ. ಆದರೆ

ಮಹಾದೇವಿಯ ಸರಳತೆಯನ್ನು ಕಂಡು, ತನ್ನದು ಅತಿ ಆಡಂಬರವೆನಿಸಿತು ಆತನಿಗೆ. ಅವಳ ಸರಳತೆ ಚಕಿತಗೊಳಿಸಿತು ಆತನನ್ನು.

ಉಟ್ಟ ಒರಟು ಸೀರೆಯೊಂದೇ ಅವಳ ಅಲಂಕಾರ, ತಲೆತುಂಬಾ ಮುಸುಗು, ಪೂಜೆಯ ಸಮಯದಲ್ಲಿ ಧರಿಸಿದ ವಿಭೂತಿ, ಹಣೆಯ ಮೇಲೆ ಅಚ್ಚಳಿಯದೆ ಉಳಿದು, ಶಿವನನ್ನು ಪತಿಯನ್ನಾಗಿ ಪಡೆದ ಅವಳ ಮುತ್ತೈದೆತನಕ್ಕೆ ಸಾಕ್ಷಿಯೆಂಬಂತಿತ್ತು. ಯಾವ ಅಲಂಕಾರಗಳೂ ತಂದುಕೊಡಲಾಗದ ಒಂದು ಆಕರ್ಷಕವಾದ ಸೌಂದರ್ಯವನ್ನು ಮತ್ತು ಗೌರವವನ್ನು ಅವಳ ಮುಖ ಮತ್ತು ಕಣ್ಣುಗಳು ಹೊರಸೂಸುತ್ತಿದ್ದುವು.

ತನ್ನನ್ನು ಕ್ಷಣಮಾತ್ರದಲ್ಲಿ ಆಕರ್ಷಿಸಿ ಸೆರೆಹಿಡಿದ ಆ ಕಣ್ಣುಗಳನ್ನು ಕೌಶಿಕ ಇಂದು ಹತ್ತಿರದಿಂದ ನೋಡಿದ. ದೃಷ್ಟಿಗಳು ಪರಸ್ಪರ ಸಂಧಿಸಿದುವು. ಮಹಾದೇವಿ ಕುತೂಹಲದಿಂದ ನೆಟ್ಟ ದೃಷ್ಟಿಯಿಂದ ಕೌಶಿಕನನ್ನು ನೋಡತೊಡಗಿದ್ದಳು. ರಸಿಕತೆಯನ್ನುಕ್ಕಿಸುವ ವಿಲಾಸವಿಭ್ರಮದ ನೋಟವಲ್ಲ ಅದು. ತನ್ನಿಂದ ನಿಷ್ಕಾರಣವಾಗಿ ನೊಂದ ಮುಗ್ಧೆಯೊಬ್ಬಳ ಅಂತರಂಗದ ಹಿಂದಿರುವ ವೇದನೆ ಕಾಣಿಸಿದಂತಾಯಿತು ಕೌಶಿಕನಿಗೆ.

"ನನ್ನ ಕರೆಗೆ.... ಓಗೊಟ್ಟು ಬಂದುದು... ನನ್ನ ಭಾಗ್ಯ." ತಾನು ಮೊದಲೇ ಆಲೋಚನೆ ಮಾಡಿಟ್ಟುಕೊಂಡ ಮಾತುಗಳನ್ನೆಲ್ಲಾ ಮರೆತು ಮಕ್ಕಳಂತೆ ತೊದಲಿದ ಕೌಶಿಕ.

ಮಹಾದೇವಿ ಗಂಭೀರಳಾಗಿ ಹೇಳಿದಳು :

"ರಾಜರು ಹೇಳಿಕಳುಹಿಸಿದರೆ ಬರಬೇಕಾದುದು ಪ್ರಜೆಗಳ ಕರ್ತವ್ಯ."

ಈ ವೇಳೆಗೆ ಕೌಶಿಕನೂ ಎಚ್ಚೆತ್ತುಕೊಂಡು ತನ್ನ ಗಾಂಭೀರ್ಯವನ್ನು ಹಿಂದಕ್ಕೆಳೆದುಕೊಳ್ಳುತ್ತಾ ಹೇಳಿದ : "ನಿಮ್ಮಂತಹ ರಾಜನಿಷ್ಠ ಪ್ರಜೆಗಳನ್ನು ಪಡೆದು ನಾನು ಧನ್ಯನಾದೆ."

ಅವನ ಕಡೆಗಣ್ಣುಗಳು ಮಹಾದೇವಿಯ ಸೌಂದರ್ಯವನ್ನು ಪಾನಮಾಡಲು ಹಾತೊರೆಯುತ್ತಿದ್ದವು. ಮಹಾದೇವಿ ಅದನ್ನರಿತು ಹೇಳಿದಳು :

"ಪ್ರಜೆಗಳ ನಿಷ್ಠೆಯನ್ನು ಬಯಸುವ ರಾಜರು, ಆ ಪ್ರಜೆಗಳನ್ನು ನೋಡುವ ದೃಷ್ಟಿ ಹೇಗಿರಬೇಕೆಂಬುದನ್ನು ಅರಿತಿರಬೇಕು."

"ನಿಜ, ನಾನು ಪ್ರಜೆಗಳನ್ನು ಅದೇ ದೃಷ್ಟಿಯಿಂದ ನೋಡುತ್ತಿದ್ದೇನೆ." ಕೌಶಿಕ ಹೇಳಿದ.

“ಯಾವ ದೃಷ್ಟಿಯಿಂದ? ಈಗ ನನ್ನನ್ನು ನೋಡುತ್ತಿರುವ ದೃಷ್ಟಿಯಿಂದಲೇ?–” ಮಹಾದೇವಿಯ ಮಾತಿನಲ್ಲಿ ವ್ಯಂಗ್ಯವಿತ್ತು.

“ಇಲ್ಲ, ಮಹಾದೇವಿ : ನಾನು ನಿನ್ನನ್ನು ನೋಡಿದ ದೃಷ್ಟಿ ಅಪೂರ್ವವಾದುದು, ಅದ್ವಿತೀಯವಾದುದು. ಅಮರಪ್ರೇಮದಿಂದ ಪ್ರೇರಿತವಾದುದು? – ಕೌಶಿಕನ ಧ್ವನಿಯಲ್ಲಿ ಭಾವುಕತೆಯಿತ್ತು.

“ಹೌದು.... ಹೌದು.... ತಮ್ಮ ಕ್ಷುದ್ರಸುಖವನ್ನು ಮುಚ್ಚಿಕೊಳ್ಳುವುದಕ್ಕೆ ‘ಅಮರಪ್ರೇಮ’ ಎಂಬ ಶಬ್ದ ಪ್ರಯೋಗ ಅನೇಕ ಬಾರಿ ನಡೆದು ಅದರ ಕಾಂತಿ ಮಸುಳಿಸಿದೆ. ಇದು ಇಂತಹ ಇನ್ನೊಂದು ಉದಾಹರಣೆ. ನೀವು ನನ್ನನ್ನು ಈ ದೃಷ್ಟಿಯಿಂದ ನೋಡುವುದಕ್ಕೆ ಮುನ್ನ ಆಲೋಚಿಸಬೇಕಾಗಿತ್ತು. ನನಗೆ ಮದುವೆಯಾಗಿದೆ. ಮದುವೆಯಾದ ಹೆಣ್ಣನ್ನು....”

ಕೌಶಿಕ ಬೆಚ್ಚಿಬಿದ್ದು ಮಧ್ಯದಲ್ಲಿಯೇ ಕೇಳಿದ :

“ಆಂ ! ನಿನಗೆ ಮದುವೆಯಾಗಿದೆಯೆ ? ಯಾವಾಗ ? ಯಾರೊಡನೆ?" ಧ್ವನಿಯಲ್ಲಿ ಕಾತರತೆ ಉದ್ವೇಗಗಳು ತುಂಬಿದ್ದುವು.

“ನಾನು ಎಂಟು ಹತ್ತು ವರ್ಷದವಳಿರುವಾಗಲೇ ನನ್ನ ಮದುವೆಯಾಯಿತು, ಲಿಂಗಪತಿಯೊಡನೆ.” ಗಂಭೀರವಾಗಿ ಹೇಳಿದಳು.

ಕೌಶಿಕ ಕ್ಷಣಕಾಲ ಆಲೋಚಿಸಿದ. ಅನಂತರ ಗಹಗಹಿಸಿ ನಗುತ್ತಾ ಹೇಳಿದ: “ಹಾಗೋ ! ಸರಿ.... ಸರಿ.... ಆ ಪತಿ, ಪರಲೋಕವೆಂಬುದೊಂದು ಇರುವುದಾದರೆ, ಅಲ್ಲಿ ಅವನು ನಿನ್ನ ಪತಿಯಾಗುವನು.”

“ಪರಲೋಕಕೊಬ್ಬ, ಇಹಲೋಕಕೊಬ್ಬ – ಎಂದು ಗಂಡಂದಿರನ್ನು ಬಯಸುವವಳು ನಾನಲ್ಲ ನನಗೊಬ್ಬನೇ ಪತಿ ; ಅವನು ಚೆನ್ನಮಲ್ಲಿಕಾರ್ಜುನ.”

ಭಾವಪರವಶಳಾಗಿ ಕೈಯೆತ್ತಿ ಸಾರುವಂತೆ ಈ ಮಾತನ್ನು ಹೇಳಿದಳು ಮಹಾದೇವಿ.

ತಲೆಯ ಮೇಲಿನ ಮುಸುಗು ನಸುಜಾರಿ ಭುಜದ ಮೇಲೆ ಇಳಿದಿತ್ತು. ರಸಿಕ ರಾಜನ ದೃಷ್ಟಿ ಜಾಗ್ರತವಾಗಿ ಅವಳ ಮಾತುಗಳ ಕಡೆಗಿಂತ ಅವಳ ಅಂಗಾಂಗಗಳ ಸೌಂದರ್ಯದ ಸವಿಯನ್ನು ಹೀರುವುದರಲ್ಲಿ ಮಗ್ನವಾಗಿತ್ತು.

ಮಹಾದೇವಿ ಅದನ್ನು ಗಮನಿಸಿದಳು. ಆದರೆ ಇಂದು ಅದಕ್ಕೆಲ್ಲಾ ಸಿದ್ಧವಾಗಿಯೇ ಬಂದಿದ್ದರಿಂದ ಅದನ್ನು ಎದುರಿಸುತ್ತಾ ಮತ್ತೆ ಮುಂದುವರಿಸಿದಳು: “ಆದುದರಿಂದ ನನ್ನ ಸೌಂದರ್ಯ ದೈಹಿಕ ಸುಖವನ್ನು ಕೊಡಲಾರದು; ದೈಹಿಕ ಸುಖವನ್ನು ಪಡೆಯಲಾರದು. ಅದನ್ನು ಸ್ಪಷ್ಟವಾಗಿ ಹೇಳುವುದಕ್ಕಾಗಿಯೇ ನಿಮ್ಮ

ಬಳಿ ಬಂದಿದ್ದೇನೆ. ನೀವು ಅದನ್ನು ಅರಿತು ಆ ಮಟ್ಟಕ್ಕೆ ನಿಮ್ಮ ಪ್ರೇಮವನ್ನು ತಿರುಗಿಸುವುದಾದರೆ ಮಾತ್ರ ದೈವಸಂಕಲ್ಪದಂತೆ ಕೆಲವು ಕಾಲ ನಿಮ್ಮ ಅರಮನೆಯಲ್ಲಿ ನಾನು ಇರಬಲ್ಲೆ."

"ಹೌದು, ಈ ಅರಮನೆಯಲ್ಲಿ ನೀನು ಇರಲೇಬೇಕು. ನೀನಿಲ್ಲದೆ ಈ ಅರಮನೆ ಸ್ಮಶಾನಕ್ಕೆ ಸಮ ನನಗೆ." – ಧ್ವನಿಯಲ್ಲಿ ಆಜ್ಞೆಯ ಠೀವಿ ಇರಲಿಲ್ಲ. ಬೇಡಿಕೆಯ ದೈನ್ಯತೆ ಇತ್ತು.

"ಹಾಗಾದರೆ ನಾನು ಹೇಳುವ ಷರತ್ತುಗಳಿಗೆ ನಿಮ್ಮ ಒಪ್ಪಿಗೆಯೇ?" ಮತ್ತೆ ಮಹಾದೇವಿ ಕೇಳಿದಳು.

"ನೀನು ಹೇಳಿದ ಹಾಗೆ ಕೇಳುತ್ತೇನೆ. ನಿನ್ನ ಎಲ್ಲ ಷರತ್ತುಗಳಿಗೂ ಒಪ್ಪುತ್ತೇನೆ."

"ಅವು ಏನೆಂಬುದು ನಿಮಗೆ ಗೊತ್ತಿರಬೇಕಲ್ಲವೇ ? ನಿಮ್ಮ ಗೆಳಯರು ಎಲ್ಲವನ್ನೂ ಹೇಳಿರಬೇಕು. ಆದರೂ ನಾನೂ ಇನ್ನೊಮ್ಮೆ ಹೇಳುತ್ತೇನೆ ಕೇಳಿರಿ: ಮಾತು ಕೊಡುವ ಮುನ್ನ ಚೆನ್ನಾಗಿ ಆಲೋಚಿಸಿ" ಎಂದು ಮಹಾದೇವಿ ತನ್ನ ಷರತ್ತುಗಳನ್ನು ಹೇಳತೊಡಗಿದಳು :

"ನನ್ನ ಮನೋಧರ್ಮಕ್ಕೆ ವಿರುದ್ಧವಾದ ಬಲಾತ್ಕಾರವನ್ನು ಮಾಡುವುದಿಲ್ಲವೆಂದು ಭರವಸೆ ಕೊಡಬೇಕು."

"ಅಗತ್ಯವಾಗಿ : ನಿನ್ನ ಮನಸ್ಸು ಕರಗಿದಾಗ ನನ್ನನ್ನು ಪ್ರೀತಿಸು. ಬಲಾತ್ಕಾರವನ್ನು ಮಾಡುವಷ್ಟು ಕ್ಷುದ್ರನಲ್ಲ ನಾನು." ಹೇಳಿದ ಕೌಶಿಕ.

"ನನ್ನ ಭಕ್ತಿಸಾಧನೆಗೆ ಅಡ್ಡಿಬರಬಾರದು." ಎರಡನೇ ಷರತ್ತನ್ನು ಹೇಳಿದಳು ಮಹಾದೇವಿ.

"ಖಂಡಿತವಾಗಿಯೂ ಇಲ್ಲ ; ನಿನ್ನ ಇಷ್ಟವಿರುವಂತೆ ನಿನ್ನ ಭಕ್ತಿ ಸಾಧನೆಯನ್ನು ಮುಂದುವರಿಸು" ಆಶ್ವಾಸನವಿತ್ತ ಕೌಶಿಕ.

"ನೀವು ಭಕ್ತಿ ಸಾಧನೆಯ ಕಡೆಗೆ ಮನಸ್ಸು ಕೊಡಬೇಕು" – ತನ್ನ ಮೂರನೆಯ ಷರತ್ತನ್ನು ಮುಂದಿಟ್ಟಳು ಮಹಾದೇವಿ.

ಕೌಶಿಕ ಕ್ಷಣಕಾಲ ಆಲೋಚಿಸಿ ಹೇಳಿದ :

"ಅದನ್ನು ನಿರ್ಧಾರವಾಗಿ ಹೇಳಲಾರೆ, ಪ್ರಯತ್ನಿಸುತ್ತೇನೆ."

ಇದನ್ನು ಕೇಳಿ ಮಹಾದೇವಿಗೆ ಸಂತೋಷವಾಯಿತು. ಏಕೆಂದರೆ ರಾಜ ತಾನು ಹೇಳುತ್ತಿರುವ ಮಾತುಗಳನ್ನು, ಪರಿಪಾಲಿಸಬೇಕಾದ ಹೊಣೆಗಾರಿಕೆಯಿಂದ ಹೇಳುತ್ತಿದ್ದಾನೆಂದು ಅವನ ಈ ಮಾತಿನಿಂದ ತಿಳಿಯಿತು. ಹೇಳಿದಳು :

"ಹಾಗೆಯೇ ಆಗಲಿ, ಕೊಟ್ಟ ಮಾತುಗಳೆಲ್ಲಾ ನೆನಪಿನಲ್ಲಿರಲಿ. ಈ ನಿಮ್ಮ

ಗೆಳೆಯರೂ ಇದ್ದಾರೆ. ಅವರೂ ಇದಕ್ಕೆ ಸಾಕ್ಷಿಯಾಗಿರಲಿ."

"ನಿಜ ; ನಿಮ್ಮಲ್ಲಿ ಈ ಉದಾತ್ತತೆಯ ಅಂಶವನ್ನು ಕಂಡೇ ನಾನು ಇಲ್ಲಿ ನಿಲ್ಲುವ ಮನಸ್ಸು ಮಾಡಿದ್ದೇನೆ. ನಾನು ಬರುವಾಗ ಆಲೋಚಿಸಿದ ನಿರ್ಧಾರವನ್ನು ಬದಲಾಯಿಸಿದ್ದೇನೆ. ಇನ್ನು ನಾನಿಲ್ಲಿ ಇರುವುದಕ್ಕೆ ಏರ್ಪಾಡನ್ನು ಮಾಡಿರಿ."

ವಸಂತಕ ಹೊರಗೆ ಹೋಗಿ ಸೂಚನೆಯನ್ನು ಕೊಟ್ಟ. ಕ್ಷಣಮಾತ್ರದಲ್ಲಿ ಅಂತಃಪುರದ ದಾಸಿಯರು ಬಂದು ಮಹಾದೇವಿಯನ್ನು ಸುತ್ತುವರಿದು ಕರೆದೊಯ್ಯತೊಡಗಿದರು.

ದಾಸಿಯರ ಮಧ್ಯದಲ್ಲಿ ನಡೆಯುತ್ತಿದ್ದ ಮಹಾದೇವಿಯ ರೂಪಸಂಪತ್ತನ್ನು ನೋಡುತ್ತಾ ಕೌಶಿಕ, ತನ್ನ ಕಣ್ಣುಗಳು ಧನ್ಯವಾದುವೆಂದುಕೊಂಡ. ಆನಂದನೀಯವಾದ ಇಂತಹ ಸೌಂದರ್ಯದ ಸಾನಿಧ್ಯವೇ ತನಗೆ ಸಾರ್ಥಕತೆಯನ್ನು ತಂದುಕೊಟ್ಟಿತೆಂದು ಭಾವಸಿದ. ಒಂದಲ್ಲ ಒಂದು ದಿನ ಇದನ್ನು ಪಡೆದು ಆನಂದಿಸುವ ಭಾಗ್ಯ ಬಂದೇ ಬರುತ್ತದೆಂದು ಕನಸು ಕಟ್ಟಿದ.

'ನನ್ನ ಸೌಂದರ್ಯ ದೈಹಿಕ ಸುಖವನ್ನು ಕೊಡಲಾರದು ; ಮತ್ತು ದೈಹಿಕ ಸುಖವನ್ನು ಪಡೆಯಲಾರದು' ಎಂಬ ಅವಳ ಮಾತುಗಳು ಅವನ ಮುಂದೆ ಸುಳಿದವು.

'ರೂಪವತಿಯಾದ ತರುಣಿಯಿಂದ ಬಂದ ಮಾತುಗಳೇ ಇವು ! ಸ್ತ್ರೀ ಇಂತಹ ಮಾತನ್ನಾಡುವುದು ಸಾಧ್ಯವೇ? ಪಾಪ ! ಯಾವುದೋ ಭಾವುಕತೆಯಲ್ಲಿ ಆ ಮಾತುಗಳನ್ನು ಆಡಿದ್ದಾಳೆ. ಒಂದೆರಡು ದಿನದ ಅರಮನೆಯ ವಿಲಾಸ ಜೀವನ, ಅವಳಿಗೆ ಸರಿಯಾದ ಮಾರ್ಗವನ್ನು ತೋರಿಸುತ್ತದೆ' ಎಂದು ಮುಂತಾಗಿ ಕೌಶಿಕನ ಆಲೋಚನೆ ಹರಿಯಿತು.

## ೭

ಇತ್ತ ಮಹಾದೇವಿಯನ್ನು ಕರೆದೊಯ್ದ ಸೇವಕಿಯರು ಅರಮನೆಯ ಅಂತಃಪುರದಲ್ಲಿ ಅತ್ಯುತ್ತಮವಾಗಿ ಅಲಂಕರಿಸಿ, ಅವಳಿಗಾಗಿ ಏರ್ಪಡಿಸಿದ್ದ ವಿಭಾಗಕ್ಕೆ ಕರೆದುಕೊಂಡು ಹೋದರು. ರಾಜ್ಯೋದ್ಯಾನಕ್ಕೆ ಹತ್ತಿರದಲ್ಲಿಯೇ ಇರುವ ಅಂತಃಪುರದ ಕೊನೆಯ ಭಾಗದಲ್ಲಿ, ಮಹಾದೇವಿಗಾಗಿ ಸಿದ್ಧಗೊಳಿಸುವಂತೆ ಕೌಶಿಕ ಆಣತಿಯನ್ನಿತ್ತಿದ್ದ. ಅಂತೆಯೇ ಆ ಅಂತಃಪುರದ ಸುಸಜ್ಜಿತವಾಗಿ, ಮಹಾದೇವಿಯನ್ನು ಕಾಯುತ್ತಿತ್ತು.

ಆ ಅಂತಃಪುರದ ಮಹಡಿಯ ಮೇಲೆ ನಿಂತರೆ, ಕೌಶಿಕನ ಸೌಂದರ್ಯೋಪಾಸನೆಗೆ ಉಜ್ವಲವಾದ ಸಾಕ್ಷಿಯೆಂಬಂತಿರುವ ಉದ್ಯಾನವನ ಕಣ್ಣಿಗೆ ಬೀಳುತ್ತಿತ್ತು.

ಸಾರ್ವಜನಿಕ ಉದ್ಯಾನವನ್ನೇ ಅಷ್ಟೊಂದು ಆಸಕ್ತಿಯಿಂದ ಅಲಂಕಾರಗೊಳಿಸುತ್ತಿರುವ ಕೌಶಿಕ, ಅದಕ್ಕೆ ಮಿಗಿಲಾದ ಗಮನವನ್ನು ಈ ತನ್ನ ಉದ್ಯಾನವನಕ್ಕೆ ಕೊಟ್ಟಿರಬೇಕೆಂಬುದರಲ್ಲಿ ಮಹಾದೇವಿಗೆ ಸಂದೇಹವಿರಲಿಲ್ಲ. ಸಹಜವಾಗಿಯೇ ಪ್ರಕೃತಿ ಪ್ರಿಯೆಯಾದ ಆಕೆಗೆ ಈಗ ಉದ್ಯಾನವನದಲ್ಲಿ ತಿರುಗಾಡಿ ಬರಬೇಕೆನ್ನಿಸಿತು. ತನ್ನ ಅಪ್ಪಣೆಗಾಗಿ ದೂರದಲ್ಲಿ ಕಾಯುತ್ತಾ ನಿಂತಿದ್ದ ದಾಸಿಯರಲ್ಲಿ ಒಬ್ಬಳನ್ನು ಹತ್ತಿರಕ್ಕೆ ಕರೆದಳು.

ಆ ದಾಸಿ ಸ್ವಲ್ಪ ಹೆಚ್ಚು ಕಡಮೆ ಮಹಾದೇವಿಯ ವಯಸ್ಸಿನವಳೇ. ಅವಳ ಮುಗ್ಧತೆ ಮಂದಹಾಸಗಳು ಮಹಾದೇವಿಯ ಗಮನವನ್ನು ಸೆಳೆದಿದ್ದುವು. ಬಳಿಗೆ ಬಂದ ಅವಳನ್ನು ಕೇಳಿದಳು ಮಹಾದೇವಿ :

"ನಿನ್ನ ಹೆಸರೇನು ?"

"ರಸವಂತಿ." ನಮಸ್ಕರಿಸಿ ವಿನೀತಳಾಗಿ ಹೇಳಿದಳು ದಾಸಿ.

"ರಸವಂತಿ ! ತುಂಬಾ ಸುಂದರವಾದ ಹೆಸರು. ನಿನ್ನ ಸೌಂದರರ್ಯಕ್ಕೆ ಒಪ್ಪುವಂಥದು." ಮೆಚ್ಚಿ ನುಡಿದಳು ಮಹಾದೇವಿ.

"ತಮ್ಮ ಸೌಂದರ್ಯದ ಮುಂದೆ ನನ್ನದೇನು, ತಾಯಿ ; ಸೂರ್ಯನ ಮುಂದೆ ಮಿಂಚು ಹುಳುವಿನಂತೆ." ಸಂಕೋಚದಿಂದ ಹೇಳಿದಳು ದಾಸಿ. ಮತ್ತೆ ಮುಂದುವರಿಸಿದಳು: "ನನ್ನ ಮೊದಲನೆಯ ಹೆಸರು 'ಕಾಳಿ' ಎಂದಿತ್ತು. ಮಹಾರಾಜರು ಹೊಸ ಹೆಸರನ್ನು ಕೊಟ್ಟರು."

"ಓ ! ರಾಜರು ನಿಮಗೆಲ್ಲಾ ಹೊಸ ಹೆಸರುಗಳನ್ನು ಬೇರೆ ಕೊಡುತ್ತಾರೇನು?" ನಗುತ್ತಾ ಕೇಳಿದಳು ಮಹಾದೇವಿ.

"ಅದೇನೂ ಇಲ್ಲ, ತಾಯಿ ; ಆದರೆ... ಅದೇನೋ ನನ್ನ ಹೆಸರು ಒಮ್ಮೆ ಅವರ ಕಿವಿಯ ಮೇಲೆ ಬಿದ್ದಾಗ, ನನ್ನನ್ನು ಹತ್ತಿರಕ್ಕೆ ಕರೆದರು ; ನೋಡಿದರು. ಅನಂತರ ನಗುತ್ತಾ 'ಕಾಳಿ, ನಿನಗೆ ಆ ಹೆಸರು ಸರಿಹೋಗುವುದಿಲ್ಲ. ಅದನ್ನು ಬಿಟ್ಟುಬಿಡು. ನಾನೊಂದು ಹೆಸರು ಕೊಡುತ್ತೇನೆ' ಎಂದು ಕ್ಷಣಕಾಲ ಆಲೋಚಿಸಿ, 'ರಸವಂತಿ' ಎಂಬ ಹೆಸರು ನಿನಗಿರಲಿ, ಏನು ? ಎಂದರು.' ಆಗಲಿ, ಮಹಾಸ್ವಾಮಿ' ಎಂದು ತಲೆಬಾಗಿದೆ. ಅಂದಿನಿಂದ 'ಕಾಳಿ' ಹೋಗಿ ರಸವಂತಿ ಆದೆ" ಎಂದು ಮುಗುಳುನಕ್ಕಳು.

"ನಿಮ್ಮ ರಾಜರು ಬಹಳ ರಸಿಕರಲ್ಲವೆ ?" ಮಹಾದೇವಿ ಕೇಳಿದಳು.

"ಅದೇನೋ ತಾಯಿ, ನಾನರಿಯೆ. ಆದರೆ ಬಹಳ ಒಳ್ಳೆಯವರು. ಇಂತಹ ಮಹಾರಾಜರ ಬಳಿ ಸೇವಕರಾಗಿರುವುದೂ ಒಂದು ಪುಣ್ಯ ಎಂದು ಭಾವಿಸಿದ್ದೇವೆ."

"ಉದ್ಯಾನವನ್ನು ನೋಡಿಕೊಂಡು ಬರೋಣ, ಬರುತ್ತೀಯಾ?" ತಾನು ಅವಳನ್ನು ಬಳಿಗೆ ಕರೆದ ಕಾರಣ ಸ್ಮರಿಸಿಕೊಂಡು ಕೇಳಿದಳು ಮಹಾದೇವಿ. ದೃಷ್ಟಿ ಉದ್ಯಾನದತ್ತ ತಿರುಗಿತು.

"ಖಂಡಿತವಾಗಿ, ಒಡತಿ. ತಮ್ಮ ಅಪ್ಪಣೆಯನ್ನು ಕಾಯುತ್ತಿದ್ದೇವೆ."

ರಸವಂತಿ ವಿನಯಪೂರ್ವಕವಾಗಿ ಹೇಳಿದಳು. ಮಹಾದೇವಿ ಅವಳನ್ನು ಹತ್ತಿರಕ್ಕೆ ಕರೆಯುತ್ತಾ :

"ನನ್ನ ಗೆಳತಿಯಾಗಿ ಬಾ. ಸೇವಕಿಯಾಗಿ ಅಲ್ಲ."

"ತಮ್ಮ ಔದಾರ್ಯ ಬಹಳ ದೊಡ್ಡದು ತಾಯಿ" ಎಂದು ರಸವಂತಿ ಹೇಳುತ್ತಿದ್ದಂತೆಯೇ ಮಹಾದೇವಿ ಮೆಟ್ಟಲುಗಳನ್ನು ಇಳಿಯತೊಡಗಿದಳು. ರಸವಂತಿ ಅವಳನ್ನು ಹಿಂಬಾಲಿಸಿದಳು. ಅನಂತರ ಉದ್ಯಾನವನಕ್ಕೆ ಹೋಗುವ ಮಾರ್ಗದತ್ತ ಮಹಾದೇವಿಯನ್ನು ಕರೆದೊಯ್ದಳು.

ಉದ್ಯಾನವನ ಮಹಾದೇವಿಯನ್ನು ಸ್ವಾಗತಿಸುವಂತೆ ಸಂಭ್ರಮದಿಂದ ಕುಣಿಯುತ್ತಾ ನಗುತ್ತಿತ್ತು. ಏರುತ್ತಿರುವ ಸೂರ್ಯನ ಕಿರಣಗಳು ಹೆಚ್ಚು ಹೆಚ್ಚು ಬಿಸಿಯಾಗುತ್ತಾ ಉದ್ಯಾನವನ್ನು ಮುಟ್ಟುತ್ತಿದ್ದರೂ ಹೂವುಗಳ ಕಾಂತಿ ಇನ್ನೂ ಬಾಡಿರಲಿಲ್ಲ.

ಅರಮನೆಯನ್ನು ಸುತ್ತಲೂ ಬಳಸಿಕೊಂಡು ಬಂದಿರುವಂತೆ ಉದ್ಯಾನವನ ಹಬ್ಬಿತ್ತು. ಪರಿಮಳ ಪ್ರವಾಹದ ಮಧ್ಯದಲ್ಲಿ ಸೌಂದರ್ಯದ ದ್ವೀಪದಂತೆ ಅರಮನೆ ಕಾಣಿಸಿತು.

ಅಂತಃಪುರಕ್ಕೆ ಸೇರಿದ ಈ ವಿಭಾಗದ ಉದ್ಯಾನವನವಂತೂ ರಾಜನ ಅಂತರಂಗಕ್ಕೆ ಸೇರಿದ ಪ್ರೇಮಮಯವಾದ ವಸ್ತುವಾಗಿತ್ತು. ರಸವಂತಿ ಹೇಳಿದಳು:

"ಇದು ನಮ ರಾಜರಿಗೆ ಪ್ರಿಯವಾದ ಉದ್ಯಾನವನ. ದಿನದಲ್ಲಿ ಕೊನೆಯ ಪಕ್ಷ ಒಂದೆರಡು ತಾಸುಗಳಾದರೂ ಇಲ್ಲಿ ಕಳೆಯುತ್ತಾರೆ ನಮ್ಮ ರಾಜರು."

ಉದ್ಯಾನವನದಲ್ಲಿ ಮುಂದೆ ಮುಂದೆ ಇವರ ಸೌಂದರ್ಯಯಾತ್ರೆ ಸಾಗಿತು. ರಸವಂತಿ ಎಲ್ಲವನ್ನು ತೋರಿಸುತ್ತಾ ವಿವರಿಸುತ್ತಾ ಉತ್ಸಾಹದಿಂದ ಕರೆದೊಯ್ಯುತ್ತಿದ್ದಳು. ಹೊಸ ಹೊಸ ಜಾತಿಯ ಹೂವುಗಳನ್ನು ತೋರಿಸಿದಳು; ಪರಿಮಳದ ಗಿಡಗಳನ್ನು ತೋರಿಸಿದಳು ; ಮಂಟಪಗಳನ್ನು ತೋರಿಸಿದಳು.

ಲತಾಗೃಹಗಳ ಬಳಿಗೆ ಕರೆದೊಯ್ದು ವರ್ಣಿಸಿದಳು.

ಉದ್ಯಾನವನದ ಮಧ್ಯದಲ್ಲಿರುವ ಸುಂದರವಾದ ಸರೋವರವಂತೂ ಮಹಾದೇವಿಯ ಮನಸ್ಸನ್ನು ಸೆರೆಹಿಡಿಯಿತು. ಅದಕ್ಕೆ ನಾಲ್ಕು ಕಡೆಯಿಂದಲೂ ಇಳಿಯುವುದಕ್ಕೆ ಮೆಟ್ಟಲುಗಳು. ಶುಭ್ರವಾದ ತಿಳಿನೀರು ಸೂರ್ಯನ ಕಿರಣಗಳನ್ನು ಧರಿಸಿ ಹೊಳೆಯುತ್ತಿತ್ತು. ಸಾರಸಪಕ್ಷಿಗಳು ತಮ್ಮ ಅಚ್ಚಬಿಳಿಯ ಬಣ್ಣದ ದೇಹವನ್ನು ಬೀಸಾಡುತ್ತಾ ಈಜಾಡುತ್ತಿದ್ದವು. ಉದ್ಯಾನದ ಸೌಂದರ್ಯವನ್ನು ಪ್ರತಿಬಿಂಬಿಸುವ ಜಲದರ್ಪಣದಂತಿತ್ತು ಆ ಸರೋವರ.

ಅಲ್ಲಿ ಸ್ವಲ್ಪ ಕಾಲ ಕುಳಿತುಕೊಂಡಳು ಮಹಾದೇವಿ. ಸುತ್ತಲೂ ನೋಡಿದಳು. ಆವುದೋ ಸೌಂದರ್ಯ ಲೋಕದಲ್ಲಿರುವಂತೆ ಅನಿಸಿತು ಅವಳಿಗೆ. ಆದರೆ ಅನತಿ ದೂರದಲ್ಲಿ ತಲೆಯೆತ್ತಿ ನಿಂತಿದ್ದ ಕೌಶಿಕನ ಅರಮನೆ ಈ ಜಗತ್ತಿನ ನೆನಪನ್ನು ತಂದುಕೊಟ್ಟಿತು. ಅವಳ ಮನಸ್ಸು ಸೌಂದರ್ಯಲೋಕದಿಂದ ತನ್ನ ಸಮಸ್ಯೆಯ ಲೋಕಕ್ಕೆ ಇಳಿಯಿತು ; ಕ್ಷಣಕಾಲ ರಸಸಮಾಧಿಯಲ್ಲಿದ್ದ ಸಾಧಕರ ಮನಸ್ಸು ಮತ್ತೆ ಲೌಕಿಕಕ್ಕೆ ಮರಳುವಂತೆ.

ಯಾರು ಈ ಸೌಂದರ್ಯದ ಆನಂದವನ್ನು ತನಗೆ ಕೊಡಲು ಕಾರಣರಾಗಿದ್ದಾರೋ, ಅವರೇ, ತನಗೆ ಈ ಸಮಸ್ಯೆಯ ಸಂಕಟವನ್ನು ಸುತ್ತುವುದಕ್ಕೂ ಕಾರಣರೆಂಬುದನ್ನು ನೆನೆದ ಮಹಾದೇವಿಗೆ, ಇದೇ ಜೀವನದ ರಹಸ್ಯವೇನೋ ಎಂದೆನ್ನಿಸಿತು. ಯಾವುದು ದುಃಖಕ್ಕೆ ಕಾರಣವೋ ಅದರ ಗರ್ಭದಲ್ಲಿಯೇ ಸುಖ ಅಡಗಿರುತ್ತದೆ. ಯಾವುದು ಈಗ ಸುಖಪ್ರದವೋ ಅದೇ ಮುಂದೆ ದುಃಖಕ್ಕೆ ನಾಂದಿಯೂ ಆಗಬಲ್ಲುದು. ಸಾಮಾನ್ಯ ಮರ್ತ್ಯಮಟ್ಟದ ವ್ಯವಹಾರದಲ್ಲಿ ಈ ಸುಖ ದುಃಖಗಳ ಪರಂಪರೆ ಅನಿವಾರ್ಯವೆಂದೆನಿಸಿತು.

ತನ್ನ ಜೀವನದ ಇಂದಿನ ಈ ಘಟನೆಗೆ ಕಾರಣವಾದ ಕೌಶಿಕನ ಚಿತ್ರ ಅವಳೆದುರು ಸುಳಿಯಿತು. ಕ್ಷಣಕಾಲ ಆಲೋಚನೆಯಲ್ಲಿ ಮಗ್ನವಾಯಿತು ಅವಳ ಮನಸ್ಸು. ಅನಂತರ ಕೇಳಿದಳು ರಸವಂತಿಯನ್ನು :

"ರಸವಂತಿ, ಒಂದು ಮಾತು ಕೇಳುತ್ತೇನೆ. ನಿಜ ಹೇಳುತ್ತೀಯಾ?"

"ಕೇಳಿ ಒಡತಿ."

"ಆ ಮಾತನ್ನು ಬಿಡು, ನೀನು ನನ್ನ ಗೆಳತಿ, ಬಾ ಹತ್ತಿರಕ್ಕೆ" ಎಂದು ಕೈಹಿಡಿದು ಅವಳನ್ನು ಹತ್ತಿರಕ್ಕೆ ಎಳೆದುಕೊಂಡಳು. ರಸವಂತಿ ಸ್ವಲ್ಪ ಸಂಕೋಚದಿಂದಲೇ ಹತ್ತಿರಕ್ಕೆ ಬಂದರೂ ಕ್ರಮೇಣ ಅವಳ ಸಂಕೋಚ ಮರೆಯಾಯಿತು. ಮಹಾದೇವಿಯ ವಾತ್ಸಲ್ಯಕ್ಕೆ ಅವಳ ಮನಸ್ಸು ಮಾರುಹೋಗಿತ್ತು.

ಅವಳಲ್ಲಿ ಒಡತಿಗಿಂತ ಹೆಚ್ಚಾಗಿ ಗೆಳತಿಯನ್ನೇ ಕಂಡುಕೊಂಡಳು ರಸವಂತಿ.

ಮಹಾದೇವಿ ಕೇಳಿದಳು. "ರಾಜರು ತುಂಬಾ ವಿಲಾಸಿಗಳೇ?"

ಈ ಪ್ರಶ್ನೆ ರಸವಂತಿಯನ್ನು ಆಶ್ಚರ್ಯಗೊಳಿಸಿತು. ಮಹಾದೇವಿಯನ್ನು ಕ್ಷಣಕಾಲ ದಿಟ್ಟಿಸಿ ನೋಡಿದಳು ಮತ್ತು ಕೇಳಿದಳು :

"ಅಮ್ಮಾ ನಿಜವಾಗಿ ಹೇಳಿ, ತಾವು ನಮ್ಮ ರಾಜರನ್ನು ಮೆಚ್ಚಿ ಪ್ರೀತಿಸಿ ಬಂದಿಲ್ಲವೇ?"

ಈ ಪ್ರಶ್ನೆಯಿಂದ ಮಹಾದೇವಿಗೆ ಆಶ್ಚರ್ಯವಾಯಿತು.

"ಇದು ನನ್ನ ಪ್ರಶ್ನೆಗೆ ಉತ್ತರವೇ?"

"ಕ್ಷಮಿಸಬೇಕು, ನೀವು ರಾಜರನ್ನು ಕುರಿತು ಕೇಳಿದ ಪ್ರಶ್ನೆಯಿಂದ ಇದನ್ನು ನಾನು ಕೇಳುವಂತಾಯಿತು."

"ಇಲ್ಲ ರಸವಂತಿ, ರಾಜರನ್ನು ಪ್ರೀತಿಸಿ ನಾನು ಬಂದವಳಲ್ಲ. ನೀನು ಆಪ್ತಳೆಂದು ಭಾವಿಸಿ ಹೇಳುತ್ತೇನೆ. ರಾಜರನ್ನು ನಾನು ಮದುವೆಯಾಗುವವಳೂ ಅಲ್ಲ" ಎಂದು ಇದುವರೆಗೆ ನಡೆದುದೆಲ್ಲವನ್ನೂ ಸಂಕ್ಷೇಪವಾಗಿ ರಸವಂತಿಗೆ ತಿಳಿಸಿದಳು. ಅರಮನೆಯಲ್ಲಿ ತನ್ನ ಅಂತರಂಗದ ದುಃಖವನ್ನು ಅರಿಯಬಲ್ಲ ಒಂದು ಜೀವಿಯನ್ನು ತನ್ನ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಮಹಾದೇವಿಗೆ ಅವಶ್ಯಕವಾಗಿತ್ತು.

ಮಹಾದೇವಿಯ ಮಾತುಗಳಲ್ಲಿ ರಸವಂತಿಗೆ ಎಷ್ಟು ಅರ್ಥವಾಯಿತೋ ! ಅಂತೂ ಏಕಾಗ್ರಚಿತ್ತದಿಂದ ಅವುಗಳನ್ನು ಕೇಳುತ್ತಿದ್ದಳು.

ಬಿಸಿಲು ಏರುತ್ತಿತ್ತು. ರಸವಂತಿ ಅದರತ್ತ ಗಮನವನ್ನು ಸೆಳೆಯುತ್ತಾ ಏಳುವ ಸೂಚನೆಯನ್ನು ಕೊಟ್ಟಳು.

ಇಬ್ಬರೂ ಎದ್ದು ಅರಮನೆಯ ಕಡೆಗೆ ನಡೆಯತೊಡಗಿದರು. ಅರಮನೆ ಸಮೀಪಿಸುತ್ತಿದ್ದಂತೆಯೇ ಮಹಾದೇವಿ ತಲೆಯೆತ್ತಿ ತಾನು ಇರಬೇಕಾದ ಅಂತಃಪುರದ ಮಹಡಿಯನ್ನು ನೋಡಿದಳು. ನೋಡಿ ಚಕಿತಳಾದಳು. ಮಹಡಿಯ ಮೇಲೆ ನಿಂತು ಕೌಶಿಕ ತನ್ನತ್ತಲೇ ದೃಷ್ಟಿಯನ್ನು ಹರಿಸಿದ್ದಾನೆ.

ಕೌಶಿಕ ಅಲ್ಲಿ ಎಷ್ಟೋ ಹೊತ್ತಿನಿಂದ ನಿಂತು ತನ್ನ ಕಣ್ಣುಗಳಿಗೆ ಹಬ್ಬವನ್ನು ಮಾಡಿಕೊಳ್ಳುತ್ತಿದ್ದ. ವಿವಿಧ ಭಂಗಿಗಳಲ್ಲಿ ಅವಳ ದೇಹಾಕೃತಿಯ ದೂರದ ನೋಟವನ್ನು ಕಾಣುತ್ತಿದ್ದ. ಉದ್ಯಾನವನದ ಹೂಗಳ ಮಧ್ಯದಲ್ಲಿ ಈ ಜಂಗಮ ಪುಷ್ಪ ಸಂಚರಿಸುತ್ತಿರುವುದನ್ನು ಕಂಡು ಪುಳಕಿತವಾಗುತ್ತಿತ್ತು ಆತನ ದೃಷ್ಟಿ.

ಮಹಾದೇವಿ ಹಿಂತಿರುಗಿ ಬರುವುದನ್ನು ನೋಡಿ ಮಹಡಿಯಿಂದಿಳಿದು

ಬಂದು, ಅಂತಃಪುರವನ್ನು ಅವರು ಪ್ರವೇಶಿಸಬೇಕಾದ ಬಾಗಿಲಲ್ಲಿ ನಿಂತ ಕೌಶಿಕ. ಮಹಾದೇವಿ ಒಳಗೆ ಬರಲು:

"ಏನು ಮಹಾದೇವಿ, ಉದ್ಯಾನವನ ನಿನ್ನ ಮನಸ್ಸಿಗೆ ಬಂದಿತೆ?" ಎಂದು ರಸವಂತಿಯತ್ತ ತಿರುಗಿ,

"ರಸವಂತಿ, ತುಂಬಾ ಬಿಸಿಲಾಗಿಹೋಯಿತಲ್ಲವೆ ? ಸಾಯಂಕಾಲ ಕರೆದುಕೊಂಡು ಹೋಗಿದ್ದರೆ ಆಗುತ್ತಿರಲಿಲ್ಲವೆ ?"

"ಇಲ್ಲ ಮಹಾಸ್ವಾಮಿ, ದೇವಿಯವರೇ ..."

"ಹೌದು..... ಹೌದು.... ಅವಳು ನನ್ನನ್ನು ಕರೆದುಕೊಂಡು ಹೋಗಲಿಲ್ಲ. ನಾನೇ ಆಕೆಯನ್ನು ಕರೆದುಕೊಂಡು ಹೋದೆ. ತಪ್ಪು ನನ್ನದೇ." ರಸವಂತಿಯ ಪರವಾಗಿ ಹೇಳಿದಳು ಮಹಾದೇವಿ.

"ತಪ್ಪಿನ ಪ್ರಶ್ನೆಯಲ್ಲ ; ಈ ಬಿಸಿಲಲ್ಲಿ ಬಹಳ ಆಯಾಸಪಟ್ಟಿರಬೇಕೆಂದು ಹೇಳಿದೆ, ಅಷ್ಟೆ."

"ಇಲ್ಲ... ಇಲ್ಲ, ಉದ್ಯಾನದ ಸೌಂದರ್ಯವನ್ನು ಸವಿಯುವುದರಲ್ಲಿ ಬಿಸಿಲಿನ ಪರಿವೆಯೇ ನಮಗಾಗಲಿಲ್ಲ. ತುಂಬಾ ಸುಂದರವಾಗಿದೆ, ಉದ್ಯಾನವನ. ನಿಮ್ಮ ಸೌಂದರ್ಯ ದೃಷ್ಟಿ ಮೆಚ್ಚತಕ್ಕದ್ದು."

"ನಿನ್ನ ಮನಸ್ಸಿಗೇ ಬಂದಿತೇ? ಹಾಗಾದರೆ ಸಾರ್ಥಕವಾಯಿತು ಇದನ್ನು ಬೆಳೆಸಿದ್ದು." ರಾಜ ಧನ್ಯನಾದವನಂತೆ ನುಡಿದ. ಮತ್ತೆ ರಸವಂತಿಯನ್ನು ಕುರಿತು ಹೇಳಿದ :

"ರಸವಂತಿ, ಈಗ ದೇವಿಯವರನ್ನು ಕರೆದುಕೊಂಡು ಹೋಗು. ಅವರ ಉಪಚಾರದಲ್ಲಿ ಸ್ವಲ್ಪವೂ ಕೊರತೆಯಾಗಬಾರದು. ತಿಳಿಯಿತಷ್ಟೇ?"

ರಸವಂತಿ ಮಾತನಾಡುವುದಕ್ಕೆ ಮುನ್ನ ಮಹಾದೇವಿ ಹೇಳಿದಳು :

"ಯಾವ ಕೊರತೆಯೂ ಆಗಲಾರದು. ಉಪಚಾರ ಅತಿಯಾಗದಿದ್ದರೆ ಸಾಕು. ನಿಮ್ಮ ರಸವಂತಿ ಬಹಳ ರಸಜ್ಞಳು. ತುಂಬಾ ಚೆನ್ನಾಗಿ ಮಾತನಾಡ ಬಲ್ಲವಳು."

ಸಂಕೋಚದಿಂದ ರಸವಂತಿ ಕುಗ್ಗಿ ಬಾಗಿಲ ಮರೆಯನ್ನು ಹೊಕ್ಕಿದ್ದಳು. ಮಹಾದೇವಿ ಮುಂದೆ ನಡೆಯಲು, ಅವಳನ್ನು ಹಿಂಬಾಲಿಸಿ ಮಹಡಿಯನ್ನು ಏರತೊಡಗಿದಳು.

ಮೇಲೇರುತ್ತಿರುವ ಮಹಾದೇವಿಯನ್ನು ಕಣ್ಣು ತುಂಬ ನೋಡಿದ ಕೌಶಿಕ. ಆತನ ಮುಖದ ಮೇಲೆ ತೃಪ್ತಿಯ ಮಂದಹಾಸ ಮಿನುಗಿತು. ಅವಳ ಮಾತುಗಳಿಂದ

ಉತ್ಸಾಹಿತನಾಗಿ, ತನ್ನ ಇಚ್ಛೆ ಶೀಘ್ರದಲ್ಲಿಯೇ ಕೈಗೂಡುತ್ತದೆಂದು ನಂಬಿದ. ಉದ್ಯಾನವನ್ನು ಮಹಾದೇವಿ ಮೆಚ್ಚಿದುದು ತನ್ನನ್ನೇ ಮೆಚ್ಚಿದುದರ ಸಂಕೇತವೆಂದು ಭಾವಿಸಿದ. ತನ್ನ ಸೌಂದರ್ಯದೃಷ್ಟಿಯನ್ನು ಬೇರೆ ಮೆಚ್ಚಿ ಹೊಗಳಿದ್ದಳು. ಅವಳ ಮಾತುಗಳನ್ನು ನೆನೆನೆನೆದು ಕನಸನ್ನು ಕಟ್ಟುತ್ತಾ, ಮಹಡಿಯತ್ತ ತಿರುಗಿ ತಿರುಗಿ ನೋಡುತ್ತಾ ನಿಧಾನವಾಗಿ ನಡೆದ.

## ೮

ಮಹಾದೇವಿ ಅರಮನೆಗೆ ಬಂದು ಮೂರು ನಾಲ್ಕು ದಿವಸಗಳು ಕಳೆದಿದ್ದುವು. ಕೌಶಿಕನ ಕನಸು ಕನಸಾಗಿಯೇ ಉಳಿದಿತ್ತು. ಅಲ್ಲದೆ ಅದು ಉಲ್ಬಣ ರೂಪವನ್ನು ತಳೆದಿತ್ತು. ಮಹಾದೇವಿಯ ಸೌಂದರ್ಯದ ಕೇವಲ ಸಾನ್ನಿಧ್ಯ ಮಾತ್ರವೇ ತೃಪ್ತಿಯನ್ನೀಯಬಹುದೆಂಬ ಅವನ ಭ್ರಮೆ ಹಾರಿಹೋಗಿತ್ತು. ನೇತ್ರಾನಂದಕರವಾದ ಅವಳ ಸೌಂದರ್ಯವನ್ನು ಕಂಡೊಡನೆಯೇ ಇತರ ಇಂದ್ರಿಯಗಳ ಶಕ್ತಿಯೂ ಜಾಗ್ರತಗೊಳ್ಳುವುದು. ಮನಸ್ಸು ಕಟ್ಟುಹರಿದ ಪಂಜಿನಂತಾಗುವುದು.

ಮಹಾದೇವಿಯೂ ತನ್ನ ಮುಂದಿನ ಮಾರ್ಗವೇನೆಂಬುದನ್ನು ಕಂಡು ಕೊಳ್ಳಲಾರದೆ ಕೌಶಿಕನ ಸಮಸ್ಯೆಯಲ್ಲಿ ಸಿಕ್ಕಿ ತೊಳಲಾಡುತ್ತಿದ್ದಳು.

ಒಮ್ಮೆ ಅವಳ ಮನಸ್ಸು ಹೀಗೆ ಆಲೋಚಿಸಿತು :

'ಎಂತಹ ಒಳ್ಳೆಯ ಅಭಿರುಚಿ ರಾಜನದು ! ಎಂತಹ ಸೌಂದರ್ಯದೃಷ್ಟಿ ! ಅಲ್ಲದೆ ಎಂತಹ ಸ್ನೇಹಪರ ! ಎಷ್ಟು ವಿಶ್ವಾಸದಿಂದ ತನ್ನನ್ನು ನೋಡುತ್ತಾನೆ' ಎಂದು ಮುಂತಾಗಿ ಮುಂದುವರೆಸುತ್ತಾ ಕೊನೆಗೆ : 'ಇಂತಹ ಸುಸಂಸ್ಕೃತ ರಾಜನನ್ನು ನಾನೇಕೆ ಮದುವೆಯಾಗಬಾರದು.'

ಮರುಕ್ಷಣದಲ್ಲಿಯೇ ತನ್ನ ಮನಸ್ಸಿನ ದೌರ್ಬಲ್ಯವನ್ನು ಕಂಡು ಯಾರೋ ಹೊಡೆದೆಬ್ಬಿಸಿದಂತಾಯಿತು. ಸುಪ್ತಮನಸ್ಸಿನಲ್ಲಿ ಅಡಗಿದ್ದ ಕಾಮನೆಗಳನ್ನು, ದೌರ್ಬಲ್ಯವನ್ನು ಕಂಡು ಅಚ್ಚರಿಗೊಂಡಳು.

'ಹಾಗಾದರೆ ರಾಜನನ್ನು ಮದುವೆಯಾಗಬೇಕೆಂಬುದೇ ನಿನ್ನ ನಿಜವಾದ ಬಯಕೆಯೇ?' ಎಂದು ತನ್ನ ಭಾವನೆಗಳನ್ನು ಬೆನ್ನಟ್ಟಿ ಸುಪ್ತಮನಸ್ಸಿಗಿಂತಲೂ ಆಳವಾದ ಪ್ರಜ್ಞಾಲೋಕಕ್ಕೆ ಇಳಿದು ನೋಡಿದಳು. ಅಲ್ಲಿ ತನ್ನ ಆದರ್ಶದ ಉಜ್ವಲರೂಪ ಹೊಳೆದು ತೋರಿತು. ಅಂತಹ ನಿಸ್ಸೀಮನಿರಂಜನಪ್ರಭೆಯನ್ನು ಒಳಗೊಂಡ ತನ್ನ ಮನಸ್ಸು, ಕೌಶಿಕನ ಕತ್ತಲೆಗೆ ಒಳಗಾದುದನ್ನು ಕಂಡು ಪರಿತಪಿಸಿದಳು. "ಛಾಪು ! ಸಂಸಾರವೇ !" ಎಂಬ ಉದ್ಗಾರ ಹೊರಬಿತ್ತು.

ಅದೇ ಉದ್ಗಾರದಿಂದ ಒಂದು ವಚನವೂ ರೂಪುಗೊಂಡಿತು :

ಕಲ್ಲ ಹೊಕ್ಕರೆ ಕಲ್ಲ ಬರಿಸಿದೆ ; ಗಿರಿಯ ಹೊಕ್ಕರೆ ಗಿರಿಯ ಬರಿಸಿದೆ ;
ಭಾಪು ಸಂಸಾರವೇ ! ಬೆನ್ನಿಂದ ಬೆನ್ನಹತ್ತಿ ಬಂದೆ ;
ಚೆನ್ನಮಲ್ಲಿಕಾರ್ಜುನಯ್ಯ ಇನ್ನೇವೆನಿನ್ನೇವೆ.

ಅದನ್ನು ಬರೆದಳು. ಮತ್ತೆ ಮತ್ತೆ ಓದಿದಳು. ಮಾಯೆಯ ಬಲವತ್ತರವಾದ ಶಕ್ತಿಯನ್ನು ನೆನೆದಳು. ಮತ್ತೊಂದು ವಚನ ಹಾಡಿದಳು :

ಎನ್ನ ಮಾಯದ ಮದವ ಮುರಿಯಯ್ಯ
ಎನ್ನ ಕಾಯದ ಕತ್ತಲೆಯ ಕಳೆಯಯ್ಯ ;
ಎನ್ನ ಜೀವದ ಜಂಜಡವ ಮಾಣಿಸಯ್ಯ
ಎನ್ನ ದೇವ ಚೆನ್ನಮಲ್ಲಿಕಾರ್ಜುನ ದೇವಯ್ಯ,
ಎನ್ನ ಸುತ್ತಿದ ಪ್ರಪಂಚವ ಬಿಡಿಸು ನಿಮ್ಮ ಧರ್ಮ,

'ನಿಜ. ಪ್ರಪಂಚ ನನ್ನ ಸುತ್ತಿದೆ. ನಾನು ಬೇಡವೆಂದರೂ ಅದು ಬಂದು ಸುತ್ತುತ್ತಿದೆ. ಸ್ತ್ರೀಯ ಮುಂದೆ ಅದು ಪುರುಷನಾಗಿ ಕಾಡುತ್ತಿದೆ. ಪುರುಷನ ಮುಂದೆ ಅದು ಸ್ತ್ರೀಯಾಗಿ ಕಾಡುತ್ತಿದೆ. ಲೋಕಮಾರ್ಗಕ್ಕೆ ಇದೇ ಸಹಜವಾದುದು. ಇದಕ್ಕೆ ಅತೀವವಾಗಿ ನಡೆಯುವ ಮಾರ್ಗ, ಲೋಕಕ್ಕೆ ಮರುಳಾಗಿ ತೋರಬಹುದು' ಎಂದು ತನ್ನ ದೌರ್ಬಲ್ಯವನ್ನು ಮೆಟ್ಟಿ ಮೇಲೇರುತ್ತಿರುವ ಅವಳ ಸಾಹಸದಲ್ಲಿ ಇನ್ನೊಂದು ವಚನ ಉಣ್ಮಿತು :

ಪುರುಷನ ಮುಂದೆ ಮಾಯೆ, ಸ್ತ್ರೀ ಎಂಬ ಅಭಿಮಾನವಾಗಿ ಕಾಡಿತ್ತು ನೋಡಾ !
ಸ್ತ್ರೀಯ ಮುಂದೆ ಮಾಯೆ, ಪುರುಷನೆಂಬ ಅಭಿಮಾನವಾಗಿ ಕಾಡಿತ್ತು ನೋಡಾ !
ಲೋಕವೆಂಬ ಮಾಯೆಗೆ ಶರಣಚಾರಿತ್ರ ಮರುಳಾಗಿ ತೋರುವುದು ನೋಡಾ !
ಚೆನ್ನಮಲ್ಲಿಕಾರ್ಜುನನೊಲಿದಶರಣಂಗೆ ಮಾಯೆ ಇಲ್ಲ, ಮರಹಿಲ್ಲ,
ಅಭಿಮಾನವೂ ಇಲ್ಲ.

ವಚನದ ಕೊನೆಯ ಮಾತು ಅವಳಿಗೆ ತುಂಬಾ ಹಿಡಿಸಿತು. ಇದೇ ತನ್ನ ನಿಜವಾದ ಸ್ವರೂಪವೆನ್ನಿಸಿತು ಆಕೆಗೆ. 'ನನಗೆ ಮಾಯೆ ಇಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ' ಎಂದುಕೊಂಡಳು.

'ಆದರೆ ಒಮ್ಮೆ ನೀನೂ ಹೇಳಿಕೊಳ್ಳಲಿಲ್ಲವೇ ಇಂತಹ ಸುಸಂಸ್ಕೃತ ರಾಜನನ್ನು ಮದುವೆ ಏಕಾಗಬಾರದೆಂದು ? ಅದು ಮನಸ್ಸಿನ ಸಹಜ ಪ್ರವೃತ್ತಿಯಲ್ಲವೇ ?' ಎಂದು ಕೇಳುವುದು ಒಂದು ಮನಸ್ಸು.

'ಅಲ್ಲ, ಮನಸ್ಸಿನ ಸಹಜಪ್ರವೃತ್ತಿಯಲ್ಲ, ಅದು ವಿಕಾರವೃತ್ತಿ. ಅಂತರಂಗದ

ಸಮುದ್ರದಲ್ಲಿ ಕ್ಷಣಕಾಲ ಮಾತ್ರ ಎದ್ದ ತೆರೆ. ಅದು ಮೇಲೆಮೇಲೆ ತೇಲುತ್ತಿದ್ದ ಬೆಳ್ನೊರೆಯೇ ಹೊರತು ಅಂತರಂಗದ ರತ್ನವಲ್ಲ. ಆ ತಪ್ಪನ್ನೇ ಒಪ್ಪು ಎಂದು ಮುಚ್ಚಿಕೊಳ್ಳುವ ಇಷ್ಟ ನನಗಿಲ್ಲ. ನನಗೇಕೆ ಮದುವೆ ? ನನಗೇಕೆ ಕೌಶಿಕ ?'

ಎನಗೇಕಯ್ಯ ಸಾವ ಪ್ರಪಂಚಿನ ಪುತ್ತಳಿ ?
ಮಾಯಕದ ಮಲಭಾಂಡ, ಆತುರದ ಭವನಿಳಯ ಎನಗೇಕಯ್ಯ?
ಬೆರಳಿಂ ತಾಳ ಹಣ್ಣ ಹಿಸುಕಿದೊಡೆ ಮೆಲಲುಂಟೇ ?
ಎನ್ನ ತಪ್ಪು ಒಪ್ಪುಗೊಳ್ಳಾ ಚೆನ್ನಮಲ್ಲಿಕಾರ್ಜುನದೇವಾ.

'ಕ್ಷಣಕಾಲದ ದೌರ್ಬಲ್ಯಕ್ಕೆ ತನ್ನ ಮನಸ್ಸು ಒಳಗಾದರೂ ಆ ತಪ್ಪನ್ನು ಒಪ್ಪಿಕೊಂಡು ನನ್ನನ್ನು ಕ್ಷಮಿಸು" ಎಂದು ಮುಂತಾಗಿ ತನ್ನ ಪತಿ ಚೆನ್ನಮಲ್ಲಿಕಾರ್ಜುನನನ್ನು ಮೊರೆಹೊಕ್ಕಳು.

ಮುಂದೆ ಈ ಭಾವನೆ ಅವಳಲ್ಲಿ ಬಲವತ್ತರವಾಗುತ್ತಾ ನಡೆದಿತ್ತು. ಅಪೂರ್ವವಾದ ಪ್ರಗತಿ ಅವಳ ಭಕ್ತಿಸಾಧನೆಯಲ್ಲಿ ಕಂಡುಬರುತ್ತಿತ್ತು.

ಕೌಶಿಕನಿಗೆ ಸತಿಯಾಗಲು ಮಹಾದೇವಿ ಅರಮನೆಯನ್ನು ಪ್ರವೇಶಿಸಿದಳೆಂದು ಹೊರಗಿನ ಲೋಕ ತಿಳಿದಿದ್ದರೆ, ಆಕೆ ಚೆನ್ನಮಲ್ಲಿಕಾರ್ಜುನನ ಸಾಕ್ಷಾತ್ ಸತಿಯಾಗಿ ಮಧುರಭಕ್ತಿಯ ಪರಾಕಾಷ್ಠತೆಯನ್ನು ಮುಟ್ಟಿದಳು :

ತನ್ನ ವಿರಹದುರಿಯನ್ನು ರಸವಂತಿಯ ಮುಂದೆ ಹಾಡಿ ತೋರಿಸುತ್ತಿದ್ದಳು:

ಕಳವಳದ ಮನವು ತಲೆಕೆಳಗಾದುದವ್ವ !
ಸುಳಿದು ಬೀಸುವ ಗಾಳಿ ಉರಿಯಾಯಿತ್ತವ್ವಾ ;
ಬೆಳದಿಂಗಳು ಬಿಸಿಲಾಯಿತ್ತು ಕೆಳದಿ,
ಹೊಳಲ ಸುಂಕಿಗನಂತೆ ತೊಳಲುತ್ತಿದ್ದೆನವ್ವಾ !
ತಿಳಿಹೌ ಬುದ್ಧಿಯ, ಹೇಳಿ ಕರೆತಾರೆಲಗೌ
ಚೆನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವಾ.

'ಈ ಗಂಡನನ್ನು ನನಗೆ ತಂದು ಕೊಡಿಸು, ನಿನ್ನ ರಾಜ ಕೌಶಿಕನನ್ನಲ್ಲ. ನಾನು ಮೊಟ್ಟ ಮೊದಲು ಒಲಿದ ಈ ಲಿಂಗಪತಿ, ನನ್ನನ್ನು ಸ್ವೀಕರಿಸಲಿ – ಎಂದು ಒಮ್ಮೆ ಕಾಮನ ಕಾಲನ್ನು ಹಿಡಿಯುತ್ತೇನೆ ; ಒಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುತ್ತೇನೆ. ವಿರಹದುಃಖದ ಉರಿಯಿಂದ ಬೇಯುತ್ತಿದ್ದೇನೆ. ಆದರೆ ಮಲ್ಲಿಕಾರ್ಜುನ ಒಲ್ಲದ ಕಾರಣ ಎಲ್ಲರಿಗೂ ಹಂಗಿತಿಯಾದೆ."

ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು
ದೇವಾಂಗವನುಟ್ಟು, ಪುರುಷ ಬಾರಾ !

ನಿನ್ನ ಬರವೆನ್ನಸುವಿನ ಬರುವು ಬಾರಯ್ಯಾ
ಚೆನ್ನಮಲ್ಲಿಕಾರ್ಜುನಯ್ಯ ಬಂದಾನೆಂದು
ಬಟ್ಟೆಗಳ ನೋಡಿ ಬಾಯಾರುತ್ತಿಹೆನು.

ಎಂದು ಮುಂತಾಗಿ ಶರಣಸತಿ ಮಹಾದೇವಿ, ಮಹಾದೇವನನ್ನು ಕುರಿತು ಹಂಬಲಿಸುತ್ತಿದ್ದಳು. ಇಂತಹ ಮಾತುಗಳ ಅರ್ಥ, ರಸವಂತಿಗೆ ಸಂಪೂರ್ಣವಾಗಿ ಆಗದೇ ಹೋದರೂ ಏನೋ ಒಂದು ಅಪೂರ್ವ ಅನುಭವವಾದಂತಾಗುತ್ತಿತ್ತು. ಮಹಾದೇವಿಯಲ್ಲಿ ಅವಳ ಗೌರವ ಕ್ಷಣ ಕ್ಷಣಕ್ಕೂ ಹೆಚ್ಚುತ್ತಿತ್ತು.

ಒಮ್ಮೆ ಮಹಾದೇವಿ ತನ್ನ ಗುರುಗಳಾದ ಗುರುಲಿಂಗದೇವರನ್ನು ನೋಡಬೇಕೆಂಬ ಅಭಿಪ್ರಾಯವನ್ನು ರಾಜನ ಮುಂದೆ ವ್ಯಕ್ತಪಡಿಸಿದಳು. ತಾನು ಇಲ್ಲಿಗೆ ಬಂದಂದಿನಿಂದ ಈ ಆಸೆ ಅವಳಲ್ಲಿ ತುಂಬಿದ್ದರೂ ಬೇಕೆಂದೇ ಇದುವರೆಗೂ ಅದನ್ನು ತಡೆದಿದ್ದು ಇಂದು ಅದನ್ನು ಕೌಶಿಕನಿಗೆ ಹೇಳಿದಳು.

"ಆಗಬಹುದು, ಅವರನ್ನು ಈ ಕೂಡಲೇ, ಕರೆಯಕಳುಹಿಸುತ್ತೇನೆ." ಕೌಶಿಕ ಹೇಳಿದ. ಅದಕ್ಕೆ ಮಹಾದೇವಿ ನಗುತ್ತಾ ನುಡಿದಳು :

"ನೀವು ಹೇಳಿ ಕಳುಹಿಸಿದ ಕೂಡಲೇ, ನಿಮ್ಮ ರಾಜಮರ್ಯಾದೆಯನ್ನು ಆಶಿಸಿ ಓಡಿಬರುವ ಶಾಲುಜೋಡಿಯ ಪಂಡಿತರಲ್ಲ ನಮ್ಮ ಗುರುಗಳು. ಅವರು ಇಲ್ಲಿಗೆ ಬರಲಾರರು. ನಾನೇ ಅಲ್ಲಿಗೆ ಹೋಗಿಬರಬೇಕಾಗುತ್ತದೆ."

ಮಹಾದೇವಿ ಗುರುಲಿಂಗರ ಮಠಕ್ಕೆ ಹೋಗುವ ಸಿದ್ಧತೆಯಾಗತೊಡಗಿತು.

ಕೌಶಿಕ ವಸಂತಕನನ್ನು ಬರಮಾಡಿಕೊಂಡು ಆಲೋಚಿಸಿದ. ತನ್ನ ಮನೆಗೆ ಹೋಗುವ ಹಂಚಿಕೆಯನ್ನೇನಾದರೂ ಮಹಾದೇವಿ ಮಾಡಿದ್ದಾಳೆಯೇ ಎಂಬ ಭಾವನೆ ಅವನಲ್ಲಿ ಸುಳಿಯುತ್ತಿತ್ತು.

"ಇಲ್ಲ ರಾಜೇಂದ್ರ, ಮಹಾದೇವಿ ದಿಟ್ಟಸ್ವಭಾವದವಳು. ಹಾಗೆ ಮನೆಗೆ ಹೋಗುವವಳಾಗಿದ್ದರೆ ಹೇಳಿಯೇ ಹೋಗುವಂತಹವಳು" ವಸಂತಕ ಹೇಳಿದ.

"ಅದು ನಿಜ. ಆದರೂ ಅವಳ ಜೊತೆಯಲ್ಲಿ ಮಠಕ್ಕೆ ನೀನೇ ಹೋಗುವುದು ಒಳ್ಳೆಯದು, ವಸಂತಕ. ಆದಷ್ಟು ಜಾಗ್ರತೆಯಾಗಿ ಕರೆದುಕೊಂಡು ಬಂದುಬಿಡಬೇಕು." ರಾಜ ಹೇಳಿದ ವಸಂತಕನಿಗೆ.

ಮೇನೆ ಸಿದ್ಧವಾಯಿತು. ಮಹಾದೇವಿ ರಸವಂತಿಯನ್ನೂ ಜೊತೆಯಲ್ಲಿ ಕರೆದುಕೊಂಡು ಬಂದು ಕುಳಿತಳು ಮೇನೆಯಲ್ಲಿ. ಅದು ಹೊರಡುವುದಕ್ಕೆ ಮುನ್ನವೇ ಊರಿನಲ್ಲೆಲ್ಲಾ ಸುದ್ದಿ ಹೊರಟಂತೆ ತೋರುತ್ತಿತ್ತು. ಕುತೂಹಲದಿಂದ ಸೇರಿದ ಜನ ಜಂಗುಳಿ ಅಲ್ಲಲ್ಲಿ ನಿಂತು ನೋಡುತ್ತಿತ್ತು. ಈ ಘಟನೆ ನಡೆದಂದಿನಿಂದ

ಇದೊಂದು ಒಳ್ಳೇ ಬಿಸಿಬಿಸಿ ಸುದ್ದಿಯಾಗಿತ್ತು ಜನರಿಗೆ.

"ಅದೃಷ್ಟ ಅಂದರೆ ಹೀಗಿರಬೇಕು. ಇದ್ದಕ್ಕಿದ್ದಂತೆ ರಾಜನ ಹೆಂಡತಿ ಆಗುವುದು ಸಾಮಾನ್ಯವೇನಯ್ಯಾ?" ಎನ್ನುವುದು ಒಂದು ಅಭಿಪ್ರಾಯವಾದರೆ,

"ಸುಮ್ಮನೆ ಇರಯ್ಯ, ಮಹಾದೇವಿಯಂತಹ ಹೆಂಡತಿ ಸಿಗಬೇಕಾದರೆ ಪುಣ್ಯ ಮಾಡಿದ್ದ ರಾಜ. ಭಾಗ್ಯ ಮಹಾದೇವಿಯದಲ್ಲ ; ಆತನದು" ಎಂಬುದು ಇನ್ನೊಂದು ಅಭಿಪ್ರಾಯವಾಗಿತ್ತು.

"ಅದು ಸರಿ, ಅಂತಹ ಏಕೈಕನಿಷ್ಠಾವಂತ ಶಿವಭಕ್ತರೆಂದು ನಾವು ತಿಳಿದಿದ್ದ ಆ ದಂಪತಿಗಳು ಅದು ಹೇಗೆ ಮಗಳನ್ನು ರಾಜನಿಗೆ ಕೊಟ್ಟರು ?"

"ರಾಜನಿಗೆ ಹೆದರಿ ಕೊಟ್ಟಿರಬೇಕು, ಪಾಪ ! ಅದೂ ನಿಜ ಅನ್ನು, ರಾಜನನ್ನು ಎದುರುಹಾಕಿಕೊಂಡು ಬದುಕುವುದಕ್ಕಾಗುತ್ತದೆಯೇ?"

"ರಾಜನೇ ಮನೆಯ ಬಾಗಿಲಿಗೆ ಬಂದಿರುವಾಗ ಆ ಸಂಪತ್ತನ್ನು ತಿರಸ್ಕರಿಸಲು ಯಾರಿಗಾದರೂ ಮನಸ್ಸು ಬರುತ್ತದೇನಯ್ಯ ?"

"ಅದಿರಲಿ, ಕಳುಹಿಸುವವರು ಮದುವೆಯನ್ನಾದರೂ ಮಾಡಿ ಕಳುಹಿಸಬಾರದಿತ್ತೇ ಅಂತಃಪುರಕ್ಕೆ ? ಹಾಗೇ ಒಪ್ಪಿಸುವುದೇ?"

"ಮದುವೆ ಆಯಿತಲ್ಲ !"

"ಅದಾವಾಗಪ್ಪ ಮದುವೆ ಆದದ್ದು, ಯಾರಿಗೂ ಗೊತ್ತಿಲ್ಲದಂತೆ ?"

"ಆಯ್ತಂತೆ ಅರಮನೆಯಲ್ಲಿ ; ಸಂಕ್ಷೇಪವಾಗಿ ಶಾಸ್ತ್ರ ಮುಗಿಸಿದರಂತೆ."

ಇದು ಜನಜಂಗುಳಿಯಲ್ಲಿ ನಡೆಯುತ್ತಿದ್ದ ಸಂಭಾಷಣೆಯ ಒಂದು ರೂಪ. ಮನಸ್ಸಿಗೆ ತೋಚಿದಂತೆ ಜನ ನಾಲಗೆಯನ್ನು ಹರಿಯಬಿಡುತ್ತಿದ್ದರು. ಒಬ್ಬೊಬ್ಬರು ಹೇಳಿದುದು ನಿಜವೇ ಎಂಬಂತೆ ಕಿವಿಯಿಂದ ಕಿವಿಗೆ ಅದು ಹರಡುತ್ತಿತ್ತು. ಅದೂ ಇಂತಹ ಸಂದರ್ಭಗಳಲ್ಲಿ ಅನೇಕರಿಗೆ ನಾಲಗೆ ಬಹಳ ಹರಿತವಾಗುತ್ತದೆ. ಸ್ತ್ರೀಸಾಮ್ರಾಜ್ಯದಲ್ಲಿಯೂ ಕುಳಿತಲ್ಲಿ ನಿಂತಲ್ಲಿ ಇದೇ ಮಾತು. ಬಂಗಾರಮ್ಮ, ನಂಜಮ್ಮನಂತಹ ಕುಹಕಿಗಳಿಗಂತೂ ಇದೊಂದು ಸುವರ್ಣಸಂಧಿ ಸಿಕ್ಕಿದಂತಾಗಿತ್ತು.

ಓಂಕಾರಶೆಟ್ಟಿ – ಲಿಂಗಮ್ಮರಿಗೆ ಮಗಳನ್ನು ಕಳೆದುಕೊಂಡ ದುಃಖದ ಜೊತೆಗೆ, ಅದಕ್ಕಿಂತ ಹೆಚ್ಚಾಗಿಯೇ ಎನ್ನುವಂತೆ, ಜನರ ತಪ್ಪು ತಿಳುವಳಿಕೆಯ ತಿರಸ್ಕಾರದ ಮಾತುಗಳು ಚುಚ್ಚಿ ನೋವನ್ನುಂಟುಮಾಡುತ್ತಿದ್ದವು. ಅವರ ಅಂತರಂಗವನ್ನು ಬಲ್ಲ ಕೆಲವರು ಇಲ್ಲದಿರಲಿಲ್ಲ. ನಿಜಸಂಗತಿಯೇನೆಂಬುದನ್ನು ಅವರು ತಿಳಿದಿದ್ದರು ; ಸಹಾನುಭೂತಿಯನ್ನು ತೋರಿಸುತ್ತಿದ್ದರು. ಆದರೆ ಅವರ ಮಾತನ್ನು ಯಾರೂ ನಂಬುತ್ತಿರಲಿಲ್ಲ.

ಮಹಾದೇವಿ ಇದನ್ನೆಲ್ಲಾ ಊಹಿಸಬಲ್ಲವಳಾಗಿದ್ದಳು. ತನ್ನ ತಂದೆ ತಾಯಿಗಳು ಈ ದುಃಖವನ್ನು ಹೇಗೆ ಎದುರಿಸಬಹುದೆಂದು ಊಹಿಸುವಳು. ಅರಮನೆಗೆ ಬಂದ ಮೊದಲು, ತಂದೆತಾಯಿಗಳ ನೆನಪು ಹೆಚ್ಚಾಗಿ ಬರುತ್ತಿತ್ತು. ತನ್ನನ್ನು ಹೆತ್ತು ಹೊತ್ತು ಸಾಕಿ ಸಲಹಿದ ಅವರನ್ನೂ ಹುಟ್ಟಿ ಬೆಳೆದ ಮನೆಯನ್ನೂ ಅಷ್ಟು ಅನಿರೀಕ್ಷಿತವಾಗಿ ಬಿಟ್ಟುಬಂದ ದುಃಖ ಒತ್ತರಿಸಿಬರುತ್ತಿತ್ತು. ಆದರೆ ತನ್ನ ಜೀವನದ ಬೃಹತ್ ಸಮಸ್ಯೆಯನ್ನೆದುರಿಸುವ ಹೋರಾಟದಲ್ಲಿ ಇದನ್ನು ಮರೆಯಬಲ್ಲವಳಾದಳು. ತನ್ನ ಜೀವನವನ್ನು ರೂಪಿಸಿಕೊಳ್ಳುವ ಹೊಣೆಯನ್ನು ತಾನೇ ಹೊತ್ತು ಬಂದುದರಿಂದ ಅವರ ಸಮಸ್ಯೆಗಳನ್ನು ಹೋಗಲಾಡಿಸಿದೆನೆಂಬ ತೃಪ್ತಿಯೊಂದು ಅವಳಲ್ಲಿತ್ತು.

'ಅವರೂ ನನ್ನ ಅಗಲುವಿಕೆಯ ದುಃಖವನ್ನು ಮರೆಯಲಿ' ಎಂದು ಹಾರೈಸುತ್ತಿದ್ದಳು.

ಈಗ ಗುರುಗಳ ಬಳಿಗೆ ಹೋಗುತ್ತಿರುವಾಗ ತಂದೆ-ತಾಯಿಗಳ ನೆನಪು ಸಹಜವಾಗಿಯೇ ಸುಳಿಯಿತು. ಮೇನೆ ತನ್ನ ಮನೆಯ ಮುಂದೆ ಬಂದಾಗ ಅದರ ಬಾಗಿಲ ತೆರೆಯನ್ನು ಓರೆಮಾಡಿ ನೋಡಿದಳು. ಎದೆ ಡವಡವನೆ ಹೊಡೆದುಕೊಳ್ಳುತ್ತಿತ್ತು. ಮನೆಯ ಮುಂದೆಯೇ ಮೇನೆ ಹೋಯಿತು. ಮನೆಯ ಬಾಗಿಲು ಅರ್ಧ ಮುಚ್ಚಿತ್ತು. ಓಂಕಾರನಾಗಲೀ, ಲಿಂಗಮ್ಮನಾಗಲೀ ಕಣ್ಣಿಗೆ ಬೀಳಲಿಲ್ಲ. ಮಹಾದೇವಿಗೆ ಅವರನ್ನು ನೋಡಬಹುದೆಂಬ ಆಸೆ ಒಂದು ಕಡೆ ; ನೋಡಿದರೆ ಇನ್ನೇನೋ ಎಂಬ ದುಗುಡ ಇನ್ನೊಂದು ಕಡೆ; ಅವರಾರೂ ಕಾಣದೇ ಹೋದಾಗ ಅವಳ ಮನಸ್ಸಿಗೆ ಆದುದು ಸಮಾಧಾನವೋ ಸಂಕಟವೋ, ಆಕೆಗೆ ತಿಳಿಯದಂತಾಗಿತ್ತು.

ಮೇನೆ ರಾಜಬೀದಿಯನ್ನು ದಾಟಿತು. ಉದ್ಯಾನವನ್ನು ಹಿಂದಕ್ಕೆ ಹಾಕಿ ಮುಂದೆ ನಡೆಯಿತು. ಮಠದ ಆವರಣವನ್ನು ರಾಜಪರಿವಾರಸಹಿತವಾಗಿ ಪ್ರವೇಶಿಸಿತು ಮೇನೆ. ಮುಂದೆ ಸ್ವಲ್ಪ ದೂರ ಹೋಗುವುದರೊಳಗಾಗಿ ಅಲ್ಲಿಯೇ ನಿಲ್ಲಿಸಬೇಕೆಂದು ಸೂಚನೆಯನ್ನು ಕೊಟ್ಟಳು ಮಹಾದೇವಿ.

ಈ ವೇಳೆಗಾಗಲೇ ಮಠದಲ್ಲಿ ಕೋಲಾಹಲವೆದ್ದಿತ್ತು.

"ರಾಜಪರಿವಾರ ಬಂದಿದೆ ಮಠಕ್ಕೆ" ಎಂದು ಯಾರೋ ಓಡಿಹೋಗಿ ಗುರುಲಿಂಗರಿಗೆ ಹೇಳಿದರು. ಗುರುಲಿಂಗರು ಹೊರಗೆ ಬರುತ್ತಿರುವಷ್ಟರಲ್ಲಿ ಮಹಾದೇವಿ ಒಳಗೆ ಬಂದು ನಮಸ್ಕರಿಸಿದಳು.

"ಏಳು ಮಗಳೇ, ಏಳು" ಎನ್ನುತ್ತಾ ರಾಜಪರಿವಾರವನ್ನೂ, ಮೇನೆಯನ್ನೂ ನೋಡಿ ಮುಗುಳುನಕ್ಕರು. ಮತ್ತು,

"ಏನಮ್ಮಾ, ಅರಮನೆಯೊಡತಿಯಾಗಿ ಬಂದಿದ್ದೀಯ !" ಕೇಳಿದರು.

ಅಷ್ಟರಲ್ಲಿ ರಸವಂತಿಯೂ ಬಂದು ನಮಸ್ಕರಿಸಿದಳು. ಮಹಾದೇವಿ ಅವಳನ್ನು ಪರಿಚಯ ಮಾಡಿಕೊಟ್ಟಳು.

"ಇವಳು ನನ್ನ ಗೆಳತಿ ಗುರುಗಳೇ. ಬಹಳ ಒಳ್ಳೆಯವಳು. ಇವಳದೇ ನನಗೆ ಅವಲಂಬನೆ ಅರಮನೆಯಲ್ಲಿ."

ಗುರುಗಳು ಮೆಚ್ಚುಗೆಯ ದೃಷ್ಟಿಯಿಂದ ಅವಳತ್ತ ನೋಡಿದರು. ವಸಂತಕನನ್ನು ಶಾಲೆಯ ವಿಭಾಗದ ಒಂದು ಕೋಣೆಯಲ್ಲಿ ಕುಳ್ಳಿರಿಸಿ, ಸತ್ಕರಿಸುವಂತೆ ತಮ್ಮ ಶಿಷ್ಯರ ಮೂಲಕ ವ್ಯವಸ್ಥೆ ಮಾಡಿ, ಗುರುಗಳು ಮಹಾದೇವಿಯನ್ನು ಕರೆದುಕೊಂಡು ಒಳಗೆ ನಡೆದರು. ಮಹಾದೇವಿಯ ಸೂಚನೆಯಂತೆ ರಸವಂತಿಯೂ ಹಿಂಬಾಲಿಸಿದಳು.

"ಏನು ಮಹಾದೇವಿ ! ಈ ಮೂರುನಾಲ್ಕು ದಿನಗಳಿಂದ ನಿನ್ನದೇ ಯೋಚನೆಯಾಗಿತ್ತು ನನಗೆ."

"ತಮಗೂ ಯೋಚನೆಯೇ, ಗುರುಗಳೇ."

"ಹೌದಮ್ಮ ! ಸತ್ವಶಕ್ತಿಯ ಆತ್ಮವೊಂದು ಕತ್ತಲೆಯ ತಳಮಳಕ್ಕೆ ಸಿಕ್ಕಾಗ ಯೋಚನೆಗೊಳ್ಳದಿರುವುದಕ್ಕೆ ಆಗುತ್ತದೆಯೇ ? ಹೇಗಿದೆ ಅರಮನೆ?"

ಮಹಾದೇವಿ ಎಲ್ಲವನ್ನೂ ಸಂಕ್ಷೇಪವಾಗಿ ಹೇಳಿದಳು. ಕೌಶಿಕನಿಗೆ ತಾನು ಹಾಕಿರುವ ನಿಯಮಗಳನ್ನು ತಿಳಿಸಿದಳು. ಕೊನೆಯಲ್ಲಿ ಹೀಗೆ ಮುಕ್ತಾಯಗೊಳಿಸಿದಳು :

"ಈ ನಾಟಕದಲ್ಲಿಯಂತೂ ಇಳಿದುದಾಯಿತು, ಇದರಿಂದ ಪಾರಾಗುವುದು ಹೇಗೆ, ಗುರುಗಳೇ ?"

"ಯೋಚಿಸಬೇಡ, ಯಾವನು ಈ ನಾಟಕಕ್ಕೆ ನಿನ್ನನ್ನು ಇಳಿಸಿದನೋ ಅವನೇ ಅದರ ಮುಂದಿನ ಅಂಕವನ್ನೂ ನಿರ್ಧರಿಸುತ್ತಾನೆ. ಆ ತೆರೆಯೇಳುವರೆಗೂ ಕಾಯಬೇಕು ಅಷ್ಟೆ" ಎಂದ ಗುರುಲಿಂಗರು ಸ್ವಲ್ಪ ಅನುಮಾನಿಸಿ :

"ಒಂದು ಮಾತು ಕೇಳುತ್ತೇನೆ. ಅರಮನೆಯ ಜೀವನದಲ್ಲಿ ನೀನು ಬೆರೆತ ಮೇಲೂ ಮದುವೆಯಾಗಬಾರದೆಂಬ ನಿನ್ನ ಮೊದಲಿನ ನಿಷ್ಠೆ ಹಾಗೆಯೇ ಇದೆಯೇ.... ಅಥವಾ...." ಎಂದು ಕೇಳಿದರು.

"ಕ್ಷಮಿಸಬೇಕು, ಗುರುಗಳೇ... ನಿಮಗೂ ಅನುಮಾನವೇ? ಇನ್ನೊಂದು ವಿಧವಾಗಿ ನಾನು ಆಲೋಚಿಸುವುದಕ್ಕೂ ಅಸಮರ್ಥಳು. ಒಮ್ಮೆ ನನ್ನ ಮನಸ್ಸು ಅಳುಕಿದುದು ನಿಜ. ಆದರೆ ಅದರಿಂದ ನನ್ನ ಆದರ್ಶ ಇನ್ನೂ ಹೆಚ್ಚಾಗಿ ಹೊಳಪನ್ನು ಪಡೆದಿದೆ. ಈಗಂತೂ ಅದರಿಂದ ಹಿಂದೆ ಸರಿಯುವುದು ಸಾಧ್ಯವೇ ಇಲ್ಲದಂತಾಗಿದೆ."

"ನಿಜ, ನಿನ್ನ ನಿಷ್ಠೆಯನ್ನು ನಾನು ಬಲ್ಲೆ." ತೃಪ್ತಿಯಿಂದ ಹೇಳಿದರು ಗುರುಗಳು: "ಆದರೂ ಹೀಗೆ ಕೇಳಿದೆನೆಂದು ನೊಂದುಕೊಳ್ಳಬೇಡ. ಸಾಮಾನ್ಯ ಚೇತನಗಳ ಊಹೆಗೂ ಮಿಗಿಲಾದ ಆದರ್ಶವಿದಾದುದರಿಂದ ಅದನ್ನು ಕೇಳಿದೆ. ಅಂತಹ ನಿಷ್ಠೆ ನಿನ್ನಲ್ಲಿದ್ದರೆ ಸಾಮಾನ್ಯ ಮಾನವನ ಕಲ್ಪನೆಗೂ ನಿಲುಕದ ಮಾರ್ಗವನ್ನು ನಿನ್ನ ಸಾಧನೆ ಕಂಡುಕೊಳ್ಳುತ್ತದೆ."

ಗುರುಗಳು ಮಾತನ್ನು ಮುಗಿಸುವಷ್ಟರಲ್ಲಿ ಓಂಕಾರಶೆಟ್ಟಿ – ಲಿಂಗಮ್ಮ ಬಂದರು. ಮಹಾದೇವಿಯ ಮೇನೆ ಮಠದ ಕಡೆ ಹೋಯಿತೆಂಬುದನ್ನು ಕೇಳಿದೊಡನೆಯೇ ಇತ್ತ ಓಡಿಬಂದಿದ್ದರು.

ಮಗಳನ್ನು ಕಂಡೊಡನೆಯೇ ಲಿಂಗಮ್ಮನ ದುಃಖ ಉಕ್ಕಿಬಂದಿತು. "ಮಗಳೇ" ಎನ್ನುತ್ತಾ ಓಡಿಹೋಗಿ, ಏಳುತ್ತಿರುವ ಮಹಾದೇವಿಯನ್ನು ತಬ್ಬಿಕೊಂಡಳು. ಓಂಕಾರನೂ ಬಳಿಗೆ ಹೋಗಿ ನಿಂತ. ಮಹಾದೇವಿ ತಂದೆಗೆ ನಮಸ್ಕರಿಸಿದಳು. ಅವಳ ತಲೆಯನ್ನು ನೇವರಿಸುತ್ತಾ ಓಂಕಾರ :

"ಕುಳಿತುಕೋ ಮಗಳೇ" ಎಂದ, ತನ್ನ ದುಃಖವನ್ನು ತಡೆದುಕೊಂಡು. ಲಿಂಗಮ್ಮ ತನ್ನ ಉದ್ವೇಗ ಸ್ವಲ್ಪ ಕಡಿಮೆಯಾದ ಮೇಲೆ ಮಗಳನ್ನೇ ದಿಟ್ಟಿಸಿ ನೋಡಿದಳು. ಮಹಾದೇವಿ ಎದಿನಂತೆಯೇ ಇದ್ದಳು. ಅರಮನೆಯ ವಿಲಾಸ ಜೀವನದ ಲಕ್ಷಣಗಳು ಕಾಣಲಿಲ್ಲ. ಅದೇ ಉಡುಗೆ, ಅದೇ ತೊಡಿಗೆ, ಅದೇ ಸರಳತೆ. ಆದರೂ ಏನೋ ಹೇಳಲಾಗದ ಒಂದು ಬದಲಾವಣೆ ಆದಂತಿತ್ತು. ದುಃಖದ ಅನುಭವದಿಂದ ಪರಿಪಾಕಗೊಂಡ ಮುಖಭಾವ ಕಾಣುತ್ತಿತ್ತು.

"ಏನು ಲಿಂಗಮ್ಮ ! ಮಗಳನ್ನು ಹೊಸದಾಗಿ ಕಾಣುವವಳಂತೆ ದಿಟ್ಟಿಸಿ ನೋಡುತ್ತಿದ್ದೀಯ?" ನಗುತ್ತಾ ಕೇಳಿದರು ಗುರುಗಳು.

"ನಿಜ, ಗುರುಗಳೇ ! ಹೊಸದಾಗಿ ಮಗಳನ್ನು ಕಂಡಂತೆ ನನಗೆ ಅನಿಸುತ್ತಿದೆ. ಮಹಾದೇವಿ, ಇನ್ನು ಆ ಅರಮನೆಯ ಸಹವಾಸ ಸಾಕು. ಮತ್ತೆ ಆ ಅರಮನೆಗೆ ಹೋಗಬೇಡ."

ಮಹಾದೇವಿ ಗುರುಗಳ ಕಡೆ ನೋಡಿದಳು. ಗುರುಗಳು ಕೇಳಿದರು :

"ಇದೇನು ನಿಂಗಮ್ಮ, ಒಮ್ಮೆ ಮಗಳನ್ನು ಅರಮನೆಗೆ ಕಳುಹಿಸಿದಿರಿ ; ಮತ್ತೆ ಆ ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಸಾಧ್ಯವೇ ?"

"ಅಂದರೆ ನಮ್ಮ ಮಗಳು ರಾಜನಿಗೇ ಸೇರಿಹೋಗಬೇಕೇ ಗುರುಗಳೇ?"

"ಅದನ್ನು ನಿರ್ಧರಿಸುವ ಹಕ್ಕನ್ನು ನೀವು ನಿಮ್ಮ ಮಗಳಿಗೆ ಕೊಟ್ಟ ಮೇಲೆ ಅದನ್ನು ಅಲ್ಲಿಗೆ ಬಿಟ್ಟುಬಿಡಿ. ನೆನ್ನೆ ನಾನೆಲ್ಲವನ್ನೂ ನಿಮಗೆ ವಿವರಿಸಿ ಹೇಳಲಿಲ್ಲವೇ?" ಗುರುಲಿಂಗರು ಜ್ಞಾಪಿಸಿದರು.

"ನಿಜ ಗುರುಗಳೇ, ನೀವು ಎಲ್ಲವನ್ನು ಹೇಳಿದ್ದೀರಿ. ಆದರೆ ಜನಗಳ ಮಾತುಗಳು ನಮ್ಮನ್ನು ಇರಿಯುತ್ತಿವೆ. 'ರಾಜನಿಗೆ ಹೆದರಿ ಮಗಳನ್ನು ಕೊಟ್ಟರು' ಎನ್ನುವವರು ಕೆಲವರು. 'ದುಡ್ಡಿನ ಆಸೆಗೆ ಮಗಳನ್ನು ಮಾರಿದರು, 'ಮದುವೆ ಇಲ್ಲದೆ ಮಗಳನ್ನು ಒಪ್ಪಿಸಿದರು' – ಹೀಗೆಲ್ಲಾ ಹೇಳುತ್ತಾರೆ. ಗುರುಗಳೇ ಇದನ್ನೆಲ್ಲಾ ಹೇಗೆ ಸಹಿಸುವುದು ?"

ಮಹಾದೇವಿ ಇದನ್ನು ಕೇಳುತ್ತಾ ದುಃಖದ ಭಾರದಿಂದ ಕುಸಿದಳು. ಗುರುಗಳೂ ಮೌನವಾಂತರು. ರಸವಂತಿಯಂತೂ ಇಲ್ಲೊಂದು ಹೊಸ ಪ್ರಪಂಚವನ್ನು ಕಾಣುತ್ತಿದ್ದಳು.

ಕ್ಷಣಕಾಲ ನಿಶ್ಯಬ್ದ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿತು. ಗುರುಗಳೇ ಅದನ್ನು ಮುರಿದರು :

"ನಿಜ, ಲೋಕದ ದೃಷ್ಟಿಯಿಂದ ಆ ಜನ ಹೇಳುವುದೆಲ್ಲಾ ಸಹಜವಾದುದು. ನಿಮ್ಮ ಅಂತರಂಗದ ತಳಮಳವನ್ನೂ, ಮಹಾದೇವಿಯ ಆದರ್ಶದ ಹೋರಾಟವನ್ನೂ ಅವರು ಹೇಗೆ ಊಹಿಸಬಲ್ಲರು ?

ಆದರೆ ಉದಾತ್ತ ಸಾಧನೆಗಾಗಿ ಎಷ್ಟೋ ವೇಳೆ ಕ್ಷುದ್ರ ನಿಂದೆಯನ್ನು ನಾವು ಸಹಿಸಿಕೊಳ್ಳಬೇಕಾಗುತ್ತದೆ. ಅದನ್ನು ದಿಟ್ಟತನದಿಂದ ಎದುರಿಸಿ. ಹೌದು, "ರಾಜನನ್ನು ಮಹಾದೇವಿ ಮದುವೆಯಾಗಿದ್ದಾಳೆ' ಎನ್ನಿ ; 'ಮಗಳನ್ನು ಮಾರಿದೆವು' ಎನ್ನಿ. ಅದರಿಂದ ನಷ್ಟವೇನೂ ಇಲ್ಲ. ಅನ್ನುವವರು ಎಷ್ಟು ದಿನ ಅನ್ನುತ್ತಾರೆ ? ಅವರು ಆಡಿಕೊಂಡು ಸಂತೋಷಪಡುವ ಮಾತುಗಳನ್ನು ಅವರಿಗಿಂತ ಮೊದಲು ನೀವೇ ಹೇಳಿಬಿಡಿ... ಏನು ಓಂಕಾರ, ನಿನಗೂ ಹೆದರಿಕೆಯಾಗುತ್ತದೆಯೋ?"

"ಹೆದರಿಕೆಯ ಮಾತಲ್ಲ, ಗುರುಗಳೇ, ವ್ಯರ್ಥವಾಗಿ ಅಪವಾದ ಬಂತಲ್ಲ ಎಂದು ವ್ಯಥೆ." ಓಂಕಾರ ಹೇಳಿದ.

"ಶರಣ, ಅಪವಾದಕ್ಕೆ ಅಂಜಬಾರದು, ಅಪಮಾರ್ಗಕ್ಕೆ ಇಳಿಯಬಾರದು, ಮನಸ್ಸನ್ನು ವಂಚಿಸಿ ನಡೆಯಬಾರದು, ಹಿಡಿದ ನಿಷ್ಠೆಯನ್ನು ಬಿಡಬಾರದು.

ಇವೆಲ್ಲವನ್ನೂ ಉಳ್ಳ ನಿಮಗೆ ಅಪವಾದದ ಅಂಜಿಕೆಯೇಕೆ ? ನಾನು ಬಲ್ಲೆ : ಅಪವಾದದ ಅಂಜಿಕೆಯ ಜೊತೆಗೆ ಮಗಳ ಮೇಲಿನ ಪ್ರೇಮವೂ ನಿಮ್ಮನ್ನು ಕಾಡುತ್ತಿದೆ. ಅದು ಸಹಜವಾದುದು. ಆದರೆ ಆ ಸಹಜಪ್ರವೃತ್ತಿಯನ್ನು ಕೆಲವು ವೇಳೆ ಮೀರಿ ನಿಲ್ಲಬೇಕು. ತ್ಯಾಗಕ್ಕೆ ಸಿದ್ಧರಾಗಬೇಕು."

"ಹಾಗಾದರೆ ಮಹಾದೇವಿ ಮತ್ತೆ ಮನೆಗೆ ಬರುವುದು ಸಾಧ್ಯವೇ ಇಲ್ಲವೇ?" ಲಿಂಗಮ್ಮ ಕೇಳಿದಳು.

"ಸದ್ಯಕ್ಕಂತೂ ಅದು ಸಾಧ್ಯವಿಲ್ಲ. ಲೋಕದ ದೃಷ್ಟಿಯಿಂದಲೂ ಸಾಧ್ಯವಿಲ್ಲ. ನೀವು ಈಗ ಮಗಳನ್ನು ಮನೆಗೆ ಕರೆದುಕೊಂಡು ಹೋದಿರಿ ಎನ್ನಿ. ಆಗಲೂ ಜನಾಪವಾದ ತಪ್ಪುತ್ತದೆಯೇ?' ರಾಜನಿಗೆ ಕೊಟ್ಟರು, ಮತ್ತೆ ಹಿಂದಕ್ಕೆ ತಂದರು' ಎನ್ನದೆ ಬಿಡುತ್ತಾರೆಯೇ? ಆಗ ಮಹಾದೇವಿಯ ಗತಿಯೇನು ? ಆದದರಿಂದ ಜನಾಪವಾದದ ಬಯಲುಭೂತಕ್ಕೆ ಹೆದರಬೇಡಿ. ಮಗಳ ಮೇಲಿನ ಮೋಹವನ್ನು ಹೆಚ್ಚು ಹಚ್ಚಿಕೊಳ್ಳಬೇಡಿ... ಅವಳು ನಿಮಗೆ ಕೀರ್ತಿಯನ್ನು ತರುತ್ತಾಳೆ. ಅದಕ್ಕಾಗಿ ಅವಳನ್ನು ಬಿಟ್ಟುಬಿಡಿ. ಸಹನೆಯಿಂದ ಕಾದುನೋಡಿ."

ಗುರುಗಳ ಈ ಮಾತುಗಳು ಮನಸ್ಸನ್ನು ಮಥಿಸುತ್ತಿದ್ದವು. ಯಾರು ಏನನ್ನೂ ಮಾತನಾಡಲಾರದವರಾಗಿದ್ದರು. ಆ ವೇಳೆಗೆ ನಾಲ್ಕು ಜನ ಜಂಗಮರು ಪ್ರವೇಶಿಸಿದರು. ಎಲ್ಲರೂ ಎದ್ದು ನಮಸ್ಕರಿಸಿದರು. ಅವರು ಕುಳಿತುಕೊಂಡ ಮೇಲೆ ಗುರುಗಳು ಮಹಾದೇವಿಯತ್ತ ತಿರುಗಿ :

"ಇವರೇ ಮಹಾದೇವಿ ಕಲ್ಯಾಣದಿಂದ ಬಂದ ಜಂಗಮರು. ಇಂದು ಯಾರೋ ಭಕ್ತರ ಮನೆಯಲ್ಲಿ ಬಿನ್ನಹವಿತ್ತು, ಅದನ್ನು ಮುಗಿಸಿಕೊಂಡು ಬಂದಿದ್ದಾರೆ."

ಮಹಾದೇವಿಯ ಮನಸ್ಸಿನಲ್ಲಿ ಮಿಂಚಿನಂತೆ ಒಂದು ಭಾವ ಸಂಚರಿಸಿತು. ಗುರುಗಳನ್ನು ಕೇಳಿದಳು :

"ಗುರುಗಳೇ..... ಅರಮನೆಯವರೆಗೂ ಇವರು ಬಂದು, ಅರಮನೆಯ ಆತಿಥ್ಯವನ್ನು ಸ್ವೀಕರಿಸುವುದಾದರೆ ತುಂಬಾ ಸಂತೋಷವಾಗುತ್ತದೆ."

ಗುರುಗಳು ಜಂಗಮರ ಕಡೆ ನೋಡಿದರು. ಮಹಾದೇವಿಯ ವಿಷಯವನ್ನು ಗುರುಲಿಂಗರು ಅವರಿಗೂ ಹೇಳಿದ್ದುದರಿಂದ, ಜಂಗಮರಿಗೆ ಎಲ್ಲಾ ಅರ್ಥವಾಗಿತ್ತು. ಅವರೆಂದರು:

"ಆಗಬಹುದು... ಅಷ್ಟೊಂದು ವಿಶ್ವಾಸದಿಂದ ಕರೆಯುವಾಗ..."

ಆದರೆ ಮಧ್ಯದಲ್ಲಿಯೇ ಗುರುಗಳು ಹೇಳಿದರು :

"ಅದು ಸರಿ, ಮಹಾದೇವಿ... ಆದರೆ ಅರಮನೆಯಲ್ಲಿ ರಾಜರು..."

ಮಹಾದೇವಿಗೆ ಅರ್ಥವಾಯಿತು. ಹೇಳಿದಳು :

"ಅದರ ಯೋಚನೆಯಿಲ್ಲ. ನನಗೆ ಸಂಪೂರ್ಣವಾಗಿ ಪೂಜಾಸ್ವಾತಂತ್ರ್ಯವಿದೆ. ನನ್ನ ಸಾಧನೆಗೆ ರಾಜರು ಅಡ್ಡಿ ಬರುವುದಿಲ್ಲ."

"ಹಾಗಾದರೆ ಆಗಬಹುದು" ಗುರುಲಿಂಗರು ಸಮ್ಮತಿಸಿದರು.

ಮಹಾದೇವಿ ಎದ್ದು ಜಂಗಮರಿಗೆ ನಮಸ್ಕರಿಸಿ : "ಇದೇ ನನ್ನ ಬಿನ್ನಹ."

"ಆಗಬಹುದು, ನಾಳೆ ನಾವೇ ಬರುತ್ತೇವೆ. ಮಧ್ಯಾಹ್ನದ ವೇಳೆಗೆ."

ಮಹಾದೇವಿಯ ಮುಖ ತೃಪ್ತಿಯಿಂದ ಮಿನುಗಿತು. ರಸವಂತಿ ಹೊತ್ತಾಯಿತೆಂಬ ಸೂಚನೆಯನ್ನು ಕೊಟ್ಟಳು. ಮಹಾದೇಇ ಗುರುಗಳ ಅಪ್ಪಣೆಯನ್ನು ಪಡೆದು ಹೊರಡಲು ಸಿದ್ಧಳಾದಳು. ರಸವಂತಿಯೂ ಮಹಾದೇವಿಯನ್ನು ಅನುಸರಿಸಿದಳು. ಗುರುಲಿಂಗರಿಗೆ ಆಕೆ ನಮಸ್ಕಾರ ಮಾಡಿ ಮೇಲೇಳುವಾಗ ಅವರು ಕೇಳಿದರು :

"ನಿನ್ನ ಹೆಸರೇನು ತಂಗಿ ?"

"ರಸವಂತಿ."

"ನಮ್ಮ ಮಹಾದೇವಿಯನ್ನು ಚೆನ್ನಾಗಿ ನೋಡಿಕೊಳ್ಳಮ್ಮ. ಅವಳ ಮನಸ್ಸನ್ನು ನೀನಾಗಲೇ ತಿಳಿದುಕೊಂಡಿರಬಹುದು. ಅವಳಿಗೆ ಸಹಾಯಕಳಾಗು."

"ಅವರ ಪಾದಧೂಳಿಯ ಯೋಗ್ಯತೆಯೂ ನನಗಿಲ್ಲ, ಗುರುಗಳೇ. ಏನೋ ಅವರ ಸೇವೆ ಮಾಡುವ ಭಾಗ್ಯ, ಅದಾವ ಪುಣ್ಯದಿಂದಲೋ ನನ್ನ ಪಾಲಿಗೆ ಬಂದಿದೆ. ಅದನ್ನು ಪವಿತ್ರ ಪೂಜೆಯೆಂದು ನಾನು ಮಾಡುತ್ತೇನೆ.

ಆ ದಾಸಿಯ ಸುಸಂಸ್ಕೃತ ಹೃದಯದಿಂದ ಬಂದ ಮಾತುಗಳು ಎಲ್ಲರನ್ನೂ ಸೆರೆಹಿಡಿದವು.

ಮಹಾದೇವಿ ಮೇನೆಯನ್ನೇರಿ ಕುಳಿತಳು. ರಸವಂತಿ ಅವಳನ್ನು ಹಿಂಬಾಲಿಸಿದಳು. ವಸಂತಕನಾಗಲೇ ಸಿದ್ಧನಾಗಿದ್ದ. ರಾಜಪರಿವಾರ ಮೇನೆಯೊಡನೆ ಹೊರಟಿತು. ಮಠದಲ್ಲಿ ನಿಂತ ಎಲ್ಲರೂ ಮೇನೆ ಮರೆಯಾಗುವವರೆಗೂ ಅದನ್ನೇ ನೋಡುತ್ತಿದ್ದರು.

ಅನಂತರ ಗುರುಲಿಂಗರು ಓಂಕಾರ ಲಿಂಗಮ್ಮರನ್ನು ಸಂತೈಸಿದರು. ಧೈರ್ಯವನ್ನಿತ್ತು ಮನೆಯ ಕಡೆಗೆ ಅವರನ್ನು ಕಳುಹಿಸಿದರು. ನಾಳೆ ಅರಮನೆಗೆ ಹೋಗುವ ವಿಷಯದ ವಿವರಗಳನ್ನು ಕೊಡುತ್ತಾ ಜಂಗಮರನ್ನು ಒಡಗೊಂಡು ಮಠದ ಒಳಗೆ ನಡೆದರು.

೯

ಇತ್ತ ಮೇನೆಯಲ್ಲಿ ಅರಮನೆಯತ್ತ ತೆರಳುತ್ತಿದ್ದ ಮಹಾದೇವಿಯ ಮನಸ್ಸು ಒಂದು ಬಗೆಯ ತೃಪ್ತಿಯಿಂದ ಕೂಡಿತ್ತು.

'ಉದಾತ್ತವಾದ ಸಾಧನೆಗಾಗಿ ಎಷ್ಟೋ ವೇಳೆ ಕ್ಷುದ್ರವಾದ ನಿಂದೆಯನ್ನು ನಾವು ಸಹಿಸಿಕೊಳ್ಳಬೇಕಾಗುತ್ತದೆ.'

ಎಂಬ ಗುರುಗಳ ಮಾತನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಿದ್ದಳು. ತನ್ನನ್ನು ಕುರಿತು ಜನ ಆಡಿಕೊಳ್ಳಬಹುದಾದ ಮಾತುಗಳಿಗೆಲ್ಲಾ ಅದು ಸಂಜೀವಿನಿಯೆಂದು ಭಾವಿಸಿದಳು.

ಹಾಗೆಯೇ ಕಲ್ಯಾಣದಿಂದ ಬಂದ ಜಂಗಮರತ್ತ ಅವಳ ಮನಸ್ಸು ಸುಳಿಯಿತು. ಅವರು ಅರಮನೆಗೆ ಬರಲು ಒಪ್ಪಿದುದಕ್ಕಾಗಿ ಆಕೆಗೆ ತುಂಬಾ ಸಂತೋಷವಾಯಿತು. ಕಲ್ಯಾಣದ ವಾರ್ತೆಯನ್ನು ಅವರಿಂದಲೇ ಕೇಳಿ ತಿಳಿಯಬೇಕೆಂಬ ಕುತೂಹಲ ಉಕ್ಕಿಬರುತ್ತಿತ್ತು.

ರಸವಂತಿಯತ್ತ ನೋಡಿದಳು. ಅವಳು ಆವುದೋ ಆಲೋಚನೆಯಲ್ಲಿ ಮಗ್ನವಾಗಿರುವಂತೆ ತೋರುತ್ತಿತ್ತು.

"ಏನು ರಸವಂತಿ, ಬಹಳ ಗಹನವಾದ ಆಲೋಚನೆಯಲ್ಲಿ ತೊಡಗಿರುವಂತೆ ತೋರುತ್ತಿದೆ?" ಕೇಳಿದಳು.

"ಇಲ್ಲ ತಾಯಿ, ಏನೂ ಇಲ್ಲ" ಎಚ್ಚೆತ್ತವಳಂತೆ ರಸವಂತಿ ಸಾವರಿಸಿಕೊಂಡು ಕುಳಿತಳು.

"ಮತ್ತೇನು ? ಕಣ್ಣು ಮುಚ್ಚಿ ಧ್ಯಾನಾಸಕ್ತಳಾದಂತೆ ಕುಳಿತಿದ್ದೀಯ ?"

"ಈ ದಿನ ನಾನು ಎಷ್ಟೊಂದು ವಿಷಯಗಳನ್ನು ಕಲಿತೆ, ತಾಯಿ. ಹೆಣ್ಣು ಇರುವುದೇ ಭೋಗಕ್ಕಾಗಿ ಎಂದು ನಂಬಿದ ನನಗೆ, ಒಂದು ಹೊಸ ದೃಷ್ಟಿ ಬಂದಂತಾಯಿತು. ನಮಗೂ ಪುರುಷರಂತೆ ವ್ಯಕ್ತಿತ್ವವಿದೆಯೆಂಬುದನ್ನು ನೀವು ತೋರಿಸಿಕೊಟ್ಟಿರಿ."

"ನಿಜ, ಸ್ತ್ರೀಗೂ ವ್ಯಕ್ತಿತ್ವವಿದೆ. ಆದರೆ ಇಂದು ಸ್ತ್ರೀ ತನ್ನ ಆತ್ಮವನ್ನೇ ಭೋಗಕ್ಕೆ ಮಾರಿಕೊಂಡಿದ್ದಾಳೆ ; ವಿಲಾಸಿನಿಯಾಗಿದ್ದಾಳೆ. ಕಾಮನಾಟದ ಬೊಂಬೆಯಾಗಿದ್ದಾಳೆ. ತೃಪ್ತಿಯನ್ನು ಕಂಡುಕೊಂಡಿದ್ದಾಳೆ. ಹೆಣ್ಣಿನ ಬಾಳೇ ಅದಕ್ಕಾಗಿ ಎಂದು ನಂಬಿಕೊಂಡಿದ್ದಾಳೆ. ಈ ಭಾವನೆಯನ್ನು ಅವಳು ಬಿಡದ ಹೊರತು ಅವಳ ಉದ್ಧಾರವಿಲ್ಲವೆಂದೇ ಅನಿಸುತ್ತದೆ, ರಸವಂತಿ. ತಾನು ವಿಲಾಸಿನಿಯಲ್ಲ, ತಪಸ್ವಿನಿಯೆಂಬುದನ್ನು ಕಂಡುಕೊಳ್ಳಬೇಕಾಗಿದೆ ಹೆಣ್ಣು."

ಅದನ್ನು ಮೆಚ್ಚಿ ನುಡಿಯುವುದಕ್ಕೂ ಮೀರಿದ ಭಾವ ತುಂಬಿಬಂದಿತು ರಸವಂತಿಯಲ್ಲಿ. ಮಾತು ಗೌರವದಿಂದ ಮೂಕವಾಯಿತು. ಮಹಾದೇವಿಯ ಎದುರು ತಲೆಬಾಗಿದಳು.

ಅರಮನೆ ಬಂದಿತು. ಮಹಾದೇವಿ – ರಸವಂತಿಯರು ಅಂತಃಪುರವನ್ನು ಪ್ರವೇಶಿಸಿದರು. ಮಹಾದೇವಿ ಮಹಡಿಯನ್ನು ಹತ್ತದೆ, ಉದ್ಯಾನವನಕ್ಕೆ ಹೋಗುವ ಬಾಗಿಲತ್ತ ನಡೆದಳು.

"ರಸವಂತಿ, ನಾನಿಲ್ಲೇ ಲತಾನಿಕುಂಜದಲ್ಲಿರುತ್ತೇನೆ. ನೀನು ಸ್ವಲ್ಪ ಹೊತ್ತು ಬಿಟ್ಟು ಸ್ನಾನಕ್ಕೆ ಪೂಜೆಗೆ ಸಿದ್ಧಪಡಿಸಿ ಬಂದು ಕರೆಯುತ್ತೀಯ ?"

"ಆಗಲಿ, ತಾಯಿ...." ಎಂದು ರಸವಂತಿ ನಡೆದಳು.

ಮಹಾದೇವಿ ಉದ್ಯಾನದ ಲತಾಕಂಜವನ್ನು ಪ್ರವೇಶಿಸಿದಳು. ಸೂರ್ಯನಾಗಲೇ ಪಡುವಣ ದಿಗಂತದ ಕೊನೆಯ ಅಂಚಿನಲ್ಲಿ ನಿಂತು ಮರೆಯಾಗಲು ಹವಣಿಸುತ್ತಿದ್ದ. ಸಂಧ್ಯಾಸಮೀರಣ, ಮಂದಮಂದವಾಗಿ ಬೀಸುತ್ತಾ, ಹೊಂಬೆಳಕಿನಲ್ಲಿ ಮಿಂದುನಿಂತು ಪುಷ್ಪವತಿಯಾದ ಲತಾಸುಂದರಿಯನ್ನು ತಬ್ಬಿ ತಣಿಸುತ್ತಿದ್ದ. ನಾನಾವರ್ಣದ ಪುಷ್ಪಸಂಕುಲಗಳು ಸಂತೋಷದಿಂದ ಲಾಸ್ಯವಾಡುತ್ತಿದ್ದವು. ಸರೋವರದ ಸಾರಸಪಕ್ಷಿಗಳ ಮಧುರಕೂಜನ, ಇತರ ಹಕ್ಕಿಗಳ ಕಲರವದೊಡನೆ ಸೇರಿ ನಾದಪ್ರವಾಹದ ಗಂಧರ್ವ ಲೋಕವನ್ನು ಸೃಜಿಸಿತ್ತು.

ಮಹಾದೇವಿ ಲತಾನಿಕುಂಜದ ಪೀಠದ ಮೇಲೆ ಕುಳಿತಳು ಪಡುವಣ ದಿಗಂತಕ್ಕೆದುರಾಗಿ.

ಆಕೆ ಗುರುಲಿಂಗರ ಬಳಿಯಿಂದ ಬಂದಳೆಂಬುದನ್ನು ತಿಳಿದು ಅದೇ ದಾರಿಯನ್ನು ಕಾಯುತ್ತಿದ್ದ ಕೌಶಿಕ, ಈ ವೇಳೆಗೆ ಅಲ್ಲಿಗೆ ಬಂದ. ಅತಿಮೋಹಕವಾದ ಭಂಗಿಯಲ್ಲಿ ಕುಳಿತಿದ್ದ ಮಹಾದೇವಿ ಕಣ್ಣಿಗೆ ಬಿದ್ದಳು.

ಶಿಲಾಪೀಠದ ಮೇಲೆ ವಿಶ್ರಾಂತಿಗೆಂಬಂತೆ ಹಾಗೇ ಹಿಂದಕ್ಕೆ ಒರಗಿ ಮುಳುಗುವ ಸೂರ್ಯನತ್ತ ದೃಷ್ಟಿಯನ್ನು ಹರಿಸುವಂತೆ ಕಾಣುತ್ತಿತ್ತು. ಆತನ ಕೊನೆಯ ಹೊಂಗಿರಣಗಳು ಮಹಾದೇವಿಯ ಮುಖವನ್ನು ಮುತ್ತಿಡುತ್ತಿದ್ದುವು. ಹಾರಾಡುತ್ತಿರುವ ಮುಂಗುರುಳುಗಳೊಡನೆ ಲಾಸ್ಯವಾಡುತ್ತಿದ್ದುವು. ಅವುಗಳ ಸೌಭಾಗ್ಯಕ್ಕಾಗಿ ಕರುಬುತ್ತಾ ಕೌಶಿಕ ಸದ್ದಾಗದಂತೆ ನಡೆದುಬಂದ. ಸಡಿಲವಾಗಿ ಹೆರಳನ್ನು ಹಾಕಿದ ನೀಳವಾದ ಅವಳ ಕೇಶರಾಶಿಗಳು ಒಂದು ಪಕ್ಕಕ್ಕೆ ಓರೆಯಾಗಿ ಎದೆಯ ಮೇಲಿಂದ ಇಳಿದು ನೆಲವನ್ನು ಮುಟ್ಟುವಂತೆ ಹಬ್ಬಿ ಹರಡಿದ್ದುವು.

ಹತ್ತಿರ ಹತ್ತಿರ ಬಂದಂತೆಲ್ಲಾ ಅವಳ ಆಕಾರ, ಆತನಲ್ಲಿ ಉನ್ಮಾದವನ್ನುಂಟು ಮಾಡುವಂತಿತ್ತು. ಆವುದೋ ಆಲೋಚನೆಯಿಂದಲೆಂಬಂತೆ ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡಿದ್ದಾಳೆ. ಆ ತಪ್ತಕಾಂಚನ ವರ್ಣದ ಅವಳ ಸುಂದರವಾದ ಮುಖ, ಇನಿಯನ ಬರವನ್ನು ಹಾರೈಸಿ ಮುಗಿದ ಕಮಲದ ಆಹ್ವಾನದಂತೆ ಕಾಣುತ್ತಿದೆ ಕೌಶಿಕನಿಗೆ !

ಒಂದು ಕೈಯನ್ನು ಮೇಲಕ್ಕೆತ್ತಿ ಕಲ್ಲಿನ ಪೀಠದ ಮೇಲೆ, ತಲೆಯ ಹಿಂದೆ ದಿಂಬಿನಂತೆ ಇಟ್ಟುಕೊಂಡಿದ್ದಾಳೆ. ಇನ್ನೊಂದು ಕೈ ಏರಿಳಿತವನ್ನು ಸೂಚಿಸುತ್ತಿರುವ ಅವಳ ಎದೆಯ ಮೇಲೆ ಮಲಗಿದೆ. ಸೆರಗು ನಸು ಜಾರಿದೆ.

ಮಲ್ಲಿಗೆಯ ದಂಡೆಯಂತಹ ಅವಳ ದುಂಡುತೋಳಿನ ಕಾಂತಿ, ಕೌಶಿಕನನ್ನು ಕರೆದಂತೆ ಕಾಣಿಸಿತು. ಅವಳ ಅಂಗಾಂಗಗಳಲ್ಲೆಲ್ಲಾ ಅವನ ಹಸಿದ ದೃಷ್ಟಿ ಹರಿದಾಡಿತು. ನೋಡಿದಂತೆಲ್ಲಾ ಅವನ ಮನಸ್ಸು ಹುಚ್ಚೆದ್ದು ಕುಣಿಯಿತು. ದಳ್ಳುರಿಯಂತೆ ದೇಹದ ಕಣಕಣವನ್ನು ವ್ಯಾಪಿಸಿತು. ವಿವೇಕದ ಹಗ್ಗ ಹರಿಯಿತು, ಸಂಯಮದ ಕಟ್ಟೆ ಒಡೆಯಿತು. ಏನು ಮಾಡುತ್ತಿರುವೆನೆಂಬುದರ ಪ್ರಜ್ಞೆಯೇ ಹಾರಿತು. ಆವೇಶ ಬಂದವನಂತೆ ಮುಂದೆ ನುಗ್ಗಿದವನೇ "ಮಹಾದೇವಿ" ಎನ್ನುತ್ತಾ ಅವಳನ್ನು ತಬ್ಬಿದ.

ಸಿಡಿಲು ಹೊಡೆದವಳಂತೆ ಸಿಡಿದು ನಿಂತಳು ಮಹಾದೇವಿ. ಸಾತ್ವಿಕವಾದ ಕಾಂತಿಯಿಂದ ಪ್ರಶಾಂತವಾಗಿದ್ದ ಮುಖ, ಭಯಂಕರವಾಗಿ ಅಗ್ನಿಪರ್ವತದಂತೆ ಕಿಡಿಗಳನ್ನುಗುಳತೊಡಗಿತ್ತು :

"ಮಹಾರಾಜ ಹಿಂದಕ್ಕೆ ಸರಿದು ನಿಲ್ಲು. ವಿನಾಶದ ಹಾದಿಯನ್ನು ತುಳಿಯಬೇಡ !" ಕೋಪದಿಂದ ತುಟಿಗಳು ಕಂಪಿಸುತ್ತಿದ್ದವು. ದೇಹವೆಲ್ಲಾ ಆವೇಶದಿಂದ ನಡುಗುತ್ತಿತ್ತು.

ಬೆಂಕಿಯ ಮೇಲೆ ಬಿದ್ದು ಮೈಸುಟ್ಟುಕೊಂಡ ನರಿಯಂತೆ ತಡವರಿಸುತ್ತಾ ಹೇಳಿದ ಕೌಶಿಕ :

ಇಲ್ಲ.... ಮಹಾದೇವಿ... ನಾನೇನೂ ಅಂತಹ...."

"ನಿಲ್ಲಿಸು, ಪರಸ್ತ್ರೀಯೊಬ್ಬಳು ಮೈಮರೆತು ಕುಳಿತಿರುವಾಗ, ಹಿಂದಿನಿಂದ ಬಂದು ಮೈ ಮುಟ್ಟುವುದಕ್ಕೆ ನಾಚಿಕೆಯಾಗುವುದಿಲ್ಲವೇ ನಿನಗೆ ?" ಗುಡುಗಿದಳು ಮಹಾದೇವಿ.

"ನೀನು ಪರಸ್ತ್ರೀಯೆಂದು ನಾನು ಭಾವಿಸಿಲ್ಲ." ತೊದಲಿದ ಕೌಶಿಕ.

"ನಿನ್ನ ಮನಸ್ಸು ಏನನ್ನಾದರೂ ಭಾವಿಸಿರಬಹುದು.... ಆದರೆ... ನಾನು ಹೇಳಿದ ಮಾತುಗಳು ನೆನಪಿನಲ್ಲಿಲ್ಲವೇ ?"

"ಇವೆ. ಆದರೆ... ಮಹಾದೇವಿ... ನನ್ನನ್ನು ಏಕಿಷ್ಟು ಗೋಳಾಡಿಸುತ್ತಿದ್ದೀಯ? ನಿನ್ನ ಅಪೂರ್ವವಾದ ಸೌಂದರ್ಯದಿಂದ ನನ್ನನ್ನು ಹುಚ್ಚನನ್ನಾಗಿ ಮಾಡಿ ಅದರ ಆಟವನ್ನು ನೋಡುತ್ತಿದ್ದೀಯ ? ನನ್ನ ಮೇಲೆ ಇಷ್ಟೊಂದು ಕಠಿಣಳಾಗಬೇಡ, ಬೇಡಿಕೊಳ್ಳುತ್ತೇನೆ. ನಿನ್ನ ಪ್ರೇಮವನ್ನು ನೀಡು" – ದೈನ್ಯದಿಂದ ಬೇಡಿದ ಕೌಶಿಕ.

ಮಹಾದೇವಿಯ ಆವೇಶವೂ ಸ್ವಲ್ಪ ಇಳಿದಿತ್ತು. ಹೇಳಿದಳು :

ನೀವು ಬೇಡುತ್ತಿರುವುದು ನನ್ನ ಪ್ರೇಮವಲ್ಲ ; ನನ್ನ ದೇಹವನ್ನು. ಈ ದೇಹದ ಸೌಂದರ್ಯವೆಂಬ ಭ್ರಮೆಯಿಂದ ಇಷ್ಟೊಂದು ಮರುಳಾಗುವುದುಂಟೇ? ಏನಿದೆ ಈ ದೇಹದಲ್ಲಿ ; ಕಣ್ಣು ತೆರೆದು ನೋಡು :

ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ,
ಎಲುವಿನ ತಡಿಕೆ, ಕೀವಿನ ಹಡಿಕೆ
ಸುಡಲೀ ದೇಹವ ; ಒಡಲುವಿಡಿದು ಕೆಡದಿರು,
ಚೆನ್ನಮಲ್ಲಿಕಾರ್ಜುನನರಿ ಮರುಳೇ.

ಅವಾಕ್ಕಾಗಿ ನಿಂತ ಕೌಶಿಕ ಮತ್ತೆ ಹೇಳಿದ :

"ನಿನ್ನಂತಹ ಸುಂದರ ತರುಣಿ, ಇಂತಹ ಶುಷ್ಕತತ್ವಗಳನ್ನು ಹೇಳುವುದೇ? ಸೃಷ್ಟಿಕರ್ತನ ಅಪಾರವಾದ ಸೌಂದರ್ಯದ ರಾಶಿಯನ್ನು ಪಡೆದಿರುವ ನಿನ್ನಲ್ಲಿ ಆ ಸೌಂದರ್ಯದ ದೃಷ್ಟಿಯನ್ನು ಮೆಚ್ಚುವ ರಸಿಕತೆಯಿಲ್ಲವೇ ? ನಿನ್ನ ಸೌಂದರ್ಯದ ಉಪಾಸಕ ನಾನು, ಆರಾಧಕ ನಾನು."

"ಹೀಗೆಯೇ ಜನ ದೊಡ್ಡ ದೊಡ್ಡ ಮಾತುಗಳನ್ನಾಡಿ, ತಮ್ಮನ್ನು ತಾವು ವಂಚಿಸಿಕೊಳ್ಳುವುದು. ನಿಜವಾದ ಸೌಂದರ್ಯೋಪಾಸನೆ ಸ್ವಾರ್ಥರಹಿಸತವಾದದ್ದು. ಆದರೆ ನಿನ್ನದು ಸ್ವಾರ್ಥಮೂಲವಾದದ್ದು. ಕ್ಷುದ್ರಸುಖವನ್ನು ಬಯಸಿದುದು. ಅದು ಉಪಾಸನೆಯಲ್ಲ, ಆರಾಧನೆಯಲ್ಲ, ಕಾಮವಾಸನೆ."

"ಸ್ವಾರ್ಥಮೂಲವಾಗಿಯೂ ನಿಃಸ್ವಾರ್ಥಕ್ಕೆ ಏರಬಹುದಲ್ಲವೇ, ಮಹಾದೇವಿ ? ದೈಹಿಕ ಆಕರ್ಷಣೆ ಮೊದಲನೆ ಮೆಟ್ಟಲು. ಅಲ್ಲಿಂದ ಹೊರಟ ನಮ್ಮ ಪ್ರೇಮ ಉದಾತ್ತವಾದುದಾಗಲಿ ; ವಿಶ್ವವ್ಯಾಪಕವಾದುದಾಗಲಿ. ನಾನು ಕಂಡ ಕಂಡ ಸ್ತ್ರೀಯರನ್ನು ಬಯಸುವ ಕಾಮುಕನಲ್ಲ. ನನ್ನ ಪ್ರೇಮವೆಲ್ಲಾ ನಿನ್ನಲ್ಲಿ ನಾಟಿದೆ. ಎಲ್ಲವನ್ನೂ ನಿನಗೇ ಧಾರೆಯೆರೆದಿದ್ದೇನೆ."

"ಕ್ಷಮಿಸು, ರಾಜೇಂದ್ರ. ಅಂತಹ ನಿನ್ನ ಪ್ರೇಮವನ್ನು ಸ್ವೀಕರಿಸುವ ಸ್ಥಿತಿಯಲ್ಲಿ ನಾನಿಲ್ಲ. ಅದಕ್ಕೆ ಅನರ್ಹಳೆಂದಾದರೂ ನನ್ನನ್ನು ಬಿಟ್ಟುಬಿಡು. ಈಗಲೂ ಹೇಳುತ್ತೇನೆ, ಆಡಿದ ಮಾತಿಗೆ ತಪ್ಪಿ ದುಡುಕಿ ನಡೆಯಬೇಡ. ನನ್ನನ್ನು ಕಳುಹಿಸಿಬಿಡು. ಇಲ್ಲವಾದರೆ..."

ಹೇಳುತ್ತಾ ಹೇಳುತ್ತಾ ಮಹಾದೇವಿಯ ಧ್ವನಿ ಮತ್ತೆ ಗಡುಸಾಯಿತು :

"ಇಲ್ಲವಾದರೆ... ಮನುಷ್ಯನ ಯೋಗ್ಯತೆಯನ್ನು ಮೂರು ಬಾರಿ ಪರೀಕ್ಷಿಸಿ ನಿರ್ಧರಿಸಬೇಕೆಂಬ ಮಾತುಂಟು. ಈಗ ನೀನು ನನ್ನ ನಿಯಮವನ್ನು ಮೀರಿ, ಕೊಟ್ಟ ಮಾತಿಗೆ ತಪ್ಪಿದ್ದೀಯ. ಇನ್ನು ಎರಡು ಬಾರಿ ನಿನ್ನಿಂದ ಇಂತಹ ತಪ್ಪುಗಳು ಘಟಿಸಿದರೆ, ನಾನು ಸ್ವತಂತ್ರಳಾಗುತ್ತೇನೆ. ಆಗ ನನ್ನನ್ನು ಯಾವ ಶಕ್ತಿಯೂ ಈ ಅರಮನೆಯಲ್ಲಿ ತಡೆದು ನಿಲ್ಲಿಸಲಾರದು ತಿಳಿಯಿತೇ ?"

"ಹಾಗೆಲ್ಲ ಹೇಳಬೇಡ ಮಹಾದೇವಿ. ನೀನಿಲ್ಲದೆ ನನ್ನ ಬಾಳು ನಡೆಯಲಾರದು. ನನ್ನನ್ನು ಉದ್ಧರಿಸುವುದು ನಿನಗೆ ಸೇರಿದೆ."

"ಆಡಿದ ಮಾತನ್ನೇ ಮತ್ತೆ ಮತ್ತೆ ಆಡಿದರೆ ಫಲವಿಲ್ಲ ಮಹಾರಾಜ. ನೀನು ಕ್ಷತ್ರಿಯಕುಲೋತ್ಪನ್ನ. ನಿನ್ನ ಕಲಿತನವನ್ನು ಈಗ ನಿನ್ನ ಇಂದ್ರಿಯಗಳನ್ನು ಜಯಿಸುವುದರ ಮೂಲಕ ತೋರಿಸು."

ಆ ವೇಳೆಗೆ ರಸವಂತಿ ಕಾಣಿಸಿಕೊಂಡಳು. ಅದನ್ನು ನೋಡಿ ಹೇಳಿದಳು ಮಹಾದೇವಿ : ಅದೋ ರಸವಂತಿ ಬರುತ್ತಿದ್ದಾಳೆ. ಚೆನ್ನಾಗಿ ಆಲೋಚಿಸು. ಅರಮನೆಯಿಂದ ಹೋಗಲು ನನಗೆ ಜಾಗ್ರತೆಯಾಗಿ ಅನುಮತಿ ಕೊಡು"

ಎಂದು ಹೇಳುತ್ತಾ ಮಹಾದೇವಿ ಹೊರಟಳು. ಅವಳು ಹೋಗುವುದನ್ನೇ ನೋಡುತ್ತಾ ನಿಂತ ಕೌಶಿಕ. ಅವಳು ಮರೆಯಾಗಲು, ಅದೇ ಶಿಲಾಪೀಠದ ಮೇಲೆ ಕುಸಿದು ಕುಳಿತ.

## ೧೦

ಬೆಳಗ್ಗೆ ಮಹಾದೇವಿಯ ಮನಸ್ಸು ಹಿಂದಿನ ದಿನದ ಘಟನೆಗಳೆಲ್ಲವನ್ನೂ ಮರೆತು ಸಂಭ್ರಮದಿಂದ ಕೂಡಿತ್ತು. ತನ್ನ ಆಹ್ವಾನವನ್ನು ಮನ್ನಿಸಿ ಜಂಗಮರು ಆಗಮಿಸುವ ದಿನ ಇಂದು.

ಕೌಶಿಕನಿಗೂ ಈ ವಿಷಯವನ್ನು ತಿಳಿಸಬೇಕೆಂದು ಅನ್ನಿಸಿತು ಆಕೆಗೆ. ಅವನನ್ನು ನೋಡಲು ಹೊರಟಳು. ಅಂತಃಪುರದ ಹೊರವಿಭಾಗದ ತೊಟ್ಟಿಯಲ್ಲಿ

ಕೌಶಿಕ ಅತ್ತಿತ್ತ ತಿರುಗಾಡುತ್ತಿದ್ದ. ನೆನ್ನೆ ಸಂಜೆಯ ಘಟನೆಯನ್ನೇ ಮಥಿಸುತ್ತಿತ್ತು ಅವನ ಮನಸ್ಸು.

"ನಾನು ಮಾಡಿದುದರಲ್ಲಿ ತಪ್ಪೇನಿದೆ ? ಎಂದಿದ್ದರೂ ಮಹಾದೇವಿ ನನ್ನವಳಾಗಲೇಬೇಕು ತಾನೆ !" ಎನ್ನುವುದು ಒಂದು ಮನಸ್ಸು.

"ಅದು ಅಷ್ಟು ಸುಲಭವಲ್ಲ. ಅವಳು ಹೇಳಿದ ಮಾತುಗಳನ್ನು ನೆನೆಸಿಕೊ. ಅವಳಿಗೆ ಕೊಟ್ಟ ವಾಗ್ದಾನವನ್ನು ಸ್ಮರಿಸಿಕೋ" ಎಂದು ಎಚ್ಚರಿಸುವುದು ಅದರ ಇನ್ನೊಂದು ಮುಖ.

"ಅವಳಾವುದೋ ಭಾವನೆಯ ಲೋಕದಲ್ಲಿದ್ದಾಳೆ. ಹೆಣ್ಣಿಗೆ ಅದು ಸಹಜವಾದ ಪ್ರವೃತ್ತಿಯಲ್ಲ. ಅದೆಷ್ಟು ದಿನ ಇರಬಲ್ಲದು ?... ಆದರೆ ನೆನ್ನೆಯ ದಿನ ಹೇಗೆ ಸಿಡಿದು ಗರ್ಜಿಸಿದಳು. ಈಗಲೂ ಅವಳ ಕೋಪ ಇಳಿದಿದೆಯೋ ಇಲ್ಲವೊ"... ಇತ್ಯಾದಿಯಾಗಿ ಹರಿದಿತ್ತು ಕೌಶಿಕನ ಮನಸ್ಸು.

ಅಷ್ಟರಲ್ಲಿ ಮಹಾದೇವಿಯೇ ಬರುತ್ತಿದ್ದುದನ್ನು ಕಂಡು ಚಕಿತನಾದ.

'ತಾನೇ ನನ್ನನ್ನು ಹುಡುಕಿಕೊಂಡು ಬರುತ್ತಿದ್ದಾಳೆ. ಮುಖ ಉಗ್ರವಾಗಿಲ್ಲ. ಎಂದಿಗಿಂತ ಪ್ರಸನ್ನವಾಗಿ ಉತ್ಸಾಹದ ಕಾಂತಿಯಿಂದ ಹೊಳೆಯುತ್ತಿದೆ. ನಿನ್ನೆಯ ಕೋಪ ಇಳಿದಿದೆ ಹಾಗಾದರೆ.... ಎಂದು ಆಲೋಚಿಸುತ್ತಿರುವಷ್ಟರಲ್ಲಿ ಮಹಾದೇವಿ ಬಳಿಗೆ ಬಂದಿದ್ದಳು.

"ಬಾ ಮಹಾದೇವಿ ಪೂಜೆಯಾಯಿತೇ?"

"ಆಯಿತು, ಈ ದಿನ ಒಂದು ವಿಶೇಷ ಸಮಾಚಾರವನ್ನು ತಿಳಿಸಬೇಕೆಂದು ಬಂದೆ. ಕಲ್ಯಾಣದಿಂದ ಬಂದ ಜಂಗಮರು ಇಂದು ಅತಿಥಿಯಾಗಿ ಬರುತ್ತಾರೆ" ಎಂದು ತಾನು ಗುರುಗಳ ಬಳಿಯಲ್ಲಿ ಅವರನ್ನು ಕಂಡುದನ್ನೂ, ಅವರಿಗೆ ಆಹ್ವಾನವಿತ್ತುದನ್ನೂ ಉತ್ಸಾಹದಿಂದ ತಿಳಿಸಿದಳು.

"ಆಗಲಿ ಮಹಾದೇವಿ, ನಿನ್ನ ಭಕ್ತಿ ಸಾಧನೆಗೆ ನನ್ನ ಅಡ್ಡಿಯಿಲ್ಲ." ಇದುವರೆಗೂ ಇಲ್ಲದ ಅವಳ ಉತ್ಸಾಹದ ನಗುಮುಖವನ್ನೂ ಸಂಭ್ರಮವನ್ನೂ ಕಂಡು ಕೌಶಿಕನ ಆಸೆ ಗಗನಕ್ಕೇರಿತ್ತು. ಆ ಅಮಲಿನಲ್ಲಿಯೇ ಹೇಳಿದ :

"ಈಗ ಬೇಕಾದುದೇನು ಹೇಳು ?"

"ಅವರು ಯಾವ ಸಮಯಕ್ಕೆ ಬರುತ್ತಾರೋ ತಿಳಿಯದು. ಅವರ ಸ್ವಾಗತಕ್ಕೆ ಉಪಚಾರಕ್ಕೆ ತಕ್ಕ ವ್ಯವಸ್ಥೆಯಾಗಬೇಕು."

"ಆಗಬಹುದು. ಏನು ಬೇಕಾದರೂ ಏರ್ಪಾಡನ್ನು ಮಾಡು. ಅರಮನೆಯೇ ನಿನ್ನ ಅಪ್ಪಣೆಯನ್ನು ಕಾದು ನಿಂತಿದೆ. ನೀನು ಹೇಳಿದ ಮಾತನ್ನು ಯಾರೂ

ಮೀರಿ ನಡೆಯಲಾರರು. ಹಾಗೆ ಅವರಿಗೆ ಆಜ್ಞಾಪಿಸಿದ್ದೇನೆ.''

"ಸರಿ, ಹಾಗಾದರೆ ನಾನು ಬರುತ್ತೇನೆ'' ಎಂದು ಮಹಾದೇವಿ ಹೊರಟಳು. ನಡೆಯುತ್ತಾ ಅಲ್ಲ, ಕುಣಿಯುತ್ತಾ ಹೋದಂತೆ ಕಾಣಸಿತು ಕೌಶಿಕನಿಗೆ. ಜಂಗಮ ಭಕ್ತಿಯ ಅವಳ ಉತ್ಸಾಹವನ್ನು ಕೌಶಿಕ ತನಗೆ ಅನುಗುಣವಾದ ದೃಷ್ಟಿಯಿಂದ ವಿಮರ್ಶಿಸಿದ. ತನ್ನ ರೊಟ್ಟಿಜಾರಿ ತುಪ್ಪದಲ್ಲಿ ಬಿದ್ದಿತೆಂದು ತಿಳಿದ. ನೆನ್ನೆಯ ದಿನದ ಘಟನೆಯಿಂದ ಅವಳಿಗೆ ಉಂಟಾದ ಕೋಪ ತಾತ್ಕಾಲಿಕವಾದುದೆಂದೂ, ಇಂದಿನ ಈ ಉತ್ಸಾಹ, ಸಮ್ಮತಿಸೂಚಕವಾದ ಸಂಕೇತವೆಂದೂ ಭಾವಿಸಿದ. ಇನ್ನೇನು ಇಂದೋ ನಾಳೆಯೋ ಮಹಾದೇವಿ ತನ್ನವಳಾಗುವ ಸಮ್ಮತಿಯನ್ನೀಯುವಳೆಂದು ಕನಸು ಕಟ್ಟಿದ. ಆ ಕನಸಿನ ಆಶಾಗೋಪುರದಲ್ಲಿಯೇ ವಿಹರಿಸುತ್ತಾ ಆ ದಿನವು ಉರುಳುವುದನ್ನೇ ಕಾಯತೊಡಗಿದ.

ಇತ್ತ ಮಹಾದೇವಿ ಜಂಗಮರ ಸತ್ಕಾರಕ್ಕೆ ಎಲ್ಲ ವ್ಯವಸ್ಥೆಯನ್ನೂ ಮಾಡಿದಳು. ರಸವಂತಿಯೂ ಅವಳಿಗೆ ಉತ್ಸಾಹದಿಂದ ನೆರವಾದಳು. ಜಂಗಮರು ಬರುತ್ತಿರುವುದನ್ನು ಕಂಡೊಡನೆಯೇ ತನಗೆ ತಿಳಿಸುವಂತೆ ರಸವಂತಿಯನ್ನು ನೇಮಿಸಿದಳು. ರಸವಂತಿ ಇನ್ನೂ ಒಬ್ಬಿಬ್ಬರು ದಾಸಿಯರೊಡನೆ ಹೆಬ್ಬಾಗಿಲಿನಲ್ಲಿಯೇ ನಿಂತಳು. ಜಂಗಮರನ್ನು ನಿರೀಕ್ಷಿಸುತ್ತಾ.

ಜಂಗಮರು ಬರುತ್ತಿರುವುದನ್ನು ಕೇಳಿದೊಡನೆಯೇ ಮಹಾದೇವಿ ಸಂಭ್ರಮದಿಂದ ಓಡಿದಳು ಹೆಬ್ಬಾಗಿಲಿನ ಬಳಿಗೆ. ಕೆಲವು ದಾಸಿಯರೂ ಅವಳನ್ನು ಹಿಂಬಾಲಿಸಿದರು. ದ್ವಾರಪಾಲಕರೆಲ್ಲಾ ತಮ್ಮ ಭಾವೀ ಮಹಾರಾಣಿ ಬರುತ್ತಿರುವುದರ ಗೌರವಸೂಚಕವಾಗಿ ವಿನಯದಿಂದ ದೂರಸರಿದು ನಿಂತಿದ್ದರು.

ಮಹಾದೇವಿ ಜಂಗಮರನ್ನು ಭಕ್ತಿಪೂರ್ವಕವಾಗಿ ಸ್ವಾಗತಿಸಿ ಒಳಗೆ ಕರೆದೊಯ್ಯತೊಡಗಿದಳು.

ಜಂಗಮರು ಅರಮನೆಯನ್ನು ಪ್ರವೇಶಿಸಿದರು. ಅರಮನೆಯಲ್ಲಿ ದೊರೆತ ಆದರದ ಆತಿಥ್ಯವನ್ನು ಕಂಡು ಅವರಿಗೇ ಆಶ್ಚರ್ಯವಾಯಿತು. ಎಲ್ಲವೂ ಸಾಂಗವಾಗಿ, ಯಥಾಕ್ರಮವಾಗಿ ನಡೆದ ಮೇಲೆ ಜಂಗಮರಲ್ಲಿ ಹಿರಿಯರಾದ ಸಂಗಮದೇವರು ಹೇಳಿದರು :

"ಏನಮ್ಮಾ, ಅದ್ಭುತವಾದ ರಾಜಾತಿಥ್ಯವನ್ನು ನಡೆಸಿಬಿಟ್ಟೆ !''

"ನಾನೇನೂ ಅರಿಯೆ, ಮಹಾಸ್ವಾಮಿ, ಇದೆಲ್ಲಾ ಚನ್ನಮಲ್ಲಿಕಾರ್ಜುನನ ವಿಚಿತ್ರ ಲೀಲೆ. ರಾಜಸಂಪತ್ತಿನಿಂದ ನಡೆದಿರುವ ಇದರ ಫಲವೆಲ್ಲಾ ಇದರ ಒಡೆಯರಾದ ಕೌಶಿಕ ಮಹಾರಾಜರಿಗೆ ಸಲ್ಲಲಿ. ಅದರಿಂದಲಾದರೂ ಅವರ

ಮನಸ್ಸು ಪರಿವರ್ತನೆಯಾಗಲಿ ಎಂದು ಹಾರೈಸುತ್ತೇನೆ. ಅದಕ್ಕೆ ತಮ್ಮ ಆಶೀರ್ವಾದವೂ ಸಿಕ್ಕಬೇಕು." ಹೇಳಿದಳು ಮಹಾದೇವಿ.

"ಎಂತಹ ಉದಾತ್ತಭಾವನೆ ತಾಯೀ ನಿನ್ನದು ! ನಿಜ, ಆತನ ಉದ್ಧಾರದ ಬಾಗಿಲು ತೆರೆಯುವ ಕಾಲ ಸಮೀಪಿಸಿದೆ. ಯಾರ ಯಾರ ಉದ್ಧಾರ ಯಾವ ರೂಪದಲ್ಲಿ ಬರುತ್ತದೆಯೋ! ಕೌಶಿಕನ ಉದ್ಧಾರ ಈ ರೂಪದಲ್ಲಿ ಬಂದಿರುವಂತೆ ತೋರುತ್ತಿದೆ".

ಸಂಗಮದೇವರ ಈ ಮಾತಿನಿಂದ ಮಹಾದೇವಿಗೆ ಸಂತೋಷವಾಯಿತು. ಕೌಶಿಕನನ್ನು ಆಕೆ ಪ್ರೀತಿಸುತ್ತಿದ್ದಳು. ಆದರೆ ಆ ಪ್ರೇಮ ಕೌಶಿಕ ಬಯಸಿದ ಬಗೆಯದಾಗಿರಲಿಲ್ಲ. ಅದೊಂದನ್ನು ಅವನು ಪರಿವರ್ತಿಸಲು ಸಿದ್ಧನಾಗಿದ್ದರೆ ಅತಿ ಉದಾತ್ತನಾದ ಸ್ಥಾನವನ್ನು ಅವಳ ದೃಷ್ಟಿಯಲ್ಲಿ ಪಡೆಯುತ್ತಿದ್ದ. ಕ್ರಮೇಣ ಅವನ ಮನಸ್ಸನ್ನು ಆ ಮಟ್ಟಕ್ಕೆ ಏರಿಸಬೇಕೆಂಬುದೂ ಅವಳ ಉದ್ದೇಶವಾಗಿತ್ತು.

ಜಂಗಮರ ಈ ಮಾತನ್ನು ಕೇಳಿ ತನ್ನ ಈ ಭಾವನೆಗಳನ್ನೆಲ್ಲಾ ಮನಸ್ಸಿನಲ್ಲಿಯೇ ಮೆಲುಕು ಹಾಕಿದಳು ಮಹಾದೇವಿ. ಮತ್ತೆ ಹೇಳಿದಳು :

"ಈಗ ತಾವು ವಿಶ್ರಾಂತಿಯನ್ನು ಪಡೆಯಿರಿ. ಅನಂತರ ನಾನು ಬರುತ್ತೇನೆ. ಕಲ್ಯಾಣದ ಬಸವಣ್ಣನವರ ಕಾರ್ಯಕ್ಷೇತ್ರದ ಮಹಿಮೆಯನ್ನು ತಮ್ಮ ಬಾಯಿಂದ ಕೇಳಬೇಕೆಂದು ಹಂಬಲಿಸುತ್ತಿದ್ದೇನೆ."

"ಅಗತ್ಯವಾಗಿ ಆಗಬಹುದು, ತಾಯಿ. ಕಲ್ಯಾಣದ ಅಣ್ಣನ ಅದ್ವಿತೀಯವಾದ ಮಹಾಸಾಧನೆಯನ್ನು ನಿನಗಲ್ಲದೆ ಇನ್ನಾರಿಗೆ ಹೇಳಬೇಕು ! ನನ್ನ ತೊದಲುಮಾತಿಗೆ ನಿಲುಕುವ ಮಟ್ಟಿಗೆ ಹೇಳುತ್ತೇನೆ."

"ಹಾಗಾದರೆ ತಾವೀಗ ವಿಶ್ರಾಂತಿಯನ್ನು ಪಡೆಯಿರಿ. ಆಮೇಲೆ ನಾನು ಬರುತ್ತೇನೆ" ಎಂದು ಮಹಾದೇವಿ, ಕಲ್ಯಾಣದ, ಕಲ್ಯಾಣಕರವಾದ ವಾರ್ತೆಯನ್ನು ಕೇಳುವ ಸುಮುಹೂರ್ತವನ್ನು ನೆನೆಸಿಕೊಳ್ಳುತ್ತಾ ಅಲ್ಲಿಂದ ನಡೆದಳು. ತಾನೂ ಪ್ರಸಾದವನ್ನು ಸ್ವೀಕರಿಸಿದಳು. ಗುರುಲಿಂಗರಿಂದ ತಾನು ತಿಳಿದಷ್ಟರಮಟ್ಟಿಗೆ ಕಲ್ಯಾಣದ ಮಹತ್ವವನ್ನು ರಸವಂತಿಗೆ ಹೇಳಿದಳು. ಮುಂದಿನ ಕಥೆಯನ್ನು ಕೇಳುವುದಕ್ಕಾಗಿ ಹಿಂದಿನದನ್ನೆಲ್ಲ ನೆನೆಸಿಕೊಳ್ಳುವ ಕುತೂಹಲದ ಕಥೆಗಾರನಂತೆ, ಆ ನೆಪದಿಂದ ಅದನ್ನೆಲ್ಲಾ ನೆನೆಸಿಕೊಂಡಳು.

ಮಹಾದೇವಿ ರಸವಂತಿಯರು ಜಂಗಮರ ಬಳಿ ಬಂದಾಗ ಹೊತ್ತು ಇಳಿಮುಖವಾಗುತ್ತಿತ್ತು. ಜಂಗಮರು ಮಾತನಾಡುತ್ತಾ ಕುಳಿತಿದ್ದರು. ಆ ನಾಲ್ವರಲ್ಲಿ ಅತಿಕಿರಿಯನಾದ ಜಂಗಮ ಏಕನಾದವನ್ನಿಟ್ಟುಕೊಂಡು ಬಾರಿಸುತ್ತಾ ಓಲೆಗರಿಯನ್ನು

ನೋಡುತ್ತಾ ಯಾವುದೋ ಒಂದು ವಚನವನ್ನು ಕಲಿಯುವುದರಲ್ಲಿ ತೊಡಗಿದ್ದ.

ಮಹಾದೇವಿ ಪ್ರವೇಶಿಸುತ್ತಾ :

"ನಾವು ತೊಂದರೆ ಕೊಡುತ್ತಿಲ್ಲವಷ್ಟೆ, ಮಹಾಸ್ವಾಮಿ ?"

"ಇಲ್ಲವಮ್ಮ, ಇಲ್ಲ. ನಿಮ್ಮ ಆಗಮನವನ್ನೇ ನಿರೀಕ್ಷಿಸಿಕೊಂಡಿದ್ದೆವು"

ಸಂಗಮದೇವರು ಹೇಳಿದರು.

ಮಹಾದೇವಿ ಕುಳಿತುಕೊಂಡಳು. ಅವಳ ಪಕ್ಕದಲ್ಲಿ, ಅದರ ಸ್ವಲ್ಪ ಹಿಂದೆ ರಸವಂತಿ ಕುಳಿತಳು. ಮಹಾದೇವಿ ಏಕನಾದದ ಜಂಗಮನತ್ತ ನೋಡುತ್ತಾ :

"ಯಾವುದು ಹೇಳುತ್ತಿದ್ದುದು ?" ಸಂಗಮದೇವರು ಕೇಳಿದುದು ಕಿರಿಯ ಜಂಗಮನನ್ನು.

"ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯ ಎಂಬ ವಚನ. ಅದು ಸ್ವಲ್ಪ ತಪ್ಪುತ್ತಿತ್ತು. ಅದನ್ನು ಕಲಿಯುತ್ತಿದ್ದೆ" – ಹೇಳಿದ ಆತ.

"ತುಂಬಾ ಸುಂದರವಾದ ವಚನ. ಅದನ್ನೇ ಮೊದಲು ಹೇಳೋಣ." – ಸಂಗಮ ದೇವರು ಹೇಳಿದರು. ವಚನ ಪ್ರಾರಂಭವಾಯಿತು. ನಾಲ್ವರೂ ಒಟ್ಟಿಗೇ ಧ್ವನಿಯೆತ್ತಿದರು :

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯ.
ಒರೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯ.
ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ.
ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು
ಕೂಡಲ ಸಂಗಮದೇವಾ.

ಏಕನಾದಕ್ಕೆ ಹೊಂದುವಂತೆ ಮತ್ತು ಅರ್ಥದ ಅಭಿವ್ಯಕ್ತಿಗೆ ಸಹಾಯವಾಗುವಂತೆ ಮಾತ್ರ ಅದಕ್ಕೆ ನಾದವನ್ನು ಜೋಡಿಸಲಾಗಿತ್ತು.

ಕೇಳುತ್ತಾ ಕೇಳುತ್ತಾ ಮಹಾದೇವಿಯ ಅಂತರಂಗ ತುಂಬಿಬಂದಿತು. ತನ್ನ ಅಂತರಂಗದ ಮೊರೆಯೇ ಅಣ್ಣನ ಬಾಯಿಂದ ಮೂಡಿಬಂದಂತೆ ತೋರುತ್ತಿತ್ತು ಮಹಾದೇವಿಗೆ.

ನಾಲ್ವರೂ ಒಟ್ಟಾಗಿ ಹೇಳುತ್ತಿದ್ದರು. ಧ್ವನಿಯ ಗಾಂಭೀರ್ಯವು ಅರ್ಥ ಗಾಂಭೀರ್ಯಕ್ಕೆ ಪರಿಪುಷ್ಟವಾಗಿ ಅರಮನೆಯ ಆ ಕೋಣೆಯನ್ನೇ ಪಾರ್ಥನಾ ಮಂದಿರದ ಗರ್ಭಗೃಹವನ್ನಾಗಿ ಮಾರ್ಪಡಿಸಿತ್ತು.

ವಚನ ಮುಗಿಯಿತು. ಆದರೆ ಅದು ನಿರ್ಗಮಿಸಿದ ವಾತಾವರಣದ ಪ್ರಭಾವ ಮುಗಿಯಲಿಲ್ಲ.

"ಅಣ್ಣನವರ ಮಾತುಗಳಲ್ಲಿ ಅಂದೆಂತಹ ಮಾಂತ್ರಿಕ ಶಕ್ತಿಯಿದೆ, ಮಹಾಸ್ವಾಮಿಗಳೇ !" ಮಹಾದೇವಿ ಮೌನವನ್ನು ಮಥಿಸಿದಳು.

"ಹೌದು, ತಾಯಿ. ಇಂತಹ ವಚನಗಳಿಂದ, ಇಂದು ಜನತೆಯಲ್ಲಿ ಒಂದು ದೊಡ್ಡ ಕ್ರಾಂತಿಯೇ ಆಗುತ್ತಿದೆ ಕಲ್ಯಾಣದಲ್ಲಿ. ಧರ್ಮವು ಸಾಮಾನ್ಯರ ಸೊತ್ತಾಗುತ್ತಿದೆ; ಪಾಪಿಗಳನ್ನು ಉದ್ಧರಿಸುತ್ತಿದೆ. ಅಲ್ಲದೆ ಬಸವಣ್ಣನವರ ವ್ಯಕ್ತಿತ್ವವೇ ಒಂದು ಅಪೂರ್ವವಾದ ಮಾಂತ್ರಿಕ ಶಕ್ತಿ. ಒಮ್ಮೆ ಅವರೊಡನೆ ನುಡಿದವರು, ಪರುಷಮಣಿಯ ಕೈಗೆ ಸಿಕ್ಕ ಕಬ್ಬಿಣದ ತುಂಡಿನಂತೆ ಪರಿವರ್ತಿತರಾಗುತ್ತಾರೆ. ಅಂತಹ ಆಧ್ಯಾತ್ಮಿಕ ಗಾರುಡಿಗ ಆತ. ಇಂದು ಅವರ ಕಾರ್ಯಕ್ಷೇತ್ರ ಅಪಾರವಾಗಿ ಬೆಳೆದಿದೆ. ಕಲ್ಯಾಣವು ಮಹಾಶಕ್ತಿಯ ಕೇಂದ್ರವಾಗಿದೆ" ಎಂದು ಪ್ರಾರಂಭಿಸಿ ಸಂಗಮದೇವರು, ಬಣವಣ್ಣನವರ ಕಾರ್ಯಕ್ಷೇತ್ರದ ಪರಿಚಯವನ್ನು ಸಂಪೂರ್ಣವಾಗಿ ಮಾಡಿಕೊಟ್ಟರು. ಅಲ್ಲದೆ ಗಂಗಾಂಬಿಕೆ, ನೀಲಾಂಬಿಕೆ, ಲಕ್ಕಮ್ಮ, ಮಹಾದೇವಮ್ಮ ಮೊದಲಾದ ಶಿವಶರಣೆಯರನ್ನು ಕುರಿತು ಹೇಳಿದರು. ಹೆಣ್ಣನ್ನು ಕುರಿತು ಅಣ್ಣನವರ ಉದಾತ್ತ ಭಾವನೆಯನ್ನು ನಿರೂಪಿಸಿದರು.

ಅದನ್ನು ಕೇಳುತ್ತಿರುವಾಗಲಂತೂ ಮಹಾದೇವಿ ರೋಮಾಂಚಿತ ಳಾಗುತ್ತಿದ್ದಳು. ಹೆಣ್ಣಿಗೂ ಆಧ್ಯಾತ್ಮದಲ್ಲಿ ಸ್ಥಾನವನ್ನು ಕಲ್ಪಿಸಿಕೊಟ್ಟ ಬಸವಣ್ಣನನ್ನು ಕಾಣಲು ಅವಳ ಮನಸ್ಸು ಹಾತೊರೆಯತೊಡಗಿತ್ತು. ಅಣ್ಣನ ರಕ್ಷಣೆಯಲ್ಲಿ ಬೆಳೆದ ಮಹಿಳಾಸಾಧಕಿಯರ ಪುಣ್ಯ ಚಿತ್ರ ಅವಳ ಮಾನಸರಂಗದಲ್ಲಿ ನರ್ತಿಸತೊಡಗಿತ್ತು.

ಎಷ್ಟು ಕೇಳಿದರೂ ಮಹಾದೇವಿಗೆ ತೃಪ್ತಿಯಿಲ್ಲ. ಮತ್ತೆ ಮತ್ತೆ ಪ್ರಶ್ನಿಸಿ ವಿವರಗಳನ್ನು ತಿಳಿಯಲು ಪ್ರಯತ್ನಿಸುತ್ತಿದ್ದಳು. ಹಗಲು ಕತ್ತಲಾಗುತ್ತಾ ಬರುತ್ತಿದ್ದರೂ ಅದರತ್ತ ಗಮನವೇ ಇರಲಿಲ್ಲ. ದಾಸಿಯೊಬ್ಬಳು ದೀಪವನ್ನು ತಂದಿಟ್ಟಾಗಲೇ ಆಕೆಗೆ ಅರಿವಾದುದು ಕೋಣೆಯನ್ನು ಕತ್ತಲು ಆವರಿಸುತ್ತಿದೆಯೆಂದು. ಕೊನೆಗೆ ಸಂಗಮದೇವರು ಹೇಳಿದರು :

"ನಿನ್ನಂತಹ ಸಾಧಕಳಿಗೆ ಅದು ಅತ್ಯುತ್ತಮ ತಪೋರಂಗವಾಗುತ್ತದೆ, ತಾಯಿ. ನೂರಾರು ಸಾಧಕರು ನಿನ್ನ ಸಾಧನೆಯಿಂದ ಬೆಳಕನ್ನು ಕಂಡುಕೊಳ್ಳುತ್ತಾರೆ."

ಮಹಾದೇವಿಯ ಮೈ ಪುಳಕಿತವಾಯಿತು. ಆದರೆ ಕಲ್ಯಾಣವೆಲ್ಲಿ ; ತಾನೆಲ್ಲಿ?

"ನೀವು ಕಲ್ಯಾಣದಿಂದ ಇಲ್ಲಿಗೆ ಬರಲು ಎಷ್ಟು ದಿನಗಳಾಯಿತು, ಸ್ವಾಮಿ?" ಕೇಳಿದಳು ಸಂಗಮದೇವರನ್ನು.

"ನಾವು ಅಲ್ಲಲ್ಲಿ ಹೆಚ್ಚು ಕಾಲ ನಿಲ್ಲುತ್ತಾ ನಿಧಾನವಾಗಿ ಬಂದೆವು. ಅಲ್ಲಿಂದ ಹೊರಟು ಮೂರುನಾಲ್ಕು ತಿಂಗಳಾಗಿರಬಹುದು. ನೇರವಾಗಿ ಅಲ್ಲಿಗೇ

ಹೋಗಬೇಕೆಂಬ ಏಕೈಕಗುರಿಯಿಂದ ಹೊರಟರೆ ಹದಿನೈದಿಪ್ಪತ್ತು ದಿನಗಳು ಅಥವಾ ಹೆಚ್ಚೆಂದರೆ ಒಂದು ತಿಂಗಳೊಳಗಾಗಿ ಅಲ್ಲಿರಬಹುದು."

ಕ್ಷಣಕಾಲ ಮೌನವಾವರಿಸಿತು. ಮಹಾದೇವಿಯ ಮನಸ್ಸಿನಲ್ಲಿ ಯಾವುದೋ ಭಾವನೆ ತಿರುಗುತ್ತಿರುವಂತಿತ್ತು. ಅನಂತರ ಕೇಳಿದಳು :

"ತಮಗೆ ಶ್ರಮವಾಗದಿದ್ದರೆ ಇನ್ನೊಂದೆರಡು ವಚನಗಳನ್ನು ...."

"ಕೇಳಮ್ಮ ; ಒಂದೆರಡಲ್ಲ ಹತ್ತಾರನ್ನು ಹೇಳುತ್ತೇವೆ. ಕೇಳುವವರಿದ್ದರೆ ಬೆಳಗಿನವರೆಗೂ ಬೇಕಾದರೂ ಹೇಳುತ್ತೇವೆ."

ಏಕನಾದದ ಜಂಗಮ ಆಗಲೇ ಪ್ರಾರಂಭಿಸಿದ್ದ ತನ್ನ ವಾದ್ಯದ ನಾದವನ್ನು. ಮಹಾದೇವಿ ಮೈಯೆಲ್ಲಾ ಕಿವಿಯಾಗಿ ಕುಳಿತಳು. ಸಂಗಮದೇವರು ಕ್ಷಣಕಾಲ ಆಲೋಚಿಸಿ ಪ್ರಾರಂಭಿಸಿದರು. ಅನಂತರ ಉಳಿದ ಜಂಗಮರೂ ಧ್ವನಿಗೂಡಿದರು.

ನೀನೊಲಿದರೆ ಕೊರಡು ಕೊನರುವುದಯ್ಯ,
ನೀನೊಲಿದರೆ ಬರಡು ಹಯನಹುದಯ್ಯ ;
ನೀನೊಲಿದರೆ ವಿಷವೆ ಅಮೃತವಹುದಯ್ಯ ;
ನೀನೊಲಿದರೆ ಸಕಲ ಪಡಿಪದಾರ್ಥ
ಇದಿರಲಿರ್ಪುವು ಕೂಡಲಸಂಗಮದೇವಾ.

ವಚನ ಮುಗಿಯಿತು. ಕ್ಷಣಕಾಲ ಮೌನವಾವರಿಸಿತು, ಏಕನಾದದ ಶ್ರುತಿಯೊಂದರ ವಿನಾ. ಮತ್ತೆ ಇನ್ನೊಂದನ್ನು ಪ್ರಾರಂಭಿಸಿದರು :

ವ್ಯಾಧನೊಂದು ಮೊಲವ ತಂದರೆ, ಸಲುವ ಹಾಗಕ್ಕೆ ಬಿಲಿವರಯ್ಯ
ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯ
ಮೊಲನಿಂದ ಕರ ಕಷ್ಟ ನರನ ಬಾಳುವೆ,
ಸಲೆ ನಂಬೋ ನಮ್ಮ ಕೂಡಲಸಂಗಮದೇವನ.

ಅದಾದಮೇಲೆ ಇನ್ನೊಂದು :

ವಿಷಯವೆಂಬ ಹಸುರನ್ನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ ;
ಪಶುವೇನ ಬಲ್ಲುದು ? ಹಸುರೆಂದೆಳಸುವುದು.
ವಿಷಯರಹಿತನ ಮಾಡಿ, ಭಕ್ತಿ ರಸವ ದಣಿಯೆ ಮೇಯಿಸಿ
ಸುಬುದ್ಧಿಯೆಂಬುದಕವನೆರದು
ನೋಡಿ ಸಲಹಯ್ಯ ಕೂಡಲಸಂಗಮದೇವಾ.

ಕಣ್ಣುಮುಚ್ಚಿ ಧ್ಯಾನಾಸಕ್ತಳಾದಂತೆ ಮಹಾದೇವಿ ಇದನ್ನು ಕೇಳುತ್ತಿದ್ದಳು. ಇದು ಮುಗಿದೊಡನೆಯೇ :

"ಇದನ್ನು ಇನ್ನೊಮ್ಮೆ ಹೇಳಿ, ಸ್ವಾಮಿ" ಎಂದು ಪ್ರಾರ್ಥಿಸಿದಳು.

ಉತ್ಸಾಹಿತರಾದ ಜಂಗಮರು ಮತ್ತೆ ಪ್ರಾರಂಭಿಸಿದರು ಮೊದಲಿನಿಂದ. ನಿಧಾನವಾಗಿ ಗಂಭೀರವಾಗಿ ಮುದುವರಿಯಿತು ವಚನ. ಮಹಾದೇವಿಯ ಆತ್ಮವೇ ಆ ವಚನದ ಅರ್ಥದಲ್ಲಿ ತೇಲಿದಂತಾಯಿತು. ತನ್ನ ಹೃದಯದ ಪ್ರಾರ್ಥನೆ ಅದರೊಡನೆ ಕೂಡಿ ಅವಳ ಶ್ರದ್ಧೆ ಬಲಿಯಿತು, ಆನಂದದಿಂದ ನಲಿಯಿತು.

ಇನ್ನು ಒಂದೆರಡು ಪ್ರಭುದೇವರ ವಚನಗಳನ್ನು ಹಾಡಿ ಕೊನೆಯಲ್ಲಿ ಈ ವಚನವನ್ನು ಎತ್ತಿಕೊಂಡಿದ್ದರು :

ಭಕ್ತಿಯೆಂಬ ನಿಧಾನವ ಸಾಧಿಸುವೊಡೆ
ಶಿವಪ್ರೇಮವೆಬಂಜನವ ನೆಚ್ಚಿಕೊಂಬುದು....

ಅಷ್ಟರಲ್ಲಿ "ನಿಲ್ಲಿಸಿರಿ ಸಾಕು" ಎಂಬ ಕಟುವಾದ ಮಾತನ್ನು ಕೇಳಿ ವಚನ ಅಷ್ಟಕ್ಕೇ ನಿಂತಿತು.

ತಲೆಯೆತ್ತಿ ನೋಡಿದರು ಜಂಗಮರು. ಮಹಾದೇವಿ ಬೆಚ್ಚಿದಳು. ರಸವಂತಿಯಂತೂ ಎದ್ದು ನಿಂತು ನಡುಗುತ್ತಿದ್ದಳು.

ಅಸಹನೆಯಿಂದ ಒಳಗೆ ನುಗ್ಗಿದ ಕೌಶಿಕ :

"ಏ ಬೈರಾಗಿಗಳೇ ! ಏನಿದು ನಾಟ್ಯ ಶಾಲೆಯೆಂದು ತಿಳಿದಿರಾ ? ಅತಿಥಿಗಳಾಗಿ ಬಂದವರು ಅತಿಥಿಗಳಂತೆ ಹೊರಟುಹೋಗಬೇಕು. ಮಧ್ಯರಾತ್ರಿಯಾದರೂ ನಿಮ್ಮ ಹಾಡು ಮುಗಿದಿಲ್ಲವೆ ?"

"ಮಹಾರಾಜ !" – ಮೇಲೆದ್ದ ಮಹಾದೇವಿ ಕೋಪದಿಂದ ಗರ್ಜಿಸಿದಳು. "ನಿನ್ನ ವಿವೇಕ ಎಲ್ಲಿ ಹೋಯಿತು ? ಜಂಗಮರನ್ನು ಇಷ್ಟು ಹೊತ್ತು ಇಲ್ಲಿರಲು ಪ್ರಾರ್ಥಿಸಿಕೊಂಡವಳು ನಾನು. ಅವರು ಇಲ್ಲಿರುವುದೇ ನಮ್ಮ ಪುಣ್ಯ. ಅವರೊಡನೆ ಈ ಉದ್ಧಟತನವೇ ? ಅವರಿಗೆ ಈ ಅಪಮಾನವೇ ?"

"ಇರಲಿ ಬಿಡು, ಮಗಳೇ. ಕೋಪಗೊಳ್ಳಬೇಡ. ನಮಗೇನೂ ಅಪಮಾನವಾಗಿಲ್ಲ."

ಎಂದಿನಂತೆ ಶಾಂತಸ್ವರದಿಂದಲೇ ನುಡಿಯುತ್ತಾ ಸಂಗಮದೇವರು ಎದ್ದರು. ಉಳಿದ ಜಂಗಮರೂ ಎದ್ದು ನಿಂತರು. ಮಹಾದೇವಿ ಕೋಪವನ್ನು ಅಡಗಿಸಿಕೊಂಡು ಶಾಂತಸ್ವರದಿಂದ:

"ನನ್ನನ್ನು ಕ್ಷಮಿಸಬೇಕು, ಮಹಾಸ್ವಾಮಿ" ಎನ್ನುತ್ತಾ ನಮಸ್ಕರಿಸಿದಳು ಸಂಗಮ ದೇವರಿಗೆ ಮತ್ತು ಇತರ ಜಂಗಮರಿಗೆ.

"ಏನೂ ಯೋಚಿಸಬೇಡ ತಾಯಿ. ಎಲ್ಲಾ ಶುಭವಾಗುವುದು. ನಮ್ಮ ಮನಸ್ಸನ್ನು ಇದು ಅಣುಮಾತ್ರವೂ ಕಲಕಿಲ್ಲ. ನಿನ್ನ ಭಕ್ತಿಯ ಉಪಚಾರದ ಸವಿನೆನಪು ಮಾತ್ರ ಉಳಿದಿದೆ. ಮಹಾರಾಜ, ಆ ಪುಣ್ಯದಲ್ಲಿ ನಿನಗೂ ಪಾಲಿದೆ. ನಿನಗೆ ಒಳ್ಳೆಯದಾಗಲಿ" ಎಂದು ಸಂಗಮದೇವರು ಮುಂದೆ ಹೊರಟರು. ಉಳಿದ ಜಂಗಮರು ಹಿಂಬಾಲಿಸಿದರು. ಮಹಾದೇವಿ ಹೊರಬಾಗಿಲಿನವರೆಗೂ ಹೋಗಿ ಅವರನ್ನು ಕಳುಹಿಸಿ, ಬೀಳ್ಕೊಂಡು ಬಂದಳು.

ಕೌಶಿಕ ಇನ್ನೂ ಅಲ್ಲಿಯೇ ನಿಂತಿದ್ದ ಮರವಟ್ಟವನಂತೆ. ಮಹಾದೇವಿ ಒಳಗೆ ಬರುತ್ತಾ :

"ಮಹಾರಾಜ, ನಿನ್ನ ಅಪರಾಧಗಳಲ್ಲಿ ಎರಡನೆಯದು ಮುಗಿಯಿತು. ನನ್ನ ಭಕ್ತಿಸಾಧನೆಗೆ ಅಡ್ಡಿ ಬರಬಾರದೆಂಬ ನಿಯಮವನ್ನು ಇಷ್ಟು ಸುಲಭವಾಗಿ ನೀನು ಮರೆಯುತ್ತೀಯೆಂದು ಭಾವಿಸಿರಲಿಲ್ಲ. ಜಂಗಮರನ್ನು ಹೀಗೆ ಅಪಮಾನಗೊಳಿಸುತ್ತೀಯೆಂದು ತಿಳಿದಿರಲಿಲ್ಲ" ಎಂದು ಅವನ ಯಾವ ಉತ್ತರಕ್ಕೂ ಕಾಯದೆ ಹೊರಟುಹೋದಳು. ತಾನು ಮಾಡಿದುದು ಅಚಾತುರ್ಯವಾಯಿತೆಂದು ಈಗ ಕೌಶಿಕನಿಗೆ ಅನಿಸಿತು.

ಬೆಳಗಿನಿಂದಲೂ ಅವಳಲ್ಲಿ ಕಂಡ ಉತ್ಸಾಹವನ್ನು ತಪ್ಪಾಗಿ ಭಾವಿಸಿ, ಮಹಾದೇವಿ ತನ್ನ ಮೇಲೆ ಪ್ರಸನ್ನಳಾಗಿದ್ದಳೆಂಬ ಕನಸನ್ನು ಕಟ್ಟಿದ್ದ ಕೌಶಿಕ. ಅದೇ ಭ್ರಮೆಯಲ್ಲಿಯೇ ದಿನ ಉರುಳುವುದು ಕಾಯುತ್ತಿದ್ದ. ಸಂಜೆಯಾಯಿತು. ಸಂಜೆ ಕಳೆಯಿತು, ಕತ್ತಲಾಯಿತು, ರಾತ್ರಿಯಾಯಿತು. ಇನ್ನೂ ಜಂಗಮರು ಹೊರಡುವ ಸೂಚನೆಯೇ ಕಂಡುಬರಲಿಲ್ಲ. ಇವನಿಗೋ ಮಹಾದೇವಿಯನ್ನು ಕಾಣುವ ಆತುರ, ಒಂದೇ ಸಮನೆ ಉಕ್ಕೇರುತ್ತಿತ್ತು. ಅದೇನು ಬಂದಿತೋ ಆವೇಶ ಹಿಂದೆ ಮುಂದೆ ನೋಡದೆ ನುಗ್ಗಿ ಬಿಟ್ಟ ಜಂಗಮರ ಬಳಿಗೆ.

ಈಗ ಅನಿಸಿತು ಕೌಶಿಕನಿಗೆ ತಾನು ಹಾಗೆ ಮಾಡಿದುದು ಅನುಚಿತವಾಯಿತೆಂದು. ಆದರೆ ಕಾರ್ಯ ಮಿಂಚಿಹೋಗಿತ್ತು. ಇನ್ನೊಂದು ತಪ್ಪು ಘಟಿಸಿತ್ತು.

ಮಹಾದೇವಿ ಇನ್ನೂ ತನ್ನ ತಪ್ಪುಗಳನ್ನು ಎಣಿಸುತ್ತಿದ್ದಾಳೆಂಬುದನ್ನು ನೆನೆದಾಗ ಅವನ ಕನಸಿನ ಗೋಪುರ ಸಿಡಿದೊಡೆದುಹೋಯಿತು.

'ಬೆಳಿಗ್ಗೆ ಹುಡುಕಿಕೊಂಡು ತಾನೇ ಬಂದಳು. ಎಷ್ಟು ಉತ್ಸಾಹದಿಂದ ಮಾತನಾಡಿದಳು : ಇನ್ನೇನು ನನ್ನ ಇಷ್ಟ ನೆರವೇರಿತೆಂದೇ ತಿಳಿದಿದ್ದೆ. ಆದರೆ ಅದೆಲ್ಲಾ ಬರಿಯ ತೋರಿಕೆಯದೇ ! ಛೇ, ಇನ್ನು ಸ್ವಲ್ಪ ಕಾಯದೆ ಎಂತಹ

ಅಪರಾಧವನ್ನು ಮಾಡಿಬಿಟ್ಟೆ, ಜಂಗಮರನ್ನು ಅವಮಾನಗೊಳಿಸಿದ ಸಿಟ್ಟಿನಿಂದ ಹಾಗೆ ಹೇಳಿರಬಹುದು. ಅದಕ್ಕಾಗಿ ಅವಳ ಕ್ಷಮೆ ಬೇಡುತ್ತೇನೆ. ಆಗ ಅವಳ ಕೋಪ ಇಳಿದು ನನ್ನನ್ನು ಪ್ರೀತಿಸಬಹುದು' ಎಂದು ಮುಂತಾಗಿ ತನ್ನ ಮಾರ್ಗದಲ್ಲಿಯೇ ಹರಿಯುತ್ತಿತ್ತು ಕಾಮ ವಿಕಾರದಿಂದ ಕಂಗೆಟ್ಟ ಕೌಶಿಕನ ಮನಸ್ಸು.

ಈಗಲೇ, ಈ ರಾತ್ರಿಯೇ ಅವಳ ಬಳಿ ಹೋಗಿ ಕ್ಷಮೆ ಕೇಳಿಕೊಳ್ಳಬೇಕೆಂದು ಆಲೋಚಿಸಿದ. ಮತ್ತೆ ಅದನ್ನು ತಿದ್ದಿಕೊಂಡು,

"ಬೇಡ, ಈಗ ಇನ್ನೂ ಕೋಪದಲ್ಲಿರಬಹುದು. ಬೆಳಿಗ್ಗೆ ಅವಳ ಪೂಜೆ ಮುಗಿಯುವ ವೇಳೆಗೆ ಹೋಗುತ್ತೇನೆ. ಆಗ ಶಾಂತವಾದ ಅವಳ ಮನಸ್ಸಿನ ಮುಂದೆ ನನ್ನ ಅಪರಾಧವನ್ನು ಒಪ್ಪಿಕೊಳ್ಳುತ್ತೇನೆ. ನನ್ನ ಮನಸ್ಸನ್ನು ಅವಳಿಗೆ ಸಂಪೂರ್ಣವಾಗಿ ತಿಳಿಸುತ್ತೇನೆ" ಎಂದು ಮುಂತಾಗಿ ಆಲೋಚಿಸುತ್ತಾ ಆ ರಾತ್ರಿಯನ್ನು ಕಷ್ಟದಿಂದ ಕಳೆದ.

ಬೆಳಗಿನ ಪೂಜೆಯನ್ನು ಮುಗಿಸಿ ಮಹಾದೇವಿ, ಇಷ್ಟಲಿಂಗವನ್ನು ಎಂದಿನಂತೆ ಕಾವಿಬಟ್ಟೆಯಲ್ಲಿಟ್ಟು ಕಟ್ಟಿಕೊಳ್ಳುವ ವೇಳೆಗೆ ಕೌಶಿಕ ಪೂಜಾಗೃಹವನ್ನು ಪ್ರವೇಶಿಸಿದ.

ಪೂಜೆಯನ್ನು ಮುಗಿಸಿದ ಮಹಾದೇವಿ, ಪೂಜೆಯಲ್ಲಿ ಈ ದಿನ ಕಂಡ ವಿಶೇಷವಾದ ಅಲೌಕಿಕ ಅನುಭವವನ್ನು ಆಲೋಚಿಸುತ್ತಾ ಧ್ಯಾನಾಸಕ್ತಳಾಗಿ ಹಾಗೆಯೇ ಕಣ್ಣುಮುಚ್ಚಿ ಕುಳಿತಳು. ಸತ್ವಕಳೆಯೇ ಮೈವೆತ್ತು, ಆದಿಶಕ್ತಿಯ ಮಹಾಮೂರ್ತಿಯಂತೆ ಹೊಳೆಯುತ್ತಿದ್ದ ಮಹಾದೇವಿ ಕೌಶಿಕನ ಕಾಮುಕ ಕಣ್ಣಿಗೆ ಕಾಮನ ಪ್ರಾರ್ಥನೆಯಲ್ಲಿ ತೊಡಗಿದ ರತಿಯತೆ ಕಂಡಳು. ತಾನು ಬಂದ ಉದ್ದೇಶವನ್ನೇ ಮರೆತು ಹಿಂದಿನಿಂದ ಮೆಲ್ಲ ಮೆಲ್ಲನೆ ಹತ್ತಿರಕ್ಕೆ ಬರತೊಡಗಿದ. ಅವಳ ಅಂಗಾಂಗಗಳ ಸೌಂದರ್ಯವೆಲ್ಲಾ ಸಂಪೂರ್ಣವಾಗಿ ಗೋಚರಿಸುವಂತೆ, ಒಂದು ಪಕ್ಕಕ್ಕೆ ಸರಿದು ನಿಂತ.

ಅದೇತಾನೇ ಮಂಗಳಸ್ನಾನ ಮಾಡಿದ ಮಹಾದೇವಿಯ ಕೆದರಿದ ಕೂದಲುಗಳು ಬೆನ್ನಮೇಲೆಲ್ಲಾ ಹರಡಿದ್ದವು. ದಟ್ಟವಾಗಿ ಬೆಳೆದ ಮತ್ತು ಅತಿ ನೀಳವಾದ ಕೇಶರಾಶಿ, ಬೆನ್ನಮೇಲಿಂದ ಇಳಿದು ನೆಲದ ಮೇಲೂ ಹರಡಿ ಬಿದ್ದಿತ್ತು.

ಪೂಜೆಗಾಗಿ ಮಡಿಯುಟ್ಟು ಏಕವಸ್ತ್ರಧಾರಿಣಿಯಾಗಿ ಕುಳಿತಿದ್ದುದರಿಂದ ದುಂಡು ದುಂಡಾದ ಅವಳ ತೋಳಿನ ಬಹು ಭಾಗವೆಲ್ಲಾ ಗೋಚರಿಸುತ್ತಿತ್ತು. ಧ್ಯಾನದಲ್ಲಿ ತನ್ಮಯಳಾದ ಮಹಾದೇವಿಯ ಸೆರಗು ಜಾರಿತ್ತು. ತೀರಾ ಸಮೀಪಕ್ಕೆ ಬಂದು, ಒಂದು ಪಕ್ಕಕ್ಕೆ ಸರಿದು ನಿಂತ ಕೌಶಿಕನ ದೃಷ್ಟಿ ಸ್ವೇಚ್ಛೆಯಾಗಿ ಮನಬಂದಂತೆ

ಹರಿದಾಡಿತು. ಅವಳ ಬಾಹ್ಯಮೂಲಗಳ ಕಾಂತಿಯುನ್ನು ಕಂಡು ರೋಮಾಂಚನಗೊಂಡಿತು. ದೃಷ್ಟಿ ಇನ್ನೂ ಒಳಗೆ ಹರಿಯಿತು. ದೀರ್ಘಕಾಲದಿಂದ ಅದುಮಿಟ್ಟಿದ್ದ ಮನಸ್ಸಿನ ಪಾಶವೀ ಶಕ್ತಿ ತನ್ನ ಸೇಡನ್ನು ತೀರಿಸಿಕೊಳ್ಳುವಂತೆ, ಸರ್ವಶಕ್ತಿಯಿಂದ ಮೇಲಕ್ಕೆ ಪುಟಿದೆದ್ದಿತ್ತು. ಮಾನವತೆ ಮುಳುಗಿತು. ವಿವೇಕ ಕೊಚ್ಚಿಹೋಯಿತು. ಹುಚ್ಚನಂತೆ ಮುಂದೆ ನುಗ್ಗಿ ತನ್ನ ಕೈಗಳನ್ನು ಅವಳ ದೇಹದ ಮೇಲೆ ಹರಿಯಬಿಟ್ಟ.

ಹಾವು ಕಡಿದವಳಂತೆ ಮಹಾದೇವಿ ಹಿಂದಕ್ಕೆ ಹಾರಿದಳು. ಹಸಿದ ಹುಲಿಯಂತೆ ಬುಸುಗುಟ್ಟುತ್ತಾ ಕೌಶಿಕ ಅವಳ ಸೆರಗನ್ನು ಹಿಡಿದ.

"ಈ ಸೀರೆಯಲ್ಲಿ ಎಷ್ಟು ಸುಂದರವಾಗಿ ಕಾಣುತ್ತೀ ಮಹಾದೇವಿ" ಎಂದು ಕಾಮದ ಕಳ್ಳನ್ನು ಕುಡಿದು ಉನ್ಮತ್ತನಾದವನಂತೆ ಮತ್ತೆ ಮೇಲೆ ಬೀಳಹೋದ.

ಮಹಾದೇವಿ ಮಿಂಚಿನಂತೆ ಹಿಂದಕ್ಕೆ ಹಾರಿದಳು. ಸೆರಗು ಕೌಶಿಕನ ಕೈಯಲ್ಲೇ ಇತ್ತು. ಮಹಾದೇವಿಯ ದೇಹದ ಅರ್ಧಭಾಗ ನಗ್ನವಾಗಿತ್ತು.

ಹುಚ್ಚನಂತೆ ಕೌಶಿಕ ಅವಳ ನಗ್ನಭಾಗದ ದೇಹವನ್ನು ದಿಟ್ಟಿಸುತ್ತಿದ್ದ.

ಮಿಂಚಿಗಿಂತ ಮಿಗಿಲಾದ ವೇಗದಲ್ಲಿ ಭಾವನೆಗಳು ಮಹಾದೇವಿಯ ಮನಸ್ಸಿನಲ್ಲಿ ತಿರುಗಿದವು. ಮುಖ ಉಜ್ವಲವಾಗಿ ಹೊಳೆಯಿತು. ಕಾಂತಿ ಪ್ರವಾಹವೇ ಅವಳ ಪವಿತ್ರ ಕಣ್ಣುಗಳಿಂದ ಹರಿದುಬರುತ್ತಿರುವಂತೆ ತೋರುತ್ತಿತ್ತು.

"ಮಹಾರಾಜ, ನೋಡು. ಇದಕ್ಕಾಗಿ ಹಾತೊರೆಯುತ್ತಿದ್ದೆಯಲ್ಲವೆ ? ನೋಡು; ದೇಹದ ಮೋಹವನ್ನು ಹಚ್ಚಿಕೊಂಡು ಕುಣಿಯುತ್ತಿರುವ ನಿನ್ನ ಈ ಹುಚ್ಚು ಕಣ್ಣುಗಳಿಂದ ಚೆನ್ನಾಗಿ ನೋಡು. ಈ ಸೀರೆಯಲ್ಲಿ ನಾನು ಬಹಳ ಸುಂದರಳಾಗಿ ಕಾಣುತ್ತೇನಲ್ಲವೇ? ಇದನ್ನು ತೆಗೆದೊಗೆಯುತ್ತೇನೆ. ಈ ಸೌಂದರ್ಯವನ್ನು ನೋಡು" ಎನ್ನುತ್ತ, ಉಟ್ಟಿದ್ದ ಸೀರೆಯನ್ನು ಆವೇಶಗೊಂಡು ಕಿತ್ತೆಸೆಯತೊಡಗಿದಳು.

ಕೌಶಿಕನ ಕಣ್ಣಿಗೆ ಮಿಂಚು ಹೊಡೆದಂತಾಯಿತು. ಕಿವಿಯಲ್ಲಿ ಸಿಡಿಲು ಸಿಡಿದಂತಾಯಿತು. ಕಣಕಣವೂ ಜ್ವಾಲೆಯಿಂದ ವ್ಯಾಪಿಸಿದಂತೆ ಕಂಪಿಸಿತು.

"ಬೇಡ, ಮಹಾದೇವಿ ಬೇಡ" ಎನ್ನುತ್ತಿದ್ದಂತೆ ಮಹಾದೇವಿಯ ಕೆಲಸ ಮುಗಿದಿತ್ತು.

"ನೋಡು, ಈ ದೇಹಕ್ಕಾಗಿಯೇ ಅಲ್ಲವೇ ನೀನು ಹಾತೊರೆಯುತ್ತಿದ್ದದ್ದು. ನೋಡಿಕೋ ಏನಿದೆ ಈ ದೇಹದಲ್ಲಿ ? ಈ ದೇಹದ ಯಾವ ಭಾಗ, ನಿನ್ನನ್ನು ಮಾನವತೆಯಿಂದ ದೂರ ತಳ್ಳಿ ಪಶುವನ್ನಾಗಿಸುವಂತಹ ಸೌಂದರ್ಯದಿಂದ ಕೂಡಿದೆ ನೋಡಿಬಿಡು."

ಈ ಅಘಾತವನ್ನೆದುರಿಸಲಾರದೆ, "ಮಹಾದೇವಿ, ಮಹಾದೇವಿ ?" ಎಂದು ಕುಸಿದು ಕುಳಿತ ಕೌಶಿಕ.

"ಮುಗಿಯಿತೆ ? ನನ್ನ ಮಾತಿನಂತೆ ನಾನು ನಡೆದುಕೊಂಡಿದ್ದೇನೆ. ನಾನಿನ್ನು ಹೊರಡಲೇ? ಇನ್ನು ನಾನು ಸ್ವತಂತ್ರಳು. ಯಾವ ಶಕ್ತಿಯೂ ನನ್ನನ್ನು ತಡೆಯಲಾರದು" ಎಂದು ಹೊರಟಳು ಮಹಾದೇವಿ. ಅವಳ ಸೆರಗು ಕೌಶಿಕನ ಕೈಯಲ್ಲಿಯೇ ಇತ್ತು.

ಕೌಶಿಕ ಮೇಲೇಳುತ್ತಾ : "ಮಹಾದೇವಿ, ಮಹಾದೇವಿ... ನಿನ್ನ ಸೀರೆ ಇಲ್ಲಿಯೇ ಇದೆ" ಎಂದ.

"ಅದನ್ನು ನೀನೇ ಇಟ್ಟುಕೋ. ಇನ್ನು ಅದರ ಹಂಗು ನನಗಿಲ್ಲ. ನಿನ್ನಂತಹ ಹುಚ್ಚುಗಳಿಗೆ ಸಾರಿಕೊಂಡು ಹೋಗುತ್ತೇನೆ, ಈ ದೇಹದಲ್ಲಿ ಏನಿದೆಯೆಂಬುದನ್ನು. ಇನ್ನು ನನಗೆ ದಿಗಂಬರವೇ ದಿವ್ಯಾಂಬರ" ಎಂದು ಆವೇಶಗೊಂಡವಳಂತೆ ಅಲ್ಲಿಂದ ಹೊರಗೆ ನಡೆದಳು.

ಪೂಜಾಗೃಹವನ್ನು ದಾಟಿ ಹೊರಗೆ ಬಂದ ಮಹಾದೇವಿಯನ್ನು ಕಂಡ ದಾಸಿಯರಿಗೆಲ್ಲಾ ಗರಹೊಡೆದಂತಾಯಿತು. ಅರಮನೆಯೆಲ್ಲಾ ಬೆಚ್ಚಿಬಿದ್ದಿತು. ಹೌಹಾರಿತು. ಕೆಲವರಿಗಂತೂ ಮೂರ್ಛೆಹೋದಂತಾಯಿತು. ಯಾವುದರ ಪರಿವೆಯೂ ಇಲ್ಲದೆ, ದೈವಾವೇಶದ ದೈತ್ಯಶಕ್ತಿಯಂತೆ ಮಹಾದೇವಿ ಮುಂದೆ ನುಗ್ಗುತ್ತಿದ್ದಳು.

ಅರಮನೆಯನ್ನು ದಾಟಿ ರಸ್ತೆಗಿಳಿದಳು. ಜನಜಂಗುಳಿ ತಮ್ಮ ಕಣ್ಣನ್ನು ತಾವು ನಂಬಲಾರದೆ ಹೋದರು. ಇದೇನೋ ಬಂದಿತು ಎಂದು ಕೆಲವರು ಓಡಿಹೋದರು. ಇನ್ನು ಕೆಲವರು ಸ್ವಲ್ಪ ನಿಂತು ನೋಡಿದರು.

"ಯಾರಿವರು ?"

"ಓಂಕಾರಶೆಟ್ಟಿಯ ಮಗಳು ಮಹಾದೇವಿಯಂತೆ ಕಾಣುತ್ತಿದೆಯಲ್ಲವೇ?"

"ಅಯ್ಯೋ ಹೌದು, ಮೊನ್ನೆ ತಾನೆ ಅರಮನೆಗೆ ಹೋಗಿದ್ದಳಲ್ಲ"

"ಛೇ ಛೇ... ಎಂತಹ ಕೆಲಸವಾಯಿತು ?"

"ಏನಾಯಿತೋ ಪಾಪ !"

"ಎಷ್ಟು ಚೆನ್ನಾಗಿದ್ದಳು, ಹುಚ್ಚುಗಿಚ್ಚು ಹಿಡಿಯಿತೇನ್ರಿ ?"

– ಹೀಗೆಲ್ಲಾ ಮಾತುಗಳು ನಡೆಯುತ್ತಿದ್ದವು. ಮನೋವೇಗದಿಂದ ಸುದ್ದಿ ಊರೆಲ್ಲಾ ಹಬ್ಬಿತು.

ನೋಡಿ ಕೆಲವರು ಓಡಿಹೋದರೆ, ನೋಡಲು ಕೆಲವರು ಓಡಿ ಬಂದರು. ಇದಾವುದನ್ನೂ ನೋಡದೆ ಮಹಾದೇವಿ ಒಂದೇ ಸಮನೆ ನಡೆಯುತ್ತಿದ್ದಳು.

"ಯಾವ ಕಡೆ ? ಹೀಗೆ ಹೋಗುವುದು ಎಲ್ಲಿಗೆ ?"

ಆ ಒಂದು ಸಮಸ್ಯೆಯೇ, ನಡೆಯುತ್ತಿದ್ದಂತೆ ಅವಳ ಮನಸ್ಸಿನಲ್ಲಿ ಸುತ್ತುತ್ತಿತ್ತು. ಕ್ಷಣಕಾಲ ಅಷ್ಟೆ. ಮರುಕ್ಷಣವೇ ಮನಸ್ಸು ನಿರ್ಧರಿಸಿತು. ಇಷ್ಟಲಿಂಗದಲ್ಲಿ ಇಂದು ಮೂಡಿ ಕೈಬೀಸಿ ಕರೆದ ತೇಜಪುಂಜವಾದ ಮೂರ್ತಿ, ಕಲ್ಯಾಣದ ಅಣ್ಣನೇ ಎಂಬುದಾಗಿ ಭಾವಿಸಿದಳು. ಅವಳ ಗುರಿ ನಿಶ್ಚಿತವಾಯಿತು.

ಆದರೆ ಕಾಲುಗಳು ಅಭ್ಯಾಸಬಲದಿಂದ ಗುರುಲಿಂಗದ ಮಠದತ್ತಲೇ ನಡೆಯುತ್ತಿದ್ದವು.

'ಅದೂ ನಿಜ ! ಹೋಗುವ ಮೊದಲು, ಕೊನೆಯ ಬಾರಿ ಗುರುಗಳನ್ನು ಕಂಡು ಆಶೀರ್ವಾದವನ್ನು ಪಡೆದು ಹೋಗಬೇಕು' ಎಂದು ನಿರ್ಧರಿಸಿ ಅತ್ತ ನಡೆದಳು.

ಮಠದ ಕಡೆಗೆ ಬರುತ್ತಿರುವ ನಗ್ನವಿಗ್ರಹವನ್ನು ದೂರದಿಂದಲೇ ಮೊದಲು ಕಂಡವನು ಗುರುಪಾದಪ್ಪ. ಮಹಾದೇವಿಯಂತಿದೆ ಎಂದು ತೋರಿದರೂ ಕಣ್ಣುಗಳು ನಂಬಲಾರದೇ ಹೋದವು. ಆದರೆ ಸ್ವಲ್ಪ ಹತ್ತಿರ ಬಂದಂತೆ ನಂಬಲೇ ಬೇಕಾಯಿತು.

ಕಾಂತಿಯಿಂದ ಹೊಳೆಯುತ್ತಿರುವ ದೇಹಕ್ಕೆ ದೃಷ್ಟಿ ತಾಗದಂತೆ ರಕ್ಷಿಸಲೆಂಬಂತೆ ಅವಳ ಕೇಶರಾಶಿಗಳು ದೇಹದ ಬಹುಭಾಗಕ್ಕೆ ಅರೆಮರೆಯ ತೆರೆಯನ್ನೆಳೆದಿದ್ದವು. ವೇಗವಾದ ಒಂದೇ ಗತಿಯಿಂದ ನಡೆದುಬರುತ್ತಿದ್ದಳು ಮಹಾದೇವಿ. ಗುರುಪಾದಪ್ಪ ಕಾತರತೆಯಿಂದ ಓಡಿದ ಗುರುಗಳ ಬಳಿಗೆ :

"ಗುರುಗಳೇ... ಗುರುಗಳೇ... ಬನ್ನಿ ಇಲ್ಲಿ, ಜಾಗ್ರತೆ ಬನ್ನಿ."

ಅವನ ಧ್ವನಿಯಲ್ಲಿ ಕಾತರತೆಯನ್ನು ಗುರುತಿಸಿ ಗುರುಲಿಂಗರು ಆತುರದಿಂದಲೇ ಹೊರಬಂದರು.

"ಅಲ್ಲಿ ನೋಡಿ, ಗುರುಗಳೇ, ನಮ್ಮ ಮಹಾದೇವಿಯಲ್ಲವೇ ?"

"ಶಿವ ಶಿವಾ... ಏನಿದು ನಿನ್ನ ಲೀಲೆ !" ಎಂಬ ಉದ್ಗಾರ ಅವರಿಂದ ಹೊರಬಿತ್ತು. "ಹೌದು ಗುರುಪಾದಪ್ಪ, ಆಕೆ ಮಹಾದೇವಿ. ದೈವಸಂಕಲ್ಪ ತನ್ನ ಮಾರ್ಗವನ್ನು ಕಂಡು ಕೊಂಡಂತೆ ತೋರುತ್ತಿದೆ. ತಪೋವನದ ಮಂಟಪಕ್ಕೆ ನಾನು ಹೋಗುತ್ತೇನೆ. ಮಹಾದೇವಿಯನ್ನು ಅತ್ತ ಕಳುಹಿಸು" ಎಂದು ನಾಲ್ಕು ಹೆಜ್ಜೆ ನಡೆದವರು, ಮತ್ತೆ ನಿಂತು ಹೇಳಿದರು :

"ಗುರುಪಾದಪ್ಪ, ಮಹಾದೇವಿಯನ್ನು ಅತ್ತ ಕಳುಹಿಸು, ಆ ಕೋಣೆಯ ಮುಂಭಾಗದ ನಿಲುವಿನ ಮೇಲೆ, ಒಂದು ನಾರುಮಡಿಯಿದೆಯಲ್ಲ, ಅದನ್ನು ಆಮೇಲೆ ತೆಗೆದುಕೊಂಡು ಅಲ್ಲಿಗೆ ಬಾ" ಎಂದು ಗುರುಲಿಂಗರು ತಪೋವನವನ್ನು ಪ್ರವೇಶಿಸಿದರು.

ಮಹಾದೇವಿ ಮಠದ ಆವರಣಕ್ಕೆ ಬರುತ್ತಿದ್ದಂತೆಯೇ ಗುರುಪಾದಪ್ಪ ಕಾಣಿಸಿಕೊಂಡು : "ತಾಯಿ ಅಲ್ಲಿದ್ದಾರೆ ಗುರುಲಿಂಗರು" ಎಂದು ತಪೋವನದತ್ತ ತೋರಿದ. ಮಹಾದೇವಿ ತಪೋವನವನ್ನು ಹೊಕ್ಕು, ಗುರುಗಳ ಬಳಿಗೆ ಬರುತ್ತಿದ್ದಂತೆಯೇ :

"ಇದೇನು ಮಗಳೇ ? ನಿನ್ನ ಈ ಲೀಲೆಯೂ ಶಿವನಿಗೆ ಬೇಕಾಯಿತೆ?"

"ನಿಜ, ಗುರುಗಳೇ. ಆತನ ಸಂಕಲ್ಪದಂತೆಯೇ ಇದನ್ನು ನಾನು ಕೈಗೊಂಡಿದ್ದೇನೆ" ಆವೇಶ ಎಷ್ಟೋ ಇಳಿದಿತ್ತು ಮಹಾದೇವಿಗೆ. ಆದರೆ ಆಯಾಸ ಇನ್ನೂ ಇತ್ತು.

"ಹೌದು, ತಾಯೀ. ಈ ನಿನ್ನ ವರ್ತನೆ, ಸತೀತ್ವದ ಮಹಾಶಕ್ತಿಯ ಸಂಕೇತವಾಯಿತು. ಹೆಣ್ಣು ಏರಬಲ್ಲ ವೈರಾಗ್ಯದ ಹಂತವನ್ನು ಏರಿ, ಮುಗಿಲು ಮುಟ್ಟಿತು ನಿನ್ನ ಸಾಧನೆ."

ಈ ವೇಳೆಗೆ ಗುರುಪಾದಪ್ಪ, ಗುರುಗಳು ಹೇಳಿದ ನಾರುಬಟ್ಟೆಯನ್ನು ತಂದು ಅವರ ಕೈಗಿತ್ತ.

"ಈ ಲೀಲೆ ಇನ್ನು ಸಾಕು. ತೆಗೆದುಕೊ ನಾರುಮುಡಿಯನ್ನು" ಅದನ್ನು ಕೊಡಹೋದರು ಗುರುಲಿಂಗರು.

"ಇಲ್ಲ, ಗುರುಗಳೇ. ಹೆಣ್ಣಿನ ದೇಹವನ್ನು ಕಾಮದ ದೃಷ್ಟಿಯಿಂದ ನೋಡುವ ಕಣ್ಣುಗಳು ಈ ಲೋಕದಲ್ಲಿ ಇರುವವರೆಗೂ ನಾನು ಬಟ್ಟೆಯನ್ನು ಧರಿಸುವುದಿಲ್ಲ"– ಹೇಳಿದಳು ಮಹಾದೇವಿ.

"ಈ ಹುಚ್ಚು ಮಾತನ್ನು ಬಿಡು, ಮಹಾದೇವಿ. ಮೋಹದ ಕಣ್ಣುಗಳು ಇದ್ದರೆ ತಾನೇ, ಮೋಹವನ್ನು ಮೀರಿ ಮೇಲೇರುವ ಸಾಧನೆಗೆ ಬೆಲೆ ಇರುವುದು? ಅದು ಜಗತ್ತಿನ ನಿಯಮ. ಆ ಮಾತನ್ನು ಬಿಡು. ಜಗತ್ತು ಕಲ್ಪನೆಯಿಂದಲೂ ಕಾಣಲಾಗದ ಮಟ್ಟಕ್ಕೆ ಏರಿದೆ ನಿನ್ನ ವೈರಾಗ್ಯ. ಈ ಘಟನೆ, ನಿನ್ನ ಸಾಧನೆಯ ಜೀವನದಲ್ಲಿ ಒಂದು ಪರಿವರ್ತನೆಯ ಘಟ್ಟವಾಯಿತು. ಮುಂದೆ ನಿನ್ನ ವೈರಾಗ್ಯದ ವ್ಯಕ್ತಿತ್ವವನ್ನು ಚಿತ್ರಿಸಬೇಕಾದವರು ಈ ನಗ್ನರೂಪದ ಸಂಕೇತದಿಂದಲೇ ಚಿತ್ರಿಸಬೇಕಾಗುತ್ತದೆ. ಆದರೆ ಇಲ್ಲಿಗೆ ಅದು ಮುಗಿಯಬೇಕು. ಇನ್ನು ಈ ನಿನ್ನ

ವೈರಾಗ್ಯ ಸಾಂಕೇತಿಕವಾಗಬೇಕು. ಲೌಕಿಕ ಋತಕ್ಕೆ ಒಳಪಟ್ಟು ಅದನ್ನು ಮೀರಿದಂತಿರಬೇಕು. ಆದುದರಿಂದ ತೆಗೆದುಕೋ ಈ ಬಟ್ಟೆಯನ್ನು."

"ಇಲ್ಲ ಗುರುಗಳೇ... ಒಮ್ಮೆ ಬಿಟ್ಟ ಈ ಮೋಹಪಾಶವನ್ನು ಮತ್ತೊಮ್ಮೆ ಕಟ್ಟಿಕೊಳ್ಳಲಾರೆ."

ಗುರುಗಳು ನಕ್ಕರು.

"ಇದೇಕೆ ಮಗಳೇ, ಮತ್ತೆ ನಿನಗೆ ಈ ಮರವೆ ? ಈ ಒಂದು ತುಂಡುಬಟ್ಟೆ ನಿನಗೆ ಮೋಹಪಾಶವಾಗುವುದಾದರೆ ಈ ಜಗತ್ತಿನ ಮಹಾಮೋಹವನ್ನು ಹೇಗೆ ಗೆಲ್ಲಬಲ್ಲೆ?" – ಹೇಳುತ್ತಾ ಹೇಳುತ್ತಾ ಗುರುಗಳ ಧ್ವನಿ ಇನ್ನೂ ಗಂಭೀರವಾಯಿತು.

"ಆದುದರಿಂದ, ಕೇಳು ... ನಿನಗೆ ಯಾವುದೂ ಮೋಹವಾಗಬಾರದು. ಬಟ್ಟೆಯ ಮೋಹ ನಿನಗಿಲ್ಲ ನಿಜ. ಆದರೆ... ನಿನಗಾಗಿ ಬೇಡ, ಲೋಕಕ್ಕಾಗಿ ಧರಿಸು. ಈಗ ಈ ಕೂದಲನ್ನು ಏತಕ್ಕಾಗಿ ದೇಹಕ್ಕೆ ಮರೆಮಾಡಿಕೊಂಡಿರುವೆಯೋ, ಅದೇ ಕಾರಣಕ್ಕಾಗಿ, ಕೂದಲಿನಂತೆ ಇರುವ ಈ ತುಂಡುಬಟ್ಟೆಯನ್ನು ಮರೆಮಾಡಿಕೊ... 'ನಾನು ಎಲ್ಲವನ್ನು ತ್ಯಜಿಸಿದವಳು'– ಎಂಬ ತ್ಯಾಗವೇ ಒಂದು ಮಾಯೆಯಾಗಿ ಕಾಡೀತು – ಅದಕ್ಕೆ ಆಸ್ಪದ ಕೊಡಬೇಡ."

ಮಹಾದೇವಿಯ ಅಂತರಂಗವನ್ನು ಆ ಮಾತು ಚುಚ್ಚಿ ಎಚ್ಚರಿಸಿತು. ಮರು ಮಾತನಾಡದೆ ಗುರುಗಳು ಕೊಟ್ಟ ನಾರುಬಟ್ಟೆಯನ್ನು ತೆಗೆದುಕೊಂಡು ಉಟ್ಟುಕೊಂಡಳು. ಲೌಕಿಕ ದೃಷ್ಟಿಯಿಂದಲೂ ತಕ್ಕಮಟ್ಟಿಗೆ ಗೌರವಾಸ್ಪದವಾದ ರೀತಿಯಲ್ಲಿ ಅದು ಅವಳ ದೇಹವನ್ನು ಮುಚ್ಚಲು ಸಮರ್ಥವಾಯಿತು.

ಈಗ ಒಂದು ರೀತಿಯ ಸಮಾಧಾನದಿಂದ ಹೇಳಿದ ಗುರುಗಳು :

"ಕುಳಿತುಕೋ, ಮಹಾದೇವಿ."

"ಇಲ್ಲ, ಗುರುಗಳೇ... ನಾನು ಇನ್ನು ಇಲ್ಲಿ ಇರಲಾರೆ... ತಾವು ಇಷ್ಟರ ಮಟ್ಟಿಗೆ ನನ್ನನ್ನು ರೂಪಿಸಿದ್ದೀರಿ. ಆದರೆ ಇಂದು ಅದಮ್ಯವಾದ ಆಕಾಂಕ್ಷೆ ನನ್ನಲ್ಲಿ ಮಹಾಪೂರದಂತೆ ಉಕ್ಕಿಬರುತ್ತಿದೆ. ಅತ್ತ ಹೋಗಲು ನನಗೆ ಅನುಮತಿ ಕೊಡಿ."

ಗುರುಗಳು ಕ್ಷಣಕಾಲ ಆಲೋಚನಾಮಗ್ನರಾಗಿ ಹೇಳಿದರು :

"ನಿಜ, ಮಗಳೆ. ನಿನ್ನನು ನಾನು ತಡೆಯಲಾರೆ. ಈ ಸಣ್ಣ ಆವರಣವನ್ನು ಮೀರಿ ಬೆಳೆಯಬೇಕಾದ ಮಹಾಚೇತನ ನೀನು ಎಂಬುದನ್ನು ಬಲ್ಲೆ. ನೀನು ಆ ನಿವಿಗೇರಿದಾಗ ನನ್ನನ್ನು ಸ್ಮರಿಸಿಕೋ ಮಗಳೇ. ನಿನ್ನ ಗುರುವಾಗುವ ಭಾಗ್ಯ ನನ್ನ ಪಾಲಿಗೆ ಬಂದುದಕ್ಕೆ ನಾನು ಧನ್ಯನಾಗಿದ್ದೇನೆ."

"ತಾವು ಹಾಗೆ ಹೇಳಬಾರದು, ಗುರುದೇವ. ನಿಮ್ಮ ಪಾದದ ಧೂಳಿಯಾಗಿ ನಾನು ಸಾಧನೆಯಲ್ಲಿ ಯಶಸ್ಸನ್ನು ಪಡೆಯುವಂತೆ ಹರಸಿರಿ. ನನ್ನ ಪತಿಯನ್ನು ಕೂಡಿಕೊಳ್ಳುವಂತೆ ಆಶೀರ್ವದಿಸಿರಿ."

ಈ ವೇಳೆಗೆ ಲಿಂಗಮ್ಮ ಓಡಿಬಂದಳು. ಹಿಂದೆಯೇ ಓಂಕಾರ ಬರುತ್ತಿದ್ದ. ಅವರ ಹಿಂದೆ ಶಂಕರಿ, ಅವಳ ತಾಯಿ, ದಾಕ್ಷಾಯಿಣಿ, ಕಾತ್ಯಾಯಿನಿ ಇವರು ಬರುತ್ತಿದ್ದರು. ಎಲ್ಲರಿಗಿಂತಲೂ ಕೊನೆಯಲ್ಲಿ ಅಡಗಿಕೊಂಡು ಎಂಬಂತೆ ಬರುತ್ತಿದ್ದಳು ರಸವಂತಿ.

ಆತುರದಿಂದ ಬಂದು ಉದ್ವೇಗದಿಂದ ಏದುತ್ತ ಲಿಂಗಮ್ಮ, ಮಹಾದೇವಿಯ ಬಳಿಗೆ ಹೋಗಿ ನಿಂತು, ಅಡಿಯಿಂದ ಮುಡಿಯವರೆಗೂ ನೋಡುತ್ತ ಹೇಳಿದಳು: "ಎಂತಹ ಕೆಲಸ ಮಾಡಿಬಿಟ್ಟೆ ಮಗಳೆ.... ಸದ್ಯ ಈಗ ಇಷ್ಟಾದರೂ ಬಟ್ಟೆ ಹಾಕಿಕೊಂಡಿದ್ದೀಯಲ್ಲ... ಹೀಗೇಕೆ ಮಾಡಿದೆ, ಮಗಳೆ ?"

"ನಾನೇನು ಮಾಡಿದೆನವ್ವಾ ?"

"ಇನ್ನೂ ಕೇಳುತ್ತೀಯ ? ಹೆಂಗಸಿಗೆ ಇರುವುದೇ ಮಾನ; ಅದನ್ನು ಬಿಟ್ಟು..."

ಮಧ್ಯದಲ್ಲಿಯೇ ಗುರುಗಳು ಆ ಮಾತನ್ನು ತಡೆದರು. ಗಂಭೀರ ಧ್ವನಿಯಿಂದ ಹೇಳಿದರು : "ಲಿಂಗಮ್ಮ, ಮಹಾದೇವಿಯ ತಾಯಿ ನೀನು. ಅದಕ್ಕನುಗುಣವಾದ ರೀತಿಯಲ್ಲಿ ಮಾತನಾಡಬೇಕು. ನಿನ್ನ ಮಗಳು ಮಾನವನ್ನು ಬಿಟ್ಟಿಲ್ಲ ; ಹೆಣ್ಣುಕುಲಕ್ಕೆ ಮಾನವನ್ನು ತಂದಿದ್ದಾಳೆ, ತನ್ನ ವೈರಾಗ್ಯದ ಮೂಲಕ. ಹೆಣ್ಣು ಬೊಂಬೆಯಲ್ಲವೆಂಬುದನ್ನು ಪ್ರಪಂಚಕ್ಕೆ ಸಾರಿದ್ದಾಳೆ. ವಿಷಯವೇನೆಂಬುದನ್ನು ಅರಿತು ಮಾತನಾಡಬೇಕು."

ಗುರುಗಳ ಕಠೋರವಾಣಿಯಿಂದ ಲಿಂಗಮ್ಮ ಬೆಚ್ಚಿದಳು. ಓಂಕಾರ ಮಾತನ್ನು ಆಡದೆ ಮೌನವಾಗಿ ನಿಂತಿದ್ದ. ಮಹಾದೇವಿ ಮುಂದೆ ಬಂದು ಇಬ್ಬರಿಗೂ ನಮಸ್ಕರಿಸುತ್ತಾ "ಅಪ್ಪಾ, ನಾನು ತಪ್ಪು ಮಾಡಿದ್ದರೆ ಕ್ಷಮಿಸು. ಅವ್ವಾ, ನನ್ನ ಅಪರಾಧವನ್ನು ಮರೆತುಬಿಡು. ಇನ್ನು ನನಗೆ ಹೋಗಲು ಅನುಮತಿಯನ್ನು ಕೊಡಿ."

ತಂದೆತಾಯಿಗಳಿಬ್ಬರೂ ಬೆಚ್ಚಿದರು.

"ಇದೇನು ಮಗಳೇ, ಹೀಗೆ ಹೇಳುತ್ತಿ ? ಎಲ್ಲಿಗೆ ಹೋಗುತ್ತಿ ? ಹುಚ್ಚು ಗಿಚ್ಚು ಹಿಡಿದಿಲ್ಲವಷ್ಟೆ?" ಎಂದು ಕೇಳಿದಳು ಲಿಂಗಮ್ಮ.

“ಹುಚ್ಚು ಹಿಡಿದಿದೆ, ಅವ್ವಾ. ನೀವು ಮದುವೆ ಮದುವೆ ಎನ್ನುತ್ತಿದ್ದಿರಿ. ಆ ಗಂಡನನ್ನು ಹುಡುಕಿ ಪಡೆಯುವ ಹುಚ್ಚಿನಿಂದ ಹೊರಟಿದ್ದೇನೆ.”

“ಇದೇನು ಮಹಾದೇವಿ, ಏನು ನೀನು ಹೇಳುತ್ತಿರುವುದು ?” ಓಂಕಾರ ಕೇಳಿದ.

“ಹೌದು, ಅಪ್ಪ ! ಇನ್ನು ನಾನಿಲ್ಲಿ ಇರಲಾರೆ. ಕಲ್ಯಾಣದತ್ತ ಹೊರಟಿದ್ದೇನೆ. ಅಲ್ಲಿ ನನ್ನ ಮಾರ್ಗವನ್ನು ಕಂಡುಕೊಳ್ಳುತ್ತೇನೆ. ನನ್ನ ಪತಿಯನ್ನು ಹುಡುಕಿ ಅವನನ್ನು ಪಡೆಯುತ್ತೇನೆ. ಅದಕ್ಕೆ ಗುರುಗಳ ಆಶೀರ್ವಾದವೂ ಇದೆ.”

ಓಂಕಾರ ಗುರುಗಳತ್ತ ನೋಡಿದ. ಗುರುಗಳು ಹೇಳಿದರು :

“ನಿಜ ಓಂಕಾರ. ನಿಮ್ಮ ಮಗಳು ವಿಶ್ವಪತಿಯನ್ನು ಮದುವೆಯಾಗಿ ವಿಶ್ವಸತಿಯಾಗಲು ಹೋಗುತ್ತಿದ್ದಾಳೆ. ಅವಳನ್ನು ಹರಸಿ ಬೀಳ್ಕೊಡಿ.”

ಲಿಂಗಮ್ಮನಿಗೆ ದುಃಖ ಉಕ್ಕಿಬಂದಿತು.

“ಇದೇನು, ಗುರುಗಳೇ ! ನೀವೂ ಹೀಗೆ ಹೇಳುತ್ತಿದ್ದೀರಿ. ಈ ನನ್ನ ಕಂದಮ್ಮ ಕಲ್ಯಾಣಕ್ಕೆ ಹೋಗುವುದೆಂದರೇನು ? ಕಷ್ಟವನ್ನೇ ಅರಿಯದ ಮುದ್ದು ಮಗು ಇದು. ಇದೇಕೆ ಮಗಳೇ ನಿನಗೆ ಈ ಬುದ್ಧಿ ಬಂದಿತು. ಹೆತ್ತ ತಂದೆತಾಯಿಗಳನ್ನು ಬಿಟ್ಟು ಹೋಗುವಷ್ಟು ನಿಷ್ಠುರಳಾದೆಯಾ? ನಿನಗೆ ನಾವೇನು ಕಷ್ಟವನ್ನು ಕೊಟ್ಟಿದ್ದೇವೆ? ಇಲ್ಲಿ ನಿನಗೇನು ತೊಂದರೆಯಾಗಿದೆ ?” ಎಂದು ಮುಂತಾಗಿ ದುಃಖದ ಆವೇಗದಲ್ಲಿ ಮನಬಂದಂತೆ ಬಡಬಡಿಸಿದಳು ಲಿಂಗಮ್ಮ.

ಮಹಾದೇವಿ ಹೇಳಿದಳು :

“ನೀವೇನೂ ಕಷ್ಟವನ್ನು ಕೊಟ್ಟಿಲ್ಲ, ಅವ್ವಾ. ನನ್ನ ಕಷ್ಟ ನನಗೇ ಗೊತ್ತು; ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ ! ಏರಿಲ್ಲದ ಗಾಯದಲ್ಲಿ ನೊಂದೆನವ್ವಾ ! ಸುಖವಿಲ್ಲದೆ ಧಾವತಿಗೊಂಡೆನವ್ವಾ – ಚೆನ್ನಮಲ್ಲಿಕಾರ್ಜುನನನ್ನು ಒಲಿದ ನನ್ನ ದುಃಖ ನನಗೇ ಗೊತ್ತು. ಆದುದರಿಂದ ನನ್ನನ್ನು ತಡೆಯಬೇಡ, ಅವ್ವಾ !”

“ಇಂತಹ ಮಾತನ್ನು ಆಡಬೇಡ, ಮಗಳೇ. ಇಲ್ಲಿಯೇ ಇದ್ದು ನಿನ್ನ ಸಾಧನೆಯನ್ನು ಮಾಡು. ನೋಡು ನಿನ್ನ ಗೆಳತಿಯರೆಲ್ಲರೂ ನಿನ್ನನ್ನು ನೋಡಲು ಬಂದಿದ್ದಾರೆ. ಅವರ ಮಾತನ್ನು ಕೇಳು.”

ಗೆಳತಿಯರೆಲ್ಲರೂ ಅನೇಕ ರೀತಿಯಲ್ಲಿ ಅವಳನ್ನು ಸಮಾಧಾನಪಡಿಸಲು ಯತ್ನಿಸಿದರು. ಆದರೆ ಎಲ್ಲಾ ವ್ಯರ್ಥವಾಯಿತು. ಅವರಿಗೆ ಹೇಳಿದಳು :

ಗೆಳತಿಯರಿರಾ, ನಿಮ್ಮ ವಿಶ್ವಾಸದಲ್ಲಿ ಬೆಳೆದಿದ್ದೇನೆ. ಆದರೆ ನನ್ನ ನೋವನ್ನು ತಿಳಿಯಲಾರಿರಿ:

ಬಂಜೆ ಬೇನೆಯನರಿಯಳು, ಬಲದಾಯಿ ಮುದ್ದು ಬಲ್ಲಳೆ ?
ನೊಂದ ನೋವ ನೋಯದವರೆತ್ತ ಬಲ್ಲರು ?
ಚೆನ್ನಮಲ್ಲಿಕಾರ್ಜುನಾ, ನೀನಿರಿದಲಗು ಒಡಲಲ್ಲಿ ಮುರಿದು
ಹೊರಳುವಳ ನೀವೆತ್ತ ಬಲ್ಲಿರೇ ಎಲೆ ತಾಯಿಗಳಿರಾ ?

"ನೀನೊಬ್ಬಳೇ ಅಷ್ಟು ದೂರ ಹೇಗೆ ಹೋಗುತ್ತಿ ? ಈ ದೀರ್ಘ ಪ್ರಯಾಣದಲ್ಲಿ ಜೊತೆಗೆ ಯಾರು ಬರುತ್ತಾರೆ ? ಊಟಕ್ಕೇನು, ಉಪಚಾರಕ್ಕೇನು? ಬುದ್ಧಿಗಿದ್ಧಿ ಇದೆಯೊ ಇಲ್ಲವೋ?" – ಎಂಬ ಸುಖಿಯರ ಪ್ರಶ್ನೆಗೆ ಅವಳ ದಿಟ್ಟತನದ ಉತ್ತರ :

"ಇಲ್ಲ, ನನ್ನ ಬುದ್ಧಿಯೆಲ್ಲಾ ಒಂದೇ ಕಡೆಯಲ್ಲಿ ಲೀನವಾಗಿಹೋಗಿದೆ. ಊಟ ಉಪಚಾರಕ್ಕೆ ಯೋಚಿಸಬೇಡಿ :

ಹಸಿವಾದೊಡೆ ಭಿಕ್ಷಾನ್ನಗಳುಂಟು,
ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು,
ಶಯನಕ್ಕೆ ಹಾಳುದೇಗುಲಗಳುಂಟು,
ಚೆನ್ನಮಲ್ಲಿಕಾರ್ಜುನಯ್ಯ, ಆತ್ಮಸಂಗಾತಕ್ಕೆ ನೀನೆನಗುಂಟು.

ಲಿಂಗಮ್ಮ ಮಗಳ ಕೈಹಿಡಿದುಕೊಂಡು ದೈನ್ಯದಿಂದ ಕೇಳಿದಳು :

"ನಮ್ಮ ಜೀವನಕ್ಕೆ ಬೆಳಕಾಗಿ ಇರುವವಳು ನೀನೊಬ್ಬಳೇ ಮಗಳೇ. ನಮ್ಮ ಕೈಬಿಡಬೇಡು. ನೀನು ಎದುರಿಗಿದ್ದರೆ ಸಾಕು. ಅದೇ ನಮ್ಮ ಜೀವನಕ್ಕೆ ಅವಲಂಬನೆ. ನಿನ್ನನ್ನು ಬೇಡಿಕೊಳ್ಳುತ್ತೇನೆ – ನಮ್ಮ ಕೈಬಿಡಬೇಡ, ತಿರಸ್ಕರಿಸಬೇಡ."

ಮಹಾದೇವಿ ಧರ್ಮಸಂಕಟಕ್ಕೆ ಗುರಿಯಾದಳು. ಜಗತ್ತಿನ ಬಾಂಧವ್ಯಗಳಲ್ಲೆಲ್ಲಾ ಬಲವತ್ತರವಾದುದು ತಾಯಿಯ ಕರುಳು. ಅಂತಹ ತಾಯಿಯೇ ಕೈಹಿಡಿದು ಬೇಡುತ್ತಿದ್ದಾಳೆ. ತಂದೆ ಮಾತನಾಡದಿದ್ದರೂ ಮೂಕವೇದನೆಯನ್ನು ವ್ಯಕ್ತಪಡಿಸುತ್ತಾ ನಿಂತಿದ್ದಾನೆ. ಏನು ಮಾಡಬೇಕು ? ಒಂದು ಕಡೆ ಕರ್ತವ್ಯದ ಕರೆ ; ಇನ್ನೊಂದು ಕಡೆ ಬಾಂಧವ್ಯದ ಮೊರೆ. ಕ್ಷಣಕಾಲ ಮಹಾದೇವಿಯ ಅಂತರಂಗದಲ್ಲಿ ವಿಪ್ಲವವೇ ನಡೆಯಿತು. ಕೊನೆಯಲ್ಲಿ ಕರ್ತವ್ಯದ ಕರೆ, ಜಯವನ್ನು ಪಡೆಯಿತು.

"ಅವ್ವಾ, ನನ್ನನ್ನು ಈ ಧರ್ಮಸಂಕಟದಿಂದ ಬಿಟ್ಟುಬಿಡು. ನನಗೆ ಹೋಗಲು ಅನುಮತಿಯನ್ನು ಕೊಡು."

ಇಲ್ಲ, ಮಗಳೇ... ಖಂಡಿತ ನೀನು ಹೋಗಕೂಡದು. ನಾನು ಒಪ್ಪಿಗೆಯನ್ನು ಕೊಡಲಾರೆ."

"ಹಾಗೇನು?" ಲಿಂಗಮ್ಮನಿಂದ ಕೈಗಳನ್ನು ಬಿಡಿಸಿಕೊಳ್ಳುತ್ತಾ ಹೇಳಿದಳು ಮಹಾದೇವಿ : ಹಾಗಾದರೆ, ಹೋಗು ; ಚೆನ್ನಮಲ್ಲಿಕಾರ್ಜುನನ ಕರೆಯ ಮುಂದೆ, ನಿನ್ನ ತಾಯಿತನಕ್ಕೆ ನಾನು ಮಣಿಯಲಾರೆ. ನಿನ್ನ ತಾಯಿತನವನೊಲ್ಲೆ ಹೋಗು."

"ಅಯ್ಯೋ ಮಗಳೇ !" ಎಂದು ಕುಸಿದು ಕುಳಿತಳು ಲಿಂಗಮ್ಮ.

ಗುರುಗಳು ಮುಂದೆ ಮುಂದೆ ಬರುತ್ತಾ :

"ಲಿಂಗಮ್ಮ, ಇದುವರೆಗೂ ನಾನು ಹೇಳುತ್ತಾ ಬಂದುದೆಲ್ಲಾ ವ್ಯರ್ಥವಾಯಿತೆ? ಈಕೆ ನಿನ್ನ ಮಗಳೆಂಬ ವ್ಯರ್ಥವ್ಯಾಮೋಹವನ್ನು ಬಿಡು. ಮೊದಲಿನಿಂದಲೂ ನೀನು ಕಂಡ ಅಲೌಕಿಕ ಘಟನೆಗಳನ್ನು ಸ್ಮರಿಸಿಕೋ. ಮೂಡಿ ಮೇಲೇರುತ್ತಿರುವ ಸೂರ್ಯನನ್ನು ಪೂರ್ವದಿಕ್ಕು ತನ್ನ ಮಗನೆಂದು ಇಟ್ಟುಕೊಳ್ಳಲಾರದು. ಜಗತ್ತನ್ನೇ ಬೆಳಗುವ ಮಗಳನ್ನು ಹೆತ್ತು ಲೋಕಕ್ಕೆ ದಾನ ಮಾಡುತ್ತಿದ್ದೀಯ. ಆದುದದರಿಂದ ಲಿಂಗಮ್ಮ, ಓಂಕಾರ ನೀವಿಬ್ಬರೂ ಸಂತೋಷದಿಂದ ನಿಮ್ಮ ಮಗಳನ್ನು ಬೀಳ್ಕೊಡಿ. ತಂದೆತಾಯಿಗಳಿಗೆ ದುಃಖವನ್ನುಂಟುಮಾಡಿ ಹೋದೆನೆಂಬ ಅಳುಕು ಆಕೆಯ ಮನಸ್ಸಿನಲ್ಲಿ ಉಳಿಯುವುದು ಬೇಡ. ಹೂಂ.... ಮೇಲೇಳು, ಲಿಂಗಮ್ಮ."

ಲಿಂಗಮ್ಮ ಮುಗ್ಧಳಾದವಳಂತೆ ಎದ್ದುನಿಂತಳು. ಓಂಕಾರ ಮಗಳ ಸಮೀಪಕ್ಕೆ ಬಂದ. ಮಹಾದೇವಿ ಇಬ್ಬರಿಗೂ ನಮಸ್ಕರಿಸಿದಳು. ಇಬ್ಬರಿಗೂ ಕಂಠ ಬಿಗಿದು ಬಂದಿತು.

"ನಿನ್ನ ಸಾಧನೆಯಲ್ಲಿ ಯಶಸ್ಸನ್ನು ಪಡೆ ಮಗಳೇ. ನಿನ್ನ ಪತಿಯನ್ನು ಸೇರಿ, ಅವನೊಡನೆ ಸಾಮರಸ್ಯದ ಸುಖವನ್ನು ಪಡೆ." ಓಂಕಾರ ಹೇಗೋ ದುಃಖವನ್ನು ಅಡಗಿಸಿಕೊಂಡು ಗದ್ಗದಸ್ವರದಿಂದ ನುಡಿದ.

"ಹೋಗಿ ಬಾ ಮಗಳೇ" ಎಂದಳು ಲಿಂಗಮ್ಮ ನಡುಗುವ ಧ್ವನಿಯಿಂದ. ಅಷ್ಟರಲ್ಲಿ ಧಾರಾಕಾರವಾಗಿ ಸುರಿಯತೊಡಗಿದ ಕಣ್ಣೀರು ಅವಳ ಮಾತನ್ನು ಮೂಕವನ್ನಾಗಿಸಿತು.

"ಧನ್ಯ ದಂಪತಿಗಳೇ ! ಇಂತಹ ಗಂಡನ ಮನೆಗೆ, ಹೀಗೆ ಮಗಳನ್ನು ಕಳುಹಿಸುವ ಪುಣ್ಯ ಯಾವ ದಂಪತಿಗಳಿಗಿದೆ ?"

ಈ ವೇಳೆಗೆ ಹಿಂದೆ ನಿಂತಿದ್ದ ರಸವಂತಿ ಬಂದು ಮಹಾದೇವಿಯ ಪಾದಗಳ ಮೇಲೆ ಬಿದ್ದಳು. ಮಹಾದೇವಿ ಹಿಂದೆ ಸರಿಯುತ್ತಾ :

"ಯಾರು ? ರಸವಂತಿಯೇ ?" ಎಂದು ಅವಳನ್ನು ಮೇಲಕ್ಕೆತ್ತಿದಳು. ರಸವಂತಿಯ ಕಣ್ಣುಗಳಿಂದಲೂ ನೀರು ಇಳಿಯುತ್ತಿದ್ದವು.

"ರಸವಂತಿ, ನೀನು ಹೇಗೆ ಬಂದೆ ? ಏಕೆ ಬಂದೆ ? ರಸವಂತಿ ?"

"ಏಕೆ ಎಂದು ಕೇಳುತ್ತೀರಾ ಒಡತಿ ? ನಿಮ್ಮನ್ನು ಬಿಟ್ಟು ಹೇಗಿರಲಿ ಆ ಅರಮನೆಯಲ್ಲಿ ? ನೀವು ಬಂದ ನಾಲ್ಕು ದಿನಗಳಲ್ಲಿಯೇ ನನ್ನ ಜೀವನಕ್ಕೆ ಹೊಸದೊಂದು ದೃಷ್ಟಿಯನ್ನು ಕೊಟ್ಟಿರಿ. ನೀವು ನನ್ನ ಗುರು. ನಿಮ್ಮನ್ನು ನಾನು ಹಿಂಬಾಲಿಸುತ್ತೇನೆ."

ಅಲ್ಲಿದ್ದವರೆಲ್ಲಾ ಮಂತ್ರಮುಗ್ಧರಾದವರಂತೆ ನಿಂತು ಈ ದೃಶ್ಯವನ್ನು ನೋಡುತ್ತಾ ಕಣ್ಣೀರು ಮಿಡಿಯುತ್ತಿದ್ದರು. ಮಹಾದೇವಿ ಹೇಳಿದಳು :

"ನಿನ್ನ ಹೃದಯದ ಸಂಸ್ಕಾರ ದೊಡ್ಡದು ರಸವಂತಿ. ನೀನು ನನ್ನನ್ನು ಗುರು ಎಂದು ಭಾವಿಸಿದೆಯಲ್ಲವೇ ? ಹಾಗಾದರೆ ನಾನು ಹೇಳುವುದನ್ನು ಕೇಳು. ರಾಜರು ನನ್ನನ್ನು ಪ್ರೀತಿಸಿ ದುಃಖಕ್ಕೆ ಗುರಿಯಾದರು. ಅವರ ಜೀವನದಲ್ಲಿ ಶಾಂತಿ ಸಿಕ್ಕಲಿ – ಎಂದು ಪ್ರಾರ್ಥಿಸುತ್ತೇನೆ. ನೀನು ಅವರ ಬಳಿಯಲ್ಲಿದ್ದು, ಅವರ ಸೇವೆಯನ್ನು ಮಾಡುತ್ತಾ ಅವರನ್ನು ಸಮಾಧಾನಪಡಿಸು."

"ಇಲ್ಲ, ತಾಯಿ... ನಾನು ನಿಮ್ಮನ್ನೇ..."

ಮಧ್ಯದಲ್ಲಿಯೇ ರಸವಂತಿಯ ಮಾತನ್ನು ತಡೆದು ಮಹಾದೇವಿ :

"ಇಲ್ಲಿ ಕೇಳು ರಸವಂತಿ, ನೀನು ನನ್ನನ್ನು ತುಂಬಾ ಪ್ರೀತಿಸಿದ್ದೀಯ. ನನ್ನ ಪ್ರೇಮವೂ ಅದಕ್ಕೆ ಕಡಿಮೆಯಿಲ್ಲವೆಂಬುದು ನನಗೆ ಗೊತ್ತು. ಆದರೆ ನಿನ್ನನ್ನು ಕರೆದುಕೊಂಡು ಹೋಗುವ ಅಧಿಕಾರ ನನಗಿಲ್ಲ. ನಿನಗೆ ನನ್ನ ಮೇಲೆ ಪ್ರೀತಿಗೌರವಗಳು ಇರುವುದೇ ನಿಜವಾದರೆ, ನಾನು ಹೇಳಿದ ಮಾತಿಗೆ ಪ್ರತಿಯಾಡದೆ ನಿನ್ನ ಕಾರ್ಯವನ್ನು ನಿರ್ವಹಿಸು. ಶಿವನಿಚ್ಛೆಯಿದ್ದರೆ ಮತ್ತೆ ನಿನ್ನನ್ನು ನೋಡುತ್ತೇನೆ."

ರಸವಂತಿ ನಿರುತ್ತರಳಾಗಿ ಕಣ್ಣೀರು ಸುರಿಸುತ್ತಾ ನಮಸ್ಕರಿಸಿದಳು.

ಮಹಾದೇವಿ ಹೊರಡಲು, ಸಿದ್ಧಳಾದಳು ; ಗುರುಗಳು ಹೇಳಿದರು :

"ಹೋಗಿ ಬಾ, ತಾಯಿ. ಹೆತ್ತ ಕುಲಕ್ಕೆ ಕೀರ್ತಿಯನ್ನು ತಾ. ನಿನ್ನ ಗುರುವಾಗುವ ಭಾಗ್ಯವನ್ನು ಪಡೆದ ಪುಣ್ಯಕ್ಕಾಗಿ ಆಗಾಗ ನನ್ನನ್ನು ಸ್ಮರಿಸಿಕೋ" ಎನ್ನುತ್ತಾ ಅದುವರೆಗೆ ತಡೆದ ಕಂಬನಿಯನ್ನು ಅವರೂ ಮಿಡಿದರು. ಎಲ್ಲರ ಕಣ್ಣುಗಳಿಂದ ನೀರು ಇಳಿಯುತ್ತಿದ್ದವು.

ಮಹಾದೇವಿ ಎಲ್ಲರನ್ನೂ ಕೊನೆಯ ಬಾರಿ ನೋಡಿದಳು. ಎಲ್ಲರಿಗೂ ಕೈ ಜೋಡಿಸಿದಳು. ಅವಳ ಕಣ್ಣುಗಳಿಂದಲೂ ನೀರು ಇಳಿಯತೊಡಗಿದ್ದವು. ಮಂಜಾದ ಕಣ್ಣುಗಳಿಂದ ಮತ್ತೊಮ್ಮೆ ಗುರುಗಳನ್ನೂ, ತಂದೆ–ತಾಯಿಗಳನ್ನೂ ಎಲ್ಲರನ್ನೂ ನೋಡಿ ಕೈ ಜೋಡಿಸಿಕೊಂಡೇ ಮುಂದೆ ನಡೆಯತೊಡಗಿದಳು.

ಎಲ್ಲರೂ ಅವಳನ್ನೇ ಹಿಂಬಾಲಿಸುತ್ತಿದ್ದರು. ತಪೋವನವನ್ನು ದಾಟಿದಳು ಮಹಾದೇವಿ. ತಪೋವನದಿಂದ ತಪೋಲಕ್ಷ್ಮಿಯೇ ರೂಪುಗೊಂಡು ನಡೆಯುತ್ತಿರುವಂತೆ ತೋರುತ್ತಿತ್ತು. ತಪೋಲಕ್ಷ್ಮಿಯನ್ನು ಹಿಂಬಾಲಿಸುವ ಪುಣ್ಯದುರುಳಿಗಳಂತೆ ಹಿಂಬಾಲಿಸುತ್ತಿದ್ದರು ಗುರುಗಳಾದಿಯಾಗಿ ಸರ್ವರೂ.

ಮಹಾದೇವಿ ಮಠದ ಆವರಣವನ್ನು ದಾಟಿದಳು. ಹಿಂದಿರುಗಿ ನೋಡಿದಳು. ಎಲ್ಲರೂ ತನ್ನ ಹಿಂದೆಯೇ ಬಂದಿದ್ದರು. ಮತ್ತೊಮ್ಮೆ ಕೊನೆಯ ಬಾರಿ ಅವರೆಲ್ಲರನ್ನೂ ನೋಡಿ :

"ನಾನಿನ್ನು ಬರುತ್ತೇನೆ. ನಿಮ್ಮೆಲ್ಲರ ಕರುಣೆಯ ಶಿಶುವಾಗಿ ಬಾಳುವಂತೆ ಹರಸಿರಿ. ಶರಣು ಶರಣಾರ್ಥಿ" ಎಂದು ಕೈಮುಗಿದು, ಸರಕ್ಕನೆ ಮುಂದೆ ತಿರುಗಿ, ಕಣ್ಣೀರನ್ನು ಒರೆಸಿಕೊಳ್ಳುತ್ತಾ ನಡೆಯತೊಡಗಿದಳು. ಎಲ್ಲರೂ ಮಂಗಳದ ಮಿಂಚು ಹೊಡೆದವರಂತೆ ಮರವಟ್ಟು ನಿಂತು, ಆಕೆಯ ದಿವ್ಯ ಮೂರ್ತಿ ಮರೆಯಾಗುವವರೆಗೂ ನೋಡುತ್ತಿದ್ದರು.

●

# ತಪೋಯಾತ್ರೆ

## ೧

ಪುರದ ಪುಣ್ಯವೇ ಹೆಣ್ಣು ರೂಪವನ್ನು ಧರಿಸಿ ಹೋಗುತ್ತಿರುವಂತೆ ಮಹಾದೇವಿ ಉಡುತಡಿಯಿಂದ ದೂರದೂರ ನಡೆಯುತ್ತಿದ್ದಳು. ಬಾಂಧವ್ಯದ ಕರೆ ಹೃದಯದಲ್ಲಿ ಆಗಾಗ ಮೊರೆಯುತ್ತಿದ್ದರೂ ಅದಕ್ಕೆ ಓಗೊಡದೆ ಆವೇಶಗೊಂಡವಳಂತೆ ವೇಗವಾಗಿ ನಡೆಯುತ್ತಿದ್ದಳು.

ಮೇಲೇರುತ್ತಿರುವ ಸೂರ್ಯನ ಪ್ರಖರವಾದ ಕಿರಣಗಳು, ತಮ್ಮ ಬಿಸಿಯನ್ನು ಬೀರುತ್ತಿದ್ದವು. ಕ್ರಮೇಣ ನೆಲವೂ ಕಾಯತೊಡಗಿತ್ತು. ರಸ್ತೆಯ ಪಕ್ಕದಲ್ಲಿನ ಸಾಲುಮರಗಳ ನೆರಳಿನಲ್ಲಿಯೇ ಆಶ್ರಯವನ್ನು ಪಡೆದು ನಡೆಯುತ್ತಿದ್ದಳು ಮಹಾದೇವಿ. ಕಷ್ಟವನ್ನು ಎಂದೂ ಕಂಡರಿಯದ ಅವಳ ದೇಹ ಆಗಲೇ ಅವಳ ಮಾತನ್ನು ಕೇಳುತ್ತಿರಲಿಲ್ಲ. ಆದರೂ ತನ್ನ ಆತ್ಮಶಕ್ತಿಯ ಸಂಕಲ್ಪದಿಂದ ಅದಕ್ಕೆ ಪ್ರಚೋದನೆಯನ್ನು ಕೊಟ್ಟು ಮುಂದೆ ಮುಂದೆ ನಡೆಯುತ್ತಿದ್ದಳು.

ಸ್ವಲ್ಪಕಾಲ ನಡೆಯುವಷ್ಟರಲ್ಲಿಯೇ ರಸ್ತೆಯ ಪಕ್ಕದಲ್ಲಿ ಒಂದು ಕಲ್ಲು ಗುಡ್ಡ ಕಣ್ಣಿಗೆ ಬಿದ್ದಿತು. ಒಂದೇ ಒಂದು ಅತಿದೊಡ್ಡ ಬಂಡೆಯಿಂದ ನಿರ್ಮಿತವಾದುದೆಂಬಂತೆ ಇದ್ದಿತು ಆ ಗುಡ್ಡ. ಅದನ್ನು ಕಂಡೊಡನೆಯೇ ಮಹಾದೇವಿಗೆ ತಾನಾಗಲೇ ಬಳ್ಳಿಗಾವೆಯ ಸಮೀಪಕ್ಕೆ ಬಂದಿರುವುದು ತಿಳಿಯಿತು. ಬಹಳ ಹಿಂದೊಮ್ಮೆ ತಾನು ಈ ಮಾರ್ಗವಾಗಿ ಬಂದಿದ್ದುದನ್ನು ನೆನೆಸಿಕೊಂಡಳು.

ಅಂದು ಬನವಾಸಿಯ ಮಧುಕೇಶ್ವರನ ಜಾತ್ರೆ. ಆ ವರ್ಷ ಉಡುತಡಿಯಿಂದ ಒಂದು ದೊಡ್ಡ ಗುಂಪೇ ಹೊರಟಿತ್ತು ಜಾತ್ರೆಗೆ. ಎಲ್ಲರೂ ಗಾಡಿ ಕಟ್ಟಿಕೊಂಡು ಹೊರಟಿದ್ದರು. ಸಾಲುಸಾಲು ಗಾಡಿಗಳ ಆ ಪ್ರಯಾಣ ಮಹಾದೇವಿಯ ಕಣ್ಣು ಮುಂದೆ ಸುಳಿಯಿತು. ಆ ಗುಡ್ಡದ ಬಳಿಗೆ ಬರುವ ವೇಳೆಗೆ ಬಿಸಿಲೇರಿದುದರಿಂದ ಪಕ್ಕದ ಮಾವಿನ ತೋಪಿನ ನೆರಳಿನಲ್ಲಿ ಗಾಡಿಗಳನ್ನು ಬಿಟ್ಟಿದ್ದರು. ಆಗ ತಾನು ಮತ್ತು ಶಂಕರಿ ಉರಿಯುವ ಆ ಬಿಸಿಲಿನಲ್ಲಿ ಗುಡ್ಡವನ್ನು ಹತ್ತಲು ಪ್ರಯತ್ನಿಸಿದ್ದು, ಬೇಡವೆಂದರೂ ಕೇಳದೆ ಅದನ್ನು ಹತ್ತಿ ದೊಡ್ಡವರಿಂದ ಗದರಿಸಿಕೊಂಡುದು – ಈ ಚಿತ್ರಗಳೆಲ್ಲಾ ಮಹಾದೇವಿಯ ಮನಸ್ಸಿನ ಮುಂದೆ ಸುಳಿದವು. ಮತ್ತೊಮ್ಮೆ ಆ

ಗುಡ್ಡವನ್ನು ಹತ್ತಬೇಕೆನ್ನಿಸಿತು. ಈಗಾಲೂ ಅದೇ ಉರಿಯುವ ಬಿಸಿಲು, ಗುಡ್ಡವೂ ಅಚಲವಾಗಿ ಹಾಗೇ ಮಲಗಿದೆ. ಆದರೆ ಜೊತೆಯಲ್ಲಿ ಶಂಕರಿಯಿಲ್ಲ. ಅಲ್ಲದೆ ಇಂದು ತಮ್ಮಿಬ್ಬರ ಜೀವನದಲ್ಲಿ ಎಂತಹ ಬದಲಾವಣೆ !

ಅದನ್ನು ಕುರಿತು ಆಲೋಚಿಸುತ್ತಿದ್ದಂತೆಯೇ, ಅವಳ ಮನಸ್ಸಿನಲ್ಲಿ, ಸುಖವೋ ದುಃಖವೋ ಸಂತೋಷವೋ ವಿಷಾದವೋ – ಯಾವುದೋ ಅರಿಯಲಾಗದ ಭಾವವೊಂದು ತುಂಬಿ ಮನಸ್ಸು ಭಾರವಾಯಿತು. ಗುಡ್ಡವನ್ನೇರುವ ಕಾಲುಗಳು ಇನ್ನೂ ಭಾರವಾದುವು. ಆದರೂ ಹುಚ್ಚಳಂತೆ ಅದನ್ನು ಹತ್ತಿದಳು. ಊರಿನತ್ತ ದೃಷ್ಟಿಯನ್ನು ಪಸರಿಸಿದಳು. ತನ್ನ ಜೀವನದ ಚಿತ್ರಪಟಗಳೆಲ್ಲಾ ಅವಳ ಮನಃಪಟಲದ ಮೇಲೆ ಸುರುಳಿಯನ್ನು ಬಿಚ್ಚಿದುವು. ಕಣ್ಣು ಮಂಜಾದವು.

ಆದರೆ ಮರುಕ್ಷಣದಲ್ಲಿಯೇ ಅದಮ್ಯವಾದ ಆಧ್ಯಾತ್ಮಿಕ ಆಕಾಂಕ್ಷೆ ಅಂತರಾಳದಿಂದ ಚಿಮ್ಮಿತು. ಉಡುತಡಿಯುತ್ತಣಿಂದ ಕಣ್ಣುಗಳು, ಕಲ್ಯಾಣವಿರಬಹುದೆಂದು ತಾನು ಭಾವಿಸಿದ ಉತ್ತರ ದಿಕ್ಕಿನ ಕಡೆಗೆ ಹರಿದುವು. ಅನತಿ ದೂರದಲ್ಲಿದ್ದ ತನ್ನ ಊರಿನಿಂದ ಹಾರಿ, ಅತಿ ದೂರದಲ್ಲಿದ್ದ ಕಲ್ಯಾಣದ ಚಿತ್ರವನ್ನು ಮನಸ್ಸು ಕಾಣಲು ಯತ್ನಿಸಿತು. ಕಲ್ಯಾಣದ ಅಣ್ಣ, ಕೈಬೀಸಿ ಕರೆದಂತಾಯಿತು. ಕಣ್ಣುಗಳು ತೇಜಃಪುಂಜವಾದುವು. ತನ್ನ ಮನಸ್ಸಿನ ದೌರ್ಬಲ್ಯವನ್ನು ಕಂಡು ನಾಚಿದಳು. ದಡದಡನೆ ಕೆಳಗಿಳಿಯತೊಡಗಿದಳು ಗುಡ್ಡದಿಂದ.

ಗುಡ್ಡವನ್ನಿಳಿದು ಸ್ವಲ್ಪಕಾಲ ಮುಂದೆ ನಡೆಯುವಷ್ಟರಲ್ಲಿ ಬಳ್ಳಿಗಾವೆಯ ಮುಂದಿರುವ ಶಿವದೇವಾಲಯದ ಶಿಖರ ಕಣ್ಣಿಗೆ ಬಿದ್ದಿತು. ಅದನ್ನು ಸಮೀಪಿಸಿದಂತೆಲ್ಲಾ ಆ ದೇವಾಲಯದ ಮುಂದೆ ಹಬ್ಬಿ ಹರಡಿರುವ ತಾವರೆ ಕೆರೆಯೂ ಗೋಚರಿಸಿತು. ಆ ಕೆರೆಯ ಏರಿಯ ಮೇಲೆ ನಡೆಯುತ್ತಿರುವ ಮಹಾದೇವಿಯ ಮನಸ್ಸಿನ ಮುಂದೆ ಅಲ್ಲಮಪ್ರಭುದೇವನ ವ್ಯಕ್ತಿತ್ವ ಸುಳಿಯತೊಡಗಿತ್ತು.

ಅಲ್ಲಮನನ್ನು ಲೋಕಕ್ಕೆ ಕೊಟ್ಟ ಊರು ಈ ಬಳ್ಳಿಗಾವೆ. ಪ್ರಭುದೇವನ ಪಾದಗಳ ಸ್ಪರ್ಶದಿಂದ ಈ ಕೆರೆಯ ಏರಿ ಪವಿತ್ರವಾಗಿದೆಯಲ್ಲವೇ ! ಅವನ ದರ್ಶನದಿಂದ ಈ ನೀರು ತೀರ್ಥವಾಗಿರಬೇಕು. ಈ ಕಲ್ಲು, ಪರುಷಮಣಿಯಾಗಿರಬೇಕು. ಅವನು ನಡೆದು ಪವಿತ್ರವಾದ ಮಾರ್ಗದಲ್ಲಿ ತಾನು ನಡೆಯುತ್ತಿರುವೆನೆಂಬುದನ್ನು ನೆನೆಸಿಕೊಂಡು ಮಹಾದೇವಿಯ ಮನಸ್ಸು ಆನಂದದಿಂದ ಪುಳಕಿತವಾಯಿತು.

ಆ ವೇಳೆಗೆ ಕೆರೆಯ ಏರಿಯನ್ನು ದಾಟಿಕೊಂಡು ಅದರ ಇನ್ನೊಂದು ಕೊನೆಗೆ ಬಂದಿದ್ದಳು. ಅಲ್ಲಿಯೇ ಇದ್ದುದು ಶಿವಾಲಯ. ಅನತಿದೂರದಲ್ಲಿಯೇ ಬಳ್ಳಿಗಾವೆ ಕಣ್ಣಿಗೆ ಗೋಚರಿಸುತ್ತಿತ್ತು. ಊರಿನ ಕಲಕಲನಿನಾದವೂ ಅಸ್ಪಷ್ಟವಾಗಿ ಕಿವಿಗೆ ಬೀಳುತ್ತಿತ್ತು.

ದೇವಾಲಯದ ಮುಂಭಾಗದಲ್ಲಿಯೇ ಕೆರೆಗೆ ಇಳಿಯಲು ಮೆಟ್ಟಿಲುಗಳಿದ್ದುವು. ಮಹಾದೇವಿ, ಮೆಟ್ಟಲುಗಳನ್ನು ಇಳಿದು ಮುಖವನ್ನು ತೊಳೆದುಕೊಂಡು, ಹರಕರುಣೆಯ ತೀರ್ಥಜಲದಂತಿದ್ದ ಆ ನೀರನ್ನು ಕುಡಿದಳು. ದಣಿದ ದೇಹಕ್ಕೆ ಸ್ವಲ್ಪ ನೆಮ್ಮದಿ ದೊರಕಿದಂತಾಯಿತು. ಮೇಲಕ್ಕೆ ಹತ್ತಿ ಬಂದು ಶಿವಾಲಯವನ್ನು ಪ್ರವೇಶಿಸಿದಳು.

ಬೆಳಗಿನ ಪೂಜೆಯಾಗಲೇ ಮುಗಿದು ಬಹಳ ಹೊತ್ತಾಗಿದ್ದರೂ ಗರ್ಭಗೃಹದಲ್ಲಿದ್ದ ನಂದಾದೀಪ ಸಣ್ಣಗೆ ಉರಿಯುತ್ತಿತ್ತು. ಅದರ ಮಂದ ಪ್ರಕಾಶದಲ್ಲಿ. ಅಚ್ಚ ಕಪ್ಪು ಶಿಲೆಯ ಶಿವಲಿಂಗ ಭವ್ಯವಾಗಿ ಹೊಳೆಯುತ್ತಿತ್ತು. ನಿರಂತರ ಚಲನೆಯುಳ್ಳ ಈ ಜಗತ್ತಿನಲ್ಲಿ ಅಚಲವಾದ ಸತ್ಯದ ಸಾಕ್ಷಾತ್ಕಾರಕ್ಕೆ ಸಾಕ್ಷೀಭೂತವಾದ ಸನಾತನಶಕ್ತಿಯಂತೆ ಕಂಗೊಳಿಸುತ್ತಿತ್ತು ಶಿವನ ರೂಪ. ಅದನ್ನೇ ದಿಟ್ಟಿಸಿ ನೋಡುತ್ತಾ ನೋಡುತ್ತಾ ಮಹಾದೇವಿಯ ಮನಸ್ಸು ಭಾವಪರವಶವಾಯಿತು. ಆ ಜಗತ್‌ಪತಿಯ ಎದುರಿನಲ್ಲಿ ಕುಸಿದು ಕುಳಿತಳು. ಹೊರಗೆ ಕಾಣುವ ದಿವ್ಯ ರೂಪವನ್ನೇ ಅಂತರಂಗದಲ್ಲಿಯೂ ಕಾಣುವವಳಂತೆ ಕಣ್ಣುಗಳನ್ನು ಮುಚ್ಚಿ ಕ್ಷಣಕಾಲ ಧ್ಯಾನಾಸಕ್ತಳಾದಳು.

ಅಪೂರ್ವವಾದ ಚೈತನ್ಯಶಕ್ತಿಯೊಂದು ಆವಿರ್ಭವಿಸಿ ಅವಳ ದೇಹವನ್ನು ವ್ಯಾಪಿಸಿದಂತಾಯಿತು. ಹಿಂದೊಮ್ಮೆ ಪ್ರಭುದೇವ ಇಂಥದೇ ತಳಮಳದಿಂದ ತನ್ನೆದುರು ಬಂದು ಮೊರೆಯಿಟ್ಟಾಗ, ಅವನನ್ನು ಹಿಡಿದು ಉದ್ಧರಿಸಿದ ಆ ಶಕ್ತಿಯೇ ಇಂದು ಮಹಾದೇವಿಯನ್ನು ಮೇಲೆತ್ತಿತು. ಅದೂ ಇನ್ನೂ ಹೆಚ್ಚು ಹತ್ತಿರವಾದ ಶಕ್ತಿಯಾಗಿ ಇಳಿದುಬಂದಿತು. ತನ್ನ ಪತಿಯೇ ಬಂದು ತನ್ನನ್ನು ತಬ್ಬಿದಂತಾಯಿತು ಶರಣೆ ಸತಿ ಮಹಾದೇವಿಗೆ.

ಆ ಅಲೌಕಿಕ ಅನುಭವವನ್ನು ಕಂಡು ಕಣ್ದೆರೆದಳು. ಏನನ್ನೂ ಅರಿಯದಂತೆ ಶಿವಲಿಂಗ ಗಂಭೀರವಾಗಿ ನಗುತ್ತಿತ್ತು. ಆತನ ಹರಕೆಯನ್ನು ಪಡೆದು ಮೇಲೆದ್ದು ಹಿಂದಿರುಗಿದಾಗ ಬೃಹದಾಕಾರದ ವೃಷಭದೇವ ಕಣ್ಣಿಗೆ ಬಿದ್ದ. ಜಗತ್ತನ್ನೇ ಹೊತ್ತಿರುವ ಶಿವನನ್ನು ಹೊತ್ತವನು ತಾನು ಎಂದು ತನ್ನ ವಿರಾಟ್ ರೂಪವನ್ನು ಸೂಚಿಸುವ ಸಂಕೇತದಂತಿತ್ತು, ಶಿವಲಿಂಗದ ಮುಂದಿದ್ದ ಬಸವಣ್ಣನ ಆ ಬೃಹದ್‌ರೂಪ.

ಕಲ್ಯಾಣ ಬಸವಣ್ಣನ ಬಳಿಗೆ ಹೊರಟಿರುವ ತನ್ನನ್ನು ದಯಾರ್ದ್ರಸೃಷ್ಟಿಯಿಂದ ನೋಡಿ, ಹರಸಿ ಬೀಳ್ಕೊಡುವಂತಿತ್ತು. ಅದಕ್ಕೆ ನಮಸ್ಕರಿಸಿ ಮತ್ತೊಮ್ಮೆ ಶಿವನತ್ತ ತಿರುಗಿ ಶಿವಾಲಯದಿಂದ ಹೊರಬಿದ್ದಳು.

ಕೆರೆಯ ಏರಿಯ ಮೇಲೆ ತಾನು ನಡೆದು ಬಂದ ಮಾರ್ಗ, ಶಿವಾಲಯದ ಪಕ್ಕದಲ್ಲಿಯೇ ಸಾಲುಮರಗಳ ಮೆರವಣಿಗೆಯಲ್ಲಿ ಮುಂದೆ ನಡೆಯುತ್ತಿತ್ತು. ಅದೇ ಮಾರ್ಗದಲ್ಲಿಯೇ ತಾನು ನಡೆಯಬೇಕಾಗಿದೆಯೆಂಬುದನ್ನು ಮಹಾದೇವಿ ಬಲ್ಲಳು. ಮುಂದೆ ನಡೆದರೆ ಕುಂತಳಾಪುರ, ಅಲ್ಲಿಂದ ಮುಂದೆ ಬನವಾಸಿ. ಅನಂತರ ? ನಡೆದು ನೋಡಬೇಕು ಅಷ್ಟೆ. ಅಲ್ಲಿಯವರೆಗೆ ಮಾತ್ರ ಅವಳ ಪ್ರಪಂಚಪರಿಚಯ ಹಬ್ಬಿತ್ತು.

ಹೀಗೆ ಆಲೋಚಿಸುತ್ತಾ ಮಹಾದೇವಿ ದೇವಾಲಯದ ಮುಂಭಾಗದಲ್ಲಿ ನಿಂತು ಬಳ್ಳಿಗಾವೆಯ ಕಡೆ ನೋಡಿದಳು. ಕೆರೆಯ ಏರಿಯ ರಸ್ತೆಯಲ್ಲಿ ನೇರವಾಗಿ ಮುಂದುವರೆದು ಸ್ವಲ್ಪ ದೂರ ನಡೆದರೆ ಬಳ್ಳಿಗಾವೆಯನ್ನು ಪ್ರವೇಶಿಸಬಹುದಾಗಿತ್ತು.

ಊರನ್ನು ಪ್ರವೇಶಿಸುವುದೇ ಅಥವಾ ಮುಖ್ಯರಸ್ತೆಗೆ ತಿರುಗಿ ತನ್ನ ಮಾರ್ಗವನ್ನು ತಾನು ಹಿಡಿಯುವುದೇ ?

ಮೇಲೆ ತಲೆಯೆತ್ತಿ ನೋಡಿದಳು. ಸೂರ್ಯನಾಗಲೇ ತನ್ನ ಪ್ರಯಾಣದ ಉನ್ನತಶಿಖರವನ್ನು ಮುಟ್ಟಿ ಕೆಳಗಿಳಿಯತೊಡಗಿದ್ದ. ಇಂದು ಸಂಜೆಯೊಳಗಾಗಿ ತಾನು ಕುಂತಳಾಪುರವನ್ನಾದರೂ ಸೇರಬೇಕು ಎಂದು ಮಹಾದೇವಿ ಆಲೋಚಿಸಿದಳು. ಆದರೆ ಎಂದೂ ಕಷ್ಟವನ್ನು ಕಂಡರಿಯದ ಕೋಮಲವಾದ ಅವಳ ದೇಹ, ತನ್ನ ನೈಸರ್ಗಿಕ ಸ್ವಭಾವಕ್ಕೆ ಬದ್ಧವಾಗಿತ್ತು. ಬಿರುಬಿಸಿಲಿನಲ್ಲಿ ಏಕಪ್ರಕಾರವಾಗಿ ನಡೆದುಬಂದ ಅವಳ ಕಾಲುಗಳು, ಸ್ವಲ್ಪ ವಿಶ್ರಾಂತಿಯ ನಂತರವೂ ಕೂಡ, ಮುಂದಿನ ಪ್ರವಾಸಕ್ಕೆ ಉತ್ಸಾಹವನ್ನು ತೋರಿಸುವಂತಿರಲಿಲ್ಲ. ತನ್ನ ಮನಸ್ಸಿನ ಅಪಾರವಾದ ಆಕಾಂಕ್ಷೆಯನ್ನು ಈಡೇರಿಸಲಾರದ ದೇಹದ ಮಿತಿಯನ್ನು ಕಂಡು ಮಿಡುಕುತ್ತಾ ನಿಂತಿದ್ದಳು.

ಅಷ್ಟರಲ್ಲಿ ಬಳ್ಳಿಗಾವೆಯ ಕಡೆಯಿಂದ ಬರುತ್ತಿದ್ದ ಕಮಾನುಗಾಡಿಯೊಂದು ದೇವಾಲಯದ ಬಳಿ ಬಂದು ಮಹಾದೇವಿಯ ಸಮೀಪದಲ್ಲಿಯೇ ನಿಂತಿತು. ಗಾಡಿಯ ಮುಂಭಾಗದಿಂದ ಮಧ್ಯವಯಸ್ಸು ಮೀರಿದ, ಸ್ವಲ್ಪ ಮಟ್ಟಿಗೆ ಸ್ಥೂಲಕಾಯವೆಂದು ಹೇಳಬಹುದಾದ ವ್ಯಕ್ತಿಯೊಂದು ಕೆಳಗೆ ಇಳಿಯಿತು. ಗಾಡಿಯ ಹಿಂಭಾಗದಿಂದ ಒಬ್ಬ ತರುಣ ಕೆಳಗೆ ಹಾರಿದ. ಅನಂತರ ಇಬ್ಬರು ಹೆಂಗಸರು ಇಳಿದರು. ಮಹಾದೇವಿ ಅವರನ್ನು ನೋಡುತ್ತಿದ್ದಳು.

ಮೊದಲು ಇಳಿದವಳು ಸ್ವಲ್ಪ ಹೆಚ್ಚು ಕಡಿಮೆ ತನ್ನ ಸಮವಯಸ್ಕಳಾದ ತರುಣಿ. ಹಸಿರು ರೇಶ್ಮೆಯ ಸೀರೆಯನ್ನುಟ್ಟಿದ್ದಾಳೆ. ಚಿನ್ನದ ಒಡವೆಗಳು ದೇಹವನ್ನು ಅಲಂಕರಿಸಿವೆ. ಕೈತುಂಬ ಬಳೆಗಳು; ತಲೆಯ ತುಂಬಾ ಮುಸುಗು. ಬಹುಶಃ ಹೊಸ ಮದುವಣಗಿತ್ತಿಯೆಂದು ಹೇಳಬಹುದಾದ ಕಾಂತಿ ಮುಖದಲ್ಲಿ ಮಿನುಗುತ್ತಿದೆ.

ಅನಂತರ ಇಳಿದವಳು ಬಹುಶಃ ಈಕೆಯ ತಾಯಿಯೆಂದು ಹೇಳಬಹುದಾದ ಮಧ್ಯವಯಸ್ಸಿನ ಮಹಿಳೆ. ವಿಶೇಷ ಅಲಂಕಾರಗಳು ಇಲ್ಲದಿದ್ದರೂ ತಕ್ಕ ಮಟ್ಟಿಗೆ ಶ್ರೀಮಂತಿಕೆಯ ಲಕ್ಷಣಗಳಿದ್ದವು ಅವಳಲ್ಲಿ. ಇಳಿದು ಆಕೆ ಹಣ್ಣು ಕಾಯಿಗಳ ಚೀಲವನ್ನು ಕೈಗೆ ತೆಗೆದುಕೊಂಡಳು.

ಅಷ್ಟರಲ್ಲಿ ಮೊದಲೇ ಗಾಡಿಯಿಂದ ಇಳಿದಿದ್ದ ಸ್ಥೂಲಕಾಯದ ಶಿವಯ್ಯನವರು, ಗಾಡಿ ಹೊಡೆಯುವವನನ್ನು ಕುರಿತು :

"ಏ ಸಿದ್ದಾ, ಗಾಡಿ ಬಿಟ್ಟು ಎತ್ತುಗಳಿಗೆ ನೀರು ಕುಡಿಸೋ. ಅಷ್ಟರಲ್ಲಿ ಪೂಜೆ ಮುಗಿಸಿಕೊಂಡು ಬಂದುಬಿಡುತ್ತೇವೆ. ಜಾಗ್ರತೆಯಾಗಿ ಹೊರಟುಬಿಡೋಣ" ಎಂದು ಹೇಳಿ, ಮುಂದೆ ಮುಂದೆ ನಡೆಯತೊಡಗಿದರು ತಮ್ಮ ಅಳಿಯನೊಡನೆ.

ಹೆಂಗಸರು ಹಿಂಬಾಲಿಸಿದರು. ಮಹಾದೇವಿಯ ತೀರ ಸಮೀಪದಲ್ಲಿಯೇ ಅವರು ಹಾದುಹೋಗಬೇಕಾಗಿತ್ತು. ಮಹಾದೇವಿ ಅವರನ್ನೇ ನೋಡುತ್ತಿದ್ದಳು. ಆ ಇಬ್ಬರೂ ನೋಡಿದರು ಮಹಾದೇವಿಯನ್ನು.

ತಾರುಣ್ಯದ ಭರದಲ್ಲಿರುವ ಅಪೂರ್ವ ಸೌಂದರ್ಯರಾಶಿ; ಸತ್ಕುಲ ಪ್ರಸೂತಳಂತೆ ಕಾಣುವ ಸುಸಂಸ್ಕೃತ ಮನೋಭಾವನೆಯನ್ನು ಪ್ರತಿಬಿಂಬಿಸುತ್ತಿರುವ ಮುಖ ! ಆದರೆ ಉಟ್ಟಿರುವ ವೇಷ ಮಾತ್ರ ತೀರ ಸಾಮಾನ್ಯವಾದುದು. ಅವಳ ಸೌಂದರ್ಯದ ಗೌರವವನ್ನು ಮುಚ್ಚಲೂ ಕೂಡ ಅರ್ಹವಾದುದಲ್ಲವೆಂದೆನಿಸಿತು. ಬಹುಶಃ ಅನಿರೀಕ್ಷಿತವಾಗಿ ಬಂದ ಬಡತನದ ಸಂಕಷ್ಟವೇ ಅದಕ್ಕೆ ಕಾರಣವೆಂದು ಭಾವಿಸಿದರೇನೋ ಆ ತಾಯಿ–ಮಗಳು. ಒಬ್ಬರ ಮುಖವನ್ನೊಬ್ಬರು ನೋಡಿದರು. ಇಬ್ಬರೂ ನಿಂತರು. ತಾಯಿಯೇ ಮಹಾದೇವಿಯನ್ನು ಕುರಿತು ಕೇಳಿದಳು :

"ನೀನಾರಮ್ಮ ?"

"ಏಕೆ ತಾಯಿ ? ಶಿವಾಲಯಕ್ಕೆ ಹೋಗಿದ್ದೆ. ಸ್ವಲ್ಪ ವಿಶ್ರಾಂತಿಯನ್ನು ಪಡೆಯಲೆಂದು ಇಲ್ಲಿ ನಿಂತಿದ್ದೇನೆ ಅಷ್ಟೆ" – ಇಲ್ಲಿ ನಿಂತಿದ್ದೇ ತಪ್ಪಾಯಿತೇ ಎಂದು ಕೇಳುವಂತಿತ್ತು ಮಹಾದೇವಿಯ ಉತ್ತರ.

"ಹಾಗಲ್ಲಮ್ಮ, ನೀನೊಬ್ಬಳೇ ನಿಂತಿದ್ದೆಯಲ್ಲ ಈ ಬಿಸಿಲಿನಲ್ಲಿ ಅಂತ ಕೇಳಿದೆ ಅಷ್ಟೆ. ಯಾವ ಊರಮ್ಮ ನಿನ್ನದು ?" ಮತ್ತೆ ಕೇಳಿದಳು ತಾಯಿ ಶಿವಮ್ಮ.

ತಮ್ಮ ಹೆಂಡತಿ ಮತ್ತು ಮಗಳು ಅಲ್ಲಿ ನಿಂತಿದ್ದನ್ನು ನೋಡಿ ಶಿವಯ್ಯವರು ಹಿಂದಕ್ಕೆ ಬಂದರು. ಮಹಾದೇವಿ ಅವರ ಗಮನವನ್ನೂ ಸೆಳೆದಿದ್ದಳು.

"ಏನಂತೆ ...?" ಕೇಳಿದರು ಶಿವಯ್ಯನವರು ಹೆಂಡತಿಯನ್ನು.

"ಏನೂ ಇಲ್ಲ. ಯಾವ ಊರು ಅಂತ ಕೇಳಿದೆ..."

ಶಿವಮ್ಮನ ಮಾತು ಇನ್ನೂ ಮುಗಿದಿರಲಿಲ್ಲ. ಅಷ್ಟರಲ್ಲಿ ಶಿವಯ್ಯನವರು ಮಹಾದೇವಿಯನ್ನು ಕುರಿತು,

"ಬಾರಮ್ಮ, ಬಾ ಶಿವನಿಗೆ ಪೂಜೆಮಾಡುತ್ತೇವೆ. ಪ್ರಸಾದ ತೆಗೆದುಕೊಂಡು ಹೋಗುವಿಯಂತೆ." ಅವ್ಯಾಜವಾದ ವಾತ್ಸಲ್ಯದಿಂದ ಕರೆದರು.

ಶಿವಮ್ಮನ ದೃಷ್ಟಿಯೂ ಅದೇ ಭಾವವನ್ನು ಸೂಚಿಸಿತು. ಮಗಳು ಅಪರ್ಣೆ, ಮಾತನ್ನೇನು ಆಡದಿದ್ದರೂ ಸ್ನೇಹದ ದೃಷ್ಟಿಯಿಂದ ಅವಳನ್ನೇ ನೋಡುತ್ತಿದ್ದಳು. ಅವಳ ಗಂಡ ರುದ್ರಮುನಿ ಆಗಲೇ ಶಿವಾಲಯದ ಮಹಾದ್ವಾರದ ಬಳಿಯಲ್ಲಿದ್ದರೂ ಇವಳ ನಾಚಿಕೆ ಕಡಿಮೆಯಾಗಿರಲಿಲ್ಲ.

ಮಹಾದೇವಿ ಅವಳನ್ನೇ ನೋಡಿದಳು. ಹೊಸದಾಗಿ ಮದುವೆಯಾಗಿ ಅಂದು ಗಂಡನ ಮನೆಗೆ ಹೊರಟುನಿಂತ ತನ್ನ ಗೆಳತಿ ಶಂಕರಿಯನ್ನು ನೋಡಿದ ಚಿತ್ರ ನೆನಪಿಗೆ ಬಂದಿತು ಮಹಾದೇವಿಗೆ.

ವಿಶ್ವಾಸದಿಂದ ಅವರು ತನ್ನನ್ನು ಕರೆಯುತ್ತಿರುವಾಗ ಇಲ್ಲವೆನ್ನುವ ಮನಸ್ಸಾಗಲಿಲ್ಲ ಮಹಾದೇವಿಗೆ. ಅವರನ್ನು ಹಿಂಬಾಲಿಸಿ ಮತ್ತೊಮ್ಮೆ ಶಿವಾಲಯವನ್ನು ಪ್ರವೇಶಿಸಿದಳು.

ಶಿವಯ್ಯನವರು ಪೂಜೆಯನ್ನು ಮಾಡಿ ಶಿವನಿಗೆ ಮಂಗಳಾರತಿಯನ್ನು ಎತ್ತಿದರು. ಮಂಗಳಾರತಿಯ ಹೊಂಬೆಳಕಿನಲ್ಲಿ ಹೊಳೆಯುತ್ತಿರುವ ಶಿವನ ಮೂರ್ತಿಯನ್ನು ಕಂಡು, ಅವನ ಲೀಲೆಗಾಗಿ ಅಚ್ಚರಿಗೊಂಡಳು ಮಹಾದೇವಿ.

ಹಣ್ಣು ಕಾಯಿಗಳ ನೈವೇದ್ಯವಾಯಿತು ಶಿವನಿಗೆ. ಅನಂತರ ಶಿವನ ಹೆಸರಿನಿಂದ ತಮಗೆ ನೈವೇದ್ಯ ಮಾಡಿಕೊಳ್ಳಲು ಕುಳಿತರು ಎಲ್ಲರೂ ಬಸವಣ್ಣನವರ ಎದುರು. ಇವನ ಪ್ರಸಾದರೂಪವಾಗಿ ಮಹಾದೇವಿಗೆ ಎರಡು ಬಾಳೆಹಣ್ಣುಗಳು ಸಾಕಷ್ಟು ಕೊಬ್ಬರಿ ಸಿಕ್ಕಿತು. ಹೊಟ್ಟೆಯ ಅವಶ್ಯಕತೆಯೂ ಅವುಗಳನ್ನು ಸ್ವಾಗತಿಸಿತು. ಏಕೆಂದರೆ ಈ ದಿನವೆಲ್ಲಾ ಆಕೆ ಏನನ್ನೂ ತಿಂದಿರಲಿಲ್ಲ.

ಬೆಳಿಗ್ಗೆ ಕೌಶಿಕನ ಅರಮನೆಯಲ್ಲಿ ಸ್ನಾನಮಾಡಿ ಪೂಜೆಗೆ ಕುಳಿತಿದ್ದಳು. ಆದರೆ ಪೂಜೆ ಮುಗಿಯುವ ವೇಳೆಗೆ ಕೌಶಿಕನ ಅಚಾತುರ್ಯದ ಘಟನೆಯಿಂದ ದಿಗಂಬರಳಾಗಿ ಅರಮನೆಯಿಂದ ಹಾಗೆಯೇ ಹೊರಬಿದ್ದಿದ್ದಳು. ಅನಂತರ

ಗುರುಲಿಂಗರ ಮಠದಲ್ಲಿಯೂ ಹೆಚ್ಚು ಹೊತ್ತು ಇರಲಿಲ್ಲ. ದೈವಶಕ್ತಿಯ ಆವೇಶ ಅವಳನ್ನು ಎಳೆದು ಹೊರಡಿಸಿತ್ತು. ಆದರೆ ಭೌತಿಕ ದೇಹದ ಅವಶ್ಯಕತೆಗಳನ್ನು ಅದು ಸಂಪೂರ್ಣವಾಗಿ ಮೀರುವಂತಿರಲಿಲ್ಲ. ಹೊಟ್ಟೆ ತನ್ನ ಕರೆಯನ್ನು ಒಂದೇ ಸಮನೆ ಮೊರೆಯುತ್ತಿತ್ತು. ಅದನ್ನರಿತು ಶಿವನೇ ಕರುಣಿಸಿದ ಪ್ರಸಾದವೋ ಎಂಬಂತೆ, ಅತಿ ಅನಿರೀಕ್ಷಿತವಾಗಿ ಲಭಿಸಿದ್ದುವು ಈ ಹಣ್ಣು ಕಾಯಿಗಳು. ಅವುಗಳಿಂದ ದೇಹಕ್ಕೆ ಸ್ವಲ್ಪ ನೆಮ್ಮದಿ ದೊರೆತಂತಾಯಿತು.

ಸ್ವಲ್ಪ ಕಾಲದ ವಿಶ್ರಾಂತಿಯ ನಂತರ ಶಿವಯ್ಯ ಮತ್ತು ಪರಿವಾರದವರು ಎದ್ದರು. ಮಹಾದೇವಿಯೂ ಎದ್ದಳು. ಸಿದ್ದ ಅಷ್ಟರಲ್ಲಿ ಎತ್ತುಗಳಿಗೆ ನೀರು ಕುಡಿಸಿ ಗಾಡಿಯನ್ನು ಸಿದ್ಧಗೊಳಿಸಿದ್ದ. ಅವನ ಕೈಗೂ ಹಣ್ಣುಕಾಯಿಗಳನ್ನು ಕೊಟ್ಟು ಶಿವಯ್ಯನವರು ತಮ್ಮವರತ್ತ ತಿರುಗಿ ಹೇಳಿದರು :

"ಹೂಂ, ಜಾಗ್ರತೆಯಾಗಿ ಹತ್ತಿ; ಹೊತ್ತಾಗುತ್ತದೆ. ಕತ್ತಲಾಗುವುದಕ್ಕೆ ಮುಂಚೆಯೇ ಊರನ್ನು ಸೇರಿಕೊಳ್ಳೋಣ."

ಗಾಡಿಯನ್ನು ಹತ್ತುವುದಕ್ಕೆ ಮುಂಚೆ ಶಿವಮ್ಮ ಮಹಾದೇವಿಯನ್ನು ಕುರಿತು:

"ನೀನು ಎಲ್ಲಿಗೆ ಹೋಗಬೇಕಮ್ಮ ?"

"ನಾನೇ ?...." ಮಹಾದೇವಿ ಅನುಮಾನಿಸುತ್ತಾ ಹೇಳಿದಳು :

"ಕುಂತಲಾಪುರಕ್ಕೆ."

"ಹಾಂ ! ನೀನೂ ನಮ್ಮೂರಿಗೆ ! ಬಾ ಹಾಗಾದರೆ, ಗಾಡಿಯಲ್ಲಿಯೇ ಹೋಗೋಣ. ನಾವೂ ಅಲ್ಲಿಗೇ ಹೋಗೋದು. ಇನ್ನಾರಾದರೂ ಬರುವವರಿದ್ದಾರೆಯೇ" – ಕೇಳಿದಳು ಶಿವಮ್ಮ.

"ಇನ್ನಾರೂ ಇಲ್ಲ... ಆದರೆ... ನಿಮಗೇಕೆ ತೊಂದರೆ ? ನಾನು..."

"ಇದೇನು ಹೀಗೆ ಹೇಳುತ್ತೀ !" ಮಧ್ಯದಲ್ಲಿಯೆ ತಡೆದರು ಶಿವಮ್ಮ.

"ನಾವು ಇಷ್ಟು ಜನರು ಹೋಗುವಾಗ ನೀನೊಬ್ಬಳು ಕುಳಿತರೆ ಬಸವಣ್ಣಗಳು ಎಳೆಯುವುದಿಲ್ಲ ಎನ್ನುತ್ತವೆಯೇ ? ಬಾ... ಬಾ" ಎಂದು ಕೈಹಿಡಿದು ಕರೆದಳು.

"ಬಾರಮ್ಮಾ... ಬಾ... ಏನೂ ಸಂಕೋಚಪಡಬೇಡ." ಶಿವಯ್ಯನವರೂ ಕರೆದರು.

"ಶಿವನ ಲೀಲೆಯನ್ನು ಕಂಡವರಾರು ? ಆಗಲಿ. ಇದಾವುದೋ ಅನಿರೀಕ್ಷಿತ ಸ್ನೇಹಹಸ್ತ ಬರುತ್ತಿದೆ. ಅದನ್ನೇಕೆ ತಿರಸ್ಕರಿಸಲಿ... ಮುಂದೆ ನೋಡೋಣ" ಎಂದು ಆಲೋಚಿಸುತ್ತಾ ಗಾಡಿಯನ್ನೇರಿದಳು. ಗಾಡಿ ಹೊರಟಿತು.

೨

ಕೆಂದೂಳನ್ನು ಕೆದರುತ್ತಾ ಗಾಡಿ ನಡೆಯತೊಡಗಿತ್ತು. ಎತ್ತುಗಳ ಕೊರಳೊಳಗಿನ ಚಿಕ್ಕ ಚಿಕ್ಕ ಗಂಟೆಗಳ ಶಬ್ದ, ಲಯಬದ್ಧವಾದ ರೀತಿಯಲ್ಲಿ ತಾಳಹಾಕುತ್ತಿತ್ತು. ಶಿವಮ್ಮ ತನ್ನ ಪಕ್ಕದಲ್ಲಿ ಕುಳಿತಿದ್ದ ಮಹಾದೇವಿಯನ್ನು ಕೇಳಿದಳು.

"ಕುಂತಳಾಪುರದಲ್ಲಿ ಯಾರ ಮನೆಗೆ ಹೋಗಬೇಕಮ್ಮ ?"

"ಅಲ್ಲಿ ನನಗೆ ಯಾರೂ ಗೊತ್ತಿಲ್ಲಾ, ತಾಯಿ."

"ಅಂದರೆ ! ಅಲ್ಲಿಗೆ ಹೋಗಬೇಕು ಅಂದಿ ?" ಅಚ್ಚರಿಯಿತ್ತು ಶಿವಮ್ಮನ ಧ್ವನಿಯಲ್ಲಿ.

"ಈ ದಿನದ ಮಟ್ಟಿಗೆ ಅಲ್ಲಿಗೆ. ನಾಳೆ ಅಲ್ಲಿಂದ ಮುಂದೆ ; ಅಷ್ಟೆ."

"ಇದೇನು ! ನೀನು ಹೇಳುವ ಮಾತೇ ತಿಳಿಯುವುದಿಲ್ಲ. ಹೋಗಲಿ... ನಿನ್ನ ಊರಾವುದು? ಈಗ ಎಲ್ಲಿಂದ ನೀನು ಹೊರಟಿದ್ದೀಯ ?"

"ಈಗ ನಾನು ಉಡುತಡಿಯಿಂದ ಹೊರಟಿದ್ದೇನೆ." ಮಹಾದೇವಿ ಹೇಳದೆ ವಿಧಿಯಿಲ್ಲವಾಯಿತು.

ಇದನ್ನು ಕೇಳಿದೊಡನೆಯೇ ಶಿವಯ್ಯನವರು :

"ಉಡುತಡಿ ! ನಿನ್ನ ಊರು ಉಡುತಡಿಯೇನಮ್ಮಾ ?" ಅಚ್ಚರಿಯಿಂದ ಪ್ರಶ್ನಿಸಿದರು.

"ನಿನ್ನ ಹೇಸರೇನಮ್ಮ ?" ಮತ್ತೆ ಜೊತೆಯಲ್ಲಿಯೇ ಶಿವಯ್ಯನವರ ಪ್ರಶ್ನೆಯೂ ಬಂದಿತು. ಅದು ಶಿವಯ್ಯನವರಿಗೂ ಬೇಕಾದ ಪ್ರಶ್ನೆಯಾಗಿತ್ತು.

"ಮಹಾದೇವಿ ?... ಯಾವ ಮಹಾದೇವಿ ?" ಇನ್ನೂ ಆಶ್ಚರ್ಯದಿಂದ ಕೇಳಿದರು ಶಿವಯ್ಯನವರು.

ಅವರ ಪ್ರಶ್ನೆ ಮಹಾದೇವಿಗೆ ಅರ್ಥವಾಗಲಿಲ್ಲವೆಂದೋ ಏನೋ, ಶಿವಮ್ಮ ಅದನ್ನು ಸರಳಗೊಳಿಸಿ ಕೇಳಿದಳು :

"ಅಂದರೆ ನಿನ್ನ ತಂದೆತಾಯಿಗಳು ಯಾರಮ್ಮಾ ?"

ಮಹಾದೇವಿ ಕ್ಷಣಕಾಲ ಆಲೋಚಿಸಿದಳು. ಹೇಳದೇ ಇರುವ ಅಗತ್ಯವೇನು ಕಾಣಲಿಲ್ಲ. ಹೇಳಿದಳು :

"ಉಡುತಡಿಯಲ್ಲಿ ಓಂಕಾರಶೆಟ್ಟರು ಅಂತ ಒಬ್ಬರಿದ್ದಾರೆ..." ಮುಂದೆ ಮಾತನಾಡುವ ಅವಕಾಶವನ್ನೇ ಕೊಡಲಿಲ್ಲ ಶಿವಯ್ಯನವರು. ಅವರ ಕುತೂಹಲ ನಿಜವಾಗಿತ್ತು. ಮಧ್ಯದಲ್ಲಿಯೇ ಉದ್ಗಾರ ತೆಗೆದರು :

"ಹಾಂ ! ಉಡುತಡಿಯಲ್ಲಿ ಓಂಕಾರಶೆಟ್ಟರ ಮಗಳು ಮಹಾದೇವಮ್ಮನೇ ಏನಮ್ಮ ನೀನು?"

ಮಹಾದೇವಿ ಸಮ್ಮತಿಸೂಚಕವಾಗಿ ಸುಮ್ಮನಿದ್ದಳು. ಮತ್ತೆ ಶಿವಯ್ಯನವರೇ ಮುಂದುವರಿಸಿದರು :

"ಇದೇನಮ್ಮ ಇದು ! ನೀನು ಇಲ್ಲಿ, ಈ ವೇಷದಲ್ಲಿ ? ಉಡುತಡಿಯ ಕೌಶಿಕಮಹಾರಾಜನ್ನು ಮೆಚ್ಚಿ ಮದುವೆಯಾಗಿ ಇನ್ನೂ ನಾಲ್ಕಾರು ದಿನಗಳು ಕಳೆದಿಲ್ಲವೆಂದು ಕೇಳಿದೆ... ಆಗಲೇ..."

ಗಾಡಿಯಲ್ಲಿದ್ದವರೆಲ್ಲರಿಗೂ ಕುತೂಹಲವನ್ನು ಹುಟ್ಟಿಸಿತ್ತು ಈ ಮಾತಿನ ಬೆಳವಣಿಗೆ. ರುದ್ರಮುನಿಯಾಗಲೀ ಅಪರ್ಣೆಯಾಗಲೀ ಮಾತನ್ನೇನೂ ಆಡದಿದ್ದರೂ, ಕುತೂಹಲಕರವಾದ ಮೌನದಿಂದ ಇದನ್ನೇ ಕೇಳುತ್ತಿದ್ದರು.

ಮಹಾದೇವಿಗೆ ಶಿವಯ್ಯನವರ ಮಾತುಗಳನ್ನು ಕೇಳುತ್ತಿದ್ದಂತೆಯೇ ಆಶ್ಚರ್ಯದ ಜೊತೆಗೆ ದುಃಖವೂ ಆಯಿತು. ಮಧ್ಯದಲ್ಲಿಯೇ ಕೇಳಿದಳು :

"ಇದೇನು ಸ್ವಾಮಿ ? ಈ ನನ್ನ ಕಥೆಯನ್ನೆಲ್ಲಾ ನಿಮಗಾರು ಹೇಳಿದರು?"

"ಈ ಸುತ್ತುಮುತ್ತಣ ಗ್ರಾಮಗಳಲ್ಲೆಲ್ಲಾ ಇದೇ ಸಮಾಚಾರವಾಗಿದೆಯಮ್ಮ. ನೆನ್ನೆ ತಾಳಗುಂದದಲ್ಲಿ ಇದನ್ನು ಕೇಳಿದೆ."

"ತಾಳಗುಂದದಲ್ಲಿ !" ಮಹಾದೇವಿ ಆಶ್ಚರ್ಯ ವ್ಯಕ್ತಪಡಿಸಿದಳು.

"ಹೌದು ; ಈಕೆ ನನ್ನ ಮಗಳು ಅಪರ್ಣೆ, ತಾಳಗುಂದಕ್ಕೆ ಕೊಟ್ಟಿದ್ದೇನೆ." ಸಂಕ್ಷೇಪವಾಗಿ ತಮ್ಮ ಪರಿಚಯವನ್ನು ಹೇಳತೊಡಗಿದರು ಶಿವಯ್ಯನವರು. ಅಷ್ಟರಲ್ಲಿ ಸ್ವಲ್ಪ ಹಾಸ್ಯಪ್ರಕೃತಿಯವನಾದ ರುದ್ರಮುನಿಗೆ ಅವಕಾಶ ಸಿಕ್ಕಂತಾಗಿ ತಾನೇ ಹೇಳಿದ :

"ನಾನೇ ಇವರ ಅಳಿಯ – ರುದ್ರಮುನಿ."

ಎಲ್ಲರೂ ನಕ್ಕರು. ಅಪರ್ಣೆಯ ಮುಖ ಕೆಂಪಾಯಿತು. ಮತ್ತೆ ಶಿವಯ್ಯನವರು ಮುಂದುವರಿಸಿದರು :

"ಶ್ರಾವಣಮಾಸದಲ್ಲಿ, ನಮ್ಮ ಮನೆಯಲ್ಲಿ ಶಿವಕಥಾಪ್ರವಚನ ನಡೆಯುತ್ತದೆ. ಅದಕ್ಕಾಗಿ ಇವರನ್ನು ಕರೆದುಕೊಂಡು ಬರಲು ತಾಳಗುಂದಕ್ಕೆ ಹೋಗಿದ್ದೆವು. ಅಲ್ಲಿ ಈ ವಿಷಯವೆಲ್ಲಾ ತಿಳಿಯಿತು. ಕೇಳಿ ನನಗೇನೋ ನಿಜವಾಗಿಯೂ ದುಃಖವಾಯಿತು. ಓಂಕಾರಶೆಟ್ಟರು ಮತ್ತು ಲಿಂಗಮ್ಮ ಇಬ್ಬರೂ ನನಗೆ ಚೆನ್ನಾಗಿ ಗೊತ್ತಮ್ಮ. ಬಹಳ ದಿನಗಳ ಹಿಂದೆ, ಆಗ ನೀನಿನ್ನೂ ಚಿಕ್ಕವಳು, ಒಂದು ತಿಂಗಳು ಇದೇ ಶ್ರಾವಣಮಾಸದಲ್ಲಿ ನಿಮ್ಮ ಊರಿನಲ್ಲಿ ನಾನಿದ್ದೆ. ಆಗ ನಾನಿನ್ನೂ,

ನಮ್ಮ ಊರಿನಲ್ಲಿ ಪ್ರವಚನದ ಪದ್ಧತಿಯನ್ನು ಪ್ರಾರಂಭಿಸಿರಲಿಲ್ಲ. ನಿಮ್ಮ ಊರಿನ ಮಠದಲ್ಲಿ ನನ್ನ ಪ್ರವಚನವಿತ್ತು. ಆಗ ನಿನ್ನ ತಂದೆತಾಯಿಗಳ ಪರಿಚಯವಾಯಿತು. ಎಷ್ಟೋ ಸಾರಿ ನಿಮ್ಮ ಮನೆಯ ಆತಿಥ್ಯವನ್ನು ಸ್ವೀಕರಿಸಿದ್ದೇನೆ. ಎಂತಹ ನಿಷ್ಠಾವಂತ ಭಕ್ತರಮ್ಮ ಅವರು ! ಅವರೇಕೆ ಹೀಗಾದರು ಎಂದು ನನಗೆ ಆಶ್ಚರ್ಯ್ವಾಯಿತು."

ಅವರು ಹೇಳಿದ ಕೊನೆಯ ಮಾತು ಮಹಾದೇವಿಗೆ ಅರ್ಥವಾಗಲಿಲ್ಲ."

"ಅಂದರೆ... ತಾನು ಏನನ್ನು ಕುರಿತು ಹಾಗೆ ಹೇಳುತ್ತಿದ್ದೀರೋ ತಿಳಿಯಲಿಲ್ಲ" – ಮಹಾದೇವಿ ಕೇಳಿದಳು.

"ಅಲ್ಲಮ್ಮ, ಆ ರಾಜ ಹೇಳಿಕಳುಹಿಸಿದಮಾತ್ರಕ್ಕೆ ಅವನಿಗೆ ಹೆದರಿ, ನಿನ್ನನ್ನು ಹಾಗೆ ಕಳುಹಿಸಿಬಿಡುವುದೇ ಆತನ ಬಳಿಗೆ ?" – ಶಿವಯ್ಯನವರು ಕೇಳಿದರು.

ಮಹಾದೇವಿಗೆ ಈ ಮಾತಿನಿಂದ ದುಃಖವಾಯಿತು. ತನ್ನ ವರ್ತನೆಯನ್ನು ಜಗತ್ತು ಹೇಗೆ ಖಂಡಿಸಿದೆಯೆಂಬುದರ ಅರಿವಾಯಿತು. ಅವಳಿಗೆ ತನ್ನ ತಂದೆತಾಯಿಗಳ ಮೇಲೆ ಬಂದ ವ್ಯರ್ಥವಾದ ಆರೋಪವನ್ನು ಕಂಡು ಮರುಗಿದಳು.

'ರಾಜನಿಗೆ ಹೆದರಿ ನನ್ನನ್ನು ಕಳುಹಿಸಿದರೇ, ರಾಜನ ಬಳಿಗೆ ! ಛೇ ಅಂತಹ ತಂದೆ–ತಾಯಿಗಳೇ ಅವರು ! ಆದರೆ ರಾಜನ ಬಳಿಗೆ ಹೋದ ನನ್ನ ಮಹತ್ವದ ಉದ್ದೇಶ ಸಾಧನೆಯ ಕಲ್ಪನೆಯನ್ನು, ಜನ ಹೇಗೆ ಅರಿಯಬಲ್ಲರು !'

ತನ್ನ ನಿಜಸ್ಥಿತಿಯನ್ನೆಲ್ಲಾ ಶಿವಯ್ಯನವರಿಗೆ ವಿವರಿಸಬೇಕೆನ್ನಿಸಿತು. 'ಸಾಮಾನ್ಯಜನ ಏನಾದರೂ ತಿಳಿದುಕೊಳ್ಳಲಿ. ಆದರೆ ಶಿವಯ್ಯನವರಂತಹವರಾದರೂ ನನ್ನ ಮಾತುಗಳನ್ನು ತಿಳಿದುಕೊಳ್ಳಬಲ್ಲರು, ನಂಬಬಲ್ಲರು' ಎಂದು ಆಲೋಚಿಸುತ್ತಾ ನಡೆದುದನ್ನೆಲ್ಲಾ ವಿವರಿಸತೊಡಗಿದಳು.

ತನ್ನ ಮನೋಧರ್ಮವನ್ನು ಹೇಳಿದಳು. ತನ್ನ ಗುರುಗಳು ಮಾರ್ಗದರ್ಶನ ಮಾಡಿದ ಬಗೆಯನ್ನು ತಿಳಿಸಿದಳು. ತಂದೆತಾಯಿಗಳು ರಾಜನ ಬೆದರಿಕೆಗೆ ಸೊಪ್ಪು ಹಾಕದೆ ಪ್ರತಿಭಟಿಸಿ ನಿಂತುದನ್ನೂ, ತಾನೇ ಅದನ್ನು ತಪ್ಪಿಸಿ ಅರಮನೆಯನ್ನು ಸೇರಿದುದನ್ನೂ, ಅದರ ಹಿಂದಿದ್ದ ಕಾರಣವನ್ನೂ ತಾನು ಹಾಕಿದ ನಿಯಮಗಳನ್ನೂ ನಿರೂಪಿಸಿದಳು, ಶಿವಯ್ಯನವರು ಅಲ್ಲಿ ಪ್ರಶ್ನೆಗಳನ್ನು ಹಾಕುತ್ತಾ ವಿಷಯವನ್ನು ಸ್ಪಷ್ಟಪಡಿಸಿಕೊಳ್ಳುತ್ತಿದ್ದರು.

ಕೊನೆಯಲ್ಲಿ ತಾನು ಅರಮನೆಯನ್ನು ಬಿಡಲು ಕಾರಣವಾದ ಘಟನೆಯನ್ನು ಹೇಳುತ್ತಾ ಹೋದಂತೆ ಅವರ ಮಾತೂ ಮೌನವಾಯಿತು. ಗಂಭೀರವಾಗಿ ಕೇಳುತ್ತಿದ್ದರು ಎಲ್ಲರೂ. ಕುತೂಹಲವು ಗೌರವಕ್ಕೆ ತಿರುಗುತ್ತಿತ್ತು.

ಮಹಾದೇವಿ ಮಾತನ್ನು ಮುಗಿಸಿದ ಮೇಲೆ ಗಾಡಿಯಲ್ಲಿ ಸ್ವಲ್ಪ ಕಾಲ ಮೌನವಾವರಿಸಿತು. ಕಲ್ಲುದಾರಿಯಲ್ಲಿ ನಡೆಯುತ್ತಿದ್ದ ಗಾಡಿಯ ಧಡಕಿಗೆ ಅತ್ತ ಇತ್ತ ಅಲ್ಲಾಡುತ್ತಿದ್ದ ಅವರ ದೇಹದಂತೆಯೇ ಮನಸ್ಸೂ ತತ್ತರಿಸತೊಡಗಿತ್ತು ! ಕೊನೆಯಲ್ಲಿ ಶಿವಯ್ಯನವರೇ ಹೇಳಿದರು :

"ಎಂತಹ ಸಾಹಸವನ್ನು ಮಾಡಿದ್ದೀಯ ತಾಯಿ. ಇದನ್ನು ಸಾಮಾನ್ಯ ಜನ ಹೇಗೆ ಊಹಿಸಬಲ್ಲರು !"

"ಊಹಿಸುವುದಿರಲಿ, ಹೇಳಿದರೆ ನಂಬುವುದೂ ಕಷ್ಟ ; ಅಂತಹ ಕೆಲಸವನ್ನು ಮಾಡಿದ್ದೀಯಮ್ಮ" – ನುಡಿದಳು ಶಿವಮ್ಮ.

ಇದುವರೆಗೂ ಮೌನವಾಗಿದ್ದ ರುದ್ರಮುನಿ ಗಂಭೀರವಾಗಿ ಹೇಳಿದ :

"ಸಾಹಸವೇ ನಿಜ. ಆದರೆ ನಿಮ್ಮ ಈ ಭಾವನೆಯನ್ನು, ಅಂದರೆ ಮದುವೆಯಾಗಲೇಬಾರದೆಂಬ ಈ ಮಾತನ್ನು, ಧರ್ಮದಲ್ಲಿ ಎಲ್ಲಿಯೂ ಹೇಳುವುದಿಲ್ಲವಲ್ಲ" – ತನ್ನ ಅನುಮಾನವನ್ನು ವ್ಯಕ್ತಪಡಿಸಿದ.

"ನನ್ನ ಅಭಿಪ್ರಾಯವನ್ನು ತಪ್ಪಾಗಿ ತಿಳಿದಿರಿ" – ಮಹಾದೇವಿ ಹೇಳಿದಳು.

"ಸಾಧಕರು ಮದುವೆಯಾಗಲೇಬಾರದೆಂದು ನಾನಾದರೂ ಎಲ್ಲಿ ಹೇಳಿದೆ? ಹೆಣ್ಣಾಗಲೀ ಗಂಡಾಗಲೀ ಮದುವೆಯಾಗಿಯೂ ಮಹೋನ್ನತವಾದುದನ್ನು ಸಾಧಿಸಬಹುದು. ಕಲ್ಯಾಣದಲ್ಲಿ ಅನೇಕ ಶರಣೆಯರು ಮದುವೆಯಾಗಿದ್ದುಕೊಂಡೇ ತಮ್ಮ ಸಾಧನೆಯಲ್ಲಿ ತೊಡಗಿದ್ದಾರೆಂದು ಕೇಳಿದ್ದೇನೆ. ನೀವಿಬ್ಬರೂ ಈಗ ಕೈಗೊಂಡಿರುವ ಗೃಹಸ್ಥಜೀವನ ಅತಿಪವಿತ್ರವಾದುದೆಂದು ನಾನು ಮೆಚ್ಚಿದ್ದೇನೆ. ಆದರೆ ನನಗೆ ಈ ರೀತಿಯ ಜೀವನ ಬೇಕಿಲ್ಲ ಎಂದು ಹೇಳಿದೆ, ಅಷ್ಟೆ."

"ಆದರೆ ಇಂತಹ ತೀವ್ರತರವಾದ ವೈರಾಗ್ಯ ಹೆಣ್ಣಿಗೆ ಅಸಹಜವೆಂದು ಕಾಣುತ್ತದೆಯಲ್ಲ ತಾಯಿ !" ಶಿವಯ್ಯನವರು ಮುಂದುವರಿಸಿದರು : "ಪುರುಷರು ಇಂತಹ ವೈರಾಗ್ಯವನ್ನು ಕೈಕೊಂಡು ನಡೆದುದನ್ನು ನಾವು ಇತಿಹಾಸ ಪುರಾಣಗಳಲ್ಲಿ ಕೇಳಿದ್ದುಂಟು. ಆದರೆ ಮಾತೃಹೃದಯವೇ ಪ್ರಧಾನವಾದ ಹೆಣ್ಣಿಗೆ ಇದು ಸಹಜವೇ ಎನ್ನಿಸುತ್ತದೆ."

"ನಿಮ್ಮ ಅನುಮಾನವೂ ನಿಜವಾದುದೇ. ಆದರೆ ತಾನು ಹೆತ್ತ ಮಗವನ್ನು ಪ್ರೀತಿಸುವುದು ಮಾತ್ರವೇ ಮಾತೃಹೃದಯವೆನಿಸುತ್ತದೆಯೇ ? ಜಗತ್ತನ್ನೇ ತನ್ನ ಮಾತೃಹೃದಯದ ವಾತ್ಸಲ್ಯದಲ್ಲಿಟ್ಟುಕೊಳ್ಳುವ ಮಹಾಮಾತೆಯೂ ಆಕೆ ಆಗಲಾರಳೆಂಬುದನ್ನು ನಾನು ಒಪ್ಪಲಾರೆ. ಅಂತಹ ಮಾತೆಯಾಗಬೇಕೆಂದು ನಾನು ಹಂಬಲಿಸುತ್ತಿದ್ದೇನೆ. ಆ ಜಗತ್‌ಪಿತನನ್ನೇ ಪತಿಯಾಗಿ ಪಡೆಯಲು

ಕಾತರಗೊಂಡಿದ್ದೇನೆ.'' ಆವೇಶಗೊಂಡಂತೆ ಹೇಳಿದಳು ಮಹಾದೇವಿ.

''ಕ್ಷಮಿಸಬೇಕು'' – ರುದ್ರಮುನಿ ಮತ್ತೆ ಹೇಳಿದ : ''ಜಗತ್‌ಪಿತನೇ ನಮ್ಮ ಪತಿ ಎಂಬ ಮಾತಿನ ಅರ್ಥವನ್ನು ಸರಿಯಾಗಿ ಅರಿಯದೆ, ಕೇವಲ ಈ ಆವೇಶದಿಂದ ನೀವು ಮನೆಯನ್ನು ಬಿಟ್ಟುದು ಸರಿಯಾಗಲಿಲ್ಲ. ಜೀವನವನ್ನೆಲ್ಲವನ್ನೂ ಆವೇಶದಿಂದಲೇ ಕಳೆಯುವುದು ಸಾಧ್ಯವೇ? ಜಗತ್ತು ಅಷ್ಟು ಸರಳವಾಗಿಲ್ಲ.''

ಮಹಾದೇವಿಗೆ ಮಾತು ಚುಚ್ಚಿದಂತಾಯಿತು. ಆದರೂ ಆತನ ನೇರವಾದ, ಸರಳವಾದ, ಲೌಕಿಕ ಸಮ್ಮತವಾದ ಅಭಿಪ್ರಾಯಕ್ಕೆ ಮೆಚ್ಚಿದಳು.

''ಕ್ಷಮಿಸಬೇಕು ಅಣ್ಣ ! ಜಗತ್ತು ನನ್ನ ವರ್ತನೆಯನ್ನು ಹೇಗೆ ಅರ್ಥಮಾಡಿಕೊಳ್ಳುತ್ತದೆಯೋ ಹೇಳಲಾರೆ. ಆದರೆ ಕೇವಲ ತಾತ್ಕಾಲಿಕವಾದ ಆವೇಶದಿಂದ ಮಾತ್ರ ನಾನು ಈ ನಿರ್ಧಾರವನ್ನು ಕೈಗೊಂಡಿಲ್ಲ. ನನ್ನ ರಕ್ತದ ಕಣಕಣದಲ್ಲಿಯೂ ಈ ವೈರಾಗ್ಯದ ಭಾವನೆ ಮಿಡಿಯುತ್ತಿರುವುದನ್ನು ಸಾಧ್ಯವಿದ್ದರೆ ಬಗಿದು ತೋರಿಸುತ್ತಿದ್ದೆ. ಆಳವಾಗಿ ಆಲೋಚಿಸಿ ನನ್ನ ಜೀವನದ ಗುರಿಯನ್ನು ನಿರ್ಧರಿಸಿಕೊಂಡು ಕಲ್ಯಾಣದತ್ತ ನಡೆಯುತ್ತಿದ್ದೇನೆ. ಇಷ್ಟಾದರೂ ಜಗತ್ತು, ನನ್ನ ವೈರಾಗ್ಯ ಅಸಹಜವೆಂದೇ ಹೇಳುವುದಾದರೇ ನಾಮದಲಿ ನಾನು ಹೆಂಗಸು, ಭಾವಿಸಲು ಗುಂಡುರೂಪು ನೋಡಾ –' ಎಂದು ಹೇಳಬೇಕಾಗುತ್ತದೆ.''

ಅವಳ ಮಾತನ್ನು ಕೇಳುತ್ತಾ ಕೇಳುತ್ತಾ ರುದ್ರಮುನಿ ವಿಸ್ಮಿತನಾದರೂ ಮತ್ತೆ ಕೇಳಿದ :

''ಆದರೂ ಜನ ಏನು ಹೇಳುತ್ತಾರೆ ಗೊತ್ತೆ ? ಮಹಾದೇವಿ ಕೌಶಿಕನನ್ನು ಮದುವೆಯಾದಳು ; ಸಂಸಾರವನ್ನು ಮಾಡಿದಳು. ಅನಂತರ ಗಂಡನನ್ನು ಬಿಟ್ಟು ಕಲ್ಯಾಣಕ್ಕೆ ಹೊರಟಳು ಎಂದು ಹೇಳುವುದಿಲ್ಲವೇ ? ಈಗ ಸುದ್ದಿ ಹಾಗೇ ಹರಡುತ್ತಿದೆಯಲ್ಲ !''

ಮಹಾದೇವಿ ನಕ್ಕಳು. ಮತ್ತೆ ಕ್ಷಣಕಾಲ ಆಲೋಚಿಸಿ ಹೇಳಿದಳು : ''ನಿಜ ಅದು ಜಗತ್ತಿನ ತಪ್ಪಲ್ಲ. ತಮ್ಮ ತಮ್ಮ ಮಟ್ಟಕ್ಕೆ ಜನ ಆಲೋಚನೆ ಮಾಡುವುದು ಸಹಜವೇ. ಆದರೆ ಅದನ್ನು ಕುರಿತು ನಾನೇಕೆ ಯೋಚಿಸಲಿ ? ನನ್ನ ವೈರಾಗ್ಯದ ಕೀರ್ತಿ ಜಗತ್ತಿಗೆಲ್ಲಾ ಹರಡಬೇಕೆಂದೇನೂ ನಾನು ಹೊರಟಿಲ್ಲ. ಅದು ಅನಿವಾರ್ಯವಾದುದರಿಂದ ನಾನು ಹಾಗೆ ಹೊರಟುಬರಬೇಕಾಯಿತು. ಇಲ್ಲವಾದರೆ ಇನ್ನಾರ ಕಣ್ಣಿಗೂ ಬೀಳದಂತೆ ಸಾಧನೆಯನ್ನು ಮಾಡುತ್ತಿದ್ದವಳು ನಾನು. ನನ್ನ ಸಾಧನೆಯ ಮಾರ್ಗಕ್ಕೆ ಈ ಒಂದು ಮದುವೆಯ ಸುಳ್ಳು ತೆರೆ ಬಂದು ಮುಚ್ಚಿ, ಆಡಂಬರದಿಂದ ಅದನ್ನು ಪಾರುಮಾಡಿದರೆ ನಾನು ಅದಕ್ಕೆ ಸಂತೋಷವನ್ನೇ

ಪಡುತ್ತೇನೆ. ಜನ ಏನೇ ಹೇಳಿಕೊಳ್ಳಲಿ, ನಾನು ಕೌಶಿಕನ ಮನೆಗೆ ಹೋದುದೇಕೆಂದು, ಮತ್ತು ಅಲ್ಲಿ ನಡೆದುದೇನೆಂದು, ನನಗೆ ಗೊತ್ತು, ನನ್ನ ಚೆನ್ನಮಲ್ಲಿಕಾರ್ಜುನನಿಗೆ ಗೊತ್ತು ; ಅಷ್ಟು ಸಾಕು ನನಗೆ."

ರುದ್ರಮುನಿಯ ಬಾಯಿ ಕಟ್ಟಿತು. ಅವನ ಮನಸ್ಸು ಗೌರವಪೂರ್ಣವಾಯಿತು.

ಇಂತಹ ಅಪೂರ್ವವಾದ ವ್ಯಕ್ತಿಗೆ ಸ್ವಲ್ಪವಾದರೂ ಸಹಾಯ ಮಾಡುವ ಅವಕಾಶ ಸಿಕ್ಕಿದುದಕ್ಕಾಗಿ ಅವರೆಲ್ಲರಿಗೂ ಒಂದು ಬಗೆಯ ಹೆಮ್ಮೆಯಾದಂತಾಯಿತು.

ಮಾತಿನ ಭರದಲ್ಲಿ ದಾರಿ ಸಾಗುತ್ತಿದ್ದುದೇ ತಿಳಿಯುತ್ತಿರಲಿಲ್ಲ.

ಪುಣ್ಯವ್ಯಕ್ತಿಯನ್ನು ಹೊತ್ತು, ಆ ಸಂಭ್ರಮದ ಸಂತೋಷದಿಂದಲೋ ಎಂಬಂತೆ ಎತ್ತು ತಮ್ಮ ಕೊರಳ ಕಿಂಕಿಣಿಗಳನ್ನು ಕುಣಿಸುತ್ತಾ ನಡೆಯುತ್ತಿದ್ದುವು. ರಾತ್ರಿಯಾಗುವ ವೇಳೆಗೆ ಕುಂತಳಾಪುರವನ್ನು ತಲುಪಿದರು.

ವಿಸ್ತಾರವಾದ ಒಳಾಂಗಣವನ್ನುಳ್ಳ ದೊಡ್ಡ ಮಹಡಿಯ ಮನೆ ಶಿವಯ್ಯನವರದು. ಅತ್ಯಂತ ಶ್ರೀಮಂತರಲ್ಲದಿದ್ದರೂ ನೆಮ್ಮದಿಯಾಗಿ ಬಾಳುತ್ತಿದ್ದವರೆಂಬುದು ಮೇಲು ನೋಟಕ್ಕೆ ಕಾಣುವಂತಿತ್ತು ಮನೆಯ ಏರ್ಪಾಡು. ಅಂದು ರಾತ್ರಿ ಮಹಾದೇವಿಗೆ ಅತ್ಯಂತ ಆದರದ ಉಪಚಾರ ನಡೆಯಿತು. ಗಂಡನೆದುರಿಗೆ ಮಾತನಾಡಲು ಸಂಕೋಚಗೊಂಡು ಸುಮ್ಮನೆ ಕುಳಿತಿದ್ದ ಅಪರ್ಣೆ, ಈಗ ಮಹಾದೇವಿಯನ್ನು ಗೌರವಪೂರ್ಣವಾದ ಪ್ರೇಮದಿಂದ ಮಾತನಾಡಿಸಿದಳು. ಸ್ವಲ್ಪ ಹೊತ್ತಿನಲ್ಲಿಯೇ ಅವರು ಬಹುದಿನದ ಗೆಳತಿಯರಂತಾದರು. ಅಪರ್ಣೆಯ ಮುಗ್ಧಮನಸ್ಸನ್ನು ಕಂಡು ಮಹಾದೇವಿ ಮೆಚ್ಚಿದಳು.

ರಾತ್ರಿ ಬಹುಬೇಗ ಕಳೆದು ಬೆಳಗಾಯಿತು. ಮಹಾದೇವಿ ತನ್ನ ಮುಂದಿನ ಪಯಣವನ್ನು ಕೈಗೊಳ್ಳಲು ಸಿದ್ಧಳಾದಳು. ತಾನು ಬೆಳಗ್ಗೆಯೇ ಹೊರಡಬೇಕೆಂಬುದನ್ನು ಹಿಂದಿನರಾತ್ರಿಯೇ ಹೇಳಿದಾಗ, ಆ ವಿಚಾರವಾಗಿ ಆಗಲೇ ಸ್ವಲ್ಪ ಚರ್ಚೆ ನಡೆದಿತ್ತು.

"ಎಲ್ಲಿಯಾದರೂ ಉಂಟೇ? ಒಂದೆರಡು ದಿನ ಇದ್ದು ಹೊರಡಬೇಕು" ಅಪರ್ಣೆ ಹೇಳಿದ್ದಳು.

"ಹೌದಮ್ಮ, ಮಹಾದೇವಿ. ನಾಳೆ ಒಂದು ದಿನವಾದರೂ ಇದ್ದೇ ಇರಬೇಕು"– ಶಿವಮ್ಮ ಒತ್ತಾಯಪಡಿಸಿದ್ದಳು ವಾತ್ಸಲ್ಯದಿಂದ.

"ನಿಮ್ಮ ವಿಶ್ವಾಸವನ್ನು ನಾನು ಹೇಗೆತಾನೆ ಮರೆಯಲಿ. ಆದರೆ ಕ್ಷಮಿಸಿರಿ, ನಾನು ಇರುವುದು... ಇದು ಸಾಧ್ಯವೇ ಇಲ್ಲದ ಮಾತು. ತಾವು ಇದಕ್ಕೆ ಬೇಸರಪಟ್ಟುಕೊಳ್ಳದೆ ನನ್ನನ್ನು ಕಳುಹಿಸಿಕೊಡಬೇಕು. ಈ ಉಪಚಾರವನ್ನು ಕೂಡ,

ನಿಮ್ಮ ಮನಸ್ಸನ್ನು ನೋಯಿಸಲಾರದ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಪಡೆಯುತ್ತಿದ್ದೇನೆ. ಕಲ್ಯಾಣವನ್ನು ಸೇರುವ ನನ್ನ ಮಾರ್ಗ, ಕಠಿಣ ಜೀವನದ ತಪೋಯಾತ್ರೆಯ ಮಾರ್ಗ. ಒಂದೇ ಕಡೆಯಲ್ಲಿ ನಿಲ್ಲುವುದು ನನ್ನ ಸಾಧನೆಯ ಮಾರ್ಗಕ್ಕೆ ತಕ್ಕುದಲ್ಲ. ಆದುದರಿಂದ ದಯವಿಟ್ಟು ಕ್ಷಮಿಸಬೇಕು." – ಹೀಗೆ ಮಹಾದೇವಿ ವಿನಯದಿಂದ ಆದರೂ ಸ್ಪಷ್ಟವಾಗಿ ಹೇಳಿದ್ದಳು.

ಬೆಳಿಗ್ಗೆ ಹೊತ್ತಿಗೆ ಮುಂಚೆ ಎದ್ದು, ತಮ್ಮ ಮನೆಯವರೊಬ್ಬರನ್ನು ಬೀಳ್ಕೊಡುವ ಸಂಭ್ರಮದಿಂದಲೋ ಎಂಬಂತೆ ಎಲ್ಲ ಏರ್ಪಾಡನ್ನು ಮಾಡಿದ್ದರು, ಶಿವಮ್ಮ – ಅಪರ್ಣೆಯರು.

ಮಹಾದೇವಿ ಬೆಳಗಿನ ಸ್ನಾನಪೂಜಾದಿ ವಿಧಿಗಳನ್ನು ಮುಗಿಸಿಕೊಂಡು ಬರುವ ವೇಳೆಗೆ, ಉಪಹಾರ ಇವಳಿಗಾಗಿ ಕಾಯುತ್ತಿತ್ತು ಈ ಸಾತ್ವಿಕ ಸಂಸಾರದ ಮನಃ ಪ್ರಸಾದದಂತಿದ್ದ ಆ ಶಿವಪ್ರಸಾದವನ್ನು ಸ್ವೀಕರಿಸಿ ಹೊರಟು ನಿಂತಳು.

ಅನಿರೀಕ್ಷಿತವಾಗಿ ಬಂದ ಈ ವಿಶ್ವಾಸದ ಸುಳಿಯಿಂದ ತಪ್ಪಿಸಿಕೊಂಡು ಹೊರಡುವುದು ಸ್ವಲ್ಪ ಕಷ್ಟವೇ ಆಯಿತು.

"ಕಲ್ಯಾಣ ಬಹಳ ದೂರದೇಶವಂತಲ್ಲ; ನೀನೊಬ್ಬಳೇ ಹೇಗೆ ಹೋಗುತ್ತೀಯಮ್ಮಾ ?" ಮರುಕಗೊಂಡಿತು ಶಿವಮ್ಮನವರ ಮಾತೃಹೃದಯ.

"ನನಗೇನೂ ಭಯವಿಲ್ಲ ತಾಯಿ. ನನ್ನ ಆತ್ಮಸಂಗಾತಿ ಚೆನ್ನಮಲ್ಲಿಕಾರ್ಜುನ ಇದ್ದಾನೆ. ಅಲ್ಲದೆ ನಿಮಂತಹ ಹಿರಿಯರ ಆಶೀರ್ವಾದವೂ ನನ್ನ ಮೇಲಿರಲಿ" ಎಂದು ಶಿವಯ್ಯನವರಿಗೂ ಶಿಮ್ಮನವರಿಗೂ ಬಾಗಿ ನಮಸ್ಕರಿಸಿದಳು.

ಶಿವಮ್ಮ ಅವಳನ್ನು ಹಿಡಿದು ಮೇಲಕ್ಕೆತ್ತುವಾಗ ಕಣ್ಣುಗಳಲ್ಲಿ ನೀರಾಡುತ್ತಿದ್ದುವು. ತಮ್ಮ ಮಗಳನ್ನೇ ಬೀಳ್ಕೊಡುವಂತೆ ಅನಿಸಿತು ಆ ದಂಪತಿಗಳಿಗೆ.

ಮಹಾದೇವಿ ಅಲ್ಲಿಂದ ಸರಸರನೆ ನಡೆಯತೊಡಗಿದಳು. ಬಹುದೂರನಡೆದು ಮರೆಯಾಗುವಾಗೊಮ್ಮೆ ತಿರುಗಿ ನೋಡಿದರೆ, ಮನೆಯ ಕಟ್ಟೆಯ ತುದಿಯಲ್ಲಿಯೇ ನಿಂತು ಅವರೆಲ್ಲರೂ ತನ್ನತ್ತಲೇ ನೋಡುತ್ತಿರುವುದು ಕಣ್ಣಿಗೆ ಬಿದ್ದಿತು. ಅವರ ಆ ವಾತ್ಸಲ್ಯದ ಹೃದಯವನ್ನು ಕಂಡು ಅಚ್ಚರಿಯಿಂದ ಆ ಸವಿನೆನಪನ್ನೇ ಮೆಲುಕು ಹಾಕುತ್ತಾ ಮುಂದೆ ನಡೆಯತೊಡಗಿದಳು.

೩

ನೆನ್ನೆಯ ದಿನದ ಆಯಾಸವೆಲ್ಲಾ ಇಂದು ಎಷ್ಟೋ ಪರಿಹಾರವಾದಂತಾಗಿ ಮಹಾದೇವಿಯಲ್ಲಿ ಹೊಸ ಉತ್ಸಾಹ ಮೂಡಿತ್ತು. ಒಂದೇ ಸಮನೆ ನಡೆಯತೊಡಗಿದಳು. ಅವಳ ಮನಸ್ಸು ತನ್ನ ಜೀವನದ ಘಟನೆಗಳನ್ನು ಅಂತರಂಗದ ಸಾಕ್ಷಿಮಂದಿರದಲ್ಲಿಟ್ಟು ನೋಡುತ್ತಿತ್ತು.

'ಒಂದೇ ದಿನದಲ್ಲಿ ಎಂತಹ ಬದಲಾವಣೆ ನನ್ನ ಜೀವನದಲ್ಲಿ' ಎಂದುಕೊಳ್ಳುವಳು. 'ನೆನ್ನೆಯ ದಿನ ಬಹುಶಃ ಇದೇ ಸಮಯದಲ್ಲಿ ಕೌಶಿಕನ ಅರಮನೆಯಲ್ಲಿ ಪೂಜೆಗೆ ತೊಡಗಿದ್ದೆನೋ ಏನೋ. ಆದರೆ... ಇಂದು ! ಹೂಂ! ಇದೂ ಒಂದು ಪೂಜೆಯೇ ! ಇದನ್ನು ಸುಗಮವಾಗಿ ನೆರವೇರಿಸುವುದು ಆತನಿಗೇ ಸೇರಿದುದು" ಎಂದು ಚೆನ್ನಮಲ್ಲಿಕಾರ್ಜುನನನ್ನು ಪ್ರಾರ್ಥಿಸಿತು ಅವಳ ಮನಸ್ಸು.

ಶಿವಯ್ಯನವರ ಸಂಸಾರದಂತಹ ಸಾತ್ವಿಕಗೃಹಗಳು ಇರುವವರೆಗೂ ತನ್ನ ಸಾಧನೆಯ ತಪೋಯಾತ್ರೆಯ ಕಷ್ಟವನ್ನು ನೆನೆದು ಅಂಜಬೇಕಾಗಿಲ್ಲವೆಂದು ಧೈರ್ಯಗೊಂಡಳು. ಶಿವಮ್ಮ ಅಪರ್ಣೆಯರ ನಿರ್ವ್ಯಾಜವಾತ್ಸಲ್ಯ ಮತ್ತೊಮ್ಮೆ ಅವಳ ಮನಸ್ಸನ್ನು ತುಂಬಿತು. ಅವರ ಪ್ರೇಮದ ಉಪಚಾರ ಮನಸ್ಸಿಗೆಂತೋ ಅಂತೆಯೇ ದೇಹಕ್ಕೂ ನೆಮ್ಮದಿಯನ್ನೂ ಕೊಟ್ಟಿತ್ತು.

ಬೆಳಗಿನ ಹಿತಕರವಾದ ಬಿಸಿಲಿನಲ್ಲಿ ದಾರಿ ಚೆನ್ನಾಗಿ ಸಾಗುತ್ತಿತ್ತು. ಸೂರ್ಯನ ಕಿರಣಗಳು ಕ್ರಮೇಣ ತಮ್ಮ ಶಾಖವನ್ನು ಹೆಚ್ಚಿಸಿಕೊಳ್ಳತೊಡಗಿದ್ದುವು. ಈ ವೇಳೆಗಾಗಲೇ ಮಹಾದೇವಿ ಒಂದೆರಡು ಹರದಾರಿಗಳಷ್ಟು ದೂರ ಬಂದಿದ್ದಳು. ಅಷ್ಟರಲ್ಲಿ ಮಹಾದೇವಿಯನ್ನು ಎದುರುಗೊಂಡಳು ವರದೆ.

ತನ್ನ ಕಿರಿದಾದ ದೇಹವನ್ನು ಜಲಜಲನೆ ಉಕ್ಕಿಸುತ್ತಾ ಹರಿಯುತ್ತಿದ್ದ ಆ ವರದಾ ನದಿಯನ್ನು ದಾಟಿ, ಅವಳ ಪ್ರಯಾಣ ಮುಂದುವರಿಯಬೇಕಾಗಿತ್ತು. ದಡವನ್ನು ಇಳಿದು ನದಿಯನ್ನು ಸಮೀಪಿಸತೊಡಗಿದಳು. ಅಲ್ಲಿ ಅವಳ ಗಮನವನ್ನು ಸೆಳೆದುದೆಂದರೆ ನದಿಯ ಮಧ್ಯದಲ್ಲಿ ಒಂದು ಚಿಕ್ಕ ಮಂಟಪ ; ಅದರಲ್ಲಿದ್ದ ಒಂದು ಶಿವಲಿಂಗ. ರುದ್ರಮುನಿ ಹೇಳಿದ ಹೊಳೆಲಿಂಗೇಶ್ವರ ಇದೇ ಇರಬೇಕೆಂದು ಊಹಿಸಿದಳು.

ಹಿಂದಿನ ರಾತ್ರಿ ಮಾತನಾಡುತ್ತಿರುವಾಗ ತನ್ನ ಪ್ರಯಾಣದ ಗುರಿ ಕಲ್ಯಾಣವೆಂದು ಹೇಳಿದ ಮಹಾದೇವಿ, ಬನವಾಸಿಗೆ ಹೋಗಿ ಮುಂದೆ ಮಾರ್ಗವನ್ನು ಹುಡುಕುವುದಾಗಿ ಹೇಳಿದ್ದಳು. ಅದನ್ನು ಕೇಳಿದ ರುದ್ರಮುನಿ :

ಬನವಾಸಿಗೆ ಆಕೆ ಹೋಗುವ ಅವಶ್ಯಕತೆಯಿಲ್ಲವೆಂದೂ, ಬನವಾಸಿಗೆ ಹೋಗುವ ಮಾರ್ಗವನ್ನು ಎಡಕ್ಕೆ ಬಿಟ್ಟು ನೇರವಾಗಿ ಮುಂದುವರಿದರೆ ಸ್ವಲ್ಪ ಮುಂದೆ ನಡೆದರೆ ಹೊಳೆಲಿಂಗೇಶ್ವರ ಸಿಗುತ್ತದೆಂದೂ, ಅಲ್ಲಿಂದ ಬಲಕ್ಕೆ ತಿರುಗಿ ಮುಂದೆ ನಡೆದರೆ ಅದು ನೇರವಾಗಿ ಉತ್ತರದ ಕಡೆಗೆ ಕೊಂಡೊಯ್ಯುತ್ತದೆಂದೂ ತಾನು ತಿಳಿದಮಟ್ಟಿಗೆ ಸೂಚನೆ ಕೊಟ್ಟಿದ್ದ. ಮಹಾದೇವಿಗೂ ಅದೇ ಸರಿಯೆಂದು ತೋರಿತ್ತು. ಅಂತೆಯೇ ಬನವಾಸಿಗೆ ಹೋಗುವ ತನ್ನ ಮೊದಲಿನ ಭಾವನೆಯನ್ನು ಬದಲಾಯಿಸಿ ನೇರವಾಗಿ ಬಂದಿದ್ದಳು ಹೊಳೆಲಿಂಗೇಶ್ವರನ ಕಡೆಗೆ.

ನದಿ ಅಲ್ಲಿ ವೇಗವಾಗಿ ಹರಿಯುತ್ತಿತ್ತು. ಅದಕ್ಕೆ ಸ್ವಲ್ಪ ಹಿಂದೆ ನದಿಯ ಮೇಲ್ಭಾಗದಲ್ಲಿ, ನಿಂತಂತೆ ಕಾಣುತ್ತಿದ್ದ ವರದಾ, ಇಲ್ಲಿ ಶಿವನನ್ನು ಮುಟ್ಟಿ ಧನ್ಯಳಾದ ಉತ್ಸಾಹದಿಂದ ಚೈತನ್ಯವನ್ನು ಪಡೆದು ವೇಗವಾಗಿ ಓಡುವಂತೆ ತೋರುತ್ತಿತ್ತು.

ಮಹಾದೇವಿ ನೀರಿಗಿಳಿದಳು. ನೀರು ಆಳವಿರಲಿಲ್ಲ. ಜಳಜಳನೆ ಹರಿಯುತ್ತಿರುವ ನೀರಿನ ತಳದ ಕಲ್ಲುಗಳು ಸೂರ್ಯನ ಬೆಳಕಿನಲ್ಲಿ ಹೊಳೆಯುತ್ತಿದ್ದುವು.

ಹೊಳೆಲಿಂಗೇಶ್ವರನ ಬಳಿಗೈದಿದಳು ಮಹಾದೇವಿ. ಒಂದು ತೊಟ್ಟಿಲಿನಂತಹ ಕಲ್ಲುಮಂಟಪದ ಮಧ್ಯದಲ್ಲಿ ಶಿವಲಿಂಗ ಒಡೆದು ಮೂಡಿದಂತಿತ್ತು. ಮೇಲೊಂದು ಚಿಕ್ಕಮಂಟಪ, ಆ ವಿಶ್ವಪತಿಗೆ ನೆರಳು ಮಾಡಲು ಹವಣಿಸುತ್ತಾ ನಿಂತಿತ್ತು. ಗಂಗೆಯ ಮಧ್ಯದಲ್ಲಿ ಮೂಡಿ ನಿಂತಿರುವ ಗಂಗಾಧರನ ಸೌಂದರ್ಯಲೀಲೆಯನ್ನು ಕ್ಷಣಕಾಲ ಸವಿದಳು.

ನದಿಯ ಮಧ್ಯಭಾಗದಲ್ಲಿ ನಿಂತು ಮುಖವನ್ನು ತೊಳೆದುಕೊಂಡಳು. ಶಿವನ ಕರುಣೆಯ ಪ್ರಸಾದದಂತೆ ಹರಿದುಬರುತ್ತಿರುವ ವರದೆಯ ತಿಳಿಜಲವನ್ನು ನಾಲ್ಕು ಗುಟುಕು ಕುಡಿದಳು. ನಿಧಾನವಾಗಿ ನದಿಯ ಆಚೆಯ ದಡಕ್ಕೈದಿ ಅಲ್ಲಿರುವ ಮರಳ ಮೇಲೆ ಶಿವಲಿಂಗಕ್ಕೆ ಎದುರಾಗಿ ಕುಳಿತಳು.

ತನ್ನಿನಿಯನಾದ ಸಮುದ್ರರಾಜನನ್ನು ಹುಡುಕಿಕೊಂಡು ಓಡುತ್ತಿರುವ ವರದೆಯ ಸಂಭ್ರಮದ ಸಲಿಲದೇಹ, ಮೇಲೇರುತ್ತಿರುವ ಸೂರ್ಯನ ಕಿರಣಗಳ ಕಾಂತಿಯಲ್ಲಿ ಹೊಳೆಯುತ್ತಿತ್ತು ; ನಿರಂತರವಾಗಿ ಮೊರೆಯುತ್ತಿತ್ತು. ವರದೆಯ ಆ ಚಿರಂತನ ಗಾನ, ಮಹಾದೇವಿಯ ಜೀವನಸಂಗೀತಕ್ಕೆ ಬಂದು ಅಪೂರ್ವವಾದ ಸ್ವರಸಮ್ಮೇಳನವನ್ನು ತೋರಿಸಿಕೊಟ್ಟಂತಾಯಿತು. ತನ್ನ ಮುಂದಿರುವ ಮಾರ್ಗವನ್ನು ಸೂಚಿಸಿ ಧೈರ್ಯವನ್ನು ಕೊಟ್ಟಂತಾಯಿತು. ಮೇಲೆದ್ದು ಹೊಳೆಲಿಂಗೇಶ್ವರನಿಗೆ ಮನಸ್ಸಿನಲ್ಲಿ ವಂದಿಸಿ ಬೀಳ್ಕೊಂಡು ಮುಂದೆ ನಡೆದಳು.

ನದಿಯ ದಡದಲ್ಲಿ ಒಂದೆರಡು ಮೈಲುಗಳಷ್ಟು ದೂರದಲ್ಲಿಯೇ ಒಂದು

ಹಳ್ಳಿ ಸಿಕ್ಕಿತು. ಆ ಹಳ್ಳಿಯ ಅಗಸೆಬಾಗಿಲನ ದೊಡ್ಡ ಅರಳಿಯ ಮರದ ಕಟ್ಟೆಯ ಮೇಲೆ ಕುಳಿತ ನಾಲ್ಕು ಜನರ ಕಣ್ಣುಗಳು ಇವಳತ್ತ ತಿರುಗಿದವು. ಮಹಾದೇವಿ ಅದಕ್ಕೆ ಗಮನವನ್ನು ಕೊಡದೆ ತನ್ನ ಮಾರ್ಗವನ್ನು ಮುಂದುವರಿಸಿದಳು. ಹಳ್ಳಿಯನ್ನು ಪ್ರವೇಶಿಸದೆ, ನೇರವಾದ ದೊಡ್ಡ ರಸ್ತೆಯನ್ನು ಹಿಡಿದು, ಹಾಗೆಯೇ ಮಂದೆ ನಡೆದಳು. ಅಲ್ಲಿ ರಸ್ತೆ, ಪೂರ್ವದ ಕಡೆ ತಿರುಗಿ ಮುಂದುವರಿಯುತ್ತಿತ್ತು.

ಅದಾದನಂತರ ಇನ್ನೂ ಒಂದು ಹಳ್ಳಿ ಸಿಕ್ಕಿತು. ಅದೂ ಹಿಂದಾಯಿತು. ಈ ವೇಳೆಗಾಗಲೇ ಸೂರ್ಯ ನೆತ್ತಿಯ ಮೇಲೆ ಬಂದು ತನ್ನ ಪ್ರಖರವಾದ ಕಿರಣಗಳನ್ನು ಸುರಿಸತೊಡಗಿದ್ದ. ಕಾದ ನೆಲ ಮಹಾದೇವಿಯ ಅಂಗಾಲುಗಳಿಗೆ ಬರೆಯನ್ನು ಕೊಟ್ಟಂತಾಗುತ್ತಿತ್ತು. ಮರಗಿಡಗಳೆಲ್ಲ ಬಿಸಿಲಿನ ತಾಪದಿಂದ ಬಾಗಿ ನಿಂತು ತಮ್ಮ ಕಾಲುಗಳ ಬಳಿಯಲ್ಲಿಯೇ ತಮ್ಮ ನೆರಳನ್ನು ಚೆಲ್ಲಿಕೊಂಡಿದ್ದುವು. ಅವುಗಳ ಬುಡವನ್ನು ಸೇರಿ ಸಾಧ್ಯವಾದೆಡೆಗಳಲ್ಲೆಲ್ಲಾ ಅವುಗಳ ಆಶ್ರಯವನ್ನು ಪಡೆಯುತ್ತಾ ಮಹಾದೇವಿ ಮುಂದೆಮುಂದೆ ನಡೆಯುತ್ತಿದ್ದಳು.

ದೇಹ ಆಯಾಸಗೊಂಡಿತ್ತು. ಗಂಟಲು ಒಣಗಿತ್ತು. ಹೆಜ್ಜೆಗಳು ಮುಂದೆ ಅಡಿಯನ್ನಿಡಲಾರದೆ ತತ್ತರಿಸುತ್ತಿದ್ದವು. ಅಷ್ಟರಲ್ಲಿ ಇನ್ನೊಂದು ಹಳ್ಳಿ ಗೋಚರಿಸಿತು.

ಈ ಊರಿನ ಮುಂಭಾಗದಲ್ಲಿ ಒಂದು ಸಣ್ಣ ಕಲ್ಯಾಣಿ. ಅದರ ಸಮೀಪದಲ್ಲಿಯೆ ಹಳೆಯ ಮಂಟಪದಂತಹ ಒಂದು ಚಾವಡಿಕಟ್ಟೆ. ಅದರ ಸುತ್ತ ನಾಲ್ಕಾರು ಮಾವಿನ ಗಿಡಗಳು ಬೆಳೆದುನಿಂತಿದ್ದುವು. ಬಿಸಿಲಿನಲ್ಲಿ ದಣಿದು ಬಂದ ಮಹಾದೇವಿಗೆ ಆ ಸ್ಥಳ ಬಹಳ ಆಕರ್ಷಕವಾಗಿ ಕಂಡಿತು.

ಕಲ್ಯಾಣಿಯಲ್ಲಿಳಿದು ಮುಖ ತೊಳೆದುಕೊಂಡಳು. ನೀರು ಶುಭ್ರವಾಗಿ ತಿಳಿಯಾಗಿದ್ದು ಕುಡಿಯಬಹುದೆಂಬಂತೆ ತೋರಿತು. ಕುಡಿದಳು. ಬಿಸಿಲಿನಲ್ಲಿ ಬಳಲಿದ ದೇಹಕ್ಕೆ ತುಂಬಾ ಹಿತಕರವಾಗಿತ್ತು ಆ ಪಾನೀಯ.

ಕಲ್ಯಾಣಿಯಿಂದ ಮೇಲಕ್ಕೆ ಬಂದಳು. ಸೆರಗಿನ ತುದಿಯಿಂದ ಮುಖವನ್ನೊರಸಿಕೊಳ್ಳುತ್ತಾ ಚಾವಡಿ ಕಟ್ಟೆಯ ನೆರಳಿನ ಕಡೆಗೆ ನಡೆಯತೊಡಗಿದಳು.

ತನ್ನ ಬೆನ್ನಮೇಲೆಲ್ಲಾ ಹರಡಿದ್ದ ನೀಳವಾದ ಕೂದಲುಗಳನ್ನು ಸರಿಪಡಿಸಿಕೊಳ್ಳುತ್ತಾ ಮಹಾದೇವಿ ಸುತ್ತಲೂ ನೋಡಿದಳು.

ಅದೊಂದು ನಾಡಹೆಂಚಿನ ಮೇಲ್ಛಾವಣಿಯನ್ನುಳ್ಳ, ಅತಿ ಹಳೆಯ ಚಪ್ಪರದಂತಹ ಕಟ್ಟಡವಾಗಿತ್ತು. ದೊಡ್ಡ ದೊಡ್ಡ ಮರದ ತೊಲೆಗಳನ್ನು ಹಾಕಿ, ಎತ್ತರವಾಗಿ ಮತ್ತು ಭದ್ರವಾಗಿ ಕಟ್ಟಿದ್ದರು. ಸರಿಸುಮಾರಾಗಿ ಅದರ ಮಧ್ಯೆ ಒಂದು ಎತ್ತರವಾದ ಕಟ್ಟೆ ; ಅದರ ಸುತ್ತಲೂ ವಿಸ್ತಾರವಾದ ಜಾಗವಿತ್ತು.

ಮಹಾದೇವಿ ಹೋಗಿ ಕಟ್ಟೆಯ ಮೇಲೆ ಕುಳಿತುಕೊಂಡಳು. ನೆರಳು ನೆಮ್ಮದಿಯನ್ನು ಕೊಟ್ಟಿತು. ಸ್ವಲ್ಪ ಕಾಲ ಅಲ್ಲಿ ವಿಶ್ರಮಿಸಿಕೊಂಡಳು.

ಅಷ್ಟರಲ್ಲಿ ಎದುರಿಗಿನ ರಸ್ತೆಯ ಮೇಲೆ ಮೂರುನಾಲ್ಕು ಜನ ಮಾತನಾಡುತ್ತ ಬರುತ್ತಿರುವುದು ಕಾಣಿಸಿತು ಮಹಾದೇವಿಗೆ. ಅವರ ದೃಷ್ಟಿಯೂ ಮಹಾದೇವಿಯತ್ತ ತಿರುಗಿತ್ತು. ರಸ್ತೆಯನ್ನು ಬಿಟ್ಟು ಕಲ್ಯಾಣಿಯ ಕಡೆಗೆ ತಿರುಗಿದರು. ಈಗ ಅವರ ಮಾತುಗಳೂ ಕಿವಿಯ ಮೇಲೆ ಬೀಳುತ್ತಿದ್ದುವು.

ತಮ್ಮ ರೈತಜೀವನದ ಕಷ್ಟಸುಖಗಳನ್ನು ಕುರಿತು ಮಾತನಾಡುತ್ತಿರುವಂತೆ ತೋರಿತು ಮಹಾದೇವಿಗೆ. ಒಬ್ಬ ಹೇಳಿದುದು ಕೇಳಿಸಿತು :

"ಈ ಸಾರಿ ಹೊಳೆಲಿಂಗೇಶ್ವರನ ಜಾತ್ರೆಯಲ್ಲಿ ಆ ಎತ್ತುಗಳನ್ನು ಮಾರಿಬಿಡಬೇಕೆಂದಿದ್ದೇನೆ."

"ಏಕೆ ಅವನ್ನು ಮಾರಿ ಏನು ಮಾಡುತ್ತೀ ?" ಕೇಳಿದ ಇನ್ನೊಬ್ಬ. ಅವನ ದೃಷ್ಟಿ ಮಹಾದೇವಿಯತ್ತ ತಿರುಗಿತ್ತು.

"ಅಷ್ಟು ದೊಡ್ಡ ಹೋರಿಗಳನ್ನು ಇಟ್ಟುಕೊಳ್ಳುವುದು ಸಾಧ್ಯವಿಲ್ಲವಪ್ಪ. ಅವನ್ನು ಕೊಟ್ಟು ಒಂದು ಜೊತೆ ಗಿಡ್ಡಗಳನ್ನು ತೆಗೆದುಕೊಳ್ಳುತ್ತೇನೆ" ಹೇಳಿದ ಮೊದಲನೆಯವನು.

ಮೂರನೆಯವನ ದೃಷ್ಟಿಯಂತೂ ಈ ಮಾತುಗಳ ಕಡೆಗೆ ಇಲ್ಲದೆ ಮಹಾದೇವಿಯತ್ತಲೇ ತಿರುಗಿತ್ತು. ಇವರೆಲ್ಲರಿಗಿಂತ ಹಿರಿಯವನಾದ ನಾಲ್ಕನೆಯವನು ಕಲ್ಯಾಣಿಯಲ್ಲಿಳಿದು ಕೈಕಾಲು ತೊಳೆದುಕೊಳ್ಳುತ್ತಿದ್ದ.

ಈ ಮೂವರು ತರುಣರೂ ಒಬ್ಬರ ಮುಖವನ್ನೊಬ್ಬರು ನೋಡಿದರು. ಮೂರನೆಯವನು ಹೇಳಿದ ಕಣ್ಣುಗಳ ಭಾಷೆ ಅವರಿಗೆ ತಿಳಿಯಿತು. ಮೆಲ್ಲಗೆ ಚಾವಡಿಯತ್ತ ತಿರುಗಿದರು.

ಮಹಾದೇವಿ ಬಿಸಿಲಿನ ಜಲಮರೀಚಿಕೆಯನ್ನು ನೋಡುತ್ತಾ ದೂರಕ್ಕೆ ದಿಟ್ಟಿಯನ್ನಟ್ಟಿದ್ದಳು. ಚನ್ನಮಲ್ಲಿಕಾರ್ಜುನನ ವಿರಹ ಬೇಗೆಯಂತೆ ಬಿಸಿಲು ಸುರಿಯುತ್ತಿತ್ತು. ಅವಳ ವಯಸ್ಸು ಮತ್ತು ರೂಪದಿಂದ ಕುತೂಹಲಗೊಂಡು ಅವರು ಮೆಲ್ಲಮೆಲ್ಲಗೆ ಏನೇನೋ ಮಾತನಾಡುತ್ತ ಬಳಿಗೆ ಬರುತ್ತಿದ್ದರು.

ತೀರಾ ಸಮೀಪಕ್ಕೆ ಬಂದರು. ಅವರಲ್ಲೊಬ್ಬ ಮುಂದೆ ಬರುತ್ತಾ ಕೇಳಿದ ಮಹಾದೇವಿಯನ್ನು:

"ಏನಮ್ಮಾ ಯಾವ ಊರು ? ಎಲ್ಲಿಂದ ಬಂದದ್ದು ?"

ಅವರ ಪ್ರಶ್ನೆಯಿಂದ ಎಚ್ಚರಗೊಂಡ ಮಹಾದೇವಿ ಅವರತ್ತ ತಿರುಗಿದಳು.

ಮತ್ತೊಬ್ಬ ಹೇಳಿದ : "ಬಿರುಬಿಸಿಲಿನಲ್ಲಿ ಈ ಸುಂದರವಾದ ದೇಹವನ್ನು ಬಳಲಿಸುತ್ತಿರುವುದೇಕೆ?"

ಮಹಾದೇವಿ ಹೇಳಿದಳು : "ನಿಮ್ಮ ಅನುಕಂಪೆಗೆ ತುಂಬಾ ವಂದನೆಗಳು ಅಣ್ಣ. ಆದರೆ ನನಗೆ ಅನುಕಂಪ ಬೇಕಾಗಿಲ್ಲ. ಏಕೆಂದರೆ :

ನನ್ನ ಕಾಯ ಕಠ್ರನೆ ಕಂದಿದಡೇನು ? ಮಿಠ್ರನೆ ಮಿಂಚಿದೊಡೇನಯ್ಯಾ ?
ಅಂತರಂಗ ಶುದ್ಧವಾದ ಬಳಿಕ ಕಾಯವೇನಾದಡೇನಯ್ಯ?
ಚೆನ್ನಮಲ್ಲಿಕಾರ್ಜುನನೊಲಿದ ಕಾಯವೇನಾದೊಡೆ ನಿಮಗೇನಯ್ಯ ?

ಮಾತುಗಳ ದಿಟ್ಟತನದಿಂದ ಬೆಚ್ಚಿದರು. ಅಷ್ಟರಲ್ಲಿ ಕಲ್ಯಾಣಿಯಲ್ಲಿದ್ದ ನಾಲ್ಕನೆಯವನೂ ಬಂದು ಸೇರಿದ್ದ. ಮಧ್ಯವಯಸ್ಸಿನಲ್ಲಿದ್ದ ಆತ ಇವರೆಲ್ಲರಿಗೂ ಹಿರಿಯನೆಂಬಂತೆ ಕಾಣುತ್ತಿದ್ದ. ಬರುತ್ತಿದ್ದಂತೆಯೇ ಆ ಮೂವರನ್ನೂ ಗದರಿಸಿಕೊಂಡೇ ಬಂದ. ಅಷ್ಟರಲ್ಲಿ ಮಹಾದೇವಿ ಹೇಳತೊಡಗಿದಳು :

ಮುಡಿ ಬಿಟ್ಟು, ಮೊಗ ಬಾಡಿ, ತನು ಕರಗಿದವಳ,
ಎನ್ನನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ !
ಎನ್ನನೇಕೆ ಕಾಡುವಿರಿ ಎಲೆ ತಂದೆಗಳಿರಾ ?
ಬಲುಹಳಿದು ಭವಗೆಟ್ಟು, ಛಲವಳಿದು ಭಕ್ತೆಯಾಗಿ,
ಚೆನ್ನಮಲ್ಲಿಕಾರ್ಜುನನ ಕೂಡೆ ಕುಲವಳಿದವಳ.

ಅವಳ ಮಾತಿನಿಂದ ಅವರ ಮನಸ್ಸಿನ ಲಘುವಾದ ಭಾವನೆ ಮಾಯವಾಯಿತು. ಕ್ಷಣಕಾಲ ಮೊದಲು ಅಲ್ಲಿಗೆ ಬಂದ, ಆ ಹಿರಿಯನಂತೂ ಗೌರವಭಾವದಿಂದ ಮುಂದೆ ಬರುತ್ತಾ ಕೇಳಿದ : "ಕ್ಷಮಿಸು, ತಾಯಿ. ಈ ಹುಡುಗರು ಏನಾದರೂ ದುಡುಕಿ ಮಾತನಾಡಿದ್ದರೆ ಕ್ಷಮಿಸಿಬಿಡು."

ಆ ಮೂವರು ಅದೇ ಮಾತನ್ನು ಹೇಳುವ ಭಾವದಿಂದಲೇ ಮಹಾದೇವಿಯನ್ನು ನೋಡುತ್ತಿದ್ದರು. ಅಷ್ಟರಲ್ಲಿ ಮಹಾದೇವಿ ಹೇಳಿದಳು :

"ಏನೂ ಯೋಚಿಸಬೇಡಿ. ಪಾಪ ! ಅವರು ಬಹಳ ಒಳ್ಳೆಯವರು. ಆದರೂ ಹೆಣ್ಣನ್ನು ಕುರಿತು ಗಂಡು ತೋರಿಸಬಹುದಾದ ಆಸಕ್ತಿ ಬೇರೆ ರೀತಿಯಲ್ಲಿರಲು ಸಾಧ್ಯವಿಲ್ಲವೇ ಎಂದು ಆಲೋಚಿಸುತ್ತಿದ್ದೆ."

"ಕ್ಷಮಿಸು, ತಾಯಿ" – ಅವರೆಲ್ಲರ ಪರವಾಗಿ ಮತ್ತೆ ಆ ಹಿರಿಯನೇ ಕೇಳಿದ : "ನಿನ್ನ ಮಾತುಗಳನ್ನು ಕೇಳಿದರೆ, ನೀನು ಸಾಮಾನ್ಯಳಲ್ಲವೆಂಬಂತೆ ತೋರುತ್ತದೆ. ಕೇವಲ ಕುತೂಹಲಕ್ಕೋಸ್ಕರವಾಗಿ ಕೇಳುತ್ತಿದ್ದೇನೆ, ನೀನು ಯಾರು ತಾಯಿ ?"

"ನಾನೆ ? – ನಾನು ಯಾರೆಂದು ಹೇಳಲಿ, ಅಣ್ಣ. ನಾನೊಬ್ಬಳು ಸಾಧಕಿಯೆಂದು ಹೇಳಿದರೆ ಸಾಕೆ ? ಚೆನ್ನಮಲ್ಲಿಕಾರ್ಜುನನ್ನು ಹುಡುಕಿಕೊಂಡು ಕಲ್ಯಾಣದ ಕಡೆ ಹೊರಟಿದ್ದೇನೆ. ಬಿಸಿಲು ಹೆಚ್ಚಾದುದರಿಂದ ಈ ನೆರಳಿನಲ್ಲಿ ಸ್ವಲ್ಪ ವಿಶ್ರಾಂತಿಯನ್ನು ಪಡೆಯುತ್ತಿದ್ದೆ, ನಾನಿನ್ನು ಬರುತ್ತೇನೆ" ಎಂದು ಅಲ್ಲಿಂದ ಹೊರಡಲು ಉದ್ಯುಕ್ತಳಾದಳು ಮಹಾದೇವಿ.

ಆತನೇ ಮತ್ತೆ ಹೇಳಿದ : "ಇನ್ನೂ ಬಿಸಿಲು ಸುರಿಯುತ್ತಿದೆ ತಂಗಿ. ಇಲ್ಲಿಗೆ ಸ್ವಲ್ಪ ದೂರದಲ್ಲೇ ನನ್ನ ಮನೆಯಿದೆ, ಅಲ್ಲಿ ಹೋಗೋಣ. ಈ ಬಡವನ ಮನೆಯ ಆತಿಥ್ಯವನ್ನು ಸ್ವೀಕರಿಸಿ ಮುಂದೆ ಹೋಗಬಹುದು ನಡೆಯಮ್ಮ."

"ಕ್ಷಮಿಸಿರಿ, ಯಾರ ಆತಿಥ್ಯವನ್ನೂ ಸ್ವೀಕರಿಸುವ ಸ್ಥಿತಿಯಲ್ಲಿ ನಾನಿಲ್ಲ. ನೀವು ನನಗೆ ಮುಂದಿನ ಮಾರ್ಗವನ್ನು ತಿಳಿಸಿದರೆ ಎಲ್ಲಕ್ಕಿಂತ ಹೆಚ್ಚಿನ ಉಪಕಾರವನ್ನು ಮಾಡಿದಂತೆ. ಈ ಮಾರ್ಗ ಮುಂದೆ ಎಲ್ಲಿಗೆ ಹೋಗುತ್ತದೆ ತಿಳಿಸುತ್ತೀರಾ ? ಕಲ್ಯಾಣದ ಕಡೆಗೆ ಇದು ಕೊಂಡೊಯ್ಯುತ್ತದೆಯೆ ?" ಮಹಾದೇವಿ ಕೇಳಿದಳು ಆತನನ್ನು.

"ಕಲ್ಯಾಣದ ಮಾತನ್ನು ನಾನರಿಯೆ, ತಾಯಿ. ಈ ದಾರಿಯಲ್ಲಿ ಹಾನಗಲ್ಲವರೆಗೂ ನಾನು ಹೋಗಿದ್ದೇನೆ. ಹೀಗೆ ನೇರವಾಗಿ ಹೋದರೆ ಮುಂದೆ ಇದು ಉತ್ತರಕ್ಕೆ ತಿರುಗುತ್ತದೆ. ಅದೇ ಹಾನಗಲ್ಲಿಗೆ ಹೋಗುವ ದಾರಿ. ಇಲ್ಲಿಂದ ಒಂದೆರಡು ಹರದಾರಿ ಹೋಗುವುದರೊಳಗಾಗಿ ಭಯಂಕರವಾದ ಕಾಡು ಸಿಕ್ಕುತ್ತದೆ. ಕಣಿವೆಯ ದಾರಿ ಅದು. ಒಂದು ಗುಡ್ಡವನ್ನು ಹತ್ತಿ ಇಳಿಯಬೇಕು. ಕಾಡನ್ನು ದಾಟಿದ ಕೂಡಲೇ ಆ ಗುಡ್ಡದ ಆಚೆಯ ತಪ್ಪಲಿನಲ್ಲಿ ಒಂದು ಊರಿದೆ. ಅಲ್ಲಿಂದ ಮುಂದೆ ಅದೇ ದಾರಿಯಲ್ಲಿ ಮತ್ತೆ ನೇರವಾಗಿ ನಡೆದರೆ ಹಾನಗಲ್ಲು ಸಿಕ್ಕುತ್ತದೆ. ಬಹಳ ದೂರದ ಹಾದಿಯಮ್ಮ ಅದು" ತನಗೆ ತಿಳಿದಷ್ಟನ್ನು ವಿವರಿಸಿದ ಆತ.

"ತುಂಬಾ ವಂದನೆಗಳು ಅಣ್ಣಾ. ನಿಮಗೆಲ್ಲರಿಗೂ ನನ್ನ ನಮಸ್ಕಾರಗಳು. ನಾನು ಬರುತ್ತೇನೆ" – ಎಂದು ಹೇಳುತ್ತಾ ಹೊರಟೇಬಿಟ್ಟಳು ಮಹಾದೇವಿ. ಏನು ಹೇಳುವುದಕ್ಕೂ ತೋಚದೆ ಈ ನಾಲ್ವರೂ ಅಲ್ಲಿಯೇ ನಿಂತು ಅವಳನ್ನೇ ನೋಡುತ್ತಿದ್ದರು.

೪

ಆ ಹಳ್ಳಿಯನ್ನು ಬಿಟ್ಟು ಸುಮಾರು ಒಂದು ತಾಸು ನಡೆದನಂತರ, ರಸ್ತೆ ನೇರವಾಗಿ ಉತ್ತರದ ಕಡೆಗೆ ತಿರುಗುತ್ತಿತ್ತು. ಅಲ್ಲಿ ಒಂದು ಮರದ ಕೆಳಗೆ ಕುಳಿತು ಸ್ವಲ್ಪ ಕಾಲ ವಿಶ್ರಮಿಸಿಕೊಂಡು ಮತ್ತೆ ನಡೆಯತೊಡಗಿದಳು.

ಈಗ ಸೂರ್ಯ ಆಕಾಶದ ತುದಿಯ ಗೋಪುರದಿಂದ ಕೆಳಕ್ಕೆ ಇಳಿಯತೊಡಗಿದ್ದ. ಇದುವರೆಗೂ ಬೆನ್ನ ಮೇಲೆ ಬೀಳುತ್ತಿದ್ದ ಬಿಸಿಲು ಈಗ ಎಡಭಾಗದಿಂದ ಬಂದು ಮಹಾದೇವಿಯ ಮುಖಕ್ಕೆ ಬೀಳುತ್ತಿತ್ತು. ಆಗಾಗ ಮರದ ನೆರಳು ಬಂದು ಬಿಸಿಲನ್ನು ಮರೆಮಾಡುತ್ತಾ ಬಿಸಿಲು – ನೆರಳುಗಳ ಕಣ್ಣು ಮುಚ್ಚಾಲೆಯನ್ನು ನಡೆಸಿತ್ತು. ಒಮ್ಮೊಮ್ಮೆ ಒಂದು ಮೋಡದ ತುಂಡು ಮಲ್ಲಿಕಾರ್ಜುನನ ಕೃಪಾಹಸ್ತದಂತೆ ತೇಲಿಬಂದು, ಕೊಡೆ ಹಿಡಿಯುತ್ತಿತ್ತು. ಅದಾವುದನ್ನೂ ಲೆಕ್ಕಿಸದೆ ಮಹಾದೇವಿ ಮುಂದೆ ಮುಂದೆ ನಡೆಯುತ್ತಿದ್ದಳು. ಹೆಜ್ಜೆ ಹೆಜ್ಜೆಗೂ ಮಲ್ಲಿಕಾರ್ಜುನನ ಮಹಾಮನೆಯತ್ತ ನಡೆಯುತ್ತಿರುವ ಭಾವ ತುಂಬಿಬರುತ್ತಿತ್ತು.

ಒಂದೆರಡು ಹಳ್ಳಿಗಳು ಹಿಂದಾದುವು. ಈಗ ಸೂರ್ಯ ಇಳಿಮುಖವಾಗಿ ಆತನ ಪ್ರಖರತೆ ಕಡಿಮೆಯಾಗತೊಡಗಿತ್ತು.

ಮಹಾದೇವಿ ನಡೆಯುತ್ತಿದ್ದ ಮಾರ್ಗದಲ್ಲಿಯೂ ಪ್ರಕೃತಿ ತನ್ನ ರೂಪವನ್ನು ಕ್ರಮೇಣ ಬದಲಾಯಿಸಿಕೊಳ್ಳತೊಡಗಿದ್ದಳು. ಮರಗಿಡಗಳು ದಟ್ಟವಾಗುತ್ತಿದ್ದುವು. ತಾನು ದಾಟಬೇಕಾಗಿರುವ ಕಾಡಿನ ದಾರಿ ಇದೇ ಇರಬೇಕೆಂದು ಊಹಿಸಿದಳು. ಗುಡ್ಡದ ಆಚೆಯ ತಪ್ಪಲಿನಲ್ಲಿಯೇ ಒಂದು ಊರು ಇರುವುದೆಂದು ಹೇಳಿದುದನ್ನು ಜ್ಞಾಪಿಸಿಕೊಂಡು, ಕತ್ತಲಾಗುವುದರೊಳಗಾಗಿ ಗುಡ್ಡವನ್ನು ದಾಟಿ ಆ ಊರನ್ನು ಆತುರದಿಂದ ವೇಗವಾಗಿ ಗುಡ್ಡವನ್ನು ಏರತೊಡಗಿದಳು.

ಸುತ್ತುಸುತ್ತಾಗಿ ಹಾವಿನಂತೆ ಸುತ್ತಿಕೊಂಡು ಹಸಿರು ಮರಗಳ ನೆರಳಿನಲ್ಲಿ ಆ ಮಾರ್ಗ ಮುಂದುವರಿಯುತ್ತಿತ್ತು. ಮುಂದೆ ಹೋದಂತೆಲ್ಲಾ ಕಾಡು ದಟ್ಟವಾಗ ತೊಡಗಿತು. ಪ್ರಖರವಾದ ಬಿಸಿಲಿನ ಅನುಭವ ಮರೆಯಾಗಿ, ಕಾಡಿನ ಪ್ರಶಾಂತವಾದ ಗಂಭೀರ ವಾತಾವರಣವು ಮಹಾದೇವಿಯ ಮನಸ್ಸನ್ನು ತುಂಬಿತು.

ಎತ್ತರವಾದ ಮರಗಳ ಮರೆಯಲ್ಲಿ ಸೂರ್ಯ ಅಡಗಿ, ಆಗಾಗ ಮುಖವನ್ನು ತೋರಿಸುವಂತೆ ಕಾಣುತ್ತಿತ್ತು. ಗಂಭೀರವಾಗಿ ಮೌನದಿಂದ ಕಾಡು ಎತ್ತರವಾಗಿ ತಲೆಯೆತ್ತಿ ನಿಂತು ಏನನ್ನೋ ನಿರೀಕ್ಷಿಸುವಂತಿತ್ತು. ಅನೇಕ ಬಗೆಯ ಹಕ್ಕಿಗಳ ಹಿಂಡು, ಕಾಡಿನ ಮೌನವನ್ನು ಮಥಿಸುತ್ತಿತ್ತು.

ಒಂದು ಕಡೆ ಕೋಗಿಲೆ ಕುಹೂ ಎಂದರೆ, ಇನ್ನೊಂದು ಕಡೆಯಿಂದ ಸಿಳ್ಳು ಹಕ್ಕಿಯ ದೀರ್ಘವಾದ ನಾದ ಕೇಳಿಬರುತ್ತಿತ್ತು. ಮತ್ತೊಂದು ಕಡೆಯಲ್ಲಿ ಗಿಳಿಗಳು ಮಾತನಾಡುವಂತೆ ತೋರುತ್ತಿದ್ದವು. ದೂರದಲ್ಲೆಲ್ಲೋ ಒಂದು ರೀತಿಯ ದೀರ್ಘವಾದ ಕೂಜನ ಕೇಳಿಬರುತ್ತಿತ್ತು. ಬಹುಶಃ ಅದು ನವಿಲಿನದಿರಬೇಕೆಂದುಕೊಂಡಳು ಮಹಾದೇವಿ.

ಕಾಡಿನ ಸೌಂದರ್ಯವನ್ನು ಸವಿಯುತ್ತಾ ಮಹಾದೇವಿ ಮುಂದುವರಿಯುತ್ತಿದ್ದಳು : ಮೇಲುಮೇಲಕ್ಕೇರತೊಡಗಿದಳು. ಗುಡ್ಡದ ತುದಿಗೆ ಬರುವ ವೇಳೆಗೆ ದೇಹ ಆಯಾಸಗೊಂಡಿದ್ದರೂ, ವಯಸ್ಸಿನ ಉಲ್ಲಾಸ ಅದನ್ನು ತೊಡೆದುಹಾಕಿ ಚೈತನ್ಯವನ್ನು ಕೊಟ್ಟಂತಿತ್ತು.

ಕೆಳಗಡೆ ಕಣಿವೆಯಲ್ಲಿ ಬೆಳೆದುನಿಂತ ಮರಗಿಡಗಳು, ಹಸುರಿನ ಹೊಳೆಯಂತೆ ಸಾಲುಸಾಲಾಗಿ ಹರಡಿದ್ದುವು. ದೂರದ ಇನ್ನೊಂದು ಗುಡ್ಡದ ಮರೆಯನ್ನು ಅವಲಂಬಿಸುವಂತೆ ಸೂರ್ಯ ಅತ್ತ ಇಳಿಯುತ್ತಿದ್ದ. ಸಂಜೆಯ ಹೊಂಬೆಳಗಿನ ಅವನ ಕಿರಣಗಳು ಹಸಿರು ಪ್ರವಾಹವನ್ನು ತಾಗಿ ಪಚ್ಚೆಯ ರತ್ನಕ್ಕೆ ಚಿನ್ನದ ಮೆರುಗನ್ನು ಕೊಟ್ಟಂತೆ ಹೊಳೆಯುತ್ತಿತ್ತು.

ಸಂಜೆಯೊಳಗಾಗಿ ಗುಡ್ಡವನ್ನು ಇಳಿಯಬೇಕೆಂಬ ಆತುರ ಮಹಾದೇವಿಗಿದ್ದರೂ ಒಂದು ಕ್ಷಣಕಾಲ ಆ ಗುಡ್ಡದ ನೆತ್ತಿಯ ಮೇಲೆ ಕುಳಿತುಕೊಳ್ಳಬೇಕೆನಿಸಿತು. ಅಲ್ಲಿ ಕುಳಿತು ಸುತ್ತಲೂ ನೋಡಿದಳು :

ಈ ಒಂದು ಚಿಕ್ಕ ಗುಡ್ಡವೇ ಇಂತಹ ಪ್ರಕೃತಿ ಸೌಂದರ್ಯವನ್ನೊಳಗೊಂಡಿದೆ. ಇನ್ನು ಆ ಶ್ರೀಶೈಲದ ಮಲ್ಲಿಕಾರ್ಜುನನ ಸುತ್ತ ಎಂತಹ ಸೌಂದರ್ಯದ ತೋರಣವನ್ನು ಕಟ್ಟಿದ್ದಾಳೆಯೋ ಪ್ರಕೃತಿ ಮಾತೆ – ಎನ್ನುತ್ತಾ ಗುರುಲಿಂಗರಿಂದ ತಾನು ಕೇಳಿದ್ದ ಶ್ರೀಶೈಲದ ಚಿತ್ರವನ್ನು ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿದಳು.

ಶ್ರೀಶೈಲದ ಸ್ಮರಣೆಯಿಂದ, ಅವಳ ಮನಸ್ಸು ಉದ್ವೇಗಗೊಂಡಿತು :

'ಅಲ್ಲಿರುವ ಮಲ್ಲಯ್ಯ ಇಲ್ಲಿಯೂ ಇಲ್ಲವೇ ? ನನಗೇಕೆ ಮುಖ ತೋರಿಸನು? ಚೆನ್ನಮಲ್ಲಿಕಾರ್ಜುನಾ ನೀನು ಸರ್ವಭರಿತವಾಗಿ ನನಗೇಕೆ ಮುಖವನ್ನು ತೋರಿಸಲೊಲ್ಲೆ ? ನಿನಗಾಗಿ ಹಂಬಲಿಸಿ ಹಲುಬುತ್ತಾ ಹೊರಟಿರುವ ನನ್ನನ್ನು ನೀನೇಕೆ ಕಾಣಲೊಲ್ಲೆ ? ಎಲ್ಲಿ ಅಡಗಿಕೊಂಡಿರುವೆ ? ಇದೇ ಶ್ರೀಗಿರಿಯೆಂದು ಭಾವಿಸಿ ಇಲ್ಲಿಯೇ ನೀನು ಮೈದೋರಬಾರದೇ..." ಎಂದು ಮುಂತಾಗಿ ಮೊರೆಯಿತು ಅವಳ ಮನಸ್ಸು.

ಅಷ್ಟರಲ್ಲಿ ಅವಳ ವಿರಹದ ದುಃಖವನ್ನು ಸಂತೈಸುವಂತೆ ಹತ್ತಿರದ ಪೊದೆಯ ಮರೆಯಿಂದ ನವಿಲೊಂದು ಹೊರಬಿದ್ದು ಕೂಗುತ್ತಾ ಓಡಿಹೋಯಿತು. ಅದೇ ವೇಳೆಗೆ ನಾಲ್ಕಾರು ಗಿಳಿಗಳ ಒಂದು ಗುಂಪು ಮರದ ಮೇಲಿಂದ ಹಾರಿ ತಮ್ಮ ಗೂಡಿನತ್ತ ಮುಖವಿಡುವಂತೆ ಓಡಿದವು. ಇತರ ಹಕ್ಕಿಗಳ ಶಬ್ದಗಳು ಕಿವಿಯ ಮೇಲೆ ಬೀಳುತ್ತಿದ್ದವು. ಮರದ ಮೇಲೆ ಅರಳಿರುವ ಹೂಗಳ ಮೇಲೆ ಕುಳಿತು ಝೇಂಕರಿಸಿ ಹಾರುತ್ತಿರುವ ದುಂಬಿಗಳ ನಾದವಂತೂ ಕಿವಿಯನ್ನು ತುಂಬುವಂತಿತ್ತು. ತನ್ನ ದುಃಖವನ್ನು ಅವುಗಳ ಮುಂದಾದರೂ ತೋಡಿಕೊಳ್ಳಬೇಕೆನಿಸಿತು ಮಹಾದೇವಿಗೆ.

ಚಿಲಿಪಿಲಿಯೆಂದೋದುವ ಗಿಳಿಗಳಿರಾ ! ನೀವು ಕಾಣಿರೆ, ನೀವು ಕಾಣಿರೆ?
ಸರವೆತ್ತಿ ಪಾಡುವ ಕೋಗಿಲೆಗಳಿರಾ ! ನೀವು ಕಾಣಿರೆ, ನೀವು ಕಾಣಿರೆ ?
ಮೊರೆದು ಬಂದಾಡುವ ತುಂಬಿಗಳಿಗಾ ! ನೀವು ಕಾಣಿರೆ, ನೀವು ಕಾಣಿರೆ?
ಕೊಳನ ತಡಿಯೊಳಾಡುವ ಅಂಚೆಗಳಿರಾ ! ನೀವು ಕಾಣಿರೆ, ನೀವು ಕಾಣಿರೆ ?
ಚೆನ್ನ ಮಲ್ಲಿಕಾರ್ಜುನನೆಲ್ಲಿರ್ದಿಹನೆಂದು ಬಲ್ಲೊಡನೆ ನೀವು ಹೇಳಿರೆ; ನೀವು ಹೇಳಿರೆ.

ಎಂದು ಹಾಡಿದಳು.

'ಹೇ, ಪ್ರಕೃತಿ ಮಾತೆ, ನಿನ್ನ ಸೌಂದರ್ಯದ ಮುಖದಲ್ಲಿಯಾದರೂ ಆತನನ್ನು ತೋರಿಸು' ಎಂದು ಬೇಡಿಕೊಳ್ಳುವಂತೆ ಕ್ಷಣಕಾಲ ಕಣ್ಣು ಮುಚ್ಚಿ ಧ್ಯಾನಾಸಕ್ತಳಾದಳು. ಮತ್ತೆ ಕಣ್ದೆರೆದಳು. ಸೂರ್ಯನು ದಿಗಂತದ ಅಂಚಿನಲ್ಲಿ ಅಡಗಿ ಮರೆಯಾಗುವ ಆತುರದಿಂದ ಕೆಳಗೆ ಇಳಿಯುತ್ತಿದ್ದ. ತನ್ನ ಮುಂದಿರುವ ಮಾರ್ಗವನ್ನು ನೆನೆದು ಮೇಲೆದ್ದಳು. ಮುಂದಿನ ದಾರಿ ಅವಳನ್ನು ಗುಡ್ಡದಿಂದ ಕೆಳಕ್ಕೆ ಇಳಿಸತೊಡಗಿತು.

ಗುಡ್ಡದ ಬುಡಕ್ಕೆ ಬರುವ ವೇಳೆಗೆ ಸೂರ್ಯನಾಗಲೇ ಮುಳುಗಿ ಕತ್ತಲೆಯ ಮೊತ್ತ ಭೂಮಿಯನ್ನು ಮುತ್ತಲಾರಂಭಿಸಿತ್ತು. ಆತಿ ಹತ್ತಿರದಲ್ಲಿಯೇ ಒಂದು ಊರು ಇರುವುದನ್ನು ಗುಡ್ಡದ ಮೇಲಿಂದ ಇಳಿಯುತ್ತಿರುವಾಗಲೇ ಕಂಡಿದ್ದ ಮಹಾದೇವಿ ತನ್ನ ಹೆಜ್ಜೆಗಳ ವೇಗವನ್ನು ಅಧಿಕಗೊಳಿಸಿದಳು. ಊರಕಡೆಯಿಂದ ನಾಯಿಗಳ ಬೊಗಳುವಿಕೆ ಕೇಳಿಬರುತ್ತಿತ್ತು. ಅಲ್ಲಲ್ಲಿ ದೀಪಗಳು ಸಣ್ಣಗೆ ಮಿನುಗುತ್ತಿದ್ದವು.

ಮಹಾದೇವಿ ಊರನ್ನು ಪ್ರವೇಶಿಸಿದಳು... ಆದರೆ ಈ ಊರಿನಲ್ಲಿ ತಾನು ಎಲ್ಲಿರಬೇಕು. ಈ ರಾತ್ರಿಯನ್ನು ಕಳೆಯುವುದು ಹೇಗೆ ? ಶಿವಮ್ಮ ಅಪರ್ಣೆಯರ ವಾತ್ಸಲ್ಯದ ಉಪಚಾರದನಂತರ ಹೊಟ್ಟೆಗೆ ಏನನ್ನೂ ಹಾಕಿರಲಿಲ್ಲ. ಅದರಿಂದ ಕೋಪಗೊಂಡ ಉದರಾಗ್ನಿ ತನ್ನ ಪ್ರತಿಕ್ರಿಯೆಯನ್ನು ತೋರಿಸತೊಡಗಿತ್ತು.

'ಊಟ ಉಪಚಾರಕ್ಕೇನು ಮಾಡುತ್ತೀ ?' ಎಂದು ಮುಂತಾಗಿ ಕೇಳಿದ ತನ್ನ ತಾಯಿಗೆ ಕೊಟ್ಟ ಉತ್ತರ, ಅವಳ ಮನಸ್ಸಿನ ಮುಂದೆ ಸುಳಿಯಿತು ; 'ಹಸಿವಾದರೆ ಭಿಕ್ಷಾನ್ನಗಳುಂಟು ; ತೃಷೆಯಾದರೆ ಕೆರೆ ಹಳ್ಳ ಬಾವಿಗಳುಂಟು. ಶಯನಕ್ಕೆ ಹಾಳು ದೇಗುಲವುಂಟು. ಚೆನ್ನಮಲ್ಲಿಕಾರ್ಜುನಯ್ಯ ಆತ್ಮ ಸಂಗಾತಕ್ಕೆ ನೀನೆನಗುಂಟು.'

'ನಿಜ ಈ ಮಾತನ್ನು ನೆನ್ನೆ ಹೇಳಿದೆ. ಇಂದು ಅದನ್ನು ಸಾಧಿಸಿ ತೋರಿಸಬೇಕಾಗಿದೆ' ಎಂದುಕೊಂಡಳು.

ಆದರೆ ಹೇಳುವಷ್ಟು ಸುಲಭವಲ್ಲ ಸಾಧಿಸಿ ತೋರಿಸುವುದು ; ಎಂಬ ಅನುಭವ ಮಹಾದೇವಿಗೆ ಇಂದು ಬರತೊಡಗಿತ್ತು. ಕಷ್ಟದ ಕಲ್ಪನೆಯನ್ನೇ ಕಂಡರಿಯದೆ, ತಂದೆತಾಯಿಗಳ ಮುದ್ದುಮಗಳಾಗಿ ಬೆಳೆದ ಮಹಾದೇವಿಗೆ ಇಂತಹ ಅನುಭವ ತೀರಾ ಹೊಸದು. ಆದರೂ ಅದೆಲ್ಲವನ್ನೂ ಎದುರಿಸಲು ಸಿದ್ಧವಾಗಿಯೇ ಬಂದಿದ್ದಳು.

ಊರಿನ ಪ್ರಮುಖ ಬೀದಿಯಲ್ಲಿ ನಿಧಾನವಾಗಿ ನಡೆದುಹೋಗುತ್ತಿದ್ದಳು. ಊರೇನು ಅಷ್ಟು ದೊಡ್ಡದಾಗಿರದಿದ್ದರೂ ತೀರಾ ಚಿಕ್ಕ ಹಳ್ಳಿಯೂ ಅತ್ತ ಎಂಬುದನ್ನು ಕಂಡುಕೊಂಡಳು.

ಬೀದಿಯ ಅಕ್ಕಪಕ್ಕದಲ್ಲಿದ್ದ ದೀಪಗಳು ಮಂದ ಪ್ರಕಾಶವನ್ನು ಬೀದಿಯ ಮೇಲೆ ಬೀರುತ್ತಿದ್ದವು. ಆ ಬೀದಿ ಊರಿನ ಇನ್ನೊಂದು ಕೊನೆಗೆ ತಂದು ಬಿಟ್ಟಿತು ಮಹಾದೇವಿಯನ್ನು. ಊರಿನ ಪಶ್ಚಿಮ ಭಾಗವನ್ನು ಬಳಸಿಕೊಂಡು ಬಂದ ಕೆರೆ ಅಲ್ಲಿ ಕೊನೆಗೊಳ್ಳುತ್ತಿತ್ತು. ಆ ಕೆರೆಯ ಏರಿಯ ಮೇಲೆ ಒಂದು ದೇವಾಲಯ ಕಾಣುತ್ತಿತ್ತು. ಆ ದೇಗುಲ ಇಂದು ತನ್ನ ಆಶ್ರಯಸ್ಥಾನವಾಗಬಹುದೆಂದು ಆಲೋಚಿಸಿ ಮಹಾದೇವಿ ಅತ್ತ ನಡೆದಳು.

ದೇವಾಲಯದ ಗರ್ಭಗೃಹ ಚಿಕ್ಕದಾಗಿದ್ದರೂ ಅದರ ಮುಂದಿದ್ದ ವಿಸ್ತಾರವಾದ ಕಟ್ಟಡ, ಅನಿರೀಕ್ಷಿತವಾಗಿ ಬಂದ ಪ್ರವಾಸಿಗರ ಅನುಕೂಲಕ್ಕಾಗಿಯೇ ನಿರ್ಮಿತವಾದಂತೆ ತೋರುತ್ತಿತ್ತು. ಇಂದಿನ ರಾತ್ರಿಯನ್ನು ಇಲ್ಲಿ ಕಳೆಯಬಹುದೆಂಬ ತೃಪ್ತಿಯಿಂದ ಮಹಾದೇವಿ ಅಲ್ಲಿ ಹೋಗಿ ಕುಳಿತುಕೊಂಡಳು.

ಆಯಾಸಗೊಂಡಿದ್ದ ಕಾಲುಗಳಿಗೆ ಆ ವಿಶ್ರಾಂತಿ ಹಿತಕರವಾಗಿತ್ತು.

ಆದರೆ ಬರಿದಾಗಿದ್ದ ಹೊಟ್ಟೆ ಮಾತ್ರ, ಆಕ್ರೋಶವನ್ನು ಪ್ರಾರಂಭಿಸಿತು.

"ಹೋಗು ಈ ಊರಿನಲ್ಲಿ ನಿನ್ನ ಹೊಟ್ಟೆಗೆ ಒಂದು ಹಿಡಿ ಅನ್ನ ಸಿಕ್ಕಲಾರದೆ?" ಎಂದಿತು ಒಂದು ಮನಸ್ಸು.

"ಆದರೆ ಭಿಕ್ಷೆಯನ್ನು ಬೇಡುವುದು ಹೇಗೆ ?"

"ಹೇಗೆ ! ಹೇಗೆ ಎನ್ನುತ್ತೀಯ ? ಹೆತ್ತ ತಂದೆತಾಯಿಗಳನ್ನು ನಿಷ್ಠುರದಿಂದ ಬಿಟ್ಟು ಬರುವಷ್ಟು ಕಲ್ಲು ಮನಸ್ಸಿನವಳಾದ ನಿನಗೆ, ಭಿಕ್ಷೆಯನ್ನು ಬೇಡಬಾರದೆಂಬ ಅಭಿಮಾನ ಕಾಡುತ್ತಿದೆಯೆ ? ಇದೇ ಅಭಿಮಾನ ನಿನಗಿದ್ದರೆ ಕಲ್ಯಾಣದವರೆಗೂ ಹೇಗೆ ನಡೆಯಬಲ್ಲೆ ? ಹೊಟ್ಟೆ ತುಂಬಬೇಕಾದರೆ ಭಿಕ್ಷೆ ಬೇಡಲೇ ಬೇಕು" ಎಂದು ಹೊರಟಳು ಭಿಕ್ಷೆ ಬೇಡಲು.

"ಆದರೆ ಭಿಕ್ಷೆ ದೊರಕದೆ ಅವಮಾನವಾದರೆ ?" ಅಭಿಮಾನ ಶಂಕಿಸಿತು.

"ಹೌದು. ಅಹಂಕಾರ ಅಳಿಯಲೇಬೇಕು. ಕಲ್ಯಾಣದ ಕಡೆಗೆ ಹೋಗಲು ಈ ದೇಹ ಬದುಕಬೇಕು. ಆದರೆ ಈ ದೇಹದ ಅಭಿಮಾನ ಸಾಯಬೇಕು. ಚೆನ್ನಮಲ್ಲಿಕಾರ್ಜುನಾ, ನನ್ನ ಅಹಂಕಾರ ಬೆಳೆಯುವುದಕ್ಕೆ ಅವಕಾಶವಾಗದಂತೆ, ಪರಿಪರಿಯ ಕಷ್ಟಗಳನ್ನು ಕೊಟ್ಟು ನನ್ನನ್ನು ಪರೀಕ್ಷಿಸು.

ಮನೆ ಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ,
ಬೇಡಿದೊಡೆ ನೆಲಕ್ಕೆ ಬೀಳುವಂತೆ ಮಾಡಯ್ಯ,
ನೆಲಕ್ಕೆ ಬಿದ್ದೊಡನೆ ನಾನೆತ್ತಿಕೊಂಬುದಕ್ಕೆ ಮುನ್ನವೆ
ಶುನಿ ಎತ್ತಿಕೊಂಬಂತೆ ಮಾಡಯ್ಯ ಚೆನ್ನಮಲ್ಲಿಕಾರ್ಜುನಯ್ಯ.

ಎಂದು ಆತ್ಮದ ಅಹಂಕಾರವಳಿಯುವುದಕ್ಕೆ ಸಾಂಕೇತಿಕವಾದ ವಚನವನ್ನು ಹೇಳಿಕೊಳ್ಳುತ್ತಾ ದೇವಾಲಯದಿಂದ ಎದ್ದು ಊರ ಕಡೆ ನಡೆಯತೊಡಗಿದಳು.

ಹಿಂದೆ ತಾನು ನಡೆದು ಬಂದ ಮುಖ್ಯಬೀದಿಯನ್ನು ಬಿಟ್ಟು ಅದರ ಪಕ್ಕದ ಒಂದು ಓಣಿಯನ್ನು ಪ್ರವೇಶಿಸಿದಳು ಭಿಕ್ಷೆಯನ್ನು ಬೇಡುವುದಕ್ಕಾಗಿ.

'ಬೇಡಿದೊಡೆ ಇಕ್ಕದಂತೆ ಮಾಡಯ್ಯ' ಎಂದುಕೊಂಡು ಹೋಗಿದ್ದರೂ ಬೇಡಿದ ಮೊದಲನೆಯ ಮನೆಯಲ್ಲಿಯೇ ಸಾಕಷ್ಟು ಆಹಾರ ಆಕೆಗೆ ದೊರೆಯಿತು. ಒಂದು ಎಲೆಯಲ್ಲಿ ಹಾಕಿಕೊಟ್ಟ ಅದನ್ನು ತೆಗೆದುಕೊಂಡು, ಕೆರೆಯ ದಂಡೆಯ ಕಡೆಗೆ ನಡೆದಳು.

ಅಲ್ಲಿ ಮುಖವನ್ನು ತೊಳೆದುಕೊಂಡು, ಮಲ್ಲಿಕಾರ್ಜುನನನ್ನು ಸ್ಮರಿಸಿ ಅವನಿಗೆ ಅದನ್ನು ನೈವೇದ್ಯಮಾಡಿ, ಆ ಪ್ರಸಾದವನ್ನು ಭುಂಜಿಸಿದಳು. ಹೊಟ್ಟೆಯ ಕರೆ ತಾತ್ಕಾಲಿಕವಾಗಿ ಶಾಂತವಾಯಿತು. ಅನ್ನದೇವರ ಮಹತ್ವವನ್ನು ನೆನೆಯುತ್ತಾ ಮೆಟ್ಟಲುಗಳನ್ನೇರಿ ಬಂದು, ಕೊನೆಯ ಮೆಟ್ಟಲಿನ ಕಲ್ಲುಪೀಠದ ಮೇಲೆ ಕುಳಿತಳು ಮಹಾದೇವಿ.

ಹಸಿವು ಅಡಗಿ ಮನಸ್ಸು ಸ್ವಲ್ಪ ನೆಮ್ಮದಿಯಾಗಿತ್ತು. ತಲೆಯೆತ್ತಿ ನೋಡಿದಳು. ಲಕ್ಷಾಂತರ ನಕ್ಷತ್ರಗಳು ಕಿಕ್ಕಿರಿದು ಮಿನುಗುತ್ತಿದ್ದವು. ಅವುಗಳ ಮಂದ ಪ್ರಕಾಶದಲ್ಲಿ ಕೆರೆಯ ನೀರು ಹೊಗೆ ಹತ್ತಿದ ದರ್ಪಣದಂತೆ ಮಬ್ಬುಮಬ್ಬಾಗಿ ಹೊಳೆಯುವ ನಕ್ಷತ್ರಗಳನ್ನು ಪ್ರತಿಬಿಂಬಿಸಲು ಪ್ರಯತ್ನಿಸುತ್ತಿತ್ತು. ಮಧ್ಯಾಹ್ನದ ಉರಿಬಿಸಿಲು ಪರಿಹಾರವಾದುದನ್ನು ಕಂಡು ಭೂದೇವಿಯು ಸಮಾಧಾನದ ನಿಟ್ಟುಸಿರು ಬಿಡುವಂತೆ ಗಾಳಿ ಮೆಲ್ಲಮೆಲ್ಲನೆ ಬೀಸುತ್ತಿತ್ತು.

ಮಹಾದೇವಿ ಸ್ವಲ್ಪ ಹೊತ್ತು ಅಲ್ಲಿಯೇ ಕುಳಿತಿದ್ದಳು. ಈ ಒಂದೆರಡು ದಿನಗಳ ಘಟನೆಗಳೆಲ್ಲಾ ಅವಳ ಮನಸ್ಸಿನ ಮುಂದೆ ಸುಳಿಸುಳಿದು ಸುತ್ತಿ ಮಾಯವಾದವು. ಇನ್ನು ತನ್ನ ಮುಂದಿರುವ ಮಹತ್ತರವಾದ ಮಾರ್ಗವನ್ನು ನೆನೆದು 'ಅದೆಲ್ಲವನ್ನೂ ಎದುರಿಸಿ ಗುರಿಯನ್ನು ಮುಟ್ಟಲು ಶಕ್ತಿಯನ್ನು ಕೊಡು' ಎಂದು ತನ್ನ ಪತಿಯ ಮೊರೆಹೊಕ್ಕು ಮೇಲೆದ್ದಳು.

ಊರಿನಲ್ಲೆಲ್ಲಾ ಆಗಲೆ ಸದ್ದು ಅಡಗುತ್ತಿತ್ತು. ಮೌನ ವ್ಯಾಪಿಸುತ್ತಿತ್ತು. ಮಹಾದೇವಿ ಎದ್ದು ದೇವಾಲಯದ ಕಡೆಗೆ ನಡೆಯತೊಡಗಿದಳು.

ದೇವಾಲಯದ ಗರ್ಭಗೃಹದಲ್ಲಿದ್ದ ನಂದಾದೀಪ ತನ್ನ ಮಂದವಾದ ಬೆಳಕನ್ನು ಹೊರಗೆ ಚೆಲ್ಲುತ್ತಿತ್ತು. ಅದರ ಬೆಳಕಿನಲ್ಲಿ ಮಹಾದೇವಿ ಅಲ್ಲಿ ಯಾರೋ ಮಲಗಿರುವುದನ್ನು ಗಮನಿಸಿದಳು. ತಾನು ಮೊದಲು ಬಂದಾಗ ಅವರು ಇಲ್ಲಿ ಇರಲಿಲ್ಲ. ಯಾರೋ ಪ್ರಯಾಣಿಕರಿರಬಹುದೆಂದು ಭಾವಿಸಿ ಮಹಾದೇವಿ ಇನ್ನೊಂದು ಮೂಲೆಯ ಕಡೆಗೆ ಹೋಗಿ ಅಲ್ಲಿ ಮಲಗುವ ಏರ್ಪಾಡನ್ನು ಮಾಡತೊಡಗಿದಳು.

ಎಲ್ಲಿ ತಲೆಯಿಟ್ಟಳೋ ಅದೇ ತಲೆದಿಂಬಾಯಿತು. ಎಲ್ಲಿ ಮೈಯಿಟ್ಟಳೋ ಅದೇ ಹಾಸುಗೆಯಾಯಿತು. ಆದರೆ ಅಲ್ಲಿ ನೆಲ ತುಂಬಾ ಒರಟಾಗಿ ಉಬ್ಬು ತಗ್ಗುಗಳಿಂದ ಕೂಡಿದ್ದನ್ನು ಕಂಡು ಮೇಲೆದ್ದು ಸ್ವಲ್ಪ ಸಮಮಟ್ಟದ ನೆಲವನ್ನು ಹುಡುಕಲು ಹವಣಿಸುತ್ತಿದ್ದಳು.

ಅಷ್ಟರಲ್ಲಿ ಅಲ್ಲಿ ಮಲಗಿದ್ದ ವ್ಯಕ್ತಿ ಅಲುಗಾಡಿದಂತೆ ತೋರಿತು. ಆಕೆಯನ್ನೇ ನೋಡುತ್ತಿದ್ದ ಆತ ಎದ್ದು ಕುಳಿತ. ಬಳಿಗೆ ಬಂದು ದಿಟ್ಟಿಸಿ ನೋಡಿದ.

ಮಹಾದೇವಿಯೂ ನೋಡಿದಳು. ಬಹುಶಃ ಮಧ್ಯವಯಸ್ಸನ್ನು ಸಮೀಪಿಸುತ್ತಿದ್ದ ಆತ ಕಾವಿಯನ್ನು ಹಾಕಿದ್ದ. ಕೈಯಲ್ಲಿ ಯೋಗದಂಡವೂ ಇತ್ತು. ಆತನೇ ಕೇಳಿದ : "ಯಾರಮ್ಮ ನೀನು?"

"ನಾನೊಬ್ಬ ಪ್ರಯಾಣಿಕಳು, ಸ್ವಾಮಿ. ಈ ರಾತ್ರಿ ಇಲ್ಲಿ ಉಳಿದು ಮುಂದೆ ಪ್ರಯಾಣ ಮಾಡಬೇಕಾಗಿದೆ. ತಾವು..."

"ಹೌದು, ನಾನೂ ಹಾಗೆಯೇ ಒಬ್ಬ ಪ್ರಯಾಣಿಕ" ಎನ್ನುತ್ತಾ ಆಕೆಯನ್ನೇ ದಿಟ್ಟಿಸಿ ನೋಡತೊಡಗಿದ.

"ಅಲ್ಲಿ ನೆಲ ತುಂಬ ಹಾಳಾಗಿದೆ. ಈ ಕಡೆ ಬಾ. ಹಾಸಿಕೊಳ್ಳುವುದಕ್ಕೆ ಏನೂ ಇಲ್ಲವೇ ? ನನ್ನ ಬಳಿ ಒಂದು ವಸ್ತ್ರ ಇದೆ ಕೊಡಲೇ ?" ಉಪಚರಿಸಿದ ಕರುಣೆಯಿಂದಲೆಂಬಂತೆ.

"ಬೇಡಿ ಸ್ವಾಮಿ, ಏನೂ ಬೇಡಿ." – ಮಹಾದೇವಿ ಕೃತಜ್ಞತೆ ವ್ಯಕ್ತಪಡಿಸಿದಳು.

"ಪಾಪ ! ನಿನಗೆ ಇದೆಲ್ಲಾ ಅಭ್ಯಾಸವಿದ್ದಂತಿಲ್ಲ. ಕೋಮಲವಾದ ದೇಹ ಬರೀ ನೆಲದ ಮೇಲೆ ಹೇಗೆ ಮಲಗುತ್ತದೆ ?" ಎಂದು ನಕ್ಕ.

"ಸಾಧಕ ಅದನ್ನೆಲ್ಲಾ ಸಹಿಸಿಕೊಳ್ಳಬೇಕಾಗುತ್ತದೆಯಲ್ಲವೆ, ಸ್ವಾಮಿ."– ಮುಗ್ಧವಾಗಿ ಹೇಳಿದಳು.

ನಿಧಾನವಾಗಿ ತನ್ನ ಸ್ಥಳಕ್ಕೆ ಹೋದ ಆತ. ಮಹಾದೇವಿ ಕುಳಿತೇ ಇದ್ದಳು. ಗರ್ಭಗೃಹದ ನಂದಾದೀಪ ಕ್ರಮೇಣ ನಂದತೊಡಗಿತು. ಇದ್ದ ಸ್ವಲ್ಪ ಬೆಳಕು ಮರೆಯಾಯಿತು. ಎಣ್ಣೆಯ ಕಮಟುವಾಸನೆ ಕ್ಷಣಕಾಲ ಆ ಸ್ಥಳವನ್ನು ಆಕ್ರಮಿಸಿತು.

ನಕ್ಷತ್ರಗಳ ಮಬ್ಬು ಬೆಳಕಿನ ಹೊರತಾಗಿ ಸುತ್ತಲೂ ಕತ್ತಲು ಆವರಿಸಿತು. ಆಯಾಸದಿಂದ ದಣಿದ ಮಹಾದೇವಿ ಹಾಗೆಯೇ ಮಗ್ಗುಲಾದಳು. ಒರಟು ನೆಲ ಒತ್ತುತ್ತಿತ್ತು. ಎಂದೂ ಇಂತಹದನ್ನು ಕಂಡರಿಯದ ದೇಹ, ಇದಕ್ಕೆ ಒಗ್ಗಿಕೊಳ್ಳಲು ತುಂಬಾ ಕಷ್ಟಪಡುತ್ತಿತ್ತು. ಅತ್ತ ಇತ್ತ ಹೊರಳುತ್ತ ನಿದ್ದೆಮಾಡಲು ಪ್ರಯತ್ನಿಸುತ್ತಿದ್ದಳು.

ಅಷ್ಟರಲ್ಲಿ ಇನ್ನೊಬ್ಬ ವ್ಯಕ್ತಿ ದೇವಾಲಯದ ಕಟ್ಟೆಯನ್ನು ಏರಿಬಂದಂತಾಯಿತು. ಮಹಾದೇವಿ ಮಲಗಿಕೊಂಡೇ ನೋಡಿದಳು. ಬಂದ ವ್ಯಕ್ತಿ ಸುತ್ತಲೂ ನೋಡಿ ದೇವಾಲಯದ ಮೆಟ್ಟಲುಗಳ ಬಳಿಯಲ್ಲಿಯೇ ಬಂದು ಒಂದು ಮೂಲೆಯಲ್ಲಿ ಆಶ್ರಯವನ್ನು ಪಡೆದು ಮಲಗಿದಂತೆ ತೋರಿತು.

ಸುತ್ತಲೂ ಮೌನ ತಾನೇತಾನಾಗಿ ಆವರಿಸಿತ್ತು. ಆಗೊಮ್ಮೆ ಈಗೊಮ್ಮೆ ಬೊಗಳುತ್ತಿದ್ದ ನಾಯಿಗಳು ಮೌನವನ್ನು ಮಥಿಸುತ್ತಿದ್ದವು.

ದಿನವೆಲ್ಲಾ ನಡೆದ ಆಯಾಸದ ಪರಿಣಾಮವಾಗಿ ಈ ಸ್ಥಿತಿಯಲ್ಲಿಯೂ ಮಹಾದೇವಿಗೆ ನಿದ್ರಾದೇವಿ ಪ್ರಸನ್ನಳಾಗುತ್ತಿರುವಂತೆ ತೋರುತ್ತಿತ್ತು. ಹಾಗೆಯೇ ಜೊಂಪುಹತ್ತಿತ್ತು.

ಅಷ್ಟರಲ್ಲಿ ಅವಳ ಕಿವಿಯ ಬಳಿಯಲ್ಲಿ ಯಾರೋ ಪಿಸುಗುಟ್ಟಿದಂತಾಯಿತು.

"ನಿದ್ದೆ ಬಂತೆ ?"

"ಯಾರದು ? – ಎಂದು ಕುಳಿತಳು ಮಹಾದೇವಿ.

"ನಾನು." – ಅವಳನ್ನು ಸ್ವಲ್ಪ ಕಾಲದ ಹಿಂದೆ ಮಾತನಾಡಿಸಿದ ವೇಷಧಾರಿ ಸನ್ಯಾಸಿ ಉನ್ಮತ್ತನಂತೆ ಅವಳ ಕೈಹಿಡಿಯಲು ಹೋದ.

ಮಹಾದೇವಿ ನೆಗೆದು ಹಿಂದಕ್ಕೆ ಸರಿಯುತ್ತಾ : "ಸರಿ ಹಿಂದಕ್ಕೆ. ಮೈ ಮೇಲೆ ಎಚ್ಚರವಿರಲಿ – ಮುಂದೆ ಬರಬೇಡ. ನೀನು ತೊಟ್ಟಿರುವ ವೇಷಕ್ಕಾದರೂ ಬೆಲೆ ಕೊಡು."

ವೇಷಧಾರಿ ಒಮ್ಮೆ ನಕ್ಕ.

"ಬೆಲೆ ! ಅದು ಹಗಲುಹೊತ್ತಿನಲ್ಲಿ. ಈಗ ಯಾರೂ ನೋಡುವುದಿಲ್ಲ, ಬಾ ಮುಂದಕ್ಕೆ..."

"ಛೀ ನಾಚಿಕೆಯಾಗುವುದಿಲ್ಲವೇ ನಿನಗೆ ?" ಎನ್ನುತ್ತಿದ್ದಂತೆ ಆತ ಇನ್ನೂ ಮುಂದುವರಿಯುತ್ತಾ :

"ನಾಚಿಕೆ ! – ಹುಂ... ಅದನ್ನು ಬೆಳಿಗ್ಗೆ ಹೇಳುತ್ತೇನೆ.... ಈಗ ಅದಕ್ಕೆಲ್ಲಾ ಸಮಯವಿಲ್ಲ..."

ಮಹಾದೇವಿ ಹಿಂದೆ ಹಿಂದೆ ಸರಿಯುತ್ತಾ :

"ಎಚ್ಚರ, ಒಂದು ಹೆಜ್ಜೆ ಮುಂದೆ ಇಟ್ಟೀಯೆ...."

"ಓಹೋ! ಹೆದರಿಸುತ್ತಿದ್ದೀಯೋ. ಇಟ್ಟರೆ ಏನು ?" ಎಂದು ಕೇಳುವುದಕ್ಕೂ, ಅವನ ತಲೆಯ ಮೇಲೆ ಬಲವಾದ ಒಂದು ಏಟು ಬೀಳುವುದಕ್ಕೂ ಸರಿಹೋಯಿತು.

"ಇಟ್ಟರೆ... ಇದೇ" ಎನ್ನುತ್ತಾ ಹಿಂದಿನಿಂದ ಬಂದ ವ್ಯಕ್ತಿ ಇನ್ನೊಂದೆರಡು ಏಟುಗಳನ್ನು ಕೊಟ್ಟಿತು. ಸ್ವಲ್ಪ ಹೊತ್ತಿನ ಹಿಂದೆ ಬಂದು ಮಲಗಿದ ವ್ಯಕ್ತಿಯೇ ಅದೆಂದು ಅರಿತಳು ಮಹಾದೇವಿ.

ಅನಿರೀಕ್ಷಿತವಾಗಿ ಆಘಾತದಿಂದ ತತ್ತರಿಸಿದ ವೇಷಧಾರಿ. ಆತನ ಕಾಮದ ಪಿತ್ತವೆಲ್ಲಾ ಒಂದೇ ಏಟಿಗೆ ಇಳಿದುಹೋಗಿತ್ತು. ಮತ್ತೂ ಎರಡು ಏಟುಗಳು ಬಿದ್ದುವು. ಅಪರಾಧದ ಹೊರೆಯನ್ನು ಹೊತ್ತು ಕಳೆಗುಂದಿದ ಆತ, ಈ ಸತ್ವಶಕ್ತಿಯ ಏಟನ್ನು ತಾಳಲಾರದೆ, ಬೆಂಕಿಯಲ್ಲಿ ಬಿದ್ದು ಮೈಸುಟ್ಟುಕೊಂಡ ನರಿಯಂತಾಗಿದ್ದ. ಅಲ್ಲಿದ್ದ ತನ್ನ ಸಾಮಗ್ರಿಗಳನ್ನೆಲ್ಲಾ ಬಾಚಿಕೊಂಡು ಓಡಿದ ದೇವಾಲಯದಿಂದ.

ಅನಿರೀಕ್ಷಿತವಾಗಿ ಬಂದ ವಿಪತ್ತಿನ ಹಿಂದೆ, ಅಷ್ಟೇ ಅನಿರೀಕ್ಷಿತವಾಗಿ ಬಂದ ಸಹಾಯಹಸ್ತವನ್ನು ಕಂಡು ಮಹಾದೇವಿ ಬೆರಗಾಗಿ ನಿಂತಿದ್ದಳು.

ಕೊನೆಗೆ ಹೇಳಿದಳು : "ತಮ್ಮ ಉಪಕಾರಕ್ಕೆ ತುಂಬಾ ಕೃತಜ್ಞಳಾಗಿದ್ದೇನೆ, ಸ್ವಾಮಿ. ತಾವು ಬಂದು ನನ್ನನ್ನು ಕಾಪಾಡಿದಿರಿ."

"ಇಲ್ಲ ಮಗಳೇ. ನಿನ್ನ ಸತೀಶಕ್ತಿಯೇ ನಿನ್ನನ್ನು ಕಾಪಾಡುತ್ತಿತ್ತು. ಅದಕ್ಕೆ ನಾನು ನೆಪಮಾತ್ರವಾದೆ, ಮಹಾದೇವಿ."

ಬಂದವರ ಧ್ವನಿಯಿಂದ ಮತ್ತು ಅವರು ತನ್ನನ್ನು ಗುರುತು ಕರೆದ ರೀತಿಯಿಂದ, ಮಹಾದೇವಿಯ ಮೈ ರೋಮಾಂಚನಗೊಂಡಿತು.

"ಆಂ !! ತಾವು..."

"ಹೌದು... ನಾನು ಮೊನ್ನೆಯ ದಿನ ಅರಮನೆಯಲ್ಲಿ ನಿನ್ನಿಂದ ಉಪಚಾರವನ್ನು ಪಡೆದ ಜಂಗಮ.... ಸಂಗಮದೇವರು."

ಮಹಾದೇವಿಗೆ ಸಂತೋಷವೋ, ದುಃಖವೋ, ಉದ್ವೇಗವೋ ಯಾವುದೂ ಅರಿಯದ ಭಾವನೆ ಉಕ್ಕಿಬಂದಿತು.

"ಸ್ವಾಮಿ, ಸಾಕ್ಷಾತ್ ಸಂಗಮದೇವರೇ ಬಂದಂತಾಯಿತು..." ಎಂದು ಅವರ ಕಾಲಮೇಲೆ ಕುಸಿದುಬಿದ್ದಳು. ಅವರು ಆಕೆಯನ್ನು ಮೇಲೆತ್ತಿದರು. ಕಣ್ಣಿಂದ ನೀರು ಸುರಿಯುತ್ತಿರುವುದನ್ನು ಆ ಮೊಬ್ಬು ಬೆಳಕಿನಲ್ಲಿಯೂ ಗಮನಿಸಿದರು. ಅವಳ ತಲೆಯನ್ನು ನೇವರಿಸುತ್ತಾ :

"ದುಃಖಿಸಬೇಡ, ಮಗಳೇ. ಪ್ರಪಂಚದ ಕಟುವಾದ ಅನುಭವವನ್ನು ಪಡೆಯುವುದಕ್ಕಾಗಿಯೇ ಹೊರಬಿದ್ದಿರುವ ನೀನು ಇದನ್ನೆಲ್ಲಾ ಎದುರಿಸ ಬೇಕಾಗುತ್ತದೆ."

"ಹೀಗೂ ಉಂಟೇ, ಗುರುಗಳೇ ? ಹಾಕಿರುವ ವೇಷಕ್ಕೂ ಆಚರಿಸುವ ವರ್ತನೆಗೂ ಸಂಬಂಧವೇ ಬೇಡವೇ ?"

"ಪ್ರಪಂಚ ನೀನು ತಿಳಿದಿರವಷ್ಟು ಸರಳವಾಗಿಲ್ಲಮ್ಮ. ಇದೊಂದು ಅನೇಕ ವೈಪರೀತ್ಯಗಳ ವಿಷಮಸಂಗಮ. ಒಂದು ಕಡೆಯಲ್ಲಿ ಮಾನವತೆ ಏರಬಹುದಾದ ಔನ್ನತ್ಯವನ್ನು ಕಂಡು ವಿಸ್ಮಯಮೂಕರಾಗುತ್ತೇವೆ. ಇನ್ನೊಂದು ಕಡೆಯಲ್ಲಿ ಅದು ನಮ್ಮ ಊಹೆಗೂ ನಿಲುಕಲಾರದಷ್ಟು ಕ್ಷುದ್ರತೆಯ ಪಾತಾಳಕ್ಕೆ ಇಳಿಯುವುದನ್ನು ಕಂಡು ವೇದನೆಗೊಳ್ಳುತ್ತೇವೆ. ಇದು ಅಂತಹ ಒಂದು ಘಟನೆಯೆಂದು ಭಾವಿಸಿ ಧೈರ್ಯವನ್ನು ತಾಳು. ನಿನ್ನ ನಿಷ್ಠೆಯೇ ನಿನ್ನನ್ನು ಕಾಯುತ್ತದೆ." – ಹೇಳಿದರು ಸಂಗಮದೇವರು.

"ನಿಜ, ಗುರುಗಳೇ. ಇಷ್ಟೊಂದು ಅನಿರೀಕ್ಷಿತವಾದ ರೀತಿಯಲ್ಲಿ ನೀವು ಇಲ್ಲಿಗೆ ಬಂದು ನನ್ನನ್ನು ಕಾಪಾಡಿದುದೇ ಅದಕ್ಕೆ ಸಾಕ್ಷಿ" ಮಹಾದೇವಿಯ ಧ್ವನಿಯಲ್ಲಿ ಕೃತಜ್ಞತೆ ತುಂಬಿ ತುಳುಕುತ್ತಿತ್ತು.

"ನನ್ನ ರೂಪದಿಂದಲ್ಲದಿದ್ದರೆ, ಇನ್ನಾವ ರೂಪದಿಂದಲೋ, ಇನ್ನಾವ ಶಕ್ತಿಯಿಂದಲೋ ನಿನ್ನ ಪತಿ ನಿನ್ನನ್ನು ಕಾಪಾಡುತ್ತಿದ್ದ ಮಗಳೆ, ಆ ಜಗತ್ಪತಿಯನ್ನೇ ನಂಬಿ ಅವನಿಗೆ ಸಾಕ್ಷಾತ್ ಸತಿಯಾಗಿರುವ ನಿನ್ನ ಸತೀತ್ವದ ತೇಜಸ್ಸು, ತನ್ನನ್ನು ತಾನು ರಕ್ಷಿಸಿಕೊಳ್ಳಬಹುದು. ಅದಕ್ಕೆ ಒಂದು ನೆಪ ಮಾತ್ರವೆಂಬಂತೆ ಬಂದೆ, ಅಷ್ಟೇ."

"ತಾವು ಇಲ್ಲಿಗೆ ಬಂದುದು ಹೇಗೆ, ಗುರುಗಳೇ !" ಮಹಾದೇವಿ ಕುತೂಹಲದಿಂದ ಕೇಳಿದಳು.

"ಅದು ಗುರುಲಿಂಗದೇವರ ಕರುಣೆಯಮ್ಮ" ಎಂದು ಪ್ರಾರಂಭಿಸಿ ನಡೆದುದನ್ನೆಲ್ಲಾ ಸಂಕ್ಷೇಪವಾಗಿ ಹೇಳಿದರು :

ನಿನ್ನೆ ಮಹಾದೇವಿ ಉಡುತಡಿಯನ್ನು ಬಿಟ್ಟು ಹೊರಟು ಬರುವಾಗ ಸಂಗಮ ದೇವರು ತಮ್ಮ ಜಂಗಮಶಿಷ್ಯರೊಂದಿಗೆ, ಪಕ್ಕದ ಹಳ್ಳಿಯ ಒಂದು ಬಿನ್ನಹಕ್ಕೆಂದು ಬೆಳಗ್ಗೆ ಅಷ್ಟು ಹೊತ್ತಿಗೇ ಹೋಗಿದ್ದರು. ರಾತ್ರಿ ಹಿಂದಿರುಗಿದಾಗ ಬೆಳಗ್ಗೆ ನಡೆದ ಅಪೂರ್ವವಾದ ಘಟನೆ ತಿಳಿಯಿತು. ಮಹಾದೇವಿ ಕಲ್ಯಾಣದತ್ತ ಹೊರಟುದನ್ನು ಗುರುಲಿಂಗದೇವರು ವಿವರವಾಗಿ ತಿಳಿಸಿದರು. ಕೊನೆಗೆ "ಒಬ್ಬಳೇ ಹೆಣ್ಣು ಮಗಳು. ಜೊತೆಗೆ ಯಾರಾದರೂ ಹೋಗಿದ್ದರೆ ಆಗುತ್ತಿತ್ತು" ಎಂದರು. ಆ ಮಾತಿನ ಅರ್ಥ ಸಂಗಮದೇವರಿಗೆ ಆಯಿತು. ಅಂತಹ ಭಾಗ್ಯ ತಮಗೆ ಬಂದುದಕ್ಕಾಗಿ ಉಬ್ಬಿದರು. ತಮ್ಮ ಶಿಷ್ಯರಿಗೆ ಮುಂದಿನ ಮಾರ್ಗದ ನಿರ್ದೇಶನವನ್ನು ಕೊಟ್ಟು, ತಾವು ಮಹಾದೇವಿಯ ಕಲ್ಯಾಣದ ಮಹಾಯಾತ್ರೆಗೆ ಸಹಾಯಕರಾಗಲು ನಿರ್ಧರಿಸಿದರು. ಗುರುಲಿಂಗರಿಗೆ ತುಂಬಾ ಸಂತೋಷವಾಯಿತು ಈ ನಿರ್ಧಾರವನ್ನು ಕೇಳಿ.

ಇದೆಲ್ಲವನ್ನೂ ಹೇಳಿ ಸಂಗಮದೇವರು ಕೊನೆಯಲ್ಲಿ ಮುಕ್ತಾಯಗೊಳಿಸುತ್ತಾ: "ಸರಿ, ಈ ದಿನ ಬೆಳಗ್ಗೆ ಎದ್ದವನೇ ನಿನ್ನನ್ನು ಹುಡುಕಿಕೊಂಡು ಹೊರಟೆ. ನೀನು ಎರಡು ದಿನ ನಡೆದ ಮಾರ್ಗವನ್ನು ನಾನು ಇದೊಂದೇ ದಿನದಲ್ಲಿ ನಡೆದುಕೊಂಡು ಬಂದಿದ್ದೇನೆ ನೋಡು."

"ನಾವು ಇದೇ ಮಾರ್ಗದಲ್ಲಿ ಬಂದಿರುವೆನೆಂದು ಹೇಗೆ ಊಹಿಸಿದಿರಿ, ಗುರುಗಳೇ ?"

“ನನಗೂ ಅದು ಸಮಸ್ಯೆಯೇ ಆಗಿತ್ತು. ಬಹುಶಃ ಬನವಾಸಿಯ ಕಡೆಗೆ ತಿರುಗಿರುವೆಯೋ ಏನೋ ಎಂಬ ಅನುಮಾನವೇ ಇತ್ತು. ಅದನ್ನು ಆಲೋಚಿಸುತ್ತಾ ಕುಂತಳಾಪುರದವರೆಗೂ ಬಂದೆ. ಅಲ್ಲಿ ಪುರಾಣದ ಶಿವಯ್ಯನವರ ಮನೆಗೆ ನೇರವಾಗಿ ಹೋದೆ. ಏಕೆಂದರೆ ಕಲ್ಯಾಣದಿಂದ ನಾನು ಬರುವಾಗ ನಾಲ್ಕಾರು ದಿನಗಳ ಹಿಂದೆ ಅವರ ಪರಿಚಯವಾಗಿತ್ತು. ಅಲ್ಲಿ ನಿನ್ನ ವಿಷಯ ತಿಳಿದು, ನನ್ನ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಬನವಾಸಿಯ ಕಡೆ ಹೋಗಿರಲಿಕ್ಕಿಲ್ಲವೆಂಬ ಅವರ ಮಾತನ್ನು ನಂಬಿ, ಆ ಮಾರ್ಗವನ್ನು ಬಿಟ್ಟು ಈ ಕಡೆ ತಿರುಗಿದೆ. ಮಲ್ಲಿಕಾರ್ಜುನನ ಕೃಪೆಯಿಂದ ನಿನ್ನನ್ನು ಕಂಡೆ.”

ಗುರುಲಿಂಗದೇವರ ವಾತ್ಸಲ್ಯ, ಸಂಗಮದೇವರ ಕರುಣೆ, ಮಹಾದೇವಿಯ ಮನಸ್ಸನ್ನು ತುಂಬಿ ಮಾತನ್ನು ಮೌನವಾಗಿಸಿದುವು.

೫

ಮಹಾದೇವಿಯ ಕಲ್ಯಾಣದ ಯಾತ್ರೆ ಸಂಗಮದೇವರ ಸಂಗಡ ಮುಂದುವರಿಯಿತು. ಕ್ಷಣಕ್ಷಣವೂ ‘ಕಲ್ಯಾಣ’ ಎಂಬ ಮಂತ್ರವೇ ಅವಳ ಹೃದಯದಲ್ಲಿ ಮಿಡಿಯುತ್ತಾ ಅವಳ ದೇಹಕ್ಕೆ ಶಕ್ತಿಯನ್ನು ಕೊಟ್ಟು ಮುಂದೆ ನಡೆಸುತ್ತಿತ್ತು. ಅದಕ್ಕೆ ಸರಿಯಾಗಿ ಸಂಗಮದೇವರ ಸಂಗವೂ ಚೈತನ್ಯದ ಸಂಜೀವಿನಿಯಾಗಿತ್ತು.

ಕೇವಲ ಕೆಲವು ದಿನಗಳ ಹಿಂದೆ ಅದೇ ಮಾರ್ಗದಲ್ಲಿ ಬಂದಿದ್ದ ಸಂಗಮದೇವರಿಗೆ ಮಾರ್ಗದ ಪರಿಚಯ ಮಾತ್ರವೇ ಅಲ್ಲದೆ, ಒಂದೊಂದು ಊರಿನಲ್ಲಿಯೂ ವಿಶ್ವಾಸದ ಭಕ್ತರ ತಂಡವೇ ಇತ್ತು. ಇವರನ್ನು ಕಂಡುದೇ ಒಂದು ಭಾಗ್ಯವೆಂಬಂತೆ ಆ ಮುಗ್ಧ ಜನಗಳು ಉಪಚರಿಸುತ್ತಿದ್ದರು. ಮಹಾದೇವಿಗೆ ಇದನ್ನೆಲ್ಲಾ ಕಂಡು ಆಶ್ಚರ್ಯ. ಒಮ್ಮೆ ಕೇಳಿದಳು ಗುರುಗಳನ್ನು:

“ಇವರು ತೋರಿಸುತ್ತಿರುವ ವಿಶ್ವಾಸ ಸೇರಬೇಕಾದುದು ನನಗಲ್ಲಮ್ಮ., ಆ ಬಸವಣ್ಣನಿಗೆ ಸೇರಬೇಕಾದುದು ಇದೆಲ್ಲಾ. ಆತ ಕಂಡಿರುವ ವಿಶ್ವಧರ್ಮದಲ್ಲಿ ಒಂದು ಸಣ್ಣ ಅಂಶವನ್ನು ಅವನ ವಚನಗಳ ಮೂಲಕ ಇವರಿಗೆ ಕೊಟ್ಟಿದ್ದೆ. ಅಂದು ನಾನು ಇಲ್ಲೆಲ್ಲಾ ಒಂದೆರಡು ದಿನಗಳು ಉಳಿದುಕೊಂಡು ಕಲ್ಯಾಣದ ಸಂದೇಶವನ್ನು ಸಾರುತ್ತಿದ್ದೆ. ನನ್ನ ಶಿಷ್ಯರೊಡನೆ ವಚನಗಳನ್ನು ಹಾಡುತ್ತಿದ್ದೆ. ಸಮಾಜದಲ್ಲಿ ಅತ್ಯಂತ ಕೊನೆಯವನಿಗೂ ಹೀನನಿಗೂ ದೀನನಿಗೂ ದುಃಖಿಗೂ ಉದ್ಧಾರ ಉಂಟೆಂದೂ, ಧರ್ಮದಲ್ಲಿ ಎಲ್ಲರಿಗೂ ಸಮಾನ ಅಧಿಕಾರವೆಂದೂ ಹೇಳುವ ಅಣ್ಣನವರ ವಚನಗಳನ್ನು ಕೇಳಿ ಜನ ಸಂತೋಷದಿಂದ ಕುಣಿಯುತ್ತಿದ್ದರು.”

ಹೀಗೆ ಪ್ರಾರಂಭವಾದ ಮಾತು ಮಹಾದೇವಿಯ ಕುತೂಹಲಕ್ಕೆ ಇನ್ನೂ ಪ್ರಚೋದನೆಯನ್ನು ಕೊಡುತ್ತಿತ್ತು. ಕಲ್ಯಾಣವನ್ನು ಕುರಿತು ಅನೇಕ ಪ್ರಶ್ನೆಗಳನ್ನು ಕೇಳುವಳು. ಸಂಗಮ ದೇವರು ತಾವು ಕಲ್ಯಾಣದಲ್ಲಿ ಪಡೆದ ಅನುಭವಗಳನ್ನೆಲ್ಲಾ ಹೇಳತೊಡಗುವರು. ಆ ಮಾತಿನಲ್ಲಿ ಲೀನವಾದ ಮಹಾದೇವಿಗೆ ದಾರಿ ನಡೆಯುತ್ತಿದ್ದುದೇ ಅರಿವಾಗುತ್ತಿರಲಿಲ್ಲ.

ಹತ್ತಾರು ದಿನಗಳ ಪ್ರಯಾಣ, ಕಲ್ಯಾಣದ ಹತ್ತಿರಹತ್ತಿರಕ್ಕೆ ಅವರನ್ನು ತರುತ್ತಿತ್ತು. ಬಸವೇಶ್ವರನ ರಾಜ್ಯದ ಗಡಿಯನ್ನು ಪ್ರವೇಶಿಸಿ ಈಗ ನಡೆಯುತ್ತಿದ್ದರು. ಆ ರಾಜ್ಯದಲ್ಲಿ ಮುಂದುವರಿದಂತೆಲ್ಲಾ ಬಸವಣ್ಣನ ಮಹಾತ್ಕಾರ್ಯಗಳ ಸೂಕ್ಷ್ಮ ಪರಿಚಯ ಮಹಾದೇವಿಗೆ ಆಗತೊಡಗಿತ್ತು.

ಒಂದು ಕಡೆಯಲ್ಲಿ, ಹಸಿದು ಬಂದವರಿಗೆ ಪ್ರಸಾದ ನಿಲಯಗಳು ಇನ್ನೊಂದು ಕಡೆಯಲ್ಲಿ ಧರ್ಮಕ್ಕಾಗಿ ಹಸಿದಿರುವ ಜನತೆಗೋಸ್ಕರ ಧರ್ಮಜಿಜ್ಞಾಸೆಯ ಸಾಂಸ್ಕೃತಿಕ ಕೇಂದ್ರಗಳು – ಇವುಗಳನ್ನು ನೋಡುತ್ತಾ ಮಹಾದೇವಿ ನಡೆಯುತ್ತಿದ್ದಳು. ರಾಜಕೀಯ ಶಕ್ತಿಯೊಡನೆ ಆಧ್ಯಾತ್ಮಿಕ ಮಹಾಸಾಧನೆಯ ದರ್ಶನವೂ ಸೇರಿದರೆ ಆಗಬಹುದಾಗ ಮಹತ್ತರವಾದ ಲೋಕಕಲ್ಯಾಣವನ್ನು ಕಾಣುತ್ತಿದ್ದಳು.

ಒಮ್ಮೆ ಒಂದು ಊರನ್ನು ದಾಟಿ ಮುಂದೆ ಹೋಗುತ್ತಿರುವಾಗ ಆ ಊರಿನ ಹೊರಭಾಗದಲ್ಲಿ ಒಂದು ಚಾವಡಿಯಂತಹ ಮನೆಯ ಮುಂದಿನ ಹಲಗೆಯ ಮೇಲೆ ಈ ಮಾತುಗಳು ಕಣ್ಣಿಗೆ ಬಿದ್ದುವು :

ದಯೆಯೇ ಧರ್ಮದ ಮೂಲವಯ್ಯ,

ಪ್ರಾಣಿಗಳನ್ನು ಕೊಲ್ಲಬೇಡಿ, ಹಿಂಸಿಸಬೇಡಿ.

– ಈ ಮುಂತಾದ ಮಾತುಗಳನ್ನು ನೋಡಿ ಮಹಾದೇವಿ ಕೇಳಿದಳು : "ಇದೇನು ಗುರುಗಳೇ ?"

"ಇವು ಪ್ರಾಣಿದಯಾಮಂದಿರಗಳು. ಮೂಕಪ್ರಾಣಿಗಳು ಬಲಿಯಾಗುವುದನ್ನು ತಡೆಯಲು ಅಣ್ಣನವರು ಕೈಗೊಂಡಿರುವ ಹೊಸಕಾರ್ಯಕ್ರಮವಿದು."

"ಎಂತಹ ಉದಾತ್ತಭಾವನೆ : 'ದಯೆಯೇ ಧರ್ಮದ ಮೂಲ' – ಇದು ಧರ್ಮದ ಸಾರವನ್ನೇ ಒಳಗೊಂಡಂತೆ ತೋರುತ್ತದೆ." ಮಹಾದೇವಿ ಹೇಳಿದಳು.

"ಹೌದಮ್ಮ. ಅದನ್ನು ಅಣ್ಣನವರು ಹೇಳಿದುದು ಮಾತ್ರವಲ್ಲ, ನಿತ್ಯ ಜೀವನದಲ್ಲಿ ಆಚರಣೆಗೆ ಬರುವಂತೆ ಮಾಡಲು ಸಾಹಸಪಡುತ್ತಿದ್ದಾರೆ. ಯಾವ ಹೆಸರಿನಿಂದಲೇ ಆಗಲಿ ಪ್ರಾಣಿವಧೆಯನ್ನು ಅವರು ಸಹಿಸಲಾರರು. ಆ ಕಾರಣಕ್ಕಾಗಿಯೇ ಯಜ್ಞಯಾಗಾದಿಗಳನ್ನು ತಿರಸ್ಕರಿಸಿ ವೈದಿಕರ ಕೋಪಕ್ಕೆ ಗುರಿಯಾದರು :

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೇ ಅಳು, ಕಂಡ್ಯಾ ?
ವೇದವನೋದಿದವರ ಮುಂದೆ ಅಳು, ಕಂಡ್ಯಾ ?
ಶಾಸ್ತ್ರವನೋದಿದವರ ಮುಂದೆ ಅಳು, ಕಂಡ್ಯಾ ।
ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವಾ

ಎಂಬ ಮಾತು ಕೋಲಾಹಲವನ್ನೇ ಉಂಟುಮಾಡಿತು. ಆದರೂ ಆ ವಿರೋಧವನ್ನು ಲೆಕ್ಕಿಸಲಿಲ್ಲ ಅಣ್ಣನವರು :

ಕೊಲುವನೇ ಮಾದಿಗ,
ಹೊಲಸ ತಿಂಬುವನೇ ಹೊಲೆಯ ।
ಕುಲವೇನೋ ಆವಂದಿರ ಕುಲವೇನೋ ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗಮ ಶರಣರೇ ಕುಲಜರು

ಎಂದು ಸಾರಿದರು.

"ಎಂತಹ ಚಿರಂತನವಾದ ಸತ್ಯವನ್ನು ಸಾರಿದ್ದಾರೆ ಅಣ್ಣನವರು" – ಮಹಾದೇವಿ ಉದ್ಗರಿಸಿದಳು.

"ನಿಜ ಇದು ಚಿರಂತನವಾದ ಸತ್ಯ ಹೌದು. ಆದರೆ ಅಂಧಶ್ರದ್ಧೆಯ ಸಂಪ್ರದಾಯ ಶರಣರೂ, ಸ್ವಾರ್ಥಸಾಧನೆಯ ಕುಟಿಲಜೀವಿಗಳೂ ಇದನ್ನು ಸಹಿಸಲಾರದೇ ಹೋದರು. ಅವರ ಪ್ರತಿಭಟನೆಯ ಬಿರುಗಾಳಿಯನ್ನು ಅಣ್ಣನವರು ಎದುರಿಸಬೇಕಾಗಿದೆ. ಇಂದು ಹೊಲೆಯಮಾದಿಗರೆಂಬುದು ಹುಟ್ಟಿನಿಂದ ಬರುವ ಜಾತಿಯಲ್ಲ : ಗುಣದಿಂದ ನಿರ್ಧಾರವಾಗುತ್ತವೆ – ಎಂದು ಸಾರಿದ್ದಾನೆ ಬಸವಣ್ಣ. ಅಸ್ಪೃಶ್ಯತೆ ಎನ್ನುವುದು ನಮ್ಮ ಧರ್ಮಕ್ಕೆ ಅಂಟಿದ ಕಳಂಕವೆಂದು ಘೋಷಿಸುತ್ತಿರುವುದಷ್ಟೇ ಅಲ್ಲ; ಅದನ್ನು ತೊಡೆದುಹಾಕಲು ದಿಟ್ಟತನದ ಪ್ರಯತ್ನವನ್ನು ಕೈಗೊಂಡಿದ್ದಾನೆ. ಅವರನ್ನು ಅಪ್ಪಿಕೊಂಡು ಉದ್ಧರಿಸುತ್ತಿದ್ದಾನೆ. ಅವಕಾಶವಿತ್ತರೆ ಅವರೂ ಬೆಳಯಬಲ್ಲರೆಂಬುದನ್ನು ಪ್ರತ್ಯಕ್ಷವಾಗಿ ಸಾಧಿಸಿ ತೋರಿಸಿದ್ದಾನೆ. ಹರಳಯ್ಯ, ನಾಗಿದೇವ ಮೊದಲಾದವರು ಮಹಾ ಶರಣರಾಗಿದ್ದಾರೆ, ಅನುಭವ ಮಂಟಪವನ್ನು ಅಲಂಕರಿಸಿದ್ದಾರೆ. ಇನ್ನೊಂದೆರಡು ದಿನಗಳಲ್ಲಿ ನೀನೇ ಪ್ರತ್ಯಕ್ಷವಾಗಿ ಅದನ್ನೆಲ್ಲಾ ನೋಡುವುದರಿಂದ ಹೆಚ್ಚಾಗಿ ಹೇಳಬೇಕಾಗಿಲ್ಲ."

ಅನುಭವಮಂಟಪದ ಆ ದೃಶ್ಯವನ್ನು ನೆನೆದು ಮಹಾದೇವಿ ಪುಳಕಿತಳಾದಳು.

ಊರನ್ನು ದಾಟಿ ಈ ವೇಳೆಗೆ ಒಂದು ಕೆರೆಯ ಏರಿಯ ಮೇಲೆ ನಡೆಯುತ್ತಿದ್ದರು. ಅಷ್ಟರಲ್ಲಿ ಏರಿಯ ಆ ಕೊನೆಯಲ್ಲಿ ನಾಲ್ಕಾರು ಜನ ಗುಂಪು ಕೂಡಿರುವುದು ಕಣ್ಣಿಗೆ ಬಿತ್ತು. ಗುಂಪಿನ ಮಧ್ಯದಿಂದ ಒಂದು ಆಕ್ರಂದನ ಧ್ವನಿ ಕೇಳುತ್ತಿತ್ತು. ಸಂಗಮದೇವರು, ಮಹಾದೇವಿ ಬಳಿಗೆ ಬಂದರು.

ಎಂಟುಹತ್ತು ವರ್ಷದ ಹುಡುಗನೊಬ್ಬ ದಡದ ಹುಲ್ಲಿನ ಮೇಲೆ ನಿಶ್ಚೇಷ್ಟಿತನಾಗಿ ಬಿದ್ದಿದ್ದಾನೆ. ಉಟ್ಟ ಬಟ್ಟೆಗಳೂ ಒದ್ದೆಯಾಗಿ ದೇಹಕ್ಕೆ ಅಂಟಿಕೊಂಡಿವೆ. ತಲೆಗೂದಲು ಮುಂದಕ್ಕೆ ಇಳಿಬಿದ್ದು ಹಣೆಗೆ ಹತ್ತಿಕೊಂಡಿವೆ. ಅದರ ಜೊತೆಗೆ ಜೊಂಡು ಬೆಳೆದ ಪಾಚಿಯೂ ಸೇರಿ ಮುಖವನ್ನು ಮುಚ್ಚಿದಂತೆ ತೋರುತ್ತಿದೆ. ದೇಹಕ್ಕೆಲ್ಲಾ ಅಲ್ಲಲ್ಲಿ ಪಾಚಿ ಅಂಟಿಕೊಂಡಿರುವ ಗುರುತು ಕಾಣುತ್ತಿದೆ. ಆ ಹುಡುಗನ ತಂದೆ ಆತನ ಮೇಲೆ ಬಿದ್ದು ಬಿದ್ದು ಗೋಳಾಡುತ್ತಿದ್ದಾನೆ.

ಸಂಗಮದೇವರು ವಿಚಾರಿಸಿದರು. ತಿಳಿದುಬಂದುದು ಇಷ್ಟು :

ಆ ಬೆಸ್ತ, ಮೀನು ಹಿಡಿಯಲು ಕೆರೆಗೆ ಬಂದಿದ್ದ. ಬರುವಾಗ ತನ್ನ ಮಗನನ್ನೂ ಜೊತೆಗೆ ಕರೆದು ತಂದಿದ್ದ. ಈತ ಮುಂದೆ ನೋಡಿ ಮೀನು ಹಿಡಿಯುತ್ತಿರುವಾಗ, ತಾನೂ ಮೀನು ಹಿಡಿಯುವ ಆಟವಾಡುತ್ತಾ ಕೆರೆಯ ಕೊನೆಯ ಭಾಗಕ್ಕೆ ಹೋದ. ಅಲ್ಲಿ ಕಾಲು ಜಾರಿ ಬಿದ್ದಿದ್ದ. ಬಹಳ ಜೊಂಡು ಬೆಳೆದಿರುವ ಪ್ರದೇಶವದು. ಕೈಕಾಲು ಬಡಿಯುವುದಕ್ಕೆ ಆಗದೆ ಕೆಸರು ಜೊಂಡಿನಲ್ಲಿ ಸಿಕ್ಕಿ ಹಾಗೆಯೇ ಮುಳುಗಿಹೋಗಿದ್ದ. ಅನಂತರ ಗಾಬರಿಯಾದ ತಂದೆ ಜೊತೆಗೆ ಬೆಸ್ತರನ್ನು ಕೂಗಿ ಕರೆದ. ಹುಡುಕಿದಮೇಲೆ ದೇಹ ಸಿಕ್ಕಿತು. ಆ ಬೆಸ್ತರವನಿಗೆ ಬಹಳ ವರ್ಷಗಳ ನಂತರ ಹುಟ್ಟಿದ ಒಬ್ಬ ಮಗ. ಅವನ ದುಃಖ ಹೇಳ ತೀರದಂತಹುದು.

"ನಿನಗಾಗಿಯೇ ನಾನು ಬದುಕಿದ್ದೆನಲ್ಲಪ್ಪಾ... ನನಗೆ ಮುಂದಿನ ಗತಿ ಯಾರು ? ಅಯ್ಯೋ ದೇವರೇ, ನಿನಗೆ ಸ್ವಲ್ಪವೂ ಕರುಣೆಯಿಲ್ಲವೆ ?" ಎಂದು ಮುಂತಾಗಿ ಗೋಳಾಡುತ್ತಿದ್ದ.

ಅದುವರೆಗೂ ಅವನು ಹಿಡಿದ ಮೀನಿನ ರಾಶಿ ಒಂದು ಪಕ್ಕದಲ್ಲಿ ಬಿದ್ದಿತ್ತು. ದುಃಖದಿಂದ ಎಸೆದ ಮೀನಿನ ಬುಟ್ಟಿ ಕೆಳಗೆ ಬಿದ್ದು ಓರೆಯಾಗಿ ಅದರಿಂದ ಹೊರಗೆ ಮೀನುಗಳು ಚೆಲ್ಲಿದ್ದುವು. ಮಹಾದೇವಿ ಅತ್ತ ನೋಡಿದಳು. ತನ್ನ ಮಗನಿಗಾಗಿ ಅಷ್ಟೊಂದು ಗೋಳಾಡುತ್ತಿರುವ ಬೆಸ್ತ, ಎಷ್ಟೊಂದು ಮೀನು ಇನ್ನೂ ಸಂಪೂರ್ಣವಾಗಿ ಸತ್ತಿರಲಿಲ್ಲ. ಪುಚ್ಛವನ್ನು ಅಲ್ಲಾಡಿಸುತ್ತಾ ಅತ್ತ ಇತ್ತ ಮೆಲ್ಲನೆ ನೆಗೆದಾಡುತ್ತಾ ಮರಣವೇದನೆಯನ್ನು ಅನುಭವಿಸುತ್ತಿತ್ತು. ದೇವರ ಕರುಣೆಯನ್ನೇ

ಸಂದೇಹಿಸಿ ದೂರುತ್ತಿರುವ ಬೆಸ್ತನನ್ನು ಕಂಡು ಕನಿಕರದಿಂದ ಮರುಗುವಂತಿತ್ತು.

"ತನ್ನ ಮಗನಿಗಾಗಿ ಹೀಗೆ ಗೋಳಾಡುವ ಬೆಸ್ತನ ಹೃದಯ, ಇಷ್ಟೊಂದು ಪ್ರಾಣಿಗಳನ್ನು ಚುಚ್ಚಿಕೊಲ್ಲುವಾಗ, ಅವುಗಳ ಸಂಕಟವನ್ನು ಕಂಡು ಸ್ವಲ್ಪವೂ ಮರುಗಲಿಲ್ಲವೆ ?" ಎಂದು ಆಲೋಚಿಸಿತು ಮಹಾದೇವಿಯ ಮನಸ್ಸು.

ಈ ವಯಸ್ಸಿನಲ್ಲಿ ತನ್ನ ಏಕೈಕಪುತ್ರನನ್ನು ಕಳೆದುಕೊಂಡ ಜಾಲಗಾರನ ದುಃಖ ಮಹಾದೇವಿಯನ್ನು ಸಂಕಟಗೊಳಿಸಿತು. ಆದರೆ ಅದಕ್ಕಿಂತ ಹೆಚ್ಚಾಗಿ ಅವಳನ್ನು ಸಂಕಟಗೊಳಿಸಿದುದು, ಜನಗಳು ತಮ್ಮ ಸುಖಕ್ಕಾಗಿ ಇತರ ಪ್ರಾಣಿಗಳನ್ನು ನಿಷ್ಕರುಣೆಯಿಂದ ಬಲಿಕೊಡುವ ಅಂಶ. ಅದನ್ನು ಕಂಡೇ ಬಸವಣ್ಣ 'ದಯೇಯೇ ಧರ್ಮದ ಮೂಲ'ವೆಂಬ ಮಾತನ್ನು ಸಾರಿರಬೇಕೆಂದು, ಸ್ವಲ್ಪ ಕಾಲದ ಹಿಂದೆ ತಾನು ಕಂಡ ಪ್ರಾಣಿದಯಾ ಮಂದಿರವನ್ನು ನೆನೆಸಿಕೊಂಡಳು.

ಸಂಗಮದೇವರು ತತ್ಕಾಲೋಚಿತವಾಗಿ ಬೆಸ್ತರವನಿಗೆ ಸಂತೈಕೆಯ ಮಾತುಗಳನ್ನು ಹೇಳಿದರು. ಸಂಜೆಯಾಗುತ್ತಾ ಬರುತ್ತಿದ್ದುದರಿಂದ ಮುಂದಿನ ಊರನ್ನು ಜಾಗ್ರತೆ ಸೇರಿಕೊಳ್ಳಬೇಕೆಂದು ಮುಂದೆ ಹೊರಟರು ಮಹಾದೇವಿಯೊಡನೆ.

ತಾವು ಕಂಡ ದೃಶ್ಯವೇ ಇಬ್ಬರ ಮನಸ್ಸಿನಲ್ಲಿಯೂ ಸುತ್ತುತ್ತಿತ್ತು. ಸ್ವಲ್ಪದೂರ ಇಬ್ಬರೂ ಮೌನವಾಗಿ ನಡೆದರು. ಮಹಾದೇವಿ ಹೇಳಿದಳು :

"ಗುರುಗಳೇ... ನಾನೊಂದು ವಚನವನ್ನು ಬರೆಯಬೇಕೆಂದು ಮನಸ್ಸಿನಲ್ಲಿಯೇ ಆಲೋಚಿಸಿಕೊಂಡಿದ್ದೇನೆ. ಅದರ ಪ್ರಾರಂಭದ ಸ್ವಲ್ಪ ಭಾಗವನ್ನು ಹೇಳಲೇ ?"

"ಹೇಳು, ಮಹಾದೇವಿ." ಕುತೂಹಲದಿಂದ ಕೇಳಿದರು ಸಂಗಮದೇವರು. ಹೇಳಿದಳು, ಮಹಾದೇವಿ : "ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ ಹಲವು ಪ್ರಾಣಿಯ ಕೊಂದು ನಲಿದಾಡುವ. ತನ್ನ ಮನೆಯಲೊಂದು ಶಿಶು ಸತ್ತಡೆ, ಅದಕ್ಕೆ ಮರುಗುವಂತೆ ಅವಕೇಕೆ ಮರುಗನು?...."

"ಭೇಷ್... ಭೇಷ್.... !" ನಗುತ್ತಾ ಹೇಳಿದರು ಸಂಗಮದೇವರು : "ಈಗ ಕಂಡ ದೃಶ್ಯವನ್ನೇ ವಚನವನ್ನಾಗಿಮಾಡಿಬಿಟ್ಟಿದ್ದೀಯ. ಬಸವಣ್ಣನೂ ಹೀಗೆ. ತನ್ನ ರಾಜಕೀಯ ಜೀವನದ ಯಾವುದೋ ಒಂದು ದುಃಖವೋ, ಸಮಸ್ಯೆಯೋ ಎದುರಾದಾಗ ಅಥವಾ ಆಧ್ಯಾತ್ಮರಂಗದ ಭಕ್ತಿಯ ಆವೇಶ ಉಂಟಾದಾಗ ಸಹಜವಾದ ರೀತಿಯಲ್ಲಿ ವಚನಗಳನ್ನು ಉಕ್ಕಿಸುತ್ತಾನೆ."

"ಆ ಮಹಾಶಕ್ತಿಯ ಮುಂದೆ ನನ್ನದೇನು. ಗುರುಗಳೇ ! ಆದರೆ ಆ ದೃಶ್ಯವನ್ನು ಕಂಡಾಗ ಯಾಕೋ ಈ ಭಾವನೆ ಬಂದಿತು ನನ್ನ ಮನಸ್ಸಿಗೆ. ಮಗನ

ಮರಣವನ್ನು ಕಂಡು ಮರುಗುವ ತಂದೆಯ ಹೃದಯವೇ, ಮೀನಿನ ನೋವನ್ನು ಕಾಣುವಲ್ಲಿಯೂ ಇರಬಾರದಾಗಿತ್ತೇ ಎನ್ನಿಸಿತು."

"ಎಂತಹ ಸೂಕ್ಷ್ಮವಾದ ಆಲೋಚನೆ, ಮಹಾದೇವಿ. ಆದರೆ ಈ ಜಗತ್ತಿನಲ್ಲಿ ಅಂತಹ ವರ್ತನೆ ಎಲ್ಲಿ ಸಾಧ್ಯ ಹೇಳು ? ನಾವು ಪ್ರೇಮ-ದಯೆ ಎಂದು ಕರೆಯುವುರಲ್ಲಿಯೂ ವಾಸ್ತವವಾಗಿ ನಮ್ಮ ಸ್ವಾರ್ಥವೇ ಇರುತ್ತದೆ. ಈ ಘಟನೆಯನ್ನು ತೆಗೆದುಕೋ. ಅವನು ಮಗ ಹೋದುದಕ್ಕಾಗಿ ಅಳುತ್ತಿದ್ದಾನೆ ನಿಜ. ಆದರೆ ಮನಿಗಾಗಿ ಅಳುತ್ತಿಲ್ಲ. ತನಗಾಗಿ ಅಳುತ್ತಿದ್ದಾನೆ. ತನಗಿನ್ನು ಯಾರು ದಿಕ್ಕು ಎಂದೇ ಆತನ ಯೋಚನೆ. ಮೀನನ್ನು ಕೊಲ್ಲುವಾಗ ಅವನಿಗೆ ದುಃಖವಾಗುವುದಿಲ್ಲ. ಏಕೆಂದರೆ ಅದರ ಕೊಲೆಯೇ ಇವನ ಹೊಟ್ಟೆಯ ಆಹಾರಕ್ಕೆ ಸಾಧನ. ಈ ಸ್ವಾರ್ಥ ಭಾವನೆಗಳಿಂದ ಮೀರಿ ನಿಂತಾಗ ನಿಜವಾದ ಪ್ರೇಮ ಸಾಧ್ಯವಾಗುತ್ತದೆ. ಅದು ನಿಜವಾದ 'ದಯೆ'ಯಾಗುತ್ತದೆ. ಆಗ ದಯೆಯೇ ಧರ್ಮದ ಮೂಲವಾಗುತ್ತದೆ. ಅದನ್ನು ಸಾಧಿಸಬೇಕೆಂಬುದೇ ಬಸವಣ್ಣನ ಅಹಿಂಸೆಯ ಸಂದೇಶ. ಆದರೆ ಈ ಶಾಂತಿ ಸಂದೇಶಕ್ಕೆ ಬರಬೇಕಾದರೆ ಹಿಂಸಾಮಯವಾದ ಈ ಜಗತ್ತು ಇನ್ನೂ ಯುಗಯುಗಗಳನ್ನು ಕಳೆಯಬೇಕೆಂದು ತೋರುತ್ತದೆ. ಬಹುಶಃ ಆಗ ಅಣ್ಣನ ಕಾರ್ಯ ಇನ್ನೂ ಉಜ್ವಲವಾಗಿ ಕಂಡೀತು."

ಮಹಾದೇವಿಯ ಮನಸ್ಸು ಈ ಮಾತುಗಳ ಅರ್ಥವನ್ನೇ ಮಥಿಸತೊಡಗಿತು. ಮೌನವನ್ನು ಧರಿಸಿ ಸಂಗಮದೇವರೊಡನೆ ನಡೆಯುತ್ತಿದ್ದಳು.

ಊರು ಸಮೀಪವಾಗುತ್ತಿತ್ತು. ಇನ್ನೇನು ಊರನ್ನು ಪ್ರವೇಶಿಸಬೇಕು. ಅಷ್ಟರಲ್ಲಿ ಇಬ್ಬರೂ ಭಕ್ತರು ಆತುರವಾಗಿ ಬಂದು ಸಂಗಮದೇವರಿಗೂ ಮಹಾದೇವಿಗೂ ನಮಸ್ಕರಿಸಿದರು. ಸಂಗಮದೇವರು ಅವರನ್ನೇ ನೋಡುತ್ತಾ ಕೇಳಿದರು :

"ಯಾರು ನೀವು ?"

"ನಾವು ಕಲ್ಯಾಣದಿಂದ ಅಣ್ಣನ ಭಕ್ತರು" – ಅವರಲ್ಲಿ ಒಬ್ಬ ಹೇಳಿದ.

"ಬಸವಣ್ಣನವರಿಂದ ಆಜ್ಞಪ್ತರಾಗಿ ಬಂದಿದ್ದೀರಾ ? ಏನು ನಿರೂಪಿಸಿದ್ದಾರೆ ಬಸವೇಶ್ವರರು?" ಕುತೂಹಲದಿಂದ ಕೇಳಿದರು ಸಂಗಮದೇವರು.

"ಈ ಮಾರ್ಗದಲ್ಲಿ ಒಬ್ಬ ಮಹಾಶಿವಶರಣೆಯರು ಬರುತ್ತಿದ್ದಾರಂತೆ ! ಅವರ ದರ್ಶನವನ್ನು ಪಡೆದು ಆ ವಾರ್ತೆಯನ್ನು ತಿಳಿಸುವಂತೆ ಆಜ್ಞಾಪಿಸಿದ್ದಾರೆ. ಅದಕ್ಕಾಗಿ ಅನೇಕ ಭಕ್ತರು ಅಲ್ಲಲ್ಲಿ ತಿರುಗುತ್ತಿದ್ದಾರೆ. ನಾವು ತಮ್ಮನ್ನೂ ತಮ್ಮ ಬಳಿ ಬರುವ ಈ ತಾಯಿಯನ್ನೂ ಕಂಡು ನಮ್ಮ ಕುತೂಹಲವನ್ನು ಶಾಂತಪಡಿಸಿಕೊಳ್ಳಬೇಕೆಂದು ಬಂದೆವು."

ಸಂಗಮದೇವರು ಮಹಾದೇವಿಯತ್ತ ನೋಡಿದರು. ಮಹಾದೇವಿಗೂ ವಿಷಯವೆಲ್ಲಾ ಅರ್ಥವಾಗಿತ್ತು. ಬಂದವರಲ್ಲೊಬ್ಬ ಮತ್ತೆ ತನ್ನ ಮಾತನ್ನು ಮುಂದುವರಿಸಿದ : "ನಮ್ಮ ಊಹೆ ಸರಿಯೆಂದು ತೋರುತ್ತಿದೆಯಲ್ಲವೇ, ಸ್ವಾಮಿ. ಬಸವೇಶ್ವರರು ಹೇಳಿರುವ ಗುರುತುಗಳನ್ನು ನೆನಸಿಕೊಂಡರೆ ತಮ್ಮ ಬಳಿ ಇರುವ ಈ ಮಹಾದೇವಿಯವರೇ..."

ಮಾತು ಮುಗಿಯುವುದಕ್ಕೆ ಮುನ್ನ ಸಂಗಮದೇವರು ಹೇಳಿದರು.

"ನಿಜ, ನಿಮ್ಮ ಊಹೆ ಸರಿಯಾದದ್ದು. ಯಾವ ಮಹಾಮಾತೆಯ ಬರುವಿಗಾಗಿ ಬಸವಣ್ಣನವರು ಆಸಕ್ತಿಯನ್ನೂ ಕುತೂಹಲವನ್ನೂ ತಳೆದಿದ್ದಾರೆಯೋ ಆ ಶಿವಶರಣೆಯೇ ಈ ಮಹಾದೇವಿ."

ತನ್ನ ಬರವಿಗಾಗಿ ಬಸವಣ್ಣ ತಳೆದಿರುವ ಕುತೂಹಲವನ್ನು ಕಂಡು ಮಹಾದೇವಿಗೆ ಅಪೂರ್ವವಾದ ಅನುಭವವಾಯಿತು.

ಅಷ್ಟರಲ್ಲಿ ಒಬ್ಬ ಹೇಳಿದ : "ಸ್ವಾಮಿ, ಇದು ನಮ್ಮ ಸುದಿನ. ಇಂದು ಇಲ್ಲಿನ ಪ್ರಸಾದಮಂದಿರದಲ್ಲಿ ತಾವು ಆತಿಥ್ಯವನ್ನು ಪಡೆದು ಬೆಳಿಗ್ಗೆ ಹೊರಡಬೇಕು, ತಮ್ಮ ಪ್ರಯಾಣಕ್ಕೆ ಎಲ್ಲಾ ಏರ್ಪಾಡುಗಳನ್ನು ಮಾಡುತ್ತೇನೆ."

ಸಂಗಮದೇವರು ಮಹಾದೇವಿಯನ್ನು ನೋಡಿದರು. ಮಹಾದೇವಿ ಹೇಳಿದಳು : "ನಿಮ್ಮ ವಿಶ್ವಾಸಕ್ಕೆ ತುಂಬಾ ವಂದನೆಗಳು. ಆದರೆ ಕಲ್ಯಾಣದ ನಮ್ಮ ಪ್ರಯಾಣಕ್ಕೆ ಯಾವ ಏರ್ಪಾಡನ್ನೂ ಮಾಡುವುದು ಬೇಡ. ಆ ತಪೋಯಾತ್ರೆ ಇದುವರೆಗೆ ನಾವು ಬಂದಂತೆ ಕಾಲುನಡೆಗೆಯಲ್ಲೇ ಮುಂದುವರಿಯಬೇಕು. ಯಾರೂ ಅರಿಯದಂತೆ ಅಜ್ಞಾತವಾಗಿ ಸಾಗಬೇಕು. ಯಾವ ಸೌಕರ್ಯವನ್ನೂ ನಾವು ಬಯಸುವುದಿಲ್ಲ."

"ಆಗಬಹುದು ತಾಯಿ : – ಭಕ್ತ ಹೇಳಿದ : "ಆದರೆ ಈಗ ಕತ್ತಲಾಗುತ್ತಿದೆ. ವಿಶ್ರಮಿಸಿಕೊಳ್ಳುವುದಕ್ಕೆ ತಮ್ಮ ಒಪ್ಪಿಗೆ ಇದೆಯಷ್ಟೆ ?"

ಮಹಾದೇವಿ ಗುರುಗಳತ್ತ ನೋಡಿದಳು ಗುರುಗಳು ಹೇಳಿದರು :

"ಹೌದು ಮಹಾದೇವಿ. ಇಂದು ಇಲ್ಲಿದ್ದು ನಾಳೆ ಬೆಳಗ್ಗೆ ಹೊರಡಬಹುದಲ್ಲವೆ?"

ಮಹಾದೇವಿ ತನ್ನ ಒಪ್ಪಿಗೆಯನ್ನು ಸೂಚಿಸಿದಳು. ಎಲ್ಲರೂ ಪ್ರಸಾದ ಮಂದಿರದತ್ತ ನಡೆಯತೊಡಗಿದರು.

೬

ಆ ಪ್ರಸಾದಮಂದಿರದಲ್ಲಿ ನಿತ್ಯ ದಾಸೋಹ ಇತ್ತು. ಆದರೆ ಅದು ಕೆಲಸ ಮಾಡಲಾರದ ಸೋಮಾರಿಗಳಿಗೆಲ್ಲಾ ಅನ್ನವನ್ನು ಹಾಕುವ ಛತ್ರವಾಗಿರಲಿಲ್ಲ. ಅನಿರೀಕ್ಷಿತವಾಗಿ ಅಲ್ಲಿ ಉಳಿಯಬೇಕಾಗಿಬಂದ ಪ್ರಯಾಣಿಕರಿಗೆ ಆದರದ ಆತಿಥ್ಯ ಸಿದ್ಧವಾಗಿತ್ತು. ಆದರೆ ಅಲ್ಲಿಯೇ ಇದ್ದು ಕೆಲಸ ಮಾಡದೆ ಸೋಮಾರಿಗಳಾಗಿರುವವರಿಗೆ ಅಲ್ಲಿ ಪ್ರವೇಶವಿರಲಿಲ್ಲ. ಅದು ಬಸವಣ್ಣನವರ ಕಟ್ಟಳೆಯಾಗಿತ್ತು.

ಅಲ್ಲಿರುವವರೆಲ್ಲ ಒಂದು ರೀತಿಯ ಕಾಯಕವನ್ನು ಕೈಕೊಂಡೇ ಇದ್ದರು. ಆ ಊರಿನ ಸುತ್ತಮುತ್ತಲ ಹಳ್ಳಿಗಳಿಗೆ ಹೋಗಿ ಧರ್ಮೋಪದೇಶ ಮಾಡುವವರು ಕೆಲವರು ; ಊರನ್ನು ಚೊಕ್ಕಮಾಡುವ ಕೆಲಸ ಮಾಡಿ ತೋರಿಸುವವರು ಕೆಲವರು. ಹೀಗೆ ಬೌದ್ಧಿಕವೋ, ದೈಹಿಕವೋ – ಒಂದಲ್ಲ ಒಂದು ರೀತಿಯ ಕಾಯಕವನ್ನು ಮಾಡುವವರಿಗೆ ಮಾತ್ರ ಅಲ್ಲಿ ಅವಕಾಶ.

ಪ್ರತನಿತ್ಯವೂ ಅಲ್ಲಿ ಪುರಾಣಪುಣ್ಯಕಥೆಗಳು, ಧಾರ್ಮಿಕ ಜಿಜ್ಞಾಸೆಗಳು, ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಲೇ ಇದ್ದವು.

ಇದೆಲ್ಲಾ ಪರಿಚಯವನ್ನು ಕೇಳುತ್ತಾ ಮಹಾದೇವಿ ಮತ್ತು ಸಂಗಮದೇವರು ಪ್ರಸಾದಮಂದಿರಕ್ಕೆ ಬಂದರು. ಮಂದಿರದಲ್ಲಿ ಶರಣರ ಸುಂದರವಾದ ಅನೇಕ ಉಕ್ತಿಗಳು ಕಣ್ಣಿಗೆ ಬಿದ್ದುವು. 'ಕಾಯಕವೇ ಕೈಲಾಸ' ಎಂಬ ಮಾತು ಎದ್ದು ಕಾಣುವ ದೊಡ್ಡ ಅಕ್ಷರಗಳಿದ್ದು ಎಲ್ಲರ ಗಮನವನ್ನು ಸೆಳೆಯುವಂತಿತ್ತು.

ಅಂದು ರಾತ್ರಿ ಅಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಿ ಮಹಾದೇವಿ ಆಶ್ಚರ್ಯಗೊಂಡಳು. ಹೆಜ್ಜೆ ಹೆಜ್ಜೆಗೂ ಅಲ್ಲಿ ಅಣ್ಣನ ಆದರ್ಶಗಳ ಕೈವಾಡ ಕಾಣುತ್ತಿತ್ತು. ಮೇಲು – ಕೀಳೆಂಬ ಯಾವ ಭೇದಭಾವವೂ ಇಲ್ಲದೆ ಊರಿನ ನೂರಾರು ಜನರು ಬಂದು ಅದರಲ್ಲಿ ಆಸಕ್ತಿಯಿಂದ ಭಾಗವಹಿಸಿ ಪ್ರಯೋಜನವನ್ನು ಪಡೆಯುತ್ತಿದ್ದರು. ಸನ್ನಿವೇಶದಿಂದ ಸ್ಫೂರ್ತಿಗೊಂಡವರಾಗಿ ಸಂಗಮದೇವರು ಅಲ್ಲಿದ್ದ ಇತರ ಜಂಗಮರೊಡನೆ ಸೇರಿ ವಚನಗಳನ್ನು ಹಾಡಿದರು:

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ ;
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ.
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು ಕೂಡಲಸಂಗಮದೇವ

ಎಂಬ ವಚನವನ್ನು ಕೇಳಿದಾಗಲಂತೂ ಮಹಾದೇವಿಗೆ ಬಸವಣ್ಣನವರ ಜೀವನದ

ಆದರ್ಶ ಇಲ್ಲಿ ಜ್ವಲಂತವಾಗಿ ಮೂಡಿದೆಯೆಂದೆನಿಸಿತು. ಬಸವಣ್ಣ ಈ ವಚನದಲ್ಲಿ ಏನನ್ನು ಹೇಳಿದ್ದಾನೆಯೋ ಆ ಮಾತಿಗೆ ತನ್ನ ಜೀವನದ ಸಾಧನೆಗಳಿಂದ ಆತ ಜೀವಂತ ಭಾಷ್ಯವನ್ನು ಬರೆಯುತ್ತಿರುವಂತೆ ಭಾಸವಾಯಿತು. ಆತ ತನ್ನ ಉದ್ಧಾರಕ್ಕಾಗಿ ಭಕ್ತಿ ಭಂಡಾರಿಯಾಗಿದ್ದರೆ, ಜಗತ್ತಿನ ಉದ್ಧಾರಕ್ಕಾಗಿ ಕರ್ಮಯೋಗಿಯಾಗಿದ್ದಾನೆಂಬುದನ್ನು ಕಲ್ಯಾಣದ ಹತ್ತಿರ ಹತ್ತಿರಕ್ಕೆ ಬಂದಂತೆ ಕಂಡುಕೊಳ್ಳತೊಡಗಿದಳು.

ಆ ರಾತ್ರಿಯನ್ನು ಅಲ್ಲಿ ಅಲ್ಲಿ ಕಳೆದರು. ಬೆಳಗ್ಗೆ ಹೊರಡಲು ಉದ್ಯುಕ್ತಳಾದಳು ಮಹಾದೇವಿ. ಅಷ್ಟರಲ್ಲಿ ಸಂಗಮದೇವರಿಂದ ಅನಿರೀಕ್ಷಿತವಾದ ನಿರ್ಧಾರವನ್ನು ಕೇಳಬೇಕಾಯಿತು :

"ಇನ್ನು ನೀನು ಕಲ್ಯಾಣದ ಕಡೆಗೆ ನಡೆಯಮ್ಮ. ಬಸವಣ್ಣನ ರಕ್ಷಣೆಯ ವ್ಯವಸ್ಥೆ ನಿನ್ನ ಹಿಂದಿದೆ. ಇನ್ನು ನಾನು ನನ್ನ ಮಾರ್ಗವನ್ನು ಹಿಡಿಯುತ್ತೇನೆ."

ಅವರ ಈ ಮಾತಿನಿಂದ ಮಹಾದೇವಿಗೆ ಏನು ಮಾಡಬೇಕೆಂಬುದೇ ತಿಳಿಯದಂತಾಯಿತು.

"ಏಕೆ ಗುರುಗಳೇ, ನೀವು ಕಲ್ಯಾಣಕ್ಕೆ ಬರುವುದಿಲ್ಲವೇ ? ಇಷ್ಟು ದೂರ ಬಂದವರು ಅಣ್ಣನ ದರ್ಶನ ಪಡೆಯುವುದಿಲ್ಲವೆ ?" – ಕೇಳಿದಳು ಮಹಾದೇವಿ.

"ಇಲ್ಲವಮ್ಮ ; ಅಣ್ಣನಿಂದ ತೆಗೆದುಕೊಂಡು ಬಂದ ಸಂದೇಶವನ್ನು ಆತನು ನಿರೀಕ್ಷಿಸಿದ ಮಟ್ಟದಲ್ಲಿ ನಾನಿನ್ನೂ ಜನತೆಗೆ ಮುಟ್ಟಿಸಿಲ್ಲ. ಕರ್ನಾಟಕದ ದಕ್ಷಿಣದ ಕೊನೆಯವರೆಗೂ ಹೋಗಿ ಬರಬೇಕೆಂಬುದು ಅಣ್ಣನ ಆದೇಶವಾಗಿತ್ತು. ಆದರೆ..."

ಅಷ್ಟರಲ್ಲಿ ಮಹಾದೇವಿ ಕೇಳಿದಳು :

"ಅದಕ್ಕೆ ನನ್ನಿಂದ ವಿಘ್ನವುಂಟಾಯಿತು."

"ಇಲ್ಲ... ಇಲ್ಲ... ಇದೂ ಒಂದು ದೊಡ್ಡ ಭಾಗ್ಯವೆಂದೇ ಭಾವಿಸಿದ್ದೇನೆ. ಊರ್ಧ್ವಮುಖವಾಗುವ ಚೇತನ ಒಂದಕ್ಕೆ ಸಹಾಯಕನಾಗುವ ಅವಕಾಶ ಲಭಿಸಿತು. ನನ್ನ ಸಹಾಯವಿಲ್ಲದಿದ್ದರೂ ನಿನ್ನ ಸಾಧನೆಯ ಈ ಮಹಾಯಾತ್ರೆ ನಿನ್ನ ನಿಷ್ಠೆಯಿಂದಲೇ ನಿರ್ವಿಘ್ನವಾಗಿ ನೆರವೇರುತ್ತಿತ್ತು. ಆದರೆ ನೆಪಮಾತ್ರಕ್ಕಾದರೂ ನೆರವಾಗುವ ಅವಕಾಶ ಬಂದುದು ನನ್ನ ಪುಣ್ಯ."

"ತಾವು ಹೀಗೆ ಹೇಳಬಾರದು, ಗುರುಗಳೇ. ತಾವು ಹಿರಿಯರು, ಹರಸಬೇಕು. ನನ್ನ ಗುರುಗಳಾದ ಗುರುಲಿಂಗದೇವರ ಆಶೀರ್ವಾದ ಮತ್ತು ತಮ್ಮ ಕೃಪೆ ನನ್ನನ್ನು ಉದ್ಧರಿಸಿದುವು. ಇನ್ನು ಮುಂದೆಯೂ ಅವು ನನಗೆ ಬೆಂಬಲವಾಗಿ ನಿಲ್ಲಬೇಕು. ಈಗ ತಾವು ಹಿಂದಕ್ಕೆ ತಿರುಗಿಹೋಗುತ್ತೀರ, ಗುರುಗಳೇ ?"

"ಇಲ್ಲ, ಮಹಾದೇವಿ, ನನ್ನ ಶಿಷ್ಯರಿಗೆ ಹಂಪೆಯ ಕಡೆಗೆ ಬರುವಂತೆ ಹೇಳಿ ಬಂದಿದ್ದೆ. ಅಲ್ಲಲ್ಲಿ ಪ್ರವಚನ ಮಾಡುತ್ತಾ ನಿಧಾನವಾಗಿ ಅವರು ಅಲ್ಲಿಗೆ ಬರುತ್ತಾರೆ. ನಾನು ಅಷ್ಟರಲ್ಲಿ ಅಲ್ಲಿಗೆ ಹೋಗಿ ಅವರನ್ನು ಕೂಡಿಕೊಳ್ಳುತ್ತೇನೆ. ಅಲ್ಲಿಂದ ಮತ್ತೆ ದಕ್ಷಿಣದ ಕಡೆಗೆ ಹೋಗುತ್ತೇವೆ."

"ಅಂದು ಅನಿರೀಕ್ಷಿತವಾಗಿ ಸಾಕ್ಷಾತ್ ಕೂಡಲಸಂಗಮನೇ ಅವತರಿಸಿದಂತೆ ಬಳಿಗೆ ಬಂದಿರಿ. ಇದುವರೆಗೂ ನನ್ನನ್ನು ರಕ್ಷಿಸಿದಿರಿ. ಈಗ ನಿಮ್ಮನ್ನು ಅಗಲಿ ನಾನು ಮುಂದಕ್ಕೆ ಹೇಗೆ ಹೋಗಲಿ, ಗುರುಗಳೇ" ಎನ್ನುವಾಗ ಮಹಾದೇವಿಯ ಕಣ್ಣುಗಳಲ್ಲಿ ಹನಿಯಾಡುತ್ತಿತ್ತು.

"ಯೋಚಿಸಬೇಡ, ಮಗಳೇ ನಿನ್ನ ಹುಟ್ಟಿದೂರನ್ನೂ, ತಂದೆತಾಯಿಗಳನ್ನೂ ಬಿಟ್ಟು ಬಂದಿರುವ ಮಾಯಾಮೋಹವರ್ಜಿತವಾದ ನಿನ್ನ ಹೃದಯಕ್ಕೆ ಇದು ಬಂಧನವಾಗಲಾರದು. ಮಾನವೀಯವಾದ ವಾತ್ಸಲ್ಯ ತಾತ್ಕಾಲಿಕವಾಗಿ ನಿನ್ನನ್ನು ಹಾಗೆ ನುಡಿಸುತ್ತಿದೆ. ಅದನ್ನು ಬದಿಗಿಡು. ಕಲ್ಯಾಣದಲ್ಲಿ ಶರಣರ ಅನುಭವದಿಂದ ನಿನ್ನ ಸಾಧನೆ ಪೂರ್ಣಗೊಳ್ಳುತ್ತದೆ. ಚೆನ್ನಮಲ್ಲಿಕಾರ್ಜುನನ ಚೆನ್ನಸತಿಯಾಗಿ ಸಮರಸ ಸುಖವನ್ನು ಪಡೆಯುತ್ತೀಯ."

ಕಣ್ಣುಗಳನ್ನು ಒರೆಸಿಕೊಳ್ಳುತ್ತಾ ಮಹಾದೇವಿ ನಮಸ್ಕರಿಸಿದಳು. ಮೇಲೇಳುತ್ತಾ ಹೇಳಿದಳು:

"ಮತ್ತೆ ತಮ್ಮ ದರ್ಶನ ಯಾವಾಗ ಗುರುಗಳೇ ?"

"ಹೀಗೇ... ಶಿವನಿಚ್ಛೆ ಇದ್ದರೆ ನನ್ನ ಧರ್ಮಯಾತ್ರೆಯನ್ನು ಮುಗಿಸಿಕೊಂಡು ಮತ್ತೆ ಕಲ್ಯಾಣಕ್ಕೆ ಬರಬೇಕೆಂಬ ಆಸೆಯುಳ್ಳವನಾಗಿದ್ದೇನೆ. ಆಗ ನೋಡೋಣ. ಇಲ್ಲವಾದರೆ ನಮ್ಮ ನಮ್ಮ ಹೃದಯಗಳಲ್ಲಿ ಈ ಭಾವನೆ ಸದಾ ಜೀವಂತವಾಗಿರುವುದರಿಂದ ಹೊರಗಿನ ದರ್ಶನಕ್ಕಾಗಿ ಹಂಬಲಿಸುವುದು ಬೇಡ – ಎಂದು ತೃಪ್ತರಾಗೋಣ. ಜಂಗಮ ಎನ್ನುವ ಮಾತಿನ ಅರ್ಥ ಇದೇ. ಜಂಗಮವಾದ ಈ ಜಗತ್ತಿನಲ್ಲಿ ಸದಾ ಸಂಚರಿಸುತ್ತಾ ಅಚಲವಾದ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡು ನಿಶ್ಚಲ ಮನಸ್ಸುಳ್ಳವರಾಗಿರುವುದು. ನಿನ್ನ ಸಾಧನೆ ಆ ಮಟ್ಟಕ್ಕೇರಲಿ. ನಿನ್ನಲ್ಲಿ ಸಹಜವಾಗಿರುವ ಆ ಶಕ್ತಿ, ಸಾಧನೆಯಿಂದ ಸಾರ್ಥಕವಾಗಲಿ. ಸ್ತ್ರೀತ್ವದ ಪರಿಪೂರ್ಣತೆಯಿಂದ ಜಗತ್ತಿಗೊಂದು ದಿವ್ಯಸಂದೇಶ ದೊರಕಲಿ. ನಾನಿನ್ನು ಬರುತ್ತೇನೆ, ತಾಯಿ" ಎಂದು ಅಲ್ಲಿಂದ ಹೊರಟರು ಸಂಗಮದೇವರು.

ಮಹಾದೇವಿ ಮಾತನಾಡುವುದನ್ನೂ ಮರೆತು ಅವರನ್ನೇ ನೋಡುತ್ತಿದ್ದಳು. ಅವರು ಮರೆಯಾದಮೇಲೂ ಸ್ವಲ್ಪ ಹೊತ್ತು ಪ್ರಸಾದಮಂದಿರದ ಕಟ್ಟೆಯ ಮೇಲೆ ನಿಶ್ಚಲವಾಗಿ ಕುಳಿತಿದ್ದಳು.

ಇದನ್ನೆಲ್ಲಾ ನೋಡುತ್ತಿದ್ದ ಪ್ರಸಾದಮಂದಿರದ ವ್ಯವಸ್ಥೆಯ ಅಧಿಕಾರಿ ಸ್ವಲ್ಪ ಹೊತ್ತಿನ ಅನಂತರ ಮೆಲ್ಲಗೆ ಹತ್ತಿರ ಬಂದು, ಗೌರವಪೂರ್ಣವಾದ ಭಾವನೆಯಿಂದ ಕೇಳಿದ :

"ತಾಯಿ, ಬಿಸಿಲೇರುತ್ತಿದೆ ; ತಮ್ಮ ಮುಂದಿ ಪ್ರಯಾಣಕ್ಕೆ ಹೊತ್ತಾಗುತ್ತದೆ."

ಮಹಾದೇವಿ ಎಚ್ಚತ್ತವಳಂತೆ ಎದ್ದು ನಿಂತಳು.

"ಹೌದು ಹೊತ್ತಾಗುತ್ತದೆ.... ಎಚ್ಚರಿಸಿ ಒಳ್ಳೆಯದು ಮಾಡಿದಿರಿ. ನಾನಿನ್ನು ಹೊರಡುತ್ತೇನೆ."

"ತಮ್ಮ ಪ್ರಯಾಣಕ್ಕೆ ತಕ್ಕ ವ್ಯವಸ್ಥೆಯನ್ನು ನಾನು ಮಾಡುತ್ತೇನೆ. ಕಲ್ಯಾಣಕ್ಕೆ ತಮ್ಮನ್ನು ಕಳುಹಿಸಿಕೊಡುತ್ತೇನೆ" – ಹೇಳಿದ ಅಧಿಕಾರಿ.

"ಕ್ಷಮಿಸು ಅಣ್ಣ, ಇದುವರೆಗೂ ಬಂದಂತೆಯೇ ನಾನು ಮುಂದೆಯೂ ನಡೆಯತಕ್ಕವಳು."

"ಇದುವರೆಗೂ ಗುರುಗಳು ಜೊತೆಯಿದ್ದರು. ಈಗ ತಾವು ಒಬ್ಬರೇ ಆಗಿದ್ದೀರಿ..."

"ಈಗಲೂ ನಾನೊಬ್ಬಳೇ ಅಲ್ಲ, ಗುರುಗಳು ಅತ್ತ ಹೋದರೂ ಅವರ ಕೃಪಾಶೀರ್ವಾದ ನನ್ನ ಬೆನ್ನ ಹಿಂದೆಯೇ ಬರುತ್ತದೆ. ಆದ್ದರಿಂದ ನನಗೇನೂ ಯೋಚನೆಯಿಲ್ಲ. ನಾನಿನ್ನು ಬರುತ್ತೇನೆ" ಎಂದು ಹೊರಟೇಬಿಟ್ಟಳು. ಹೆಚ್ಚೇನೂ ಹೇಳಲಾರದೆ ನಿಂತು ನೋಡುತ್ತಿದ್ದ ಅಧಿಕಾರಿ.

'ಗುರುಗಳ ಆಶೀರ್ವಾದ ಬೆನ್ನಹಿಂದೆಯೇ ಇದೆ'ಯೆಂದು ಹೇಳಿದರೂ ಮಹಾದೇವಿಗೆ ಹೆಜ್ಜೆ ಹೆಜ್ಜೆಗೂ ಏಕಾಂತತೆಯ ಅನುಭವ ಆಗತೊಡಗಿತ್ತು.

ಇದುವರೆಗಿನ ತನ್ನ ಜೀವನದ ಚಿತ್ರಗಳೆಲ್ಲಾ ಮನಸ್ಸಿನ ಮುಂದೆ ಸುಳಿಯುವುವು. ತಂದೆತಾಯಿಗಳನ್ನು ನೆನೆಸಿಕೊಳ್ಳುವಳು ; ಗುರುಗಳ ಸ್ಮರಣೆ ಉಕ್ಕುವುದು.

ಅವರೆಲ್ಲರನ್ನೂ ಬಿಟ್ಟು ಬಂದ ತಾನು ಇಂದು ಏಕಾಂಗಿನಿ ಎಂಬ ಭಾವವೂ ಒಮ್ಮೊಮ್ಮೆ ಸುಳಿಯುವುದು. ಉರಿಯುತ್ತಿರುವ ಬಿಸಿಲಿನಲ್ಲಿ ಮಿಂಚುತ್ತಿರುವ ಆ ಕಪ್ಪು ಮಣ್ಣಿನ ವಿಸ್ತಾರವಾದ ಬಯಲಿನಲ್ಲಿ ನಡೆಯುತ್ತಿರುವಾಗ ಹೊರಗಿನ ಬಸಿಲೇ ಅಂತರಂಗದಲ್ಲಿ ಉಕ್ಕಿಬಂದು ಗಂಟಲನ್ನು ಹಿಡಿದಂತಾಗುವುದು. ಆದರೆ

ಮರುಕ್ಷಣದಲ್ಲಿಯೇ ಮನಸ್ಸು ನುಡಿಯುವುದು :

'ನೀನೇಕೆ ಏಕಾಂಗಿನಿ ? ಕಲ್ಯಾಣದ ಅಣ್ಣನ ಮಹಾ ಬಳಗವನ್ನು ಸೇರಲು ಹೊರಟಿದ್ದೀಯ'

ಈ ಸ್ಮರಣೆಯೇ ಅವಳಿಗೆ ಹೊಸ ಚೈತನ್ಯವನ್ನು ತುಂಬುವುದು. ಹೆಜ್ಜೆ ಹೆಜ್ಜೆಗೂ ಕಲ್ಯಾಣ ಹತ್ತಿರವಾಗುತ್ತಿದೆಯೆಂಬ ಸಂತೋಷದ ಸ್ಮರಣೆಯ ಮಂತ್ರವನ್ನು ಜಪಿಸುತ್ತಾ ಮುಂದೆ ನಡೆಯುತ್ತಿದ್ದಳು.

ಆ ದಿನವೆಲ್ಲಾ ನಡೆದು ಸಂಜೆಯ ವೇಳೆಗೆ ಒಂದು ಹಳ್ಳಿಯನ್ನು ತಲುಪಿದಳು. ಅಲ್ಲಿ ಅವಳ ಬರವನ್ನೇ ಕಾಯುತ್ತಿದ್ದಂತೆ ನಿಂತಿದ್ದ ಇಬ್ಬರು ಜಂಗಮರು ಅವಳನ್ನು ಎದುರುಗೊಂಡು ಆ ಹಳ್ಳಿಯಲ್ಲಿರುವ ಚಿಕ್ಕ ಮಠವೊಂದಕ್ಕೆ ಕರೆದೊಯ್ದರು. ಅಲ್ಲಿ ರಾತ್ರಿ ಮಹಾದೇವಿಯ ಊಟ – ವಸತಿಯ ವ್ಯವಸ್ಥೆಯಾಯಿತು.

ಅಲ್ಲಿಂದ ಕೇವಲ ಒಂದು ಅರ್ಧದಿನದ ದಾರಿ ಕಲ್ಯಾಣಕ್ಕೆ ಎಂಬುದನ್ನು ಮಹಾದೇವಿ ಕೇಳಿ ತಿಳಿದಳು. ಆ ರಾತ್ರಿಯೆಲ್ಲಾ ಕಲ್ಯಾಣದ ಕನಸಿನಲ್ಲಿಯೇ ಕಳೆದಳು. ಬೆಳಿಗ್ಗೆ ಅಷ್ಟುಹೊತ್ತಿಗೆ ಎದ್ದು ಮತ್ತೆ ಪ್ರಯಾಣವನ್ನು ಮುಂದುವರಿಸಿದಳು.

ಗುರಿಯನ್ನು ಸೇರುವ ತೃಪ್ತಿ ಸಂತೋಷಗಳು ಇದುವರೆಗಿನ ಆಯಾಸವನ್ನೆಲ್ಲಾ ಮರೆಸಿದ್ದುವು. ಮಧ್ಯಾಹ್ನದ ಬಿಸಿಲು ಕೂಡ ಇಂದು ಅವಳಿಗೆ ತಂಪಾಗಿತ್ತು. ಹೊತ್ತು ಸ್ವಲ್ಪ ಇಳಿಮುಖವಾಗುತ್ತಿರುವ ವೇಳೆಗೆ ಕಲ್ಯಾಣಪಟ್ಟಣ ಅವಳ ಕಣ್ಣಿಗೆ ಬಿತ್ತು. ದಾರಿಯಲ್ಲಿ ಎದುರಿಗೆ ಬರುತ್ತಿರುವವರಿಂದ ಕೇಳಿ ತಿಳಿದಳು ಅದೇ ಕಲ್ಯಾಣವೆಂಬುದನ್ನು. ಊರು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಮರಗಿಡಗಳಿಂದ ಆವೃತ್ತವಾಗಿದ್ದ ಆ ಸ್ಥಳ, ಊರಿನ ದಿಕ್ಸೂಚನೆಯನ್ನು ಕೊಡುವಂತಿತ್ತು.

ಬಸವಣ್ಣನ ಭಕ್ತಿಯ ಬೆಳಸಿನ ರಕ್ಷಣೆಗೆಂಬಂತೆ ಎತ್ತರವಾಗಿ ತಲೆಯೆತ್ತಿ ನಿಂತಿದ್ದ ರಾಜಧಾನಿಯ ಕೋಟೆಯ ಗೋಡೆ ಮಾತ್ರ ಕಣ್ಣಿಗೆ ಬೀಳುತ್ತಿತ್ತು.

ಮಹಾದೇವಿ ಇನ್ನೂ ಸ್ವಲ್ಪ ಮುಂದೆ ನಡೆದಳು. ಕೋಟೆಯ ಮುಂಭಾಗ ಈಗ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಮಹಾದೇವಿ ರಸ್ತೆಯ ಪಕ್ಕದಲ್ಲಿದ್ದ ಒಂದು ಸಣ್ಣ ದಿಣ್ಣೆಯನ್ನೇರಿದಳು. ಗೋಡೆಯನ್ನು ಭೇದಿಸಿಕೊಂಡು ಒಳಗಿರುವ ಬಸವನೆಂಬ ಜ್ಯೋತಿಯನ್ನು ನೋಡಲು ಹವಣಿಸುವ ದಿವ್ಯ ದೃಷ್ಟಿಯೋ ಎಂಬಂತೆ ನಟ್ಟಾಲಿಯಿಂದ ಅತ್ತಲೇ ದಿಟ್ಟಿಸಿ ನೋಡುತ್ತಾ ಅಲ್ಲಿ ಕುಳಿತುಕೊಂಡಳು.

**೭**

ಬಹುಕಾಲದ ತನ್ನ ತಪಸ್ಸು ಸಿದ್ಧಿಸುವ ಮುಹೂರ್ತವನ್ನು ನಿರೀಕ್ಷಿಸುತ್ತಿರುವ ಯೋಗಿಯಂತೆ ಮಹಾದೇವಿ ಕಲ್ಯಾಣದತ್ತ ದೃಷ್ಟಿಯನ್ನು ಹರಸಿದ್ದಳು. ಗೂಡನ್ನು ಸೇರಿಕೊಳ್ಳುವ ಹಕ್ಕಿ, ಗೂಡಿನ ಸುತ್ತ ಸ್ವಲ್ಪ ಹೊತ್ತು ಹಾರಾಡಿ ಅನಂತರ ಒಳಗೆ ಹೋಗುವಂತೆ, ಕಲ್ಯಾಣವನ್ನು ಪ್ರವೇಶಿಸುವ ಮುನ್ನ ಮಹಾದೇವಿಯ ದೃಷ್ಟಿ, ಕಲ್ಯಾಣದ ಸುತ್ತ ಪ್ರದಕ್ಷಿಣೆಯನ್ನು ಹಾಕುತ್ತಿರುವಂತೆ ತೋರುತ್ತಿತ್ತು.

ಸ್ವಲ್ಪ ಹೊತ್ತು ಹಾಗೆಯೇ ಕುಳಿತಿದ್ದಳು. ಸೂರ್ಯನಾಗಲೇ ಇಳಿಮುಖವಾಗುತ್ತಿದ್ದ. ಸಾಯಂಕಾಲದ ಗಾಳಿ ಕಲ್ಯಾಣದತ್ತಲಿಂದ ಬೀಸುತ್ತಾ ಮಹಾದೇವಿಗೆ ಸ್ವಾಗತವನ್ನು ನೀಡುವಂತಿತ್ತು. ಮರಗಿಡಗಳೆಲ್ಲ ತಲೆಬಾಗಿ ಕರೆಯುತ್ತಿದ್ದವು. ಮಹಾದೇವಿ ಮೇಲೆದ್ದು ನಡೆಯತೊಡಗಿದಳು.

ಎದುರಿನಿಂದ ಒಬ್ಬ ಜಂಗಮ ಬರುತ್ತಿರುವುದನ್ನು ಮಹಾದೇವಿ ನೋಡಿದಳು. ಮಹಾದೇವಿ ಬರುತ್ತಿರುವುದನ್ನು ಕಂಡು ಆತ ಅಲ್ಲಿಯೇ ಒಂದು ಮರದ ಬುಡದಲ್ಲಿ ನಿಂತ. ಮಹಾದೇವಿ ಹತ್ತಿರ ಹತ್ತಿರ ಬರುತ್ತಿದ್ದಳು.

ಒಂದೇ ಸಮನೆ ಅವಳನ್ನು ದಿಟ್ಟಿಸಿ ನೋಡತೊಡಗಿದ್ದ ಆ ವ್ಯಕ್ತಿ, ಅವಳು ಸಮೀಪಕ್ಕೆ ಬಂದೊಡನೆಯೇ ಓಡಿಬಂದು :

"ಮಹಾದೇವಿ, ಕ್ಷಮಿಸು ತಾಯಿ" ಎಂದು ನಮಸ್ಕರಿಸಿದ.

ಮಹಾದೇವಿ ಬೆಚ್ಚಿದಳು. ಹಿಂದಕ್ಕೆ ಸರಿದು ಅವನನ್ನೇ ನೋಡುತ್ತಾ ಕೇಳಿದಳು:

ನೀನಾರು, ಅಣ್ಣ ? ನನ್ನ ಹೆಸರು ನಿನಗೆ ಹೇಗೆ ಗೊತ್ತಾಯಿತು ?"

"ನಿನ್ನ ಕೀರ್ತಿ ಕಲ್ಯಾಣದಲ್ಲಿ ಆಗಲೇ ಜನಜನಿತವಾಗಿದೆ, ತಾಯಿ. ಇಂದು ಇಲ್ಲಿಗೆ ಬರುವ ನಿನ್ನನ್ನು ಗುರುತಿಸಿ ಕರೆದು ತರುವುದಕ್ಕಾಗಿಯೇ ಬಸವಣ್ಣನವರು ನನ್ನನ್ನು ಕಳುಹಿಸಿಕೊಟ್ಟಿದ್ದಾರೆ. ನಾನು ಕಿನ್ನರಿ ಬೊಮ್ಮಣ್ಣ."

ಮಹಾದೇವಿ ಅಚ್ಚರಿಯಿಂದ ಅವನನ್ನೇ ನೋಡಿದಳು.

"ಶರಣ ಕಿನ್ನರಿಬೊಮ್ಮಣ್ಣ, ನಿನಗೆ ನಮೋ ನಮಃ ! ನೀನು ನನಗೆ ವಂದಿಸುವುದೇ, ಅಣ್ಣ?"

"ಇಲ್ಲ ತಾಯಿ, ನಿನ್ನ ಮಹತ್ವವನ್ನು ತಿಳಿಯದೆ ಅಪರಾಧವನ್ನು ಮಾಡಿದೆ. ಆದಕ್ಕಾಗಿ ಕ್ಷಮಿಸಬೇಕು. ಅದೇನೆಂಬುದನ್ನು ಹೇಳಿಬಿಡುತ್ತೇನೆ. ನೀವಿನ್ನೂ ಹರೆಯದ ತರುಣಿ ಮತ್ತು ರೂಪವತಿ ಎಂದು ಕೇಳಿದ್ದ ನಾನು ನಿಮ್ಮ ಮನೋನಿಗ್ರಹದ ಪರೀಕ್ಷೆಯನ್ನು ಮಾಡಬೇಕೆಂದು ಮನಸ್ಸು ಮಾಡಿದೆ. ಒಡೆಯರು ಹೇಳಿದ ಕೆಲಸವನ್ನು ನಿರ್ವಹಿಸುವುದನ್ನು ಬಿಟ್ಟು ಇಲ್ಲದ ಅಧಿಕಪ್ರಸಂಗಕ್ಕೆ ಕೈಯಿಟ್ಟೆ.

ತಾತ್ಕಾಲಿಕವಾದ ನನ್ನ ಮೋಹದ ದೃಷ್ಟಿಯಿಂದ ನಿನ್ನನ್ನು ಚಂಚಲಗೊಳಿಸಬೇಕೆಂಬ ಪ್ರಯತ್ನದಿಂದ ನಟನೆಯನ್ನು ಕೈಕೊಂಡೆ. ಆದರೆ ನೀನು ಹತ್ತಿರ ಹತ್ತಿರ ಬಂದಂತೆಲ್ಲಾ ಆ ಮನೋಧರ್ಮವೇ ಬದಲಾಗಿ ಹೋಯಿತು, ತಾಯಿ. ನಿನ್ನ ಈ ಸುಂದರವಾದ ದೇಹದಲ್ಲಿ ಸಾಮಾನ್ಯ ಹೆಣ್ಣಿನ ಮೋಹಕವಾದ ಆಕರ್ಷಣೆಯನ್ನು ಅಣುಮಾತ್ರವೂ ಕಾಣದಾದೆ. ನಿನ್ನ ಕಣ್ಣುಗಳಲ್ಲಿಯೂ ವೈರಾಗ್ಯ ಮೈವೆತ್ತು ಪ್ರಜ್ವಲಿಸುತ್ತಿರುವುದನ್ನು ಕಂಡುಕೊಂಡೆ. ನಿನ್ನ ಕಣ್ಣುಗಳಲ್ಲಿರುವ ದೈವಿಕ ಶಕ್ತಿ ನನ್ನನ್ನು ಚುಚ್ಚಿ ಎಚ್ಚರಗೊಳಿಸಿತು. ಕ್ಷಣಕಾಲವಾದರೂ ನನ್ನ ಮನಸ್ಸಿನಲ್ಲಿ ಈ ಭಾವನೆಯುಂಟಾದುದು ಅಪರಾಧವಲ್ಲವೇ? ಅದಕ್ಕಾಗಿ ನನ್ನನ್ನು ಕ್ಷಣಿಸಬೇಕು."

"ಇಲ್ಲ, ಅಣ್ಣಾ ! ಅದು ಅಪರಾಧವಲ್ಲ. ನಿಮ್ಮೆಲ್ಲರ ಪರೀಕ್ಷೆಯ ಅಗ್ನಿಕುಂಡದಲ್ಲಿ ಹಾಕಿ ನನ್ನ ಒರೆಗೆ ಹಚ್ಚಿ ನೋಡಿರಿ. ಕಡಿದು ಬಡಿದು ನೋಡಿರಿ. ಕಾಳಿಕೆಯನ್ನು ಕಳೆಯಿರಿ" – ಹೇಳಿದಳು ಮಹಾದೇವಿ.

"ಅದು ಬಹಳ ದೊಡ್ಡ ಮಾತು. ಕಾಳಿಕೆಯಿಲ್ಲದ ಶುದ್ಧ ಅಪರಂಜಿಯ ವಿಗ್ರಹದಂತೆ ನೀನು ಬಂದಿದ್ದೀಯ, ತಾಯಿ" – ವಿನಯದಿಂದ ಹೇಳಿದ ಕಿನ್ನರಿ ಬೊಮ್ಮಣ್ಣ.

"ಒಂದು ವೇಳೆ ಅದೇ ನಿಜವಾದರೂ, ಈ ವಿಗ್ರಹಕ್ಕೆ ಅನುಭಾವದ ಪ್ರಾಣ ಪ್ರತಿಷ್ಠೆಯಾಗಬೇಕಾಗಿದೆ. ಅಣ್ಣಾ. ಅದಕ್ಕಾಗಿ ಇಲ್ಲಿಗೆ ಬಂದಿದ್ದೇನೆ. ಈ ಕಲ್ಯಾಣದ ಶರಣರ ಸಮ್ಮುಖದಲ್ಲಿ, ಅವರ ಕೃಪೆಯಿಂದ ನನ್ನ ಕಲ್ಯಾಣವಾಗಬೇಕಾಗಿದೆ."

'ಆಗಬಹುದು ಮಹಾದೇವಿ, ದಯಮಾಡಿಸಬೇಕು. ಈ ಸ್ವಾಗತವನ್ನು ಬಯಸುವ ಗೌರವವನ್ನು ನನಗೆ ಕೊಟ್ಟ ಅಣ್ಣನವರು ನನ್ನ ಮೇಲೆ ಅಪಾರವಾದ ಅನುಗ್ರಹವನ್ನು ಮಾಡಿದ್ದಾರೆ. ಅದನ್ನು ನಾನು ಎಂದೂ ಮರೆಯಲಾರೆ – ಹೀಗೆ ದಯಮಾಡಿಸಬೇಕು."

ಎಂದು ಮಹಾದೇವಿಯನ್ನು ಕರೆದುಕೊಂಡು ಹೊರಟ. ಕೋಟೆಯ ಗೋಡೆಯ ಬಳಿಗೆ ಬಂದರು. ಅದರಿಂದ ಎಡಕ್ಕೆ ತಿರುಗಿ ಸ್ವಲ್ಪ ದೂರ ನಡೆಯುವ ವೇಳೆಗೆ ಮಹಾದ್ವಾರ ಕಾಣಿಸಿತು. ಅಲ್ಲಿದ್ದ ಇಬ್ಬರು ಕಾವಲುಗಾರರು ಬಂದು ನಮಸ್ಕರಿಸಿದರು. ಗೌರವದಿಂದ ಹಿಂದಕ್ಕೆ ಸರಿದು ಇಬ್ಬರನ್ನೂ ಒಳಗೆ ಬರಮಾಡಿಕೊಂಡರು. ಮಹಾದೇವಿ ಬೊಮ್ಮಯ್ಯನೊಡನೆ ಕಲ್ಯಾಣವನ್ನು ಪ್ರವೇಶಿಸಿದಳು.

ಇದುವರೆಗೂ ತನ್ನ ಕಲ್ಪನೆಯಲ್ಲಿ ಕಂಡ ಕಲ್ಯಾಣವನ್ನು ಈಗ ಸಾಕ್ಷಾತ್ತಾಗಿ ಪ್ರವೇಶಿಸಿ ನಡೆಯುತ್ತಿರುವ ತನ್ನ ಭಾಗ್ಯವನ್ನು ಸ್ಮರಿಸಿಕೊಂಡು ಹಿಗ್ಗಿ ನಲಿಯುತ್ತಾ

ಬೊಮ್ಮಣ್ಣನನ್ನು ಹಿಂಬಾಲಿಸುತ್ತಿದ್ದಳು.

ಆಕೆಯ ದೃಷ್ಟಿಯಲ್ಲಿ ಕಲ್ಯಾಣವೆಂಬುದು ಕೇವಲ ಒಂದು ಪಟ್ಟಣವಾಗಿರಲಿಲ್ಲ. ಭಕ್ತಿರಸ ಪರಿಪೂರ್ಣನಾದ ಬಸವನೆಂಬ ಸ್ವಯಂಜ್ಯೋತಿಯನ್ನು ಬೆಳಗುತ್ತಿರುವ ಪ್ರಣತೆಯಂತೆ ಕಾಣಿಸಿತು.

'ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನ್ನೆರೆದು ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತ್ತಿರ್ದುದಯ್ಯ ಶಿವನ ಪ್ರತಾಪ !...' ಎಂದು ಪ್ರಭುದೇವರು ಹೇಳಿರುವ ಮಾತುಗಳನ್ನು ಸ್ಮರಿಸಿಕೊಂಡಳು. ಆ ಬೆಳಕಿನಲ್ಲಿ ಬೆಳಗುತ್ತಾ ಕಿರಣಗಳಂತೆ ಸಂಚರಿಸುತ್ತಿದ್ದ ಅಸಂಖ್ಯಾತ ಭಕ್ತಗಣಗಳನ್ನು ನೋಡುತ್ತಾ ಬರುತ್ತಿದ್ದಳು. ಇಂತಹ ಕಲ್ಯಾಣವನ್ನು ಹೊಗುವುದು ಸಾಮಾನ್ಯರಿಗೆ ಸಾಧ್ಯವಿಲ್ಲ :

ಕಲ್ಯಾಣವೆಂಬುದನಾರಿಗೆ ಹೊಗಬಾರದು,
ಹೊಗಬಾರದು, ಹೊಗಬಾರದು, ಅಸಾಧ್ಯವಯ್ಯ !
ಆಸೆ ಆಮಿಷವನಳಿದವಂಗಲ್ಲದೆ ಕಲ್ಯಾಣದತ್ತಲಡಿ ಇಡಬಾರದು !
ಒಳಹೊರಗು ಶುದ್ಧವಾದವರಿಗಲ್ಲದೆ ಕಲ್ಯಾಣವ ಹೊಗಬಾರದು !
ನಾನೆಂಬುದ ಹಿಡಿದವಂಗಲ್ಲದೆ ಕಲ್ಯಾಣವ ಹೊಗಬಾರದು,
ಒಳಗು ತಿಳಿದು, ಚೆನ್ನಮಲ್ಲಿಕಾರ್ಜುನಂಗೊಲಿದು,
ಉಭಯಲಜ್ಜೆಯಳಿದೆನಾಗಿ, ಕಲ್ಯಾಣವ ಕಂಡು,
ನಮೋ ನಮೋ ಎನುತಿರ್ದೆನು.

ಎಂದು ಕಲ್ಯಾಣದ ಮಹತ್ವವನ್ನು ಸಾಂಕೇತಿಕವಾಗಿ ವರ್ಣಿಸಿಕೊಳ್ಳುತ್ತಾ ನಡೆಯುತ್ತಿದ್ದಳು.

ಅಷ್ಟರಲ್ಲಿ ಬೊಮ್ಮಣ್ಣ ದೂರದಿಂದಲೇ ತೋರಿಸಿ ಹೇಳಿದ :

"ಅದೇ ಅಣ್ಣನವರ ಮಹಾಮನೆ !"

ಎತ್ತರವಾದ ಆ ಹರ್ಮ್ಯದ ಗೋಪುರದ ಭಾಗ ಮಾತ್ರ ಕಾಣಿಸಿತು. ಇನ್ನೂ ಮುಂದೆ ಹೋದಂತೆ ಭವ್ಯವಾದ ಆ ಪ್ರಾಸಾದ ಕಣ್ಣಿಗೆ ಬಿತ್ತು. ಕಲ್ಯಾಣವನ್ನೆಲ್ಲಾ ತನ್ನ ಧರ್ಮದ ರಕ್ಷೆಯಲ್ಲಿಟ್ಟು ಕಾಯುವ ಉದಾತ್ತತೆಯ ಸಂಕೇತವೆಂಬಂತೆ ಎತ್ತರವಾಗಿ ತಲೆಯೆತ್ತಿ ನಿಂತಿತ್ತು ಈ ಮಹಾಮನೆ.

'ಮಹಾಮನೆ !... ಹೌದು. ಅಂಧಶ್ರದ್ಧೆಯ ಅಂಧಕಾರವನ್ನು ಹೋಗಲಾಡಿಸಿ, ನಾಡಿಗೆಲ್ಲ ಧರ್ಮದ ಬೆಳಕನ್ನು ಬೀರುತ್ತಿರುವ ಈ ಮನೆ, ಮಹಾಮನೆಯೇ ಹೌದು' ಎಂದು ಆಲೋಚಿಸುತ್ತಾ ಮಹಾದೇವಿ ಮುಂದುವರಿಯುವಷ್ಟರಲ್ಲಿ

ಮಹಾಮನೆಯ ಸಮೀಪಕ್ಕೆ ಬಂದಿದ್ದರು. ಅದರ ಆವರಣದ ಹೆಬ್ಬಾಗಿಲನ್ನು ಪ್ರವೇಶಿಸಿದರು. ಅಷ್ಟರಲ್ಲಿ ಅಪ್ಪಣ್ಣ ಎದುರುಗೊಳ್ಳಲು ಬರುತ್ತಿರುವುದನ್ನು ಕಂಡು ಬೊಮ್ಮಯ್ಯ ಹೇಳಿದ :

"ಅಪ್ಪಣ್ಣಾ, ಮಹಾಶಿವಶರಣೆ ಮಹಾದೇವಿಯನ್ನು ಸ್ವಾಗತಿಸು."

ಮೂವರೂ ಮುಂದೆ ನಡೆದು ಮಹಾಮನೆಯನ್ನು ಪ್ರವೇಶಿಸಿದರು.

"ಗೋಷ್ಠಿ ಪ್ರಾರಂಭವಾಗಿದೆಯೇ, ಅಪ್ಪಣ್ಣಾ ?" – ಬೊಮ್ಮಯ್ಯ ಕೇಳಿದ. ಆದರೆ ಕಾರ್ಯಕ್ರಮ ಇನ್ನೂ ಪ್ರಾರಂಭವಾಗುವ ಸಮಯ. ಎಲ್ಲರೂ ಬಂದು ಸೇರಿದ್ದಾರೆ. ಆದರೆ ಕಾರ್ಯಕ್ರಮ ಇನ್ನೂ ಪ್ರಾರಂಭವಾಗಿಲ್ಲ. ಇಂದು ಪ್ರಭುದೇವರು ಶೂನ್ಯ ಸಿಂಹಾಸನದಲ್ಲಿ ಅಂತರ್ ಮುಖವಾಗಿ ಕುಳಿತುಬಿಟ್ಟಿದ್ದಾರೆ. ಬಹುಶಃ ಅವರು ಮಹಾದೇವಿಯನ್ನು ನಿರೀಕ್ಷಿಸುತ್ತಿರುವಂತೆ ತೋರುತ್ತಿದೆ. ದಯಮಾಡಿಸಬೇಕು, ತಾಯಿ."

"ತಾಳು ಪ್ರಭುದೇವರಲ್ಲಿ ನಿವೇದಿಸಿಕೊಂಡು ಬರುತ್ತೇನೆ" ಎಂದು ಬೊಮ್ಮಣ್ಣ ಅನುಭವಮಂಟಪದ ಕಡೆಗೆ ಓಡಿದ.

ಅಣ್ಣನವರ ಮಹಾಮನೆಯ ಮುಂಭಾಗದ ಒಂದು ಕೊನೆಯಲ್ಲಿ ಆವರಣದ ಗೋಡೆಗೆ ಸೇರಿದಂತೆ ಒಂದು ನೂತನ ಕಟ್ಟಡ ನಿರ್ಮಾಣವಾಗಿತ್ತು. ಅಲ್ಲಿ ಪ್ರತಿನಿತ್ಯವೂ ಶರಣರ ಕ್ರಾಂತಿಕಾರಕವಾದ ವಿಚಾರಗಳ ಧರ್ಮಜಿಜ್ಞಾಸೆ ನಡೆಯುತ್ತಿತ್ತು. ಅನುಭಾವದ ವಿಚಾರ ಮಥನವಾಗುತ್ತಿತ್ತು. ಅದನ್ನೇ ಶರಣರು 'ಅನುಭವಮಂಟಪ' ಎಂದು ಕರೆಯುತ್ತಿದ್ದರು.

ಅನುಭಾವದ ಮಹಾಮೇರು ಅಲ್ಲಮಪ್ರಭುದೇವ ಅದರ ಅಧ್ಯಕ್ಷ. ಅವನು ಬಂದು ಶೂನ್ಯಸಿಂಹಾಸನವನ್ನು ಅಲಂಕರಿಸಿದ ಮೇಲೆ ಅನುಭವಮಂಟಪಕ್ಕೆ ಜೀವಸಂಚಾರವಾದಂತಾಗಿತ್ತು. ಬಸವಣ್ಣನ ಕನಸು ನನಸಾಗತೊಡಗಿತ್ತು.

ವಿಷಯವನ್ನು ಮಂಡಿಸುವುದಕ್ಕಾಗಲೀ ಮಥಿಸುವುದಕ್ಕಾಗಲೀ ಚರ್ಚೆಯ ದಿಕ್ಕನ್ನು ನಿರ್ದೇಶಿಸುವುದಕ್ಕಾಗಲೀ ಅಲ್ಲಮನ ವ್ಯಕ್ತಿತ್ವವೇ ಕೇಂದ್ರವಾಗಿ ಪರಿಣಮಿಸಿತ್ತು. ಅಂತಹ ಪ್ರಭುದೇವ ಇಂದು ಅಂತರ್ಮುಖನಾಗಿ ಕುಳಿತಿರುವುದಕ್ಕೆ ಕಾರಣವನ್ನು ಊಹಿಸಿ ಬೊಮ್ಮಣ್ಣ, ತಾನು ಕರೆದು ತಂದಿರುವ ವ್ಯಕ್ತಿಯ ಬರವನ್ನು ತಿಳಿಸಲು ಅತ್ತ ನಡೆದ.

ಇತ್ತ ಅಪ್ಪಣ್ಣ ಮಹಾದೇವಿಯ ಆತಿಥ್ಯಕ್ಕಾಗಿ ಪ್ರಯತ್ನ ಮಾಡತೊಡಗಿದ. ಆದರೆ ಮಹಾದೇವಿ ಆದಾವುದನ್ನೂ ಸ್ವೀಕರಿಸುವಂತಿರಲಿಲ್ಲ. ಎಲ್ಲಕ್ಕಿಂತ ಹೆಚ್ಚಿನ ಆತಿಥ್ಯ ಅನುಭವಮಂಟಪದ ಕಡೆಯಿಂದ ಬರಬೇಕಾಗಿತ್ತು ಆಕೆಗೆ. ಬಹುದಿನದ

ತಪಸ್ಸು ಸಿದ್ಧಿಸುವ ಪುಣ್ಯ ಮುಹೂರ್ತವನ್ನು ನೆನೆಯುತ್ತಾ ಅನುಭವಮಂಟಪದತ್ತಲೇ ನೋಡುತ್ತಾ ನಿಂತಿದ್ದಳು.

ಅಷ್ಟರಲ್ಲಿ ಬೊಮ್ಮಣ್ಣ ಸಂಭ್ರಮದಿಂದ ಓಡಿಬರುತ್ತಾ :

"ದಯಮಾಡಿಸಬೇಕು, ತಾಯಿ.... ಪ್ರಭುದೇವರು ಕರೆದುತರುವಂತೆ ಹೇಳಿದ್ದಾರೆ. ಅಣ್ಣನವರೂ ಶರಣೆಯರೂ ತಮ್ಮ ಆಗಮನವನ್ನು ನಿರೀಕ್ಷಿಸುತ್ತಿದ್ದಾರೆ."

ಈ ಮಾತುಗಳನ್ನು ಕೇಳುತ್ತಿದ್ದಂತೆಯೇ ಮಹಾದೇವಿಯ ಮನಸ್ಸಿನಲ್ಲಿ ಮಿಂಚಿನ ಬೆಳಕು ಸಂಚರಿಸಿದಂತಾಯಿತು. ಹೃದಯ ಉಕ್ಕೇರಿತು. ಆ ಮಹಾಶಕ್ತಿಗಳ ಎದುರಿನಲ್ಲಿ ತಾನು ಹೋಗಿ ಅವರೊಡನೆ ನುಡಿಯುವುದು ಹೇಗೆಂಬ ಅಳುಕೂ ಬಾರದಿರಲಿಲ್ಲ. ಈ ಎಲ್ಲ ಭಾವನೆಗಳೂ ಮನದಲ್ಲಿ ಮಥಿಸುತ್ತಿದ್ದಂತೆಯೇ ಮಹಾದೇವಿ ಅನುಭವಮಂಟಪದ ಬಾಗಿಲಲ್ಲಿ ನಿಂತಿದ್ದಳು.

ಕಿನ್ನರಿ ಬೊಮ್ಮಣ್ಣ ಅವಳನ್ನು ಅನುಭವಮಂಟಪದ ಒಳಗೆ ಕರೆದುತಂದುಬಿಟ್ಟು ತಾನು ಪಕ್ಕಕ್ಕೆ ಸರಿದು ಶರಣರ ಗುಂಪನ್ನು ಸೇರಿದ. ಮಹಾದೇವಿ ಒಳಗೆ ಪ್ರವೇಶಿಸಿ ನಾಲ್ಕು ಹೆಜ್ಜೆ ನಡೆದಳು. ಎತ್ತರವಾದ ಪೀಠದ ಮೇಲೆ ಕುಳಿತಿರುವ ತೇಜಸ್ವಿಯಾದ ಮೂರ್ತಿಯೇ ಮೊಟ್ಟಮೊದಲು ಆಕೆಯ ಕಣ್ಣಿಗೆ ಗೋಚರಿಸಿತು.

ಪ್ರಭುದೇವನ ಆ ದಿವ್ಯವಾಂಗಳ ವಿಗ್ರಹವನ್ನು ಕಂಡು ಮುಂದುವರಿಯುತ್ತಿದ್ದಂತೆಯೇ ಶರಣರೆಲ್ಲಾ ಮೇಲೆದ್ದು ನಿಂತರು. "ಮಹಾದೇವಿಗೆ ಶರಣಾರ್ಥಿ" ಎಂಬ ಧ್ವನಿ ಅನುಭವಮಂಟಪವನ್ನು ಅನುರಣಗೊಳಿಸಿತು. ಮಹಾದೇವಿ ವಿನಯದಿಂದ ಬಾಗಿ ನೆಲ ಮುಟ್ಟಿ ಅದನ್ನು ಸ್ವೀಕರಿಸಿದಳು.

ಈ ಸಂಭ್ರಮ ಕ್ಷಣಕಾಲ ಮಾತ್ರ. ಏಕೆಂದರೆ ಅಲ್ಲಮಪ್ರಭು ಇದಾವುದನ್ನೂ ಮೆಚ್ಚದವನಂತೆ ಗಂಭೀರವಾದ ನೋಟದಿಂದ ಮಹಾದೇವಿಯನ್ನೇ ನೋಡುತ್ತಿದ್ದ. ಅನಂತರ ಶರಣರ ಗುಂಪಿನ ಮೇಲೆಲ್ಲಾ ಒಮ್ಮೆ ದೃಷ್ಟಿಯನ್ನು ಹರಿಸಿದ. ಮಂತ್ರ ಮುಗ್ಧರಾದಂತೆ ಶರಣರು ತಮ್ಮ ತಮ್ಮ ಸ್ಥಳದಲ್ಲಿ ಕುಳಿತರು.

ಪ್ರಭುವಿನ ತೀಕ್ಷ್ಣದೃಷ್ಟಿಯನ್ನು ಮಹಾದೇವಿ ಗುರುತಿಸಿದಳು. ಮಹಾವೈರಾಗ್ಯ ನಿಧಿಯಾದ ಜ್ಞಾನಯೋಗಿ ಅಲ್ಲಮಪ್ರಭು, ಸುಲಭವಾಗಿ ಯಾರನ್ನೂ ಮೆಚ್ಚುವವನಲ್ಲನೆಂಬುದನ್ನು ಕೇಳಿ ಬಲ್ಲ ಮಹಾದೇವಿ, ತಾನೀಗ ಕಠಿಣವಾದ ಅಗ್ನಿ ಪರೀಕ್ಷೆಯನ್ನು ಎದುರಿಸಬೇಕಾಗಿದೆಯೆಂಬುದನ್ನು ಊಹಿಸಿದಳು.

ಸುತ್ತಲೂ ನೋಡಿದಳು. ಶರಣರೆಲ್ಲಾ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತು ಒಮ್ಮೆ ಪ್ರಭುವಿನತ್ತ, ಒಮ್ಮೆ ತನ್ನತ್ತ ನೋಡುತ್ತಿದ್ದರು. ಪ್ರಭುದೇವನ ಪೀಠದ ಬುಡದಲ್ಲಿ, ಬಲಭಾಗದಲ್ಲಿ ಕುಳಿತಿರುವವನೇ ಬಸವಣ್ಣನೆಂಬುದನ್ನು

ಕಂಡುಕೊಂಡಳು. ಅವನ ಪಕ್ಕದಲ್ಲಿರುವ ಹುಡುಗನೇ ಬಹುಶಃ ಚನ್ನಬಸವಣ್ಣನಿರಬೇಕು – ಎಂದುಕೊಂಡಳು. ಆದರೆ ಅವರ ಪಕ್ಕದಲ್ಲಿ ಶೂನ್ಯಪೀಠದ ಎಡಭಾಗದಲ್ಲಿರುವವರು ಯಾರೆಂಬುದು ಆಕೆಗೆ ಹೊಳೆಯಲಿಲ್ಲ.

ಶರಣರ ಗುಂಪನ್ನೆಲ್ಲಾ ಒಟ್ಟಿಗೆ ತನ್ನ ಕಣ್ಣುಗಳಿಂದ ತುಂಬಿಕೊಂಡಳು. ಇನ್ನೊಂದು ಕಡೆ ಶರಣೆಯರು. ಮಾತೃಹೃದಯದ ವಾತ್ಸಲ್ಯದಿಂದಲೆಂಬಂತೆ ತನ್ನತ್ತಲೇ ನೋಡುತ್ತಿದ್ದಾರೆ.

ಹೀಗೆ ಅನುಭವಮಂಟಪವನ್ನೆಲ್ಲಾ ಒಮ್ಮೆ ಸುತ್ತಿಬಂದ ದೃಷ್ಟಿ ಮತ್ತೆ ಶೂನ್ಯ ಸಿಂಹಾಸನದ ಮೇಲೆ ಕೇಂದ್ರೀಕೃತವಾಯಿತು.

ಮೆಲ್ಲಗೆ ಮುಂದೆ ಹೆಜ್ಜೆಯನ್ನಿಡತೊಡಗಿದಳು. ಅಷ್ಟರಲ್ಲಿ ಅದನ್ನೇ ಕಾಯುತ್ತಿದ್ದನೆಂಬಂತೆ ಶರಣರ ಗುಂಪಿನಿಂದ ಮಡಿವಾಳ ಮಾಚಯ್ಯ, ಮಡಿಮಾಡಿ ತಂದ ಶುಭ್ರವಸ್ತ್ರವನ್ನು ನಡೆಮಡಿಯನ್ನಾಗಿ ಹಾಸತೊಡಗಿದ. ಮಹಾದೇವಿ ಗಕ್ಕನೆ ನಿಂತಳು.

ಪ್ರಭುದೇವನ ಸಿಂಹಾಸನದವರೆಗೂ ನಡೆಮಡಿಯನ್ನು ಹಾಸಿಕೊಂಡು ಹೋಗಿದ್ದ ಮಾಚಯ್ಯ. ಮಹಾದೇವಿ ನಡೆಮಡಿಯ ಬಳಿಗೆ ಬಂದಳು ; ಆದರೆ ಅದರ ಮೇಲೆ ನಡೆಯಲಿಲ್ಲ. ಬಾಗಿ ಆ ನಡೆಮಡಿಯನ್ನೆತ್ತಿ ದೇಹಕ್ಕೆಲ್ಲಾ ಹೊದೆದುಕೊಂಡಳು. ಆನಂದದಿಂದ ಅವಳ ಮುಖ ಮಿನುಗಿತು.

ಅನಂತರ ನಡೆಮಡಿಯನ್ನು ತೆಗೆದುಪಕ್ಕಕ್ಕೆ ಇಡುತ್ತಾ ಮಹಾದೇವಿ ಈಗ ಶೂನ್ಯ ಪೀಠದ ಕಡೆಗೆ ಬರುತ್ತಿದ್ದಳು. ಅಲ್ಲಮಪ್ರಭು ಎವೆಯಿಕ್ಕದೆ ಇದನ್ನೆಲ್ಲಾ ನೋಡುತ್ತಿದ್ದ.

ಶೂನ್ಯಸಿಂಹಾಸನದಿಂದ ಸ್ವಲ್ಪ ದೂರದಲ್ಲಿ ಮಹಾದೇವಿ ನಿಂತಳು. ಅದರ ಮೇಲಿದ್ದ ಶೂನ್ಯಮೂರ್ತಿಗೆ ಅಲ್ಲಿಂದಲೇ ಬಾಗಿ ನಮಸ್ಕರಿಸಿ ಮೇಲೆದ್ದಳು.

ಬಿಚ್ಚಿ ಹರಡಿದ್ದ ನೀಳವಾದ ಅವಳ ತಲೆಯ ಕೂದಲಸಮೂಹ ಬೆನ್ನ ಮೇಲೆಲ್ಲಾ ಹರಡಿದ್ದವು. ಹರಕು ಚಿಂದಿಯಂತಹ ಏಕವಸ್ತ್ರವನ್ನು ಧರಿಸಿದ್ದ, ಹದಿನಾರು ಹದಿನೆಂಟು ವರ್ಷಗಳ ಏರುಯೌವನದಲ್ಲಿದ್ದ ಅವಳ ದೇಹಸೌಂದರ್ಯವನ್ನು ಆ ಕೂದಲಸಮೂಹ ಮರೆಮಾಡಲು ಹವಣಿಸುವಂತೆ ತೋರುತ್ತಿತ್ತು. ಬೇಕೆಂತಲೇ ಪ್ರಭುದೇವ ಅವಳನ್ನೇ ದಿಟ್ಟಿಸಿ ನೋಡಿದ.

ಹೆಣ್ಣು ಪಡೆಯಬಹುದಾದ ದೈಹಿಕ ಸೌಂದರ್ಯವು ಪೂರ್ಣತೆಯನ್ನು ಪಡೆದಂತೆ ತೋರುತ್ತಿತ್ತು ಮಹಾದೇವಿಯ ದೇಹದಲ್ಲಿ. ಇಂತಹ ಅಪೂರ್ವ ರೂಪ ಸಂಪತ್ತು ರಾಜನ ಗಮನವನ್ನು ಆಕರ್ಷಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲವೆಂದು, ಅವಳ

ಕಥೆಯನ್ನು ಸ್ವಲ್ಪಮಟ್ಟಿಗೆ ಕೇಳಿಬಲ್ಲ ಶರಣರೆಲ್ಲಾ ಮನಸ್ಸಿನಲ್ಲಿಯೇ ಆಲೋಚಿಸುತ್ತಿದ್ದರು. ಪ್ರಭುದೇವನ ಮನಸ್ಸಿನಲ್ಲಿಯೂ ಅದೇ ಆಲೋಚನೆ ಸುಳಿದಿತ್ತು:

'ನಿಜ, ರಾಜನು ಇವಳನ್ನು ಬಯಸಿದುದರಲ್ಲಿ ಆಶ್ಚರ್ಯವಿಲ್ಲ. ಆದರೆ ಇಂತಹ ಏರುಜವ್ವನದ ಸುಂದರಿ ಅದನ್ನು ತಿರಸ್ಕರಿಸಿ, ತನ್ನ ವಯಸ್ಸಿಗೆ ಮೀರಿದ ಆಧ್ಯಾತ್ಮಿಕ ಆಕಾಂಕ್ಷೆಯನ್ನೇರಿ ಬಂದಿರುವುದು ಅಚ್ಚರಿಯ ಸಂಗತಿ. ಸಾಮಾನ್ಯ ಚೇತನಗಳು ನಂಬಲಾಗದ ಸಂಗತಿ. ಆದುದರಿಂದ ಇವಳ ನಿಲುವನ್ನು ಒರೆಗೆ ಹಚ್ಚಿ ನೋಡಿ ಅದನ್ನು ಲೋಕಕ್ಕೆ ಪ್ರಕಟಮಾಡಲೇಬೇಕು.

– ಹೀಗೆ ಓಡುತ್ತಿತ್ತು ಪ್ರಭುದೇವನ ಮನಸ್ಸು. ಮಿಂಚಿನಂತೆ ಭಾವನೆಗಳು ಸಂಚರಿಸಿದುವು. ಮನಸ್ಸು ಒಂದು ನಿರ್ಧಾರಕ್ಕೆ ಬಂದಿತು.

ಶರಣರೆಲ್ಲಾ ಅಲ್ಲಮನನ್ನೇ ನೋಡುತ್ತಿದ್ದರು. ಮಹಾದೇವಿಯನ್ನು ಸ್ವಾಗತಿಸಿ ಮಾತನಾಡಿಸಬೇಕೆಂಬ ಅವರ ಆಕಾಂಕ್ಷೆಗೆ ಪ್ರಭುದೇವನ ಅತಿ ಗಂಭೀರವಾದ ವರ್ತನೆ ಅಡ್ಡಿಯಾಗಿತ್ತು. ಅದನ್ನು ಮೀರಿ ಮೇಲೇಳುವ ಧೈರ್ಯ ಯಾರಿಗೂ ಇರಲಿಲ್ಲ.

ಕೊನೆಗೆ ಪ್ರಭುದೇವ ಕೇಳಿದ. ಗಂಭೀರತೆಯೇ ಮೈವೆತ್ತು ಬಂದಂತಿತ್ತು ಧ್ವನಿ :

"ಉದಮದದ ಯೌವನವನೊಳಕೊಂಡ ಸತಿ ನೀನು ಇತ್ತಲೇಕೆ ಬಂದೆಯವ್ವ? ಸತಿಯೆಂದರೆ ಮುನಿವರು ನಮ್ಮ ಶರಣರು. ನಿನ್ನ ಪತಿಯ ಕುರುಹು ಹೇಳಿದರೆ ಬಂದು ಕುಳ್ಳಿರು. ಅಲ್ಲವಾದರೆ ತೊಲಗು, ತಾಯೆ. ನಮ್ಮ ಗುಹೇಶ್ವರನ ಶರಣರಲ್ಲಿ ಲಿಂಗಸುಖಸನ್ನಿಹಿತವ ಬಯಸುವವರೆ, ನಿನ್ನ ಪತಿಯಾರೆಂಬುದು ಹೇಳಾ, ಎಲೆ ಅವ್ವಾ. ಸತಿಗೆ ಪತಿಯೇ ಪರದೈವ. ನಿನ್ನ ಪತಿಯ ಹೆಸರನ್ನು ಹೇಳಿದರೆ ಇತ್ತ ಬಾ. ಇಲ್ಲವಾದರೆ ಇಲ್ಲಿ ಸ್ಥಳವಿಲ್ಲ. ಅಂತಹ ಸತಿಯರ ಸಂಗ ವಿಷ ಕಾಣವ್ವ."

ಪ್ರಭುದೇವನ ಮಾತು ಮಹಾದೇವಿಯ ಮನಸ್ಸನ್ನು ನೇರವಾಗಿ ತಾಗಿತು. ಅವಳು ಅಧೀರಳಾಗಲಿಲ್ಲ. ಅವಳಲ್ಲಿದ್ದ ಸತ್ವಶಕ್ತಿಯ ತೇಜಸ್ಸು ಜಾಗ್ರತಗೊಂಡಿತು. ಅವನ ಪ್ರಶ್ನೆಗಳನ್ನು ಎದುರಿಸುವ ದಿಟ್ಟತನ ಮನಸ್ಸನ್ನು ತುಂಬಿತು. ಕಣ್ಣುಗಳು ಮಿಂಚಿದವು. ತನ್ನ ಮುಂದಿರುವ ಕಠಿಣವಾದ ಪರೀಕ್ಷೆಯನ್ನು ಎದುರಿಸಲು ಸಿದ್ಧವಾಗಿ ಹೇಳಿದಳು :

"ಹರನೇ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ. ನನ್ನ ಜನ್ಮ ಜನ್ಮಾಂತರದ ಬಯಕೆ, ಶಿವನೇ ನನ್ನ ಗಂಡನಾಗಬೇಕೆಂಬುದು. ಈ

ಜನ್ಮದಲ್ಲಿ ಅದು ಸಿದ್ಧಿಸಿದೆ. ಗುರು ನನ್ನನ್ನು ಚೆನ್ನಮಲ್ಲಿಕಾರ್ಜುನನಿಗೆ ಮದುವೆ ಮಾಡಿಕೊಟ್ಟಿದ್ದಾನೆ :

ಗುರುವೆ ತೆತ್ತಿಗನಾದ ; ಲಿಂಗವೇ ಮದುವಳಿಗನಾದ ;
ಅನು ಮದವಣಗಿತ್ತಿಯಾದೆನು ;
ಈ ಭುವನವೆಲ್ಲವರಿಯಲು ಅಸಂಖ್ಯಾತರೆನಗೆ ತಾಯಿತಂದೆಗಳು.
ಕೊಟ್ಟರು ಪ್ರಭುವಿನ ಮನೆಗೆ ಸಾದೃಶ್ಯವಪ್ಪ ವರನ ನೋಡಿ ;
ಇದು ಕಾರಣ ಚೆನ್ನಮಲ್ಲಿಕಾರ್ಜುನ ಗಂಡನೆನಗೆ,
ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲಯ್ಯಾ ಪ್ರಭುವೇ.

"ನಿಮ್ಮ ಮನೆಗೆ ಸೊಸೆಯಾಗಿ ನಾನು ಬಂದಿದ್ದೇನೆ. ಹೀಗಿರಲು ನನ್ನ ಪತಿಯ ಕುರುಹನ್ನು ಎದುರಿಟ್ಟು ಹೇಳಬೇಕೆ ?"

ಮಹಾದೇವಿಯ ಮಾತುಗಳನ್ನು ಕೇಳಿ ಶರಣರು ತಲೆದೂಗಿದರು. ಬಸವಣ್ಣನೂ ಸಂತೋಷಗೊಂಡು ಪ್ರಭುವನ್ನು ನೋಡಿದ. ಪ್ರಭುದೇವ ಮನಸ್ಸಿನಲ್ಲಿಯೇ ಮೆಚ್ಚಿದರೂ ಅದನ್ನು ತೋರಗೊಡದೆ ಮತ್ತೆ ಹೇಳಿದ :

"ಮಾತಿನಚಮತ್ಕಾರಕ್ಕೆ ನಮ್ಮ ಶರಣರು ಮೆಚ್ಚುವವರಲ್ಲ, ಮಹಾದೇವಿ ನಿನ್ನ ಚರಿತ್ರೆಯನ್ನು ಲೋಕ ಅರಿಯದೆಂದು ಭಾವಿಸಬೇಡ. ನಿನ್ನನ್ನು ಮದುವೆಯಾದ ಕೌಶಿಕನ ಮೇಲೆ ತಪ್ಪನ್ನು ಹೊರಿಸಿ, ಸೀರೆಯನ್ನುಳಿದು ನಿರ್ವಾಣವಾಗಿ ಅರಮನೆಯಿಂದ ಹೊರಟುಬಂದಿರುವೆ ಎಂಬ ಮಾತು ನಿಜವೇ ? ಒಂದು ತಪ್ಪಿಗಾಗಿ ಪತಿಯನ್ನು ಬಿಟ್ಟುಬರುವ ಸತೀಧರ್ಮವನ್ನು ಶರಣರು ಒಪ್ಪಲಾರರು."

ಮಹಾದೇವಿಯನ್ನು ಚುಚ್ಚಿತು ಈ ಮಾತು. ಮರೆತುಹೋದ ಹಳೆಯ ಕಥೆಯಂತಿದ್ದ ಆ ಘಟನೆಗಳನ್ನು ಅವಳ ಮನಸ್ಸಿನ ಮುಂದೆ ಹರಡಿತು. ಅದನ್ನು ಸಾಮಾನ್ಯ ಜಗತ್ತು ಕಾಣಬಹುದಾದ ರೀತಿಯಲ್ಲಿ ಪ್ರಭುದೇವನೂ ಕಂಡು ಕೇಳಿದಾಗ ಆಕೆಗೆ ಸಂಕಟವಾಯಿತು. ಜಗತ್ತಿಗೆ ಈ ಮೂಲಕ ಸತ್ಯವನ್ನು ಸಾರಬೇಕೆಂಬ ಸಂಕಲ್ಪ ಉತ್ಕಟವಾಗಿ ಉಕ್ಕಿಬಂದಿತು. ಆವೇಶಗೊಂಡವಳಂತಾಗಿ ಹೇಳಿದಳು :

"ಇದನ್ನು ಕೇಳಿ ಒಳ್ಳೆಯದನ್ನೇ ಮಾಡಿದಿರಿ. ನನ್ನ ಮದುವೆಯ ಕಥೆಯನ್ನು ಪ್ರಪಂಚ ಹೇಗಾದರೂ ತಿಳಿದುಕೊಂಡಿರಲಿ. ಇಲ್ಲಿ ಶರಣರ ಎದುರು ನಿಂತು ಹೇಳುತ್ತಿದ್ದೇನೆ ; ನಾನು ಮೊದಲಿನಿಂದಲೂ ಚೆನ್ನಮಲ್ಲಿಕಾರ್ಜುನನಿಗೇ ಮೀಸಲ ಹೆಣ್ಣು. ಸಾವ ಕೆಡುವ ಗಂಡರನ್ನೆಂದೂ ನಾನು ಬಯಸಿದವಳಲ್ಲ. ಸೀಮೆಯಿಲ್ಲದ ನಿಸ್ಸೀಮಚೆಲುವನಿಗೆ ಮಾತ್ರ ಒಲಿದವಳು ನಾನು. ಗುರುಲಿಂಗ ದೇವರು ಚಿಕ್ಕ ವಯಸ್ಸಿನಲ್ಲಿಯೇ ನನ್ನನ್ನು ಆ ವಿಶ್ವಪತಿಗೆ ಕೊಟ್ಟು ಧಾರೆಯೆರೆದರು ದೀಕ್ಷೆಯ

ಮೂಲಕ. ಆದರೆ ನನ್ನ ತಂದೆತಾಯಿಗಳು ಲೋಕಸಹಜವಾದ ರೀತಿಯಲ್ಲಿ ಬೇರೆ ಮದುವೆಯನ್ನು ಮಾಡಿ ತಮ್ಮ ಕರ್ತವ್ಯವನ್ನು ಪೂರೈಸಲು ಹವಣಿಸುತ್ತಿದ್ದರು. ಅದರಿಂದ ಪಾರಾಗುವುದು ಹೇಗೆಂದು ನಾನು ಆಲೋಚಿಸುತ್ತಿದ್ದೆ. ಅಷ್ಟರಲ್ಲಿ ನೀವು ಬಲ್ಲಂತೆ ಒಂದು ಪರೀಕ್ಷೆಯ ಪ್ರಸಂಗ ನನ್ನ ಜೀವನದಲ್ಲಿ ಬಂದಿತು. ಕೌಶಿಕರಾಜ ನನ್ನ ರೂಪವನ್ನು ಕಂಡು ಮೋಹಿಸಿದ. ನನ್ನ ತಂದೆತಾಯಿಗಳು ನಿಷ್ಠಾವಂತರಾದ ಶಿವಭಕ್ತರು. ರಾಜನ ಬೆದರಿಕೆಗೆ ತಲೆಬಾಗುವಂತಿರಲಿಲ್ಲ. ಮದುವೆಯೇ ಬೇಡವೆನ್ನುತ್ತಿದ್ದ ನನ್ನ ಮನೋಧರ್ಮ ಸಾಧನೆಗೆ ಈ ಪ್ರಸಂಗ ಸಹಕಾರಿಯಾದ ಮಾರ್ಗವಾಗಬಹುದೆಂಬುದನ್ನು ಗುರುಲಿಂಗದೇವರು ನನಗೆ ಸೂಕ್ಷ್ಮವಾಗಿ ಸೂಚಿಸಿದರು. ನನ್ನ ಮದುವೆಯ ಸ್ವಾತಂತ್ರ್ಯವನ್ನು ನನ್ನ ಕೈಗೇ ತೆಗೆದುಕೊಂಡೆ. ಕೌಶಿಕನ ಅರಮನೆಗೆ ಹೋದೆ. ಇದನ್ನರಿಯದೆ ಜಗತ್ತು ನನ್ನ ತಂದೆತಾಯಿಗಳ ಮೇಲೆ ಹೇಡಿತನದ ಆಪಾದನೆಯನ್ನು ಹಾಕಿತು. ನಾನು ಕೌಶಿಕನನ್ನು ಮದುವೆಯಾದೆನೆಂದು ಭಾವಿಸಿತು. ಆದರೆ ಅವನನ್ನು ಮದುವೆಯಾಗುವ ಭಾವನೆ ನನ್ನ ಕನಸುಮನಸಿನಲ್ಲಿಯೂ ಇರಲಿಲ್ಲ. ಮದುವೆಯ ಬಂಧನದಿಂದ ಒಮ್ಮೆಗೇ ಮುಕ್ತಳಾಗುವುದಕ್ಕೆ ಇದೊಂದು ದೈವಕೃಪೆಯಂತೆ ಬಂದಿತು, ಅಷ್ಟೆ. ಅವನು ಮೂರು ಅಪರಾಧಗಳನ್ನು ಮಾಡಿದ. ಮೊದಲೇ ಅವನಿಗೆ ಎಚ್ಚರಿಸಿದಂತೆ ಅಲ್ಲಿಂದ ಹೊರಟೆ. ಸ್ತ್ರೀಯ ದೇಹಸೌಂದರ್ಯದ ವ್ಯರ್ಥವ್ಯಾಮೋಹವನ್ನು ಬಿಡಿಸಲು ದಿಗಂಬರಳಾಗಿ ಅರಮನೆಯನ್ನು ತ್ಯಜಿಸಿದೆ. ಸೌಂದರ್ಯದ ಹಂಗನ್ನು ಹರಿದೊಗೆದು ಬಂದೆ."

ಆವೇಶದಿಂದ ಮಾತುಗಳನ್ನು ಮುಗಿಸಿದಳು ಮಹಾದೇವಿ. ಶರಣರೆಲ್ಲಾ ತಲ್ಲೀನರಾಗಿ ಈ ಮಾತುಗಳನ್ನು ಆಲಿಸುತ್ತಿದ್ದರು. ಪ್ರಭು ಮುಗುಳು ನಗುತ್ತಾ ಕೇಳಿದ :

"ನಿನ್ನ ದೇಹದ ಮೇಲಿನ ಮೋಹ ನಿನಗಿನ್ನೂ ಬಿಟ್ಟಿಲ್ಲ. ನಿನ್ನ ಸೌಂದರ್ಯದ ಹೆಮ್ಮೆ ನಿನಗಿನ್ನೂ ಉಳಿದಿದೆಯಲ್ಲವೇ ?"

"ಇಲ್ಲ... ನನ್ನ ಸೌಂದರ್ಯದ ಹೆಮ್ಮೆ ನನಗೆ ಎಳ್ಳಷ್ಟೂ ಉಳಿದಿಲ್ಲ." ಮಹಾದೇವಿ ಹೇಳಿದಳು:

ಕಾಯ ಕರ್‍ರನೆ ಕಂದಿದರೇನಯ್ಯ ?
ಕಾಯ ಮಿರ್‍ರನೆ ಮಿಂಚಿದಡೇನಯ್ಯ ?
ಅಂತರಂಗ ಶುದ್ಧವಾದ ಬಳಿಕ, ಚೆನ್ನಮಲ್ಲಿಕಾರ್ಜುನ
ಒಲಿದ ಅಂಗವು ಹೇಗಿದ್ದರೇನಯ್ಯ ?

"ಇದು ಬರಿಯ ಆಡಂಬರದ ಮಾತು. ಮಾತಿನಂತೆ ನಡೆ ಇಲ್ಲದವರನ್ನು ಗುಹೇಶ್ವರ ಮೆಚ್ಚುವುದಿಲ್ಲ. ನಿನ್ನ ದೇಹದ ಮೇಲಿನ ಮೋಹ ನಿನಗೆ ಸಂಪೂರ್ಣವಾಗಿ ಅಳಿದಿದ್ದರೆ, ಸೀರೆಯನ್ನು ಬಿಟ್ಟು ಕೂದಲಮರೆಯನ್ನೇಕೆ ಮಾಡಿಕೊಂಡಿದ್ದೀಯ? ಅಲಂಕಾರದ ಸೀರೆಯನ್ನು ಬಿಟ್ಟು ನಿನಗೆ ಈ ನಾರುಸೀರೆಯ ಹಂಗು ಬಿಡಲಿಲ್ಲ, ಅಲ್ಲವೆ ! ಅದರ ಮೇಲೆ ಕೂದಲಿನ ಮರೆ ಬೇರೆ ! ಅಂತರಂಗದ ನಾಚಿಕೆ ಬಹಿರಂಗದಲ್ಲಿ ತೋರುತ್ತದೆ. ಇದೆಲ್ಲಾ ಗುಹೇಶ್ವರ ಲಿಂಗಕ್ಕೆ ಮೆಚ್ಚುಗೆಯಾಗುವ ಮಾತಲ್ಲ."

ಪ್ರಭುದೇವನ ಈ ನಿಷ್ಠುರವಾದ ಮಾತುಗಳಿಂದ ಶರಣರೆಲ್ಲಾ ನೊಂದರು. ಆದರೆ ಯಾರೂ ಏನನ್ನೂ ಹೇಳುವಂತಿರಲಿಲ್ಲ. ಇದಕ್ಕೆ ಮಹಾದೇವಿಯ ಉತ್ತರವೇನೆಂಬ ಕಾತರತೆ ಎಲ್ಲರ ಮುಖಗಳ ಮೇಲೂ ಎದ್ದು ಕಾಣುತ್ತಿತ್ತು. ಮಹಾದೇವಿ ಕ್ಷಣಕಾಲ ಕಣ್ಣುಮುಚ್ಚಿ ಮೌನವಾಗಿದ್ದಳು. ಗುರುಲಿಂಗರ ದಿವ್ಯವಿಗ್ರಹ ಅವಳ ಅಂತರಂಗದ ಕಣ್ಣುಮುಂದೆ ಸುಳಿಯಿತು. ಅನಂತರ ಕಣ್ತೆರೆದು ಮುಗುಳು ನಗುತ್ತಾ ಹೇಳಿದಳು :

"ನಿಜ, ಒಂದರ ಹಂಗನ್ನು ಬಿಟ್ಟು ಇನ್ನೊಂದರ ಹಂಗನ್ನು ನಾನು ಹಿಡಿದಿದ್ದೇನೆ ಎಂದು ನೀವು ಹೇಳುವ ಮಾತು ನಿಜ. ಆದರೆ ಅದು ನನಗಾಗಿ ಅಲ್ಲ ; ಹೇಳುತ್ತೇನೆ ಕೇಳಿ, ಇದು ನಿಮಗಾಗಿ : ಅಂದರೆ ಜನರ ಹಂಗಿಗಾಗಿ ಇದನ್ನು ಅವಲಂಬಿಸಿದ್ದೇನೆ."

ಅಲ್ಲಮನ ದಿಟ್ಟತನಕ್ಕೆ ಸಂವಾದಿಯಾದ ಮಹಾದೇವಿಯ ಉತ್ತರದಿಂದ ಸಭೆ ನಡುಗಿತು. ಮತ್ತೆ ಮೊಳಗಿತು ಮಹಾದೇವಿಯ ಧ್ವನಿ :

ಫಲ ಒಳಗೆ ಪಕ್ವವಾಗಿಯಲ್ಲದೆ
ಹೊರಗಣ ಸಿಪ್ಪೆ ಒಪ್ಪಗೆಡದು
ಕಾಮನ ಮುದ್ರೆಯ ಕಂಡು ನಿಮಗೆ ನೋವಾದಿತೆಂದು
ಆ ಭಾವದಿಂದ ಮುಚ್ಚಿದೆ ; ಇದಕ್ಕೆ ನೋವೇಕೆ ?
ಕಾಡದಿರಣ್ಣಾ, ಚೆನ್ನಮಲ್ಲಿಕಾರ್ಜುನದೇವರ ದೇವನ
ಒಳಗಾದವಳಾ.

ಈ ದಿಟ್ಟತನದ ಹಿಂದಿರುವ ಮಹಾದೇವಿಯ ವೈರಾಗ್ಯದ ನಿಲುವನ್ನು ಕಂಡು ಶರಣರ ಸಂತೋಷ ತಡೆಯಲಾರದೆ ಹೋಯಿತು. ಮೆಚ್ಚುಗೆಯ ಉದ್ಗಾರಗಳು ಅವರ ಹಿಡಿತವನ್ನು ಮೀರಿ ಹೊರಬೀಳತೊಡಗಿತು. ಆದರೆ ಪ್ರಭುದೇವರ ದೃಷ್ಟಿ ಇನ್ನೂ ಪ್ರಸನ್ನವಾಗಿರಲಿಲ್ಲ. ಮತ್ತೆ ತಮ್ಮ ಭಾವನೆಗಳನ್ನು

ಅಡಗಿಸಿಕೊಂಡು ಕುಳಿತರು ಶರಣರು.

ಪ್ರಭುದೇವ ಮಹಾದೇವಿಯ ಮಾತಿನ ಮೊದಲನೆಯ ಭಾಗವನ್ನು ಹಿಡಿದು ಪ್ರಶ್ನಿಸಿದ :

"ಫಲ ಪಕ್ವವಾದ ಹೊರತು ಸಿಪ್ಪೆ ಒಪ್ಪಗೆಡದು ಎಂದೆಯಲ್ಲವೇ ? ಆದರೆ ನಾನು ಹೇಳುತ್ತೇನೆ ಕೇಳು : ಸಿಪ್ಪೆ ಒಪ್ಪಗೆಟ್ಟಾಗ ಹಣ್ಣಿನ ರಸ ಕೊಳಕಾಗುತ್ತದೆ. ಇದನ್ನು ಗುಹೇಶ್ವರಲಿಂಗ ಹೇಗೆ ಒಪ್ಪಬಹುದು ?"

ಈ ಚಮತ್ಕಾರದ ಪ್ರಶ್ನೆಯಿಂದ ಮಹಾದೇವಿ ತಬ್ಬಿಬ್ಬಾಗಲಿಲ್ಲ. ಕೇಳುತ್ತಿದ್ದ ಇತರರೆಲ್ಲಾ ಸಂತೋಷಗೊಳ್ಳುವಂತೆ ಹೇಳಿದಳು :

"ನೀವು ಹೇಳುವುದು ನಿಜ. ಹಣ್ಣಿನ ಸಿಪ್ಪೆಯನ್ನು ಸುಲಿದು ಇಟ್ಟರೆ ರಸ ಕೊಳಕಾಗುತ್ತದೆ. ಆದರೆ ಈ ಹಣ್ಣನ್ನು ಹಾಗೆಯೇ ಇಟ್ಟಿಲ್ಲ : ಚೆನ್ನಮಲ್ಲಿಕಾರ್ಜುನನಿಗೆ ಸಮರ್ಪಿಸಿಬಿಟ್ಟಿದ್ದೇನೆ. ಅರಿಷಡ್ವರ್ಗಗಳನ್ನು ಅಳಿದು, ನನ್ನ ದೇಹವನ್ನು ವ್ಯಾಪಿಸಿರುವ ಸಚ್ಚಿದಾನಂದಾತ್ಮಕವಾದ ರಸ ಅದು. ಸಿಪ್ಪೆ ಒಪ್ಪಗೆಟ್ಟರೂ ಅದು ಕೊಳೆಯಲಾರದು. ನನ್ನ ಒಳಹೊರಗೆಲ್ಲವನ್ನೂ ಅದು ವ್ಯಾಪಿಸಿ, ನನ್ನತನವನ್ನು ಇಲ್ಲಗೈದು ಎಂದೆಂದೂ ಅಳಿಯದ ಅಮರ ಪವಿತ್ರತೆಯನ್ನು ತಂದುಕೊಟ್ಟಿದೆ."

ಪ್ರಭು ಹಿಂದಕ್ಕೆ ಸರಿದು ನೆಟ್ಟಗೆ ಕುಳಿತುಕೊಳ್ಳುತ್ತಾ ಮತ್ತೆ ಹೇಳಿದ.

"ಈ ಬಾಯಬ್ರಹ್ಮದ ಬೆಡಗನ್ನು ನಾವು ಮೆಚ್ಚುವವರಲ್ಲ."

"ಇದು ಬಾಯಬ್ರಹ್ಮದ ಮಾತಲ್ಲ, ಪ್ರಭುವೇ..."

"ಇನ್ನೇನು 'ನನ್ನತನ'ವನ್ನು ಇಲ್ಲಗೈದಿದ್ದೇನೆ, ಎಂಬುದನ್ನು ನೀನು ಹೇಗೆ ಹೇಳಬಲ್ಲೆ :

> ನಾ ಸತ್ತೆನೆಂದು ಹೆಣ ಕೂಗಿದುದುಂಟೇ?
> ಬೈಚಿಟ್ಟ ಬಯಕೆ ಕರೆದುದುಂಟೇ?
> ಹೆಪ್ಪಿಟ್ಟ ಹಾಲು ಸಿಹಿಯಪ್ಪುದೇ ?
> ಈ ಮಾತು ಒಪ್ಪವಲ್ಲ ಗುಹೇಳ್ವರಲಿಂಗಕ್ಕೆ"

ಇಲ್ಲಿ ಮಹಾದೇವಿ ಕ್ಷಣಕಾಲ ಯೋಚಿಸಿದಳು. ಮರುಕ್ಷಣದಲ್ಲಿಯೇ ಉತ್ತರ ಸಿದ್ಧವಾಗಿತ್ತು.

"ಸತ್ತ ಹೆಣ ಕೂಗಿದುದು ಉಂಟು. ಮರೆದು ಒರಗಿ ಕನಸು ಕಂಡು ಅದನ್ನು ಹೇಳುವಲ್ಲಿ ಸತ್ತ ಹೆಣ ಎದ್ದಂತೆ ಆಯಿತು. ಹೆಪ್ಪಿಟ್ಟ ಹಾಲು ಗಟ್ಟಿ ತುಪ್ಪವಾಗಿ ಸಿಹಿಯಾಗಿರುತ್ತದೆ. ಇದಕ್ಕೆ ತಪ್ಪು ಸಾಧಿಸಲೇಕೆ ? ಇದನ್ನು ನಿಶ್ಚಯಿಸಿ ನೋಡಿರಿ ಚೆನ್ನಮಲ್ಲಿಕಾರ್ಜುನನಲ್ಲಿ."

ಪ್ರಭು ಆಶ್ಚರ್ಯಗೊಂಡ ಅವಳ ಉತ್ತರದಿಂದ. ಆದರೆ ಅದನ್ನು ತೋರ್ಪಡಿಸದೆ ಮತ್ತೆ ಹೇಳಿದ:

"ಅದು ಹೋಗಲಿ, ಅರಿಷಡ್ವರ್ಗಗಳಿಂದಲೇ ನಿರ್ಮಿತವಾದ ಈ ದೇಹದಲ್ಲಿದ್ದು ಅವುಗಳನ್ನು ದಾಟಿದ್ದೇನೆಂದರೆ ಅದನ್ನು ನಂಬುವುದು ಹೇಗೆ?"

ಕಾಮದಿಂದ ಕಂಡ, ಕ್ರೋಧದಿಂದ ಆಸ್ಥಿ,
ಲೋಭದಿಂದ ಸಕಲ ವಿಷಯಗಳು ;
ಮೋಹದಿಂದ ಓಡಿಹೆನೆಂಬುದೆಲ್ಲವು ಕಾಮನ ಬಲೆಯೊಳಗು
ಕಾಮನ ಗೆದ್ದ ತಾವಾವುದು ಹೇಳಾ,
ಗುಹೇಶ್ವರಲಿಂಗಕ್ಕೆ ?"

ಉಜ್ಜಿದಷ್ಟೂ ಕಾಂತಿಯನ್ನು ಕೊಡುವ ಅಪರಂಜಿಯಂತೆ ಮಹಾದೇವಿಯ ಮುಖ ಮಿಂಚಿತು ಪ್ರಭುವಿನ ಈ ಮಾತನ್ನು ಕೇಳಿ ಹೇಳಿದಳು :

"ಕಾಮವನ್ನು ಗೆದ್ದ ಠಾವನ್ನು ಹೇಳಬೇಕೇ, ಪ್ರಭುವೇ ಇಲ್ಲ... ಇನ್ನೂ ಮುಂದುವರಿದು ಹೇಳುತ್ತೇನೆ ; ಕಾಮನನ್ನು ಗೆಲ್ಲುವುದಕ್ಕೆ ಆ ಕಾಮ, ನನ್ನ ಮನಸ್ಸಿನಲ್ಲಿ ಎಂದೂ ಹುಟ್ಟಿಯೇ ಇಲ್ಲ, ಕೇಳಿರಿ :

ಅಂಗದ ಭಂಗವ ಲಿಂಗಸುಖದಿಂದ ಗೆಲಿದೆ,
ಮನದ ಭಂಗವ ಅರುಹಿನ ಮುಖದಿಂದ ಗೆಲಿದೆ
ಜೀವದ ಭಂಗವ ಶಿವಾನುಭವದಿಂದ ಗೆಲಿದೆ,
ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ,
ಜವ್ವನದ ಹೊರಮಿಂಚಿನಲ್ಲಿ ನಿಮ್ಮ ಕಣ್ಣಿಂಗೆ ತೋರುವ ಕಾಮನ
ಸುಟ್ಟುರುಹಿದ ಭಸ್ಮವ ನೋಡಯ್ಯ ?
ಚೆನ್ನಮಲ್ಲಿಕಾರ್ಜುನ, ಕಾಮನ ಕೊಂದು ಮನಸಿಜನಾಗುಳುಹಿದರೆ,
ಮನಸಿಜನ ತಲೆಯ ಬರೆಹವ ತೊಡೆದನು.

"ನನ್ನ ಪತಿ ಚೆನ್ನಮಲ್ಲಿಕಾರ್ಜುನ, ಕಾಮನನ್ನು ಕೊಂದು ಮತ್ತೆ ಅವನನ್ನು ಬದುಕಿಸಿ ಮನಸಿಜನನ್ನಾಗಿ ಮಾಡಿದ 'ನೆನೆಯುವವರ ಮನದಲ್ಲಿ ಹುಟ್ಟು' ಎಂದು ಅವನ ಹಣೆಯ ಬರಹವ ಬರೆದ. ಆದರೆ ನಾನು ಮನಸಿಜನ ಆ ತಲೆಯ ಬರಹವನ್ನೇ ತೊಡೆದುಹಾಕಿದ್ದೇನೆ. ನನ್ನ ಮನಸ್ಸು ಎಂದೂ ಮನಸಿಜನ ಜನನಕ್ಕೆ ಅವಕಾಶವನ್ನೇ ಕೊಟ್ಟಿಲ್ಲ. ನಿಮ್ಮಂತಹ ಕೆಲವರು ಮಾತ್ರ ಇದನ್ನು ಅರ್ಥಮಾಡಿಕೊಳ್ಳಬಲ್ಲಿರಿ – ಎಂದು ಇಂದು ನಿಮ್ಮ ಮುಂದೆ ಇದನ್ನು ಇಡುತ್ತಿದ್ದೇನೆ."

ಈ ಮಾತುಗಳನ್ನು ಕೇಳುತ್ತಾ ಪ್ರಭುದೇವನ ಮುಖ ಪ್ರಸನ್ನವಾಗತೊಡಗಿತು. ಮಹಾದೇವಿಯ ಮಾತು ಮುಗಿಯುತ್ತಿದ್ದಂತೆಯೇ ಪ್ರಭು ಬಸವಣ್ಣನ ಕಡೆಗೆ ತಿರುಗಿ : "ನೋಡಿದೆಯಾ ಬಸವಣ್ಣ ! ಮಹಾದೇವಿಯ ಮಟ್ಟವನ್ನು ಒರೆಗೆ ಹಚ್ಚಿನೋಡಿ ಲೋಕಕ್ಕೆ ಪ್ರಕಟಮಾಡಬೇಕೆಂದೇ ನಾನು ಇಷ್ಟು ನಿಷ್ಠುರನಾದೆ" ಎಂದು ಹೇಳುತ್ತಾ ಶೂನ್ಯಸಿಂಹಾಸನವನ್ನು ಬಿಟ್ಟೆದ್ದು ಮಹಾದೇವಿಯ ಬಳಿ ಬರತೊಡಗಿದ.

ಶರಣರೆಲ್ಲಾ ಮೇಲೆದ್ದು ನಿಂತು ಜಯಘೋಷ ಮಾಡಿದರು. ಅಲ್ಲಮಪ್ರಭು ಸಮೀಪಕ್ಕೆ ಬಂದು :

"ಮಹಾದೇವಿ, ನಿನ್ನ ನಿಲವಿಂಗೆ ನಮೋ ನಮಃ" ಎಂದು ಹೇಳುವುದಕ್ಕೆ ಮೊದಲೇ ಮಹಾದೇವಿ ಅವನ ಪಾದಗಳನ್ನು ಹಿಡಿದು ವಂದಿಸಿದಳು. ಪ್ರಭು ಅವಳನ್ನು ಸಂತೈಸುತ್ತಾ ಹೇಳಿದ:

ಅಂಗ ಅಂಗನೆಯ ರೂಪಲ್ಲದೆ,
ಮನ, ವಸ್ತು ಭಾವದಲ್ಲಿ ಬೆಚ್ಚಂತಿಪ್ಪುದು
ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲಾ, ಅಕ್ಕ !
ಗುಹೇಶ್ವರ ಲಿಂಗದಲ್ಲಿ ಉಭಯನಾಮವಳಿದೆ ಎನ್ನಕ್ಕಾ.

ಪ್ರಭುದೇವನಿಂದ ಈ ಮಾತುಗಳನ್ನು ಕೇಳಿ ಶರಣರ ಸಂತೋಷಕ್ಕೆ ಪಾರವೇ ಇಲ್ಲದಂತಾಗಿತ್ತು. ಬಸವಣ್ಣನ ಕಣ್ಣುಗಳಿಂದ ಆನಂದಬಾಷ್ಪಗಳು ಸುರಿಯುತ್ತಿದ್ದವು.

"ಹೌದು ಪ್ರಭುವೇ, ಈಕೆ ನಮ್ಮೆಲ್ಲರ ಅಕ್ಕ. ನಮ್ಮೆಲ್ಲರಿಗೂ ಈಕೆ ಗುರುವಾಗಬಲ್ಲ ಯೋಗ್ಯತೆಯುಳ್ಳವಳು. ಅಕ್ಕಮಹಾದೇವಿ, ನಿನಗೆ ಶರಣು ಶರಣಾರ್ಥಿ." ನಮಸ್ಕರಿಸಿದ ಬಸವೇಶ್ವರ.

"ತಾವು ಹಾಗೆಲ್ಲಾ ಹೇಳಬಾರದು. ನಿಮ್ಮೆಲ್ಲರ ಕರುಣೆಯ ಶಿಶುನಾನು. ನಿಮ್ಮೆದುರಿನಲ್ಲಿ ಅತಿ ಚಿಕ್ಕವಳು." ವಿನೀತಳಾಗಿ ಹೇಳಿದಳು ಮಹಾದೇವಿ.

ಅದನ್ನು ಕೇಳಿ, ವಯಸ್ಸಿನಿಂದ ಅತಿ ಚಿಕ್ಕವನೇ ಆದ ಚನ್ನಬಸವಣ್ಣ ಪ್ರಾರಂಭಿಸಿದ : "ಇರಬಹುದು, ವಯಸ್ಸು ಅತಿ ಚಿಕ್ಕದೇ ಇರಬಹುದು. ಆದರೂ ನೀನು ಎಲ್ಲರಿಗೂ ಅಕ್ಕನಾಗಬಲ್ಲವಳು ತಾಯಿ ಮಹಾದೇವಿಯಕ್ಕ. ಹಿರಿಯತನ ಕೇವಲ ವಯಸ್ಸಿನಿಂದ ಮಾತ್ರವೇ ಬರುವುದಿಲ್ಲ."

ಅಜ ಕಲ್ಪಕೋಟಿ ವರುಷದವರೆಲ್ಲರೂ ಹಿರಿಯರೇ ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೇ ?

ನಡುಮುರಿದು, ಗುಡುಗೂರಿ, ತಲೆನಡುಗಿ, ನೆರೆ ತೆರೆ ಹೆಚ್ಚಿ,
ಮತಿಗೆಟ್ಟು ಒಂದನಾಡಹೋಗಿ ಒಂಬತ್ತನಾಡುವ
ಅಜ್ಞಾನಿಗಳೆಲ್ಲರೂ ಹಿರಿಯರೇ ?
ಅನುವರಿದು, ಘನವ ಬೆರಸಿ, ಹಿರಿದು ಕಿರಿದೆಂಬ ಭೇದವ ಮರೆದು
ಕೂಡಲ ಚೆನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ,
ನಮ್ಮ ಮಹಾದೇವಿಯಕ್ಕಂಗಾಯಿತ್ತು."

ಇದುವರೆಗೂ ಸುಮ್ಮನೆ ಕುಳಿತು ಎಲ್ಲವನ್ನೂ ಸಾಕ್ಷೀಭೂತವಾಗಿ ನೋಡುತ್ತಿದ್ದ ಸಿದ್ಧರಾಮ, ಚನ್ನಬಸವಣ್ಣನ ಈ ವಚನದಿಂದ ಸ್ಫೂರ್ತಿಗೊಂಡು ಅಕ್ಕಮಹಾದೇವಿಯನ್ನು ಕುರಿತು ತನ್ನ ಮೆಚ್ಚುಗೆಯನ್ನು ಹೀಗೆ ವ್ಯಕ್ತಪಡಿಸಿದ :

ಅಹುದಹುದು ಮತ್ತೇನು ? ಮರಹಿಂಗೆ ಹಿರಿದು ಕಿರಿದುಂಟಲ್ಲದೇ
ಅರಿವಿಂಗೆ ಹಿರಿದು ಕಿರಿದುಂಟೇ ಹೇಳಯ್ಯ ?
ಸಾವಿಂಗೆ ಭಯವುಂಟಲ್ಲದೇ ಅಜಾತರಿಗೆ ಭಯವುಂಟೇ ಹೇಳಯ್ಯ ?
ಶರಣೆಂದು ಶುದ್ಧನಾದೆನು ಕಾಣಾ ಚನ್ನಬಸವಣ್ಣಾ.

ಹೀಗೆ ಒಬ್ಬೊಬ್ಬ ಶರಣರೂ ಒಂದೊಂದು ರೀತಿಯಲ್ಲಿ ಅವಳ ಮಹತ್ವವನ್ನು ಮನಮೆಚ್ಚಿ ಕೊಂಡಾಡಿದರು. ಬಸವಣ್ಣನ ಭಾವನೆಯಂತೂ ಮಾತಿಗೆ ಮೀರಿದುದಾಗಿತ್ತು. ಅಲ್ಲಮಪ್ರಭುವೂ ತನ್ನ ಸಹಜವಾದ ಗಾಂಭೀರ್ಯವನ್ನು ಕಿತ್ತೊಗೆದು ಅಕ್ಕಮಹಾದೇವಿಯನ್ನು ಉತ್ಸಾಹದಿಂದ ಹೊಗಳತೊಡಗಿದ.

ಇದನ್ನೆಲ್ಲಾ ಕೇಳಿ ಸಂಕೋಚದ ವಿನಯದಿಂದ ಮಹಾದೇವಿ ಬಾಗಿಹೋಗಿದ್ದಳು.

ಬಸವೇಶ್ವರ ಮೆಲ್ಲಗೆ ತನ್ನ ಪತ್ನಿ ಗಂಗಾಂಬಿಕೆಯತ್ತ ದೃಷ್ಟಿ ಹರಿಸಿದ. ಅದರ ಅರ್ಥ ಆಕೆಗೂ ಆಯಿತು. ಶರಣೆಯರ ಗುಂಪಿನಿಂದ ಗಂಗಾಂಬಿಕೆ ಮುಂದೆ ಬಂದು "ಬಾ ತಾಯಿ, ಬಾ ಹೋಗೋಣ" ಎಂದು ಮಾತೃವಾತ್ಸಲ್ಯದಿಂದ ಮಹಾದೇವಿಯ ತಲೆಯನ್ನು ನೇವರಿಸಿದಳು.

ಅಷ್ಟರಲ್ಲಿ ನೀಲಾಂಬಿಕೆ, ಲಕ್ಕಮ್ಮ ಬಳಿಗೆ ಬಂದಿದ್ದರು. ಅವರ ಮಧ್ಯದಲ್ಲಿ ಮಹಾದೇವಿ ಶರಣೆಯರ ಗುಂಪಿನತ್ತ ನಡೆಯ ತೊಡಗಿದಳು. ಅವಳ ತಪೋಯಾತ್ರೆಯ ಪವಿತ್ರವಾಹಿನಿ, ಕಲ್ಯಾಣದ ಕಡಲನ್ನು ಸೇರಿದ ತೃಪ್ತಿಯಿಂದ ಗಂಭೀರವಾಗಿ ನಡೆಯುತ್ತಿತ್ತು.

ಶರಣರ ಅನುಭವಮಂಟಪ ಅಂದು ಅಮೂಲ್ಯವಾದ ರತ್ನಾಭರಣವನ್ನು ಪಡೆದು ಶ್ರೀಮಂತವಾಗಿತ್ತು. ಅದರ ದರ್ಶನದಿಂದ ಶರಣರ ಹೃದಯಗಳೆಲ್ಲಾ

ಅಪೂರ್ವವಾದ ಅನುಭವದಿಂದ ಬೆಳಗುತ್ತಿದ್ದವು. ಆ ಬೆಳಕಿನ ಭಾವವನ್ನು ಉಕ್ಕೇರಿಸುವಂಥ ಪ್ರಾರ್ಥನಾರೂಪವಾದ ವಚನಗಳನ್ನು ಕಿನ್ನರಿಬೊಮ್ಮಣ್ಣ ಮತ್ತು ಇತರ ಒಬ್ಬಿಬ್ಬರು ಶರಣರು ಸೇರಿ ಹಾಡಿದರು. ಅದರ ಅರ್ಥ ಸಂಪತ್ತಿನ ಗಂಭೀರತೆಯಲ್ಲಿ ಲೀನವಾಗಿ ಅಂದಿನ ಅನುಭಾವಗೋಷ್ಠಿ ಮುಕ್ತಾಯವಾಯಿತು.

●

# ಕಲ್ಯಾಣದಿಂದ ಕದಳಿ

## ೧

ಅಂದು ಕಲ್ಯಾಣವನ್ನು ಪ್ರವೇಶಿಸಿದ ಮಹಾದೇವಿ ಇಂದು ಅಲ್ಲಿ ಆಧ್ಯಾತ್ಮದ ಅಮರ ಶ್ರೀಗಿರಿಯಾಗಿ ಬೆಳೆದುನಿಂತಿದ್ದಾಳೆ. ಆದರೂ ಈಕೆಗೆ ಇನ್ನೂ ಸಂಪೂರ್ಣ ಸಮಾಧಾನವಿಲ್ಲ. ಆ ಶ್ರೀಗಿರಿಯ ಗರ್ಭಗೃಹದಲ್ಲಿ ಚನ್ನಮಲ್ಲಿಕಾರ್ಜುನನ ಸಾಮರಸ್ಯದ ಸುಖ ಸಂಪೂರ್ಣವಾಗಿ ಲಭಿಸಿಲ್ಲವೆಂಬುದೇ ಅವಳಿಗೆ ಇಂದು ಉಳಿದಿರುವ ಅತೃಪ್ತಿ.

ಅದನ್ನೇ ಆಲೋಚಿಸುತ್ತಾ ಮಹಾದೇವಿ ಬಸವಣ್ಣನ ಮಹಾಮನೆಯ ಮಹಡಿಯ ಮುಂದಿನ ಬಿಸಿಲು ಮಾಳಿಗೆಯಲ್ಲಿ ಕುಳಿತಿದ್ದಾಳೆ. ಎತ್ತರವಾದ ಆ ಸ್ಥಳದಿಂದ ಕಲ್ಯಾಣ ಪಟ್ಟಣದ ಬಹುಭಾಗವೆಲ್ಲ ಕಣ್ಣಿಗೆ ಬೀಳುತ್ತದೆ.

ದೂರದಲ್ಲಿ ಬಿಜ್ಜಳನ ಅರಮನೆಯ ಗೋಪುರಗಳು ಬೆಳಗಿನ ಸೂರ್ಯನ ನೂರಾರು ದೇವಾಲಯಗಳ ಕಳಶಗಳು ಏರುತ್ತಿರುವ ಬೆಳಗಿನ ಸೂರ್ಯನ ಬಿಸಿಲಿನಲ್ಲಿ ಹೊಳೆಯುತ್ತಿವೆ. ಎಲ್ಲಕ್ಕಿಂತ ಎತ್ತರವಾಗಿ ನಿಂತಿರುವ ತ್ರಿಪುರಾಂತಕೇಶ್ವರನ ಹೊನ್ನಕಳಶವಂತೂ ಭವ್ಯವಾಗಿ ಕಾಣುತ್ತಿದೆ.

ಅದನ್ನೆಲ್ಲ ನೋಡುತ್ತಾ ಮಹಾದೇವಿಯ ದೃಷ್ಟಿ ಊರನ್ನೆಲ್ಲಾ ಸುತ್ತಿತು. ಅಲ್ಲಲ್ಲಿ ಚೆದುರಿದಂತೆ ಹರಡಿರುವ ಮರಗಳ ಮಡಿಲಿನಲ್ಲಿ ಊರು ಹಬ್ಬಿ ಹರಡಿತ್ತು. ಕಲಕಲರವದಿಂದ ತನ್ನ ನಿತ್ಯಜೀವನದಲ್ಲಿ ತೊಡಗಿತ್ತು.

ಬಸವಣ್ಣನ ಮಹಾಮನೆಯಲ್ಲಿಯೂ ಸಂಭ್ರಮದ ಕಲಕಲರವ ಎಂದಿನಂತೆ ನಡೆದೇ ಇತ್ತು. ನಿತ್ಯವೂ ಹೊಳೆಯಂತೆ ಹರಿದು ಬರುತ್ತಿರುವ ಅತಿಥಿಗಳ ದಾಸೋಹದ ದೃಶ್ಯವನ್ನು ಮಹಾದೇವಿ ತಾನು ಬಂದ ಹೊಸದರಲ್ಲಿ ಕಂಡು ಆಶ್ಚರ್ಯಮೂಕಳಾಗಿದ್ದಂತೆಯೇ ಬಸವೇಶ್ವರನ ಕಾರ್ಯಕ್ಷೇತ್ರದ ಅನುಭವ ಹೆಚ್ಚು ಹೆಚ್ಚು ಆಗತೊಡಗಿದಂತೆ ಮೆಚ್ಚಿ ಮಾರುಹೋಗಿದ್ದಳು.

ಅದನ್ನು ನೆನಸಿಕೊಳ್ಳುತ್ತಿದ್ದಂತೆಯೇ ಬಸವೇಶ್ವರನ ವ್ಯಕ್ತಿತ್ವದ ವಿರಾಟ್ ರೂಪ ಅವಳ ಮನಸ್ಸಿನ ಮುಂದೆ ಸುಳಿಯತೊಡಗಿತು.

"ಎಂತಹ ನಿರ್ಲಿಪ್ತ ನಿರಹಂಕಾರದ ಕರ್ಮಯೋಗ ಅಣ್ಣನದು : ಒಂದು ರಾಜ್ಯದ ಮಹಾಮಂತ್ರಿ ಒಂದು ಕಡೆ ! ಇನ್ನೊಂದು ಕಡೆ ಆಧ್ಯಾತ್ಮ ಚಕ್ರವರ್ತಿ ! ಭಕ್ತಿಭಂಡಾರಿ ! ಸುತ್ತಮುತ್ತಲಿನ ಸಮಾಜವನ್ನು ಮೇಲೆತ್ತಬಲ್ಲ ಮಹಾಪ್ರವೃತ್ತಿ ಶಕ್ತಿ. ಆಧ್ಯಾತ್ಮ ಪ್ರಪಂಚದಲ್ಲಿ ಆದರ್ಶಮಾತ್ರವಾಗಿದ್ದ ಯೋಗಸಮನ್ವಯ. ಇಂದು ಜೀವಂತವಾಗಿ ಮೂರ್ತಿವೆತ್ತಿದೆ ಅಣ್ಣನಲ್ಲಿ ! ಅವನು ಕಟ್ಟಿಕೊಂಡಿರುವ ಸಂಸಾರವೋ, ಅದು ಬೃಹತ್ ಸಂಸಾರ. ಧಾರ್ಮಿಕ ಕ್ರಾಂತಿ, ಸಮಾಜಸುಧಾರಣೆ, ಅಂಧಶ್ರದ್ಧೆಯ ವಿರುದ್ಧ ಪ್ರತಿಭಟನೆ, ಅಸ್ಪೃಶ್ಯತಾನಿವಾರಣೆ, ಸ್ತ್ರೀಯರ ಉದ್ಧಾರ ! ಒಂದೇ ಎರಡೇ...."

ನೆನೆಯುತ್ತಾ ಹೋದಂತೆ ಬಹುಶಃ ಮುಂದಿನ ಜನಾಂಗ ಊಹಿಸಿಕೊಳ್ಳಲಾರೆದೆಂದೆನಿಸಿತು ಮಹಾದೇವಿಗೆ.

"ಅರಮನೆಯ ರಾಜಕೀಯ ಜಂಜಡದಲ್ಲಿ ಸಿಲುಕಿದ್ದರೂ ಅದನ್ನು ಮೀರಿ ನಿಂತಿದ್ದಾನೆ ಅಣ್ಣ. ರಾಜ್ಯದ ಜಟಿಲವಾದ ಸಮಸ್ಯೆಗಳನ್ನು ಅಲ್ಲಿ ಪರಿಹರಿಸುವಂತೆಯೇ, ಇಲ್ಲಿ ಸಾಧಕರ ಅಂತರಂಗದ ಸಮಸ್ಯೆಗಳಿಗೆ ಅನುಭಾವಪೂರ್ವಕವಾದ ಬೆಳಕನ್ನು ನೀಡುತ್ತಾನೆ. ಅವರ ಸಂದೇಹಗಳನ್ನು ಪರಿಹರಿಸುತ್ತಾನೆ...."

ಮಹಾದೇವಿಯ ಮನಸ್ಸಿನಲ್ಲಿ ಈ ಭಾವನೆ ಸುಳಿಯುತ್ತಿದ್ದಂತೆಯೇ ಕೆಲವು ದಿನಗಳ ಹಿಂದೆ ಅನುಭವಮಂಟಪದಲ್ಲಿ ನಡೆದ ಒಂದು ಘಟನೆ ಅವಳ ಸ್ಮರಣೆಗೆ ಬಂದಿತು. ಅಣ್ಣನ ಒಂದೊಂದು ಮಾತೂ ಎಲ್ಲರ ಸಂದೇಹವನ್ನೂ ಪರಿಹರಿಸುವ ಬೆಳಕಿನಂತೆ ಬೆಳಗಿದ ಆ ಸನ್ನಿವೇಶವನ್ನು ಚಿತ್ರಿಸಿಕೊಳ್ಳತೊಡಗಿದಳು.

ಅಂದು ಅಂಬಿಗರ ಚೌಡಯ್ಯ ಅನುಭವಮಂಟಪದ ಚರ್ಚೆಗೆ ನಾಂದಿಯನ್ನು ಹಾಡಿದ್ದ–

ಅಲ್ಲಮಪ್ರಭು ಶೂನ್ಯಸಿಂಹಾಸದ ಮೇಲೆ ಮಂಡಿಸಿದ್ದಾನೆ. ಬಸವ, ಚನ್ನಬಸವ, ಸಿದ್ಧರಾಮರು, ಗದ್ದುಗೆಯ ಪಕ್ಕದಲ್ಲಿ ಕುಳಿತಿದ್ದಾರೆ. ಶರಣೆಯರ ಗುಂಪಿನಲ್ಲಿ ಮುಂದಿನ ಸಾಲಿನಲ್ಲಿಯೇ ತಾನು ಕುಳಿತಿದ್ದಾಳೆ ಮಹಾದೇವಿ. ಅಲ್ಲಮಪ್ರಭು ಸುತ್ತಲೂ ಒಮ್ಮೆ ದೃಷ್ಟಿಯನ್ನು ಹರಿಸಿದ. ಶೂನ್ಯಪೀಠಕ್ಕೆ ಸ್ವಲ್ಪದೂರದಲ್ಲಿ ಕಾಲುಮಣೆಯ ಮೇಲೆ ಓಲೆಗರಿಗಳನ್ನಿಟ್ಟುಕೊಂಡು ಭಂಡಾರಿ ಶಾಂತರಸ, ಕಾರ್ಯಕ್ರಮಗಳ ಮುಖ್ಯ ಚರ್ಚೆಗಳನ್ನು ಬರೆದುಕೊಳ್ಳಲು ಸಿದ್ಧನಾಗಿದ್ದಾನೆ. ಅತ್ತ ತಿರುಗಿ ಅಲ್ಲಮಪ್ರಭು ಹೇಳಿದ :

'ಶಾಂತರಸರೇ, ನೆನ್ನೆಯ ದಿನದ ವಚನಗಳನ್ನೆಲ್ಲಾ ಬರೆದುಕೊಂಡಿದ್ದೀರಿ ಅಲ್ಲವೇ ? ಅಥವಾ ಯಾವುದಾದರೂ ವಚನ ಪೂರ್ಣವಾಗಿಲ್ಲದಿದ್ದರೆ ಇಂದು ಅದನ್ನು ಹೇಳಿಬಿಡಿ ; ಪೂರ್ಣಗೊಳಿಸಿ ಮುಂದೆ ಸಾಗೋಣ."

"ಸ್ವಲ್ಪ ವಚನಗಳನ್ನೂ ಬರೆದುಕೊಂಡಿದ್ದೇನೆ, ಪ್ರಭುವೇ. ಒಂದು ವಚನ ಮಾತ್ರ ಸ್ವಲ್ಪ ತೊಡಕನ್ನು ತಂದಿತ್ತು. ಅದು ಬಸವಣ್ಣನವರೇ ಹೇಳಿದ ವಚನ.ಇಂದು ಅವರೊಡನೆ ಚರ್ಚಿಸಿ ಅದನ್ನು ಸರಿಪಡಿಸಿದ್ದೇನೆ ಹೇಳಿದ ಶಾಂತರಸ.

"ಸರಿ ಹಾಗಾದರೆ, ಇಂದಿನ ಕಾರ್ಯಕ್ರಮಕ್ಕೆ ಪ್ರವೇಶ ಮಾಡೋಣ" ಎಂದು ಶರಣರನ್ನು ಉದ್ದೇಶಿಸಿ ಕೇಳಿದ : "ಇಂದು ಚರ್ಚೆಯನ್ನು ಯಾರು ಪ್ರಾರಂಭಿಸುತ್ತೀರಿ? ಯಾವ ಸಂದೇಹವನ್ನು ಮುಂದಿಡುತ್ತೀರಿ ?"

ಕ್ಷಣಕಾಲ ಸಭೆಯಲ್ಲಿ ಮೌನವಾವರಿಸಿತು. ಶರಣರು ಒಬ್ಬರನ್ನೊಬ್ಬರು ನೋಡತೊಡಗಿದರು. ಅಷ್ಟರಲ್ಲಿ ಮೇಲೆದ್ದ ಚೌಡಯ್ಯ. ಎಲ್ಲರ ಕಣ್ಣುಗಳು ಕುತೂಹಲಗೊಂಡವು.

ಚೌಡಯ್ಯ ಮೇಲೆದ್ದು ಪ್ರಭುವಿಗೆ ವಿನಯದಿಂದಾಗಿ ಬಾಗಿ ನಮಸ್ಕರಿಸಿದ. ಸಭೆಗೆಲ್ಲಾ ಕೈಮುಗಿದು ಹೇಳಿದ : "ನನ್ನದೊಂದು ಮಾತಿದೆ, ಪ್ರಭುವೇ."

"ಹೇಳು ಚೌಡಯ್ಯ, ಹೇಳು." ಮುಗುಳುನಗೆ ಸುಳಿಯಿತು ಪ್ರಭುದೇವನ ಮುಖದ ಮೇಲೆ.

ಪ್ರಾರಂಭಿಸಿದ ಚೌಡಯ್ಯ : "ಈಗೊಂದೆರಡು ದಿನಗಳ ಹಿಂದೆ ನಾನು ನನ್ನ ಕಾಯಕದಲ್ಲಿ ನಿರತನಾದಾಗ ಒಂದು ಘಟನೆ ನಡೆಯಿತು. ದೋಣಿಯನ್ನು ದಡಕ್ಕೆ ತಂದು ನಿಲ್ಲಿಸುತ್ತಿದ್ದೆ. ದೋಣಿಯ ಹುಟ್ಟಿನಿಂದ ಸಿಡಿದ ನೀರು ಅಲ್ಲಿ ಕುಳಿತಿದ್ದ ಉಚ್ಚವರ್ಣದವರೊಬ್ಬರಿಗೆ ಸಿಡಿಯಿತು. ಅಬ್ಬಾ ! ಅವರ ಕೋಪಕ್ಕೆ ಪಾರವೇ ಇಲ್ಲದಂತಾಯಿತು. ನಾಲಗೆಯನ್ನು ಹರಿಯಬಿಟ್ಟರು. ಧರ್ಮ ಮುಳುಗಿತೆಂದರು; ಕಾಲ ಕೆಟ್ಟಿತೆಂದರು. 'ಶೂದ್ರರೆಲ್ಲ ಭಕ್ತರಾಗುವ ಧರ್ಮಭ್ರಷ್ಟ ಕಾಲ ಬಂದುದಕ್ಕೆ ಶಪಿಸಿದರು. ನಾನೆಲ್ಲವನ್ನೂ ಸಹಿಸಿಕೊಂಡೇ ಇದ್ದೆ. ಆದರೆ ಇದಕ್ಕೆಲ್ಲಾ ಕಾರಣವೆಂದು ಹೇಳುತ್ತಾ ಅಣ್ಣನವರ ಪವಿತ್ರನಾಮವನ್ನು ತಿರಸ್ಕಾರದಿಂದ ಬಳಸಿಕೊಂಡಾಗ ತಡೆಯಲಾರದೇ ಹೋದೆ. ನನಗೂ ನಾಲಿಗೆಯಿದೆ ಎಂಬುದನ್ನು ಚೆನ್ನಾಗಿಯೇ ತೋರಿಸಿದೆ. ಉತ್ತಮರೆನಿಸಿಕೊಳ್ಳುವವರು ಮಾಡುವ ಅನ್ಯಾಯಗಳನ್ನೂ ಅಧರ್ಮಗಳನ್ನೂ, ಕುಟಿಲ ಕುಹಕ ವಂಚನೆ ಮೋಸಗಳನ್ನು ಸಾಕ್ಷಿಯನ್ನಿಟ್ಟು ತೋರಿಸಿ ಹೇಳಿದೆ. ಮತ್ತು ಹೇಳಿದೆ.

ಮಾತುಗಂಟುತನದಿಂದ ಎಷ್ಟು ಮಾತನಾಡಿದಡೇನು ?
ಕಾಮಿನಿಯರ ಕಾಲದೆಸೆಯಲ್ಲಿ ಸಿಕ್ಕಿ,
ಕ್ರೋಧದ ದಳ್ಳುರಿಯಲ್ಲಿ ಬೆಂದು,
ಆಶೆಯೆಂಬ ಪಾಶ ಕೊರಳಲ್ಲಿ ಸುತ್ತಿ, ಅದೇಕೋ
ಅದೇತರ ಮಾತೆಂದನಂಬಿಗರ ಚೌಡಯ್ಯ.

ಅಣ್ಣನವರನ್ನು ನಿಂದಿಸುವ ಅವನ ಮಾತುಗಳನ್ನು ಕೇಳಿ ನನಗೇನೋ ಸ್ಫೂರ್ತಿ ಬಂದಂತಾಗಿತ್ತು. ಮತ್ತೊಂದು ವಚನವನ್ನು ಹೇಳಿದೆ :

ಅರ್ಚನೆಯ ಮಾಡುವಲ್ಲಿ ವೇಷವರಿತಿರಬೇಕು,
ಪೂಜೆಯ ಮಾಡುವಲ್ಲಿ ಪುಣ್ಯಮೂರ್ತಿಯಾಗಿರಬೇಕು,
ಕೊಳುಕೊಡೆಯಲ್ಲಿ ಭೂತಹಿತವಾಗಿರಬೇಕು,
ಇಂತೀ ಸಡಗರಿಸಿಕೊಂಡಿಪ್ಪಾತನಡಿಗೆರಗುವೆನೆಂದಾತ ಅಂಬಿಗರ ಚೌಡಯ್ಯ

ಹೇಳುತ್ತಾ ಹೇಳುತ್ತಾ ಚೌಡಯ್ಯ, ಆ ಸನ್ನಿವೇಶದಲ್ಲಿಯೇ ಇದ್ದವನಂತೆ ಆವೇಶಗೊಂಡಿದ್ದ.

"ಹೌದು ಚೌಡಯ್ಯ, ತುಂಬಾ ಸುಂದರವಾದ ಮಾತನ್ನೇ ಹೇಳಿದ್ದೀಯ" – ಪ್ರಭುದೇವ ಮೆಚ್ಚಿ ನುಡಿದ.

ಸ್ವಲ್ಪ ಆವೇಶ ಇಳಿದು ಚೌಡಯ್ಯ :

"ಇದರಲ್ಲಿ ನನ್ನದೇನೂ ಇಲ್ಲ, ಸ್ವಾಮಿ. ಅಣ್ಣನ ಮಾತುಗಳನ್ನೇ ನನ್ನ ರೀತಿಯಲ್ಲಿ ನುಡಿದಿದ್ದೇನೆ. ಅದಿರಲಿ, ನಾನು ನುಡಿದ ಈ ಮಾತುಗಳನ್ನು ಕೇಳಿದ ನಂತರ ಆತ ಸ್ವಲ್ಪ ಕಾಲ ಸುಮ್ಮನಿದ್ದು ಕೋಪವನ್ನು ಅಡಗಿಸಿಕೊಂಡು ಹೀಗೆ ಹೇಳಿದ : 'ಅದೆಲ್ಲಾ ಸರಿ, ಚೌಡಯ್ಯ. ಸ್ವಲ್ಪ ನಿಧಾನವಾಗಿ ಆಲೋಚನೆ ಮಾಡು: ನಿಮ್ಮ ಬಸವಣ್ಣ ಹೇಳುವಂತೆ ಧರ್ಮದಲ್ಲಿ ಎಲ್ಲರಿಗೂ ಸಮಾನ ಅಧಿಕಾರ ಎಂಬ ಮಾತನ್ನು ಒಪ್ಪುವುದು ಸಾಧ್ಯವೇ? ಈ ಚತುರ್ವರ್ಣಗಳೂ, ಪಂಚಮವರ್ಣವೂ ಬೇರೆ ಬೇರೆ ಇರುವಾಗ, ಇವರೆಲ್ಲರ ಸಂಸ್ಕಾರವೂ ಬೇರೆ ಬೇರೆಯಾಗಿರುವಾಗ, ಎಲ್ಲರೂ ಒಂದೇ ಎಂದರೆ ಅದು ಒಪ್ಪುವ ಮಾತೇ ? ಅವರವರ ಸಂಸ್ಕಾರಕ್ಕನುಗುಣವಾಗಿ, ಕರ್ಮಕ್ಕನುಗುಣವಾಗಿ ಆಯಾ ಜಾತಿಯಲ್ಲಿ ಅವರು ಹುಟ್ಟಿರುತ್ತಾರೆ. ಅದನ್ನು ಮೀರಿ ಉತ್ತಮರೊಡನೆ ಪಂಚಮರೂ ಧರ್ಮಕ್ಕೆ ಸಮಾನ ಅಧಿಕಾರಿಗಳೆಂದರೆ ಧರ್ಮ ಉಳಿದೀತೇ ? ಎಲ್ಲರೂ ಸಮಾನರಾದರೆ ಈ ಬೇರೆ ಬೇರೆ ಜಾತಿಗಳು ಏಕಾದವು ? ಬೇರೆ ಬೇರೆ ಸಂಸ್ಕಾರಗಳು ಏಕಾದವು? ದೇವರೇ ಮಾಡಿರುವ ಈ ಜಾತಿಗಳನ್ನೂ ಮೀರಿ ನಡೆಯುವುದು ಯೋಗ್ಯವೇ?

ನೀನೇ ಆಲೋಚನೆ ಮಾಡು' – ಇದು ಆತ ಹೇಳಿದ ಮಾತು. ಅಲ್ಲೇನೋ ಒಂದು ರೀತಿಯ ಒರಟಾಗಿ ಉತ್ತರವನ್ನು ಕೊಟ್ಟೆ, ಆದರೆ ಈ ಎರಡು ಮೂರು ದಿನಗಳಿಂದಲೂ ಇದು ನನ್ನ ಮನಸ್ಸಿನಲ್ಲಿ ಸಂದೇಹವನ್ನು ಎಬ್ಬಿಸಿದೆ. ಇದನ್ನು ತಮ್ಮ ಮುಂದೆ ಇಟ್ಟಿದ್ದೇನೆ. ವಿಷಯ ಪರಾಂಬರಿಕೆಯಾಗಬೇಕು."

ಮಾತನ್ನು ಮುಗಿಸಿದ ಚೌಡಯ್ಯ. ಅನುಭವಮಂಟಪ ಸ್ತಬ್ಧವಾಗಿತ್ತು. ಶರಣರು ಗಹನವಾದ ಆಲೋಚನೆಯಲ್ಲಿ ತೊಡಗಿದಂತೆ ತೋರುತ್ತಿತ್ತು. ಬಸವಣ್ಣ ಅಂದು ಹೆಜ್ಜೆ ಹೆಜ್ಜೆಗೂ ಎದುರಿಸಬೇಕಾಗಿದ್ದ ಬಹುಮುಖ್ಯವಾದ ಸಮಸ್ಯೆಯನ್ನೇ ಚೌಡಯ್ಯ ಮುಂದೆ ಇಟ್ಟಿದ್ದ.

ಅಲ್ಲಮಪ್ರಭು ಚನ್ನಬಸವೇಶ್ವರನತ್ತ ನೋಡಿದ. ಬಸವಣ್ಣ ಇದಕ್ಕೆ ಉತ್ತರವನ್ನೀಯಲು ಉದ್ಯುಕ್ತನಾಗಿರುವಷ್ಟರಲ್ಲಿ ಚನ್ನಬಸವಣ್ಣ ಮೇಲೆದ್ದು ಹೇಳಿದ:

"ಚೌಡಯ್ಯನವರು ಎತ್ತಿದ ಸಮಸ್ಯೆಯನ್ನು ಕುರಿತು ಅಣ್ಣನವರ ದೃಷ್ಟಿ ಏನೆಂಬುದನ್ನು ಅವರೇ ಹೇಳುವುದಕ್ಕೆ ಮೊದಲು, ನನಗೆ ಅಪ್ಪಣೆಯಾಗಬೇಕು. ಅನಂತರ ಅಣ್ಣನವರು ಅದಕ್ಕೆ ಮುಕ್ತಾಯದ ಅನುಭವ ಮುದ್ರೆಯನ್ನು ಒತ್ತಲಿ" ಎಂದು ಪ್ರಭುವಿನತ್ತ ನೋಡಿದ ಚನ್ನಬಸವ.

"ಹೇಳು ಚನ್ನಬಸವಣ್ಣ, ಗುರುವಿಗೆ ಗುರುವಾಗುವ ಜ್ಞಾನಯೋಗಿ ನೀನು ಹೇಳು." ಮುಗುಳುನಗುತ್ತಾ ಒಪ್ಪಿಗೆಯನ್ನು ಸೂಚಿಸಿದ ಪ್ರಭುದೇವ.

ಚನ್ನಬಸವಣ್ಣನ ಮಾತು ಮುಂದುವರಿಯಿತು.

"ಹುಟ್ಟಿನಿಂದಲೇ ಜಾತಿಯನ್ನು ನಿರ್ಧರಿಸಬೇಕೆಂಬುದನ್ನು ಅಣ್ಣನವರು ಪ್ರತಿಭಟಿಸುತ್ತಾರೆ. ಈ ಚತುರ್ವರ್ಣಗಳೂ ಪಂಚಮವರ್ಣವೂ ಬೇರೆಬೇರೆ ಎಂಬುದನ್ನಾಗಲೀ, ಅವರವರ ಕರ್ಮಕ್ಕನುಗುಣವಾಗಿ, ಸಂಸ್ಕಾರಕ್ಕನುಗುಣವಾಗಿ ಆಯಾ ಜಾತಿಯಲ್ಲಿ ಹುಟ್ಟುತ್ತಾರೆಂಬುದನ್ನಾಗಲಿ, ಯಾವ ವಿಚರವಂತನೂ ಒಪ್ಪಲಾರ. ಉತ್ತಮ ಸಂಸ್ಕಾರಗಳು, ಉತ್ತಮ ಆಚರಣೆಗಳು, ಯಾವ ಒಂದು ಜಾತಿಯ ಗುತ್ತಿಗೆಯಲ್ಲ. ಉತ್ತಮ ವರ್ಣದವರೆನಿಸಿಕೊಂಡ ಅನೇಕರಲ್ಲಿ ಇರುವ ಕುಸಂಸ್ಕಾರಗಳನ್ನೂ, ಕುಟಿಲ ಕುಹಕಗಳನ್ನೂ ನೋಡಿದಾಗ ಮತ್ತು ಕೀಳೆನಿಸಿಕೊಂಡಿರುವವರಲ್ಲಿ ಕಾಣುವ ಸುಸಂಸ್ಕಾರಗಳನ್ನೂ ಉದಾತ್ತ ಗುಣಗಳನ್ನೂ ಕಂಡಾಗ, ಈ ಜಾತಿಭೇದಗಳು ದೇವರು ಮಾಡಿದುವುಗಳಲ್ಲ, ಕೇವಲ ಮನುಷ್ಯ ಕಲ್ಪಿತವಾದ ಕೃತಕ ವಿಭಜನೆಗಳೆಂಬುದು ಸ್ಪಷ್ಟವಾಗುತ್ತದೆ. ಇದು ಒಂದು ಕಾಲದಲ್ಲಿ ಸಮಾಜದ ಸುವ್ಯವಸ್ಥೆಗಾಗಿ ಏರ್ಪಟ್ಟ ಕಾರ್ಯ ವಿಭಜಣೆ :

... ಕಾಸಿ ಕಮ್ಮಾರನಾದ, ಬೀಸಿ ಮಾಡಿವಾಳನಾದ ;
ಹಾಸನಿಕ್ಕಿ ಸಾಲಿಗನಾದ, ವೇದನವನೋದಿ ಹಾರುವನಾದ ;
ಇದುಕಾರಣ, ಕೂಡಲಸಂಗಮದೇವಾ,
ಅಂಗಸ್ಥಲವನರಿದವನೇ ಕುಲಜನು.

ಎಂದು ಅಣ್ಣನವರು ಹೇಳುವಂತೆ ಅದು ವ್ಯಕ್ತಿಯ ಮನೋಧರ್ಮಕ್ಕೆ ಅನುಗುಣವಾಗಿ ನಿರ್ಧಾರವಾಗಬೇಕಾದುದೇ ಹೊರತು ಹುಟ್ಟಿನಿಂದ ಅಲ್ಲ. ಅಲ್ಲದೆ ಉದ್ಯೋಗದಲ್ಲಿ ಮೇಲು–ಕೀಳೆಂಬುದೇ ಇಲ್ಲ. ಸಮಾಜದ ಹಿತಕ್ಕೆ ಕಾರಣವಾದ ಯಾವ ಉದ್ಯೋಗವನ್ನು ಕೈಗೊಂಡಿದ್ದರೂ ಅದು ಪವಿತ್ರವಾದುದು. ಆ ಉದ್ಯೋಗದ ಮೂಲಕವೇ ಆತ್ಮದ ಉದ್ಧಾರವನ್ನು ಸಾಧಿಸಲು ಉದ್ಯುಕ್ತನಾಗಬೇಕು. ಮತ್ತು ಅದಕ್ಕೆ ಸಮಾಜದಲ್ಲಿ ಎಲ್ಲ ಅವಕಾಶಗಳೂ ಇರಬೇಕು. ಅದನ್ನೇ ಅಣ್ಣನವರು ಸಾಧಿಸುತ್ತಿರುವುದು."

ಶರಣರೆಲ್ಲ ಒಂದೇ ಮನಸ್ಸಿನಿಂದ ಕೇಳುತ್ತಿದ್ದರು. ಸಿದ್ಧರಾಮ ತನ್ನ ಮೆಚ್ಚುಗೆಯನ್ನು ಅಡಗಿಸಿಕೊಳ್ಳಲಾರದೆ ಮೇಲೆದ್ದು ಹೇಳತೊಡಗಿದ :

"ಹೌದು, ಚನ್ನಬಸವಣ್ಣನ ವಿವರಣೆ ತುಂಬಾ ಸುಂದರವಾಗಿದೆ. ಆ ದೃಷ್ಟಿಯಿಂದ ನೋಡಿದಾಗ ಧರ್ಮದ ಎದುರಿನ ಜಾತಿ ಮತ ಎಂಬ ವಿಭಜನೆಯಾಗಲಿ, ಹೆಣ್ಣು ಗಂಡು ಎಂಬ ಭೇದವಾಗಲಿ ಅಸಹಜವೆಂದು ಗೋಚರಿಸುತ್ತದೆ. ದೇವರ ದಾಸಿಮಯ್ಯ ಹೇಳಿರುವ ಈ ಮಾತುಗಳನ್ನ ಇಲ್ಲಿ ನೆನಸಿಕೊಳ್ಳಬಹುದು.

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೇ ?
ಒಡೆಯನ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ ?
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ ?
ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥ"

"ಹೌದು ಸಿದ್ಧರಾಮಯ್ಯ, ಹೌದು" ಅಲ್ಲಮ ಉದ್ಗರಿಸಿದ : "ಲೋಕದ ಜಡರು ಅರಿಯಲಾರದ ತೊಡಕು ಇದು. ಈ ತೊಡಕಿನಿಂದ ಸಮಾಜದಲ್ಲಿ ಉಂಟಾಗಿರುವ ಒಡಕನ್ನು ತಿದ್ದಲು ಬಸವಣ್ಣ ಸಾಹಸಪಡುತ್ತಿದ್ದಾನೆ" ಎಂದು ಬಸವಣ್ಣನ ಕಡೆ ತಿರುಗಿ ಅವನನ್ನು ಕೇಳಿದ :

"ಬಸವೇಶ್ವರಾ, ನೀನೂ ಎರಡು ಮಾತನ್ನು ಹೇಳು ಇದನ್ನು ಕುರಿತು."

ಬಸವೇಶ್ವರ ಮೇಲೆದ್ದ. ಚನ್ನಬಸವಣ್ಣ ಸಿದ್ಧರಾಮ ಕುಳಿತುಕೊಂಡರು. ಬಸವಣ್ಣ ವಿನಯದಿಂದ ಸಭೆಗೆ ವಂದಿಸಿ ಪ್ರಾರಂಭಿಸಿದ :

"ಚನ್ನಬಸವಣ್ಣ ಮತ್ತು ಸಿದ್ಧರಾಮಯ್ಯನವರು ಆಗಲೇ ಹೇಳಿದ್ದಾರೆ. ಆದರೂ ವರ್ಣಗಳು ಒಂದು ಕಾಲದಲ್ಲಿ ಸಮಾಜದ ಸುವ್ಯವಸ್ಥೆಗಾಗಿ ಏರ್ಪಟ್ಟ ಕಾರ್ಯವಿಭಜನೆ ಎಂಬ ಮಾತು ನಿಜ. ಆದರೆ ಯಾವುದು ಸಮಾಜದ ಸುವ್ಯವಸ್ಥೆಗಾಗಿ ಏರ್ಪಟ್ಟಿತೋ, ಅದೇ ಸಮಾಜದ ಸಮಸ್ಯೆಯಾಗಿ ಪರಿಣಮಿಸಿತು. ಶ್ರಮದ ವಿಭಜನೆ ಹೋಗಿ ಶ್ರಮಗಾರರ ವಿಭಜನೆಯಾಯಿತು. ಅದರಲ್ಲಿ ಮೇಲು – ಕೀಳೆಂಬ ಭಾವನೆ ಬಲಿಯಿತು. ಸಮಾಜ ಹೋಳುಹೋಳಾಯಿತು. ಹಲವರು ದುಡಿಯುವವರು, ಇನ್ನು ಕೆಲವರು ಆ ದುಡಿಮೆಯ ಫಲವನ್ನು ಕುಳಿತು ತಿನ್ನುವವರು – ಎಂಬ ತಾರತಮ್ಯ ಇರುವವರೆಗೆ ಸಮಾಜದಲ್ಲಿ ಅಸಮತೆ ಇದ್ದೇ ಇರುತ್ತದೆ. ಎಲ್ಲರೂ ದುಡಿಯಬೇಕು ಆಗ ಎಲ್ಲರಿಗೂ ಸಮಾನವಾಗಿ ಬೆಳೆಯಲು ಅವಕಾಶ ಸಿಕ್ಕುತ್ತದೆ.

"ಸ್ಪಷ್ಟತೆಗಾಗಿ ಒಂದು ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ ಈ ಮಹಾಮನೆಯಲ್ಲಿ ನಿತ್ಯದಾಸೋಹದ ಏರ್ಪಾಡಿಗಾಗಿ ಅನೇಕ ಶರಣರು, ಒಬ್ಬೊಬ್ಬರು ಒಂದೊಂದು ಕೆಲಸವನ್ನು ಹಂಚಿಕೊಂಡು ದುಡಿಯುತ್ತಿದ್ದಾರೆ. ದುಡಿಯುವಾಗ ಎಲ್ಲರೂ ದುಡಿಯುತ್ತಾರೆ. ಅನಂತರ ಎಲ್ಲರಿಗೂ ಬಿಡುವು ಸಿಕ್ಕುತ್ತದೆ. ಎಲ್ಲರೂ ಇಲ್ಲಿ ಬಂದು ಧರ್ಮಜಿಜ್ಞಾಸೆಯಲ್ಲಿ ತೊಡಗಿದ್ದಾರೆ. ಅದಕ್ಕೆ ಬದಲಾಗಿ ಉದಾಹರಣೆಗೆ, ಅಪ್ಪಣ್ಣ, ಚಂದಯ್ಯ ಈ ಮೂರುನಾಲ್ಕು ಜನಗಳಷ್ಟೇ ಕೆಲಸದಲ್ಲಿ ತೊಡಗಿ, ಅದರ ಫಲವನ್ನು ನಾವೆಲ್ಲಾ ಕುಳಿತು ತಿನ್ನುವಂತಾದರೆ, ದಿನವೆಲ್ಲ ಅವರು ದುಡಿಯುವುದೇ ಆಗುತ್ತದೆ. ಅಧ್ಯಯನ, ಪೂಜೆ ಮೊದಲಾದ ವಿಷಯಗಳಿಗೆ ಮನಸ್ಸು ಕೊಡುವುದಕ್ಕೆ ಸಮಯವೇ ಅವರಿಗೆ ಇಲ್ಲವಾಗುತ್ತದೆ. ಆದರೆ ಕೆಲಸವೇ ಇಲ್ಲದ ನಮಗೆ ಸಮಯವನ್ನು ಕಳೆಯುವುದೇ ಕಷ್ಟವಾಗುತ್ತದೆ.ಎರಡೂ ಪಾಯಕಾರಿಯಾದವುಗಳೇ. ಅವಶ್ಯಕತೆಗಿಂತ ಹೆಚ್ಚಿನ ವಿಶ್ರಾಂತಿ ಆಲಸ್ಯಕ್ಕೆ ಕಾರಣವಾಗುತ್ತದೆ ; ವಿಶ್ರಾಂತಿ ಇಲ್ಲದ ದುಡಿಮೆ, ದೇಹವನ್ನೂ ಮನಸ್ಸನ್ನೂ ಕುಂಠಿತಗೊಳಿಸುತ್ತದೆ. ಆದುದರಿಂದ ಯಾವಾಗಲೂ ದುಡಿಯುತ್ತಿರುವುದೇ ಕೆಲವರ ಹಣೆಯ ಬರಹವಾಗಿ ವಿಶ್ರಾಂತಿ ಕೇವಲ ಕೆಲವರ ಸ್ವತ್ತಾಗಬಾರದು. ಎಲ್ಲರೂ ಈ ಧರ್ಮವನ್ನು ಅರಿತು ಆಚರಿಸಬೇಕು.

"ಸಹನಾವವತು, ಸಹನೌ ಭುನಕ್ತು, ಸಹವೀರ್ಯಂ ಕರವಾವಹೈ" – ಎಂದು ಉಪನಿಷತ್ತು ಹೇಳಿದ್ದು ಈ ಅರ್ಥದಲ್ಲಿ. 'ನೀವೆಲ್ಲಾ ದುಡಿಯಿರಿ, ನಾವು ಇಲ್ಲಿ ಕುಳಿತು ಧರ್ಮವನ್ನು ಬೋಧಿಸುತ್ತೇವೆ. ನಿಮ್ಮ ಪರವಾಗಿ ನಾವು ಪೂಜೆಯನ್ನು ಮಾಡುತ್ತೇವೆ' ಎಂದು ಹೇಳುವ ಉತ್ತಮ ವರ್ಣದ ಕಲ್ಪನೆ ಇನ್ನು ನಡೆಯಲಾರದು

ಅವರವರ ಉದ್ಧಾರವನು ಅವರವರೇ ಕಂಡುಕೊಳ್ಳಬೇಕು. ನನ್ನ ಪರವಾಗಿ ಇನ್ನೊಬ್ಬ ಪೂಜೆ ಮಾಡಿ ನನ್ನನ್ನು ಉದ್ಧರಿಸುತ್ತಾನೆನ್ನುವುದು ಹಾಸ್ಯಾಸ್ಪದ. 'ತಾನುಂಬ ಊಟವನ್ನು ತನ್ನಾಶ್ರಯದ ರತಿಸುಖವನ್ನು, ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ ?' ಎಂದು ನಾನು ಒಂದು ವಚನದಲ್ಲಿ ಹೇಳಿದ್ದು ಈ ಅರ್ಥದಲ್ಲಿಯೇ. 'ದುಡಿಮೆ' 'ಅಧ್ಯಯನ' 'ಅರ್ಚನ' ಈ ಎಲ್ಲವೂ ಎಲ್ಲ ವ್ಯಕ್ತಿಗಳ ಜೀವನದಲ್ಲಿ ಅಳವಡಬೇಕು. ಅದೇ ಕಾಯಕದ ತತ್ವ.

"ಒಬ್ಬ ವ್ಯಕ್ತಿ ಬ್ರಹ್ಮಜ್ಞಾನದ ಅರಿವಿನಲ್ಲಿ ತೊಡಗಿದಾಗ ಬ್ರಾಹ್ಮಣನಾಗುತ್ತಾನೆ. ತನ್ನ ಆತ್ಮರಕ್ಷಣೆಯ ಸಾಹಸದಲ್ಲಿ ತೊಡಗಿದಾಗ ಕ್ಷತ್ರಿಯನಾಗುತ್ತಾನೆ. ದಾನಧರ್ಮದಿಂದ ಕೂಡಿ ಬದುಕುವ ಮಾರ್ಗದ ಪ್ರತಿಫಲದ ಸಂಪಾದನೆಯಲ್ಲಿ ತೊಡಗಿದಾಗ ವೈಶ್ಯನಾಗುತ್ತಾನೆ. ಸಮಾಜದ ಹಿತಕ್ಕಾಗಿ ಇತರರ ಸೇವೆಯಲ್ಲಿ ನಿರತನಾದಾಗ ಶೂದ್ರನಾಗುತ್ತಾನೆ. ಹೀಗೆ ಇವು ವ್ಯಕ್ತಿಯ ಸ್ವಯಂಪೂರ್ಣತೆಯ ಸಾಧನೆಯಲ್ಲಿ ಕೈಗೊಂಡ ವಿವಿಧ ಮುಖಗಳಾಗಬೇಕೇ ಹೊರತು, ಜಾತಿಗಳಾಗಿ ಪರಿಣಮಿಸಬಾರದು.

"ಇಲ್ಲಿ ನಾವೆಲ್ಲಾ ಧರ್ಮಜಿಜ್ಞಾಸೆಯಲ್ಲಿ ತೊಡಗಿದ್ದೇವೆ. ಬ್ರಹ್ಮನ ಅನುಭವದಲ್ಲಿರುವ ನಾವೆಲ್ಲರೂ ಈಗ ಬ್ರಾಹ್ಮಣರು. 'ಬ್ರಾಹ್ಮಣ' ಎನ್ನುವುದೊಂದು ಮನೋಧರ್ಮವೇ ಹೊರತು ಅದೊಂದು ಜಾತಿಯಲ್ಲಿ."

ಗಂಭೀರವಾದ ಘಂಟಾನಾದದಂತೆ ಚಿಮ್ಮಿ ಬರುತ್ತಿದ್ದ ಬಸವಣ್ಣನವರ ಮಾತುಗಳು, ಶರಣರ ಮನಸ್ಸಿನಲ್ಲಿ ಅಡಗಿ ಲೀನವಾಗುತ್ತಿದ್ದುವು. ಇದನ್ನು ಕೇಳುತ್ತಿದ್ದ ಮಧುವರಸನ ಮನಸ್ಸು ಸಂತೋಷದಿಂದ ತುಂಬಿಬಂದಿತು.

ಮೊದಲು ಮಧುವರಸ ತಾನು ಉತ್ತಮ ಕುಲದವನೆಂದು ಅಹಂಕಾರದಿಂದ ಮೆರೆದಿದ್ದವನು. ಬಸವಣ್ಣನವರನ್ನು ತಿರಸ್ಕರಿಸುತ್ತಿದ್ದವನು. ಆದರೆ ಈಚೆಗೆ ಬಸವಣ್ಣನವರ ತತ್ವಗಳ ಮಹತ್ವವನ್ನು ಅರಿತುಕೊಂಡು ಅನುಭವ ಮಂಟಪಕ್ಕೆ ಬಂದಿದ್ದನು.

ಬಸವಣ್ಣನವರ ಈ ವಿವರಣೆಯನ್ನು ಕೇಳುತ್ತಾ ಮಧುವಯ್ಯನ ಮನಸ್ಸು ತನ್ನ ಹಿಂದಿನ ಕಾರ್ಯಗಳ ಬಗೆಗೆ ಪಶ್ಚಾತ್ತಾಪದಿಂದ ಕುದಿದು ನಿಚ್ಚಳವಾಗತೊಡಗಿತ್ತು. ಬಸವಣ್ಣ ಮಾತನ್ನು ಮುಗಿಸುವ ಮೊದಲೇ ಎದ್ದುನಿಂತ :

"ನಿಮ್ಮಿಂದ ಒಂದು ಹೊಸ ಸಂದೇಶವನ್ನು ಜಗತ್ತು ಇಂದು ಕಂಡುಕೊಳ್ಳುತ್ತಿದೆ, ಬಸವಣ್ಣನವರೇ. ನೀವು ಹೇಳುತ್ತಿರುವ ಈ ಮಾತುಗಳು ನಮ್ಮ ಸಂಪ್ರದಾಯದ ಉದ್ಧಾರಕ್ಕೆ ಹೊಸ ನಾಂದಿಯನ್ನು ಹಾಡುತ್ತಿರುವಂತಿದೆ.

ಆದರೆ ಇದು ಹೇಗೆ ಕಾಣಿಸುತ್ತದೆಂಬುದನ್ನು ನಾನು ಬಲ್ಲೆ. ಏಕೆಂದರೆ ನಾನು ಅದೇ ದೃಷ್ಟಿಯಿಂದ ಹಿಂದೆ ಅವುಗಳನ್ನು ನೋಡುತ್ತಿದ್ದವನು. ಆದರೆ ಈಚೆಗೆ ನನ್ನ ಕಣ್ಣು ತೆರೆಯಿತು. ಹಾಗೆಯೇ ಇತರರ ಕಣ್ಣೂ ತೆರೆಯಬಾರದೇ, ಸಮಾಜದಲ್ಲಿ ಚಿಮ್ಮುತ್ತಿರುವ ಈ ಹೊಸ ಬೆಳಕನ್ನು ಸ್ವಾಗತಿಸುವಂತಾಗಬಾರದೇ ಎಂದು ಹಂಬಲಿಸುತ್ತಿದ್ದೇನೆ."

"ಸಂತೋಷ ಮಧುವರಸರೇ !" ಬಸವಣ್ಣ ಆತನತ್ತ ನೋಡುತ್ತಾ ಹೇಳಿದ : "ನಿಮ್ಮ ಹಂಬಲ ವ್ಯರ್ಥವಾಗಲಾರದು. ಇಂದಲ್ಲ ನಾಳೆ ಸಮಾಜ ಅದನ್ನು ಕಂಡುಕೊಳ್ಳುತ್ತದೆ. ಈ ಭಾವನೆಗಳನ್ನು ನಾವು ಇಂದು ಬಿತ್ತಿದರೆ, ಅವು ಎಂದೋ ಒಂದು ದಿನ, ಯಾವುದೋ ಒಂದು ಮನಸ್ಸನ್ನು ಹೊಕ್ಕು ಬೆಳೆದು ಫಲವನ್ನು ಕೊಡುತ್ತವೆ. ನಿಮ್ಮಂತಹ ನಾಲ್ಕು ಜನರಿಗೆ ನನ್ನ ಈ ಭಾವನೆಗಳು ಹಿಡಿಸಿರುವುದನ್ನು ಕಂಡು, ನನಗೆ ಸಮಾಧಾನವಾಗಿದೆ. ಅದು ಹಾಗೆಯೇ ಹರಡುತ್ತಾ ಹೋಗಬೇಕೆಂಬುದೇ ನನ್ನ ಬಯಕೆ."

"ನಿಮ್ಮ ವ್ಯಕ್ತಿತ್ವದ ಪ್ರಭಾಯುತವಾದ ಪೋಷಣೆಯಿಂದ ಅದು ವಿರಾಟ್ ರೂಪವಾಗಿ ಬೆಳೆಯುತ್ತದೆಂಬ ನಂಬಿಕೆ ನನಗಿದೆ." ಮಧುವಯ್ಯ ಹೇಳಿದ.

"ನಿಜ ಮಧುವಯ್ಯ" ಅಲ್ಲಮಪ್ರಭು ಮಧ್ಯದಲ್ಲಿ ಸೇರಿದ : "ಭಕ್ತಿವಾರಿಧಿಯ ಅಂತರಾಳದಿಂದ ಸಿಡಿದ ಅಪಾರವಾದ ಶಕ್ತಿ ಈ ಬಸವಣ್ಣ. ಈತನು ಕೈಗೊಂಡ ಕಾರ್ಯ ಮುಂದುವರಿಯಬೇಕು. ಅದಕ್ಕೆ ನಿಮ್ಮೆಲ್ಲರ ಸಹಾಯವೂ ಅಗತ್ಯ"

ಅಲ್ಲಮನಿಂದ ಈ ಹೊಗಳಿಕೆಯ ಮಾತನ್ನು ಕೇಳಿ ಬಸವಣ್ಣ ಸಂಕೋಚದಿಂದ ಕುಗ್ಗಿದ. ಅತ್ತ ತಿರುಗಿ ಹೇಳಿದ :

"ತಾವೂ ಹೀಗೆ ನನ್ನನ್ನು ಸಂಕೋಚಕ್ಕೆ ಗುರಿಮಾಡಬಹುದೇ ? ನಿಮ್ಮ ಕರುಣೆಯ ಕಂದನಾದ ನನಗೆ ನಿಮ್ಮ ಕೃಪೆಯಲ್ಲದೇ ಬೇರೆ ವ್ಯಕ್ತಿತ್ವವುಂಟೇ ?"

ಮಾಡುವಾತ ನಾನಲ್ಲಯ್ಯಾ ; ನೀಡುವಾತ ನಾನಲ್ಲಯ್ಯಾ ?
ಬೇಡುವಾತ ನಾನಲ್ಲಯ್ಯಾ, ನಿಮ್ಮ ಕಾರುಣ್ಯವಲ್ಲದೆ, ಎಲೆ ದೇವಾ ।
ಮನೆಯ ತೊತ್ತಲಸಿದರೆ ಒಡತಿ ಮಾಡಿಕೊಂಬಂತೆ
ನಿನಗೆ ನೀ ಮಾಡಿಕೋ ಕೂಡಸಂಗಮದೇವಾ.

"ಈ ಮನೆಯ ತೊತ್ತು ನಾನು, ಒಡೆಯ ನೀನು. ಈ ಶರಣರೆಲ್ಲದ ಮಧ್ಯದಲ್ಲಿ 'ಮಾವಿನಕಾಯೊಳಗೊಂದು ಎಕ್ಕೆಯ ಕಾಯಿ ನಾನು !' ಅವರು ನನ್ನ ಕೈ ಹಿಡಿದು ಉದ್ಧರಿಸುವವರು. ಈ ಭಾವವೇ ನನ್ನಲ್ಲಿ ಕೊನೆಯವರೆಗೆ ಉಳಿಯುವಂತೆ ಮಾಡು ಪ್ರಭುವೇ."

ಪ್ರಭು ಮಂದಹಾಸದ ದೃಷ್ಟಿಯನ್ನು ಬಸವನತ್ತ ಬೀರಿ ಹೇಳಿದ :

"ನಿನ್ನ ಈ ನಿರಂಹಕಾರದ ಸಹಜವಾದ ವಿನಯ ಸಾಧಕರಿಗೆ ಕೈದೇವಿಗೆಯಾಗಿರಲಿ. ಈ ವಿಷಯದಲ್ಲಿ ನಮ್ಮೆಲ್ಲರಿಗೂ ನೀನು ಗುರು ಬಸವಣ್ಣ :

ಅದ್ವೈತವ ನುಡಿದು ಅಹಂಕಾರಿಯಾದೆನಯ್ಯಾ
ಬ್ರಹ್ಮವ ನುಡಿದು ಭ್ರಮಿತನಾದೆನಯ್ಯಾ
ಶೂನ್ಯವ ನುಡಿದು ಸುಖದುಃಖಕ್ಕೆ ಗುರಿಯಾದೆನಯ್ಯಾ
ಗುಹೇಶ್ವರಾ, ನಿಮ್ಮ ಶರಣ ಸಂಗನ ಬಸವಣ್ಣನ
ಸಾನ್ನಿಧ್ಯದಿಂದಾನು ಸದ್ಭಕ್ತನಾದೆನಯ್ಯಾ.

ಪ್ರಭುವಿನ ಈ ವಚನವನ್ನು ಕೇಳಿ ಶರಣರೆಲ್ಲ ಬಸವಣ್ಣನನ್ನು ಕುರಿತು ಜಯ ಘೋಷ ಮಾಡಿದರು. ಬಸವಣ್ಣ ಭಕ್ತಿಯಿಂದ ಬಾಗಿ ಕುಳಿತ.

"ಇಂದು ಚೌಡಯ್ಯನವರಿಗೆ ನಾವು ಕೃತಜ್ಞತರಾಗಿರಬೇಕು. ಈ ಸಮಸ್ಯೆಯನ್ನೆತ್ತಿ ಅದರ ಮೇಲೆ ಬೆಳಕು ಬೀರುವಂತೆ ಮಾಡಿದವರು ಅವರು." ಮಧುವರಸ ಹೇಳಿದ.

"ನಿನ್ನ ಸಂಶಯಕ್ಕೆ ಉತ್ತರ ದೊರಕಿತೇ ಚೌಡಯ್ಯ ?" ಪ್ರಭು ಕೇಳಿದ.

"ನನಗೆ ಬೇಕಾದುದಕ್ಕಿಂತ ಹೆಚ್ಚಾಗಿ ದೊರಕಿತು ಪ್ರಭುವೇ."

ಶರಣೆಯರ ಸಮೂಹದಲ್ಲಿ ಕುಳಿತು ಇದನ್ನೆಲ್ಲಾ ನೋಡುತ್ತಿದ್ದ ಮಹಾದೇವಿ ರೋಮಾಂಚನಗೊಂಡಳು. ಇಹಪರಗಳೆರಡರ ಸಮನ್ವಯುವನ್ನು ರೂಪಿಸಿಕೊಳ್ಳುತ್ತಿರುವ ಸದ್ಗೋಷ್ಠಿ, ಅವಳಲ್ಲಿ ಅಪೂರ್ವ ಬೆಳವಣಿಗೆಯನ್ನುಂಟು ಮಾಡುತ್ತಿತ್ತು. ಅದನ್ನು ಕುರಿತು ತನ್ನಲ್ಲೇ ತಾನು ಹೀಗೆ ಹಾಡಿಕೊಂಡಳು :

ನೋಡಿ, ನುಡಿಸಿ ಮಾತನಾಡಿಸಿದೊಡೊಂದು ಸುಖ,
ಏನು ಮಾಡದಯ್ಯ ನಿಮ್ಮ ಶರಣರ ಅನುಭಾವ !
ಚೆನ್ನಮಲ್ಲಿಕಾರ್ಜುನಯ್ಯ
ನಿಮ್ಮ ಶರಣರ ಸದ್ಗೋಷ್ಠಿ ಏನಮಾಡದಯ್ಯ

"ಆಶೆಯಾಮಿಷಗಳು ಅಳಿದು, ಹುಸಿ ವಿಷಯಗಳೆಲ್ಲಾ ಹಿಂಗಿ, ಸಂಶಯ ಸಂಬಂಧ ವಿಸಂಬಂಧವಾಗುತ್ತದೆ, ಈ ಶರಣರ ಅನುಭಾವಗೋಷ್ಠಿಯಿಂದ" ಎಂದುಕೊಂಡಿದ್ದಳು.

ಅಂದು ನಡೆದ ಈ ಅನುಭವಮಂಟಪದ ದೃಶ್ಯವೆಲ್ಲಾ ಮಹಾದೇವಿಯ ಮನಸ್ಸಿನ ಮುಂದೆ ಸುಳಿಯತೊಡಗಿತ್ತು. ಅಷ್ಟರಲ್ಲಿ ಅಪ್ಪಣ್ಣ ಬಳಿಗೆ ಬಂದ :

"ಇದೇನು ತಾಯಿ ! ಏರುತ್ತಿರುವ ಬಿಸಿಲಿನಲ್ಲಿ ಕುಳಿತಿದ್ದೀರಿ ! ಪ್ರಭುದೇವರು ಅಲ್ಲಿ ತಮಗಾಗಿ ಚಂದಯ್ಯನನ್ನು, ಚೆನ್ನಬಸವಣ್ಣನನ್ನು ಕೇಳುತ್ತಿದ್ದರು." ಹೇಳಿದ ಅಪ್ಪಣ್ಣ.

"ಹೌದೇ ಅಪ್ಪಣ್ಣಾ ? ಪ್ರಭುದೇವರ ಪೂಜೆ ಇನ್ನೂ ಮುಗಿದಿಲ್ಲವೆಂದು ಇಲ್ಲಿ ಕುಳಿತಿದ್ದೆ. ಹೋಗುತ್ತೇನೆ ಅವರ ಬಳಿಗೆ" ಎನ್ನುತ್ತಾ ಮಹಾದೇವಿ ಮಹಡಿಯನ್ನು ಇಳಿಯತೊಡಗಿದಳು.

೨

ಮಹಾದೇವಿ ಅಲ್ಲಮನ ಕೊಠಡಿಯನ್ನು ಪ್ರವೇಶಿಸಿದಾಗ ಪ್ರಭುದೇವನೊಡನೆ ಬಸವಣ್ಣನೂ ಕುಳಿತಿರುವುದನ್ನು ಕಂಡಳು. "ಅರಮನೆಗೆ ಹೋಗಲಿಲ್ಲವೇ ಅಣ್ಣ?"

"ಇಲ್ಲ ಮಹಾದೇವಿ, ಇಂದು ಸ್ವಲ್ಪ ಬಿಡುವು, ಸಂಜೆಗೆ ಬಂದು ನೋಡುತ್ತೇನೆಂದು ಮಹಾರಾಜರಿಗೆ ಹೇಳಿಕಳುಹಿಸಿದ್ದೇನೆ." ಹೇಳಿದ ಬಸವಣ್ಣ.

"ಆ ಮಂಚಣ್ಣನೇನೂ ಮತ್ತೆ ಹಂಚಿಕೆ ಹಾಕುತ್ತಿಲ್ಲವಷ್ಟೇ ?" ನಗುತ್ತಾ ಕೇಳಿದಳು ಮಹಾದೇವಿ. ಅಣ್ಣನು ಅರಮನೆಯಲ್ಲಿ ಕೊಂಡೆಯ ಮಂಚಣ್ಣ ಮೊದಲಾಗಿ ಚಾಡಿಕೋರರಿಂದ ಎದುರಿಸಬೇಕಾಗಿರುವ ಸಮಸ್ಯೆಗಳ ವಿಷಯ ಅವಳಿಗೂ ಸ್ವಲ್ಪ ಮಟ್ಟಿಗೆ ತಿಳಿದಿತ್ತು.

"ಅಂತಹವರೂ ಇರಬೇಕು ಮಹಾದೇವಿ. ನಾವು ಸದಾ ಜಾಗೃತರಾಗಿದ್ದು ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಅಂತಹವರು ಅಗತ್ಯ... ಅದಿರಲಿ ಮಹಾದೇವಿ, ನಿನ್ನ ಸಾಧನೆಯ ನಿಲವನ್ನು ಪ್ರಭುದೇವರು ಹೇಳಿದರು. ಕಲ್ಯಾಣ ಧನ್ಯವಾಯಿತು ತಾಯಿ, ನಿನ್ನಿಂದ" ಮೆಚ್ಚಿ ಉದ್ಗರಿಸಿದ ಬಸವಣ್ಣ.

"ನೀವು ಅಂತಹ ಮಾತನ್ನು ಹೇಳಬಾರದು ಅಣ್ಣಾ" ಎನ್ನುತ್ತಾ ಮಹಾದೇವಿ ಪ್ರಭುದೇವರ ಕಡೆ ನೋಡಿದಳು.

ಮಹಾದೇವಿಯ ಮಧುರಭಕ್ತಿ ಬಸವಣ್ಣನಂತೆಯೇ ಗುರುಲಿಂಗ ಜಂಗಮ ದಾಸೋಹದ ಮಾರ್ಗದಲ್ಲಿಯೇ ಮುಂದುವರೆಯುತ್ತಿತ್ತು. ಅತಿ ವೇಗವಾಗಿ ಊರ್ಧ್ವಮುಖಗಮನದಿಂದ ಮೇಲೇರುತ್ತಿತ್ತು.

ಪ್ರಭುವಿನ ರಕ್ಷಣೆಯಿಂದ ಯೋಗಮಾರ್ಗದಲ್ಲಿಯೂ ಮುನ್ನಡೆಯುತ್ತಿದ್ದಳು. ಅವಳಲ್ಲಿರುವ ಅದ್ಭುತವಾದ ಶಕ್ತಿಯನ್ನು ಕಂಡು ಪ್ರಭುದೇವ ಅದಕ್ಕನುಗುಣವಾದ ಮಟ್ಟದಲ್ಲಿ ಶಿವಯೋಗದ ರಹಸ್ಯವನ್ನು ತಿಳಿಸಿಕೊಡುತ್ತಿದ್ದ. ಸತಿಪತಿಭಾವದ ಅವಳ ಮಧುರಭಕ್ತಿ ಪ್ರಾಣಲಿಂಗಸ್ಥಲದ ಅನುಭಾವದೊಡನೆ ಸಮನ್ವಿತವಾಗಿ

ಸಾಗರೋಪಮವಾಗಿ ಬೆಳೆಯುತ್ತಿತ್ತು.

ತಾನು ಏರಿಬಂದ ಯೋಗಮಾರ್ಗದ ರಹಸ್ಯಗಳನ್ನೆಲ್ಲಾ ಮಹಾದೇವಿಗೆ ವಿವರಿಸುವನು ಪ್ರಭುದೇವ. ಸಾಮಾನ್ಯ ಹೆಣ್ಣು ದೇಹಕ್ಕೆ ಅಸಾಧ್ಯವಾದ ಅವಳ ಯೌಗಿಕ ಶಕ್ತಿಯನ್ನು ಕಂಡು ಆಶ್ಚರ್ಯಗೊಳ್ಳುವನು.

ರಾಜಯೋಗದ ಮಾರ್ಗವನ್ನೂ, ಕುಂಡಲಿನೀಶಕ್ತಿಯ ರಹಸ್ಯವನ್ನೂ ಇಷ್ಟಲಿಂಗದ ದೃಷ್ಟಿಯಿಂದ ಶಿವಯೋಗ ಅದನ್ನು ಅಳವಡಿಸಿಕೊಂಡಿರುವ ರೀತಿಯನ್ನೂ ಒಮ್ಮೆ ತಿಳಿಸಿ ಹೇಳಿದ. ಅದು ಮಹಾದೇವಿಯ ಮನಸ್ಸನ್ನು ನಾಟಿತ್ತು. ಒಂದೆರಡು ದಿನಗಳಲ್ಲಿಯೇ ಅದು ಅವಳ ಅನುಭವಸಂಪತ್ತಾಗಿ ಪರಿಣಮಿಸಿತು.

ಒಂದು ರಾತ್ರಿ ಪೂಜೆಯಲ್ಲಿ ನಿರತಳಾದ ತನಗೆ ಆದ ಅನುಭವಗಳನ್ನು ಕೆಲವು ತ್ರಿಪದಿಗಳ ರೂಪದಲ್ಲಿ ಬರೆದು ತಂದು, ಪ್ರಭುದೇವನ ಎದುರಿನಲ್ಲಿ ಓದಿದ್ದಳು :

ಕುಂಡಲಿಯ ಸರ್ಪನಾ, ತುಂಡ ಮೇಲಕೆ ತೆಗೆಯೆ,
ಮಂಡಲವು ಮೂರು ಬೆಳಗಾಗಿ ಉರಿಯುವ –
ಖಂಡಜ್ಯೋತಿಯೊಳು ಬಯಲಾದೆ
ಮೊರೆವ ನಾದವ ಕೇಳಿ, ಉರಿಯ ಜ್ಯೋತಿಯ ನೋಡಿ,
ಸುರಿವ ಅಮೃತವನು ಸವಿದುಂಡು ಕಾರಣದಿ
ತೊರೆದಿಹೆನು ಜನನಮರಣಗಳ
ಒಂಬತ್ತು ವೆಜ್ಜದಾ, ಇಂಬುಗಳ ಬಲಿವುತ್ತ
ತುಂಬಿ ಸುಷುಮ್ನೆಯೊಳು ಘನವ ನೋಡಲ್ಕೆ
ಕುಂಭದೊಳಮೃತ ಸುರಿಯುವುದು

ಅವಳ ಈ ಯೌಗಿಕ ಅನುಭವವನ್ನು ಕೇಳುತ್ತಾ ಪ್ರಭು ಬೆರಗಾಗಿದ್ದನು. ಇನ್ನೂ ಮುಂದಿನ ಹೆಜ್ಜೆಯನ್ನು ಅವಳಿಗೆ ಸೂಚಿಸಿದ್ದನು. ಇಂದು ಅವಳನ್ನು ಹೇಳಿಕಳುಹಿಸಿದುದರ ಉದ್ದೇಶವಾದರೂ ಅದೇ.

ಅಲ್ಲಮಪ್ರಭುದೇವನಿಗೆ ಇಂದು ಅನಿರೀಕ್ಷಿತವಾದ ಸೂಚನೆಯೊಂದು ಬಂದಿತ್ತು. ಎಂದಿನಂತೆ ಪ್ರಭುದೇವ ಪೂಜೆಯಲ್ಲಿ ತಲ್ಲೀನನಾಗಿದ್ದನು. ಅತ್ತ ಇತ್ತ ಹರಿವ ಮನವ ಬಚ್ಚಬೆಳಗಿನ ಲಿಂಗದಲ್ಲಿ ಲೀನಗೊಳಿಸಿ ಸಮರಸಭಾವದ ಆನಂದದ ನಿಬ್ಬೆರಗಿನಲ್ಲಿ ನಿಲುಗಡೆ ಹೊಂದಿದ್ದನು. ಇದ್ದಕ್ಕಿದ್ದಂತೆಯೇ ಅಲ್ಲಿ ಮೂಡಿತ್ತು ಶ್ರೀಶೈಲ ಪರ್ವತ ಮತ್ತು ಅದರ ಹೃದಯಗರ್ಭದೊಳಗಿರುವ ಕದಳಿಯ ಗುಹೆ!

ಹಿಂದೊಮ್ಮೆ ಪ್ರಭುದೇವ ಸಂಚಾರವನ್ನು ಕೈಗೊಂಡು ಸಾಧಕರನ್ನು ಉದ್ಧರಿಸುತ್ತಾ ನಡೆದಿರುವಾಗ ಶ್ರೀಶೈಲದಲ್ಲಿ ಕೆಲವು ದಿನ ಇದ್ದ. ಅಲ್ಲಿಂದ ಕದಳಿಯವನಕ್ಕೂ ಹೋಗಿದ್ದ. ಆದರೆ ಇಂದು ಇದ್ದಕ್ಕಿದ್ದಂತೆಯೇ ಅದು ಮತ್ತೇಕೆ ತನ್ನ ಮುಂದೆ ಮೂಡಿ ಬರುತ್ತಿದೆಯೆಂದು ಆಶ್ಚರ್ಯವಾಯಿತು.

ಮತ್ತೆ ನೋಡಿದ ಇದೇನಿದು ! ಕದಳಿ ವನದ ಗುಹೆಯಲ್ಲಿ ಮಹಾದೇವಿ! ಮಲ್ಲಿಕಾರ್ಜುನನ ಜ್ಯೋತಿರ್ಲಿಂಗದ ತೇಜಸ್ಸು ಮೂಡಿ ಗುಹೆಯನ್ನೆಲ್ಲಾ ವ್ಯಾಪಿಸುತ್ತಿದೆ. ಮಹಾದೇವಿ ಅದನ್ನು ಅಪ್ಪಿಕೊಂಡಳು. ಅದರಲ್ಲಿ ಲೀನವಾಗಿ ಬಯಲಾದಳು.

ಪ್ರಭುದೇವನಿಗೆ ಅರ್ಥವಾಯಿತು. ಮಲ್ಲಿಕಾರ್ಜುನನ ಮೀಸಲು ಹೆಣ್ಣು ಮಹಾದೇವಿ, ಕದಳಿಯ ವನದಲ್ಲಿ ಆತನೊಡನೆ ಸಮರಸವಾಗಬೇಕೆಂಬುದು ಆತನ ಸಂಕಲ್ಪವಾದರೆ, ಅದಕ್ಕೆ ಸಹಾಯಕವಾಗುವುದು ತನ್ನ ಕರ್ತವ್ಯವೆಂದು ಭಾವಿಸಿದ ಪ್ರಭುದೇವ.

ಇದನ್ನು ಕುರಿತೇ ಬಸವಣ್ಣನೊಡನೆ ಮಾತನಾಡುತ್ತಿದ್ದ. ಅಷ್ಟರಲ್ಲಿ ಬಂದಿದ್ದಳು ಮಹಾದೇವಿ. "ಮಹಾದೇವಿ, ಬಸವಣ್ಣ ಹೇಳಿದಂತೆ ನಿನ್ನ ಸಾಧನೆ ನಮಗೆಲ್ಲಾ ತೃಪ್ತಿಯನ್ನುಂಟುಮಾಡಿದೆ." ಹೇಳಿದ ಪ್ರಭುದೇವ.

"ಆದರೆ ಪ್ರಭುವೇ... ನಿಜ ಹೇಳಬೇಕೆಂದರೆ ನನಗೇ ಸಂಪೂರ್ಣ ತೃಪ್ತಿ ಲಭಿಸಿಲ್ಲ." ಅನುಮಾನಿಸುತ್ತಾ ಹೇಳಿದಳು.

"ಅದು ಸಹಜ ತಾಯಿ. ಪದರಪದರಗಳನ್ನೇರಿ ಶ್ರೀಗಿರಿಯ ತುಟ್ಟತುದಿಯನ್ನು ಮುಟ್ಟಬೇಕೆಂದು ಬಯಸುವ ಚೇತನ, ಒಂದು ಪರ್ವತದ ತುದಿಯನ್ನು ಏರುವುದರಿಂದ ತೃಪ್ತವಾಗಲಾರದು. ಆದರೆ ಒಂದೊಂದಾಗಿ ದಾಟಿ ಶ್ರೀಗಿರಿಯ ಚನ್ನಮಲ್ಲಿಕಾರ್ಜುನನನ್ನು ಕಾಣಬೇಕಾಗುತ್ತದೆ."

ಈ ಮಾತಿನಿಂದ ಮಹಾದೇವಿ ರೋಮಾಂಚನಗೊಂಡಳು. ಗುರುಲಿಂಗರಿಂದ ಕೇಳಿದ ಶ್ರೀಶೈಲದ ವರ್ಣನೆಯ ಚಿತ್ರ ಅಸ್ಪಷ್ಟವಾಗಿ ಕಣ್ಣುಮುಂದೆ ಸುಳಿಯಿತು. ತನ್ನ ಎಳೆಯ ವಯಸ್ಸಿನಿಂದಲೂ ಮನಸ್ಸಿನಲ್ಲಿ ಆಳವಾಗಿ ಬೇರೂರಿದ ಶ್ರೀಶೈಲದ ಚಿತ್ರ ಮತ್ತು ಕದಳಿಯ ಕಲ್ಪನೆ ಜಾಗ್ರತವಾಯಿತು.

ಇವುಗಳ ಜೊತಯಲ್ಲಿಯೇ ಸುಳಿಯುತ್ತಿದ್ದ ಕಲ್ಯಾಣದ ಕನಸು ಇಂದು ನನಸಾಗಿದೆ. ಇನ್ನು ಅವುಗಳನ್ನು ನನಸು ಮಾಡಿಕೊಡುವುದರ ಮುನ್ಸೂಚನೆಯನ್ನು ಪ್ರಭುದೇವ ನುಡಿಯುತ್ತಿರುವನೇನೋ ಎಂಬ ಭಾವನೆ ಸುಳಿಯಿತು ಮಹಾದೇವಿಗೆ.

"ಶ್ರೀಗಿರಿಯ ಆಚೆ ಮಲ್ಲಿಕಾರ್ಜುನನನ್ನು ದಾಟಿಕೊಂಡು ಹೋದರೆ ಅಲ್ಲಿ ಕದಳಿಯ ವನವಿದೆಯೆಂದು ಹೇಳುತ್ತಾರೆ. ತಾವು ಶ್ರೀಶೈಲಕ್ಕೆ ಹೋದಾಗ ಅದನ್ನು...."

ಮಹಾದೇವಿ ಕೇಳಲು ಅನುಮಾನಿಸುತ್ತಿದ್ದಳು. ಆದರೆ ಅವಳ ಮಾತಿನ ಅರ್ಥವನ್ನು ಅರಿತು ಪ್ರಭುದೇವ ಮಧ್ಯದಲ್ಲಿಯೇ ಹೇಳತೊಡಗಿದ :

"ಹೌದು ಮಹಾದೇವಿ, ಆ ಕದಳಿಯ ವನಕ್ಕೆ ನಾನು ಹೋಗಿದ್ದೆ. ಅಲ್ಲಿ ಕೆಲವು ದಿನಗಳು ಇದ್ದೆ."

ಅದನ್ನು ಕೇಳುತ್ತಿದ್ದಂತೆಯೇ ಮಹಾದೇವಿ ಅತ್ಯುತ್ಸಾಹ ಸಂಭ್ರಮದಿಂದ ಪ್ರಶ್ನಿಸಿದಳು :

"ಹೌದೇ ? ತಾವು ಅಲ್ಲಿಗೆ ಹೋಗಿದ್ದಿರಾ ? ಅಲ್ಲಿ ಏನಿದೆ ಗುರುಗಳೇ?"

'ಕದಳಿ' ಎಂದ ಕೂಡಲೇ ಉಕ್ಕೇರಿದ ಮಹಾದೇವಿಯ ಮನಸ್ಸನ್ನು ಕಂಡ ಪ್ರಭುದೇವ ತನ್ನ ಅಭಿಪ್ರಾಯಗಳನ್ನು ದೃಢಪಡಿಸಿಕೊಂಡ. ಅವಳ ಮನಸ್ಸಿನ ಆಕಾಂಕ್ಷೆಯೇ, ಮಲ್ಲಿಕಾರ್ಜುನನ ಸಂಕಲ್ಪದೊಡನೆ ಸೇರಿ ತನ್ನ ಮನಸ್ಸಿನಲ್ಲಿ ಇಂದು ಮಾರ್ಪೊಳೆದು ತೋರಿರಬೇಕೆಂದು ಭಾವಿಸಿದ.

"ಆತುರಗೊಳ್ಳಬೇಡ ಮಹಾದೇವಿ, ಮೊದಲು ಅಂತರಂಗದ ಗರ್ಭಗೃಹವನ್ನು ಪ್ರವೇಶಿಸಿ ಅಲ್ಲಿ ಚನ್ನಮಲ್ಲಿಕಾರ್ಜುನನನ್ನು ಕಂಡುಕೊಳ್ಳಬೇಕು. ದೇಹವೆಂಬ ಶ್ರೀಗಿರಿಯ ಗಹ್ವರದಲ್ಲಿರುವ ಕದಳಿಯನ್ನು ಅವನನ್ನು ಸೇರಿದರೆ, ಬಹಿರಂಗದ 'ಕದಳಿ'ಯ ರಹಸ್ಯ ತಾನಾಗಿಯೇ ತಿಳಿಯುತ್ತದೆ."

"ನಿಜ ಪ್ರಭುವೇ, ತಮ್ಮ ಆಶೀರ್ವಾದದಿಂದ ಮತ್ತು ಈ ಅಣ್ಣನ ಕರುಣೆಯಿಂದ, ಅದನ್ನು ಕಂಡುಕೊಳ್ಳುವ ಮಾರ್ಗದಲ್ಲಿ ನಾನು ನಡೆಯುತ್ತಿದ್ದೇನೆ" ಬಸವಣ್ಣನತ್ತ ನೋಡುತ್ತಾ ಹೇಳಿದಳು.

"ನಿನ್ನ ಭಕ್ತಿಯ ಶಕ್ತಿಯೇ ನಿನ್ನನ್ನು ಅತ್ತ ಕೊಂಡೊಯ್ಯುತ್ತಿದೆ ಮಹಾದೇವಿ. ಇಂತಹ ಶಕ್ತಿಯನ್ನು ಪಡೆಯುವ ಭಾಗ್ಯ ಕಲ್ಯಾಣಕ್ಕೆ ಬಂದುದು ನಮ್ಮ ಪುಣ್ಯ."

ಮೆಚ್ಚಿ ನುಡಿದ ಬಸವಣ್ಣ.

"ಹಾಗೆ ಹೇಳುವುದು ನಿಮ್ಮ ಹಿರಿಯ ಗುಣ. ಆದರೆ :

ನಿನ್ನ ಅಂಗದ ಆಚಾರವ ಕಂಡು ಎನಗೆ ಲಿಂಗಸಂಗವಾಯಿತ್ತು
ಅಯ್ಯಾ ಬಸವಣ್ಣ : ನಿನ್ನ ಮನದ ಸುಜ್ಞಾನವ ಕಂಡು
ಎನಗೆ ಜಂಗಮ ಸಂಬಂಧವಾಯಿತಯ್ಯ
ಬಸವಣ್ಣಾ ! ಚೆನ್ನಮಲ್ಲಿಕಾರ್ಜುನನ ಹೆಸರಿಟ್ಟ ಗುರು
ನೀವಾದ ಕಾರಣ ನಾನೆಂಬುದಿಲ್ಲವಯ್ಯಾ.

“ಇದು ಔಪಚಾರಿಕವಲ್ಲ. ಇದರ ಒಂದೊಂದು ಮಾತೂ ಸತ್ಯ, ತಂದೆ.”

“ಹೌದು, ತಾಯಿ ಮಹಾದೇವಿ. ಬಸವಣ್ಣನ ಭಕ್ತಿಯ ಫಲವನ್ನು ಚನ್ನಾಗಿ ಹೇಳಿದ್ದೀಯ.” ಮೆಚ್ಚಿ ನುಡಿದ ಪ್ರಭುದೇವ.

“ಅಣ್ಣನು ತೋರಿದ ಅರಿವೇ ಮೂರ್ತಿಮತ್ತಾದ ಜಂಗಮರೂಪು ನೀವು ಪ್ರಭುವೇ. ನಿಮ್ಮ ಶ್ರೀಪಾದಕ್ಕೆ ಶರಣೆಂದು ಎನ್ನ ಅರಿವು ಸ್ವಯವಾಗುವಂತೆ ಮಾಡಿ ಉದ್ಧರಿಸಿರಿ.” ಹೇಳಿದಳು ಮಹಾದೇವಿ.

ಈ ವೇಳೆಗೆ ಚನ್ನಬಸವಣ್ಣ ಬಂದು, ಬಿಜ್ಜಳ ರಾಜನಿಂದ ಬಸವಣ್ಣನಿಗೆ ಕರೆ ಬಂದಿರುವುದನ್ನು ತಿಳಿಸಿದ. ಪ್ರಭುವಿನ ಅಪ್ಪಣೆ ಪಡೆದು ಹೊರಟ ಬಸವಣ್ಣ. ಚನ್ನಬಸವಣ್ಣ ಅವನನ್ನು ಹಿಂಬಾಲಿಸಿದ.

“ಈ ಅಣ್ಣನ ಸಂಸಾರ ಬಹಳ ದೊಡ್ಡದು ಮಹಾದೇವಿ. ಬಹಳ ದೊಡ್ಡ ಆದರ್ಶವನ್ನು ಕಂಡು, ಅದನ್ನು ನನಸಾಗಿ ಮಾಡುವ ಸಾಹಸ ಆತನದು." ಬಸವಣ್ಣ ಹೋದತ್ತ ನೋಡುತ್ತಾ ಹೇಳಿದ ಪ್ರಭುದೇವ.

“ಹೌದು ಪ್ರಭುವೇ. ಇಡೀ ಮಾನವ ಸಮಾಜವನ್ನೇ ಉದ್ಧರಿಸಲು ಬದ್ಧ ಕಂಕಣರಾಗಿದ್ದಾರೆ ಅಣ್ಣನವರು.” ಮಹಾದೇವಿ ದನಿಗೂಡಿಸಿದಳು.

“ನಿಜ. ಆದರೆ ಸಮಾಜ ಅಷ್ಟು ಸರಳವಾಗಿಲ್ಲ. ಈತನ ಪ್ರಯೋಗಗಳ ಫಲವನ್ನು ಅದು ಹೇಗೆ ಸ್ವೀಕರಿಸುತ್ತದೆಯೋ ಕಾದು ನೋಡಬೇಕು.”

ಕ್ಷಣಕಾಲ ಮೌನವಾವರಿಸಿತು. ಅಣ್ಣನ ವ್ಯಕ್ತಿತ್ವವೇ ಅಲ್ಲಿ ಸಂಚಾರವಾಗುತ್ತಿರುವಂತೆ ತೋರುತ್ತಿತ್ತು. ಸ್ವಲ್ಪ ಕಾಲದ ಅನಂತರ ಮಹಾದೇವಿ ಕೇಳಿದಳು :

“ಅಂತರಂಗದ ಕದಳಿ, ಬಹಿರಂಗದ ಕದಳಿ ಎಂದಿರಿ. ಇವುಗಳ ಮರ್ಮವನ್ನು ವಿವರಿಸಬೇಕು ಗುರುದೇವಾ.”

ಅವಳ ಮನಸ್ಸು ಓಡುತ್ತಿರುವ ದಿಕ್ಕನ್ನು ಈ ಪ್ರಶ್ನೆಯಿಂದಲೇ ತಿಳಿದುಕೊಂಡ ಅಲ್ಲಮಪ್ರಭು.

“ಶ್ರೀಶೈಲದಲ್ಲಿರುವ ಕದಳಿಯ ವನ, ಅತ್ಯಾಶ್ಚರ್ಯಕರವಾದ ಸನ್ನಿವೇಶ ಮಹಾದೇವಿ.”

“ಅಲ್ಲಿಗೆ ಹೋದ ತಮ್ಮ ಅನುಭವಗಳನ್ನು ನಿರೂಪಿಸಬೇಕೆಂದು ಪ್ರಾರ್ಥಿಸುತ್ತೇನೆ.”

“ಆ ಅನುಭವಗಳ ವರ್ಣನೆ ಇಂದು ಬೇಡ. ಇನ್ನೊಂದು ದಿನ ವಿವರವಾಗಿ ಹೇಳುತ್ತೇನೆ. ಇಂದು ಇಷ್ಟು ಹೇಳುತ್ತೇನೆ ಕೇಳು : ದೇಹದಲ್ಲಿ ಅಡಗಿರುವ

ಹೃದಯ ಗಹ್ವರದಂತೆ, ಶ್ರೀಶೈಲಪರ್ವತಗಳ ಸಾಲುಕಣಿವೆಯಲ್ಲಿ ಒಂದು ಗುಹೆ ಅಡಗಿದೆ. ಅದು ಸಾಧನೆಗೆ ತುಂಬಾ ಪ್ರಶಸ್ತವಾದ ಪ್ರಶಾಂತವಾದ ವಾತಾವರಣ. ಆ ಗುಹೆಯ ಮುಂಭಾಗದಲ್ಲಿ ಅಲ್ಲಲ್ಲಿ ಜಿನುಗುತ್ತಿರುವ ರಸದ ಒರತೆಯಿಂದ ಜೀವರಸವನ್ನು ಹೀರಿಕೊಂಡು ಅನೇಕ ಬಾಳೆಯಗಿಡಗಳು, ಸಾಧಕನ ಆತ್ಮರಕ್ಷಣೆಗೆ ನಿಂತ ಸತ್ವಶಕ್ತಿಗಳಂತೆ ಕಂಗೊಳಿಸುತ್ತಿವೆ. ಅದಾವ ಕಾಲದಿಂದ ಅಲ್ಲಿ ಬಾಳೆಗಳು ಬಂದು ನೆಲೆಗೊಂಡವೋ ; ಅಂತೂ ಅವುಗಳ ಸಂತಾನ ಅಲ್ಲಿ ಚಿರಂತನವಾಗಿದೆ. ಬಾಳನ್ನರಳಿಸುವಂತೆ ಬೆಳೆದು ನಿಂತಿರುವ ಆ ಕದಳಿಗಳಿಂದ ನಮ್ಮ ದೇಹಕದಳಿಯು ಬೆಳೆದು, ಆತ್ಮಕದಳಿಯ ಅಮರಸಂದೇಶವನ್ನು ಪಡೆಯುತ್ತದೆ."

ಕದಳಿಯಲ್ಲಿಯೇ ಇದ್ದಂತಾಗಿ ಪ್ರಭುದೇವ ತಲ್ಲೀನತೆಯಿಂದ ಕಣ್ಣುಮುಚ್ಚಿದ. ಕ್ಷಣಕಾಲ ಮೌನವಾವರಿಸಿತು. ಮತ್ತೆ ನಿಧಾನವಾಗಿ ಕಣ್ತೆರೆದು ಹೇಳತೊಡಗಿದ :

"ನಾವಲ್ಲಿಗೆ ಹೋದುದು ಸಾಧನೆಯ ಅನುಷ್ಠಾನಕ್ಕಾಗಿಯಲ್ಲ ; ಸಿದ್ಧಿಯ ಅನುಸಂಧಾನಕ್ಕಾಗಿ ಕೆಲವು ದಿನಗಳನ್ನು ಅಲ್ಲಿ ಕಳೆದೆ. ಅಲ್ಲಿನ ಆದಿವಾಸಿಗಳಾದ ಚುಂಚರು ಹತ್ತಿರದಲ್ಲಿಯೇ ಕೆಲವು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಪಾಪ! ಭಯಭರಿತ ವಿಶ್ವಾಸದಿಂದ ನನ್ನನ್ನು ಉಪಚರಿಸಿದರು. ನಾನಲ್ಲಿಯೇ ಇದ್ದು ಬಿಡುತ್ತಿದ್ದೆನೋ ಏನೋ ! ಆದರೆ ಬಸವಣ್ಣನ ಭಕ್ತಿಯ ಕರೆ ನನ್ನ ಹೃದಯದಲ್ಲಿ ಮೊರೆಯತೊಡಗಿತು. ನನ್ನ ಸಿದ್ಧಿಯ ಸಾರ್ಥಕತೆಯನ್ನು ಇಲ್ಲಿ ಪಡೆಯಬೇಕೆಂದು ಇತ್ತ ಬಂದೆ."

"ನಾನೂ ಅಲ್ಲಿಗೆ ಹೋಗಬೇಕೆಂಬ ಬಯಕೆ ಉಕ್ಕಿಬರುತ್ತಿದೆ ಗುರುಗಳೇ. ಅದೇಕೋ ಶ್ರೀಶೈಲವೆಂದಕೂಡಲೇ ನನ್ನ ಹೃದಯದ ತಂತಿಯನ್ನು ಯಾರೋ ಮೀಟಿದಂತಾಗುತ್ತದೆ. ಅದರಲ್ಲಿಯೂ ಆ ಕದಳಿ ! ಅದು ನನಗೆ ಚನ್ನಮಲ್ಲಿಕಾರ್ಜುನನ ಹೃದಯಮಂದಿರದಂತೆ ಭಾಸವಾಗುತ್ತದೆ." ಮಹಾದೇವಿ ತನ್ನ ಉತ್ಕಟ ಬಯಕೆಯನ್ನು ಅಡಗಿಸಿಕೊಳ್ಳಲಾರದೇ ಹೇಳಿದಳು :

ಪ್ರಭುದೇವನ ನಿರೀಕ್ಷೆ ನಿರ್ಧಾರವಾದಂತಾಗಿ ಹೇಳಿದ :

"ಅದು ನಿನ್ನ ಎಳೆಯತನದಲ್ಲಿ ಲಭಿಸಿದ ಸಂಸ್ಕಾರದ ಫಲವಿರಬಹುದು. ನಿನ್ನ ಬಯಕೆಯೇ ನನ್ನ ಚಿತ್ತದಲ್ಲಿ ಇಂದು ಬಿತ್ತರಿಸಿ ತೋರಿತು. ಹೋಗು, ಮಹಾದೇವಿ. ನಿನ್ನ ಪತಿ ಚನ್ನಮಲ್ಲಿಕಾರ್ಜುನನ ಹೃದಯಕಮಲದ ಕದಳಿಯಲ್ಲಿ ಸಮರ ಸುಖವನ್ನು ಪಡೆ. ಕದಳಿಯ ಕರ್ಪುರವಾಗಿ ಆತ್ಮದಾರತಿಯನ್ನು ಅರ್ಪಿಸು. ಆದರೆ ಹೋಗುವ ಮುನ್ನ ಅಂತರಂಗದ ಕದಳಿಯಲ್ಲಿ ಅರುಹಿನ ಕುರುಹನ್ನು ಕಾಣು :

ಕಾಯವೆಂಬ ಕದಳಿಯ ಹೊಕ್ಕು
ಪ್ರಾಣವೆಂಬ ಗಹ್ವರದೊಳಗೆ,
ಸಕಲೇಂದ್ರಿಯವೆಂಬ ಕೋಣೆಕೋಣೆಗಳಲ್ಲಿ,
ತಿರುಗಾಡುತ್ತಾ ಬರಲಾಗಿ,
ಮೇರು ಮಂದಿರದ ತ್ರಿಕೋಣೆಯಲ್ಲಿ ಬೆಳಗಾಯಿತ್ತು ;
ಗುಹೇಶ್ವರ ಲಿಂಗವೆಂಬೊಂದು ರೂಪಾಯಿತ್ತು

ಎಂದು ನಾನು ಹೇಳಿರುವ ವಚನದ ಅರ್ಥವನ್ನು ಮಥಿಸಿ, ಅದನ್ನು ಅನುಭವಕ್ಕೆ ತಂದುಕೋ."

"ಅದು ತಮ್ಮ ಅನುಗ್ರಹದಿಂದಲೇ ಆಗಬೇಕು."

"ಅದು ಆಗಲೇ ನಿನ್ನಲ್ಲಿ ರೂಪುಗೊಂಡು ಅವತರಿಸುತ್ತಿದೆ, ತಾಯಿ. ನಿನ್ನ ಕೈಯಲ್ಲಿರುವ ಇಷ್ಟಲಿಂಗದಲ್ಲಿಯೇ ನಿನ್ನ ಪತಿಯ ಸಮರಸ ಸ್ವರೂಪವನ್ನು ಕಂಡು ನಿನ್ನ ಸತೀಭಾವವನ್ನು ಅಲ್ಲಿ ನಿವೇದಿಸು. ಆಗ ಸತಿಪತಿಭಾವವೂ ಅಳಿದು ಉಭಯವೂ ಏಕವಾಗಿ ನಿಂದ ನಿಲವನ್ನು ಕಂಡುಕೊಳ್ಳುತ್ತೀಯ.

ಮನದ ಕೊನೆಯ ಮೊನೆಯ ಮೇಲೆ ನೆನೆದ ನೆನಹು,
ಜನನ ಮರಣವ ನಿಲಿಸಿ ;
ಜ್ಞಾನಜ್ಯೋತಿಯ ಉದಯ, ಭಾನುಕೋಟಿಯ ಮೀರಿ,
ಸ್ವಾನುಭಾವದ ಉದಯ, ಜ್ಞಾನಶೂನ್ಯದಲ್ಲಡಗಿದ
ಘನವನೇನೆಂಬೆ ಗುಹೇಶ್ವರಾ

ಮನದ ಕೊನೆಯ ನೆನಹಿನಿಂದ ಜನನ ಮರಣಗಳು ಅಳಿಯುತ್ತವೆ. ಮಹಾಜ್ಞಾನ ಉದಯವಾಗುತ್ತದೆ. 'ಜ್ಞಾನವೂ ಶೂನ್ಯವಾದ' ಆ ಘನದಲ್ಲಿ ಕೂಡಿ ತಾನೇ ತಾನಾಗಿರುತ್ತದೆ.

ಬೆಳಕು ಕತ್ತಲೆಯ ನುಂಗಿ, ಒಳಗೆ ತಾನೊಬ್ಬನೇಯಾಗಿ,
ಕಾಂಬ ಕತ್ತಲೆಯ ಕಳೆದುಳಿದು
ನಿಮಗೆ ನಾನು ಗುರಿಯಾದೆ ಗುಹೇಶ್ವರಾ

ಎನ್ನುವಂತೆ ಕಾಯದ ಕತ್ತಲೆಯ ಕಳೆದುಕೊಂಡಾಗ, ಬಚ್ಚಬರಿಯ ಬೆಳಗು ಅಲ್ಲಿ ಮೂಡುತ್ತದೆ. ಮತ್ತೊಂದರ ಹಂಗಿಲ್ಲದ ಅವನಿಗೆ ನೀನು ಗುರಿಯಾಗಿ ಹೋಗುತ್ತೀಯ. ಉರಿಯ ಪರ್ವತವನ್ನು ಅರಗಿನ ಬಾಣದಿಂದ ಎಚ್ಚಂತೆ ಆಗುತ್ತದೆ. ಕರ್ಪುರದ ಗಿರಿಯನ್ನು ಉರಿಕೊಂಡಂತೆ ಆಗುತ್ತದೆ.

ಸ್ವಸ್ಥಾನ ಸುಸ್ಥಿರದ ಸುಮನ ಮಂಟಪದೊಳಗೆ,
ನಿತ್ಯನಿರಂಜನ ಪ್ರಭೆಯ ಬೆಳಗು ;
ಶಿವಯೋಗದನುಭಾವ ಏಕಾರ್ಥವಾಗಿ
ಗುಹೇಶ್ವರಾ, ನಿಮ್ಮ ಶರಣನು ಅನುಪಮ ಸುಖಿಯಾಗಿರ್ದನು

ಈ ಅನುಪಮ ಆನಂದದ ಸುಖ, ದೇಹವೆಂಬ ಶ್ರೀಗಿರಿಯನ್ನೇರಿ, ಹೃದಯ ಕದಳಿಯ ಗರ್ಭದಲ್ಲಿ ನಿಂತು ಪಡೆಯುವ ಫಲ. ಅದನ್ನು ಮೊದಲು ಸಾಧಿಸು ಮಹಾದೇವಿ. ಈ ಸಾಹಸದ ಸಾಧನೆಯ ಸಂಕೇತವಾಗಿ ಅನಂತರ ಬೇಕಾದರೆ ಶ್ರೀಶೈಲದ ಕದಳಿಗೂ ಹೋಗು."

ಪ್ರಭುದೇವನ ಒಂದೊಂದು ಮಾತೂ ಮಹಾದೇವಿಯ ಕೊನೆಯ ಗುರಿಯುನ್ನು ಗುರುತಿಸಿ ಕರೆತರುವ ಮಾಂತ್ರಿಕ ವಾಣಿಯಂತಿತ್ತು. ಮಂತ್ರಮುಗ್ಧಳಾದವಳಂತೆ ಮಹಾದೇವಿ ಕೇಳುತ್ತಿದ್ದಳು. ಮಾತು ಮುಗಿದರೂ ಅದರ ಪ್ರಭಾವ, ಮಾತಿಗೆ ಮೀರಿದ ಭವ್ಯದರ್ಶನವನ್ನು ಅವಳ ಕಣ್ಣ ಮುಂದೆ ತಂದು ನಿಲ್ಲಿಸಿತ್ತು ; ಮಾತನ್ನು ಮೌನವಾಗಿಸಿತ್ತು. ಕೊನೆಯಲ್ಲಿ ಕೇಳಿದಳು:

"ನೀವು ಹೇಳಿದಂತೆ ಸ್ವಸ್ಥಾನಸುಸ್ಥಿರದ ಸುಮನಮಂಟಪದೊಳಗೆ ನಿತ್ಯ ನಿರಂಜನಪ್ರಭೆಯ ಬೆಳಗಿನಲ್ಲಿ ನಲಿಯುವ ಶಿವಯೋಗದನುಭಾವ, ನನಗೆ ಇನ್ನೂ ಲಭಿಸಿಲ್ಲವೇಕೆ, ಗುರುಗಳೇ?"

ಆ ಸಹಜಾನಂದದ ಸ್ವರೂಪವೇ ಮೈವೆತ್ತ ಮೂರ್ತಿ ನೀನು. ಅದಕ್ಕಾಗಿ ನೀನು ಬೇಡಬೇಕಾಗಿಲ್ಲ. ನಿನಗಾಗಿ ಕಾದು ನಿಂತಿದೆ ಅದು. ನಾಲ್ಕು ದಿನ ನಿನ್ನ ಈ ಲೀಲೆಯನ್ನು ತೋರಿಸುವುದಕ್ಕಾಗಿ ಅದನ್ನು ಅತ್ತ ಮರೆಮಾಡಿ ಬಂದು ನಿಂತಿದ್ದೀಯ. ಅತ್ತ ನೋಡಿ ಅದನ್ನು ಆಹ್ವಾನಿಸು. ಅದು ಅವತರಿಸಿ ಬಂದು ನಿನ್ನನ್ನು ತಬ್ಬಿ ತಣಿಸುತ್ತದೆ."

ಮಹಾದೇವಿ ಮೇಲೆದ್ದು ನಮಸ್ಕರಿಸಿದಳು ಪ್ರಭುದೇವನಿಗೆ. "ಏಳು ಮಹಾದೇವಿ, ಮೇಲೇಳು. ಇದೆಲ್ಲಾ ಇನ್ನು ಬೇಕಿಲ್ಲ. ನೀನಾರು ನಾನಾರು ? ತನ್ನ ಲೀಲೆಗಾಗಿ, ತಾನೇ ಗುರುವಾದ ತಾನೇ ಶಿಷ್ಯನಾದ" ಎಂದು ಅವಳ ತಲೆಯ ಮೇಲೆ ಕೈಯನ್ನಿಟ್ಟ ಅಲ್ಲಮ.

ಅಪೂರ್ವವಾದ ಅನುಭವವೊಂದು ಮಿಂಚಿ, ಭ್ರೂಮಧ್ಯದಲ್ಲಿ ಲೀನವಾಗಿ ದೇಹವನ್ನು ವ್ಯಾಪಿಸಿದಂತಾಯಿತು ಮಹಾದೇವಿಗೆ. ಅಂತರಂಗದಲ್ಲಿ ಮಿಂಚಿನ ಮಳೆಗರೆದಂತಾಯಿತು. ಅದರ ಸಂಕೇತವೋ ಎಂಬಂತೆ ಅವಳ ಕಣ್ಣುಗಳಿಂದ ಆನಂದ ಬಾಷ್ಪಗಳು ಸುರಿಯುತ್ತಿದ್ದುವು.

೩

ಪ್ರಭುದೇವನು ಹೇಳಿದ ಮಾತುಗಳು ಆ ದಿನವೆಲ್ಲಾ ಮಹಾದೇವಿಯ ಮನಸ್ಸನ್ನು ತುಂಬಿ ಮೊರೆಯುತ್ತಿದ್ದವು. 'ಸ್ವಾನುಭಾವದ ಉದಯ, ಜ್ಞಾನಶೂನ್ಯದಲ್ಲಡಗುವುದು,' 'ಬೆಳಕು ಕತ್ತಲೆಯ ನುಂಗಿ ಒಳಗೆ ತಾನೊಬ್ಬನೇ ಆದೆ,' 'ಸುಮನಮಂಟಪದಲ್ಲಿ ನಿತ್ಯನಿರಂಜನಪ್ರಭೆಯಾಗಿ ಹೊಳೆಯಬೇಕು' – ಈ ಮೊದಲಾದ ಮಾತುಗಳು ಜ್ಯೋತಿರ್ಲಿಂಗದಂತೆ ಅವಳ ಕಣ್ಣೆದುರು ಬಂದು ನಿಲ್ಲುತ್ತಿದ್ದುವು.

ಅಲ್ಲಮನು ನಿರೂಪಿಸಿದ ಸಮರಸಭಾವದ ಕೊನೆಯ ಹಂತವನ್ನು ಅನುಭಾವ ಪೂರ್ಣವಾಗಿ ಏರಿ ಅರಿಯಲು ಯತ್ನಿಸುತ್ತಿದ್ದಳು.

'ನಿನ್ನ ಸತೀಭಾವವನ್ನು ಅಲ್ಲಿ ನಿವೇದಿಸು. ಸತಿಪತಿಭಾವವೂ ಅಳಿದು, ಉಭಯವು ಏಕವಾಗಿ ನಿಂದ ನಿಲವನ್ನು ಕಂಡುಕೋ' – ಎಂದು ಹೇಳಿದ ಪ್ರಭುದೇವನ ಮಾತು ಮೊಳಗುತ್ತಿತ್ತು.

'ನಿಜ, ಈ ಸತಿಪತಿಭಾವದ ಆಧ್ಯಾತ್ಮಿಕ ರಹಸ್ಯವನ್ನು ನಾನು ಇಂದು ಅರಿಯಬಲ್ಲೆ. ನನ್ನ ಪತಿ ಚೆನ್ನಮಲ್ಲಿಕಾರ್ಜುನನನ್ನು ನಾನು ಮದುವೆಯಾಗಿದ್ದೇನೆ. ಆದರೆ ಅದು ಲೌಕಿಕ ಮದುವೆಯಲ್ಲ. ಅದು ಎಂತಹ ಮದುವೆ....' – ಹೀಗೆ ಆಲೋಚಿಸುತ್ತಿದ್ದಂತೆಯೇ ಅವಳ ಮನಸ್ಸಿನ ಮುಂದೆ ಒಂದು ಚಿತ್ರ ಸುಳಿಯಿತು. ಹೇಳಿದಳು ಈ ವಚನವನ್ನು :

> ಜಲದ ಮಂಟಪದ ಮೇಲೆ, ಉರಿಯ ಚಪ್ಪರವನಿಕ್ಕಿ,
> ಆಲಿಕಲ್ಲ ಹಸೆಯ ಹಾಸಿ,
> ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು.
> ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ !
> ಚೆನ್ನಮಲ್ಲಿಕಾರ್ಜುನ ಗಂಡಗೆನ್ನ ಮದುವೆ ಮಾಡಿದರು !

ಈ ಮಾತು ; ಈ ಕಲ್ಪನೆ ಅವಳ ಮನಸ್ಸಿಗೆ ತುಂಬಾ ಹಿಡಿಯಿತು. ಮತ್ತೆ ಮತ್ತೆ ಇದನ್ನು ಹೇಳಿಕೊಂಡಳು : 'ಹೌದು, ನಾನು ಕಾಲಿಲ್ಲದ ಹೆಂಡತಿ, ಅವನು ತಲೆಯಿಲ್ಲದ ಗಂಡ. ನಮ್ಮ ಸಂಸಾರ ಎಂದೆಂದೂ ಬಿಡದ ಬಾಳುವೆ.'

ಆ ವಚನದ ಅರ್ಥವನ್ನು ಹಿಂಬಾಲಿಸಿ ಮತ್ತೆ ಆಲೋಚನೆಗೆ ತೊಡಗಿದಳು:

'ದೇಹವೆಂಬ ಶ್ರೀಗಿರಿಯನ್ನೇರಿ, ಹೃದಯಕದಳಿಯ ಗರ್ಭದಲ್ಲಿ ನಿಂತು ಪಡೆಯಬೇಕು ಆ ಫಲವನ್ನು'

ಅಲ್ಲಮನ ಈ ಮಾತು ಅಂತರಂಗದಲ್ಲಿ ಬೆಳಕಿನ ಹೊನಲಾಗಿ ಹೊಮ್ಮಿ ಹರಿಯುತ್ತಿತ್ತು. ಅದನ್ನು ಹಿಂಬಾಲಿಸಿ ಮನಸ್ಸಿನ ಪದರ ಪದರಗಳನ್ನೇರಿ ಹೋಗಲು ಹವಣಿಸುತ್ತಾ ಧ್ಯಾನಾಸಕ್ತಳಾಗಿದ್ದಳು.

ಅಷ್ಟರಲ್ಲಿ ನೀಲಾಂಬಿಕೆ ಬಳಿಗೆ ಬಂದಳು ಮಹಾದೇವಿಯನ್ನು ಕರೆಯುತ್ತಾ:

"ಪ್ರಸಾದದ ವೇಳೆಯಾಗಿ ಎಷ್ಟು ಹೊತ್ತಾದರೂ ಇಂದು ಮಹಾದೇವಿಯನ್ನು ಕಾಣಲಿಲ್ಲ. ಈಗ ಅವಳನ್ನು ಕರೆದುಕೊಂಡು ಬರುತ್ತೇನೆ" ಎಂದು ಗಂಗಾಂಬಿಕೆಗೂ ಇತರ ಶರಣೆಯರಿಗೂ ಹೇಳಿ ಮಹಾದೇವಿಯನ್ನು ಹುಡುಕಿಕೊಂಡು ಬಂದಿದ್ದಳು ನೀಲಾಂಬಿಕೆ.

ಅವಳು ಕರೆದುದನ್ನು ಕೇಳಿ ಮಹಾದೇವಿಯ ಮನಸ್ಸು ಕದಳಿಯ ಗುಹೆಯಿಂದ ಕೆಳಗಿಳಿದುಬಂದಿತು. ನಿಧಾನವಾಗಿ ಕಣ್ದೆರೆದಳು. ಅವಳ ಕಣ್ಣುಗಳಲ್ಲಿದ್ದ ಅಂತರ್ಮುಖ ಕಾಂತಿಯನ್ನು ಕಂಡು ಅಚ್ಚರಿಗೊಂಡಳು ನೀಲಾಂಬಿಕೆ. ತಾನು ಎಚ್ಚರಿಸಿದುದು ಅನುಚಿತವಾಯಿತೇನೋ ಎಂದು ಭಾವಿಸುತ್ತಾ ಹೇಳಿದಳು :

"ಕ್ಷಮಿಸು ಮಹಾದೇವಿ, ನಾನು ಬಂದುದು ನಿನ್ನ ಧ್ಯಾನಕ್ಕೆ ಭಂಗವನ್ನುಂಟು ಮಾಡಿತು."

"ಇಲ್ಲ, ತಾಯಿ. ಮಾತೃವಾತ್ಸಲ್ಯದ ರಕ್ಷಣೆ ಬಂದಂತಾಯಿತು. ಅಣ್ಣನ ಮಹತ್ಕಾರ್ಯಕ್ಕೆ ನೆರವಾಗುವ ದಾಸೋಹಂ ಭಾವದಲ್ಲಿಯೇ ಯೋಗವನ್ನು ಕಂಡುಕೊಂಡಿರುವ ನೀಲಮ್ಮ ತಾಯಿ, ನಿಮ್ಮೆಲ್ಲರ ಹರಕೆಯಿಂದ ನನ್ನ ಸಾಧನೆ ಪೂರ್ಣವಾಗಬೇಕು."

ನೀಲಮ್ಮ ಬಳಿಗೆ ಬಂದು ವಾತ್ಸಲ್ಯಭಾವದಿಂದ ಅವಳ ಮೈದಡವುತ್ತ,

"ಇರಲಿ ಏಳು, ಮಹಾದೇವಿ. ಇದೇಕೆ ಇಂದು ಇಷ್ಟು ಹೊತ್ತಾದರೂ ಇಲ್ಲಿಯೇ ಕುಳಿತುಬಿಟ್ಟಿರುವಿ? ಓಲೆಗರಿ ಪಕ್ಕದಲ್ಲಿ ! ಎಷ್ಟು ವಚನಗಳನ್ನು ರಚಿಸಿದೆ ಇಂದು ?"

"ಹೆಚ್ಚಾಗಿ ಏನೂ ಬರೆಯಲಿಲ್ಲ. ಆದರೆ ಪ್ರಭುದೇವರು ಸೂಚಿಸಿದ ಒಂದು ಮಾತು ನನ್ನ ಮನಸ್ಸನ್ನು ನಾಟಿತು. ನನ್ನ ಸತಿಪತಿಭಾವವನ್ನು ಮೇಲಕ್ಕೆ ಎತ್ತಿತು. ಅದನ್ನೇ ಕುರಿತು ಆಲೋಚಿಸುತ್ತಿರುವಾಗ ಈ ಒಂದು ವಚನ ಬಂದಿತು."

ನೀಲಮ್ಮ ಅದನ್ನು ಓದಿದಳು. ಕ್ಷಣಕಾಲ ಮೌನವಾಯಿತು. ಅನಂತರ ಹೇಳಿದಳು :

"ಆಹಾ, ಎಂತಹ ಅರ್ಥಗರ್ಭಿತವಾದ ಮಾತುಗಳು ! ಜಲದ ಮಂಟಪ, ಉರಿಯ ಚಪ್ಪರ, ಆಲಿಕಲ್ಲ ಹಸೆ ; ಹೌದು, ಸಂಸಾರವ್ಯಾಮೋಹವೆಂಬ

ಕಾಲುಗಳಿಲ್ಲದ ಹೆಂಡತಿ ಈ ಜೀವ! ಭವಸಮುದ್ರದ ಬಂಧನವೆಂಬ ತಲೆಯನ್ನು ಕಳೆದುಕೊಂಡ ಆ ಶಿವ.... ಇದು ಸತಿಪತಿಭಾವದ ನಿಜವಾದ ನಿಲವು. ತುಂಬಾ ಸುಂದರವಾಗಿದೆ ಮಹಾದೇವಿ, ಈ ವಚನ" ಎಂದು ಮೆಚ್ಚಿ ನುಡಿದಳು ನೀಲಮ್ಮ.

ಕೆಲವು ದಿನಗಳ ಹಿಂದೆ ಮಹಾದೇವಿ ಇದೇ ಭಾವವನ್ನು ಕುರಿತು ಹೇಳಿದ ಇನ್ನೊಂದು ವಚನವನ್ನು ನೆನೆಸಿಕೊಂಡಳು ನೀಲಮ್ಮ.

ಅಂದು ಅನುಭವಮಂಟಪದಲ್ಲಿ ಮಹಾದೇವಿ ಆ ವಚನವನ್ನು ಹೇಳಿದ್ದಳು. ಆಕೆ ಕಲ್ಯಾಣಕ್ಕೆ ಬಂದ ಹೊಸದು. ಶರಣರ ಒಡನಾಟದಿಂದ ಉಂಟಾದ ತೃಪ್ತಿಯನ್ನು ಅನೇಕ ವಚನಗಳಲ್ಲಿ ಹೇಳಿಕೊಂಡಿದ್ದಳು. ಅವುಗಳಲ್ಲಿ ಒಂದು ವಚನ, ಶರಣರು ಶಿವನಿಗೆ ತನ್ನನ್ನು ಕೊಟ್ಟು ಮದುವೆ ಮಾಡಿದ ಚಿತ್ರವನ್ನು ಹೇಳುತ್ತಿತ್ತು ;

> ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಬ,
> ಪವಳದ ಚಪ್ಪರವನಿಕ್ಕಿ ಮದುವೆಯ ಮಾಡಿದರು ;
> ಎಮ್ಮವರೆನ್ನ ಮದುವೆಯ ಮಾಡಿದರು ;
> ಕಂಕಣ ಕೈಧಾರೆ ಸ್ಥಿರಸೇಸೆಯನಿಕ್ಕಿ
> ಚೆನ್ನಮಲ್ಲಿಕಾರ್ಜುನ ಗಂಡಗೆನ್ನ ಮದುವೆ ಮಾಡಿದರು.

"ಇದು ನೆನಪಿದೆಯೇ ಮಹಾದೇವಿ, ಅಂದು ನೀನು ಅನುಭವಮಂಟಪದಲ್ಲಿ ವರ್ಣಿಸಿದ ಶರಣಸತಿಯ ಮದುವೆಯ ಸಂಭ್ರಮ ?"

ಮಹಾದೇವಿ ಅದನ್ನು ಸ್ಮರಿಸಿಕೊಂಡು, ಹಾಗೆಯೇ ಮುಗುಳುನಗೆಯನ್ನು ಬೀರಿದಳು. ಮತ್ತೆ ನೀಲಮ್ಮನ ಮಾತೇ ಮುಂದುವರಿಯಿತು :

"ಇಂದು ಈ ವಚನವನ್ನೂ ಅನುಭವಮಂಟಪದ ಮುಂದೆ ಇಡು. ಮಧುರ ಭಕ್ತಿಯ ವಿಕಾಸವನ್ನು ಅನುಭವಮಂಟಪ ಕಂಡುಕೊಳ್ಳಲಿ"

"ಬೇಡ, ತಾಯಿ. ನನ್ನ ಅಂತರಂಗದ ವಿಕಾಸದ ಪ್ರದರ್ಶನ ನನಗೇಕೋ ಬೇಡವೆನ್ನಿಸುತ್ತಿದೆ."

ಈಚೀಚಿಗೆ ಮಹಾದೇವಿ ಹೆಚ್ಚು ಹೆಚ್ಚಾಗಿ ಅಂತರ್ಮುಖಳಾಗುತ್ತಿರುವುದು ನೀಲಮ್ಮನ ಗಮನಕ್ಕೆ ಬಾರದೇ ಇರಲಿಲ್ಲ. ಅನುಭವಮಂಟಪದ ಚರ್ಚೆಗಳಲ್ಲಿಯೇ ಆಗಲಿ, ಜಿಜ್ಞಾಸೆಗಳಲ್ಲಿಯೇ ಆಗಲೀ, ಮೊದಲಿನ ಉತ್ಸಾಹ ಮಹಾದೇವಿಯಲ್ಲಿ ಕಾಣುತ್ತಿರಲಿಲ್ಲ.

ಕಲ್ಯಾಣಕ್ಕೆ ಬಂದ ಮೊದಲು ಕೆಲವು ದಿನಗಳಲ್ಲಿ, ಅನುಭವಮಂಟಪದ ಚರ್ಚೆಯಲ್ಲಿ, ಮಹಾದೇವಿಯ ಮಾತಿನ ಬೆಳಕು ಹೆಜ್ಜೆ ಹೆಜ್ಜೆಗೂ ಬೆಳಗುತ್ತಿತ್ತು. ವೈಯಕ್ತಿಕವಾದ ಸಾಧನೆಯ ವಿಚಾರವಾಗಲೀ ಸಾಮಾಜಿಕವಾದ ಸಮಸ್ಯೆಯಾಗಲೀ

ಧರ್ಮ ಸ್ವರೂಪ ಪ್ರಕಾಶನವೇ ಆಗಲೀ, ಯಾವ ವಿಷಯವಾದರೂ ಮಹಾದೇವಿಯ ಮನಸ್ಸನ್ನು ಸೆಳೆಯುತ್ತಿತ್ತು. ಅಚ್ಚಳಿಯದಪ್ರಭಾವವನ್ನು ಬೀರುವಂತಹ ವಚನಗಳನ್ನು ಹೇಳಿ ಸಭೆಯನ್ನು ಮುಗ್ಧಗೊಳಿಸುತ್ತಿದ್ದಳು. ಅಂತಹ ಒಂದೆರಡು ಸನ್ನಿವೇಶಗಳು ನೀಲಮ್ಮನ ಮುಂದೆ ಸುಳಿದವು :

ಸುಖ–ದುಃಖಗಳಾಗಲೀ ಸ್ತುತಿ–ನಿಂದೆಗಳಾಗಲೀ ಬಂದರೆ ಸಾಧಕ ಅವುಗಳಿಗೆ ಅಂಜದೆ ಜೀವನವನ್ನು ಎದುರಿಸಬೇಕೆಂಬ ಮಾತು ಒಮ್ಮೆ ಅನುಭವ ಮಂಟಪದಲ್ಲಿ ಬಂದಾಗ ಮಹಾದೇವಿ ಸುಂದರವಾದ ಈ ವಚನವನ್ನು ಹೇಳಿದ್ದಳು:

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ ?
ಸಮುದ್ರದ ತಡಿಯಲ್ಲಿ ಮನೆಯ ಮಾಡಿ,
ನೆರೆತೊರೆಗಳಿಗಂಜಿದೊಡೆಂತಯ್ಯ ?
ಸಂತೆಯೊಳಗೊಂದು ಮನೆಯ ಮಾಡಿ,
ಶಬ್ದಕ್ಕೆ ನಾಚಿದೊಡೆಂತಯ್ಯ ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ,
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದೊಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಇನ್ನೊಂದು ದಿನ ಅನುಭವಮಂಟಪದ ವಿಷಯ, ಸಾಧಕನಿಗೆ ಅವಶ್ಯಕವಾದ ಗುಣಶೀಲಗಳ ಕಡೆ ತಿರುಗಿತ್ತು. ಒಬ್ಬೊಬ್ಬ ಶರಣರೂ ಅನೇಕ ಮಾತುಗಳನ್ನು ಹೇಳಿಕೊಂಡು ಬಂದರು.

ತೊರೆಯ ಮೀವಣ್ಣಗಳಿರಾ, ತೊರೆಯಿರೋ ಪರಧನವ,
ಪರದ್ರವ್ಯವ ಬಿಡದೆ ಹೋಗಿ ತೊರೆಯಲ್ಲಿ ಮಿಂದರೆ,
ಆ ತೊರೆಯೆಲ್ಲಾ ಬರುದೊರೆ ಕಂಡಯ್ಯ !
ಕಳವ ತೊರೆದು ಮಿಂದರೆ, ಒಲಿದು ಕೂಡಿಕೊಂಬ
ನಮ್ಮ ಕೂಡಲಸಂಗಮದೇವಾ

ಎಂದಿದ್ದರು ಬಸವಣ್ಣ. ನಂತರ ಮಹಾದೇವಿ ಎದ್ದು ನಿಂತು ಹೇಳಿದ್ದಳು:

ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು.
ಮನಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು.
ಹದುಳಿಗರದಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು.
ಅರಿವು ಕಣ್ದೆರೆಯದವರಲ್ಲಿ ಧೂಪವನೊಲ್ಲೆಯಯ್ಯಾ ನೀನು.

ಭಾವಶುದ್ಧವಿಲ್ಲದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು.
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು.
ಹೃದಯಕಮಲ ಶುದ್ಧವಿಲ್ಲದವರಲ್ಲಿ ಇರಲೊಲ್ಲೆಯಯ್ಯಾ ನೀನು.
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ
ಹೇಳಾ ಚೆನ್ನಮಲ್ಲಿಕಾರ್ಜುನಾ !

ತನಗೇ ಅನ್ವಯಿಸಿಕೊಂಡು ಹೇಳಿದ ಆ ಮಾತು ಶರಣರೆಲ್ಲವನ್ನೂ ಆತ್ಮ ಶೋಧನೆಗೆ ಹಚ್ಚಿತ್ತು. ಅನುಭವಮಂಟಪವೆಲ್ಲಾ ಸ್ತಬ್ಧವಾಗಿ ಆ ವಚನತೀರ್ಥದ ಮಹತ್ತಿನಲ್ಲಿ ಮಿಂದಿತ್ತು.

ಈ ಲೋಕದಲ್ಲಿ ಇದ್ದರೂ ಇದಕ್ಕೆ ಅಂಟದಂತೆ ಬಾಳಬೇಕೆಂಬ ಮಾತನ್ನು ಪ್ರತಿಪಾದಿಸುವ ಸಂದರ್ಭದಲ್ಲಿ, ಇನ್ನೊಂದು ದಿನ ಮಹಾದೇವಿ ಹೇಳಿದ ವಚನವಂತೂ ಶರಣರ ಮನಸ್ಸನ್ನು ಸೂರೆಗೊಂಡಿತ್ತು :

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲರೆ
ಹಾವಿನಸಂಗವೇ ಲೇಸು ಕಂಡಯ್ಯ.
ಕಾಯ ಸಂಗವ ವಿವರಿಸಬಲ್ಲರೆ,
ಕಾಯ ಸಂಗವೇ ಲೇಸು ಕಂಡಯ್ಯ ;
ತಾಯ ರಕ್ಕಸಿಯಾದಂತೆ ಕಾಯವಿಕಾರವು.
ಚೆನ್ನಮಲ್ಲಿಕಾರ್ಜುನಯ್ಯ ನೀನೊಲಿದವರು
ಕಾಯಗೊಂಡಿರ್ದಾರೆನಬೇಡ.

ಇದನ್ನು ಕೇಳಿದ ಚೆನ್ನಬಸವಣ್ಣ ತನ್ನ ಮೆಚ್ಚುಗೆಯನ್ನು ಅಡಗಿಸಿಕೊಳ್ಳಲಾರದೆ ಮೇಲೆದ್ದು, ಅಕ್ಕನ ವಚನಗಳ ಶಕ್ತಿಯನ್ನು ತುಂಬುಹೃದಯದಿಂದ ಕೊಂಡಾಡುತ್ತಾ ಹೀಗೆ ಹೇಳಿದ್ದ :

ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ ;
ದಣ್ಣಾಯಕರ ಇಪ್ಪತ್ತು ವಚನಕ್ಕೆ ಅಜಗಣ್ಣನ ಹತ್ತು ವಚನ ;
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ ;
ಅಜಗಣ್ಣನ ಐದು ವಚನಕ್ಕೆ ಕೂಡಲಚನ್ನ ಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ಒಂದು ವಚನ
ನಿರ್ವಚನ ಕಾಣಾ, ಸಿದ್ಧರಾಮಯ್ಯ.

ಶರಣರೆಲ್ಲರೂ ಇದಕ್ಕೆ ಒಪ್ಪಿಗೆಯ ಉದ್ಗಾರವನ್ನು ಘೋಷಿಸಿದ್ದರು. ಆಕೆ ತಮ್ಮೆಲ್ಲರ ಅಕ್ಕ, ಎಂದು ಮೆಚ್ಚಿ ನುಡಿದಿದ್ದರು. ವಿನಮ್ರಳಾಗಿ ಅಕ್ಕ ತಲೆಬಾಗಿದ್ದಳು.

ಹೀಗೆ ಮಹಾದೇವಿ ಹಾಡಿದ ವಚನಗಳಿಗೆ ಲೆಕ್ಕವೇ ಇರಲಿಲ್ಲ. ಅಣ್ಣನ ಮಹಾ ಮನೆಯ ಬೆಳಕಾಗಿ ಓಡಾಡುತ್ತಿದ್ದಳು ; ಹಾಡುತ್ತಿದ್ದಳು ; ಶರಣರ ದಾಸೋಹದ ಸಂಭ್ರಮದಲ್ಲಿ ನೆರವಾಗುತ್ತಿದ್ದಳು. ಶರಣರ ಸಾಧನೆಯನ್ನೂ ಅವರ ಕಾರ್ಯಗಳನ್ನೂ ಮೆಚ್ಚಿ ವಚನಗಳನ್ನೂ ಹಾಡುಗಳನ್ನೂ ಬರೆಯುತ್ತಿದ್ದಳು.

ಆದರೆ ಅಲ್ಲಮನ ನೇತೃತ್ವದಲ್ಲಿ ಅವಳ ಸಾಧನೆ ಮುಂದುವರೆದಂತೆ, ಅವಳ ಮನಸ್ಸು ಹೆಚ್ಚು ಅಂತರ್ಮುಖವಾಗತೊಡಗಿತ್ತು. ಬರಬರುತ್ತಾ ಅಲ್ಲಮನೊಡನೆ ಆಧ್ಯಾತ್ಮದ ಅನುಸಂಧಾನ ಮತ್ತು ಸಾಧನೆ ಇವೇ ಅವಳ ಸರ್ವಸ್ವವಾಯಿತು. ಬಸವಣ್ಣನವರೊಡನೆ ಮತ್ತು ಶರಣೆಯರಾದ ಲಿಂಗಮ್ಮ, ಲಕ್ಕಮ್ಮ ಮತ್ತು ರಾಣಿ ಮಹಾದೇವಿ ಮೊದಲಾದವರೊಡನೆ ಆಗಾಗ ಅನುಭಾವಗೋಷ್ಠಿ, ಇದಲ್ಲದೆ ಇನ್ನೇನೂ ಅವಳಿಗೆ ಬೇಡವಾಯಿತು.

ಇದನ್ನು ಗಮನಿಸಿದ ನೀಲಾಂಬಿಕೆ, ಒಮ್ಮೆ ಬಸವಣ್ಣನೆದುರು ಆಡಿ ತೋರಿಸಿದಾಗ : "ನಿಜ, ಅದು ಬಹುಕಾಲ ಜಿಜ್ಞಾಸೆ, ಚರ್ಚೆಗಳಲ್ಲಿ ಕಾಲ ಕಳೆಯುವ ಚೇತನವಲ್ಲ, ನೀಲಾ. ಅದಾವ ಪುಣ್ಯದಿಂದಲೋ ಇಷ್ಟು ಕಾಲ ಕಲ್ಯಾಣದಲ್ಲಿದೆ. ಕಣ್ಣು ಕೋರೈಸುವಂತಹ ಮಿಂಚಿನಂತಹ ಬೆಳಕು ಅದು. ಬಹಳ ಕಾಲ ಅದನ್ನು ನಾವು ಇಟ್ಟುಕೊಳ್ಳಲಾರೆವೆಂದು ತೋರುತ್ತದೆ" ಎಂದಿದ್ದ ಬಸವಣ್ಣ. ಅದನ್ನು ಈಗ ನೆನಸಿಕೊಂಡಳು ನೀಲಮ್ಮ.

ಅಷ್ಟರಲ್ಲಿ ಮಹಾದೇವಿ ತನ್ನ ಆಲೋಚನಾಮಗ್ನವಾದ ಮನಸ್ಸಿನಿಂದ ಹೊರಗೆ ಬರುತ್ತಾ ಹೇಳಿದಳು :

"ಇನ್ನೂ ಎಷ್ಟು ದಿನ ಈ ವಚನರಚನೆಯ ಮಾತಿನ ಮಾಲೆಯನ್ನು ಪ್ರದರ್ಶಿಸುತ್ತಾ ಕಾಲ ಕಳೆಯುವುದು ಎಂದು ನನಗೆ ಅನ್ನಿಸುತ್ತದೆ, ತಾಯಿ."

"ನಿನ್ನ ಮಹೋನ್ನತವಾದ ಸಾಧನೆಗೆ ಇನ್ನು ಕಲ್ಯಾಣದ ಕಾರ್ಯಕ್ಷೇತ್ರ, ಕಿರಿದಾಗುವಂತೆ ಕಾಣುತ್ತಿದೆಯಲ್ಲವೇ, ಮಹಾದೇವಿ ?" ಕೇಳಿದಳು ನೀಲಮ್ಮ.

"ಇಲ್ಲ... ಹಿರಿದು ಕಿರಿದೆಂಬ ಮಾತಿಲ್ಲ. ನಿಮ್ಮೆಲ್ಲರ ಕರುಣೆಯ ಕಂದ ನಾನು. ನನ್ನ ಮದುವೆಯನ್ನು ನೀವು ಮಾಡಿದ್ದೀರಿ. ಇನ್ನು ನನ್ನ ಸ್ಥಳ ಗಂಡನಮನೆಯಲ್ಲಿ ಎನಿಸುತ್ತಿದೆ. ಅಂದಮಾತ್ರಕ್ಕೆ ತೌರೂರಿನ ಕ್ಷೇತ್ರ ಕಿರಿದಾಯಿತೆಂದಲ್ಲ ; ಮಗಳ ಕೆಲಸ ತವರುಮನೆಯಲ್ಲಿ ಮುಗಿಯಿತು ಎಂದರ್ಥ. ಈ ಕಲ್ಯಾಣದ ತೌರೂರಿನಲ್ಲಿ ಹತ್ತಿದ ಆತ್ಮ ಜ್ಯೋತಿ ಮೇಲೇರಿ ಮಹಾಜ್ಯೋತಿಯೊಡನೆ ಲೀನವಾಗಲು ಬಯಸುತ್ತಿದೆ."

ನೀಲಮ್ಮ ಮಾತನ್ನೇನೂ ಆಡಲಾರದವಳಾದಳು. ಮಹಾದೇವಿಯನ್ನು ವಾತ್ಸಲ್ಯದಿಂದ ತಬ್ಬಿಕೊಂಡಳು. ಆನಂದಬಾಷ್ಪಗಳು ಕಣ್ಣಿಂದ ಉದುರುತ್ತಿರಲು ಹೇಳಿದಳು :

ನಿನ್ನಂತಹ ಮಗಳನ್ನು ಪಡೆದ ನಮ್ಮ ಜನ್ಮ ಸಾರ್ಥಕವಾಯಿತು. ಇರಲಿ, ಏಳು ಈಗ ; ಪ್ರಸಾದವನ್ನು ಸ್ವೀಕರಿಸಲು ಹೊತ್ತಾಯಿತು. ಶರಣೆಯರೆಲ್ಲಾ ನಿನಗಾಗಿ ಕಾಯುತ್ತಿದ್ದಾರೆ."

೪

ಅಂದು ರಾತ್ರಿ ಮಹಾದೇವಿಯ ಮನಸ್ಸು ಸಾಗರವನ್ನು ಸೇರಲು ಸಮೀಪಿಸುತ್ತಿರುವ ಮಹಾನದಿಯಂತೆ ಭೋರ್ಗರೆಯುತ್ತಿತ್ತು. ಎಂದಿಗಿಂತ ಮೊದಲೇ ಸ್ನಾನವನ್ನು ಮಾಡಿ ಪೂಜಾಗೃಹವನ್ನು ಪ್ರವೇಶಿಸಿದ್ದಳು.

ಇಂದು ಅವಳಿಗೆ ಅದು ಕೇವಲ ಪೂಜಾಗೃಹದಂತೆ ತೋರಲಿಲ್ಲ. ಸಾಕ್ಷಾತ್ ಚನ್ನಮಲ್ಲಿಕಾರ್ಜುನನ ಹೃದಯಕಮಲದಂತೆ ಕಂಡಿತು. ಕಳೆಗುಂದದ ಬೆಳಕನ್ನೀಯುವ ಮಿಂಚಿನರಮನೆಯಂತೆ ಗೋಚರಿಸಿತು. ತನ್ನಲ್ಲಿ ಸುಪ್ತವಾಗಿದ್ದ ಆವುದೋ ಶಕ್ತಿಯೊಂದು ಎಚ್ಚರಗೊಂಡು ಕೈಲಾಸಶಿಖರದಂತೆ ಮಹೋನ್ನತವಾಗಿ ಬೆಳೆದು, ತನ್ನನ್ನೂ ಮೇಲಕ್ಕೆತ್ತುತ್ತಿರುವಂತೆ ತೋರುತ್ತಿತ್ತು. ಸಜ್ಜೆಯಲ್ಲಿದ್ದ ಇಷ್ಟಲಿಂಗವನ್ನು ತೆಗೆದು ಕರಸ್ಥಳದಲ್ಲಿಟ್ಟು ಪೂಜೆಯನ್ನು ಪ್ರಾರಂಭಿಸಿದಳು.

ಶ್ರದ್ಧಾಭಕ್ತಿ, ನೈಷ್ಠಿಕಾಭಕ್ತಿಗಳ ಅವಲಂಬನೆಯಿಂದ ಅವಳ ಪೂಜೆ ಮೇಲೇರಿ ಅವಧಾನಭಕ್ತಿ, ಅನುಭಾವಭಕ್ತಿಗಳ, ಆತ್ಮಾರ್ಪಣೆ ಮತ್ತು ಯೋಗ ಮಾರ್ಗಗಳಲ್ಲಿ ಮುಂದುವರಿಯಿತು. ದೃಷ್ಟಿಯನ್ನು ಇಷ್ಟಲಿಂಗದಲ್ಲಿಟ್ಟು, ಲಿಂಗಾಂಗ ಸಾಮರಸ್ಯದ ಅನುವನ್ನು ತಾನು ಬೇರೆಯಾಗಿ ನಿಂತು ಅನುಭವಿಸುವ ಶರಣ ಸ್ಥಲದ ಆನಂದ ಭಕ್ತಿಯಾಗಿ ವ್ಯಾಪಿಸಿತು.

ಅವಳ ಚೈತನ್ಯಶಕ್ತಿ ಇಂದು ಇನ್ನೂ ಮೇಲೇರತೊಡಗಿತ್ತು. ಕೈಲಿರುವ ಲಿಂಗವೂ ಅದೃಶ್ಯವಾಗಿ ಬೆಳಕಿನ ಮಹಾಗೋಳವಾಗಿ ತಿರುಗುತ್ತಿರುವಂತೆ ಕಾಣಿಸಿತು. ದೇಹದ ಜಡಭಾಗವೆಲ್ಲಾ ಹಾಗೆಯೇ ಕರಗಿಹೋದಂತಾಗಿ ಆ ಭಕ್ತಿರಸದಿಂದ ಸಿಡಿದ ಬೆಳಕಿನ ಕುಡಿಯೊಂದು ಬೆಳೆಬೆಳೆದು ಕೈಲಿರುವ ಮಹಾ ಬೆಳಕಿನಲ್ಲಿ ಲೀನವಾದಂತಾಯಿತು. ಆನಂದವೂ ಅಳಿದು ಅಲ್ಲಿ ಸಮರಸ ಭಕ್ತಿಯ ನಿಲವು ಮಾತ್ರ ತಾನೇತಾನಾಗಿ ಮೈದೋರಿತು.

ಇತ್ತ ಮಹಾಮನೆಯಲ್ಲಿ ನಿತ್ಯದ ಕರ್ಮಗಳೆಲ್ಲಾ ಮುಗಿದವು. ಜಂಗಮರೆಲ್ಲಾ ಅಲ್ಲಮಪ್ರಭುವಿಗೆ ನಮಸ್ಕರಿಸಿ ವಿಶ್ರಾಂತಿಯನ್ನು ಪಡೆಯಲು ಹೋಗುತ್ತಿದ್ದರು. ಅನುಭವಮಂಟಪದ ಪಕ್ಕದಲ್ಲಿ ಗುಹೇಶ್ವರನ ಗುಹೆಯಂತಿದ್ದ ಒಂದು ಚಿಕ್ಕ ಕೋಣೆಯೇ ಅಲ್ಲಮನ ನಿವಾಸಸ್ಥಾನವಾಗಿತ್ತು. ಅದರ ಮುಂಭಾಗದಲ್ಲಿ ಅಲ್ಲಮ ನಿಧಾನವಾಗಿ ಹೆಜ್ಜೆ ಹಾಕುತ್ತಾ ಅತ್ತ ಇತ್ತ ತಿರುಗಾಡುತ್ತಿದ್ದ. ಹೊಂಬಣ್ಣದಿಂದ ಹಾಲಿನ ಬಣ್ಣಕ್ಕೆ ತಿರುಗುತ್ತಾ ಮೇಲೇರಿ ಬರುತ್ತಿದ್ದ ಚಂದ್ರನ ಕಿರಣಗಳು ಪ್ರಭುದೇವನ ಕಾಲ ಕೆಳಗೆ ನೆಳಲು ಬೆಳಕಿನ ರಂಗವಲ್ಲಿಯನ್ನು ರಚಿಸಿದ್ದುವು.

ಸಮಯ ಉರುಳುತ್ತಿತ್ತು. ಮಹಾಮನೆಯಲ್ಲೆಲ್ಲಾ ನಿಶ್ಶಬ್ದ ಆವರಿಸಿತು. ಅನುಷ್ಠಾನದಲ್ಲಿ, ಅಧ್ಯಯನದಲ್ಲಿ ತೊಡಗಿದ್ದ ಶರಣರ ಕೋಣೆಗಳಿಂದ ಮಾತ್ರ ಮಬ್ಬು ಬೆಳಕು ಹೊರಹೊಮ್ಮಿಬರುತ್ತಿತ್ತು. ಪ್ರಭುದೇವ ಹಾಲುಬೆಳದಿಂಗಳಿನಲ್ಲಿ ಮೀಯುತ್ತಾ ಇನ್ನೂ ತಿರುಗಾಡುತ್ತಲೇ ಇದ್ದ. ತನ್ನ ಪ್ರಯೋಗದ ಫಲಿತಾಂಶವನ್ನು ನಿರೀಕ್ಷಿಸುತ್ತಿರುವ ವಿಜ್ಞಾನಿಯ ಕುತೂಹಲ ಆತನಲ್ಲಿ ಕಾಣುತ್ತಿತ್ತು.

ಮಹಾಮನೆಯ ಮಂತ್ರಿ ಶಾಖೆಯತ್ತಣಿಂದ ಬಸವೇಶ್ವರ ಹೊರಗೆ ಬಂದ. ಅವನನ್ನು ಕೇಳಿದ ಪ್ರಭು :

"ಏನು ಬಸವಣ್ಣ, ಇಂದಿನ ಕಾಯಕ ಮುಗಿಯಿತೇ ?"

"ಮುಗಿಯಿತು, ಪ್ರಭುವೇ. ಅರಮನೆಯ ಭಂಡಾರದ ಲೆಕ್ಕ ಸರಿಯಾಗಿಲ್ಲ ಎಂದು ಯಾರೋ ಹೇಳಿದರಂತೆ ರಾಜರಿಗೆ. ಅದರ ವಿಚಾರಣೆಗೆ ಮಧ್ಯಾಹ್ನ ಅಷ್ಟು ಅವಸರದಿಂದ ರಾಜರು ನನ್ನನ್ನು ಕರೆಸಿದರು. ಇದ್ದಕ್ಕಿದ್ದಂತೆಯೇ ಭಂಡಾರದ ಹಣವನ್ನೆಲ್ಲಾ ಲೆಕ್ಕಮಾಡಿಸಿ ನೋಡಿದರು. ನಾನು ಭಂಡಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದೇನೆಂದು ರಾಜರ ಬಳಿ ಹೇಳಿದ್ದನಂತೆ ಮಂಚಣ್ಣ. ಆದರೆ ಕೊನೆಯ ಕಾಸಿನವರೆಗೂ ಲೆಕ್ಕ ಸರಿಯಾಗಿತ್ತು. ಮಹಾರಾಜರೇ ಹೇಳಿ, ಕೊಡಿಸಿದ ಒಂದೆರಡು ಲೆಕ್ಕಗಳನ್ನು ಮಾತ್ರ ಕರುಣಿಕರು ಬರೆದಿರಲಿಲ್ಲ. ನಾನು ಅದನ್ನು ಜ್ಞಾಪಿಸಿಕೊಟ್ಟೆ, ಒಪ್ಪಿದರು. ಅದನ್ನು ಮರೆಯುವುದಕ್ಕೆ ಮುನ್ನ ಪುಸ್ತಕದಲ್ಲಿ ಬರೆಸಿಡಬೇಕೆಂದು ನಿರ್ಧರಿಸಿ ಕರಣಿಕರಿಗೆ ಮನೆಗೆ ಬರುವಂತೆ ಹೇಳಿದ್ದೆ, ಇಷ್ಟು ಹೊತ್ತು ಅದನ್ನೇ ಬರೆಸುತ್ತಿದ್ದೆ. ಈಗದು ಮುಗಿಯಿತು." ವಿಷಯವನ್ನು ವಿವರಿಸಿದ ಬಸವೇಶ್ವರ.

"ಆ ಮಂಚಣ್ಣ ನಿಮಗೆ ಬಹಳ ಕಿರುಕುಳವನ್ನು ಕೊಡುತ್ತಿದ್ದಾನೆ ಅಲ್ಲವೇ? ಬಿಜ್ಜಳನೂ ಅವನ ಮಾತಿಗೆ ಹೆಚ್ಚಾಗಿ ಕಿವಿಕೊಡುವಂತೆ ತೋರುತ್ತದೆ ?" ಪ್ರಭು ಕೇಳಿದ.

"ನಿಮ್ಮ ದಯೆಯಿಂದ ಅದಾವುದೂ ನನಗೆ ಏನೂ ಮಾಡುವಂತಿಲ್ಲ. ನನ್ನ ಮೇಲೆ ಅಪವಾದವನ್ನು ತರಲು ಹೋಗಿ ಅವನೇ ಸಿಕ್ಕಿಬೀಳುತ್ತಿದ್ದಾನೆ. ನನಗಿರುವ ಒಂದು ಸಂಕಟವೆಂದರೆ, ಜನತೆಯ ಉದ್ಧಾರದ ಧರ್ಮಮಾರ್ಗದಲ್ಲಿ ಹೆಜ್ಜೆ ಹೆಜ್ಜೆಗೂ ಕಂಟಕವನ್ನು ತಂದೊಡ್ಡುತ್ತಿದ್ದಾನೆ."

"ನಿನ್ನ ಧರ್ಮದ ಕ್ರಾಂತಿ ಸ್ವಲ್ಪ ನಿಧಾನವಾಗಿಯೇ ಹೆಜ್ಜೆಯನ್ನಿಡಲಿ ಬಸವಣ್ಣ. ಸಮಾಜದಲ್ಲಿ ಬಹುಕಾಲದಿಂದ ರೂಢಮೂಲವಾಗಿ ಬಂದ ಅಜ್ಞಾನವನ್ನು ಒಂದೇ ಏಟಿಗೆ ಕತ್ತರಿಸುವುದು ಅಪಾಯಕಾರಿಯಾಗಲೂ ಬಹುದು. ಅದನ್ನು ಅಲ್ಲಾಡಿಸಿ ಬೇರನ್ನು ಸಡಿಲಗೊಳಿಸಿ ಕಿತ್ತು ಹಾಕಬೇಕಾಗುತ್ತದೆ. ಎಚ್ಚರಿಕೆಯಿಂದ ಹೆಜ್ಜೆಯನ್ನಿಡಬೇಕಾಗುತ್ತದೆ" ಪ್ರಭು ಎಚ್ಚರಿಸಿದ.

"ನಿಜ, ಪ್ರಭುವೇ. ಆದರೂ ಸಮಾಜದಲ್ಲಿ ನಡೆಯುವ ಅನ್ಯಾಯವನ್ನು ಕಂಡು ಒಮ್ಮೊಮ್ಮೆ ರೋಷ ಉಕ್ಕೇರುತ್ತದೆ. ನಾಳೆ ಆಗುವ ಕ್ರಾಂತಿ ಇಂದೇ ಆಗಹೋಗಲಿ ಎನಿಸುತ್ತದೆ."

"ಆತುರಗೊಳ್ಳಬೇಡ, ಬಸವಣ್ಣ. ಅದಕ್ಕೆಲ್ಲ ಅತೀತವಾಗಿ ನಿಂತುನೋಡುವ ಸಾಕ್ಷಿಪ್ರಜ್ಞೆ ಬಲವತ್ತರವಾಗಿ ಬೆಳೆಯಬೇಕು. ನೀನೇನು ಅರಿಯದವನಲ್ಲ." ಕ್ಷಣಕಾಲ ಮೌನವಾವರಿಸಿತು. ಅನಂತರ ಬಸವಣ್ಣ ಮಾತನ್ನು ಬೇರೆಯ ಕಡೆಗೆ ತಿರುಗಿಸುತ್ತಾ ಹೇಳಿದ :

"ಅದಿರಲಿ... ಇಂದು ಮಹಾದೇವಿ ತಮ್ಮ ಬಳಿ ಅನುಭಾವದ ಜಿಜ್ಞಾಸೆಗೆ ಬಂದಂತೆ ತೋರುವುದಿಲ್ಲ ?"

"ಅದನ್ನೇ ನಾನು ನಿರೀಕ್ಷಿಸಿ ಇಲ್ಲಿ ತಿರುಗಾಡುತ್ತಿದ್ದೆ ಬಸವಣ್ಣ. ಚರ್ಚೆ ಜಿಜ್ಞಾಸೆಗಳನ್ನು ಮೀರಿ ನಿಂತಿರುವ ಮಹಾಬೆಳಗನ್ನು ಇಂದು ಆ ಮಹಾಚೇತನ ಪಡೆಯಬೇಕಾಗಿದೆಯೆಂದು ನಿರೀಕ್ಷಿಸಿ ಹಾರೈಸುತ್ತಿದ್ದೇನೆ."

ಮಾತು ಮುಗಿಯುವುದರೊಳಗೆ ನೀಲಾಂಬಿಕೆ ಬಳಿಗೆ ಬರುತ್ತಿರುವುದನ್ನು ಕಂಡು ಪ್ರಭುದೇವ ಕೇಳಿದ. "ಏನು ತಾಯಿ, ಮುಗಿಯಿತೆ ನಿನ್ನ ನಿತ್ಯದ ಕರ್ಮಯೋಗ? ಮಹಾದೇವಿ ಎಲ್ಲಿ ?"

"ಅದನ್ನೇ ಹೇಳುವುದಕ್ಕೆ ಬಂದೆ, ಸ್ವಾಮಿ." ನೀಲಮ್ಮ ಹೇಳತೊಡಗಿದಳು: "ಎಂದಿಗಿಂತ ಮುಂಚೆಯೇ ಸ್ನಾನಮಾಡಿ ಪೂಜೆಗೆ ಹೋದಳು ಮಹಾದೇವಿ ಇಷ್ಟು ಹೊತ್ತಾದರೂ ಹೊರಗೆ ಬರಲಿಲ್ಲ. ಅದಕ್ಕಾಗಿ ಕುತೂಹಲಗೊಂಡು ಮೆಲ್ಲನೆ ಒಳಗೆ ಹೋದೆ. ಆ ಮಂಗಳಕರವಾದ ದೃಶ್ಯವನ್ನು ಕಂಡು ಚಕಿತಳಾದೆ.

ಮಹಾದೇವಿ ಮಹದೇವನ ಅನುಸಂಧಾನದಲ್ಲಿ ಲೀನಳಾಗಿ ಸಮರಸಗೊಂಡಂತೆ ತೋರುತ್ತದೆ."

ತನ್ನ ನಿರೀಕ್ಷೆ ಫಲಿಸಿದ ಸಂತೋಷದಿಂದಲೆಂಬಂತೆ ಪ್ರಭುದೇವ ಬಸವಣ್ಣನತ್ತ ನೋಡಿದ.

"ಆ ಮಂಗಳದೃಶ್ಯವನ್ನು ನೋಡಬಹುದಲ್ಲವೇ, ಪ್ರಭುವೇ ?" ಬಸವಣ್ಣ ತನ್ನ ಕುತೂಹಲವನ್ನು ವ್ಯಕ್ತಪಡಿಸಿದ.

"ನಡಿ ಬಸವಣ್ಣ. ನಿನ್ನ ಮಂಗಳಮಯವಾದ ದೃಷ್ಟಿಯ ರಕ್ಷಣೆಯನ್ನು ಆಕೆಗೆ ಕೊಡು" ಎಂದು ಬಸವಣ್ಣನನ್ನು ಕರೆದುಕೊಂಡು ಅಕ್ಕನ ಪೂಜಾ ಗೃಹದತ್ತ ನಡೆಯತೊಡಗಿದ. ನೀಲಾಂಬಿಕೆ ಮುಂದೆ ನಡೆಯುತ್ತಾ ಒಳಗೆ ಕರೆದುಕೊಂಡು ಹೋದಳು.

ಬೆಳಕಿನ ಮಹಾಸಾಗರದಲ್ಲಿ ತನ್ನ ಅಂತರಂಗವನ್ನು ತೇಲಿಬಿಟ್ಟ ಮಹಾದೇವಿ ಅರುಹಿನ ಕುರುಹೇ ಮೂರ್ತಿಗೊಂಡಂತೆ ಅಚಲವಾಗಿ ಕುಳಿತಿದ್ದಾಳೆ. ದಿವ್ಯವಾದ ಬೆಳಕಿನ ಪ್ರಭೆಯೊಂದು ಅವಳ ದೇಹದ ಸುತ್ತ ತಿರುಗುತ್ತಿರುವಂತೆ ತೋರುತ್ತಿದೆ. ಪೂಜಾಗೃಹವೆಲ್ಲಾ ಅವಳ ಉಸಿರಿನ ಸುಗಂಧದಿಂದ ಪರಿಮಳಿತವಾಗಿದೆ.

ಪ್ರಭುದೇವ ಮತ್ತು ಬಸವಣ್ಣ ತುಂಬಿದ ಹೃದಯದಿಂದ ಅವಳನ್ನು ನೋಡಿದರು. ಅವಳ ಎದುರಿಗೆ ಅವರ ತಲೆಬಾಗಿತು :

"ಎಷ್ಟು ಹೊತ್ತಾಯಿತು ತಾಯಿ, ಮಹಾದೇವಿ ಪೂಜೆಗೆ ಕುಳಿತು ?" ನೀಲಾಂಬಿಕೆಯನ್ನು ಕೇಳಿದ ಪ್ರಭುದೇವ.

"ತುಂಬಾ ಹೊತ್ತಾಯಿತು, ಸ್ವಾಮಿ. ಎಂದಿಗಿಂತ ಬಹಳ ಮುಂಚಿತವಾಗಿಯೇ ಪ್ರಾರಂಭಿಸಿದಳು ಈ ದಿನ." ನೀಲಮ್ಮ ಹೇಳಿದಳು.

ಪ್ರಭುದೇವ ಬಸವಣ್ಣನತ್ತ ನೋಡಿದ. ಬಸವಣ್ಣನಿಗೂ ಅರ್ಥವಾಗಿತ್ತು. ಆತ ಕೇಳಿದ : "ಅಕ್ಕನನ್ನು ಈ ನಿಲವಿನಿಂದ ಕರೆದುತರುವುದು ತಾತ್ಕಾಲಿಕವಾಗಿಯಾದರೂ ಅವಶ್ಯಕವಲ್ಲವೇ, ಪ್ರಭುವೇ ?"

"ಹೌದು, ಬಸವಣ್ಣ. ಇನ್ನು ಆ ನಿಲವು ಅಕ್ಕನಿಗೆ ಬಯಸಿದಾಗ ಕೈಗೂಡುವ ಸಹಜಸ್ಥಿತಿಯಾಗಿ ಪರಿಣಮಿಸುತ್ತದೆ. ಅದಕ್ಕಾಗಿ ಅವಳನ್ನು ಈಗ ಕ್ರಮೇಣ ಕೆಳಗಿಳಿದುಬರುವಂತೆ ಮಾಡಬೇಕು."

ಇವರ ಈ ಮಾತುಗಳು ಮಹಾದೇವಿಯ ಕಿವಿಯ ಮೇಲೆ ಬೀಳುತ್ತಿದ್ದರೂ ಅದರಿಂದ ಅವಳಲ್ಲಿ ಯಾವ ಪ್ರತಿಕ್ರಿಯೆಯೂ ಆಗಲಿಲ್ಲ. ಅವಳ ಮನಸ್ಸು ಮಹಾಮನಸ್ಸಿನಲ್ಲಿ ಲೀನವಾಗಿತ್ತು. ಮನಸ್ಸಿನ ಉಪಕರಣಗಳಾದ ಇಂದ್ರಿಯಗಳೆಲ್ಲಾ

ತಮ್ಮ ಕರ್ತವ್ಯವನ್ನು ಸ್ತಬ್ಧಗೊಳಿಸಿದ್ದುವು.

ಪ್ರಭುದೇವ ಕ್ಷಣಕಾಲ ಆಲೋಚಿಸಿ ಹೇಳಿದ :

"ನನ್ನ ಕೋಣೆಯಲ್ಲಿರುವ ಏಕನಾದವನ್ನು ತರಬೇಕು, ಬಸವಣ್ಣ."

ಬಸವಣ್ಣ ಹೋಗಲು ಉದ್ಯುಕ್ತನಾಗುತ್ತಿರುವಷ್ಟರಲ್ಲಿ ನೀಲಾಂಬಿಕೆ ತಾನು ಆ ಕರ್ತವ್ಯವನ್ನು ವಹಿಸಿಕೊಂಡು ಹೊರಗೆ ನಡೆಯುತ್ತಿದ್ದಳು. ಏಕನಾದವನ್ನು ತಂದು ಪ್ರಭುವಿನ ಕೈಗಿತ್ತಳು. ಅವಳ ಜೊತೆಗೆ ಗಂಗಾಂಬಿಕೆಯೂ ಬಂದಿದ್ದಳು.

ಪ್ರಭುದೇವ ಏಕನಾದವನ್ನು ಕೈಗೆ ತೆಗೆದುಕೊಂಡ. ಮಹಾದೇವಿಗೆ ಸ್ವಲ್ಪ ದೂರದಲ್ಲಿ ಪೂಜೆಯ ಮಣೆಯ ಮೇಲೆ ಕುಳಿತ. ಅದರ ಇನ್ನೊಂದು ಪಕ್ಕದಲ್ಲಿ ಬಸವಣ್ಣ ಮತ್ತು ಗಂಗಾಂಬಿಕೆ, ನೀಲಾಂಬಿಕೆಯರು ಕುಳಿತರು.

ಏಕನಾದದ ತಂತಿಯ ಕಂಪನ ತನ್ನ ಶಬ್ದದ ಅಲೆಗಳನ್ನು ಕೋಣೆಯಲ್ಲೆಲ್ಲಾ ತುಂಬಿತು. ಅದರ ಹಿಂದೆಯೇ ಹೊರಟಿತು ಪ್ರಭುವಿನ ಗಂಭೀರವಾದ ವಾಣಿ. ಪ್ರಣವಪಂಚಾಕ್ಷರಿ ಮಂತ್ರವನ್ನು ನಾಲ್ಕಾರುಬಾರಿ ಘೋಷಿಸಿದ ಪ್ರಭು ಅನಂತರ ಒಂದು ಹಾಡನ್ನು ಹೇಳತೊಡಗಿದ:

ನಿಬ್ಬಣವೇನಾ ತ್ರಿಜಗದೊಳಗೆ ।
ಮದುಮಕ್ಕಳ ಸುದ್ದಿಯ ಹೇಳಿರಮ್ಮ ॥ಪ॥
ಹೆಂಡತಿ ಗಂಡನ ಹಡೆದು ತೊಟ್ಟಿಲಗಟ್ಟಿ ।
ಹಾಡಿ ಹರಸಿ ಮೈಮರೆದಾಳು ॥೧॥
ಪುರುಷರತ್ನವೆಂಬ ಪುತ್ರ ಜನಿಸಿಲಾಗಿ ।
ಕಂಡವರೈವರು ಕಂಡು ಬೆರಗಾದರು ॥೨॥
ಮದುಮಕ್ಕಳ ನಿಲೆ ಮದುವೆಯ ಮಾತಲ್ಲ ।
ಗುಹೇಶ್ವರಲ್ಲಯ್ಯ ತಾನದ ಬಲ್ಲ ॥೩॥

ಗಂಭೀರವಾದ ಧ್ವನಿ ಕೋಣೆಯನ್ನೆಲ್ಲಾ ತುಂಬಿ ಹೊರಹೊಮ್ಮುತ್ತಿರುವಂತೆ ಹೇಳತೊಡಗಿದ್ದ ಪ್ರಭು.

ಹಾಡು ಮುಗಿಯುವ ವೇಳೆಗೆ ಮಹಾದೇವಿಯ ನಿಶ್ಚಲದೇಹದಲ್ಲಿ ಸ್ವಲ್ಪ ಚಲನೆ ಕಂಡುಬಂದಿತು. ಮತ್ತೆ ನಾಲ್ಕಾರುಬಾರಿ ಮಂತ್ರಘೋಷವನ್ನು ಮಾಡಿದರು. ಹಿಮಾಲಯದ ಉತ್ತುಂಗಶಿಖರದಿಂದ ಇಳಿದುಬರುವವಳಂತೆ ಕ್ರಮೇಣ ಧ್ಯಾನಶ್ರೀ ಗಿರಿಯಿಂದ ಕೆಳಗಿಳಿಯತೊಡಗಿದ್ದಳು.

ಸಂಪೂರ್ಣವಾಗಿ ಎಚ್ಚೆತ್ತು ಸುತ್ತಲೂ ನೋಡಿದಳು. ಅಂತರಂಗದಲ್ಲಿ ಕಂಡ ಶಿವನೇ ಬಹಿರಂಗದಲ್ಲಿಯೂ ಬಹುರೂಪವಾಗಿ ಕಾಣುವಂತೆ ಎಲ್ಲರೂ ಗೋಚರಿಸಿದರು.

ಪ್ರಭುದೇವನ ಕೈಯ ಏಕನಾದ ಒಂದೇ ಸಮನೆ ಮಿಡಿಯುತ್ತಿತ್ತು. ಅದರಿಂದ ಸ್ಫೂರ್ತಿಗೊಂಡವಳಂತೆ ಮಹಾದೇವಿ ತನ್ನ ಅನುಭವವನ್ನು ಹಾಡತೊಡಗಿದಳು.

ಘನವ ಕಂಡೆ, ಅನುವ ಕಂಡೆ, ಆಯತವ ಕಂಡೆ,
ಸ್ವಾಯತವ ಕಂಡೆ, ಸನ್ನಿಹಿತವ ಕಂಡೆ ;
ಅರಿವನರಿದು ಮರಹ ಮರೆದೆ
ಕುರುಹಿನ ಮೋಹದ ಮರವೆಯನೀಡಾಡಿದೆ
ಚನ್ನಮಲ್ಲಿಕಾರ್ಜುನಾ ; ನಿಮ್ಮನರಿದು ಸೀಮೆಗೆಟ್ಟೆನು.

"ಹೌದು ಮಹಾದೇವಿ, ಅವನನ್ನರಿದು ನೀನು ನಿಸ್ಸೀಮಳಾಗಿದ್ದೀಯ. ಇಂದು ಅರಿವಿನ ಸ್ವಯಂಪ್ರಭೆಯ ಮೂರ್ತಿಯಾಗಿ ಪರಿಣಮಿಸಿದ್ದೀಯ." ಅಲ್ಲಮಪ್ರಭು ಉದ್ಗರಿಸಿದ.

ಆ ಮಾತು ಅವಳಿಗೆಲ್ಲೋ ಕನಸಿನಲ್ಲಿ ನುಡಿದಂತೆ ತೋರಿತು. ಅನುಭಾವ ಸಾಗರದಲ್ಲಿ ಬೆಳಕಿನ ದೇಹವನ್ನು ಹೊತ್ತು ಇನ್ನೂ ಈಜುತ್ತಿರುವಂತೆಯೇ ಆಕೆಗೆ ಅನಿಸುತ್ತಿತ್ತು ; ಆ ಪರಮಾನಂದದ ಅಲೆಗಳ ಮೇಲೆ ತೇಲುತ್ತಿರುವಂತೆ ಅತ್ತಿತ್ತ ಒಲೆಯುತ್ತಾ ಮತ್ತೆ ಹೇಳಿದಳು.

ಲಿಂಗವೆನ್ನೆ ಲಿಂಗೈಕ್ಯವೆನ್ನೆ ; ಸಂಗವೆನ್ನೆ, ಸಮರಸವೆನ್ನೆ,
ಆಯಿತೆನ್ನೆ, ಆಗದೆನ್ನೆ ; ನೀನೆನ್ನೆ, ನಾನೆನ್ನೆ,
ಚನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವಾದ ಬಳಿಕ ಏನೂ ಎನ್ನೆ.

ಈಗ ಬಸವಣ್ಣ ಹೇಳಿದ : "ಸಾವಿಲ್ಲದ ಕೇಡಿಲ್ಲದ ಚಲುವನ್ನ ಒಲಿದು, ನೀನು ಸಾಕ್ಷಾತ್ ಮಹಾದೇವಿಯೇ ಆಗಿದ್ದೀಯ, ತಾಯಿ."

ಮಹಾದೇವಿ ಅತ್ತಿತ್ತ ನೋಡುತ್ತಿದ್ದರೂ ತನ್ನದೇ ಲೋಕದಲ್ಲಿದ್ದವಳಂತೆ ಮತ್ತೆ ಹೇಳತೊಡಗಿದಳು :

ಮೂಲಾಧಾರದ ಬೇರ ಮೆಟ್ಟಿ ಭೂಮಂಡಲವನ್ನೇರಿದೆ ;
ಆಧಾರದ ಬೇರು ಹಿಡಿದು, ಐಕ್ಯದ ತುದಿಯನ್ನೇರಿದೆ ;
ವೈರಾಗ್ಯದ ಸೋಪಾನದಿಂದ ಶ್ರೀಪರ್ವತವನ್ನೇರಿದೆ ;
ಕೈವಿಡಿದು ತೆಗೆದುಕೊಳ್ಳಾ ಚೆನ್ನಮಲ್ಲಿಕಾರ್ಜುನಾ.

"ನಿಜ ಮಹಾದೇವಿ ; ಆದರೆ ಈ ಪರ್ವತಾಗ್ರದಿಂದ ಈಗ ಇಳಿದು ಬಾ ತಾಯಿ. ಇದೋ ನಿನ್ನ ತಾಯಂದಿರು ನಿನ್ನನ್ನು ಕರೆಯುತ್ತಿದ್ದಾರೆ" ಎನ್ನುತ್ತಾ ಪ್ರಭುದೇವ, ಗಂಗಾಬಿಕೆ ನೀಲಾಂಬಿಕೆಯರತ್ತ ನೋಡಿದ. ಇಬ್ಬರೂ ಮುಂದೆ ಸರಿದು ಮಹಾದೇವಿಯ ಬಳಿಗೆ ಬಂದು ಅವಳ ಮೈದಡವುತ್ತಾ ಸಂತೈಸತೊಡಗಿದರು. ಅವರ ಸ್ಪರ್ಶದಿಂದ ಮಹಾದೇವಿ ಸಂಪೂರ್ಣವಾಗಿ ಎಚ್ಚೆತ್ತವಳಂತೆ ಕಾಣಿಸಿದಳು. ನಿದ್ದೆಯ ಆಚೆಗಿನ ಅರಿವಿನ ಎಚ್ಚರದಿಂದ ಇಳಿದು ಈಗ ಜಾಗ್ರದವಸ್ಥೆಗೆ ಬಂದಂತೆ ತೋರಿತು.

"ಎಲ್ಲರನ್ನೂ ಗುರುತಿಸುವವಳಂತೆ ನೋಡಿ ಅವರಿಗೆ ನಮಸ್ಕರಿಸಲು ಉದ್ಯುಕ್ತಳಾಗುತ್ತಿದ್ದಂತೆಯೇ :

"ಅದೆಲ್ಲಾ ಬೇಡ, ಮಹಾದೇವಿ." ಪ್ರಭು ಹೇಳಿದ : "ಮನವೇ ಲಿಂಗವಾದ ಬಳಿಕ ನೆನೆವುದಿನ್ನಾರನ್ನು ? ಭಾವವೇ ಐಕ್ಯವಾದ ಬಳಿಕ ಬಯಸುವುದಿನ್ನಾರನ್ನು? ಭ್ರಮೆಯಳಿದು ನಿಜವು ಸಾಧ್ಯವಾದ ಬಳಿಕ ನಾ ನೀನೆಂಬ ಭೇದವಳಿದು, ಪೂಜ್ಯ ಪೂಜಕರೆಂಬ ಸಂಬಂಧವೂ ಅಡಗಿ, ಸ್ವಯಂ ಪೂರ್ಣತೆಯಲ್ಲಿ ಲೀನವಾಗುತ್ತದೆ."

"ನಿಜ ಪ್ರಭುವೇ, ನಿಮ್ಮ ದಯೆಯಿಂದ ಇಂದು ನನಗೆ ಅದು ಲಭಿಸಿತು:

ತನು ನಿಮ್ಮ ರೂಪಾದ ಬಳಿಕ ನಾನಾರಿಗೆ ಮಾಡುವೆ ;
ಮನ ನಿಮ್ಮ ರೂಪಾದ ಬಳಿಕ ನಾನಾರನಾರಾಧಿಸುವೆ !
ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ನಾನಾರನರಿವೆ !
ಚನ್ನಮಲ್ಲಿಕಾರ್ಜುನಾ ನಿಮ್ಮಲ್ಲಿ ನೀವಾಗಿ ನಿಮ್ಮಿಂದ ನಿಮ್ಮ ಮರೆದೆನಯ್ಯ.

"ಇದೇ ಸತಿಪತಿಭಾವದ ಉಚ್ಚತಮವಾದ ನಿಲುವು. ನಿನ್ನಂತರಂಗದ ಮಧುರಭಕ್ತಿ, ಸಮರಸದ ಅಮರತ್ವವನ್ನು ಪಡೆದು ಧನ್ಯವಾಯಿತು." ಪ್ರಭುದೇವ ಮೆಚ್ಚಿ ನುಡಿದ.

"ಇಂತಹ ಸಮರಸದ ಅಮರಸತಿಯನ್ನು ಪಡೆದು ಕಲ್ಯಾಣವೇ ಧನ್ಯವಾಯಿತು ಪ್ರಭುವೇ" ಬಸವಣ್ಣನೂ ದನಿಗೂಡಿದ.

ಗಂಗಾಂಬಿಕೆ, ನೀಲಾಂಬಿಕೆಯರು ಮಹಾದೇವಿಯನ್ನು ಪೂಜಾಗೃಹದಿಂದ ಹೊರಗೆ ಕರೆದುಕೊಂಡು ಬಂದರು. ಪ್ರಸಾದನಿಲಯದತ್ತ ತಿರುಗಿದರು. ಬಸವಣ್ಣ ಪ್ರಭುದೇವರು ಮಹಾಮನೆಯ ಮುಂಭಾಗದ ವಿಶಾಲವಾದ ಬಯಲಿನಲ್ಲಿ ಶಿಲಾಪೀಠದ ಕಡೆಗೆ ನಡೆಯತೊಡಗಿದರು.

ಆಕಾಶದಲ್ಲಿ ಮೇಲೇರಿಬರುತ್ತಿದ್ದ ಚಂದ್ರನ ಹಾಲುಕಿರಣಗಳು ಭೂಮಿಯನ್ನು ತಬ್ಬಿ ತಣಿಸುತ್ತಿದ್ದುವು. ಅಮೃತದತ್ತ ಕಡಲಿನಲ್ಲಿ ತೇಲುತ್ತಿರುವ ಧರ್ಮದ ನೌಕೆಯಂತೆ,

ಮಹಾಮನೆ. ಮಹಿಮಾನ್ವಿತವಾದ ಮೌನವನ್ನು ಬೀರುತ್ತಾ ಧ್ಯಾನ್ಯಲೀನವಾದಂತಿತ್ತು. ಅಧ್ಯಯನದಲ್ಲಿ ತೊಡಗಿದ್ದ ಚನ್ನಬಸವ ಸಿದ್ಧರಾಮರು ತಮ್ಮ ಕೋಣೆಯಿಂದ ಪ್ರಭುದೇವ ಬಸವರನ್ನು ಕಂಡು ಹೊರಗೆ ಬಂದರು.

ಆ ಪ್ರಶಾಂತವಾದ ಮಂಗಳಕರ ಸನ್ನಿವೇಶದಲ್ಲಿ, ಮಂಗಳಮಯಿ ಮಹಾದೇವಿಯ ಮಹೋನ್ನತವಾದ ಸಾಕ್ಷಾತ್ಕಾರದ ಮಾತು, ಈ ಶರಣರ ಅನುಭಾವದ ವಿಷಯವಾಗಿ ಪರಿಣಮಿಸಿತು. ಇದನ್ನು ಕೇಳಿ ಧನ್ಯತೆಯ ಉದ್ಗಾರವನ್ನು ತೆಗೆಯುವಂತೆ ಚಂದ್ರ ಉತ್ಸಾಹಗೊಂಡು ದ್ವಿಗುಣವಾದ ತನ್ನ ಕಾಂತಿ ಕಿರಣಗಳನ್ನು ಸುರಿಸತೊಡಗಿದನು.

೫

ಮಹಾದೇವಿ ಇನ್ನು ಬಹುಕಾಲ ಕಲ್ಯಾಣದಲ್ಲಿ ಇರಲಾರಳೆಂಬ ಪ್ರಭುದೇವನ ಊಹೆ ನಿಜವಾಗಿ ಪರಿಣಮಿಸಿತು. ಮರುದಿನವೇ ಆಕೆ ತನ್ನ ಆಕಾಂಕ್ಷೆಯನ್ನು ತಿಳಿಸಲು ಪ್ರಭುದೇವನ ಬಳಿಗೆ ಬಂದಳು. ಬಸವಣ್ಣ, ಚನ್ನಬಸವಣ್ಣರೂ ಆಗ ಅಲ್ಲಮನ ಬಳಿಯಲ್ಲಿದ್ದರು.

ಪ್ರಭು ಮಹಾದೇವಿಯನ್ನು ನೋಡಿ ಮಂದಹಾಸವನ್ನು ಬೀರುತ್ತಾ :

"ಬಿಂದು ಸಿಂಧುವನ್ನು ಸೇರಿದಂತಾಯಿತೇ, ಮಹಾದೇವಿ ?"

"ಅಲ್ಲ ಪ್ರಭುವೇ, ನನಗನಿಸುತ್ತದೆ ಸಾಗರವು ಸಾಗರವನ್ನು ಸೇರಿದಂತಾಯಿತು ಎಂದು". ಅಕ್ಕನಿಗಿಂತ ಮೊದಲು ಚನ್ನಬಸವಣ್ಣ ಉತ್ತರಿಸಿದ.

"ಚೆನ್ನಾಗಿ ಹೇಳಿದೆ, ಚನ್ನಬಸವ." ಪ್ರಭು ಉತ್ತರಿಸಿದ.

"ಈ ಅನುಭಾವದ ಮಥನದಿಂದ ಕಲ್ಯಾಣದ ಕಡಲು ಭಕ್ತಿ ಸಾಗರದಲ್ಲಿ ಉಕ್ಕಿ ಹರಿಯುತ್ತಿದೆ" ಬಸವಣ್ಣ ಮಹಾದೇವಿಯ ಸಾಧನೆಯನ್ನು ಹೊಗಳಿದ.

ಅಕ್ಕಮಹಾದೇವಿ ವಿನೀತಳಾಗಿ ಹೇಳಿದಳು: "ಈ ಸಾಧನೆಯೆಲ್ಲಾ ನಿಮ್ಮ ಪ್ರಸಾದ"

ಎನ್ನ ಭಕ್ತಿ ನಿಮ್ಮ ಧರ್ಮ.
ಎನ್ನ ಜ್ಞಾನ ಪ್ರಭುದೇವರ ಧರ್ಮ.
ಎನ್ನ ಪರಿಣಾಮ ಚನ್ನಬಸವಣ್ಣನ ಧರ್ಮ.
ಈ ಮೂವರೂ ಒಂದೊಂದು ಕೊಟ್ಟರೆನಗೆ ; ಮೂರು ಭಾವವಾಯಿತ್ತು.
ಆ ಮೂರನ್ನು ನಿಮ್ಮಲ್ಲಿ ಸಮರ್ಪಿಸಿದ ಬಳಿಕ ಎನಗಾವ ಜಂಜಡವಿಲ್ಲ
ಚನ್ನಮಲ್ಲಿಕಾರ್ಜುನದೇವರ ನೆನಹಿನಲ್ಲಿ ಕರುಣದ ಶಿಶು ನಾನು ಕಾಣಾ

ಸಂಗನ ಬಸವಣ್ಣ.

"ಹೌದು, ತಾಯಿ... ಬಸವಣ್ಣನ ಕರುಣೆಯ ಶಿಶುವಾಗಿ ಇನ್ನು ಈಗ ಕಲ್ಯಾಣದಲ್ಲಿ ಬಹುಕಾಲ ನಿನ್ನ ಕಾಂತಿಯನ್ನು ಬೀರು, ತಾಯಿ." ಪ್ರಭು ಹೇಳಿದ.

ತಾನು ಹೇಳಲು ಬಂದ ಮುಖ್ಯವಾದ ಮಾತನ್ನು ನಿರೂಪಿಸಲು ಈ ಅವಕಾಶ ಸಿಕ್ಕಂತಾಯಿತು ಮಹಾದೇವಿಗೆ.

"ಕ್ಷಮಿಸಬೇಕು, ಪ್ರಭುವೇ. ಅದನ್ನು ಕುರಿತು ಅರಿಕೆ ಮಾಡಿಕೊಳ್ಳಬೇಕೆಂದೇ ಈಗ ಇಲ್ಲಿಗೆ ಬಂದಿದ್ದೇನೆ. ಈ ಅಣ್ಣನ ಕರುಣೆಯ ಶಿಶುವಾಗಿ ನಾನಿಲ್ಲಿಗೆ ಬಂದೆ. ನಿಮ್ಮ ವರಪ್ರಸಾದದಿಂದ ನನ್ನ ಮೆಚ್ಚಿನ ವರನನ್ನು ಪಡೆದೆ. ಇನ್ನು ಅವನ ಬಳಿಗೆ ಹೋಗಲು ಅಪ್ಪಣೆಯನ್ನು ಅನುಗ್ರಹಿಸಬೇಕು" ಎಂದು ಪ್ರಾರಂಭಿಸಿ ಮಹಾದೇವಿ ತನ್ನ ಮನೋಗತವಾದ ಅಭಿಪ್ರಾಯಗಳನ್ನೆಲ್ಲಾ ತಿಳಿಸಿದಳು.

ಶ್ರೀಶೈಲಪರ್ವತ ಹೀಗೆ ಅವಳನ್ನು ಕೈಬೀಸಿ ಕರೆಯುತ್ತಿದೆಯೆಂಬುದನ್ನು ಮೊದಲೇ ತಿಳಿದಿದ್ದ ಪ್ರಭು ಇದರಿಂದ ಆಶ್ಚರ್ಯಗೊಳ್ಳಲಿಲ್ಲ. ಆದರೆ ಬಸವಣ್ಣನನ್ನು ಒಪ್ಪಿಸುವುದು ಸ್ವಲ್ಪ ಕಷ್ಟವೇ ಆಯಿತು. ಇಷ್ಟು ಜಾಗ್ರತೆ ಕಲ್ಯಾಣ, ಮಹಾದೇವಿಯನ್ನು ಕಳೆದುಕೊಳ್ಳಬೇಕಾಗಬಹುದೆಂದು ಊಹಿಸಿರಲಿಲ್ಲ. ಅವಳ ನಿರ್ಧಾರವನ್ನು ಕದಲಿಸಲು ಪ್ರಯತ್ನಿಸಿದ.

"ಇದೇಕೆ ಮಹಾದೇವಿ, ಇನ್ನೂ ನಿನಗೆ ಈ ಭ್ರಾಂತಿ ! ನಿನ್ನ ಹೃದಯದಲ್ಲಿ ಏಕರಸವಾಗಿ ಬೆರೆತು ಎರಡಿಲ್ಲದಂತಿರುವವನು ಆ ಚನ್ನಮಲ್ಲಿಕಾರ್ಜುನ. ಅವನನ್ನು ಕಾಣಲು ಶ್ರೀಶೈಲಕ್ಕೆ ನೀನು ಹೋಗಬೇಕೆ ! ಕದಳಿವನದಲ್ಲಿಯೇ ಅವನನ್ನು ಕಂಡುಕೊಳ್ಳಬೇಕೇ ?"

"ಇಲ್ಲ, ಅಣ್ಣಾ ! ನಿನ್ನ ದಯೆಯಿಂದ ಆ ಭ್ರಾಂತಿ ನನಗಿಲ್ಲ." ಹೇಳಿದಳು ಮಹಾದೇವಿ. "ಶ್ರೀಗಿರಿಯೇ ನಿನ್ನ ಸಾನಿಧ್ಯವನ್ನು ಬಯಸಿ ಬರುವಂತೆ ಮಾಡುವ ಮಹಾಮಹಿಮ ನೀನು. ಆ ಶ್ರೀಗಿರಿಯೇ ನನ್ನ ಹೃದಯಕಮಲದಲ್ಲಿಯೂ ಮೂಡಿ ನಿಂತಿದೆ ನಿಜ. ಆದರೆ ಅಲ್ಲಿ ಜ್ಯೋತಿರ್ಲಿಂಗಸ್ವರೂಪನಾಗಿ ಮೂಡಿರುವ ಮಲ್ಲಿಕಾರ್ಜುನನನ್ನು ಅಗಲಿ, ಈ ಅಲೌಕಿಕ ಜಗತ್ತಿನಲ್ಲಿ ಬಹು ಕಾಲ ನಾನಿನ್ನು ಇರಲಾರೆ. ಅವನ ಹೃದಯವನ್ನು ಬೆರೆದು ಎಂದೆಂದೂ ಬಿಡದ ಬಾಳುವೆಗೆ ಗುರಿಯಾಗಬೇಕೆಂದು ನನ್ನ ಅಂತರಂಗ ಆತುರಪಡುತ್ತಿದೆ. ಅದರ ಜೊತೆಗೆ ಪವಿತ್ರ ಭಾವನೆಯ ಸಂಕೇತಸ್ವರೂಪವನ್ನು ಪಡೆದಿರುವ ಬಹಿರಂಗದ ಶ್ರೀಗಿರಿಯನ್ನು ಏರಿ ಅದರ ಅಂತರಂಗದಸ್ವರೂಪವಾದ ಕದಳಿಯ ವನದಲ್ಲಿ ಈ ಭೌತದೇಹ, ಪರಿವರ್ತನೆಯನ್ನು ಪಡೆಯಲಿ ಎಂದು ನನ್ನ ಆಸೆ ಅಷ್ಟೆ."

"ಅದು ಅವಳ ಎಳೆಯತನದಿಂದ ಬೆಳೆದುಬಂದು ಸಂಸ್ಕಾರದ ಫಲ, ಬಸವಣ್ಣ. ಅದೊಂದು ಬಯಕೆ ಅರಕೆಯಾಗಿ ಉಳಿಯುವುದೇಕೆ !" ಮಹಾದೇವಿಯ ಬಯಕೆಯನ್ನು ಸಮರ್ಥಿಸುತ್ತಾ ಹೇಳಿದ ಪ್ರಭು. ಮತ್ತೆ ಮಾತನಾಡಲು ಬಸವಣ್ಣನಿಗೆ ಅವಕಾಶವೇ ಇರಲಿಲ್ಲ.

ಮಹಾದೇವಿ ಕಲ್ಯಾಣವನ್ನು ಬಿಡುವಳೆಂಬ ಸುದ್ದಿ ಕ್ಷಣಮಾತ್ರದಲ್ಲಿ ಮಹಾಮನೆಯನ್ನೆಲ್ಲಾ ವ್ಯಾಪಿಸಿತು.

ಅಂದು ಸಂಜೆಯ ಅನುಭವಮಂಟಪದ ವಿಷಯವೆಲ್ಲ ನಾಳಿನ ಅಗಲುವಿಕೆಯನ್ನು ಕುರಿತದ್ದೇ ಆಯಿತು. ಶ್ರೀಶೈಲಪರ್ವತ, ಕದಳಿಯ ವನ – ಇವುಗಳೇ ಅಂದಿನ ಪ್ರಮುಖವಾದ ವಿಷಯಗಳಾದವು. ಶ್ರೀಶೈಲ ಕ್ಷೇತ್ರವೇ ತನ್ನ ಸಾಧನೆಯ ರಂಗವಾಗಿದ್ದ ಸಿದ್ಧರಾಮ, ಅದರ ವಿವರವಾದ ಮಾರ್ಗವನ್ನೂ ವರ್ಣನೆಯನ್ನೂ ನಿರೂಪಿಸಿದ. ಗುರುಲಿಂಗದೇವರ ವರ್ಣನೆಯ ಮಾತುಗಳನ್ನು ನೆನಪಿಗೆ ತಂದುಕೊಳ್ಳುತ್ತ ಅವುಗಳನ್ನು ಕೇಳುತ್ತಿದ್ದಳು, ಮಹಾದೇವಿ.

ಕದಳಿಯ ಕಲ್ಪನೆಯ ಲಿಂಗಮ್ಮ ತನ್ನ ವಚನಗಳಲ್ಲಿ ಸಾಂಕೇತಿಕವಾಗಿ ವಿವರಿಸಿದಳು. ಮಹಾದೇವಿಯೂ ಕದಳಿಯ ಅನೇಕ ಅರ್ಥಗಳನ್ನು ಹೇಳಿ, ತನ್ನ ಅಂತರಂಗದ ಕದಳಿಯ ಕಲ್ಪನೆಯನ್ನು ಮುಂದಿಡುತ್ತಾ ಈ ವಚನದಿಂದ ಅದನ್ನು ಪೂರ್ಣಗೊಳಿಸಿದಳು :

ಕದಳಿಯೆಂಬುದು ತನು, ಕದಳಿಯೆಂಬುದು ಮನ,
ಕದಳಿಯೆಂಬುದು ವಿಷಯಂಗಳು.
ಕದಳಿಯೆಂಬುದು ಭವಘೋರಾರಣ್ಯ.
ಕದಳಿಯೆಂಬುದ ಗೆದ್ದು ತವೆ ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು.
ಭವಗೆಟ್ಟು ಬಂದ ಮಗಳೆಂದು ಕರುಣದಿಂದ ತೆಗೆದು,
ಬಿಗಿದಪ್ಪಿದರೆ ಚನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು

"ಹೌದು ಮಗಳೇ ! ಕದಳಿಯ ಅನೇಕ ಅರ್ಥಗಳನ್ನು ಚೆನ್ನಾಗಿ ಹೇಳಿದೆ. ತನು, ಮನ, ವಿಷಯ – ಈ ಎಲ್ಲ ಕದಳಿಗಳನ್ನೂ ದಾಟಿ ನೀನು ಮುಂದೆ ಹೋಗಿದ್ದೀಯ. ಕದಳಿಯ ಕರ್ಪೂರವಾಗಿ ಪರಿಮಳದ ಬೆಳಗನ್ನು ಬೀರಿದ್ದೀಯ ಶರಣರೆಲ್ಲರ ಕಣ್ಮಣಿಯಾಗಿದ್ದ ನೀನು, ಇನ್ನು ಇಲ್ಲಿಂದ ಹೊರಟು, ಅವರೆಲ್ಲರ ಸಾಧನೆಯ ಸಂದೇಶವನ್ನು ಚನ್ನಮಲ್ಲಿಕಾರ್ಜುನನ ಹೃದಯ ಕಮಲದ ರಸರಂಗದಲ್ಲಿ ತೇಲಿಬಿಡು, ತಾಯಿ." ಹೇಳಿದಪ್ರಭುದೇವ; ಕಂಠತುಂಬಿಬಂದಿತ್ತು.

ಬಸವಣ್ಣ ಈಗ ಮೇಲೆದ್ದ. ಅವನ ಮುಖವೇ ಅವನ ಮನಸ್ಸಿನ ಉದ್ವೇಗವನ್ನು ಸೂಚಿಸುವಂತಿತ್ತು. ಗದ್ಗದ ಸ್ವರದಿಂದ ಹೇಳಿದ :

"ಪ್ರಭುದೇವರು ಹೇಳಿದಂತೆ ನಾಳೆ ಬೆಳಿಗ್ಗೆಯೇ ಅಕ್ಕಮಹಾದೇವಿಯನ್ನು ಕಳುಹಿಸಿಕೊಡಬೇಕಾಗಿದೆ. ಇಂತಹ ಮಹಾಚೇತನವನ್ನು ಬಹುಕಾಲ ನಮ್ಮ ಮಧ್ಯದಲ್ಲಿ ಉಳಿಸಿಕೊಳ್ಳುವ ಭಾಗ್ಯ ನಮಗಿಲ್ಲ. ಮಹಾದೇವಿಯ ವ್ಯಕ್ತಿತ್ವವನ್ನು ಕುರಿತು ಈಗ ನಾನು ಏನನ್ನೂ ಹೇಳಲಾರೆ. ಅದರ ಅಗತ್ಯವೂ ಇಲ್ಲ. ನೋಡಲು ಆಕೆಯದು ಹೆಣ್ಣುರೂಪು. ಆದರೆ ಎಲ್ಲ ರೂಪವನ್ನು ಮೀರಿನಿಂತ ಮಹಾಂತಮೂರ್ತಿ ಅದು :

ಹೆಂಗೂಸಿನಂಗವ ನೋಡಿರೆ ಪುರಾತನರು ।
ಬಾಲತನದಂಗವ ನೋಡಿರೆ ಪುರಾತನರು
ಬ್ರಹ್ಮವನಾಚರಿಸಿ ತನ್ನ ಮರೆದಿಪ್ಪುದ ನೋಡಿರೆ ಲಿಂಗವಂತರು ।
ತನ್ನಲ್ಲಿ ತಾನು ನಿಶ್ಚಯವಾಗಿ ಭಾಷೆಬೀಸರವೋಗದೆ ಇಪ್ಪ ಇರವು,
ಕೂಡಲಸಂಗಮದೇವರಲ್ಲಿ ನಮ್ಮ ಮಹಾದೇವಿಯಕ್ಕಂಗಾಯಿತ್ತು

ಬಸವಣ್ಣನ ಮಾತು ಮುಗಿಯುತ್ತಿದ್ದಂತೆಯೇ ಚನ್ನಬಸವಣ್ಣ ಎದ್ದು ನಿಂತು ಹೇಳತೊಡಗಿದ:

ತನುವಿನೊಳಗಿದ್ದು ತನುವ ಗೆದ್ದಳು,
ಮನದೊಳಗಿದ್ದು ಮನವ ಗೆದ್ದಳು,
ವಿಷಯದೊಳಗಿದ್ದು ವಿಷಯಂಗಳ ಗೆದ್ದಳು.
ಅಂಗಸಂಗವ ತೊರೆದು ಭವವ ಗೆದ್ದಳು,
ಕೂಡಲಚನ್ನ ಸಂಗಯ್ಯನ ಹೃದಯಕಮಲವ ಬಗಿದು ಹೊಕ್ಕು,
ನಿಜಪದವನ್ನೈದಿದ ಮಹಾದೇವಿಯಕ್ಕನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು

ಹೃದಯತುಂಬಿ ತುಳುಕಿದಂತೆ ಚಿಮ್ಮಿ ಬರುತ್ತಿದ್ದ ಚನ್ನಬಸವಣ್ಣನ ಒಂದೊಂದು ಮಾತುಗಳೂ ಶರಣರ ಮನಸ್ಸನ್ನು ನೇರವಾಗಿ ತಾಗುತ್ತಿದ್ದವು.

ಮಡಿವಾಳ ಮಾಚಯ್ಯ ಭಾವೋದ್ವೇಗದಿಂದ ಎದ್ದು ನಿಂತು, ಮಹಾದೇವಿಗೆ ನಮಸ್ಕರಿಸಿದ. ಸಭೆಗೆಲ್ಲಾ ವಂದಿಸಿದ ಮತ್ತು ಹೇಳತೊಡಗಿದ :

ಕಂಗಳ ನೋಟ ಕರಸ್ಥಲದ ಪ್ರಾಣ,
ಅಂಗವಿಕಾರ ನಿರ್ವಿಕಾರವಾಯಿತ್ತು,
ಸಂಗಸುಖ ನಿಸ್ಸಂಗವಾಯಿತ್ತು,

ಹೆಂಗಸೆಂಬ ಭಾವ ಬಯಲು ಬೆರೆಸಿತ್ತು.
ಕಲಿದೇವರ ದೇವಾ, ನಿಮ್ಮನೊಲಿಸಿ ಒಚ್ಚತವೋದ
ಮಹಾದೇವಿಯಕ್ಕನ ಪಾದವ ನೆನೆದು ನಾನು ಬದುಕಿದೆನು

ಕೊನೆಯ ಮಾತನ್ನು ಹೇಳುತ್ತಾ ಮತ್ತೊಮ್ಮೆ ಮಹಾದೇವಿಗೆ ನಮಸ್ಕರಿಸಿದ ಮಾಚಯ್ಯ. ಅವನೊಡನೆ ಶರಣರೆಲ್ಲ ಒಟ್ಟುಗೂಡಿದರು.

ಇದೆಲ್ಲವನ್ನೂ ಮೀರಿ ನಿಲ್ಲುವ ವಿನಯದ ಮೂರ್ತಿಯಾಗಿ ಮಹಾದೇವಿ ತಲೆ ಬಾಗಿದಳು ಮತ್ತು ಹೇಳಿದಳು :

"ನೀವು ಹೇಳಿದ ಮಾತುಗಳೆಲ್ಲಾ ನಿಮ್ಮನ್ನೇ ಕುರಿತು ನೀವು ಹೇಳಿಕೊಂಡವುಗಳೆಂದು ನಾನು ಭಾವಿಸುತ್ತೇನೆ ; ಏಕೆಂದರೆ :

ಸಂಗದಿಂದಲ್ಲದೆ ಅಗ್ನಿ ಹುಟ್ಟದು ;
ಸಂಗದಿಂದಲ್ಲದೆ ಬೀಜ ಮೊಳೆದೋರದು ;
ಸಂಗದಿಂದಲ್ಲದೆ ದೇಹವಾಗದು ;
ಸಂಗದಿಂದಲ್ಲದೆ ಸರ್ವಸುಖದೋರದು ;
ಚನ್ನಮಲ್ಲಿಕಾರ್ಜುನದೇವಯ್ಯ, ನಿನ್ನ ಶರಣರ
ಅನುಭವ ಸಂಗದಿಂದಲಾನು ಪರಮಸುಖಿಯಾಗಿ
ಬದುಕಿದೆನಯ್ಯಾ ಪ್ರಭುವೇ.

"ಶರಣರ ಸಂಗದಿಂದ ನನ್ನ ಮನ ಶುದ್ಧವಾಯಿತು. ಶರಣರ ಅನುಭವದಿಂದ ನನ್ನ ಪ್ರಾಣ ಶುದ್ಧವಾಯಿತು. ಶರಣರ ಪ್ರಸಾದದಿಂದ ನನ್ನ ಸರ್ವೇಂದ್ರಿಯಗಳು ಶುದ್ಧವಾದುವು. ಇಂತು ನೀವು ನನ್ನನ್ನು ಆಗುಮಾಡಿದಿರಿ. ಚನ್ನಮಲ್ಲಿಕಾರ್ಜುನನಿಗೆ ನನ್ನನ್ನು ತೊಡಿಗೆಯನ್ನಾಗಿ ಮಾಡಿದಿರಿ. ನೀವೆಲ್ಲರೂ ಹರಸಿ ನನ್ನನ್ನು ನಾಳೆ ಬೀಳ್ಕೊಡಬೇಕೆಂದು ಪ್ರಾರ್ಥಿಸುತ್ತೇನೆ" ಎಂದವಳು ಪ್ರಭುದೇವನ ಕಡೆ ತಿರುಗಿ :

"ಪ್ರಭುವೇ, ಕದಳಿಯತ್ತ ನಡೆಯುವ ಮುಂದಿನ ಮಾರ್ಗವನ್ನು ನಿರೂಪಿಸಿ ಕಳುಹಿಸಿಕೊಡಬೇಕು ನನ್ನನ್ನು."

"ಮಹಾದೇವಿ, ಕೇಳು." ಅಲ್ಲಮ ಹೇಳಿದ ಗಂಭೀರ ಸ್ವರದಿಂದ :

"ಅದರ ವಿವರಗಳನ್ನೆಲ್ಲಾ ಆಗಲೇ ನಿನಗೆ ಹೇಳಿದ್ದೇನೆ. ಈಗ ನಾನು ಹೇಳುವ ಸಾಂಕೇತಿಕವಾದ ವಚನವನ್ನು ಕೇಳು... ಕದಳಿಯ ಬಹಿರಂಗ ಅಂತರಂಗಗಳೆರಡರ ಸಮನ್ವಯವನ್ನು ಇದು ಸಾಧಿಸಿದೆ."

ಶರಣರೆಲ್ಲರೂ ಕುತೂಹಲಗೊಂಡರು ಆ ವಚನವನ್ನು ಕೇಳಲು. ಹೊರ ಹೊಮ್ಮಿತು ಪ್ರಭುವಿನ ವಾಣಿ :

ನೀನಾನೆಂಬುಭಯಸಂಗವಳಿದು, ತಾನು ತಾನಾದ
ತ್ರಿಕೂಟವೆಂಬ ಮಹಾಗಿರಿಯ ತುಟ್ಟತುದಿಯ ಮೆಟ್ಟಿ ನೋಡಲು
ಬಟ್ಟಬಯಲು ಕಾಣಬಹುದು ನೋಡಾ !
ಆ ಬಯಲು ಬೆರಸುವರೆ ತ್ರಿಕೂಟಗಿರಿಯೊಳಗೊಂದು
ಕಾಣಬಾರದ ಕದಳಿಯುಂಟು ನೋಡಾ !
ಕದಳಿಯ ಕಳದಲ್ಲಿ ಒಳಹೊಕ್ಕು ನೋಡಲು
ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ :
ನಡೆಯಲ್ಲಿಗೆ ತಾಯೆ ; ಗುಹೇಶ್ವರಲಿಂಗದಲ್ಲಿ
ಪರಮಪದವಿ ನಿನಗೆ ಸ್ವಯವಹುದು ನೋಡಾ :

ಮರುದಿನ ಬೆಳಗಿನ ವೇಳೆಗೆ ಮಹಾದೇವಿ ಹೊರಡಲು ಸಿದ್ಧವಾಗಿ ನಿಂತಿದ್ದಳು. ಶರಣರೆಲ್ಲಾ ನಾನಾ ಬಗೆಯಾಗಿ ಉಪಚರಿಸುತ್ತಿದ್ದರು.

ಗಂಗಾಂಬಿಕೆ ನೀಲಾಂಬಿಕೆಯರಿಗೆ ತಮ್ಮ ಮಗಳನ್ನು ಕಳುಹಿಸುವುದಕ್ಕಿಂತ ಹೆಚ್ಚಿನ ದುಃಖ ಉಕ್ಕಿಬರುತ್ತಿತ್ತು.

ಮಹಾದೇವಿಗೂ ಅವರನ್ನು ಅಗಲುವುದು ತಾಯಿಯನ್ನು ಆಗಲಿದಂತೆಯೇ ಅನ್ನಿಸುತ್ತಿತ್ತು. ಹಿಂದೆ ತಾನು ಉಡುತಡಿಯನ್ನು ಬಿಟ್ಟು ಕಲ್ಯಾಣದ ಕಡೆಗೆ ಹೊರಟ ಸನ್ನಿವೇಶವನ್ನು ನೆನಸಿಕೊಂಡಳು. ತಂದೆತಾಯಿಗಳು, ಗುರುಲಿಂಗ ದೇವರು, ದಾರಿಯಲ್ಲಿ ನೆರವಾದ ಸಂಗಮದೇವರು – ಎಲ್ಲರೂ ಅವಳ ಕಣ್ಣೆದುರು ಸುಳಿದರು. ತಾನಿಂದು ಬಹುದೂರ ಹೊರಟಿದ್ದೇನೆ. ಇನ್ನು ಅವರನ್ನು ಕಾಣುವುದು ಸಾಧ್ಯವಿಲ್ಲ ಎಂಬ ಭಾವ ಸುಳಿಯಿತು.

ಅಂದು ತಾನು ಕಲ್ಯಾಣದತ್ತ ಹೊರಟಾಗ, ಪೂರ್ಣತೆಯನ್ನು ಪಡೆಯಲು ಹೊರಟ ನದಿಯಂತೆ ಮನಸ್ಸು ಭೋರ್ಗರೆಯುತ್ತಿತ್ತು. ಆದರೆ ಇಂದು ಅದು ಪೂರ್ಣತೆಯಿಂದ ಪೂರ್ಣತೆಯೆಡೆಗೆ ನಡೆಯುವ ಮಹಾಸಾಗರದಂತಿತ್ತು. ಆದರೂ ಮಾನವ ಸಹಜವಾದ ಮೇಲ್ಮಟ್ಟದಲ್ಲಿ ಆಗ ತೆರೆಗಳು ಕಾಣಿಸಿಕೊಳ್ಳುತ್ತಿದ್ದವು.

ಮಹಾದೇವಿ ಮನೆಯ ಹೊರಬಾಗಿಲಿನಿಂದ ಈಚೆಗೆ ಹೆಜ್ಜೆಯನ್ನು ಇಡುತ್ತಿದ್ದಂತೆಯೇ ಮಡಿವಾಳ ಮಾಚಯ್ಯ ಎದುರಿಗೆ ಬಂದು ದಿಂಡುಗೆಡೆದ. ಅನಂತರ ತಾನು ಹೊತ್ತುತಂದಿದ್ದ ನಡೆಮಡಿಯನ್ನು ಹಾಸಲು ತೊಡಗಿದ. ಮಹಾದೇವಿ ಅವಾಕ್ಕಾಗಿ ನಂತಳು.

ಅವಳ ವೈರಾಗ್ಯದ ಪ್ರಭೆಗೆ ದೃಷ್ಟಿಯಾಗದಿರಲೆಂಬಂತೆ ತೆಳುಕಾವಿಯ ಸೀರೆ, ಪವಿತ್ರತೆಯ ತೆರೆಯನ್ನು ನಿರ್ಮಿಸಿತ್ತು. ರುದ್ರಾಕ್ಷಿಯ ಸರ, ತ್ರಿಪುಂಡ್ರ

ಧಾರಣೆಗಳಿಂದ ಶೋಭಿಸುತ್ತಿದ್ದಳು. ಶರಣರೆಲ್ಲಾ ಆ ಪವಿತ್ರಮೂರ್ತಿಯನ್ನೇ ಎವೆಯಿಕ್ಕದೆ ನೋಡುತ್ತಿದ್ದರು.

ಗದ್ಗದ ಕಂಠದಿಂದ ಹೇಳಿದ ಮಾಚಯ್ಯ :

"ತಾಯಿ, ಮಹಾದೇವಿಯಕ್ಕ ! ಅಂದು ನೀವು ಕಲ್ಯಾಣಕ್ಕೆ ಬಂದ ದಿನ ನಾನು ನಡೆಮಡಿಯನ್ನು ಹಾಕಿದೆ ; ನೀವು ಅದನ್ನು ಮೈಗೆ ಹೊದೆದುಕೊಂಡು ಪವಿತ್ರವನ್ನಾಗಿ ಮಾಡಿದಿರಿ. ಇಂದು ಮತ್ತೆ ಅದನ್ನು ಹಾಸಿ ತಮ್ಮನ್ನು ಬೀಳ್ಕೊಡುವ ಸಂದರ್ಭದಲ್ಲಿ ಸೇರಿದ್ದೇವೆ."

ಇಲ್ಲಿ ಮಾಚಯ್ಯನ ಕಂಠ ಸಂಪೂರ್ಣವಾಗಿ ನಿಂತುಹೋದಂತೆ ಕಾಣಿಸಿತು. ಮತ್ತೆ ಹೇಗೋ ಸಾವರಿಸಿಕೊಂಡು ಹೇಳಿದ : "ಇಂದು ನಿಮ್ಮ ಪಾದಗಳ ಸ್ಪರ್ಶದಿಂದ ಪುನೀತನನ್ನಾಗಿ ಮಾಡಿ ಮುನ್ನಡೆಯಬೇಕು."

ಮಹಾದೇವಿ ಮಾಚಯ್ಯನ ನಿಷ್ಠೆಗೆ ನಿಬ್ಬೆರಗಾಗಿ ನಿಂತುನೋಡುತ್ತಿದ್ದಳು. ಶರಣರ ಕಣ್ಣುಗಳೆಲ್ಲಾ ಹನಿಯಾಡುತ್ತಿದ್ದವು.

ಶರಣೆಯರ ಗುಂಪಿನಿಂದ ಲಕ್ಕಮ್ಮ ತನ್ನ ಭಾವೋದ್ವೇಗವನ್ನು ತಡೆಯಲಾರದೆ ಮುಂದೆ ಬಂದು ಹೇಳಿದಳು ಮಾಚಯ್ಯನಿಗೆ :

"ಇಲ್ಲಿಯೇನೋ ನಡೆಮಡಿಯನ್ನು ಹಾಸಿ ಬೀಳ್ಕೊಡುತ್ತಿದ್ದೀರಿ ; ಆದರೆ ಎಷ್ಟು ದೂರ ಈ ನಡೆಮಡಿಯನ್ನು ನಾವು ಹಾಸಬಲ್ಲೆವು. ಮುಂದೆ ನಮ್ಮ ಅಕ್ಕ ಶ್ರೀಶೈಲದ ಕಠಿಣವಾದ ದಾರಿಯಲ್ಲಿ ಕಲ್ಲುಮುಳ್ಳುಗಳನ್ನು ತುಳಿದು ಸಾಗುವಾಗ ನಡೆಮಡಿಯನ್ನು ಹಾಸುವವರು ಯಾರು ?"

ಗದ್ಗದ ಕಂಠದಿಂದ ಮುಂದೆ ಮಾತನಾಡಲಾರದವಳಾದಳು ಲಕ್ಕಮ್ಮ. ಅವಳ ಮಾತು ಶರಣರೆಲ್ಲರನ್ನು ಮುಟ್ಟಿತು. ದುಃಖತಪ್ತರನ್ನಾಗಿ ಮಾಡಿತು.

ಈಗ ಪ್ರಭುದೇವನೇ ಮುಂದೆ ಬರಬೇಕಾಯಿತು :

"ಅಲ್ಲಿ ಚೆನ್ನಮಲ್ಲಿಕಾರ್ಜುನನೇ ನಡೆಮಡಿಯನ್ನು ಹಾಸುತ್ತಾನೆ. ಲಕ್ಕಮ್ಮ ಸಂಸಾರದ ಲೀಲೆಯನ್ನು ದೂರ ನಿಂತು ನೋಡಬಲ್ಲ ನೀವೇ ಹೀಗೆ ವರ್ತಿಸಿದರೆ ಹೇಗೆ ? ಸಹಿಸಿಕೊಳ್ಳಿ. ಮಹಾದೇವಿ ನಮಗೆ ಮಾರ್ಗದರ್ಶಕಳಾಗಿ ನಡೆಯುತ್ತಿದ್ದಾಳೆ. ಅವಳು ಮುಂದೆ, ನಾವು ಹಿಂದೆ. ಅವಳು ಎಲ್ಲ ದೃಷ್ಟಿಯಿಂದಲೂ ಅಕ್ಕ ಎಂದು ಒಪ್ಪಿಕೊಂಡಿದ್ದೀರಿ. ಈ ಪಯಣದಲ್ಲಿಯೂ ಆಕೆ ನಮಗೆ ಅಕ್ಕ" ಎಂದು ಅಲ್ಲಮಪ್ರಭು ಮಹಾದೇವಿಯತ್ತ ತಿರುಗಿ :

"ತಾಯಿ ಮಹಾದೇವಿ, ಈ ನಿಷ್ಠಾವಂತ ಭಕ್ತನ ಕೊನೆಯ ಬಯಕೆಯನ್ನು ಈಡೇರಿಸು. ಈ ನಡೆಮಡಿಯ ಮೇಲೆ ನಡೆ, ತಾಯಿ."

ಮಹಾದೇವಿ ಬಾಗಿ ಅದನ್ನು ಕಣ್ಣಿಗೆ ಒತ್ತಿಕೊಂಡಳು. ಪ್ರಭುವಿನ ಕೋರಿಕೆಯಂತೆ ನಡೆಯತೊಡಗಿದಳು. ಮಾಚಯ್ಯ ಧನ್ಯತೆಯನ್ನು ಪಡೆದವನಂತೆ ಮುಂದೆ ಮುಂದೆ ನಡೆಮಡಿಯನ್ನು ಹಾಸಿಕೊಂಡು ಹೋಗುತ್ತಿದ್ದ. ಮಹಾಮನೆಯ ಮಹಾದ್ವಾರದವರೆಗೂ ಬಂದರು :

"ನಿನ್ನ ನಿಷ್ಠೆಯ ಭಕ್ತಿಸೇವೆ ಇಲ್ಲಿಗೆ ಸಾಕು, ಮಾಚಿ ತಂದೆ" ಎಂದು ಮಹಾದೇವಿ ಶರಣರೆಲ್ಲರತ್ತ ದೃಷ್ಟಿಯನ್ನು ಹರಿಸಿದಳು.

ಅಷ್ಟರಲ್ಲಿ ಹರಳಯ್ಯ ಆತುರವಾಗಿ ಓಡಿಬಂದು ಮಹಾದೇವಿಗೆ ನಮಸ್ಕರಿಸಿದ. ಬಟ್ಟೆಯಲ್ಲಿ ಸುತ್ತಿ ತಂದಿದ್ದ ಪಾದರಕ್ಷೆಗಳನ್ನು ಹೊರತೆಗೆದು ಮಹಾದೇವಿಯ ಮುಂದಿಟ್ಟು ಬೇಡಿಕೊಂಡ :

"ರಾತ್ರಿಯೆಲ್ಲಾ ಕುಳಿತು ಇವುಗಳನ್ನು ತಮಗಾಗಿ ಸಿದ್ಧಗೊಳಿಸಿದ್ದೇನೆ. ಇವುಗಳನ್ನು ಧರಿಸಿ ನನ್ನನ್ನು ಉದ್ಧರಿಸಬೇಕು, ತಾಯಿ."

ಪ್ರಭುದೇವನ ಸೂಚನೆಯಂತೆ ಮಹಾದೇವಿ ಅವುಗಳನ್ನು ಧರಿಸಿದಳು. ಧನ್ಯತೆಯಿಂದ ಹರಳಯ್ಯ ಆನಂದಬಾಷ್ಪಗಳನ್ನು ಸುರಿಸಿದ.

ಮಹಾದೇವಿ ಮುಂದುವರಿಯಲು ಉದ್ಯುಕ್ತಳಾದಳು. ಶರಣರ ಜೀವನ ಉಂಟುಮಾಡಿದ ಒಟ್ಟು ಪರಿಣಾಮವನ್ನು ನೆನಸಿಕೊಂಡು ಹೇಳಿದಳು ಈ ವಚನವನ್ನು :

> ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯಿತ್ತು.
> ಅಯ್ಯಾ ನಿಮ್ಮ ಅನುಭಾವಿಗಳು ಎನ್ನ ಒರೆದೊರೆದು
> ಕಡಿಕಡಿದು, ಅರೆದರೆದು, ಅನುಮಾಡಿದ ಕಾರಣ
> ಎನ್ನ ಮನ ಶುದ್ಧವಾಯಿತ್ತು....
> ನಿಮ್ಮ ಶರಣರಿಂತು ಎನ್ನನಾಗುಮಾಡಿದ ಕಾರಣ
> ಚನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರಿಗೆ.
> ತೊಡಿಗೆಯಾದೆನಯ್ಯಾ ಪ್ರಭುವೇ.

"ಆದುದರಿಂದ ಇಂದು ನನ್ನನ್ನು ಕಳುಹಿಸಿಕೊಡಿ. ನಾನಿನ್ನು ಬರುತ್ತೇನೆ" ಎಂದು ಮುಂದೆ ನಡೆದಳು ಮಹಾದೇವಿ. ಆದರೆ ಶರಣರು ಹಿಂದೆ ಉಳಿಯುವಂತೆ ತೋರಲಿಲ್ಲ. ಕಲ್ಯಾಣಪಟ್ಟಣದ ಪ್ರಮುಖ ಬೀದಿಯಲ್ಲಿರುವವರೆಗೆ ಈ ಪುಣ್ಯ ಮಂಗಳ ಮೆರವಣಿಗೆಯನ್ನು ನೋಡುವ ಮಹಾಭಾಗ್ಯ ಲಭಿಸಿತು.

ಪಟ್ಟಣದ ಕೋಟೆಯನ್ನು ದಾಟಿ ಹೊರಗೆ ಬಂದಳು ಮಹಾದೇವಿ. ಎಲ್ಲರೂ ಅವಳನ್ನು ಹಿಂಬಾಲಿಸಿಯೇ ಬಂದಿದ್ದರು. ಪವಿತ್ರಶಕ್ತಿಯನ್ನು ಹಿಂಬಾಲಿಸುವ ಪುಣ್ಯ ಮೂರ್ತಿಗಳಂತೆ.

ಮಹಾದೇವಿ ಅಲ್ಲಿ ನಿಂತಳು. ಶರಣರನ್ನೆಲ್ಲಾ ನೋಡಿದಳು. ಹೇಳಬೇಕಾದುದನ್ನೆಲ್ಲಾ ಆಗಲೇ ಹೇಳಿಯಾಗಿತ್ತು. ಕೇಳಬೇಕಾದುದನ್ನು ಕೇಳಿಯಾಗಿತ್ತು. ಒಬ್ಬೊಬ್ಬರ ಮೇಲೂ ಅವಳ ದೃಷ್ಟಿ ಸುಳಿಯಿತು. ಎಲ್ಲರೂ ಮಂತ್ರಮುಗ್ಧರಂತೆ ಅವಳನ್ನೇ ನೋಡುತ್ತಿದ್ದರು.

ಶರಣೆಯರ ಕಡೆಗೆ ದೃಷ್ಟಿಯನ್ನು ಹರಿಸಿದಳು. ಅಲ್ಲಿ ಕೆಲವರ ಕಣ್ಣುಗಳಿಂದ ಧಾರಾಕರವಾಗಿ ನೀರು ಸುರಿಯುತ್ತಿತ್ತು. ಕೆಲವರು ಬಿಕ್ಕಳಿಸುತ್ತಿದ್ದರು. ಅದಕ್ಕೆ ಮೀರಿದ ಭಾವನೆಯಿಂದ ನಿಂತಿದ್ದರು – ಗಂಗಾಂಬಿಕೆ, ನೀಲಾಂಬಿಕೆ. ಮಾತಿಗೆ ಮೀರಿದ ಭಾವನೆಯನ್ನು ಆ ಒಂದು ನೋಟವೇ ಸಾರಿಹೇಳುವಂತಿತ್ತು.

ಬಸವಣ್ಣನತ್ತ ಮಹಾದೇವಿಯ ದೃಷ್ಟಿ ತಿರುಗಿತ್ತು. ಆತನೂ ಸಜಲ ನಯನವಾಗಿ ನಿಟ್ಟಿಸುತ್ತಿದ್ದ ಮಹಾದೇವಿಯನ್ನು. ಸಿದ್ಧರಾಮ, ಚನ್ನಬಸವರ ದುಃಖವನ್ನು ಅವರ ಮುಖಭಾವ ಅಡಗಿಸಿಕೊಳ್ಳಲಾರದೇ ಹೋಗಿತ್ತು. ಪಕ್ಕದಲ್ಲಿ ನಿಂತು ಅಲ್ಲಮ ಪ್ರಭುದೇವ ಇದೆಲ್ಲವನ್ನೂ ಸಾಕ್ಷೀಭೂತವಾಗಿ ನೋಡುತ್ತಿದ್ದರೂ ತಾನೂ ಅದಕ್ಕೆ ಒಳಗಾದಂತೆ ತೋರುತ್ತಿತ್ತು.

ಅವರೆಲ್ಲರನ್ನೂ ಒಟ್ಟಿಗೆ ತನ್ನ ದೃಷ್ಟಿಯಲ್ಲಿ ತುಂಬಿಕೊಂಡ ಮಹಾದೇವಿ ಹೇಳಿದಳು :

"ಇನ್ನು ನೀವು ಇಲ್ಲಿ ನಿಲ್ಲಿರಿ. ನಿಮ್ಮೆಲ್ಲರಿಗೂ ಶರಣು ಶರಣಾರ್ಥಿ" ಎಂದು ಕೈಗಳನ್ನೆತ್ತಿ ಜೋಡಿಸುತ್ತಿರುವಂತೆಯೇ ಮಹಾದೇವಿಯ ಮೈಯಲ್ಲಿ ಮಿಂಚಿನ ಶಕ್ತಿ ಸಂಚಾರವಾದಂತಾಯಿತು. ಗಂಭೀರವಾದ ಧ್ವನಿಯಿಂದ ಹೇಳತೊಡಗಿದಳು:

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ ;
ಬೆಳೆದನು ಅಸಂಖ್ಯಾತರ ಕರುಣದೊಳಗೆ.
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ,
ಪರಮಾರ್ಥವೆಂಬ ಸಕ್ಕರೆಯನ್ನಿಕ್ಕಿದರು ನೋಡಾ !
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದರೆನ್ನ.
ವಿವಾಹ ಮಾಡಿದಿರಿ, ಸಯವಪ್ಪ ಗಂಡಂಗೆ ಕೊಟ್ಟಿರಿ.
ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ.
ಬಸವಣ್ಣ ಮೆಚ್ಚಲೊಗೆತನ ಮಾಡುವೆ.

ಚನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನವಧಾರಿಸಿ.
ನಿಮ್ಮಡಿಗಳೆಲ್ಲರು ಮರಳಿ ಬಿಜಯಂಗೆಯ್ವುದು ;
ಶರಣು ಶರಣಾರ್ಥಿ.

ಗಂಭೀರವಾದ ಅಮೃತಮೇಘದ ಮೊಳಗಿನಂತೆ ಒಂದೊಂದೇ ನುದಿ, ಮಹಾದೇವಿಯ ಅಂತಃಕರಣದಿಂದ ಉಕ್ಕಿಬರುತ್ತಿತ್ತು.

"ಶರಣು ಶರಣಾರ್ಥಿ" ಎಂದು ಮತ್ತೊಮ್ಮೆ ಹೇಳುತ್ತಾ ವೇಗವೇಗವಾಗಿ ನಡೆಯ ತೊಡಗಿದಳು, ಹಿಂತಿರುಗಿ ನೋಡದಂತೆ.

ಅವಳ ದಿವ್ಯವಿಗ್ರಹ ಮರೆಯಾಗುವವರೆಗೂ ಶರಣರೆಲ್ಲಾ ಚಿತ್ರದಲ್ಲಿ ಬರೆದವರಂತೆ ನಿಂತು ನೆಟ್ಟದೃಷ್ಟಿಯಿಂದ ಅತ್ತಲೇ ನೋಡುತ್ತಿದ್ದರು. ದೂರದ ರಸ್ತೆಯ ತಿರುವಿನಲ್ಲಿ ಮಹಾದೇವಿ ಮರೆಯಾದಳು. ಶರಣರೆಲ್ಲಾ ಒಬ್ಬರ ಮುಖವನ್ನೊಬ್ಬರು ನೋಡಿದರು. ಒಬ್ಬರನ್ನೊಬ್ಬರು ಹೊಸದಾಗಿ ಗುರುತಿಸುವಂತಿತ್ತು ಆ ನೋಟ.

ಪ್ರಭುದೇವನೇ ಮುಂದಾಗಿ ಮತ್ತೆ ಕಲ್ಯಾಣದ ಕಡೆಗೆ ನಡೆಯತೊಡಗಿದ. ಅವನನ್ನು ಹಿಂಬಾಲಿಸಿತು ಬಸವಾದಿ ಪ್ರಮಥಗಣ.

೬

ಶ್ರೀಗಿರಿಯತ್ತ ನಡೆಯುತ್ತಿದ್ದ ಮಹಾದೇವಿಯ ಮನಸ್ಸಿನ ಮುಂದೆ, ತನ್ನ ಜೀವನದ ಘಟನೆಗಳೆಲ್ಲಾ ಸುರುಳಿ ಬಿಚ್ಚಿದ ಪಟದಂತೆ ಎದುರು ನಿಲ್ಲುತ್ತಿದ್ದುವು. ದೂರ ಕುಳಿತು ನೋಡುವ ಪ್ರೇಕ್ಷಕನಂತೆ ಅವೆಲ್ಲವನ್ನೂ ತಾನು ಬೇರೆ ನಿಂತು ನೋಡುತ್ತಾ ಸೃಷ್ಟಿಕರ್ತನ ಲೀಲಾವಿಲಾಸಕ್ಕೆ ಬೆರಗಾಗುತ್ತಿದ್ದಳು.

ಪ್ರಭುದೇವನ ಒಂದು ವಚನ ಅವಳ ನೆನಪಿಗೆ ಬಂದಿತು :

ಎತ್ತಣ ಮಾಮರ ? ಎತ್ತಣ ಕೋಗಿಲೆ ?
ಎತ್ತಣಿಂದೆತ್ತ ಸಂಬಂಧವಯ್ಯ ?
ಬೆಟ್ಟದ ನೆಲ್ಲಿಕಾಯಿ, ಸಮುದ್ರದೊಳಗಣ ಉಪ್ಪು ;
ಎತ್ತಣಿಂದೆತ್ತ ಸಂಬಂಧವಯ್ಯ ?
ಗುಹೇಶ್ವರ ಲಿಂಗಕ್ಕೆಯು ಎನಗೆಯು
ಎತ್ತಣಿಂದೆತ್ತ ಸಂಬಂಧವಯ್ಯ ?

'ಚನ್ನಮಲ್ಲಿಕಾರ್ಜುನನಿಗೂ ಎತ್ತಣಿಂದ ಎತ್ತ ಸಂಬಂಧ ! ಶ್ರೀ ಗುರುವಿನ ಮೂಲಕ ಕರಸ್ಥಲಕ್ಕೆ ಬಂದ. ಶರಣರ ಅನುಭಾವದ ಸಂಗದಿಂದ ಮನಸ್ಥಲವನ್ನು ಪ್ರವೇಶಿಸಿದ. ಹೃದಯವನ್ನು ವ್ಯಾಪಿಸಿದ; ನನ್ನನ್ನೇ ಇಲ್ಲದಂತೆ ಮಾಡಿದ' ಎಂದುಕೊಂಡಳು.

ಈ ಐಕ್ಯಭಾವದ ನಿಲುವಿನಲ್ಲಿಯೇ ಮಹಾದೇವಿಯ ಪ್ರಯಾಣ ಸಾಗುತ್ತಿತ್ತು. ದೇಹದ ಪರಿಮಿತವಾದ ವಲಯವನ್ನು ಮೀರಿ ನಿಂತು, ಅಪರಿಮಿತವಾದ ಶಕ್ತಿಯನ್ನು ಪಡೆದ ಮಹಾದೇವಿಗೆ, ಪ್ರಕೃತಿಯೇ ಕೈಂಕರ್ಯವನ್ನು ಕೈಕೊಂಡು, ಅದಾವ ರೂಪದಿಂದಲೂ ಬಂದು ಅವಳ ಅವಶ್ಯಕತೆಗಳನ್ನು ಪೂರ್ಣಗೊಳಿಸಿಕೊಡುತ್ತಿತ್ತು.

ಕೆಲವು ದಿನಗಳು ಕಳೆಯುವುದರೊಳಗಾಗಿ ಕನ್ನಡನಾಡನ್ನು ದಾಟಿ ತಾನು ಮುಂದೆ ನಡೆಯುತ್ತಿರುವುದು ಅವಳ ಅನುಭವಕ್ಕೆ ಬರತೊಡಗಿತು. ಬರುಬರುತ್ತಾ ಕನ್ನಡ ಭಾಷೆಯ ಬಳಕೆ ಕಡಿಮೆಯಾಗುತ್ತಿತ್ತು. ತನಗೆ ಅಷ್ಟಾಗಿ ತಿಳಿಯದ ಭಾಷೆಯೊಡನೆ ವ್ಯವಹರಿಸಬೇಕಾಯಿತು ಮಹಾದೇವಿ.

ಪ್ರಭುದೇವ ಇದನ್ನು ಅವಳಿಗೆ ತಿಳಿಸಿಯೇ ಇದ್ದ. ಮಹಾದೇವಿಗೆ ಭಾಷೆಯ ತೊಡಕಿನಿಂದ ವಿಶೇಷ ತೊಂದರೆಯೇನೂ ಆಗಲಿಲ್ಲ. ಎಲ್ಲವನ್ನೂ ಮೀರಿ ನಿಂತ ಅವಳ ನಿಲವು, ಭಾವವನ್ನು ಭಾಷೆಯನ್ನಾಗಿ ಪರಿವರ್ತಿಸುತ್ತಿತ್ತು. ಅವಳ ದಿವ್ಯ ವ್ಯಕ್ತಿತ್ವದಿಂದ ಆಕರ್ಷಿತರಾದ ಜನ ತಾವಾಗಿ ಬಂದು ಅವಳ ಸೇವೆಗೆ ನಿಲ್ಲುತ್ತಿದ್ದರು.

ಉಟ್ಟ ತೆಳು ಕಾವಿಯ ಬಣ್ಣದ ಸೀರೆ, ಅವಳ ವೈರಾಗ್ಯದ ಕಾಂತಿಯ ಕಿಡಿಯನ್ನು ರಕ್ಷಿಸುವಂತೆ ಕಾಣುತ್ತಿತ್ತು. ಅದರ ಮೇಲೆ ವಿಶಾಲವಾಗಿ ಹರಡಿದ ತಲೆಯ ಕೂದಲು ಬೆನ್ನು ಮೇಲೆಲ್ಲಾ ವ್ಯಾಪಿಸಿ ದೇಹವನ್ನೇ ಮುಚ್ಚಿರುವಂತೆ ತೋರುತ್ತಿದ್ದವು. ಮುಂಗೈಯಲ್ಲಿ ರುದ್ರಾಕ್ಷಿಯ ಕಂಕಣ, ಕೊರಳಲ್ಲಿ ರುದ್ರಾಕ್ಷಿಯ ಸರ, ಸಂಸಾರದ ವ್ಯಾಮೋಹವನ್ನು ಸುಟ್ಟು ಬೊಟ್ಟಿಟ್ಟ ಪವಿತ್ರತೆಯ ಸಂಕೇತವೆಂಬಂತೆ ಹಣೆಯ ಮೇಲೆ ತ್ರಿಪುಂಡ್ರಧಾರಣೆ. ಎಲ್ಲಕ್ಕಿಂತ ಮಿಗಿಲಾಗಿ ಚನ್ನಮಲ್ಲಿಕಾರ್ಜುನನ ಜ್ಯೋತಿರ್ಲಿಂಗದ ಕಾಂತಿಯನ್ನೇ ಅಡಕಗೊಳಿಸಿಕೊಂಡಂತೆ ತೇಜಃಪುಂಜವಾಗಿ ಹೊಳೆಯುತ್ತಿರುವ ಕಣ್ಣುಗಳು – ಎಂತಹವರನ್ನೂ ಮುಗ್ಧರನ್ನಾಗಿ ಮಾಡುತ್ತಿದ್ದುವು.

ಅವಳ ಸೇವೆಯನ್ನು ಮಾಡುವ ಭಾಗ್ಯವನ್ನು ಹಂಚಿಕೊಳ್ಳುವುದಕ್ಕೆ ಆಂಧ್ರ ದೇಶದ ಭಕ್ತಜನರಲ್ಲಿ, ಸಂತೋಷದ ಸ್ಪರ್ಧೆ ಕಂಡುಬರುತ್ತಿತ್ತು. ಯಾರ ಆತಿಥ್ಯವನ್ನೂ ವಿಶೇಷವಾಗಿ ಸ್ವೀಕರಿಸದೆ ಮಹಾದೇವಿ ಶ್ರೀಗಿರಿಯತ್ತ ನಡೆಯುತ್ತಿದ್ದಳು.

ಆತ್ಮಕೂರಿನಿಂದ ಮುಂದೆ ಶ್ರೀಶೈಲಪರ್ವತಶ್ರೇಣಿಗಳು ಪ್ರಾರಂಭವಾಗುತ್ತವೆಂದು ಗುರುಲಿಂಗದೇವರು ಹೇಳಿದ್ದರು. ಮತ್ತು ಪ್ರಭುದೇವ

ಸಿದ್ಧರಾಮರು ವಿವರವಾಗಿ ಅದರ ವರ್ಣನೆಯನ್ನು ಮಾಡುವಾಗಲೂ ತಿಳಿಸಿದ್ದರು. ಅದನ್ನು ನೆನಸಿಕೊಳ್ಳುತ್ತಾ ಪ್ರಯಾಣದ ಕಷ್ಟಸುಖಗಳನ್ನು ಲೆಕ್ಕಿಸದೆ, ಆತ್ಮಕೂರನ್ನು ಸೇರುವ ಆತುರದಿಂದ ನಡೆಯುತ್ತಿದ್ದಳು ಮಹಾದೇವಿ. ಅನೇಕ ದಿನಗಳ ಪ್ರಯಾಣ ಕೊನೆಗೂ ಅವಳನ್ನು ಆತ್ಮಕೂರಿಗೆ ಕರೆದುತಂದಿತು.

ಶ್ರೀಶೈಲಕ್ಕೆ ಹೋಗಿ, ದುರ್ಗಮವಾದ ಕಾಡಿನ ಮಧ್ಯದಲ್ಲಿರುವ ಮಲ್ಲಿಕಾರ್ಜುನನನ್ನು ಕಾಣಲು ಅಸಾಧ್ಯವಾದವರಿಗಾಗಿ ಆತ್ಮಕೂರಿನಲ್ಲಿಯೂ ಮಲ್ಲಿಕಾರ್ಜುನನ ದೇವಾಲಯವಿರುವುದನ್ನು ಕೇಳಿದ್ದ ಮಹಾದೇವಿ ಅಲ್ಲಿಗೆ ಹೋದಳು. ಅಲ್ಲೊಂದು ದೊಡ್ಡ ಪರಿಷೆ ಬೀಡುಬಿಟ್ಟಿತ್ತು. ಮಹಾದೇವಿಗೆ ನೆನಪಾಯಿತು, ತಾನು ಇಲ್ಲಿಗೆ ಬಂದಿರುವುದು ಈಗ ಶಿವರಾತ್ರಿಯ ಸಮಯವೆಂದು.

ಶಿವರಾತ್ರಿಯ ವೇಳೆಯಲ್ಲಿ ಸಾವಿರಾರು ಜನ ಭಕ್ತರು ಬಂದು ಜ್ಯೋತಿರ್ಲಿಂಗದ ದರ್ಶನವನ್ನು ಪಡೆಯುತ್ತಾರೆ. ಹಾಗೆ ಶ್ರೀಶೈಲಕ್ಕೆ ಹೋಗಲು ಬಂದ ಪರಿಷೆಯೊಂದು ಅಲ್ಲಿ ಬೀಡುಬಿಟ್ಟಿತ್ತು.

ಮಹಾದೇವಿ ಬಳಿಗೆ ಹೋಗುತ್ತಿದ್ದಂತೆಯೇ ಅವಳ ವ್ಯಕ್ತಿತ್ವದಿಂದ ಆಕರ್ಷಿತರಾದ ಪರಿಷೆಯ ಮುಖಂಡರು ಸಮೀಪಕ್ಕೆ ಬಂದು ಮಾತನಾಡಿಸಿದರು. ಆ ಮಾತುಗಳನ್ನು ಕೇಳಿ ಮಹಾದೇವಿಯ ಕಿವಿ ನಿಮಿರಿದುವು. ಅವರು ಮಾತನಾಡುತ್ತಿದ್ದುದು ಕನ್ನಡ ! ಅದು ಕನ್ನಡನಾಡಿನಿಂದ ಬಂದ ಯಾತ್ರಾರ್ಥಿ ಸಮೂಹವಾಗಿತ್ತು. ಮತ್ತೊಮ್ಮೆ ಕನ್ನಡ ತಾಯ್ನುಡಿಯನ್ನು ಕೇಳುವ ಭಾಗ್ಯ ಬಂದುದಕ್ಕಾಗಿ ಸಂತೋಷಗೊಂಡಳು.

ಶಿವರಾತ್ರಿಯ ವೇಳೆಗೆ ಸರಿಯಾಗಿ ಶ್ರೀಶೈಲವನ್ನು ಸೇರಬೇಕೆಂಬ ಭಾವನೆಯಿಂದ ಪರಿಷೆ ; ಆತ್ಮ ಕೂರಿನಲ್ಲಿಯೇ ಇನ್ನೂ ನಾಲ್ಕಾರು ದಿನ ನಿಂತಿತು. ಮಹಾದೇವಿಯನ್ನು ತಮ್ಮೊಡನೆ ಇರುವಂತೆ ಬೇಡಿಕೊಂಡು ಅವಳನ್ನು ಒಪ್ಪಿಸಿದರು. ಅವಳು ಒಪ್ಪಿದುದು ತಮ್ಮ ಭಾಗ್ಯವೆಂದೇ ಬಗೆದು ಅವಳನ್ನು ಗೌರವದಿಂದ ಉಪಚರಿಸುತ್ತಿದ್ದರು.

ಶಿವರಾತ್ರಿ ಇನ್ನು ಮೂರು ನಾಲ್ಕು ದಿನಗಳಿರುವಾಗ ಪರಿಷೆ, ಶ್ರೀಶೈಲದತ್ತ ಪ್ರಯಾಣವನ್ನು ಕೈಗೊಂಡಿತು. ಈ ವೇಳೆಗಾಗಲೇ ಶ್ರೀಶೈಲಕ್ಕೆ ಹೋಗುವ ಜನರ ಜಾತ್ರೆ, ಒಂದೇ ಸಮನೆ ಏರತೊಡಗಿತ್ತು. ಮಲ್ಲಿಕಾರ್ಜುನನ ಜಯಘೋಷಗಳು, ಭಜನೆಗಳು, ಕೀರ್ತನೆಗಳು, ಎಡೆಬಿಡದೆ ನಡೆಯುತ್ತಿದ್ದವು.

ಶ್ರೀಶೈಲಪರ್ವತ ಶ್ರೇಣಿಗಳು ಪ್ರಾರಂಭವಾದ ಮೇಲಂತೂ, ಜನರ ಉತ್ಸಾಹ ಇಮ್ಮಡಿಸಿತು. ಬಿಸಿಲಿನ ತಾಪವನ್ನು ಲೆಕ್ಕಿಸಿದೆ, ಬೆಟ್ಟವನ್ನು ಹತ್ತಿ ಇಳಿಯುವ

ಆಯಾಸವನ್ನು ಪರಿಗಣಿಸದೆ ಸಂಭ್ರಮದಿಂದ ಓಡುತ್ತಿದ್ದರು ಜನ.

ಹೀಗೆ ಎರಡು ಮೂರು ದಿನಗಳ ಪ್ರಯಾಣ ನಡೆಯಿತು. ಮಹಾದೇವಿ ಮಲ್ಲಿಕಾರ್ಜುನನ ಆ ಪರ್ವತಕೋಶಗಳನ್ನು ಒಂದೊಂದನ್ನಾಗಿ ದಾಟಿ ಮುಂದೆ ನಡೆಯುತ್ತಿದ್ದಳು.

ಪರಿಷೆ, ಭೀಮನಕೊಳಕ್ಕೆ ಬಂದಾಗ ಪರಿಷೆಯ ನಾಯಕ ಹೇಳಿದ :

"ಇನ್ನು ಶ್ರೀಶೈಲ ದೇವಸ್ಥಾನಕ್ಕೆ ಒಂದು ಹರದಾರಿಯಷ್ಟು ದೂರ. ಈ ಸಂಜೆಯೊಳಗೆ ಅಲ್ಲಿಗೆ ಸೇರುತ್ತೇವೆ."

ಭೀಮನಕೊಳದಲ್ಲಿ ನೀರನ್ನು ಕುಡಿದು ವಿಶ್ರಮಿಸಿಕೊಂಡರು ಜನ. ಶಿವರಾತ್ರಿಯ ಬೇಸಿಗೆಯ ಬಿಸಿಲಿನಲ್ಲಿ ಭೀಮನಕೊಳವೊಂದೇ ಆ ಮಾರ್ಗದಲ್ಲಿ ನೀರಿನ ಆಶ್ರಯವಾಗಿತ್ತು. ಅಲ್ಲಿ ಮುಖವನ್ನು ತೊಳೆದು, ನೀರನ್ನು ಕುಡಿದು, ಮರಗಳ ನೆರಳಿನಲ್ಲಿ ಹಾಯಾಗಿ ಕುಳಿತೋ ಮಲಗಿಯೋ ವಿಶ್ರಮಿಸಿಕೊಳ್ಳುತ್ತಿರುವ ನೂರಾರು ಯಾತ್ರಿಕರನ್ನು ನೋಡುವ ಆ ದೃಶ್ಯ ತುಂಬಾ ಸುಂದರವಾಗಿತ್ತು. ಮಲ್ಲಿಕಾರ್ಜುನನನ್ನು ಸೇರಲು ಹೊರಟಿರುವ ಮಹಾಶಕ್ತಿಯ ಒಂದೊಂದು ಕಿಡಿಗಳಂತೆ ತೋರಿದರು ಅವರೆಲ್ಲರೂ ಮಹಾದೇವಿಗೆ.

ದೇವಸ್ಥಾನ ಸಮೀಪವಾದಂತೆಲ್ಲಾ ಜನರ ಉತ್ಸಾಹದ ಹೊನಲು ಉಕ್ಕೇರುತಿತ್ತು. ಜಯಘೋಷಗಳು ಗಿರಿಕಂದರದಲ್ಲಿ ಪ್ರತಿಧ್ವನಿಸುತ್ತಿದ್ದವು. ಕೈಲಾಸದ್ವಾರವನ್ನು ಏರಿ ಮುಂದೆ ಮುಂದೆ ನಡೆಯತೊಡಗಿದಂತೆ ಶಿಖರೇಶ್ವರ ಕಣ್ಣಿಗೆ ಬಿದ್ದಿತು.

ಶಿಖರೇಶ್ವರನ ತುದಿಯಲ್ಲಿ ನಿಂತು, ಮುಳುಗುತ್ತಿರುವ ಸೂರ್ಯನ ಹೊಂಗಿರಣಗಳ ಕಾಂತಿಯನ್ನು ಮುಖದ ಮೇಲೆ ಧರಿಸಿ ಮಹಾದೇವಿ, ದೂರದಲ್ಲಿ ಕಾಣುತ್ತಿದ್ದ ಮಲ್ಲಿಕಾರ್ಜುನನ ದೇವಾಲಯದ ಶಿಖರವನ್ನು ಕಂಡು ಪುಳಕಿತಳಾದಳು.

ಶಿಖರೇಶ್ವರನ ಶಿಖರದಿಂದ ಮಾರ್ಗ ನಿಧಾನವಾಗಿ ಕೆಳಗೆ ಇಳಿಯತೊಡಗಿತ್ತು. ಸ್ವಲ್ಪ ದೂರ ನಡೆಯುವುದರೊಳಗಾಗಿ, ಯಾರೋ ಪಕ್ಕದಲ್ಲಿ ತೋರಿಸುತ್ತಾ ಹೇಳಿದರು : "ಅದೋ ಅಲ್ಲಿ ಕಾಣುವುದೇ ಅರ್ಕೇಶ್ವರ."

ಹಿಂದೆ ಗುರುಲಿಂಗರು ಹೇಳಿದ ಅರ್ಕೇಶ್ವರನ ವರ್ಣನೆ ಅಸ್ಪಷ್ಟವಾಗಿ ಮಹಾ ದೇವಿಯ ಮುಂದೆ ಸುಳಿಯಿತು. ಅರ್ಕೇಶ್ವರನ ಹಿಂದೆ ಹರಿಯುತ್ತಿರುವ ಪಂಚಧಾರೆಗಳನ್ನು ನೋಡಬೇಕೆಂದು ನಿರ್ಧರಿಸುತ್ತಾ ಮುಂದೆ ನಡೆದಳು.

ಕತ್ತಲಾಗುವ ವೇಳೆಗೆ ಪರಿಷೆ ತನ್ನ ಗುರಿಯನ್ನು ಸೇರಿತು. ಆ ಗಿರಿಕಂದರದಲ್ಲಿ ದೇವಾಲಯದ ಮಹಾದ್ವಾರದ ಶಿಖರ, ಧೀರನಿಲವಿನಿಂದ ತಲೆಯೆತ್ತಿ ನಿಂತಿತ್ತು.

ಆಲಸ ಮನೋಧರ್ಮದ ಲಘುಜೀವಿಗಳಿಗೆ ತಾನು ದುರ್ಲಭನೆಂಬುದನ್ನು ಸಾರುವುದರ ಸಂಕೇತವಾಗಿಯೇ ಮಲ್ಲಿಕಾರ್ಜುನ ಈ ದುರ್ಗಮವಾದ ಕಾಡಿನ ಪರ್ವತ ಶ್ರೇಣಿಗಳ ಮಧ್ಯದಲ್ಲಿ ನೆಲಸಿದನೆಂಬುದನ್ನು ಘೋಷಿಸುವಂತೆ ತೋರುತ್ತಿತ್ತು ಶಿಖರದ ಹೊನ್ನಕಳಶ.

ಮರ್ತ್ಯಲೋಕದಿಂದ ಪಾರಾಗಿ ಇನ್ನಾವುದೋ ಲೋಕದಲ್ಲಿ ನಡೆಯುತ್ತಿರುವವಳಂತೆ ಮಹಾದೇವಿ ದೇವಾಲಯವನ್ನು ಪ್ರವೇಶಿಸಿದಳು. ಆಕೆ ಬಳಿಗೆ ಬರುತ್ತಿದ್ದಂತೆಯೇ ಕಿಕ್ಕಿರಿದು ನೆರೆದಿದ್ದ ಜನಸಮೂಹ ಆಕೆಗೆ ದಾರಿ ಮಾಡಿಕೊಡುತ್ತಿತ್ತು. ಅವಳ ತೇಜೋಮೂರ್ತಿಯನ್ನು ಸಮೀಪದಿಂದ ಕಂಡೊಡನೆಯೇ ಗೌರವದಿಂದ ನಮಸ್ಕರಿಸಿ ಸರಿದು ನಿಲ್ಲುವರು ಜನ.

ಪರಿಷೆಯ ನಾಯಕ, ಮಹಾದೇವಿಯನ್ನು ಕರೆದುಕೊಂಡು ದೇವಾಲಯದ ಒಂದನೇ ಎರಡನೇ ಆವರಣಗಳನ್ನು ದಾಟಿ, ಗರ್ಭಗೃಹದ ಬಳಿಗೆ ಬಂದ. ಚಿಕ್ಕದಾದ ಗರ್ಭಗೃಹದ ತುಂಬ ಜನ ಕಿಕ್ಕಿರಿದು ತುಂಬಿದ್ದರು. ನಾನು ಮುಂದೆ ತಾನು ಮುಂದೆಂದು ಜನಗಳು ನುಗ್ಗಿ ಮಲ್ಲಿಕಾರ್ಜುನನನ್ನು ಕೈಯಿಂದ ಮುಟ್ಟಿ ನಮಸ್ಕಾರ ಮಾಡುತ್ತಿದ್ದರು. ಅವರಿವರೆಂಬ ಯಾವ ಭೇದವೂ ಇಲ್ಲದೆ ಎಲ್ಲರಿಗೂ ಈ ಸಮಾನ ಅವಕಾಶವಿತ್ತು.

ಜನರೆಲ್ಲ ಹಿಂದೆ ಸರಿದು ಮಹಾದೇವಿಗೆ ಒಳಗೆ ಹೋಗಲು ಅವಕಾಶ ಮಾಡಿ ಕೊಟ್ಟರು. ಗರ್ಭಗೃಹವನ್ನು ಪ್ರವೇಶಿಸಿದಳು ಮಹಾದೇವಿ.

ಶ್ರೀಶೈಲದ ಚನ್ನಮಲ್ಲಿಕಾರ್ಜುನನ ಸಾಕ್ಷಾತ್ ಸನ್ನಿಧಿಯಲ್ಲಿ ಬಂದು ನಿಂತಿದ್ದಾಳೆ! ತನ್ನ ಪತಿ ಚನ್ನಮಲ್ಲಿಕಾರ್ಜುನನ ಹೃದಯಗಹ್ವರವನ್ನು ಹೊಕ್ಕಂತೆಯೇ ಅನಿಸಿತು ಆಕೆಗೆ. ಕಣ್ಣುಗಳಿಂದ ಆನಂದಬಾಷ್ಪಗಳು ಸುರಿಯತೊಡಗಿದ್ದುವು. ಮನಸ್ಸು ಅಂತರಂಗದ ಅರಿವನ್ನು ಆಶ್ರಯಿಸಿ ಸುಷುಪ್ತಿಯನ್ನು ಪಡೆದಂತೆ ತೋರಿತು. ಹಾಗೆಯೇ ಮಲ್ಲಿಕಾರ್ಜುನನ ಸನ್ನಿಧಿಯಲ್ಲಿ ಕುಸಿದು ಕುಳಿತಳು.

ಜನರೆಲ್ಲಾ ಸ್ತಬ್ಧರಾಗಿ ಮಹಾದೇವಿಯನ್ನು ನೋಡುತ್ತಿದ್ದರು. ಕ್ಷಣಕಾಲದ ನಂತರ ಮಹಾದೇವಿ ಎಚ್ಚತ್ತುಕೊಂಡವಳಂತೆ ಕಣ್ದೆರೆದಳು. ಕಣ್ಣುಗಳು ನಕ್ಷತ್ರದಂತೆ ಹೊಳೆಯುತ್ತಿದ್ದವು. ಜ್ಯೋತಿರ್ಲಿಂಗವನ್ನೇ ನೋಡತೊಡಗಿದ್ದಳು.

ಭವ್ಯವಾದ ಆಕಾರದ ದೊಡ್ಡ ಲಿಂಗವಲ್ಲ ಅದು. ನೆಲದಿಂದ ಸ್ವಲ್ಪ ಮಾತ್ರವೇ ಮೇಲೆದ್ದು ಒಂದು ಪಕ್ಕಕ್ಕೆ ಸ್ವಲ್ಪ ಓರೆಯಾದ ಚಿಕ್ಕಮೂರ್ತಿ. ಆದರೆ ಜ್ಯೋತಿರ್ಲಿಂಗವೆಂಬ ಮಾತು ಸಾರ್ಥಕವಾಗುವಂತೆ ಅದು ಹೊಳೆಯುತ್ತಿತ್ತು. ಮಹಾದೇವಿಗೆ ತನ್ನ ಅಂತರಂಗದಲ್ಲಿ ತೋರಿದ ಅಪೂರ್ವವಾದ ರೂಪವೇ

ಬಹಿರಂಗದಲ್ಲಿಯೂ ಪ್ರಕಾಶಿಸಿದಂತಾಯಿತು. ಆ ಆನಂದದಲ್ಲಿಯೇ ತಲ್ಲೀನಳಾಗಿ ಮೈಮರೆತು ಕುಳಿತಿದ್ದಳು.

ಅಲ್ಲಿ ಸೇರಿದ್ದವರೆಲ್ಲರೂ ಅವಳ ಈ ಅಲೌಕಿಕವಾದ ಆನಂದದ ಅನುಭವದಲ್ಲಿ ಭಾಗಿಗಳಾದರು. ದೇವಾಲಯದಿಂದ ಹೊರಟ ಜಯಘೋಷಗಳು, ಭಜನೆಗಳು, ಸುತ್ತಲ ಪರ್ವತ ಪ್ರಾಂತಗಳಲ್ಲಿ ಪ್ರತಿಧ್ವನಿಸಿದುವು. ಕ್ರಮೇಣ ಎಚ್ಚತ್ತುಕೊಂಡ ಮಹಾದೇವಿ ತಾನೂ ಆ ಭಜನೆಯ ಪರಮಾನಂದರಸದಲ್ಲಿ ಭಾಗಿಯಾದಳು.

ರಾತ್ರಿ ಕಳೆದು ಬೆಳಗಾಗುತ್ತಿತ್ತು. ಮಹಾದೇವಿ ಬಹಳ ಮುಂಚೆಯೇ ಎದ್ದು ಮಲ್ಲಿಕಾರ್ಜುನನ ದೇವಾಲಯದ ಎದುರಿನಲ್ಲಿ ಬಂದು ನಿಂತಿದ್ದಳು. ದೇವಾಲಯದ ಸುತ್ತ ಅವನ ಸಾನಿಧ್ಯದ ಸೇವೆಯನ್ನು ಮಾಡುತ್ತಿರುವ ಪ್ರಕೃತಿ ಸೌಂದರ್ಯ, ಮಹಾದೇವಿಯನ್ನು ಸ್ವಾಗತಿಸಲು ಕಾತರಗೊಂಡು ಕಾದು ನಿಂತಿತ್ತು.

ಸೂರ್ಯ ಇನ್ನೂ ಮೂಡಿಬಂದಿರಲಿಲ್ಲ. ಚೇತನದ ಚಿಲುಮೆಯೇ ಉಕ್ಕಿಬರುತ್ತಿರುವಂತೆ ಮೂಡಣದಿಗಂತದಲ್ಲಿ ಅರುಣೋದಯದ ಛಾಯೆ, ಮಂಗಳದ ಓಕುಳಿಯನ್ನು ನಿವಾಳಿಸಿ ಚೆಲ್ಲಿದಂತೆ ಕಾಣಿಸುತ್ತಿತ್ತು. ಸುತ್ತಲೂ ತಲೆಯೆತ್ತಿ ನಿಂತ ಪರ್ವತಶ್ರೇಣಿಗಳು, ಧ್ಯಾನಸ್ಥನಾದ ಯೋಗಿರಾಜ ಮಹಾದೇವನ ಪರಿವಾರವೆಂಬಂತೆ ಮೌನತಪದಿಂದ ನಿಂತು ನಿರೀಕ್ಷಿಸುತ್ತಿದ್ದುವು.

ಮಲ್ಲಿಕಾರ್ಜುನ ದೇವಾಲಯದ ಸ್ಪಷ್ಟವಾದ ನೋಟ, ಈಗ ಭವ್ಯವಾಗಿ ಗೋಚರಿಸುತ್ತಿತ್ತು. ಮಹಾದ್ವಾರದ ಮಹಾಗೋಪುರ, ಪರ್ವತಗಳೊಡನೆ ಸ್ಪರ್ಧೆ ಹೂಡುವಂತೆ ತಲೆಯೆತ್ತಿ ನಿಂತಿತ್ತು. ಗರ್ಭಗೃಹದ ಮೇಲೆ ನಾಲ್ಕು ದಿಕ್ಕಿಗೂ ಇರುವ ನಾಲ್ಕು ಗೋಪುರಗಳು, ಅವೆಲ್ಲದರ ಮೇಲೆ ತುಟ್ಟತುದಿಯಲ್ಲಿ ನಿಂತ ಚಿನ್ನದ ಕಳಶ. ಸೂರ್ಯನು ಪರ್ವತದ ತಲೆಯನ್ನೇರಿ ಬಂದು ಕಾಣಿಸಿಕೊಳ್ಳುವುದಕ್ಕೆ ಮೊದಲೇ ಅವನ ಮೀಸಲು ಕಿರಣಗಳು ಬಂದು ಈ ಹೊನ್ನ ಕಳಶವನ್ನು ಮುತ್ತಿಟ್ಟು, ಅದರ ಮೂಲಕ ಮಲ್ಲಿಕಾರ್ಜುನನ ಪಾದಗಳಿಗೆ ಪ್ರಣಾಮಗಳನ್ನು ಒಪ್ಪಿಸುವಂತೆ ತೋರುತ್ತಿತ್ತು.

ಅನೇಕ ಬಗೆಯ ಹಕ್ಕಿಗಳ ಕಲಕಲರವ ಮಲ್ಲಿಕಾರ್ಜುನನಿಗೆ ಪ್ರಕೃತಿದೇವಿಯು ಒಪ್ಪಿಸುವ ಉದಯರಾಗದಂತೆ ಮಂಜುಳವಾಗಿತ್ತು. ಮಹಾದೇವಿಯು ತಾನೂ ಪ್ರಕೃತಿಯ ಒಂದು ಅಂಗದಂತಾಗಿ ನಿಂತು ನೋಡುತ್ತಿದ್ದಳು ಈ ದೃಶ್ಯ ಸೌಂದರ್ಯವನ್ನು.

ಅಷ್ಟರಲ್ಲಿ ಪರಿಷೆಯ ನಾಯಕ ಬಳಿಗೆ ಬರುತ್ತಾ ಕೇಳಿದ :

"ಪಾತಾಳಗಂಗೆಗೆ ಬರುವುದಿಲ್ಲವೇ, ತಾಯಿ?"

ಅಲ್ಲಿಗೆ ಹೋಗಬೇಕೆಂಬ ಕುತೂಹದಿಂದಲೇ ಕಾಯುತ್ತಿದ್ದಳು ಮಹಾದೇವಿ. ಆತನನ್ನು ಹಿಂಬಾಲಿಸಿದಳು.

ಮಲ್ಲಿಕಾರ್ಜುನನ ದೇವಾಲಯವಿರುವ ಪರ್ವತದ ಕಣಿವೆಯ ಆಳದಲ್ಲಿ ಹರಿಯುತ್ತಿದ್ದಾಳೆ ಕೃಷ್ಣೆ, ಆತನ ಪಾದವನ್ನು ತೊಳೆಯುವಂತೆ. ಪಾತಾಳದಲ್ಲಿಯೋ ಎಂಬಂತೆ ಹರಿಯುತ್ತಿರುವ ಆಕೆಯ ಹೆಸರು ಅಲ್ಲಿ ಪಾತಾಳಗಂಗೆಯೆಂದೇ ಪರಿಣಮಿಸಿದೆ.

ದೇವಾಲಯದ ಪೂರ್ವದಿಕ್ಕಿನಲ್ಲಿ ಸ್ವಲ್ಪ ದೂರ ನಡೆದಳು. ಮುಂದೆ ಅವಳನ್ನು ಪರ್ವತದಿಂದ ಕೆಳಕ್ಕೆ ಇಳಿಸಲು ಪ್ರಾರಂಭಿಸಿತು ಹಾವಿನಂತೆ ಸುತ್ತಿ ಸುತ್ತಿ ಕೆಳಗಿಳಿಯುತ್ತಿರುವ ಮೆಟ್ಟಲಿನ ಮಾರ್ಗ. ಆಗಲೇ ಜನರ ಪ್ರವಾಹ ಮೆಟ್ಟಿಲುಗಳನ್ನು ಇಳಿದು ಗಂಗೆಯೆಡೆಗೆ ಧಾವಿಸುತ್ತಿತ್ತು. ಬರುಬರುತ್ತಾ ಮೆಟ್ಟಿಲುಗಳು ಕಡಿದಾಗಿ ಒಂದೊಂದು ಹೆಜ್ಜೆಯೂ ಕೆಳಗೆ ಕೊಂಡೊಯ್ಯುತ್ತಿತ್ತು.

ಸ್ವಲ್ಪ ದೂರ ಇಳಿಯುವುದರೊಳಗೆ ಕೃಷ್ಣೆಯ ಸಲಿಲದೇಹ ಎಳೆಬಿಸಿಲಿನಲ್ಲಿ ಹೊಳೆಹೊಳೆದು ಗೋಚರಿಸಿತು. ಅದನ್ನು ಮುಟ್ಟಲು ತಾವು ಇನ್ನೂ ಇಳಿಯ ಬೇಕಾಗಿರುವ ಆಳವನ್ನು ಗಮನಿಸಿದ ಮಹಾದೇವಿಗೆ ಇದು ಪಾತಾಳಗಂಗೆಯೇ ಸರಿಯೆನಿಸಿತು.

ಕೆಳಗೆ ಇಳಿದು ಹೋದಂತೆಲ್ಲಾ ಎದುರಿಗೆ ಕಾಣುತ್ತಿದ್ದ ಪರ್ವತಗಳ ಎತ್ತರ ಹೆಚ್ಚುತ್ತಿತ್ತು. ಮೂರು ಪರ್ವತಗಳು ಸೇರುವ ಕಣಿವೆಯ ಆಳದಲ್ಲಿ ಸುತ್ತಿ ಸುತ್ತಿ ಕೃಷ್ಣೆ ಹರಿದು ಬರುತ್ತಿದ್ದಳು. ಕೆಳಗಿಳಿದು ಬಳಿಗೆ ಹೋದಾಗ ಅದುವರೆಗಿನ ಆಯಾಸವೆಲ್ಲಾ ಕ್ಷಣಮಾತ್ರದಲ್ಲಿ ಪರಿಹಾರವಾದಂತಾಯಿತು.

ತಲೆಯೆತ್ತಿ ನೋಡಿದರೆ ನೀಲವಾದ ಆಕಾಶ. ಆ ನೀಲಿಯ ಆಕಾಶಪಟವನ್ನು ಬಿಗಿದು ಕಟ್ಟಿರುವ ಕೂವೆಕಂಬಗಳಂತೆ ಪರ್ವತ ಶಿಖರಗಳು ; ಆ ಪಟ ವಸ್ತ್ರದ ಮೇಲೆ ಚಿನ್ನದ ಕಿರಣಗಳ ಕಸೂತಿಯನ್ನು ನೆಯ್ದಂತೆ ಹೊಂಗಿರಣಗಳಿಂದ ಅಲಂಕೃತವಾದ ಬಿಳಿಯ ಮೋಡಗಳ ಸಾಲುಗಳು. ಈ ಅಲಂಕಾರಕ್ಕೆಲ್ಲ ಚೈತನ್ಯದ ಕಣ್ಣು ಕೊಡುವಂತೆ ಮೇಲೇರಿ ಬರುತ್ತಿರುವ ದಿನಮಣಿ ಸೌಂದರ್ಯದ ವೈಭವದಲ್ಲಿಯೇ ಶಿವ ಅವಿರ್ಭವಿಸಿದಂತೆ ತೋರಿತು.

ಸ್ನಾನ ಮಾಡಿದಳು ಮಹಾದೇವಿ. ಸೌಂದರ್ಯರೂಪಿ ಶಿವನ ಪೂಜೆಯಲ್ಲಿ ತಲ್ಲೀನಳಾಗಿ, ತನ್ನ ವಚನವನ್ನು ಹಾಡಿದಳು :

ವನವೆಲ್ಲಾ ನೀವೇ, ವನದೊಳಗಣ ದೇವತರುವೆಲ್ಲಾ ನೀವೇ
ತರುವಿನೊಳಗಾಡುವ ಖಗಮೃಗವೆಲ್ಲಾ ನೀವೇ

ಎಂದು ಹೇಳುತ್ತಿದ್ದಂತೆಯೇ ಶಿವ ಸರ್ವಭರಿತನಾಗಿ ಮುಖ ದೋರುತ್ತಿರುವಂತೆ ತೋರಿತು. ಪೂಜಾರಸದಲ್ಲಿ ಮಗ್ನಳಾಗಿ ತನ್ನನ್ನು ತಾನು ಮರೆತಳು. ಧ್ಯಾನದಿಂದ ಬಹಿರ್ಮುಖಳಾಗಬೇಕಾದರೆ ಅವಳು ಉಟ್ಟ ಒದ್ದೆ ಬಟ್ಟೆ ತಾನಾಗಿಯೇ ಒಣಗಿ ಹೋಗಿತ್ತು.

ಮೇಲೆದ್ದು ಪಾತಾಳಗಂಗೆಯನ್ನು ಏರತೊಡಗಿದಳು. ಅದನ್ನು ಏರುವಾಗ ದೇಹಕ್ಕೆ ಆಗಬಹುದಾದ ಶ್ರಮವೆಲ್ಲಾ ಸುತ್ತಲಿನ ವಾತಾವರಣದ ಶ್ರೀಮಂತ ಸನ್ನಿವೇಶದಿಂದ ಸಂತೋಷದಾಯಕವೇ ಆಗಿ ಪರಿಣಮಿಸುತ್ತಿತ್ತು.

ಆ ದಿನವೆಲ್ಲಾ ಉಪವಾಸ, ರಾತ್ರಿಯೆಲ್ಲಾ ಜಾಗರಣೆ, ದೇವಾಲಯದ ಸುತ್ತಲೂ ತಂಡತಂಡವಾದ ಭಜನೆಗಳ ಗುಂಪುಗಳು, ಶಿವನಾಮಘೋಷಣೆಗಳನ್ನು ಆಗಸಕ್ಕೇರಿಸುತ್ತಿದ್ದವು. ಮಹಾದೇವಿಯೂ ಅಂದು ಬೆಳಗಿನವರೆಗೂ ಶಿವಮಂತ್ರಘೋಷದ ಅಲೆಯಲ್ಲಿ ತೇಲುತ್ತಾ ಜಾಗರಣೆ ಮಾಡಿದಳು.

ಬೆಳಗ್ಗೆ ಮತ್ತೆ ಪಾತಾಳಗಂಗೆಗೆ ಹೋಗಿ ಸ್ನಾನಪೂಜಾದಿ ವಿಧಿಗಳನ್ನು ಮುಗಿಸಿಕೊಂಡು ಮೇಲೆ ಬರುವ ವೇಳೆಗೆ ನಾಲ್ಕಾರು ಕಡೆಗಳಲ್ಲಿ ದಾಸೋಹದ ಸಂತರ್ಪಣೆಯ ಏರ್ಪಾಡು ನಡೆಯುತ್ತಿತ್ತು. ಪ್ರಸಾದವನ್ನು ಸ್ವೀಕರಿಸಿದಳು ಮಹಾದೇವಿ. ಅನಂತರ ಸಂಜೆಯವರೆಗೂ ವಿಶ್ರಾಂತಿ.

ಸಂಜೆ ಯಾತ್ರಾರ್ಥಿಗಳೆಲ್ಲಾ ಸುತ್ತಮುತ್ತಲಿನ ಪ್ರದೇಶಗಳನ್ನು ಹೋಗಿ ನೋಡಿ ಬಂದರು.

ಮರುದಿನ ಬೆಳಗ್ಗೆ ಎಲ್ಲರೂ ಹೊರಟು ನಿಂತರು ಶ್ರೀಶೈಲದಿಂದ. ಮಹಾದೇವಿ ಹೊರಡುವ ಸೂಚನೆಗಳನ್ನು ತೋರಿಸದಿದ್ದುದನ್ನು ಕಂಡ ಪರಿಷೆಯ ನಾಯಕ ಬಳಿಗೆ ಬಂದು ಹೊರಡಲು ಹೊತ್ತಾಯಿತೆಂದು ಸೂಚಿಸಿದ.

ಆದರೆ ಮಹಾದೇವಿ ಹೇಳಿದಳು :

"ಇಲ್ಲ, ಸ್ವಾಮಿ, ನಾನು ಮತ್ತೆ ಹಿಂದಿರುಗಿ ಹೋಗುವುದಕ್ಕಾಗಿ ಶ್ರೀಶೈಲಕ್ಕೆ ಬಂದವಳಲ್ಲ. ಈ ಮಲ್ಲಿಕಾರ್ಜುನನ ಸನ್ನಿಧಿಯೇ ನನ್ನ ಉಳಿದ ಜೀವನದ ಅವಲಂಬನೆ."

ಈ ಮಾತನ್ನು ಕೇಳಿ ಆತ ಅವಾಕ್ಕಾಗಿ ನಿಂತ. ಕೇಳಿದವರೆಲ್ಲರೂ ಚಕಿತರಾಗಿ ಮೂಕಗೌರವದಿಂದ ತಲೆಬಾಗಿದರು. ಅವಳ ಸಾಹಸವನ್ನು ತಪ್ಪಿಸಲು ಯತ್ನಿಸಿದರು. ಎಲ್ಲವೂ ವಿಫಲವಾಯಿತು. ನಿರ್ವಾಹವಿಲ್ಲದೆ ಪರಿಷೆ ಅವಳನ್ನು ಬಿಟ್ಟು ಹೊರಡಬೇಕಾಯಿತು.

ಎತ್ತರವಾದ ಶಿಲಾಪೀಠದ ಮೇಲೆ ಕುಳಿತಿದ್ದಳು ಮಹಾದೇವಿ. ಎಲ್ಲರೂ ಬಂದು ಅವಳಿಗೆ ನಮಸ್ಕಾರಮಾಡಿ ಹೋಗುತ್ತಿದ್ದರು. ತದೇಕಚಿತ್ತಳಾಗಿ ಕುಳಿತು ಎಲ್ಲರನ್ನೂ ನೋಡುತ್ತಿದ್ದಳು.

ಜನರಿಂದ ತುಂಬಿ ಮೆರೆಯುತ್ತಿದ್ದ ಶ್ರೀಶೈಲ, ಮಧ್ಯಾಹ್ನದ ವೇಳೆಗೆ ನಿರ್ಜನವಾದಂತೆ ತೋರಿತು. ಮೌನದ ಮಹಾಸಾಮ್ರಾಜ್ಯ, ಶ್ರೀಶೈಲವನ್ನಾಳ ತೊಡಗಿತು. ಅಧ್ಯಾತ್ಮ ಸಾಮ್ರಾಜ್ಯದ ಮಹಾಚಕ್ರವರ್ತಿನಿಯೆಂಬಂತೆ ಕಂಗೊಳಿಸುತ್ತಿದ್ದ ಮಹಾದೇವಿ ಮೇಲೆದ್ದು ನಿಧಾನವಾಗಿ ಮಲ್ಲಿಕಾರ್ಜುನನ ದೇವಾಲಯದತ್ತ ನಡೆಯತೊಡಗಿದಳು.

## ೮

ಮಹಾದೇವಿಗೆ ಈಗ ಇಡೀ ಶ್ರೀಶೈಲಪರ್ವತವೇ ತನ್ನ ಪತಿಯ ಏಕಾಂತ ಮಂದಿರದಂತೆ ತೋರುತ್ತಿತ್ತು. ಜನರ ಕೋಲಾಹಲವೆಲ್ಲಾ ಅಡಗಿ ಗಂಭೀರತೆಯೇ ಮೈವೆತ್ತು ನಿಂತಿತ್ತು. ನಿಧಾನವಾಗಿ ನಡೆಯುತ್ತಾ ಬಂದು ಮಹಾದೇವಿ ದೇವಾಲಯವನ್ನು ಪ್ರವೇಶಿಸಿದಳು.

ದೇವಾಲಯದ ಆವರಣದ ಒಳಭಾಗದಲ್ಲಿ ನಾಲ್ಕಾರು ಜನ ಕುಳಿತಿದ್ದರು. ಮಲ್ಲಿಕಾರ್ಜುನನ ಪೂಜಾವರ್ಗಕ್ಕೆ ಸೇರಿದವರು ಅವರು. ಅವರಿಂದ ಸ್ವಲ್ಪ ದೂರದಲ್ಲಿ, ಸ್ಥಳನಿವಾಸಿಗಳಾದ ಕೆಲವರು ಚುಂಚರು ವಿನಯದಿಂದ ಕೈಕಟ್ಟಿ ನಿಂತಿದ್ದರು. ಮೈಮೇಲೆ ಹರಕು ಚಿಂದಿಯ ಬಟ್ಟೆ, ಕುರುಚಲು ಗಿಡದಂತೆ ಕೆದರಿದ ಕೂದಲು, ಕೈಯಲ್ಲಿ ಬಿಲ್ಲುಬಾಣಗಳು.

ಮಹಾದೇವಿಯನ್ನು ಕಂಡೊಡನೆಯೇ ಆಶ್ಚರ್ಯಗೊಂಡ ಅರ್ಚಕವೃಂದ ಮೇಲೆದ್ದು ಸ್ವಾಗತಿಸಿತು. ಅವರಲ್ಲಿ ಪ್ರಮುಖನಾದ ಅರ್ಚಕ ಮುಂದೆ ಬರುತ್ತಾ ಕೇಳಿದ:

"ಏಕೆ ತಾಯಿ ? ತಾವು ಪರಿಷೆಯ ಜೊತೆಗೆ ಹೋಗಲಿಲ್ಲವೇ?"

ಇವರೊಡನೆ ಮಾತನಾಡಬೇಕೆಂದು, ತಾನು ಇದುವರೆಗೆ ಕಲಿತ ಹರಕು ಮುರುಕು ತೆಲುಗನ್ನು ಜ್ಞಾಪಿಸಿಕೊಳ್ಳುತ್ತಿದ್ದ ಮಹಾದೇವಿಗೆ ಅರ್ಚಕನ ಸ್ಪಷ್ಟವಾದ ತಿರುಳುಗನ್ನಡವನ್ನು ಕೇಳಿ ಆಶ್ಚರ್ಯವಾಯಿತು. ಅದನ್ನು ಅರಿತ ಅರಿತ ಅರ್ಚಕ, ಆಕೆ ಮಾತನಾಡುವುದಕ್ಕೆ ಮೊದಲೇ ಹೇಳಿದ :

"ನಾನೂ ಕನ್ನಡನಾಡಿನವನೇ, ತಾಯಿ. ಮಲ್ಲಿಕಾರ್ಜುನನ ಪ್ರಧಾನ ಅರ್ಚಕ ವೃಂದ ಕನ್ನಡನಾಡಿನದು. ಶ್ರೀಶೈಲದೊಡನೆ ಕನ್ನಡನಾಡಿನ ಸಂಬಂಧ ಬಹಳ ನಿಕಟವಾದುದು."

ಮಹಾದೇವಿಗೆ ತುಂಬಾ ಸಂತೋಷವಾಯಿತು. ಆ ಮಾತುಗಳನ್ನು ಕೇಳಿ ಹೇಳಿದಳು :

"ಆ ನಿಕಟವಾದ ಸಂಬಂಧವನ್ನು ಇನ್ನೂ ಹೆಚ್ಚು ಹತ್ತಿರಗೊಳಿಸುವುದಕ್ಕಾಗಿ ನಾನು ಇಲ್ಲಿಯೇ ಉಳಿದಿದ್ದೇನೆ. ನಾನು ಹಿಂದಿರುಗಿ ಹೋಗುವುದಕ್ಕಾಗಿ ಬಂದವಳಲ್ಲ. ಮಲ್ಲಿಕಾರ್ಜುನನನ್ನು ಮದುವೆಯಾಗಿ ಶ್ರೀಶೈಲಕ್ಕೆ ಸೊಸೆಯಾಗಿ ಬಂದವಳು."

ಮಾತನ್ನೇನೂ ಆಡಲಾರದವನಾದ ಅರ್ಚಕ. ಶ್ರೀಶೈಲಕ್ಕೆ ಬರುವ ತಪಸ್ವಿಗಳನ್ನೇನೂ ಆತ ಕಾಣದವನಲ್ಲ. ಶ್ರೀಶೈಲ ಪರ್ವತದ ಗುಹೆಯಲ್ಲಿ ಅಲ್ಲಲ್ಲಿ ಸಾಧನೆಯಲ್ಲಿ ತೊಡಗಿರುವ ಸಾಧಕರನ್ನೂ ಆತ ಬಲ್ಲ. ಆದರೂ ಮಹಾದೇವಿಯ ಮಾತುಗಳನ್ನೂ ಮತ್ತು ಆ ಮಾತಿಗೆ ಮೀರಿದ ಆಚರಣೆಯ ಅರಿವನ್ನೂ ಸಾಕ್ಷಾತ್ತಾಗಿ ಕಂಡು ಪವಾಡದರ್ಶನವಾದಂತಾಯಿತು ಅರ್ಚಕನಿಗೆ ಮತ್ತು ಅಲ್ಲಿದ್ದವರಿಗೆ.

ಅರ್ಚಕನು ಚುಂಚರ ಕಡೆಗೆ ತಿರುಗಿ ಅವರ ಮಾತಿನಲ್ಲಿ ಎಲ್ಲವನ್ನೂ ವಿವರಿಸಿದ. ಆ ಮುಗ್ಧ ಚುಂಚುರು ಭಯಮಿಶ್ರಿತವಾದ ಗೌರವ ಭಾವನೆಯಿಂದ ಬಂದು ದೂರದಲ್ಲಿ ದಿಂಡುಗೆಡೆದರು ಮಹಾದೇವಿಯ ಎದುರು.

ಅರ್ಚಕ ಹೇಳಿದ ಮಹಾದೇವಿಗೆ :

"ಈ ಕಾಡುಜನ ಚುಂಚರು, ನಂಬಿದರೆ ಬಹಳ ಒಳ್ಳೆಯವರು. ತಮ್ಮ ಪ್ರಾಣವನ್ನು ಬೇಕಾದರೂ ಕೊಡಲು ಸಿದ್ಧರಾಗುತ್ತಾರೆ. ನಾನು ನಿಮ್ಮ ವಿಷಯವೆಲ್ಲವನ್ನೂ ಇವರಿಗೆ ಹೇಳಿದ್ದೇನೆ. ಈ ಕಾಡುಜನರಿಗೆಲ್ಲಾ ಮುಖಂಡ ಇವನು" ಎಂದು ಅವರಲ್ಲಿ ಪ್ರಧಾನವಾಗಿ ಕಾಣುತ್ತಿದ್ದ ಒಬ್ಬನನ್ನು ತೋರಿಸಿದ. ಅರ್ಚಕನ ಮಾತೇ ಮತ್ತೆ ಮುಂದುವರಿಯಿತು.

"ಇವನು ಹಾಕಿದ ಗೆರೆಯನ್ನು ಇವನ ಜನಾಂಗದವರಾರೂ ದಾಟುವುದಿಲ್ಲ. ಶ್ರೀಶೈಲ ಪ್ರಾಂತದ ತುಂಬಾ ಅಲ್ಲಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಇವರು ವಾಸಿಸುತ್ತಿದ್ದಾರೆ. ನೀವು ಬರುವಾಗ ದಾರಿಯಲ್ಲಿ ಮೂರು ನಾಲ್ಕು ಕಡೆ ಇವರ ಗುಡಿಸಲುಗಳನ್ನು ನೋಡಿರಬಹುದು, ಇಲ್ಲಿ ಅರ್ಕೇಶ್ವರನ ಬಳಿಯಲ್ಲಿಯೇ ಇವರ ಒಂದು ಹಳ್ಳಿಯಿದೆ. ಕದಳಿಯ ವನದ ಸಮೀಪದಲ್ಲಿಯೂ ಇವರು ಇದ್ದಾರೆ...."

'ಕದಳಿ'ಯೆಂಬ ಮಾತು ಬಂದೊಡನೆ ಮಹಾದೇವಿಯ ಕುತೂಹಲ ಸಿಡಿದು ನಿಂತಿತು. ಮಧ್ಯದಲ್ಲಿಯೇ ಪ್ರಶ್ನಿಸಿದಳು ಅರ್ಚಕನನ್ನು :

"ಕದಳಿಯ ವನ ಯಾವ ಕಡೆ ಇದೆ, ಸ್ವಾಮಿ ? ಅಲ್ಲಿಗೆ ಹೋಗಬೇಕೆಂದು ನಾನು ಬಹಳ ಕಾತುರಗೊಂಡು ಬಂದಿದ್ದೇನೆ."

ಅರ್ಚಕರೆಲ್ಲಾ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಪ್ರಧಾನ ಅರ್ಚಕ ಮತ್ತೆ ಹೇಳಿದ :

"ಅದು ಬಹಳ ಕಠಿಣವಾದ ಮಾರ್ಗ. ಶಂಕರಾಚಾರ್ಯರು ಮತ್ತು ಅದಕ್ಕೆ ಮೊದಲು ಆಂಜನೇಯ ಮೊದಲಾದವರು ಕೂಡ ತಪಸ್ಸು ಮಾಡಿದ ಸ್ಥಳ ಅದು ಎಂದು ಹೇಳುತ್ತಾರೆ. ಇದುವರೆಗೂ ಹೆಣ್ಣುಮಕ್ಕಳಾರೂ ಅಲ್ಲಿಗೆ ಹೋಗಿಲ್ಲ. ಬಹುಶಃ ಹೋಗಲಾರದಂತಹ ಮಾರ್ಗವೆಂದೆನಿಸುತ್ತದೆ."

ಈ ಮಾತುಗಳಿಂದ ವಿಚಲಳಾಗದೆ ಹೇಳಿದಳು ಮಹಾದೇವಿ :

"ನಾನು ಅಲ್ಲಿಗೆ ಹೋಗಲೇಬೇಕೆಂಬ ದೃಢಸಂಕಲ್ಪದಿಂದ ಬಂದಿದ್ದೇನೆ. ಅದು ಎಲ್ಲಿ ಇರುವುದೆಂಬುದು ತೋರಿಸಿ ಉಪಕರಿಸಬೇಕು."

"ಅಂತಹ ಬಲವತ್ತರವಾದ ಸಂಕಲ್ಪ ನಿಮ್ಮದಾದರೆ ಅದಕ್ಕೆ ನನ್ನ ಸಹಾಯವನ್ನು ನಾನು ಮಾಡುತ್ತೇನೆ. ಈ ಚುಂಚರಿಗೆ ಹೇಳಿದರೆ ಅದರ ಭಾರವನ್ನು ಅವರು ವಹಿಸಿಕೊಳ್ಳುತ್ತಾರೆ. ಆದರೆ ನೀವು ಮಾತ್ರ ಶ್ರಮವನ್ನು ಸಹಿಸಲು ಸಿದ್ಧರಾಗಬೇಕಾಗುತ್ತದೆ" ಹೇಳಿದ ಅರ್ಚಕ.

"ಈ ಶ್ರಮದಲ್ಲಿಯೇ ಇದೆ ನನ್ನ ಜೀವನದ ಸಂತೋಷ." ಮಹಾದೇವಿ ಹೇಳಿದಳು.

ಅನಂತರ ಅರ್ಚಕ ಆ ಚುಂಚರ ಮುಖಂಡನ ಸಂಗಡ ಬಹಳ ಹೊತ್ತು ಮಾತನಾಡಿದ. ಕೊನೆಗೆ ತೃಪ್ತಿಯಿಂದ ಮಹಾದೇವಿಯತ್ತ ತಿರುಗಿ ಹೇಳಿದ :

"ನಿಮ್ಮ ಇಷ್ಟ ಕೈಗೊಡುತ್ತದೆ, ತಾಯಿ. ಇವರು ಎಲ್ಲ ಏರ್ಪಾಡುಗಳನ್ನೂ ಮಾಡಲು ಒಪ್ಪಿದ್ದಾರೆ. ಕದಳಿ ಬನದ ಬಳಿಯಲ್ಲಿಯೂ ಇವರ ಗುಡಿಸಲುಗಳಿವೆ. ಮಾರ್ಗಮಧ್ಯದಲ್ಲಿಯೂ ಒಂದೆರಡು ಕಡೆ ಇವರ ಹಳ್ಳಿಗಳು ಸಿಕ್ಕುತ್ತವೆ. ಅವರೆಲ್ಲರಿಗೂ ತಿಳಿಸಿ ಮಾರ್ಗವನ್ನು ತೋರಿಸುವ ಏರ್ಪಾಡು ಮಾಡುವುದಾಗಿ ಹೇಳಿದ್ದಾನೆ ಈತ.

ಈ ಹಾಸುಬಂಡೆ ಹತ್ತಾರು ಹೆಜ್ಜೆಗಳಷ್ಟು ದೂರ ಚಾಚಿ ಹಬ್ಬಿತ್ತು. ಮುಂದೆ ಇದ್ದಕ್ಕಿದ್ದಂತೆಯೆ ಅದು ಇಲ್ಲದಂತಾಗಿ ಆಳವಾದ ಕಣಿವೆಗೆ ದಾರಿ ಮಾಡಿಕೊಟ್ಟಿತ್ತು. ಬಂಡೆಯನ್ನು ನೇರವಾಗಿ ಕತ್ತರಿಸಿದಂತಾಗಿ ಕಣಿವೆಯ ಮಹಾಪ್ರಪಾತ

ಪ್ರಾರಂಭವಾಗುತ್ತಿತ್ತು ಆ ಕಲ್ಲಿನ ಅಂಚಿನಿಂದ. ಅಲ್ಲಿ ನಿಂತು ಕೆಳಗೆ ನೋಡಿದರೆ ಆಳವಾದ ಕಮ್ಮರಿಯ ಕಾಣಲಾಗದ ತಳ ಕಣ್ಣಿಗೆ ಬೀಳುತ್ತಿತ್ತು. ಆ ಕಲ್ಲಿನ ಅಂಚಿನಿಂದ ಒಂದು ಹೆಜ್ಜೆ ಮುಂದಿಟ್ಟರೆ ಅತ್ತ ಇತ್ತ ತಾಗದೆ ನೇರವಾಗಿ ಪಾತಾಳವನ್ನು ಸೇರುತ್ತಿತ್ತು ದೇಹ.

ಮಹಾದೇವಿ ಧೈರ್ಯ ಮಾಡಿ ತುದಿಗೆ ಹೋಗಿ ಬಗ್ಗಿ ನೋಡಿದಳು. ಕೆಳಗೆ ನೆಲವೇ ಕಾಣದಷ್ಟು ಆಳವಾಗಿದ್ದಂತೆ ತೋರಿತು ಕಮ್ಮರಿ. ಕಣ್ಣಿಗೆ ಕತ್ತಲೆ ಬಂದಂತಾಯಿತು. ಹಾಗೆಯೇ ಹಿಂದಕ್ಕೆ ಸರಿದಳು. ಪ್ರಕೃತಿ ನಿರ್ಮಿತವಾದ ಭವ್ಯಭಯಂಕರ ಪವಾಡದಂತೆ ತೋರಿತು ರುದ್ರಗಮ್ಮರಿ.

ಸಿದ್ಧರಾಮ ಅದರ ತುದಿಯಲ್ಲಿ ನಿಂತು ಕಣ್ಣುಮುಚ್ಚಿ ಕೆಳಗೆ ಬೀಳಲು ಹೋದಾಗ ಅವನ ಮನಸ್ಸಿನ ಕಮ್ಮರಿಯಲ್ಲಿ ಶಿವ ಮೂಡಿದ. ಅದರಿಂದ ಇಡೀ ರುದ್ರಗಮ್ಮರಿಯನ್ನೇ ಶಿವ ತುಂಬಿ ತುಳುಕಿದಂತಹ ಅನುಭವವಾಯಿತು ಸಿದ್ಧರಾಮನಿಗೆ. ಜೀವನದ ಸಾರ್ಥಕತೆಯ ರಹಸ್ಯ ಮಿಂಚಿನಂತೆ ಹೊಳೆಯಿತು. ಧ್ರುವನಕ್ಷತ್ರದಂತೆ ಸ್ಥಿರವಾಯಿತು.

ಇದನ್ನೆಲ್ಲಾ ಸಿದ್ಧರಾಮನ ಬಾಯಿಂದ ಕೇಳಿದ್ದಳು ಮಹಾದೇವಿ. ಅದನ್ನು ಈಗ ನೆನಪಿಸಿಕೊಳ್ಳುತ್ತಿದ್ದಳು :

'ನಿಜ, ಇಂತಹ ಭವ್ಯವಾದ ಪ್ರಕೃತಿ ವಿಗ್ರಹದ ನಗ್ನ ಸೌಂದರ್ಯದ ಎದುರಿನಲ್ಲಿ ಮಾನವನ ಅಲ್ಪತೆ ಅಳಿದು ಅರಿವಿಗೆ ಮೀರಿದ ಆನಂದ, ಮಿಂಚಿನ ಪರ್ವತದಂತೆ ಬೆಳೆದು ನಿಂತರೆ ಆಶ್ಚರ್ಯವಿಲ್ಲ' ಎಂದುಕೊಂಡಳು.

ಬಹಳ ಹೊತ್ತು ಅಲ್ಲಿ ಕುಳಿತಿದ್ದು ಅನಂತರ ನಿಧಾನವಾಗಿ, ಇಳಿದ ಮಾರ್ಗದಿಂದಲೇ ಮೇಲೇರತೊಡಗಿದಳು.

ಅದರ ಸಮೀಪದಲ್ಲಿಯೇ ಸಿದ್ಧರಾಮನ ಕೊಳ. ಎತ್ತರವಾದ ಆ ಪರ್ವತ ಪ್ರದೇಶದಲ್ಲಿ ಒಂದು ಕಲ್ಲಿನ ಗುಹೆ. ಕಲ್ಲಿನಿಂದ ಅಲ್ಲಿ ನೀರು ಜಿನುಗುತ್ತಾ ಒಂದು ಸಣ್ಣ ಕೊಳವಾಗಿ ಮಾರ್ಪಟ್ಟಿತ್ತು. ಸಿದ್ಧರಾಮ ಮಲ್ಲಿಕಾರ್ಜುನನಿಗಾಗಿ ಹಂಬಲಿಸಿ ಅತ್ತನಂತೆ. ಅವನ ಪವಿತ್ರವಾದ ಕಣ್ಣೀರೇ ಜಲಾಶಯವಾಗಿ ನೆಲಸಿತಂತೆ !

ಮಹಾದೇವಿ ಒಳಗೆ ಹೋಗಿ ಆ ಪವಿತ್ರಜಲವನ್ನು ಕೈಗೆತ್ತಿಕೊಂಡಳು. ಶುಭ್ರವಾದ ತಿಳಿನೀರು ತಣ್ಣಗೆ ಕೊರೆಯುತ್ತಿತ್ತು. ಒಂದು ಗುಟುಕು ಕುಡಿದಳು. ದುಃಖದ ಕಣ್ಣೀರಿನ ಅನಂತರ ಬಂದ ಮಲ್ಲಿಕಾರ್ಜುನನ ಅನುಭವದ ಸುಖದಂತೆ ಅದು ಸಿಹಿಯಾಗಿತ್ತು.

ಇನ್ನೊಂದು ದಿನ ಮಹಾದೇವಿ ಅರ್ಕೇಶ್ವರನ ಬಳಿಗೆ ಹೋದಳು. ಅರ್ಕೇಶ್ವರನ ಮುಂದೆ ಅತಿ ಸುಂದರವಾದ ಒಂದು ತಿಳಿನೀರಿನ ಕೊಳ. ದಡದ ಮೇಲಿರುವ ಮರಗಳಿಂದ ಉದುರಿದ ಹೂವುಗಳು ನೀಲಿಯ ಆಕಾಶದಲ್ಲಿರುವ ನಕ್ಷತ್ರಗಳಂತೆ ನೀರಿನ ಮೇಲೆ ತೇಲುತ್ತಿದ್ದವು.

ದೇವಾಲಯದ ಹಿಂಭಾಗದಲ್ಲಿ ಪರ್ವತ, ಇಳಿಯಲು ತೊಡಗಿ ಒಂದು ಚಿಕ್ಕ ಕಣಿವೆಯಾಗಿತ್ತು. ಕಲ್ಲಿನಿಂದ ಇದ್ದಕ್ಕಿದ್ದಂತೆಯೇ ವ್ಯಕ್ತವಾಗಿ ಐದು ಕಡೆಗಳಲ್ಲಿ ನೀರಿನ ಸೆಲೆ ಉಕ್ಕಿಹರಿಯುತ್ತಿತ್ತು. ಶಿವನ ಕರುಣೆಯ ಅಮೃತಾಂಬುವಿನಂತೆ ಉಕ್ಕಿಹರಿಯುತ್ತಿರುವ ಈ ಪಂಚಧಾರೆಗಳ ರಹಸ್ಯವನ್ನು ಅರಿತು ಸೇವಿಸಿದರೆ ಮರಣವಿಲ್ಲೆಂಬ ಗುರುಗಳ ಮಾತನ್ನು ನೆನೆದಳು.

ಪಂಚಧಾರೆಗಳೆಲ್ಲವೂ ಮುಂದೆ ಒಂದಾಗಿ ಸೇರಿ ಹರಿದು ಆ ಕಣಿವೆಯ ವೃಕ್ಷಸಂತತಿಗೆ ಜೀವದಾನ ಮಾಡುವಂತೆ ಮುಂದೆ ಸುರಿಯುತ್ತಿದ್ದವು.

ದಟ್ಟ ಹಸುರಿನಿಂದ ಕೂಡಿರುವ ಈ ಸಣ್ಣ ಕಣಿವೆಯ ಪ್ರಕೃತಿ ಸೌಂದರ್ಯ ತುಂಬಾ ಮನೋಹರವಾಗಿತ್ತು. ಶ್ರೀಶೈಲದಲ್ಲಿರುವ ಎಲ್ಲ ಬಗೆಯ ಹಕ್ಕಿಗಳಿಗೂ ಇದು ಆವಾಸ ಸ್ಥಾನವಾಗಿದೆಯೆಂಬಂತೆ ಅವುಗಳ ಕೂಜನದಿಂದ ಕೋಲಾಹಲಮಯವಾಗಿತ್ತು. ರುದ್ರಗಮ್ಮರಿಯಲ್ಲಿ ಪ್ರಕೃತಿಭೈರವಿಯ ಭಯಂಕರ ಮುಖವನ್ನು ಕಂಡ ಮಹಾದೇವಿ; ಇಲ್ಲಿ ಅದರ ಇನ್ನೊಂದು ಮುಖವನ್ನು ಕಂಡಳು. ಸಿರಿಹಸುರಿನಿಂದ ಕೂಡಿದ ಪ್ರಕೃತಿ ಶಂಕರಿಯ ಈ ಮುಖ ಮನೋಹರವಾಗಿ ಕಾಣಿಸಿತು ಮಹಾದೇವಿಗೆ.

ಹೀಗೆ ನಾಲ್ಕಾರು ದಿನಗಳು ಶ್ರೀಶೈಲದಲ್ಲಿ ಕಳೆದವು. ನಿತ್ಯವೂ ಪಾತಾಳ ಗಂಗೆಯಲ್ಲಿ ಸ್ನಾನ, ಪೂಜೆ ; ಒಂದೊಂದು ದಿನ ಒಂದೊಂದು ಶಿಖರವನ್ನೋ, ತೀರ್ಥವನ್ನೋ ನೋಡಿಬರುವುದು ; ಮಲ್ಲಿಕಾರ್ಜುನನ ಸಾನಿಧ್ಯದಲ್ಲಿ ತನ್ನ ಆನಂದಾನುಭವದ ವಚನಗಾಯನ ; ಹೀಗೆ ಸಾಗಿತ್ತು.

ಅಂದು ಮಹಾದೇವಿ ಮಲ್ಲಿಕಾರ್ಜುನನ ಮುಂದೆ ಕುಳಿತು ಹಾಡುತ್ತಿರುವುದನ್ನು ಪ್ರಧಾನ ಅರ್ಚಕ ಕೇಳಿದ :

ಹೊಳೆವ ಕೆಂಜೆಡೆಗಳ, ಮಣಿಮಕುಟದ
ಒಪ್ಪುವ ಸುಲಿವಲ್ಲ ನಗೆಮೊಗದ,
ಕಂಗಳ ಕಾಂತಿಯಿಂ ಈರೇಳು ಭುವನಮಂ ಬೆಳಗುವ
ದಿವ್ಯ ಸ್ವರೂಪವನು ಕಂಡೆ ನಾನು.
ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು.

ಗಂಡಗಂಡರನೆಲ್ಲ ಹೆಂಡಹೆಂಡಿರಾಗಿ
ಆಳುವ ಗರುವನ ಕಂಡೆ ನಾನು.
ಜಗದಾದಿ ಶಕ್ತಿಯೊಳು ಬೆರಸಿ ಒಡನಾಡುವ
ಪರಮಗುರು ಚನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.

ಹಾಡು ಮುಗಿಯಿತು. ಗೌರವಭಾವನೆಯಿಂದ ಬಳಿಗೆ ಬಂದು ಅರ್ಚಕ ನಮಸ್ಕರಿಸುತ್ತಾ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದ ಮತ್ತು ಕೊನೆಯಲ್ಲಿ ಹೇಳಿದ : "ನಾಳೆಯ ದಿನ ನಾವು ಆತ್ಮಕೂರಿಗೆ ಹೋಗುತ್ತೇವೆ. ಯುಗಾದಿಯ ವೇಳೆಗೆ ಮತ್ತೊಮ್ಮೆ ಯಾತ್ರಿಕರ ಪರಿಷೆ ಇಲ್ಲಿ ಸೇರುತ್ತದೆ. ಇಷ್ಟೊಂದಲ್ಲದಿದ್ದರೂ ಆಗಲೂ ತಕ್ಕಮಟ್ಟಿಗೆ ಗಲಾಟೆ ಇರುತ್ತದೆ, ಆಗ ಮತ್ತೆ ಬರುತ್ತೇವೆ – ನಾವೆಲ್ಲಾ."

ಮಹಾದೇವಿಯೂ ಕದಳಿಯ ವನಕ್ಕೆ ಹೋಗುವ ನಿರ್ಧಾರವನ್ನು ಆಗಲೇ ಮಾಡಿದ್ದಳು :

"ನಾನೂ ನಾಳೆ ಕದಳಿಯ ವನದತ್ತ ಪ್ರಯಾಣವನ್ನು ಕೈಗೊಳ್ಳಬೇಕೆಂದು ನಿರ್ಧರಿಸಿದ್ದೇನೆ." ತನ್ನ ಮನೋಗತವನ್ನು ತಿಳಿಸಿದಳು.

"ಆಗಲಿ ತಾಯಿ, ಚುಂಚರಿಗೆಲ್ಲಾ ಆಗಲೇ ನಾನು ತಿಳಿಸಿದ್ದೇನೆ. ಯಾವ ದಿನ ಬೇಕಾದರೂ ತಾವು ಹೊರಡಬಹುದು. ಸಾಧ್ಯವಾದ ಎಲ್ಲ ಅನುಕೂಲಗಳನ್ನೂ ಅವರು ಮಾಡಿಕೊಡುತ್ತಾರೆ." ಅರ್ಚಕ ತಾನು ಮಾಡಿರುವ ಏರ್ಪಾಡನ್ನು ತಿಳಿಸಿದ.

ಮರುದಿನ ಬೆಳಿಗ್ಗೆ ಪಾತಾಳಗಂಗೆಯಿಂದ ಮಹಾದೇವಿ ಬರುವಷ್ಟರಲ್ಲಿ ನಾಲ್ಕು ಜನ ಚುಂಚರು ಅವಳಿಗಾಗಿ ಕಾಯುತ್ತಾ ಸಿದ್ಧವಾಗಿ ನಿಂತಿದ್ದರು. ಒಂದು ತಂಬಿಗೆಯ ತುಂಬಾ ಅದೇ ತಾನೆ ಕರೆದು ತಂದ ನೊರೆಹಾಲು ಅವರ ಕೈಲಿತ್ತು. ಆದರಲ್ಲಿ ಸ್ವಲ್ಪ ಭಾಗವನ್ನು ಮಹಾದೇವಿ ತೆಗೆದುಕೊಂಡು ಉಳಿದುದನ್ನು ಅವರಿಗೇ ಕೊಟ್ಟಳು. ಭಕ್ತಿಯಿಂದ ಅವರದನ್ನು ಸ್ವೀಕರಿಸಿದರು.

"ಹೊರಡೋಣವೇ ಕದಳಿವನದ ಕಡೆಗೆ?" ಎಂಬ ಸೂಚನೆ ಅವರಿಂದ ಬಂದಿತು.

ಅವರಿಗೆ ತಾನೀಗಲೇ ಬರುವುದಾಗಿ ತಿಳಿಸಿ, ಮಲ್ಲಿಕಾರ್ಜುನನ ದೇವಾಲಯವನ್ನು ಪ್ರವೇಶಿಸಿದಳು ಮಹಾದೇವಿ. ಚನ್ನಮಲ್ಲಿಕಾರ್ಜುನನ ಎದುರು ನಿಂತಳು.

"ನಿನ್ನನ್ನು ಕೂಡಿ, ಸಮರಸಗೊಳ್ಳುವುದಕ್ಕಾಗಿಯೇ ನಿನ್ನ ಅಂತರಂಗದ ಗರ್ಭಗೃಹವೆಂದು ತಿಳಿದಿರುವ ಕದಳಿಯ ವನಕ್ಕೆ ನಡೆಯುತ್ತಿದ್ದೇನೆ. ಸರ್ವಶಕ್ತಿ ಸಮನ್ವಿತನಾಗಿ ನೀನಲ್ಲಿ ಮೈದೋರಿ ನನ್ನನ್ನು ಸ್ವೀಕರಿಸು" ಎಂದು ವಂದಿಸಿ

ಹೊರಗೆ ಬಂದಳು. ಕದಳಿಯ ಚಿತ್ರವನ್ನು ಮನಸ್ಸಿನಲ್ಲಿಯೇ ಕಟ್ಟಿಕೊಳ್ಳುತ್ತಾ ನಡೆಯತೊಡಗಿದಳು.

ದೇವಾಲಯವನ್ನು ಬಲಕ್ಕೆ ಬಿಟ್ಟು ಉತ್ತರಕ್ಕೆ ನಡೆದು ಆನಂತರ ವಾಯುವ್ಯದ ಕಡೆಗೆ ತಿರುಗುತ್ತಿತ್ತು ಮಹಾದೇವಿ ನಡೆಯುತ್ತಿದ್ದ ಮಾರ್ಗ. ಮಾರ್ಗದರ್ಶಕರಾದ ಚುಂಚರಲ್ಲಿಬ್ಬರು ಮುಂದೆ, ಇಬ್ಬರು ಹಿಂದೆ ನಡೆಯುತ್ತಾ ಅವಳನ್ನು ಕರೆದೊಯ್ಯುತ್ತಿದ್ದರು. ಮಹಾದೇವಿ ಅವರನ್ನು ಹತ್ತಿರ ಕರೆದು ಮಾತನಾಡಿಸಲು ಪ್ರಯತ್ನಿಸಿದಳು. ಭಾಷೆಯ ತೊಡಕಿನಿಂದಾಗಿ ಮಾತು ಸ್ಪಷ್ಟವಾಗುತ್ತಿರಲಿಲ್ಲ. ಆದರೆ ಭಯಭಕ್ತಿಯಿಂದ ಕೂಡಿದ ಅವರ ವರ್ತನೆಯನ್ನು ಕಂಡು ಅವಳಿಗೆ ಆಶ್ಚರ್ಯವಾಗುತ್ತಿತ್ತು.

ಮಧ್ಯಾಹ್ನದ ವೇಳೆಗೆ ಮಾರ್ಗ ಮಧ್ಯದಲ್ಲಿ ಒಂದು ಚುಂಚರ ಹಳ್ಳಿ ಸಿಕ್ಕಿತು. ಅಲ್ಲಿನ ಚುಂಚರ ಆತಿಥ್ಯವನ್ನು ಪಡೆದು, ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ನಂತರ ಮತ್ತೆ ನಡೆಯತೊಡಗಿದಳು.

ಮಧ್ಯಾಹ್ನದ ಬಿಸಿಲಿನಲ್ಲಿ ದಾರಿ ನಿಧಾನವಾಗಿ ಸಾಗುತ್ತಿತ್ತು. ಮಧ್ಯಾಹ್ನ ಕಳೆದು ಸೂರ್ಯ ಕ್ರಮೇಣ ಕೆಳಗಿಳಿಯಲು ಪ್ರಾರಂಭಿಸುತ್ತಿರುವ ವೇಳೆಗೆ, ತಾವು ನಡೆಯುತ್ತಿರುವ ಪರ್ವತದ ಶಿಖರದ ತುದಿಗೆ ಬಂದು ನಿಂತಿದ್ದರು. ಇದುವರೆಗೂ ನಿಧಾನವಾಗಿ ಏರಿಬಂದ ಪರ್ವತವನ್ನು ಅಲ್ಲಿ ನೇರವಾಗಿ ಕೆಳಗೆ ಇಳಿಯಬೇಕಾಗಿತ್ತು.

ಆ ಗಿರಿಯ ಶಿಖರದ ತುಟ್ಟತುದಿಯಲ್ಲಿ ನಿಂತು ನೋಡಿದರೆ ಕೆಳಗೆ ಕಣಿವೆಯಲ್ಲಿ ಹರಿಯುವ ಕೃಷ್ಣಾನದಿ ಒಂದು ಸಣ್ಣ ಕಾಲುವೆಯಂತೆ ಕಾಣುತ್ತಿತ್ತು. ಅವರು ನಿಂತಿರುವ ಆ ಪರ್ವತವನ್ನು ಕೃಷ್ಣಾ ನದಿ ಆರ್ಧಚಂದ್ರಾಕಾರದಲ್ಲಿ ಸುತ್ತುಹಾಕಿಕೊಂಡು ಹೋಗುತ್ತಿತ್ತು. ದಕ್ಷಿಣದ ಕಡೆಯಿಂದ ಬಂದು ಪೂರ್ವಕ್ಕೆ ಬಾಗುತ್ತಾ ಹರಿದು ಮತ್ತೆ ದಕ್ಷಿಣಕ್ಕೆ ತಿರುಗಿ ಮುಂದುವರೆದು ಮರೆಯಾಗುತ್ತಿತ್ತು. ಅರ್ಧಚಂದ್ರನ ಮಧ್ಯದಲ್ಲಿರುವ ನಕ್ಷತ್ರದಂತೆ ಈ ಪರ್ವತದ ಶಿಖರ ನಿಂತಿತ್ತು. ಆದುದರಿಂದಲೇ ಇದಕ್ಕೆ ಚುಕ್ಕಲ ಪರ್ವತವೆಂದು ಹೆಸರು ಬಂದಿರಬಹುದೆಂದು, ಪ್ರಭುದೇವ ಹೇಳಿದುದು ನೆನಪಿಗೆ ಬಂದಿತು ಮಹಾದೇವಿಗೆ.

ಅಲ್ಲಿ ಸ್ವಲ್ಪ ಕಾಲ ವಿಶ್ರಮಿಸಿಕೊಂಡು ಚುಕ್ಕಲ ಪರ್ವತವನ್ನು ಇಳಿಯತೊಡಗಿದರು.

ಪ್ರಾರಂಭದಲ್ಲಿಯೇ ಆ ಪರ್ವತ ಅತಿ ಕಡಿದಾಗಿ ಹೆಜ್ಜೆಹೆಜ್ಜೆಗೂ ಕೆಳಗೆ ಕೆಳಗೆ ಕೊಂಡೊಯ್ಯುತ್ತಿತ್ತು. ಬಹಳ ಎಚ್ಚರಿಕೆಯಿಂದ ಬರುವಂತೆ ಚುಂಚರು

ಮತ್ತೆ ಮತ್ತೆ ಮಹಾದೇವಿಗೆ ಸೂಚನೆಗಳನ್ನು ಕೊಡುತ್ತಿದ್ದರು. ತಾವು ವೇಗವಾಗಿ ಇಳಿಯುಬಲ್ಲವರಾದರೂ ಮಹಾದೇವಿಗೋಸ್ಕರ ಅತಿ ನಿಧಾನವಾಗಿ ಇಳಿಯುತ್ತಿದ್ದರು.

ಅರ್ಧದಷ್ಟು ದೂರ ಇಳಿದ ಮೇಲೆ, ಕಡಿದಾದ ಭಾಗ ಸ್ವಲ್ಪ ಕಡಿಮೆಯಾದಂತಾಯಿತು. ಕ್ರಮೇಣ ಇಳಿಜಾರಾಗಿರುವ ಜಾಗವನ್ನು ಈಗ ಇಳಿಯುತ್ತಿದ್ದರು. ಇಳಿದಷ್ಟೂ ಪರ್ವತ ಬೆಳೆಯುತ್ತಿರುವಂತೆ ತೋರುತ್ತಿತ್ತು.

ನಾಲ್ಕಾರು ಕಡೆಗಳಲ್ಲಿ ಕುಳಿತು ನಿಧಾನವಾಗಿ ಇಳಿಯುತ್ತಿದ್ದರು. ಮಹಾದೇವಿ ಆಯಾಸದಿಂದ ಏದುತ್ತಿದ್ದರೂ ಸುತ್ತಲಿನ ಸೌಂದರ್ಯವನ್ನು ನೋಡುತ್ತಾ ಸುಧಾರಿಸಿಕೊಳ್ಳುತ್ತಾ ಇಳಿಯುತ್ತಿದ್ದಳು. ಕ್ರಮೇಣ ಪರ್ವತದ ಬುಡಕ್ಕೆ ಬರುತ್ತಿರುವಂತೆ ತೋರುತ್ತಿತ್ತು. ಎದುರಿಗಿರುವುದು ಈಗ ಕಾಲುವೆಯಲ್ಲ, ನದಿಯೆಂಬ ಭಾವನೆ ಬರತೊಡಗಿತ್ತು. ಇನ್ನೂ ಹತ್ತಿರ ಹೋದಂತೆ ಕೃಷ್ಣೆಯ ಸಲಿಲದೇಹದ ಮಂಜುಳನಾದ ಅಸ್ಪಷ್ಟವಾಗಿ ಕಿವಿಗೆ ಬೀಳತೊಡಗಿತು.

ಸೂರ್ಯ ಎದುರಿಗಿರುವ ಪರ್ವತಶಿಖರದ ಮೇಲೆ ಕೆಂಪು ಚೆಂಡಿನಂತೆ ಕಾಣಿಸುತ್ತಿದ್ದ. ಆ ವೇಳೆಗೆ ಅಂತೂ ಚುಕ್ಕಲ ಪರ್ವತವನ್ನು ಇಳಿಯುವುದು ಮುಗಿಯಿತು. ಕೃಷ್ಣಾನದಿಯ ಮರಳುದಂಡೆಯ ಮೇಲೆ ಈಗ ನಡೆಯತೊಡಗಿದ್ದರು, ಚುಕ್ಕಲ ಪರ್ವತವನ್ನು ಸವೆಸಿ ಬಂದ ಸಂತೋಷದಿಂದ.

ಮರುಳುದಂಡೆಯಮೇಲೆ ಓಡುತ್ತಾ ಮಹಾದೇವಿ ನದಿಯ ಕಡೆಗೆ ನಡೆಯುತ್ತಿದ್ದಳು. ಕಲ್ಲುಬಂಡೆಗಳ ಮೇಲೆ ಅಲ್ಲಿ ನದಿ ವೇಗವಾಗಿ ಹರಿಯುತ್ತಿತ್ತು. ಮರಳನ್ನು ದಾಟಿ, ಬಂಡೆಗಳನ್ನು ನೆಗೆದು, ನೀರಿನ ಬಳಿಗೆ ಬಂದಳು ಮಹಾದೇವಿ.

ಆಕೆಗೆ ಸ್ವಾಗತವನ್ನು ಬಯಸುವಂತೆ ಕೃಷ್ಣೆ ಸಂಭ್ರಮದಿಂದ ದಡಕ್ಕೆ ಅಪ್ಪಳಿಸಿ ನೊರೆಮುತ್ತನ್ನೆರಚುತ್ತಾ ಕರೆಯುತ್ತಿದ್ದಳು. ಶ್ರೀಶೈಲದ ದೇವಾಲಯದ ಬಳಿ ಪಾತಾಳಗಂಗೆಯಾಗಿ ಮಲ್ಲಿಕಾರ್ಜುನನ ಪಾದವನ್ನು ತೊಳೆಯಲು ಇಷ್ಟು ಆತುರದಿಂದ ಓಡುತ್ತಿರುವಳೆಂದೆನಿಸಿತು ಮಹಾದೇವಿಗೆ.

ಹರಳಯ್ಯನು ಕೊಟ್ಟ ಪಾದರಕ್ಷೆಯನ್ನು ಅಲ್ಲಿ ಬಿಟ್ಟು, ಪಾದಗಳೆರಡನ್ನೂ ನೀರಿನಲ್ಲಿಟ್ಟುಕೊಂಡು, ನೀರಿನ ತುದಿಯ ಕಲ್ಲಿನ ಮೇಲೆ ಕುಳಿತಳು. ಜಲಜಲನೆ ಉಕ್ಕಿಹರಿಯುತ್ತಿರುವ ತಣ್ಣನೆಯ ನೀರನ್ನು ಮುಖದ ಮೇಲೆ ಎರಚಿಕೊಂಡಳು. ಅವಳ ಆಯಾಸದ ಎಷ್ಟೋ ಭಾಗ ಕಡೆಮೆಯಾದಂತಾಯಿತು.

ಚುಂಚರೂ ಸ್ವಲ್ಪ ಕಾಲ ವಿಶ್ರಾಂತಿಯನ್ನು ಪಡೆದರು. ನದಿಯ ದಡದಲ್ಲಿ ಬಹುಶಃ ತಮಗಾಗಿಯೇ ಕಾಯುತ್ತದ್ದ ಇನ್ನಿಬ್ಬರು ಚುಂಚುರು ಅವರನ್ನು

ಕೂಡಿಕೊಂಡಿದ್ದರು. ಸ್ವಲ್ಪ ಹೊತ್ತಾದ ಮೇಲೆ ಅವರೆಲ್ಲಾ ಬಳಿಗೆ ಬಂದು ಮಹಾದೇವಿಗೆ ತಮ್ಮ ಆಲೋಚನೆಯನ್ನು ಹೇಳಿದರು :

'ಈಗಾಗಲೇ ಕತ್ತಲಾಗುತ್ತಿರುವುದರಿಂದ ನದಿಯನ್ನು ನಾಳೆ ಬೆಳಿಗ್ಗೆಯೇ ದಾಟುವುದು' ಎಂದು ಅವರು ಹೇಳಿದುದು ಮಹಾದೇವಿಗೂ ಒಪ್ಪಿತವಾಯಿತು.

ಆ ರಾತ್ರಿ ನದಿಯ ದಡದ ಮರಳುಹಾಸಿಗೆಯೇ ಅವಳ ಮನೆಯಾಯಿತು. ಲಕ್ಷಾಂತರ ನಕ್ಷತ್ರಗಳು ಮಹಾದೇವಿಯ ಭವ್ಯವಾದ ಹರ್ಮ್ಯದ ಮಣಿಕಟ್ಟಿನಂತೆ ಮಿನುಗುತ್ತಿದ್ದವು.

ಮಹಾದೇವಿ ಮಲಗುವ ಸ್ಥಳವನ್ನು ನಿರ್ಧರಿಸಿದ ಚುಂಚರು ಅಲ್ಲಿಯ ಮರಳನ್ನು ಸರಿಗೊಳಿಸಿದ್ದರು. ಅಲ್ಲಿಂದ ಸ್ವಲ್ಪ ದೂರದಲ್ಲಿ ಎರಡು ಮೂರು ಕಡೆ ಕಟ್ಟಿಗೆಯನ್ನು ರಾಶಿಹಾಕಿದ್ದರು. ಮಹಾದೇವಿಗೆ ಅದೇಕೆಂಬುದು ತಿಳಿಯಲಿಲ್ಲ. ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಎಂದು ಅವರು ಹೇಳಿದಾಗ ಅವರ ಮುಂಜಾಗ್ರತೆಗಾಗಿ ಮೆಚ್ಚಿದಳು.

ಅವರ ಸಂಶಯ ವ್ಯರ್ಥವಾದುದಾಗಿರಲಿಲ್ಲ. ಈ ಮಾತನ್ನು ಆಡುತ್ತಿರುವಂತೆಯೇ ಎದುರಿಗಿರುವ ಪರ್ವತದ ಬುಡದಲ್ಲಿ ವಿದ್ಯುತ್ತಿನ ಕೆಂಡಗಳಂತೆ ಹೊಳೆಯುತ್ತಿರುವ ಎರಡು ಕಣ್ಣುಗಳು ಮಾತ್ರ ಕಾಣುತ್ತಿದ್ದುವು. ಕ್ರಮೇಣ ಕಣ್ಣುಗಳು ಕೆಳಗಿಳಿದು ಬರತೊಡಗಿದುವು. ಉಸಿರು ಬಿಗಿಹಿಡಿದು ಚುಂಚುರು ಅತ್ತಲೇ ನೋಡುತ್ತಿದ್ದರು.

ಹುಲಿ ನೀರನ್ನು ಕುಡಿಯಲು ಹತ್ತಿರ ಹತ್ತಿರ ಬರುತ್ತಿತ್ತು. ನದಿಯ ಬಳಿಗೆ ಬಂದಿತು. ನೇರವಾಗಿ ಇವರ ಎದುರಿಗೇ, ಆದರೆ ಆಚೆಯ ದಡದಲ್ಲಿ ಬಂದು ನೀರನ್ನು ಕುಡಿದು ಮತ್ತೆ ನಿಧಾನವಾಗಿ ಬೆಟ್ಟವನ್ನು ಏರಿಹೋಯಿತು.

ಚುಂಚರು ಬೆಂಕಿ ಹೊತ್ತಿಸಿದರು. ಒಣಗಿದ ಕಟ್ಟಿಗೆಗಳನ್ನು ಆಶ್ರಯಿಸಿದ ಬೆಂಕಿ ಕತ್ತಲಿನಲ್ಲಿ ತನ್ನ ಕೆನ್ನಾಲಿಗೆಯನ್ನು ಚಾಚಿ ಧಗಧಗನೆ ಉರಿಯತೊಡಗಿತು. ಅದೇ ವೇಳೆಗೆ ಎಡಭಾಗದ ಪರ್ವತದ ಮೈಯನ್ನು ಕಾಡುಕಿಚ್ಚು ವ್ಯಾಪಿಸಿ ಹಬ್ಬತೊಡಗಿದ್ದುದು ಕಾಣಿಸಿತು. ಅಲ್ಲಿ ಕೆದರುವ ಕಿಡಿಗಳು ನಕ್ಷತ್ರಗಳಂತೆ ಕಾಣುತ್ತಿದ್ದುವು. ಅದರೊಡನೆ ಇಲ್ಲಿನ ಬೆಂಕಿ, ಸ್ಪರ್ಧೆ ಹೂಡಿದಂತೆ ತೋರುತ್ತಿತ್ತು.

ಬೆಂಕಿಯ ಮಧ್ಯದಲ್ಲಿ ಕುಳಿತ ಮಹಾದೇವಿಗೆ ತನ್ನದೇ ಆದ ವಚನ ನೆನಪಿಗೆ ಬಂದಿತು :

ಕಿಡಿಕಿಡಿ ಕೆದರಿದೊಡೆ, ಎನಗೆ ಹಸಿವು ತೃಷೆ ಅಡಗಿತೆಂಬೆನು ;
ಮುಗಿಲು ಹರಿದು ಬಿದ್ದೊಡೆ, ಎನಗೆ ಮಜ್ಜನಕ್ಕೆರೆದರೆಂಬೆನು ;

ಗಿರಿ ಮೇಲೆ ಬಿದ್ದೊಡೆ, ಎನಗೆ ಪುಷ್ಪಪೂಜೆಯೆಂಬೆನು ;
ಚನ್ನಮಲ್ಲಿಕಾರ್ಜುನಯ್ಯ ;
ಶಿರ ಹರಿದು ಬಿದ್ದೊಡೆ, ಪ್ರಾಣ ನಿಮಗರ್ಪಿತವೆಂಬೆನು.

ಬೆಳಿಗ್ಗೆ ಮುಂಚೆಯೇ ಎದ್ದಳು ಮಹಾದೇವಿ. ಚುಂಚರೆಲ್ಲಾ ಅದಕ್ಕೆ ಮೊದಲೇ ಎದ್ದು ಸಿದ್ಧರಾಗಿದ್ದರು. ನದಿಯ ದಂಡೆಯ ಮೇಲೆ ಪ್ರವಾಹಕ್ಕೆ ಮೇಲ್ಮುಖವಾಗಿ ನಡೆಯತೊಡಗಿದರು. ಕಲ್ಲುಬಂಡೆಗಳನ್ನು ಹತ್ತಿ ಇಳಿದು ಕಷ್ಟದಿಂದ ಒಂದೆರಡು ಮೈಲುಗಳಷ್ಟನ್ನು ನಡೆದ ಮೇಲೆ ಅಲ್ಲಿ ನದಿಯ ವೇಗ ಕಡಿಮೆಯಾಗಿ ಗಂಭೀರವಾಗಿ ನಿಂತಂತೆ ಕಾಣುತ್ತಿತ್ತು. ಬಿದಿರುಗಳನ್ನು ಕಟ್ಟಿದ ತೆಪ್ಪವೊಂದು ಅಲ್ಲಿ ಸಿದ್ಧವಾಗಿತ್ತು. ಅದರಲ್ಲಿ ಎಲ್ಲರೂ ಕೃಷ್ಣೆಯನ್ನು ದಾಟಿ ಆಚೆಯ ದಡವನ್ನು ಸೇರಿದರು.

ಅಲ್ಲಿಂದ ಮುಂದೆ ಒಂದೆರಡು ಮೈಲುಗಳಷ್ಟು ದೂರ ಹೋಗುವುದರೊಳಗಾಗಿ ಅತಿ ಸುಂದರವಾದ ಸ್ಥಳ ಗೋಚರಿಸಿತು. ಅದೊಂದು ಚಿಕ್ಕ ಹಳ್ಳ ; ಹರಿದು ಬಂದು ಅದು ಕೃಷ್ಣೆಯನ್ನು ಸೇರುವುದಕ್ಕೆ ಒಂದೆರಡು ಮೈಲುಗಳಷ್ಟು ಹಿಂದೆ ಮನೋಹರವಾದ ಸನ್ನಿವೇಶವನ್ನು ನಿರ್ಮಿಸಿಕೊಂಡಿತ್ತು.

ಸುತ್ತಲೂ ಎತ್ತರದ ಪರ್ವತಗಳು. ಮಧ್ಯದ ಆ ಕಣಿವೆಯ ಪ್ರದೇಶದಲ್ಲಿ ದಟ್ಟವಾದ ಹಸಿರು ಮರಗಳು. ಅವುಗಳ ಮಧ್ಯದಲ್ಲಿ ಹರಿಯುತ್ತಿದೆ 'ಬುಗ್ಗುವಾಗು' ಎಂದು ಚುಂಚರು ಕರೆಯುತ್ತಿರುವ ಈ ಸಣ್ಣ ಹಳ್ಳ. ಅದಕ್ಕೆ ಸ್ವಲ್ಪ ದೂರದಲ್ಲಿಯೇ ಚುಂಚರ ಒಂದು ಹಳ್ಳಿ, ಅಂದರೆ ಅವರ ನಾಲ್ಕಾರು ಗುಡಿಸಲುಗಳು.

ಅದೇ ತ್ರಿಕೂಟಪರ್ವತದ ಬುಡ. ತ್ರಿಕೂಟಪರ್ವತದ ತುಟ್ಟತುದಿಯ ಬಟ್ಟಬಯಲಿನಲ್ಲಿಯೇ ಕದಳಿವನವಿರುವುದೆಂದು ಪ್ರಭು ಹೇಳಿದ್ದ. ಕದಳಿಯ ಬುಡದಲ್ಲಿಯೇ ಈಗ ಇದ್ದಳು ಮಹಾದೇವಿ.

ಕದಳಿ ವನಕ್ಕೆ ಹೋಗುವುದಕ್ಕೆ ಮುನ್ನ ಇಲ್ಲಿ ಕೆಲವು ದಿನ ಇದ್ದು ಹೋಗಬೇಕೆಂದು ನಿರ್ಧರಿಸಿದಳು. ತನ್ನ ಬಯಕೆಯನ್ನು ಚುಂಚರಿಗೆ ತಿಳಿಸಿದಳು. ಸಂತೋಷದಿಂದ ಅವರು ಒಪ್ಪಿದರು. ಶ್ರೀಶೈಲದಿಂದ ಜೊತೆಯಲ್ಲಿ ಬಂದ ಚುಂಚರು ಮಹಾದೇವಿಯ ಅಪ್ಪಣೆ ಪಡೆದು ಹಿಂದಕ್ಕೆ ಹೊರಟುಹೋದರು. ಬುಗ್ಗುವಾಗು ಹಳ್ಳಿಯ ಚುಂಚರು ಅವಳ ಸೇವೆಯನ್ನು ಸಂತೋಷದಿಂದ ಕೈಗೊಂಡರು.

ಹಳ್ಳದ ದಡದಲ್ಲಿಯೇ ಒಂದು ಸಣ್ಣ ಗುಡಿಸಲನ್ನು ಹಾಕಿಕೊಟ್ಟರು. ನಿತ್ಯ ಹಾಲುಹಣ್ಣುಗಳನ್ನು ಅತಿವಿಶ್ವಾಸದಿಂದ ತಂದುಕೊಡುತ್ತಿದ್ದರು. ಶ್ರೀಶೈಲದ ಭ್ರಮರಾಂಬೆಯೇ ಈ ರೂಪದಿಂದ ಬಂದಿರುವಳೆಂಬಂತಹ ಮುಗ್ಧಭಕ್ತಿಯಿಂದ ಮಹಾದೇವಿಯನ್ನು ಕಾಣುತ್ತಿದ್ದರು ಚುಂಚರು.

ಮಹಾದೇವಿ ಅಲ್ಲಿ ಇನ್ನೊಂದು ಪ್ರಕೃತಿ ನಿರ್ಮಿತವಾದ ಆಶ್ಚರ್ಯವನ್ನು ಕಂಡು ಮಾರುಹೋಗಿದ್ದಳು. ಹಳ್ಳದಿಂದ ಪೂರ್ವಕ್ಕಿರುವ ಬೆಟ್ಟವನ್ನು ಹತ್ತಿ ಉತ್ತರದ ಕಡೆಗೆ ಮೇಲೇರುತ್ತಾ ಸ್ವಲ್ಪ ದೂರ ಹೋಗುವುದರೊಳಗಾಗಿ ಪಶ್ಚಿಮದ ಕಡೆಯಿಂದ ಹಬ್ಬಿ ಬಂದಿರುವ ಬೆಟ್ಟವೂ ಅಲ್ಲಿ ಬಂದು ಸೇರುತ್ತಿತ್ತು. ಎರಡೂ ಬೆಟ್ಟಗಳೂ ಸೇರುವ ಆ ಮೂಲೆಯಲ್ಲಿ ಅತಿ ವಿಶಾಲವಾದ ಒಂದು ಗವಿ ಏರ್ಪಟ್ಟಿತ್ತು.

ಮಹಾದೇವಿ ಅದನ್ನು ಕಂಡೊಡನೆಯೇ ಆಶ್ಚರ್ಯ ಸಂತೋಷಗಳಿಂದ ಒಳಗೆ ನುಗ್ಗಿದಳು. ನೂರಾರು ಗಜಗಳಷ್ಟು ವಿಸ್ತಾರವಾಗಿತ್ತು ಆ ಗವಿ. ಸಂಪೂರ್ಣವಾಗಿ ನೋಡಬೇಕೆಂಬ ಕುತೂಹಲ ಹುಟ್ಟಿತು. ಗವಿಯ ಒಳಗೆ ಬಲಭಾಗದ ಕಡೆ ನಡೆಯತೊಡಗಿದಳು. ಸ್ವಲ್ಪ ದೂರ ಹೋಗುವುದರೊಳಗೆ ಪರ್ವತದ ಕಲ್ಲಗೋಡೆ ಅಡ್ಡ ಬಂದಿತು. ಆ ಭಾಗದ ಗವಿ ಅಲ್ಲಿಗೆ ಮುಗಿದಿತ್ತು. ಹಿಂದಕ್ಕೆ ಬಂದು ಮತ್ತೆ ಗವಿಯ ಎಡಗಡೆ ಹೊರಟಳು. ಮುಂದೆ ಹೋದಂತೆಲ್ಲಾ ಮಾರ್ಗ ಕಿರಿದಾಗುತ್ತಾ ಹೋಗುತ್ತಿತ್ತು. ಅನಂತರ ಅದು ಬಲಕ್ಕೆ ತಿರುಗಿತು. ಗಾಳಿ ಬೆಳಕು ಕಡಮೆಯಾಗುತ್ತಾ ಉಸಿರು ಕಟ್ಟುತ್ತಿತ್ತು. ಕಣ್ಣಿಗೆ ಕತ್ತಲೆ ಆವರಿಸುತ್ತಿತ್ತು. ಧೈರ್ಯ ಮಾಡಿ ಮುಂದೆ ನಡೆದಳು. ಸ್ವಲ್ಪ ದೂರ ಹೋದಮೇಲೆ ಮತ್ತೆ ಎಡಕ್ಕೆ ತಿರುಗಿತು ಮಾರ್ಗ. ಕೊನೆಗೆ ಇನ್ನೂ ಇಕ್ಕಟ್ಟಾಗುತ್ತಾ ಒಬ್ಬರು ಮಾತ್ರ ಕಷ್ಟದಿಂದ ಹೋಗಬಹುದಾದಷ್ಟು ಕಿರಿದಾಗಿ ಕೊನೆಗೊಂಡಿತ್ತು. ಅಲ್ಲಿ ಒಬ್ಬರು ಕುಳಿತು ಕೊಳ್ಳುವಂತಹ ಚಿಕ್ಕ ವೇದಿಕೆಯೊಂದು ಮಬ್ಬು ಬೆಳಕಿನಲ್ಲಿ ಗೋಚರಿಸಿದಂತಾಯಿತು.

ಹೆಚ್ಚುಕಾಲ ಅಲ್ಲಿರಲು ಆಗಲಿಲ್ಲ, ಹೊರಗೆ ಬಂದು ನೀಳವಾಗಿ ಉಸಿರೆಳೆದು ಹೊರಗಿನ ಪರಿಶುದ್ಧ ಗಾಳಿಯನ್ನು ಸೇವಿಸಿದಳು. ಗವಿಯ ರಚನೆ ಮಹಾದೇವಿಯ ಮನಸ್ಸನ್ನು ಸೆಳೆದಿತ್ತು. ಗವಿಯ ಕತ್ತಲೆಯ ಆ ಕೊನೆಯ ಭಾಗದಲ್ಲಿ ಇದ್ದ ವೇದಿಗೆ ಇನ್ನೂ ಆಶ್ಚರ್ಯವನ್ನುಂಟುಮಾಡಿತ್ತು. ಅನುಷ್ಠಾನಕ್ಕೆ ಕುಳಿತುಕೊಳ್ಳುವುದಕ್ಕಂತೂ ಅದು ಯೋಗ್ಯವಾದ ಸ್ಥಳವಾಗಿರಲಿಲ್ಲ.

ಆದರೆ ಗವಿಯ ಮುಂಭಾಗ ತುಂಬಾ ಸುಂದರವಾಗಿತ್ತು. ಭವ್ಯತೆಯ ಅನುಭವವನ್ನು ತಂದುಕೊಡುವಂತಿತ್ತು. ಪರ್ವತಗಳ ಬಂಡೆಗಳು ಚಿತ್ರವಿಚಿತ್ರವಾದ ಆಕಾರವನ್ನು ನಿರ್ಮಿಸಿ, ಗವಿಯ ಮಹಾದ್ವಾರಕ್ಕೆ ಸಹಜವಾದ ಕಲೆಯ ತೋರಣವನ್ನು ಕಟ್ಟಿದ್ದುವು.

ಗವಿಯ ಮುಂದುಗಡೆ ಕುಳಿತರೆ ಕೆಳಗಡೆ ಬಗ್ಗುವಾಗು ಹರಿಯುವುದು ಕಾಣುತ್ತಿತ್ತು. ಪರ್ವತವನ್ನು ಸುತ್ತಿಸುತ್ತಿ ಬರುತ್ತಿರುವ ಆ ಚಿಕ್ಕ ಹಳ್ಳ, ಆ ಎತ್ತರದಲ್ಲಿ ನಿಂತು ನೋಡಿದರೆ ಬಹಳ ದೂರದಿಂದಲೂ ತನ್ನ ದೀರ್ಘದೇಹವನ್ನು ಕಣ್ಣಿಗೆ

ಬೀಳಿಸುತ್ತಿತ್ತು. ತನ್ನ ಮಾರ್ಗದಲ್ಲಿ ಬಂದ ಅಡ್ಡಿಗಳನ್ನೆಲ್ಲಾ ಎದುರಿಸಿ ತಪ್ಪಿಸಿಕೊಂಡು, ಕೊನೆಗೂ ಬಿಡದೆ ಕೃಷ್ಣೆಯನ್ನು ಸೇರಲು ಹೋಗುವ ಧನ್ಯತೆಯ ಸಾಹಸ ಗೋಚರಿಸಿದಂತಾಯಿತು ಮಹಾದೇವಿಗೆ ಅದನ್ನು ಕಂಡಾಗ.

ಆ ಗುಹೆಯ ಮುಂಭಾಗದ ಮಂಟಪ, ಮಹಾದೇವಿಗೆ ಅತಿಪ್ರಿಯವಾದ ಸ್ಥಳವಾಯಿತು. ಅಲ್ಲಿ ಕುಳಿತು ಗಂಟೆಗಳನ್ನು ನಿಮಿಷಗಳಂತೆ ಕಳೆಯುತ್ತಿದ್ದಳು. ಚುಂಚರು ಅದನ್ನು 'ಅಕ್ಕಮ್ಮಗವಿ' ಎಂದೇ ಕರೆಯತೊಡಗಿದರು. ಹಾಗೆಯೇ ಬಗ್ಗುವಾಗು 'ಅಕ್ಕಮ್ಮವಾಗು' ಆಯಿತು.

೬

ಒಂದು ಬೆಳಿಗ್ಗೆ ಮಹಾದೇವಿ ನಿತ್ಯದಂತೆ ಹಳ್ಳದಲ್ಲಿ ಸ್ನಾನಮಾಡಿ ಪೂಜೆ ಮಾಡಿದಳು. ಗುಡಿಸಲಿಗೆ ಹಿಂತಿರುಗುವ ವೇಳೆಗೆ ಚುಂಚರ ಮುಖಂಡ ಹಣ್ಣು ಹಾಲುಗಳನ್ನು ಹಿಡಿದು ನಿಂತಿದ್ದ. ನಮಸ್ಕರಿಸಿ ಮುಂದಿಟ್ಟ. ಮಹಾದೇವಿ ಅದನ್ನು ಮಲ್ಲಿಕಾರ್ಜುನನಿಗೆ ಅರ್ಪಿಸಿ ಸ್ವೀಕರಿಸಿದಳು. ಗವಿಯ ಬಳಿಗೆ ಹೋಗಿಬರುವುದಾಗಿ ಹೇಳಿ ಹೊರಟಳು.

ಗವಿಯ ಮುಂಭಾಗದಲ್ಲಿ ಪದ್ಮಾಸನಸ್ಥಿತಳಾಗಿ ಕುಳಿತಳು. ತನ್ನ ಜೀವನದ ಹಿಂದಿನ ಘಟನೆಗಳೆಲ್ಲಾ ಏಕೋ ಅವಳ ಮುಂದೆ ಇಂದು ಸುರುಳಿಯನ್ನು ಬಿಚ್ಚುತ್ತಿದ್ದುವು. ತಂದೆ – ತಾಯಿಗಳು, ಗುರು – ಲಿಂಗದೇವರು ಬಂದುಹೋದರು.

'ಇದುವರೆಗಿನ ನನ್ನ ಸಾಧನೆಯ ಫಲ ನನ್ನ ತಂದೆ–ತಾಯಿಗಳಿಗೆ ಶಾಂತಿಯನ್ನು ಕೊಡಲಿ' ಎಂದು ಹಾರೈಸಿದಳು. ಎಳೆಯ ವಯಸ್ಸಿನಿಂದಲೂ ತನ್ನ ಸಾಧನೆಗೆ ನೆರವಾದ ಗುರುಲಿಂಗರ ಮೂರ್ತಿಗೆ ಸಂಕಲ್ಪಪೂರ್ವಕ ನಮಸ್ಕಾರಗಳನ್ನು ಸಲ್ಲಿಸಿದಳು.

ಅನಂತರ ಕೌಶಿಕ ಅವಳ ಮನಸ್ಸಿನ ಮುಂದೆ ಸುಳಿದ :

'ಆತನೇ ನನ್ನ ಸಾಧನೆಗೆ ನಿರ್ದಿಷ್ಟವಾದ ದಿಕ್ಕನ್ನು ತೋರಿಸಿದವನು. ಮದುವೆಯಾಗಲೇಕೂಡದೆಂಬ ನನ್ನ ಬಯಕೆ ಕೈಗೂಡುವಂತಹ ದೈವ ಸಂಕೇತದ ಒಂದು ನಿಮಿತ್ತ ಕಾರಣವಾಗಿ ಬಂದವನು ಆತ. ಆದರೆ ಅದರಿಂದ ಅವನ ಜೀವನ ದುಃಖಮಯವಾಯಿಗು; ಆ ದುಃಖ ಬಹುಶಃ ತಾತ್ಕಾಲಿಕವಾಗಿದ್ದಿರಬಹುದು. ಈಗ ಅದನ್ನೆಲ್ಲಾ ಮರೆತು ಆತ ತನ್ನ ಸುಖವನ್ನು ಹುಡುಕಿಕೊಂಡಿರಬಹುದು.....' ಹೀಗೆ ಹರಿಯುತ್ತಿತ್ತು ಅವಳ ಆಲೋಚನಾ ಸರಣಿ.

ಅಷ್ಟರಲ್ಲಿ ಗುಹೆಯ ಒಳಗೆ ಏನೋ ಶಬ್ದವಾದಂತಾಯಿತು. ತಿರುಗಿ ನೋಡಿದರೆ, ಗುಹೆಯೊಳಗಿನಿಂದ ಒಂದು ಹುಲಿ ನಿಧಾನವಾಗಿ ಹೆಜ್ಜೆ ಹಾಕುತ್ತಾ ಬರುತ್ತಿದೆ, ಮಹಾದೇವಿಯ ಕಡೆಗೆ. ಭೀಮಕಾಯದ ಆ ಹುಲಿಯನ್ನು ಕಂಡೊಡನೆಯೇ ಕ್ಷಣಕಾಲ ಸ್ತಬ್ಧಳಾದಳು. ಆದರೆ ಮರುಕ್ಷಣದಲ್ಲಿಯೇ ಅವಳ ಸುಪ್ತ ದೈವಿಕ ತೇಜಸ್ಸು ಮೇಲೆದ್ದು ಅವಳ ಸುತ್ತ ಪರಿವೇಷವನ್ನು ರಚಿಸಿತು. ಹುಲಿಯನ್ನೇ ದಿಟ್ಟಿಸಿ ನೋಡತೊಡಗಿದಳು.

ನರಾಕೃತಿಯನ್ನು ಕಂಡು ಕ್ರೌರ್ಯದಿಂದ ಹಲ್ಲುಮಸೆಯುತ್ತಾ ಬರುತ್ತಿದ್ದ ಹುಲಿ, ಮಹಾದೇವಿಯ ದೃಷ್ಟಿಯನ್ನು ಸಂಧಿಸಿದೊಡನೆಯೇ ಗುಂಡಿನ ಏಟನ್ನು ಕಂಡಂತೆ ಹಿಂದೆ ಸರಿಯಿತು. ಬಾಲವನ್ನು ಮುದುರಿಕೊಂಡು ನಾಯಿಯಂತೆ ನಡೆಯುತ್ತಾ ಬಂದು, ಸ್ವಲ್ಪ ದೂರದವರೆಗೂ ಮಹಾದೇವಿಯನ್ನು ನೋಡುತ್ತಾ ಹಿಂದೆ ಹಿಂದೆ ಸರಿದು ಅನಂತರ ನೆಗೆದು ಓಡಿ ಮಾಯವಾಯಿತು. ಅವಳ ಯೋಗದೃಷ್ಟಿಯ ಮಹಿಮೆಯಿಂದ ಹುಲಿಯ ಕ್ರೌರ್ಯ ಅಡಗಿ ಹೋಗಿತ್ತು.

ಅದು ಹೋದ ದಿಕ್ಕನ್ನೇ ಕುರಿತು ನೋಡುತ್ತಿದ್ದ ಮಹಾದೇವಿ ಮನಃಪಟಲದ ಮೇಲೆ ತನ್ನಲ್ಲಿ ಈ ಅಸದೃಶವಾದ ಶಕ್ತಿಯನ್ನು ತುಂಬಿದ ಕಲ್ಯಾಣದ ಚಿತ್ರ ತಿರುಗುತ್ತಿತ್ತು.

ಅಷ್ಟರಲ್ಲಿ ಗವಿಯ ಕಡೆಗೆ ಯಾರೋ ಓಡುತ್ತಾ ಬರುತ್ತಿರುವುದನ್ನು ಕಂಡಳು ಮಹಾದೇವಿ. ಬಳಿಗೆ ಬರುತ್ತದ್ದಂತೆಯೇ ಗುರುತಿಸಿದಳು. ಅಂದು ಶ್ರೀಶೈಲದಿಂದ ಅವಳನ್ನು ಇಲ್ಲಿಗೆ ಕರೆದುಕೊಂಡು ಬಂದ ಚುಂಚರಲ್ಲಿ ಈತನೂ ಒಬ್ಬನಾಗಿದ್ದ. ಇಲ್ಲಿ ತನ್ನನ್ನು ಬಿಟ್ಟು ಶ್ರೀಶೈಲಕ್ಕೆ ಹೋದವನು ಮತ್ತೇಕೆ ಹೀಗೆ ಓಡಿಬರುತ್ತಿದ್ದಾನೆಂದು ಆಶ್ಚರ್ಯಪಡುತ್ತಿರುವ ವೇಳೆಗೆ ಆತ ಬಳಿಗೆ ಬಂದು ನಮಸ್ಕರಿಸಿದ :

ಅವನು ಹೇಳಿದುದರಲ್ಲಿ ಒಟ್ಟು ಅರ್ಥ ಸ್ವಲ್ಪಮಟ್ಟಿಗಾಯಿತು. “ಶ್ರೀಶೈಲದಿಂದ ನಿಮ್ಮನ್ನು ನೋಡಲು ಯಾರೋ ಬಂದಿದ್ದಾರೆ. ನೆನ್ನೆ ಶ್ರೀಶೈಲಕ್ಕೆ ಬಂದರು. ನಿಮ್ಮನ್ನು ನೋಡಬೇಕೆಂದು ಆತುರಪಡಿಸಿದರು. ಕರೆದುಕೊಂಡು ಬಂದಿದ್ದೇನೆ. ಹಳ್ಳದ ಬಳಿ ಇದ್ದಾರೆ, ತಮ್ಮನ್ನು ನೋಡಲು ಚಡಪಡಿಸುತ್ತಿದ್ದಾರೆ. ಬರಬೇಕು.”

ಇಷ್ಟನ್ನು ಅವನ ಮಾತು, ಮುಖಭಾವ ಮೊದಲಾದವುಗಳಿಂದ ಅರ್ಥಮಾಡಿಕೊಂಡಳು ಮಹಾದೇವಿ.

ತನ್ನನ್ನು ನೋಡಲು ಯಾರು ಬಂದಿರಬಹುದೆಂಬುದನ್ನು ಊಹಿಸಲಾರದವಳಾಗಿ ಮೇಲೆದ್ದು ನಡೆಯತೊಡಗಿದಳು.

ಹಳ್ಳವನ್ನು ಸಮೀಪಿಸುತ್ತಿದ್ದಂತೆಯೇ ಹಳ್ಳದ ಆಚೆಯ ದಂಡೆಯಲ್ಲಿ ತನ್ನ ಗುಡಿಸಲಿನ ಬಳಿ ಇಬ್ಬರು ನಿಂತಿರುವುದು ಕಾಣಿಸಿತು. ಇನ್ನೂ ಅಚ್ಚರಿಯನ್ನುಂಟು ಮಾಡಿದುದೆಂದರೆ ಅವಳಲ್ಲಿ ಒಬ್ಬಳು ಸ್ತ್ರೀ ಎಂಬುದು. ತನ್ನನ್ನು ನೋಡಲು ಬಂದಿರುವ ಈ ಸ್ತ್ರೀಪುರುಷರಾರಿರಬಹುದೆಂಬುದು ಅವಳ ಊಹೆಗೂ ನಿಲುಕದ ವಿಷಯವಾಗಿತ್ತು. ಅದನ್ನೇ ಕುರಿತು ಆಲೋಚಿಸುತ್ತಿರುವಷ್ಟರಲ್ಲಿ ಬೆಟ್ಟವನ್ನಿಳಿದು ಹಳ್ಳದ ದಂಡೆಯನ್ನು ಸಮೀಪಿಸುತ್ತಿದ್ದಳು.

ಅತ್ತ ಆ ಸ್ತ್ರೀಯೂ ಮಹಾದೇವಿಯನ್ನು ಕಂಡೊಡನೆಯೇ ಉದ್ವೇಗವನ್ನು ತಾಳಲಾರದೆ ತಾನೇ ಹಳ್ಳವನ್ನು ದಾಟಿ ಮಹಾದೇವಿಯತ್ತ ಓಡತೊಡಗಿದಳು. ಮಹಾದೇವಿಯ ಕುತೂಹಲ ಕೊನೆಮುಟ್ಟುತ್ತಿರುವಷ್ಟರಲ್ಲಿ "ತಾಯೀ...." ಎಂದು ಕೂಗುತ್ತಾ ಬಂದು ಮಹಾದೇವಿಯ ಕಾಲಮೇಲೆ ಬಿದ್ದಳು ರಸವಂತಿ.

ಮಹಾದೇವಿ ತನ್ನ ಕಿವಿಯನ್ನು ತಾನೇ ನಂವಲಾರದವಳಾದಳು. ಅತಿ ಪರಿಚಿತ ಧ್ವನಿ; ಹೌದು. ಆದರೆ ಅದು ಇಲ್ಲಿ ಕೇಳಿಬರುವುದು ಹೇಗೆ ಸಾಧ್ಯ? ಅನುಮಾನದಿಂದ ಹಿಂದೆ ಸರಿಯುತ್ತಾ ಕೇಳಿದಳು :

"ಯಾರಮ್ಮ ನೀನು?"

"ನಾನಾರೆಂಬುದೂ ಮರೆತುಹೋಯಿತೇ, ತಾಯಿ?"

ಮಹಾದೇವಿ ರಸವಂತಿಯನ್ನು ಮರೆತಿರಲಿಲ್ಲ. ಆದರೆ ಪ್ರತ್ಯಕ್ಷವಾದರೂ ನಂಬಲಾರದಷ್ಟು ಅಸಂಭವಾಗಿತ್ತು ಆಕೆ ಇಲ್ಲಿ ಬರುವುದು. ಆದರೆ ಈಗ ಅದರಲ್ಲಿ ಸಂದೇಹವೇ ಉಳಿದಿರಲಿಲ್ಲ. ದಿಗ್ಭ್ರಮೆಗೊಂಡವಳಂತೆ ನಿಂತು ರಸವಂತಿಯನ್ನು ನೋಡುತ್ತಿದ್ದಳು.

ರಸವಂತಿ ಮತ್ತೆ ಕೇಳಿದಳು : "ಏಕೆ ತಾಯಿ, ನನ್ನ ಗುರುತು ಕೂಡ ಸಿಕ್ಕಲಿಲ್ಲವೇ?" ಧ್ವನಿಯಲ್ಲಿ ದೈನ್ಯತೆ ತುಂಬಿತ್ತು.

"ಮೇಲೇಳು ರಸವಂತಿ" ಎಂದು ಅವಳನ್ನು ಎತ್ತುತ್ತಾ : "ನಿನ್ನನ್ನು ಮರೆಯುವುದು ಸಾಧ್ಯವೆ? ಆದರೆ ನೀನು! ಇಲ್ಲಿ ? ಈಗ .... ಬಂದುದು?" ಅಚ್ಚರಿಯಿಂದ ಪ್ರಶ್ನೆ ತುಂಡುತುಂಡಾಗಿ ಹೊರಬಿತ್ತು.

"ಮತ್ತೊಮ್ಮೆ ತಮ್ಮನ್ನು ಕಾಣುವ ಭಾಗ್ಯ ಬಂದುದಕ್ಕಾಗಿ ನನಗಾಗಿರುವ ಸಂತೋಷ ಅಷ್ಟಿಷ್ಟಲ್ಲ, ತಾಯಿ!" ಎಂದಳು ರಸವಂತಿ ಸಾತ್ವಿಕ ಕಳೆಯೇ ಮೈವೆತ್ತಂತಿದ್ದ ಮಹಾದೇವಿಯನ್ನು ನೋಡುತ್ತಾ.

"ಅದು ಸರಿ, ರಸವಂತಿ .... ಆದರೆ ನೀನಿಲ್ಲಿಗೆ ಬಂದುದು ? ...."

ರಸವಂತಿಯ ಮನಸ್ಸಿನ ಮುಂದೆ ಅಂದು ಮಹಾದೇವಿ ಉಡುತಡಿಯಿಂದ ತಮ್ಮನ್ನೆಲ್ಲಾ ಅಗಲಿಹೋದ ಕೊನೆಯ ದೃಶ್ಯ ಸುಳಿಯಿತು. ಅದನ್ನು ಮಹಾದೇವಿಯ, ಜ್ಞಾಪಕಕ್ಕೆ ತರುತ್ತಾ ಹೇಳಿದಳು :

"ಅಂದು ನೀವು ನಮ್ಮನ್ನೆಲ್ಲಾ ಬಿಟ್ಟು ಕಲ್ಯಾಣದ ಕಡೆಗೆ ಹೋಗುವಾಗ ನನಗೊಂದು ಕರ್ತವ್ಯವನ್ನು ಕೊಟ್ಟು ಹೋಗಿದ್ದಿರಿ. 'ರಾಜರ ಬಳಿಯಲ್ಲಿದ್ದು ಅವರ ಸೇವೆ ಮಾಡುತ್ತಾ ದುಃಖವನ್ನು ಸಮಾಧಾನಪಡಿಸು' ಎಂದು ನೇಮಿಸಿದ್ದಿರಿ. ಆ ಕರ್ತವ್ಯನಿರ್ವಹಣೆಯೇ ನನ್ನನ್ನು ಇಲ್ಲಿಯವರೆಗೂ ಕರೆದು ತಂದಿತು ತಾಯಿ."

"ಅಂದರೆ.... ಅಲ್ಲಿರುವವರು...."

"ಹೌದು ತಾಯಿ, ಮಹಾರಾಜರು."

ಇತ್ತಲೇ ಕಾತರಪೂರ್ಣವಾದ ದೃಷ್ಟಿಯನ್ನು ಬೀರಿದ್ದ. ಆತನನ್ನು ನೋಡಿದಳು ಮಹಾದೇವಿ. ಗಡ್ಡ ಬೆಳೆದ ಮುಖ, ಎತ್ತಿ ಕಟ್ಟಿದ ಜಟೆ, ಉದ್ದವಾದ ಬಿಳಿಯ ಕಪಿನಿ. ಆತನಾರೆಂಬುದನ್ನು ಹೇಳಿದರೂ ಒಪ್ಪಿಕೊಳ್ಳುವುದು ಕಷ್ಟವಾಗುವಂತಿತ್ತು, ಕೌಶಿಕನ ರೂಪ.

ಮಹಾದೇವಿ ಹಳ್ಳವನ್ನು ದಾಟಿ ಬರುತ್ತಿದ್ದಂತೆಯೇ ಕೌಶಿಕ ಮುಂದೆ ಹೋಗಿ ಮಹಾದೇವಿಯ ಎದುರಿವಲ್ಲಿ ಕುಸಿದು ಕುಳಿತ.

"ಕೌಶಿಕ ಮಹಾರಾಜರೇ, ಏಳಬೇಕು.... ತಾವು ಹೀಗೆ...."

ಮಹಾದೇವಿಯ ಮಾತು ಇನ್ನೂ ಬಾಯಲ್ಲಿದ್ದಂತೆಯೇ ಕೌಶಿಕ :

"ಅಲ್ಲ ಮಹಾದೇವಿ.... ನಾನು ಕೌಶಿಕ ಮಹಾರಾಜನಲ್ಲ.... ನಿನ್ನ ದಾಸಾನುದಾಸ.... ರಾಜ್ಯಬಂಧನವನ್ನೆಲ್ಲಾ ಕಿತ್ತೊಗೆದು ಬಂದಿರುವ ಶಿವಭಕ್ತ." ತಲೆಯನ್ನೆತ್ತಿ ಮಹಾದೇವಿಯನ್ನು ನೋಡುತ್ತಾ ಹೇಳಿದ.

ಅಂದು ತನ್ನ ಬಲಾತ್ಕಾರಕ್ಕೆ ಗುರಿಯಾಗಿ, ಸೆರಗನ್ನು ಕಿತ್ತೆಸೆದ ಮಹಾದೇವಿಯ ನಗ್ನದೇಹವನ್ನು ಕಂಡ ಕೌಶಿಕನ ಕಣ್ಣುಗಳು, ಇಂದು ತಪೋಲಕ್ಷ್ಮಿಯೇ ಮೈವೆತ್ತು ನಿಂತಂತೆ ತೇಜಸ್ಸಿನ ಕಿರಣಗಳನ್ನು ಹೊರಸೂಸುತ್ತಿರುವ ಅಕ್ಕಮಹಾದೇವಿಯ ದಿವ್ಯ ವಿಗ್ರಹವನ್ನು ವೀಕ್ಷಿಸಿದುವು. ಮಹಾದೇವಿಯೂ ಅವನನ್ನೇ ದಿಟ್ಟಿಸಿ ನೋಡುತ್ತಿದ್ದಳು.

ಅವಳ ಉಜ್ವಲವಾದ ಕಣ್ಣುಗಳ ನೋಟವನ್ನು ಸಂಧಿಸಿ ಅವನ ಹೃದಯ ಕರಗಿ ಹೋಗುತ್ತಿರುವಂತೆ ತೋರಿತು. ತೀರಲಾರದ ಯಾವ ಬಯಕೆಯನ್ನು ಹೊತ್ತು ದೇಶದೇಶಗಳನ್ನು ತಿರುಗಿ ಶ್ರೀಶೈಲಕ್ಕೆ ಬಂದಿದ್ದನೋ, ಆ ಬಯಕೆಯ

ಕತ್ತಲುಕೋಣೆಯಲ್ಲಿ, ಅರುಣೋದಯವನ್ನುಂಟುಮಾಡುವಂತೆ ಮಿನುಗುತ್ತಿದ್ದುವು ಮಹಾದೇವಿಯ ಕಣ್ಣುಗಳು.

ಮಹಾದೇವಿ ಮುಗುಳುನಗುತ್ತಾ ಲೀಲೆಗೋಸುಗವೋ ಎಂಬಂತೆ ತನ್ನ ದೃಷ್ಟಿಯನ್ನು ಅಡಗಿಸಿಕೊಂಡು ರಸವಂತಿಯತ್ತ ತಿರುಗಿದಳು. ರಸವಂತಿ ಹೇಳತೊಡಗಿದಳು.

"ಹೌದು ತಾಯಿ, ಮಹಾರಾಜರು ಈಗ ಶಿವಭಕ್ತರಾಗಿದ್ದಾರೆ. ರಾಜ್ಯವನ್ನು ತ್ಯಜಿಸಿ ನಿಮಗಾಗಿ ದೇಶದೇಶಗಳನ್ನು ಸುತ್ತಿಕೊಂಡು ಹೊರಟರು. ನಿಮ್ಮ ಅಪ್ಪಣೆಯಂತೆ ಅವರ ರಕ್ಷಣೆಯ ಭಾರವನ್ನು, ಅವರು ಬೇಡವೆಂದರೂ ಬಲಾತ್ಕಾರವಾಗಿ, ನಾನು ವಹಿಸಿಕೊಂಡು ಅವರ ಹಿಂದೆಯೇ ನಡೆದೆ. ಕಲ್ಯಾಣಪಟ್ಟಣದ ಕಡೆಗೆ ನೀವು ಹೋದುದನ್ನು ಕೇಳಿ ಅಲ್ಲಿಗೆ ಹೋದೆವು. ಅಲ್ಲಿ ನಿಮ್ಮನ್ನು ಕಾಣಬಹುದೆಂದು ನನ್ನ ಹೃದಯ ನಲಿವಿನಿಂದ ಉಕ್ಕುತ್ತಿತ್ತು. ಆದರೆ ಊರ ಸಮೀಪಕ್ಕೆ ಬರುತ್ತಿದ್ದಂತೆಯೇ ನಮಗೆ ತಿಳಿಯಿತು. ನೀವು ಕಲ್ಯಾಣವನ್ನು ಬಿಟ್ಟು ಶ್ರೀಶೈಲದತ್ತ ನಡೆದಿರೆಂಬುದು. ಕಲ್ಯಾಣವನ್ನು ಪ್ರವೇಶಿಸಲೇ ಇಲ್ಲ. ಹಾಗೆಯೇ ತಿರುಗಿದೆವು ಶ್ರೀಶೈಲದ ಕಡೆಗೆ. ಆದರೆ ಮಹಾರಾಜರು ಮಾರ್ಗದಲ್ಲಿ ಬಹಳ ಕಾಯಿಲೆ ಬಿದ್ದರು. ಅದರಿಂದ ಚೇತರಿಸಿಕೊಂಡು ಹೇಗೋ ಶ್ರೀಶೈಲವನ್ನು ಸಮೀಪಿಸಿದೆವು. ಆತ್ಮಕೂರಿಗೆ ಬರುವ ವೇಳೆಗೆ, ಶಿವರಾತ್ರಿಯನ್ನು ಮುಗಿಸಿಕೊಂಡು ಬಂದ ಶ್ರೀಶೈಲದ ಪರಿಷೆ ಅಲ್ಲಿ ಸಿಕ್ಕಿತು. ಅದರಿಂದ ತಿಳಿಯಿತು ನೀವು ಶ್ರೀಶೈಲದಲ್ಲಿದ್ದುದು. ಅಲ್ಲಿಗೆ ನಾವು ಬರುವ ವೇಳೆಗೆ ನೀವು ಇಲ್ಲಿಗೆ ಬಂದಿದ್ದೀರಿ, ಈ ಚುಂಚರು ನಮ್ಮನ್ನು ಇಲ್ಲಿಗೆ ಕರೆದು ತಂದರು. ಅಂತೂ ತಮ್ಮ ದರ್ಶನ ಇಲ್ಲಿ ನಮಗೆ ಲಭಿಸಿತು."

ಮಾತನ್ನು ಮುಗಿಸಿದಳು ರಸಮಂತಿ. ಕೌಶಿಕ ಹೇಳಿದ.

"ಹೌದು, ಇದು ನಮ್ಮ ಯಾತ್ರೆಯ ಕಥೆ. ಈ ಪ್ರಯಾಣದಲ್ಲಿ ರಸವಂತಿ ತಾಯಿಯ ಹಾಗೆ ಕಾಪಾಡಿದ್ದಾಳೆ. ಅವಳಿಲ್ಲದಿದ್ದರೆ ಬಹುಶಃ ನಿನ್ನನ್ನು ನಾನು ಇನ್ನೊಮ್ಮೆ ಈ ಜನ್ಮದಲ್ಲಿ ಕಾಣುತ್ತಿರಲಿಲ್ಲ."

ಮಹಾದೇವಿ ಹೇಳಿದಳು :

"ಹೀಗೆ ನೀವು ರಾಜ್ಯವನ್ನು ತ್ಯಜಿಸಿ, ನಿಮ್ಮ ಕರ್ತವ್ಯವನ್ನು ಮರೆತು, ಇಷ್ಟೊಂದು ಕಷ್ಟಪಟ್ಟು ನನ್ನನ್ನು ಹುಡುಕಿಕೊಂಡು ಅಲೆಯುವ ಅಗತ್ಯವೇನಿತ್ತು. ಕೌಶಿಕ ಮಹಾರಾಜ?"

“ಅಗತ್ಯವೇನೆಂದು ಕೇಳುತ್ತಿದ್ದೀಯ? ನೀನಿಲ್ಲದೆ, ನನ್ನ ಜೀವನವೇ ಅನಗತ್ಯವಾಗಿತ್ತು. ಅದಾವ ಜನ್ಮದ ಸಂಸ್ಕಾರಬಂಧನವೋ, ನಿನ್ನ ವಿನಹ ನಾನು ಬಾಳುವುದು ಅಸಾಧ್ಯವೆಂದು ತೋರಿತು. ಅದು ಕೇವಲ ಕಾಮುಕತನದ ಹುಚ್ಚುವರ್ತನೆಯೆಂದು ಹಳಿಯಬೇಡ. ಅದರ ತೃಪ್ತಿಗಾಗಿ ನೂರಾರು ಮಾರ್ಗಗಳು ತೆರೆದಿದ್ದುವು. ಆದರೆ ಅದಕ್ಕೆ ಮೀರಿದ ಒಂದು ದಿವ್ಯಶಕ್ತಿಯ ಬಂಧನ ನನ್ನನ್ನು ಎಳೆಯಿತು. ನೀನಿಲ್ಲದೆ ನಾನು ಉಳಿಯಲಾರೆನೆಂದು ಅನ್ನಿಸಿತು. ಉಳಿದರೂ ವ್ಯರ್ಥವೆಂದು ಆತ್ಮ ತಿರಸ್ಕೃತಿ ತೋರಿತು. ಅದಕ್ಕಾಗಿ ಹೊರಟೆ. ನಾನು ಭಕ್ತನಾಗಬೇಕೆಂಬುದು ನಿನ್ನ ಆಶಯವಾಗಿತ್ತಲ್ಲವೇ? ಇದೋ ನಾನಿಂದು ಭಕ್ತನಾಗಿದ್ದೇನೆ. ನನ್ನನ್ನು ಸ್ವೀಕರಿಸಿ ಕಾಪಾಡು” ಎನ್ನುತ್ತಾ ಮಹಾದೇವಿಯ ಪಾದಗಳ ಮೇಲೆ ಬಿದ್ದ ಕೌಶಿಕ. ಅವನ ನಿಷ್ಠೆಯನ್ನು ಕಂಡು ಮರುಗಿತು ಮಹಾದೇವಿಯ ಮನಸ್ಸು.

‘ಅದಾವ ಜನ್ಮದ ಸಂಸ್ಕಾರಬಂಧನವೋ ಅವನನ್ನು ಇಲ್ಲಿಯವರೆಗೂ ಕರೆದು ತಂದಿದೆ. ಅದೇ ಸಂಸ್ಕಾರವೇ ಇನ್ನು ಅವನ ಉದ್ಧಾರಕ್ಕೂ ಕಾರಣವಾಗುತ್ತದೆ’ ಎಂದು ಭಾವಿಸುತ್ತಾ ಮಹಾದೇವಿ ಅವನನ್ನು ನೋಡುತ್ತಿದ್ದಳು. ಸತ್ವಶಕ್ತಿಯ ದೈವಾಂಶದ ಕಿರಣವೊಂದು ಅವಳ ಕಣ್ಣಲ್ಲಿ ಮಿಂಚಿತು. ಹೇಳಿದಳು:

“ನಿಜ, ಕಾಮುಕತನದ ಹುಚ್ಚುಕಲ್ಪನೆಗಿಂತ ಮಿಗಿಲಾದ ಬಂಧನ ನಮ್ಮಿಬ್ಬರಲ್ಲಿದೆಯೆಂದು ತೋರುತ್ತದೆ. ಆ ಮಟ್ಟಕ್ಕೆ ನಿನ್ನ ಪ್ರೇಮ ಏರಬಹುದಾದರೆ ನಾನು ಯಾವಾಗಲೂ ನಿನ್ನ ಪ್ರೇಮದ ಪುತ್ಥಳಿಯಾಗಿರುತ್ತೇನೆ. ಪ್ರೇಮಕ್ಕೆ ನೂರಾರು ಮುಖಗಳುಂಟು. ಅಲ್ಪತೆಯ ಸ್ವಾರ್ಥಸುಖದ ಮುಖವನ್ನು ಬಿಟ್ಟು ವಿಶ್ವವ್ಯಾಪಕವಾದ, ಭವ್ಯತೆಯ ಆನಂದಾನುಭವದ ಮುಖವನ್ನು ಪ್ರೇಮದ ವಿರಾಟ್ ರೂಪದಲ್ಲಿ ಕಾಣು. ಮೇಲೇಳು ಅಣ್ಣ ! ನಿನ್ನ ಮೋಹದ ಮಗಳಾಗಿ ಉಳಿಯುತ್ತೇನೆ. ಎದ್ದು ನನ್ನನ್ನು ಆಲಿಂಗಿಸು ತಂದೆ !” ಎಂದು ಅವನ ತಲೆಯ ಮೇಲೆ ಕೈಯನ್ನಿಟ್ಟು, ಅವನನ್ನು ಕೈ ಹಿಡಿದು ಮೇಲಕ್ಕೆತ್ತಿದಳು ಮಹಾದೇವಿಯಕ್ಕ.

ಶಿವಯೋಗಿಣಿಯ ಅಲೌಕಿಕವಾದ ಯೌಗಿಕಸ್ಪರ್ಶ ಅಪೂರ್ವವಾದ ಅನುಭವವನ್ನು ಕೌಶಿಕನಿಗೆ ತಂದುಕೊಟ್ಟಿತು. ಅವನ ಹೃದಯದ ಕತ್ತಲೆಯ ತೆರೆಯೊಂದು ಸರಕ್ಕನೆ ಸರಿದುಹೋದಂತಾಗಿ ಉಜ್ವಲವಾಗಿ ಬೆಳಕಿನ ಹೊಳೆತುಂಬಿ ತುಳುಕಿದಂತಾಯಿತು ಹೃದಯವನ್ನು. ಅದರ ಸಂಕೇತವೋ ಎಂಬಂತೆ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯುತ್ತಿತ್ತು. ರಸವಂತಿಯೂ ಕಣ್ಣೀರು ಸುರಿಸುತ್ತಿದ್ದಳು.

ಮಹಾದೇವಿಯ ಉಜ್ವಲ ನೇತ್ರಗಳಿಂದ ಹೊರಟ ಕಿರಣಗಳು ಕೌಶಿಕನ ದೇಹವನ್ನು ಮುಟ್ಟಿ ಪವಿತ್ರಗೊಳಿಸುತ್ತಿರುವಂತೆ ತೋರುತ್ತಿದ್ದುವು. ಅವಳನ್ನೇ ನೋಡುತ್ತಾ ಪುನರ್ಜನ್ಮವನ್ನು ಪಡೆದವನಂತಾಗಿ ಕೇಳಿದ ಕೌಶಿಕ :

"ನೀನಾರು ಮಹಾತಾಯಿ? ನೀನು ಹೆಣ್ಣೆಂದು ತಿಳಿದ ನನ್ನ ಅಜ್ಞಾನದ ಪಾಪವನ್ನು ಹೋಗಲಾಡಿಸು, ಮಹಾದೇವಿ. ನೀನು ಹೆಣ್ಣಲ್ಲ, ಸಾಕ್ಷಾತ್ ಮಹಾದೇವಿ. ನಿನ್ನ ಮಗನನ್ನು ಕಾಪಾಡು, ತಾಯಿ."

ಮತ್ತೆ ನಮಸ್ಕರಿಸಲು ಬಾಗಿದ ಕೌಶಿಕ. ಮಹಾದೇವಿ ಅವನನ್ನು ಕೈ ಹಿಡಿದು ತಡೆದಳು. ಬಿಚ್ಚಿ ಕೆದರಿದ ಅವನ ಜಟೆಯನ್ನು ಹಿಂದಕ್ಕೆ ನೇವರಿಸುತ್ತಾ ಮಾತೆಯ ಮಮತೆಯ ವಾತ್ಸಲ್ಯದಿಂದ ಸಂತೈಸಿದಳು. ಬಳಿಗೆ ಬಂದ ರಸವಂತಿಯನ್ನು ಇನ್ನೊಂದು ಕೈಯಿಂದ ತಬ್ಬಿಕೊಂಡಳು.

ದೈವಶಕ್ತಿಯನ್ನು ಸೇರಿದ ಜೀವಾತ್ಮಗಳ ಧನ್ಯತೆಯ ಕುರುಹಿನಂತೆ ಆ ಎರಡು ಜೀವಗಳು ಕಣ್ಣೀರ್ಗರೆಯುತ್ತಿದ್ದವು. ಭಕ್ತರನ್ನು ಉದ್ಧರಿಸುವ ಮಹಾಮಾತೆಯ ತೀರ್ಥಾಭಿಷೇಕವೆಂಬಂತೆ, ಮಹಾದೇವಿಯ ಕಣ್ಣುಗಳಿಂದಲೂ ಪುಣ್ಯಾಶ್ರುಧಾರೆ ಇಳಿಯುತ್ತಿತ್ತು. ಈ ಮಹಾಸಾಧನೆಗೆ ಚಿರಂತನ ಸಾಕ್ಷಿಯನ್ನೊರೆವಂತೆ, ಅಕ್ಕನ ಹಳ್ಳ ಜುಳುಜುಳು ಶಬ್ದ ಮಾಡುತ್ತಾ ಹರಿಯುತ್ತಿತ್ತು. ಮರಗಿಡಗಳೆಲ್ಲಾ ತಮ್ಮ ಪುಷ್ಪಾಂಜಲಿಯ ಕಾಣ್ಕೆಯನ್ನು ಮಹಾದೇವಿಯ ಪಾದಗಳ ಮೇಲೆ ಅರ್ಪಿಸುವಂತೆ ತಲೆಬಾಗಿ ಬೀಸುತ್ತಿದ್ದುವು. ಅನತಿ ದೂರದಲ್ಲಿದ್ದ ಬೆಟ್ಟಗುಡ್ಡಗಳು ಈ ಪುಣ್ಯಮಂಗಳ ಘಟನೆಯನ್ನು ಕಂಡು ಧನ್ಯನಾಗಿ ಹೆಮ್ಮೆಯಿಂದ ತಲೆಯೆತ್ತಿ ನಿಂತಿದ್ದುವು.

## ೧೦

ಮರುದಿನವೇ ಕದಳಿಯ ವನಕ್ಕೆ ಹೊರಡಬೇಕೆಂದು ಸಂಕಲ್ಪಿಸಿದ್ದ ಮಹಾದೇವಿ ಇನ್ನೂ ಕೆಲವು ದಿನ ಅಲ್ಲಿಯೇ ಉಳಿದಳು.

ಕೌಶಿಕನಲ್ಲಿ ಈಗ ಸಂಪೂರ್ಣ ಪರಿವರ್ತನೆಯಾಗಿತ್ತು. ವೇಷದಿಂದ ಮಾತ್ರ ಭಕ್ತನಾಗಿ ಬಂದವನು, ಈಗ ಆವೇಶದಿಂದಲೂ ಭಕ್ತನಾಗಿದ್ದ. ಸಾಧನೆಯ ಮಾರ್ಗದಲ್ಲಿ ಆತನನ್ನು ತೊಡಗಿಸಿದಳು ಮಹಾದೇವಿ. ರಸವಂತಿಯಂತೂ ಮಹಾದೇವಿಯನ್ನು ಕಂಡು ಧನ್ಯತೆಯ ಭಾವದಲ್ಲಿ ತನ್ನನ್ನು ತಾನೇ ಮರೆತಿದ್ದಳು. ಅವಳ ಮುಗ್ಧಭಕ್ತಿಗೆ ಮೆಚ್ಚಿದ ಅಕ್ಕ, ಅವಳಿಗೆ ಅನುಗ್ರಹವನ್ನಿತ್ತು ಸಾಧನೆಯ ರಹಸ್ಯವನ್ನು ಅರುಹಿದಳೂ.

ಆ ಮಾರ್ಗದಲ್ಲಿ ಅವರಿಬ್ಬರೂ ಮಗ್ನರಾದುದನ್ನು ಕಂಡು ಮಹಾದೇವಿಯ ಮನಸ್ಸು ನೆಮ್ಮದಿಯಿಂದ ನಲಿಯಿತು. ತನ್ನ ಸಂಪರ್ಕದಿಂದ ಅವರ ಜೀವ ದುಃಖಮಯವಾಗದೆ ವಿಕಾಸದ ದಿವ್ಯಮಾರ್ಗದತ್ತ ತಿರುಗಿದುದಕ್ಕಾಗಿ, ತನ್ನ ಕರ್ತವ್ಯದ ಕೊನೆಯ ಹೊಣೆಯನ್ನು ನಿರ್ವಹಿಸಿದ ತೃಪ್ತಿ ಅವಳಿಗೆ ಉಂಟಾಯಿತು.

ಕೊನೆಗೊಂಡು ದಿನ ಮಹಾದೇವಿ ಕದಳಿಯ ವನಕ್ಕೆ ಹೊರಟು ನಿಂತಳು. ಜೊತೆಯಲ್ಲಿಯೇ ರಸವಂತಿ ಕೌಶಿಕರು ಸಿದ್ಧರಾದರು. ಆದರೆ ಮಹಾದೇವಿ ತಾನೊಬ್ಬಳೇ ಕದಳಿಯಲ್ಲಿರಬೇಕೆಂಬ ತನ್ನ ಮನೋಭಿಲಾಷೆಯನ್ನು ತಿಳಿಸಿದಳು. ಅದಕ್ಕೆ ರಸವಂತಿ :

"ಆಗಲಿ ತಾಯಿ, ನಾವು ಈಗ ನಿಮ್ಮ ಜೊತೆ ಬಂದು ಕದಳಿಯನ್ನು ನೋಡಿಕೊಂಡು ಮತ್ತೆ ಕೆಳಗೆ ಬಂದುಬಿಡುತ್ತೇವೆ. ನೀವೊಬ್ಬರೇ ಕೆಲವು ದಿವ ಅಲ್ಲಿರಬಹುದು. ಆಗಾಗ ನಾವು ಮೇಲೇರಿ ನಿಮ್ಮನ್ನು ನೋಡುವುದಕ್ಕೂ ಅನುಕೂಲವಾಗುತ್ತದೆ."

ಅವರ ಆಸೆಗೆ ಅಡ್ಡಿಯನ್ನುಂಟುಮಾಡುವ ಮನಸ್ಸಾಗಲಿಲ್ಲ ಮಹಾದೇವಿಗೆ.

ತ್ರಿಕೂಟಪರ್ವತನ್ನು ಏರತೊಡಗಿದರು. ಇಬ್ಬರು ಚುಂಚರು ಮಾರ್ಗದರ್ಶಕರಾಗಿ ಮುಂದೆ ಮುಂದೆ ನಡೆಯುತ್ತಿದ್ದರು.

ತ್ರಿಕೂಟಪರ್ವತ, ಅಕ್ಕನ ಹಳ್ಳದಿಂದ ಪಶ್ಚಿಮಕ್ಕೆ ಹೊರಟು ಮೇಲೆ ಏರುತ್ತಾ ಹೋದಂತೆ ದಕ್ಷಿಣದ ಕಡೆಗೆ ಹಾವಿನಂತೆ ಮುಂದುವರಿಯುತ್ತಿತ್ತು. ಪರ್ವತವನ್ನು ಏರತೊಡಗಿದ ಸ್ವಲ್ಪಹೊತ್ತಿನಲ್ಲಿಯೇ ಕೃಷ್ಣಾನದಿಯ ದೀರ್ಘ ದೇಹ ಕಣ್ಣಿಗೆ ಬೀಳತೊಡಗಿತು. ದಕ್ಷಿಣದ ಕಡೆಯಿಂದ ಬಂದುಬಾಗಿ ಚುಕ್ಕಲ ಪರ್ವತವನ್ನು ಅರ್ಧಚಂದ್ರಾಕಾರದಲ್ಲಿ ಸುತ್ತಿಹೋಗಿರುವ ಕೃಷ್ಣೆಯ ದಂಡೆಯನ್ನೇ ಆಶ್ರಯಿಸಿ. ಆ ನದಿಯ ಪ್ರವಾಹದ ಮೇಲ್ಮುಖದ ಕಡೆಗೆ ಮೇಲೆ ಮೇಲೆ ಏರುತ್ತಿತ್ತು ತ್ರಿಕೂಟ.

ತ್ರಿಕೂಟದ ಪರ್ವತವೆಂದು ಇದಕ್ಕೆ ಹೆಸರು ಬರಲು ಕಾರಣವಾದ ಮೂರು ಕೂಟಗಳಾವುದೆಂದು ಮಹಾದೇವಿ ಸುತ್ತಲೂ ಇದ್ದ ಪರ್ವತಶಿಖರಗಳನ್ನು ಹುಡುಕ ತೊಡಗಿದಳು. 'ಯಾವ ಯಾವ ಪರ್ವತದ ಮೂಗು ಶಿಖರಗಳನ್ನು ಗಮನಿಸಿ ತ್ರಿಕೂಟ ಪರ್ವತವೆಂದು ಕರೆದಿರಬಹುದು?' ಎಂದು ಆಲೋಚಿಸುತ್ತಿದ್ದಳು.

ಅಷ್ಟರಲ್ಲಿ ಏರುತ್ತಿದ್ದ ಪರ್ವತದ ಕಡಿದಾದ ದಾರಿ ಮುಗಿದು ಮಟ್ಟಸವಾದ ನೆಲದಲ್ಲಿ ನಡೆಯುತ್ತಿದ್ದರು. ಎತ್ತರವಾಗಿ ಬೆಳೆದು ನಿಂತ ಒಣಗಿದ ಹುಲ್ಲನ್ನು ತುಳಿದು ಕೊಂಡು ಕಲ್ಲಿನಿಂದ ಕಲ್ಲಿಗೆ ನೆಗೆಯುತ್ತಾ ಕಷ್ಟದಿಂದ

ಮುಂದುವರಿಯಬೇಕಾಗಿತ್ತು. ಅಕ್ಕಪಕ್ಕಗಳಲ್ಲಿ ಸಾಲುಸಾಲಾಗಿ ಹಬ್ಬಿದ ಬಿಲ್ವವೃಕ್ಷಗಳು ಇವಳನ್ನು ಎದುರುಗೊಳ್ಳುತ್ತಿದ್ದುವು.

ಸ್ವಲ್ಪ ಮುಂದೆ ಹೋಗುವುದರೊಳಗಾಗಿ ಪರ್ವತ ದಕ್ಷಿಣಕ್ಕೆ ಬಾಗುತ್ತಿತ್ತು ಮತ್ತು ಮೊದಲಿಗಿಂತಲೂ ಕಡಿದಾಗಿ ಮೇಲೇರುತ್ತಿತ್ತು. ಆಗ ಮಹಾದೇವಿಗೆ ಹೊಳೆಯಿತು: 'ತ್ರಿಕೂಟಪರ್ವತವೆಂದರೆ ಬೇರೆ ಬೇರೆ ಪರ್ವತದ ಮೂರು ಶಿಖರಗಳನ್ನು ಕುರಿತು ಹೇಳಿರುವುದಿಲ್ಲ. ಇದೊಂದೇ ಪರ್ವತದ ಮೂರು ಶಿಖರಗಳು ಅವು. ಒಂದು ಶಿಖರವನ್ನು ಹತ್ತಿಬಂದು, ಈಗ ಎರಡನೇ ಶಿಖರವನ್ನು ಏರತೊಡಗಿದ್ದೇವೆ.'

ಇದನ್ನು ಆಲೋಚಿಸುತ್ತಿದ್ದಂತೆಯೇ ಪ್ರಭುದೇವನ ವಚನವೂ ನೆನಪಿಗೆ ಬಂತಿತು : 'ನೀನಾನೆಂಬುಭಯ ಸಂಗವಳಿದು ತಾನೇ ತಾನಾದ ತ್ರಿಕೂಟವೆಂಬ ಮಹಾಗಿರಿಯ ಮೆಟ್ಟಿ ನೋಡಲು ಬಟ್ಟಬಯಲು ಕಾಣಬಹುದು ನೋಡಾ' ಎಂದು ಮುಂತಾಗಿ ಆತ ಹೇಳಿದ್ದ. ಆ ವಚನವನ್ನೇ ಮೆಲುಕು ಹಾಕುತ್ತಾ ಏರುತ್ತಿದ್ದಳು.

ಎರಡನೆಯ ಶಿಖರವನ್ನು ಏರಿದರು. ಅಲ್ಲಿ ಸ್ವಲ್ಪ ವಿಶ್ರಾಂತಿಯನ್ನು ಪಡೆಯಲು ಕುಳಿತರು.

ಎದುರಿಗಿರುವ ಪರ್ವತಗಳನ್ನೆಲ್ಲಾ ಮೀರಿ ನಿಂತಿರುವ ತ್ರಿಕೂಟಪರ್ವತದ ಮಧ್ಯಭಾಗದಲ್ಲಿ ಬಂದು ಕುಳಿತಿದ್ದರು. ತ್ರಿಕೂಟದೊಡನೆ ಹೊಯ್‌ಕೈಯಾಗಿ ನಿಂತ ಕೆಚ್ಚೆದೆಯ ಪರ್ವತವೆಂದರೆ ಚುಕ್ಕಲ ಪರ್ವತವೊಂದೇ ಎಂಬಂತೆ ತೋರಿತು. ಇವೆರಡು ಪರ್ವತಗಳ ಆಳವಾದ ಕಣಿವೆಯಲ್ಲಿ ಹರಿಯುತ್ತಿದ್ದ ಕೃಷ್ಣೆ, ಇವುಗಳನ್ನು ಬೇರ್ಪಡಿಸುವ ನೀಲಿರೇಖೆಯಂತೆ ಹೊಳೆಯುತ್ತಿದ್ದಳು.

ಮೇಲೆದ್ದು ನಡೆಯತೊಡಗಿದಳು. ಈಗ ಏರುತ್ತಿದ್ದುದು ಮೂರನೆಯ ಶಿಖರ. ಮೇಲೆಮೇಲೇರಿದಂತೆಲ್ಲಾ ಮಹಾದೇವಿಗೆ ಅನಿರ್ವಚನೀಯವಾದ ಆನಂದವಾಗುತ್ತಿತ್ತು.

"ದೇಹದ ತ್ರಿಗುಣಗಳನ್ನು ಮೆಟ್ಟಿ ಮೇಲೇರುವಂಥ ಅನುಭವ ಈ ತ್ರಿಕೂಟ ಪರ್ವತವನ್ನೇರುವುದು" ಎಂಬ ರಸವಂತಿಯ ಉದ್ಗಾರ, ಸತ್ಯವಾದುದಾಗಿತ್ತು.

"ಅಂತರಂಗದ ಕದಳಿ ಎಂದು ಹೇಳುತ್ತಿದ್ದೆಯಲ್ಲ, ಮಹಾದೇವಿ, ಆ ಅಂತರಂಗದ ಕದಳಿಗೆ ಏರಲು ಈಡಾ, ಪಿಂಗಳ, ಸುಷುಮ್ನೆ ನಾಡಿಗಳು ಸೇರುವ ಭ್ರೂಮಧ್ಯವೇ ತ್ರಿಕೂಟವಲ್ಲವೇ ?" – ಕೇಳಿದ ಕೌಶಿಕ. ಅವನ ಸಾಧನೆಯ ಮಾರ್ಗ ಮುಂದುವರಿಯುತ್ತಿರುವುದನ್ನು ಕಂಡು ತೃಪ್ತಳಾದಳು ಮಹಾದೇವಿ.

'ಮೂಲಾಧಾರದ ಬೇರ ಮೆಟ್ಟಿ ಭೂಮಂಡಲವನ್ನೇರಿದ' ಮಹಾದೇವಿ ವೈರಾಗ್ಯದ ಸೋಪಾನದಿಂದ ತ್ರಿಕೂಟಪರ್ವತವನ್ನೇರಿ ಐಕ್ಯದ ತುದಿಯ್ನು ಮುಟ್ಟುತ್ತಿದ್ದಳು. ಮೂರನೇ ಶಿಖರವನ್ನು ಏರಿದರು. ಆ ಪರ್ವತದ ತುದಿಯಲ್ಲಿ ಮುಂದೆ ವಿಸ್ತಾರವಾದ ಬಟ್ಟಬಯಲು ಹಬ್ಬಿಹರಡಿತ್ತು. ಅಲ್ಲಮನ ವಚನವನ್ನು ಮತ್ತೆ ಸ್ಮರಿಸಿಕೊಂಡು ಮಹಾದೇವಿ ಈ ಬಟ್ಟಬಯಲಿನಲ್ಲಿಯೇ ಇರಬೇಕು, ಕಾಣಬಾರದ ಕದಳಿ' ಎಂದುಕೊಂಡಳು.

ದೇಹಕ್ಕೆ ಅನ್ವಯಿಸಿ ಹೇಳಿರುವ ಅಲ್ಲಮನ ಆ ವಚನ, ಭೌಗೋಳಿಕ ನಿರ್ದೇಶನವನ್ನು ಎಷ್ಟು ಸುಂದರವಾಗಿ ಮಾಡುತ್ತಿವೆಯೆಂಬುದನ್ನು ನೆನೆದಾಗ ಆಶ್ಚರ್ಯವಾಯಿತು ಅವಳಿಗೆ, ಪ್ರಭುದೇವನ ವಚನ ರಚನಾಚಾತುರ್ಯಕ್ಕೆ ಮತ್ತು ಶ್ರೀಪರ್ವತಗಳ ರಚನಾವಿನ್ಯಾಸದ ರಹಸ್ಯಕ್ಕೆ.

ತ್ರಿಕೂಟಪರ್ವತದ ತುದಿಯ ಬಟ್ಟಬಯಲಿನಲ್ಲಿ ಸ್ವಲ್ಪ ದೂರ ನಡೆದರು. ಮಾರ್ಗ ನಿಧಾನವಾಗಿ ಇಳಿಯುತ್ತಿತ್ತು. ಮತ್ತು ಮುಂದೆ ಹೋದಂತೆ ಕಾಡು ದಟ್ಟವಾಗುತ್ತಿತ್ತು. ಅಷ್ಟರಲ್ಲಿ ಮುಂದೆ ನಡೆಯುತ್ತಿದ್ದ ಚುಂಚರು ಕದಳಿವನ ಬಂದಿತೆಂಬುದನ್ನು ಹೇಳುವಂತೆ ಒಂದು ಕಡೆಯಲ್ಲಿ ನಿಂತರು.

ಮಳೆಗಾಲದಲ್ಲಿ ಮಾತ್ರ ಅಕ್ಕಪಕ್ಕದ ನೀರು ಹರಿದುಬರುವ ಕಾಲುವೆಯಂತಹ ಒಂದು ಹಳ್ಳ. ಅದರ ತುದಿಯಲ್ಲಿ ವಿಸ್ತಾರವಾದ ಒಂದು ಹಾಸುಗಲ್ಲು. ಅವರು ಬರುತ್ತಿದ್ದ ಮಾರ್ಗ ಆ ಹಾಸುಗಲ್ಲಿನ ಮೇಲೆಯೇ ಮುಂದೆ ಸಾಗಿಹೋಗುತ್ತಿತ್ತು. ಹಾಸುಗಲ್ಲಿನ ಎಡಗಡೆಯ ಕೊನೆಯಲ್ಲಿ ಬೆಟ್ಟ ಇಳಿದು ಆಳವಾದ ಕೊಳ್ಳ ಪ್ರಾರಂಭವಾಗಿತ್ತಿತ್ತು.

ಚುಂಚರು ಹಳ್ಳದ ಹಾಸುಗಲ್ಲನ್ನು ದಾಟಿ ನಾಲ್ಕು ಹೆಜ್ಜೆ ಮುಂದೆ ಹೋಗಿ ಕಣಿವೆಯ ಕೊಳ್ಳದತ್ತ ತಿರುಗಿದರು. ರಸವಂತಿ ಸುತ್ತಲೂ ನೋಡುತ್ತಿದ್ದಳು. ಕೌಶಿಕನೂ ಬಾಳೆ ಗಿಡಗಳಿಗಾಗಿ ಹುಡುಕುತ್ತಿದ್ದ, ಆದರೆ ಆ ಕದಳಿಯ ರಹಸ್ಯವನ್ನು ಪ್ರಭುವಿನಿಂದ ಕೇಳಿ ಬಲ್ಲ ಮಹಾದೇವಿ ಚುಂಚರನ್ನು ಹಿಂಬಾಲಿಸುತ್ತಿದ್ದಳು.

ಕಣಿವೆಯ ಕೊಳ್ಳದ ದಡದಲ್ಲಿಯೇ ಮಾರ್ಗ ಇಳಿಯುತ್ತಿತ್ತು. ಕೊಳ್ಳದ ಆಳ ಕಾಣದಂತೆ ದೊಡ್ಡ ದೊಡ್ಡ ಮರಗಳೂ ಪೊದೆಗಳೂ ಬೆಳೆದು ಹರಡಿದ್ದುವು. ನಾಲ್ಕಾರು ಹೆಜ್ಜೆ ಹೋದಮೇಲೆ ಕೊಳ್ಳದ ಕಡೆಗೆ ಇಳಿಯಲು ಕಿಟಕಿಯಂತಹ ಒಂದು ಸಣ್ಣ ದಾರಿ ಗೋಚರಿಸಿತು. ಅದರಲ್ಲಿ ನುಗ್ಗಿದರು ಚುಂಚರು. ಅವರ ಹಿಂದೆಯೇ ಇದ್ದಳು ಮಹಾದೇವಿ.

ಅಲ್ಲಿ ನುಗ್ಗಿ ಮುಂದೆ ಹೆಜ್ಜೆ ಇಟ್ಟ ಕೂಡಲೇ ಆಳವಾದ ಕೊಳ್ಳ ಕಾಣಿಸುತ್ತಿತ್ತು. ಅದನ್ನು ಕಷ್ಟಪಟ್ಟು ಇಳಿಯಲು ಸಹಾಯವಾಗುವಂತೆ ಬಂಡೆಗಳು ಇಳಿಜಾರಾಗಿ ಹರಡಿದ್ದವು. ಅದನ್ನು ಬಿಟ್ಟು ಅದರ ದಡದಲ್ಲಿಯೇ ಮೇಲಕ್ಕೆ ತಿರುಗಿದರು.

ಅಲ್ಲಿ ಮುಂದೆ ಹೋದಂತೆ ಮಾರ್ಗವು ಮೇಲೆ ನಿಂತು ನೋಡಿದ ಹಳ್ಳದ ಹಾಸುಬಂಡೆಯ ಕಡೆಗೆ ಕೊಂಡೊಯ್ಯುತ್ತಿತ್ತು. ಆ ಹಾಸುಬಂಡೆಯನ್ನೇ ಮೇಲ್ಛಾವಣಿಯನ್ನಾಗಿ ಉಳ್ಳ ಗುಹೆಯೊಂದರ ಬಳಿಗೆ ಒಯ್ದು ಮುಟ್ಟಿಸುತ್ತಿತ್ತು ಆ ಮಾರ್ಗ. ಆ ಗುಹೆ ಕಣ್ಣಿಗೆ ಬೀಳುವುದಕ್ಕೆ ಮೊದಲೇ ಅದರ ಮುಂದೆ ಸಾಲಾಗಿ ಬೆಳೆದಿರುವ ಬಾಳೆಯ ಗಿಡಗಳು ಗೋಚರಿಸಿದವು. ಮಹಾದೇವಿಯ ಹೃದಯ ಸಂತೋಷದಿಂದ ಉಕ್ಕಿ ಬಂದಿತು.

ಗುಹೆಯನ್ನು ಪ್ರವೇಶಿಸಿದರು. ಸ್ವಲ್ಪಮಟ್ಟಿಗೆ ಅರ್ಧಚಂದ್ರಾಕಾರವಾಗಿ ಹಬ್ಬಿ ಹರಡಿದ್ದ ಗುಹೆ, ತುಂಬಾ ವಿಸ್ತಾರವಾಗಿತ್ತು. ಗುಹೆಯ ಮುಂಭಾಗ ಅರ್ಧಚಂದ್ರನ ಕೊನೆಯ ಸರಳರೇಖೆಯಂತಿದ್ದು ಹಳ್ಳದ ಎರಡು ಕೊನೆಗಳನ್ನು ಮುಟ್ಟಿನಿಂತಿತ್ತು. ಆ ಮುಂಭಾಗದಲ್ಲಿ ನಿಂತು ನೋಡಿದರೆ ಕೆಳಗೆ ಆಳವಾಗಿದ್ದ ಕಣಿವೆಯಕೊಳ್ಳ ಕಾಣಿಸುತ್ತಿತ್ತು. ಗುಹೆಯ ಮುಂಭಾಗದ ತುದಿಯ ಗಿಡಗಳು ಗುಂಪುಗುಂಪಾಗಿ ಬೆಳೆದುನಿಂತಿದ್ದುವು. ಗುಹೆಯಬಾಗಿಲಲ್ಲಿ ಕಾವಲು ನಿಂತಂತೆ ತೋರುತ್ತಿದ್ದ ಆ ಕದಳಿ ಗಿಡಗಳು ಗಾಳಿಯ ಹೊಡೆತಕ್ಕೆ ಸಿಕ್ಕದೆ, ಬಿರುಬಿಸಿಲಿಗೆ ನಲುಗದೆ ನಳನಳಿಸಿ ಬಾಳನರಳಿಸುವಂತೆ ಬೆಳೆದು ನಿಂತಿದ್ದುವು.

ಪ್ರಭು ಹೇಳಿದಂತೆ ಪ್ರಕೃತಿ ರಚನೆಯ ವೈವಿಧ್ಯಗಳಲ್ಲಿ ಇದೊಂದು ವಿಶಿಷ್ಟವಾದ ಕೃತಿಯೆಂದುಕೊಂಡಳು ಮಹಾದೇವಿ.

"ಈ ಗುಹೆಯ ಮೇಲ್ಛಾವಣಿಯ ಕಲ್ಲಿನ ಮೇಲೆಯೇ ಅಲ್ಲವೇ ನಾವು ಬಂದು ನಿಂತುಕೊಂಡದ್ದು ?" ರಸವಂತಿ ಕೇಳಿದಳು. ಕೌಶಿಕ ಗುಹೆಯ ಇನ್ನೊಂದು ಮೂಲೆಯನ್ನು ಪರೀಕ್ಷಿಸುತ್ತಿದ್ದ.

"ಹೌದು, ರಸವಂತಿ," ಹೇಳಿದಳು ಮಹಾದೇವಿ.

"ನಾವು ನಿಂತ ಕಲ್ಲಿನ ಕೆಳಗೇ ಕದಳಿಯ ಗುಹೆಯಿದೆಯೆಂದು ನಾನು ಖಂಡಿತವಾಗಿ ಊಹಿಸಿರಲಿಲ್ಲ, ತಾಯಿ. ಇದೊಂದು ಅದ್ಭುತವಾದ ಗುಹೆ !" ಉದ್ಗಾರ ತೆಗೆದಳು ರಸವಂತಿ.

"ನಿಜ, ರಸವಂತಿ; ಈ ಜೀವನವೂ ಹಾಗೆಯೇ. ನಾವು ಜೀವನದ ರಹಸ್ಯದ ಮೇಲೆಯೇ ನಿಂತಿರುತ್ತೇವೆ. ಆದರೆ ಕೆಳಗೆ ಕದಳಿಯಿದೆ ಎಂಬುದನ್ನು ಅರಿಯೆವು. ಯಾವ ಮಾರ್ಗದಿಂದ ಒಳಹೊಕ್ಕು ಕಾಣಬೇಕೆಂಬುದನ್ನು ಶ್ರೀಗುರು ತೋರಿಸುತ್ತಾನೆ.

ಆಗ ಅರಿಯುತ್ತೇವೆ. ಹೃದಯದ ಕದಳಿ ನಮ್ಮ ಕಾಲಕೆಳಗೇ ಇತ್ತೆಂಬುದನ್ನು. ಹೀಗೆ ಈ ಕದಳಿ ಇರುವ ಸ್ಥಳ, ಇದರ ರಚನಾವಿನ್ಯಾಸ, ಎಲ್ಲವೂ ಜೀವನದ ರಹಸ್ಯಕ್ಕೆ ಸಾಂಕೇತಿಕ ಸಾಕ್ಷಿಗಳಂತಿವೆ. ಅದೇ ಇದರ ವೈಶಿಷ್ಟ್ಯ."

ಕದಳಿಯ ಸೌಂದರ್ಯದಲ್ಲಿ ಹುದುಗಿರುವ ರಹಸ್ಯವನ್ನು ಹೇಳಿದಳು ಮಹಾದೇವಿ. ರಸವಂತಿಯ ಹೃದಯದ ಗುಹೆಯಲ್ಲಿ ಅಡಗಿದುವು ಆ ಮಾತುಗಳು.

ಶ್ರೀಶೈಲದ ಮಹತ್ವವನ್ನೂ ಕದಳಿಯನ್ನೂ ಕುರಿತು ತಾನು ಸಾಂಕೇತಿಕವಾಗಿ ಹಾಡಿದ ವಚನವನ್ನು ನೆನಸಿಕೊಂಡು ನೆನಸಿಕೊಂಡು ಅದನ್ನು ಪೂರ್ಣಗೊಳಿಸಿದಳೂ ಮಹಾದೇವಿ :

ವನವೆಲಾ ಕಲ್ಪತರು, ಗಿಡವೆಲ್ಲಾ ಮರುಜೇವಣಿ,
ಶಿಲೆಗಳೆಲ್ಲಾ ಪರುಷ, ನೆಲವೆಲ್ಲಾ ಅವಿಯುಕ್ತ ಕ್ಷೇತ್ರ,
ಜಲವೆಲ್ಲಾ ನಿರ್ಜರಾಮೃತ
ಮೃಗವೆಲ್ಲಾ ಪರುಷಮೃಗ,
ಎಡಹುವ ಹರಳೆಲ್ಲಾ ಚಿಂತಾಮಣಿ !
ಚನ್ನಮಲ್ಲಿಕಾರ್ಜುನಯ್ಯ ನಚ್ಚಿನ ಗಿರಿಯ, ಸುತ್ತಿ ನೋಡುತ ಬಂದು
ಕದಳಿಯ ಬನವ ಕಂಡೆ ನಾನು.

ರಸವಂತಿ ಮುಂದೆ ಹೋಗುತ್ತ ಹೇಳಿದಳು :

"ಇಲ್ಲಿ ನೋಡಿ ತಾಯಿ, ಈ ಕಲ್ಲಿನಿಂದ ನೀರು ಹೇಗೆ ಜಿನುಗುತ್ತಿದೆ."

ಬಾಳೆಯ ಗುಂಪುಗಳಿರುವ ಸ್ಥಳದಲ್ಲಿ, ಅವುಗಳ ಬುಡದಿಂದ ಸ್ವಲ್ಪ ದೂರದಲ್ಲಿ ಕಲ್ಲಿನಿಂದ ನೀರು ಜಿನುಗುತ್ತಿತ್ತು. ಅದು ಹಾಗೇ ಹರಿದುಬಂದು ಬಾಳೆಯ ಬುಡಗಳಲ್ಲಿ ಅಡಗಿ ಹೋಗುತ್ತಿತ್ತು. ಬಾಳೆಗಳಿಗಾಗಿಯೇ ಈ ಪರ್ವತ ಇಲ್ಲಿ ಆನಂದದ ಅಭಿಷೇಕ ಗೈಯುತ್ತಿದೆ ಎಂಬಂತೆ ತೋರುತ್ತಿತ್ತು.

ನಾಲ್ಕಾರು ಕಡೆಗಳಲ್ಲಿ ಹಾಗೆ ನೀರು ಜಿನುಗಿ ಬಾಳೆಯಬುಡಗಳಲ್ಲಿ ಅಡಗುತ್ತಿದ್ದುದರ ಹೊರತಾಗಿ ಅಲ್ಲಿ ಬೇರೆಲ್ಲಿಯೂ ನೀರಿನ ಆಶ್ರಯವಿರಲಿಲ್ಲ.

"ನೀವು ಇಲ್ಲಿರುವುದಕ್ಕೆ ನೀರಿನ ಅನುಕೂಲವಿಲ್ಲವಲ್ಲ ತಾಯಿ." ರಸವಂತಿ ಕೇಳಿದಳು.

"ಹೌದು, ಇಲ್ಲಿ ಹತ್ತಿರ ಎಲ್ಲಿಯಾದರೂ ನೀರಿನ ಆಶ್ರಯವಿದೆಯೇ ಕೇಳಬೇಕು ಚುಂಚರನ್ನು" ಎಂದು ಮಹಾದೇವಿ ಅವರಿಗಾಗಿ ನೋಡಿದಳು. ಅವರು ಗುಹೆಯಲ್ಲಿರಲಿಲ್ಲ. ಗುಹೆಗೆ ಇಳಿದ ಮಾರ್ಗದಲ್ಲಿಯೇ ಮತ್ತೆ ಹೊರಗೆ

ಬಂದಳು ಮಹಾದೇವಿ, ರಸವಂತಿಯೊಡನೆ. ಮೊದಲು ಬಂದು ನಿಂತ ಗುಹೆಯ ಮೇಲ್ಭಾವಣಿಯ ಕಲ್ಲಿನ ಮೇಲೆ ಬಂದು ನಿಂತರು. ಚುಂಚರು ಅಲ್ಲಿಯೂ ಕಣ್ಣಿಗೆ ಬೀಳಲಿಲ್ಲ.

ಹತ್ತಿರಲ್ಲಿಯೇ ಇನ್ನೊಂದು ಚುಂಚರ ಹಳ್ಳಿ ಇರುವುದನ್ನು ಕೇಳಿದ್ದಳು ಮಹಾದೇವಿ. 'ಲಿಂಗಭೇರಿ ಹಳ್ಳಿ' ಎಂಬ ಅದರ ಹೆಸರೂ ನೆನಪಿತ್ತು. ಆ ಚುಂಚರು ಬಹುಶಃ ಅಲ್ಲಿಗೆ ಹೋಗಿರಬೇಕೆಂದು ಆಲೋಚಿಸುತ್ತಿರುವಷ್ಟರಲ್ಲಿ ಅವರೇ ಬರುತ್ತಿದ್ದರು ದೂರದಲ್ಲಿ.

ಅವಳ ಊಹೆ ನಿಜವಾಗಿತ್ತು. ಲಿಂಗಭೇರಿ ಹಳ್ಳಿಯಿಂದ ಅವರ ಜೊತೆ ಇನ್ನಿಬ್ಬರು ಚುಂಚರು ಬಂದಿದ್ದರು. ಹಣ್ಣು ಹಂಪಲುಗಳನ್ನು ತಂದು ಒಪ್ಪಿಸಿದರು ಅವರು.

ಮಹಾದೇವಿ ಇಲ್ಲಿ ನೀರಿನ ಅನುಕೂಲವನ್ನು ಕುರಿತು ವಿಚಾರಿಸಿದಳು. ಅದೊಂದೇ ಇಲ್ಲಿರುವ ಕೊರತೆಯೆಂದು ಅವರು ಹೇಳಿದರು. ಅಷ್ಟರಲ್ಲಿ ಇನ್ನೂ ಗುಹೆಯಲ್ಲಿಯೇ ಇದ್ದ ಕೌಶಿಕ ಸಂತೋಷದಿಂದ ಕೂಗುತ್ತಾ ಮೇಲೆ ಬಂದು :

"ನೀರು ಜೋರಾಗಿ ಹರಿದು ಬರುತ್ತಿದೆ, ಮಹಾದೇವಿ. ಸಣ್ಣ ಚಿಲುಮೆಯಂತೆ ಉಕ್ಕಿ ಹರಿಯುತ್ತಿದೆ."

ಎಲ್ಲರೂ ಆತುರವಾಗಿ ಇಳಿದು ನೋಡಿದರು. ಸಣ್ಣಗೆ ಜಿನುಗುತ್ತಿದ್ದ ಒಂದು ಕಡೆ ಜಿನುಗುವುದಕ್ಕೆ ಬದಲಾಗಿ ಉಕ್ಕಿ ಹರಿಯುತ್ತಿತ್ತು. ಕೌಶಿಕ ಹೇಳಿದ:

"ನೀರು ಜಿನುಗುವ ಎಲ್ಲ ಕಡೆಗಳನ್ನೂ ನೋಡಿಕೊಂಡು ಹೋಗುತ್ತಿದ್ದೆ. ಇಲ್ಲಿ ಸ್ವಲ್ಪ ಹೆಚ್ಚಾಗಿ ಬರುತ್ತಿರುವಂತೆ ಕಾಣಿಸಿತು. ಅಲ್ಲದೆ ಮರದ ತುಂಡಿನಂತಹ ಒಂದು ವಸ್ತು ಸಿಕ್ಕಿಕೊಂಡಿರುವಂತೆ ಕಾಣಿಸಿತು. ಒಂದುಕಲ್ಲು ತಂದು ಅದನ್ನು ಕುಟ್ಟಿದೆ. ಒಂದು ಸಣ್ಣ ಚಕ್ಕೆ ಹಾರಿತು. ನೀರು ಪುಟಿಯತೊಡಗಿತು."

ಚೆನ್ನಮಲ್ಲಿಕಾರ್ಜುನನ ಕೃಪೆಗಾಗಿ ಮಹಾದೇವಿ ಧನ್ಯವಾದಗಳನ್ನು ಅರ್ಪಿಸಿದಳು. ನೀರಿನ ಸಮಸ್ಯೆ ಬಗೆಹರಿಯಿತು.

ಚುಂಚರು ತಂದ ಹಣ್ಣು ಹಂಪಲುಗಳನ್ನು ತಿಂದರು. ರಾತ್ರಿ ಚುಂಚರು ಹಾಲನ್ನು ತಂದುಕೊಟ್ಟರು ಲಿಂಗಭೇರಿ ಹಳ್ಳಿಯಿಂದ. ಆ ರಾತ್ರಿ ಕಳೆಯಿತು.

ಕದಳಿಯ ಗುಹೆಯಲ್ಲಿ ಆ ರಾತ್ರಿ ! ಹೊರಗೆ ಕಾಡುಪ್ರಾಣಿಗಳ ಕೂಗು ಕೇಳುತ್ತಿತ್ತು. ಕೆಲವು ಹಕ್ಕಿಗಳಂತೂ ಅಳುವ ದೀರ್ಘಸ್ವರದಿಂದ ಕೂಗಿಕೊಳ್ಳುತ್ತಿದ್ದವು. ಹುಲಿಗಳು ಘರ್ಜಿಸುತ್ತಿದ್ದುವು. ಆದರೆ ಕದಳಿಯ ಗುಹೆಯ ಒಳಗಡೆ ಅವುಗಳಾವುವೂ ಹೋಗುವಂತಿರಲಿಲ್ಲ. ಅಂತರಂಗದ ಕದಳಿಯನ್ನು ಸೇರಿದವರಿಗೆ ಲೌಕಿಕ ಜಗತ್ತಿನ

ವಿಷಯುವೆಂಬ ಕ್ರೂರ ಪ್ರಾಣಿಗಳು ಏನೂ ಮಾಡಲಾರವೆಂಬುದನ್ನು ಸೂಚಿಸುವಂತಿತ್ತು ಆ ನಿಲುವು.

ಬೆಳಗಾಯಿತು. ಬೆಳಗಿನ ಸೂರ್ಯನ ಮೊಟ್ಟಮೊದಲನೆಯ ಕಿರಣಗಳು ಗುಹೆಯಲ್ಲಿ ಧ್ಯಾನಸ್ಥಳಾಗಿ ಕುಳಿತ ಮಹಾದೇವಿಯ ಸೇವೆಗೈಯಲೆಂಬಂತೆ ಬಂದು ಬೀಳುತ್ತಿದ್ದುವು.

ಗುಪ್ತವಾದ ಸ್ಥಳದಲ್ಲಿದ್ದರೂ ಗುಹೆಗೆ ಗಾಳಿ ಬೆಳಕುಗಳ ಆಶ್ರಯ ತುಂಬಾ ಅನುಕೂಲವಾಗಿತ್ತು. ಇದು ಬುಗ್ಗುವಾಗುವಿನ ಬಳಿ ಕಂಡ ಗುಹೆಯಂತೆ ಕಗ್ಗತ್ತಲು ಕೋಣೆಯಾಗಿರಲಿಲ್ಲ. ಅನುಷ್ಠಾನಕ್ಕೆ ತುಂಬಾ ಪ್ರಶಸ್ತವಾದ ಸ್ಥಳವಾಗಿತ್ತು. ಆದುದರಿಂದಲೇ ಇದು ಅನೇಕ ಸಿದ್ಧರನ್ನೂ ಸಾಧಕರನ್ನೂ ಆಕರ್ಷಿಸಿದೆಯೆಂದುಕೊಂಡಳು. ಬುಗ್ಗುವಾಗುವಿನ ಚುಂಚರು ತಮ್ಮ ಹಳ್ಳಿಗೆ ಹಿಂತಿರುಗಲು ಮಹಾದೇವಿಯ ಅಪ್ಪಣೆ ಕೇಳಿದರು. ಆಗ ಮಹಾದೇವಿ ಕೌಶಿಕ ರಸವಂತಿಯರನ್ನು ಕರೆದುಕೊಂಡು ಹೋಗುವಂತೆ ಸೂಚಿಸಿದಳು ಅವರಿಗೆ. ಮಹಾದೇವಿಯ ಅಭಿಪ್ರಾಯುವನ್ನು ಅರಿತು ತಾವೂ ಹೊರಡಲು ಸಿದ್ಧರಾಗಬೇಕಾಯಿತು, ಕೌಶಿಕ ರಸವಂತಿಯರು.

"ನೀವು ಒಬ್ಬರೇ ಇಲ್ಲಿ ಹೇಗೆ ಇರುತ್ತೀರಿ, ತಾಯಿ?" ಕೇಳಿದಳು ರಸವಂತಿ.

"ಅದನ್ನೇನೂ ಯೋಚಿಸಬೇಡ, ರಸವಂತಿ, ಅದಕ್ಕಾಗಿಯೇ ನಾನಿಲ್ಲಿಗೆ ಬಂದಿದ್ದೇನೆ. ನಾನು ಏಕಾಂಗಿಯೆಂಬುದೇ ಇಲ್ಲ. ಚನ್ನಮಲ್ಲಿಕಾರ್ಜುನ ಸದಾ ನನ್ನ ಸಂಗಡ ಇದ್ದಾನೆ. ಬಹುಶಃ ನಾನಿನ್ನು ಹೆಚ್ಚು ಕಾಲ ಅವನಿಂದ ಬೇರೆಯಾಗಿರಲಾರೆ. ನನ್ನ ಜೀವನದ ಗುರಿ ಸಿದ್ಧಿಸಿತು. ನನ್ನ ಬಯಕೆಗಳೆಲ್ಲಾ ಕೈಗೂಡಿದುವು. ನಾನು ನಿಯೋಜಿಸಿದ ಮಾರ್ಗದಲ್ಲಿ ನೀವು ನಡೆಯಿರಿ, ಇದೇ ನನ್ನ ಕೊನೆಯ ಬಯಕೆ."

"ಹಾಗೆ ಹೇಳಬೇಡಿ ತಾಯಿ. ನೀವು ನಮಗೆ ಮುಂದೆಯೂ ಮಾರ್ಗದರ್ಶಕರಾಗಿರಬೇಕು. ನಮಗೆ ತಮ್ಮನ್ನು ನೋಡಬೇಕೆಂದು ಆಶೆಯಾದಾಗಲೆಲ್ಲಾ ಈ ಪರ್ವತವನ್ನು ಹತ್ತಿ ಓಡಿಬರುತ್ತೇವೆ ಇಲ್ಲಿಗೆ." ರಸವಂತಿ ಕಾತರಗೊಂಡು ಹೇಳಿದಳು.

"ಇನ್ನು ಈ ವ್ಯಾಮೋಹವನ್ನು ಬಿಡು, ರಸವಂತಿ. ನೀವು ಮೇಲೇರಿ ಬಂದು ನನ್ನನ್ನು ಕಾಣುವ ಕಷ್ಟವನ್ನು ತಪ್ಪಿಸುತ್ತೇನೆ. ಸಾಕಾರದ ಈ ದೇಹವನ್ನು ಧರಿಸಿದ್ದ ನಾನು, ನಿರಾಕಾರಳಾಗಿ ನಿಮ್ಮಿಬ್ಬರ ಹೃದಯದಲ್ಲಿ ಬಂದು ನೆಲೆಸುತ್ತೇನೆ." ಗಂಭೀರವಾಗಿತ್ತು ಮಹಾದೇವಿಯ ಧ್ವನಿ.

ರಸವಂತಿ ಏನನ್ನೂ ಹೇಳಲಾರದೆ ನಮಸ್ಕರಿಸಿದಳು. ಅವಳನ್ನು ಮಹಾದೇವಿ ಮೇಲೆತ್ತುತ್ತಿರುವಷ್ಟರಲ್ಲಿ ಕೌಶಿಕನೂ ನಮಸ್ಕರಿಸಿದ. ಮಹಾದೇವಿ ಹೇಳಿದಳು :

"ಮೇಲೇಳು ಅಣ್ಣಾ ; ನೀನು ನಮಸ್ಕರಿಸಬಾರದು. ನೀನು ನನ್ನ ತಂದೆ; ನನ್ನ ಜೀವನವನ್ನು ರೂಪುಗೊಳಿಸಲು ಸಹಾಯಕವಾದ ಶಕ್ತಿ."

"ಇಲ್ಲ ತಾಯಿ, ನಾನು ನಿನ್ನ ಮಗ. ನನಗೆ ನೀನು ಪುನರ್ಜನ್ಮ ಕೊಟ್ಟಿದ್ದೀಯ. ನಿನಗೆ ತಕ್ಕ ಮಗನಾಗುವಂತೆ ಹರಸು ತಾಯಿ."

"ಆಗಲಿ, ನಮ್ಮಿಬ್ಬರ ಸಂಬಂಧ ಪರಸ್ಪರ ತಾಯಿ–ಮಕ್ಕಳ ಸಂಬಂಧ. ಹೆಣ್ಣು–ಗಂಡಿನ ಸಂಬಂಧ ಕೊನೆಯಲ್ಲಿ ಶಾಶ್ವತವಾಗಿ ನಿಲ್ಲಬೇಕಾದ ಮಟ್ಟವಾವುದೆಂಬುದನ್ನು ಜಗತ್ತು ಕಂಡುಕೊಳ್ಳಲಿ. ಗಂಡಸಿಗೆ ಹೆಣ್ಣು, ತಾಯಿ. ಹೆಣ್ಣಿಗೆ ಗಂಡು, ತಂದೆಯಾಗಿ ಉಳಿಯುತ್ತಾನೆ."

"ಸ್ತ್ರೀ ಪುರುಷರ ಸಂಬಂಧಕ್ಕೆ ನಿಮ್ಮಿಬ್ಬರ ಜೀವನ ಉಜ್ವಲವಾದ ಉದಾಹರಣೆಯಾಗಿ ಉಳಿಯುವಂತಾಯಿತು, ತಾಯಿ. ಈ ಪುಣ್ಯ ಸಂಗಮದಲ್ಲಿ ಮಿಂದು ನಾನು ಧನ್ಯಳಾಗಿದ್ದೇನೆ."

"ಇದನ್ನು ಇಡೀ ಜಗತ್ತಿಗೇ ನೀವು ಬೀರಬೇಕು. ಜಗತ್ತಿನ ಮಂಗಳಕ್ಕೆ ಕಾರಣರಾಗಬೇಕು. ಇದೇ ನಾನು ನಿಮಗೆ ಕೊಡುವ ಕೊನೆಯ ಆದೇಶ."

"ಆಗಲಿ ತಾಯಿ, ಇನ್ನು ಶ್ರೀಶೈಲವೇ ನನ್ನ ಸಾಧನೆಯ ತಪೋರಂಗವಾಗುತ್ತದೆ. ದಿಗಂಬರದ ದಿವ್ಯಾಂಬರೆಯಾದ ನಿನ್ನ ವೀರ ವೈರಾಗ್ಯ ಜೀವನದ ಉಜ್ವಲ ಚಿತ್ರವನ್ನೂ, ಅದರಿಂದ ಲಭಿಸಿದ ನಿನ್ನ ಸಾಧನೆಯ ಮಹತ್ತರವಾದ ನಿಲವನ್ನೂ ಉದ್ಘೋಷಿಸುತ್ತಾ ಅದನ್ನು ಶ್ರೀಶೈಲದ ಯಾತ್ರಿಕರಿಗೆ ಸಾರುವುದೇ ನನ್ನ ಪವಿತ್ರಕಾರ್ಯವಾಗುತ್ತದೆ, ಅದರಲ್ಲಿಯೇ ನನ್ನ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುತ್ತೇನೆ." ಕೌಶಿಕ ಆವೇಶದಿಂದ ಹೇಳಿದ.

"ಇನ್ನೊಂದು ಮಾತು, ಅಣ್ಣ. ಮುಂದೊಂದು ದಿನ ಇಲ್ಲಿಗೆ ಪ್ರಭುದೇವರೆಂಬ ಮಹಾತ್ಮರು ಬರುತ್ತಾರೆ, ಕಲ್ಯಾಣದಿಂದ. ಅಲ್ಲಮಪ್ರಭು ಎಂದು ಪ್ರಸಿದ್ಧವಾದ ಅವರ ಹೆಸರನ್ನು ನೀವು ಕೇಳರಬಹುದು. ಅವರೇ ನನ್ನನ್ನು ಇತ್ತ ನಿರ್ದೇಶಿಸಿ ಕಳುಹಿಸಿದವರು. ಅವರು ಒಮ್ಮೆ ಇಲ್ಲಿಗೆ ಬಂದು ಹೋಗಿದ್ದಾರೆ. ಕೊನೆಯಲ್ಲಿ ಇಲ್ಲಿಗೆ ಬಂದು ಐಕ್ಯವಾಗುವುದಾಗಿ ಹೇಳಿದ್ದಾರೆ, ಅವರು ಇಲ್ಲಿಗೆ ಬಂದಾಗ ಅವರನ್ನು ನೀವಿಬ್ಬರೂ ಒಡಗೊಂಡು – ಅವರ ಸೇವೆಯನ್ನು ಮಾಡಿರಿ. ಪರಿಪೂರ್ಣತೆಗೆ ಏರಿನಿಂತ ಮಹಾಂತ ಜಂಗಮಜ್ಯೋತಿಯದು. ಅವರಿಗೆ ತಿಳಿಯದುದು ಯಾವುದೂ ಇಲ್ಲವಾದರೂ ಅವರಿಲ್ಲಿಗೆ ಬಂದಾಗ ನಿಮ್ಮ ಮೂಲಕ

ಅವರಿಗೆ ನನ್ನ ವಿಷಯ ತಿಳಿಯಲಿ. ಅದರಿಂದ ಅವರ ಅನುಗ್ರಹ ನಿಮಗೆ ದೊರಕುತ್ತದೆ. ನಿಮ್ಮ ಜೀವನವೂ ಪರಿಪೂರ್ಣದೆಡೆಗೆ ಏರುತ್ತದೆ. ಅವರಿಗಾಗಿ ಹಾರೈಸಿರಿ. ನೀವಿನ್ನು ನಡೆಯಿರಿ."

ತಾನು ಆಧ್ಯಾತ್ಮದ ಅತ್ಯುನ್ನತವಾದ ನಿಲವಿನಲ್ಲಿ ನಿಂತಿದ್ದರೂ, ರಸವಂತಿ, ಕೌಶಿಕರು ತನ್ನನ್ನು ಅಗಲುತ್ತಿರುವಾಗ ಪಡುತ್ತಿರುವ ವೇದನೆಯನ್ನು ಕಂಡು, ಮಹಾದೇವಿಗೆ ಸಂಕಟವಾಯಿತೆಂದಮೇಲೆ ಅವರ ಸಂಕಟಕ್ಕೆ ಮಿತಿಯೇ ಇಲ್ಲವಾಯಿತು. ತಮ್ಮ ಆತ್ಮವನ್ನೇ ಹಿಂದೆ ಬಿಟ್ಟು ನಡೆಯುತ್ತಿರುವ ದೇಹಗಳಂತೆ ನಡೆಯುತ್ತಿದ್ದರು ಅವರು. ಹೆಜ್ಜೆಹೆಜ್ಜೆಗೂ ಹಿಂದಿರುಗಿ ನೋಡುತ್ತಿದ್ದರು.

ಕದಳಿಯ ಗುಹೆಯ ಕಲ್ಲಮೇಲೆ ಮಹಾದೇವಿ ಕದಳಿಯನ್ನು ಮೆಟ್ಟಿ ನಿಂತಿದ್ದಳು. ಕೆದರಿದ ಕೂದಲ ಸಮೂಹ, ಉಟ್ಟ ತೆಳುಗಾವಿವರ್ಣದ ಸೀರೆಯ ಮೇಲೆ ಹರಡಿ, ತಪೋಲಕ್ಷ್ಮಿಯ ದಿವ್ಯವಿಗ್ರಹಕ್ಕೆ ಮಂಗಳದ ರಕ್ಷೆಯನ್ನು ಕಟ್ಟಿದಂತಿತ್ತು. ತಪ್ತಕಾಂಚನವರ್ಣದ ತೇಜಸ್ಸಿನ ಕಾಂತಿಯಿಂದ ಹೊಳೆಯುತ್ತಿರುವ ಮುಖದ ಮೇಲೆ, ಚಂದ್ರಮೌಳಿಯ ಕರುಣೆಯ ಸಾಕ್ಷಾತ್ಕಾರವೆಂಬಂತೆ ವಿಭೂತಿ ಹೊಳೆಯುತ್ತಿತ್ತು. ಅವನ ಉರಿಗಣ್ಣಿನಿಂದ ಸಿಡಿದ ಪವಿತ್ರತೆಯ ಕಿಡಿಗಳೆಂಬಂತೆ ಕೊರಳಿನಲ್ಲಿ ರುದ್ರಾಕ್ಷಿಯ ಸರ; ಮುಂಗೈಯಲ್ಲಿ ರುದ್ರಾಕ್ಷಿಯ ಕಂಕಣ. ಮಿಂಚಿನ ಬೆಳಕನ್ನು ಹೊರಸೂಸುತ್ತಿರುವಂತಹ ಕಣ್ಣುಗಳು.

ಕೌಶಿಕ, ರಸವಂತಿಯರು, ಮರೆಯಾಗುವ ಮುನ್ನ ಕ್ಷಣಕಾಲ ನಿಂತು ಆ ವಿಗ್ರಹವನ್ನು ಕೊನೆಯ ಬಾರಿ ನೋಡಿದರು. ವಿಗ್ರಹ ಮರೆಯಾಗಿ ಅಪೂರ್ವವಾದ ತೇಜಸ್ಸಿನ ಚಕ್ರ ಅಲ್ಲಿ ತಿರುಗುತ್ತಿರುವಂತೆ ತೋರಿತು. ಕರ್ಪುರ ಜ್ಯೋತಿಯು ಬೆಳಗುತ್ತಿರುವ ಆರತಿಯ ದಿವ್ಯಚಕ್ರದಂತೆ ಅದು ತಿರುಗುತ್ತಿತ್ತು. ಆ ಚಕ್ರದಿಂದ ರುದ್ರಾಕ್ಷಿಯ ಕಂಕಣದ ಕೈ ಹೊರಚಾಚಿ ಅವರನ್ನು ಆಶೀರ್ವದಿಸಿದಂತಾಯಿತು.

ಎಂದೆಂದೂ ಮರೆಯಲಾಗದ ಆ ದೃಶ್ಯವನ್ನು ಕಣ್ಣು ತುಂಬಾ ತುಂಬಿಕೊಂಡು, ಹೃದಯದ ತುಂಬಾ ಅಚ್ಚೊತ್ತಿಕೊಂಡು ತ್ರಿಕೂಟಪರ್ವತವನ್ನು ಅವರು ಇಳಿಯತೊಡಗಿದರು.

●